ಶ್ರೀಮದ್ ಭಾಗವತಮ್

ದಶಮ ಸ್ಕಂಧಃ

ಉತ್ತರಾರ್ಧ

ಶ್ರೀಮದ್ಭಾಗವತಮ್

ದಶಮಸ್ಕಂಧಃ- ಉತ್ತರಾರ್ಧಃ

(ಕನ್ನಡ ಅನುವಾದ ಸಹಿತ)

ಅನುವಾದಕರು :
ವಿದ್ವಾನ್ ಎನ್. ರಂಗನಾಥಶರ್ಮಾ

ಪ್ರಕಾಶಕರು:

ರಾಮಾಯಣ ಪ್ರಕಾಶನ ಸಮಿತಿ
ನರಸಿಂಹರಾಜ ಕಾಲೋನಿ, ಬೆಂಗಳೂರು - ೧೯

ಎರಡನೆಯ ಮುದ್ರಣ
(೧೦೦೦ ಪ್ರತಿಗಳು)

ಇದರ ಹಕ್ಕುಗಳೆಲ್ಲವೂ
ರಾಮಾಯಣ ಪ್ರಕಾಶನ ಸಮಿತಿಯವು
(All Rights Reserved)

ಬೆಲೆ: ರೂ. ೬೦-೦೦

ಮುದ್ರಣಕಾರರು:
ಶುಕ್ರಶ್ರೀ ಪ್ರಿಂಟರ್ಸ್
ನಂ.247, 7ನೇ 'ಎ' ಅಡ್ಡರಸ್ತೆ, ಶಾಸ್ತ್ರೀನಗರ, ಬೆಂಗಳೂರು - 28
ದೂರವಾಣಿ : 2677 1573 ಮೊಬೈಲ್ : 9448331494

ಎರಡನೆಯ ಮುದ್ರಣ

ವಾಚಕರ ಪ್ರೋತ್ಸಾಹದಿಂದ ಒಂದನೆಯ ಮುದ್ರಣದ ಪ್ರತಿಗಳೆಲ್ಲವು ಮುಗಿದು ಮತ್ತೆ ಬೇಡಿಕೆ ಬಂದುದರಿಂದ ಎರಡನೇಯ ಮುದ್ರಣವನ್ನು ಕೈಗೊಳ್ಳಲಾಯಿತು.

ಕಾಗದ ಮತ್ತು ಮುದ್ರಣ ವೆಚ್ಚ ಹೆಚ್ಚಾಗಿರುವುದರಿಂದ ಶ್ರೀಮದ್ಭಾಗವತಮ್ ದಶಮಸ್ಕಂಧಃ ಉತ್ತರಾರ್ಧಃದ ಬೆಲೆಯನ್ನು ಏರಿಸುವುದು ಅನಿವಾರ್ಯವಾಗಿದೆ. ಇದನ್ನು ಮನಗಂಡು ವಾಚಕರು ಎಂದಿನಂತೆ ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಶುಕ್ರಶ್ರೀ ಮುದ್ರಣಾಲಯದವರು ಅಂದವಾಗಿ ಈ ಶ್ರೀಮದ್ಭಾಗವತಮ್ ದಶಮಸ್ಕಂಧಃ ಉತ್ತರಾರ್ಧಃದ ಮುದ್ರಣವನ್ನು ಮಾಡಿಕೊಟ್ಟು ಉಪಕಾರ ಮಾಡಿದ್ದಾರೆ. ಅವರಿಗೆ ಸಂಘದ ವಂದನೆಗಳು.

ಬೆಂಗಳೂರು.

ಎಸ್. ಎನ್. ಮೂರ್ತಿ
ಅಧ್ಯಕ್ಷರು
ಶ್ರೀ ನರಸಿಂಹರಾಜಕಾಲೋನಿ ಅಸೋಸಿಯಷನ್
ನರಸಿಂಹರಾಜಕಾಲೋನಿ, ಬೆಂಗಳೂರು
ದೂರವಾಣಿ : ೨೬೫೨೦೨೩೧, ೨೬೬೦೧೬೮೦

ನಿವೇದನೆ

ಭಗವಂತನ ಕೃಪೆಯಿಂದ ದಶಮಸ್ಕಂಧದ ಉತ್ತರಾರ್ಧವನ್ನೂ ಅನುವಾದಿಸಿ ಪ್ರಕಟಿಸಲು ಸಾಧ್ಯವಾಯಿತು. ಭಾಗವತ ಮತ್ತು ಇದರ ದಶಮಸ್ಕಂಧದ ಪೂರ್ವಾರ್ಧಗಳನ್ನು ಕುರಿತು ಕೆಲವು ಅಂಶಗಳನ್ನು ಹಿಂದೆ ನಿವೇದಿಸಿ ಕೊಂಡದ್ದಾಗಿದೆ. ಅವಶಿಷ್ಟವೆನಿಸಿದ ಇನ್ನು ಒಂದೆರಡು ವಿಷಯಗಳನ್ನು ಇಲ್ಲಿ ಪ್ರಸ್ತಾವಿಸ ಬಹುದಾಗಿದೆ.

ಪೂರ್ವಾರ್ಧದಲ್ಲಿರುವುದು ಶ್ರೀಕೃಷ್ಣನ ಬಾಲ್ಯಚರಿತೆ. ಉತ್ತರಾರ್ಧದಲ್ಲಿ ಮುಂದಿನ ಕಥೆ ಬಹುಮುಖವಾಗಿ ವಿಸ್ತೃತವಾಗುತ್ತದೆ. ದ್ವಾರಕಾನಗರದ ನಿರ್ಮಾಣ, ರುಕ್ಮಿಣೀ ಮೊದಲಾದ ಅಷ್ಟಮಹಿಷಿಯರ ಮತ್ತಿತರ ರಾಜ ಕುಮಾರಿಯರ ವಿವಾಹ, ಶಿಶುಪಾಲಾದಿಗಳ ನಿಗ್ರಹ, ಸುದಾಮ ಶ್ರುತದೇವಾದಿ ಗಳಲ್ಲಿ ಅನುಗ್ರಹ-ಇತ್ಯಾದಿ ಕಥೆಗಳು ಬೆಳೆದಿವೆ. ಬಲರಾಮನ ತೀರ್ಥಯಾತ್ರಾ ಪ್ರಸಂಗ, ಸುಭದ್ರಾರ್ಜುನರ ವಿವಾಹ-ಮುಂತಾದ ಉಪಾಖ್ಯಾನಗಳೂ ಸೇರಿ ಉತ್ತಾರಾರ್ಧವು ರಸವತ್ತಾಗಿದೆ.

ಕಾವ್ಯಸಂಹಿತೆ

ಪದ್ಮಪುರಾಣದಲ್ಲಿ ಭಾಗವತದ ಮಾಹಾತ್ಮ್ಯವನ್ನು ವರ್ಣಿಸುವಾಗ ''ಪಿಬತ ಭಾಗವತಂ ರಸಮಾಲಯಂ। ಮುಹುರಹೋ ರಸಿಕಾ ಭುವಿ ಭಾವುಕಾಃ'' ಎಂದಿರುವ ನುಡಿ ಅರ್ಥವತ್ತಾದದ್ದು. ಅದರಲ್ಲಿಯೂ ದಶಮಸ್ಕಂಧವು ರಸಭಾವಪುಷ್ಟಿಯುಳ್ಳ ಕಾವ್ಯಸಂಹಿತೆಯಾಗಿದೆ. ಪೂರ್ವಾರ್ಧದ ನಿವೇದನೆಯಲ್ಲಿ ಇದಕ್ಕೆ ಕೆಲವು ನಿದರ್ಶನಗಳನ್ನು ಕೊಟ್ಟಿದ್ದೇನೆ. ಉತ್ತರಾರ್ಧದಲ್ಲಿಯೂ ರುಕ್ಮಿಣೀಪರಿಣಯ ಪ್ರಸಂಗ (ಅಧ್ಯಾ. ೫೩, ೫೪), ಶ್ರೀಕೃಷ್ಣರುಕ್ಮಿಣೀ ಪ್ರಣಯ ಸಂವಾದ (೬೦), ಸುದಾಮೋಪಾಖ್ಯಾನ (೮೦-೮೧), ಕುರುಕ್ಷೇತ್ರದಲ್ಲಿ ನಂದಯಾದವಾದಿಗಳ ಸಮಾಗಮ (೮೨), ಸುಭದ್ರಾಹರಣ (೮೬)-ಇವು ರಸಗಟ್ಟಿಗಳು. ಶೃಂಗಾರ, ಹಾಸ್ಯ, ವಾತ್ಸಲ್ಯಾದಿಕೋಮಲಭಾವಗಳ ಅಭಿವ್ಯಕ್ತಿ ಇಲ್ಲಿ ಬಹುಸುಂದರವಾಗಿ ಮೂಡಿದೆ. ಈ ಸಂದರ್ಭಗಳು ಯಾವ ಮಹಾಕಾವ್ಯ ವನ್ನಾದರೂ ಸರಿಗಟ್ಟಬಲ್ಲವು ; ಮೀರಬಲ್ಲವು.

ಶಾಸ್ತ್ರಬೋಧೆ

ಸ್ತುತಿರೂಪವಾಗಿಯೋ ಉಪದೇಶರೂಪವಾಗಿಯೋ ಗಹನವಾದ ತತ್ತ್ವ ಶಾಸ್ತ್ರವನ್ನು ವಿವೇಚಿಸುವುದು ಭಾಗವತದ ಒಂದು ವಿಶೇಷ. ಇದಕ್ಕಾಗಿ ಬೇಕೆಂದೇ ಹಲವಾರು ಸಂದರ್ಭಗಳನ್ನು ಕಲ್ಪಿಸಿಕೊಳ್ಳಲಾಗುತ್ತಿದೆ. ಇವು ಭಾಗವತದಲ್ಲಿ ಹಾಸುಹೊಕ್ಕಾಗಿ ಬರುತ್ತವೆ. ದಾರ್ಶನಿಕ ವಿಷಯಗಳನ್ನು ಚಿತ್ರಿಸುವುದಕ್ಕೆ ಭಗವಂತನ ಕಥೆ ಒಂದು ಶುಭ್ರವಾದ ಭಿತ್ತಿ. ಇದರ ಮೇಲೆ ಯಥೇಚ್ಛವಾಗಿ ಅಧ್ಯಾತ್ಮ ವಿಷಯಗಳನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಇದರಲ್ಲಿ ಪ್ರತಿಪಾದ್ಯವಾದ ಸಿದ್ಧಾಂತವಾದರೂ ಯಾವುದು ? ದ್ವೈತವೆ, ಅದ್ವೈತವೆ, ವಿಶಿಷ್ಟಾದ್ವೈತವೆ ? ಅಥವಾ ಇನ್ನೊಂದು ದರ್ಶನ ವಿಶೇಷವೆ ? ಎಲ್ಲ ಮತದವರೂ ತಮ್ಮ ತಮ್ಮ ದರ್ಶನಗಳಿಗೆ ಅನುಗುಣವಾಗಿ ಭಾಗವತಕ್ಕೆ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಪಾಂಚರಾತ್ರಾಗಮವನ್ನನುಸರಿಸಿ ಭಾಗವತದರ್ಶನ ಎಂಬ ಇನ್ನೊಂದು ದರ್ಶನಪ್ರಕಾರವನ್ನೂ ಆಧುನಿಕ ವಿದ್ವಾಂಸರು ಪ್ರತಿಪಾದಿಸಿದ್ದಾರೆ. ಭಾಷೆಯನ್ನು ಹಿಸುಕಿ ತಮಗೆ ಬೇಕಾದ ಅರ್ಥವನ್ನು ಹೊರಡಿಸುವ ಸಾಮರ್ಥ್ಯ ವಿದ್ವಾಂಸರಿಗಿದೆ. ಮಹಾದಾರ್ಶನಿಕನೂ ಶಂಕರಾಚಾರ್ಯರಿಗಿಂತ ಪ್ರಾಚೀನನೂ ಆದ ಭರ್ತೃಹರಿಯು ವೇದಾರ್ಥದ ವಿಷಯವಾಗಿ ಹೇಳುತ್ತಾನೆ-

> ತಸ್ಯಾರ್ಥವಾದರೂಪಾಣಿ ನಿಶ್ರಿತಾಃ ಸ್ವವಿಕಲ್ಪಜಾಃ ।
> ಏಕತ್ವಿನಾಂ ದ್ವೈತಿನಾಂ ಚ ಪ್ರವಾದಾ ಬಹುಧಾ ಮತಾಃ ।।

- ವಾಕ್ಯಪದೀಯ, ಬ್ರಹ್ಮಕಾಂಡ, ಶ್ಲೋ. ೮

''ವೇದದ ಅರ್ಥವಾದರೂಪವಾದ ಉಕ್ತಿಗಳನ್ನಾಶ್ರಯಿಸಿ ಅದ್ವೈತಿಗಳೂ ದ್ವೈತಿಗಳೂ ತಮ್ಮ ತಮ್ಮ ಬುದ್ಧಿಭೇದಗಳಿಂದ ನಾನಾವಿಧವಾದ ಹೇಳಿಕೆಗಳನ್ನು ಮಂಡಿಸಿದ್ದಾರೆ''

ಅನಂತರ 'ಸತ್ಯಾ ವಿಶುದ್ಧಿಸ್ತತ್ರೋಕ್ತಾ...' ಎಂದು ತನ್ನ ಸಿದ್ಧಾಂತವನ್ನು ನಿರೂಪಿಸಿದ್ದಾನೆ. ಭರ್ತೃಹರಿ ಅದ್ವೈತಿ. ಶಬ್ದಬ್ರಹ್ಮವಾದಿ. ಸತ್ಯದ ಜಿಜ್ಞಾಸುಗಳು ದಶಮಸ್ಕಂಧದ ಈ ಸೂಕ್ತಿಗಳನ್ನು ಮತ್ತೊಮ್ಮೆ ಪರಿಶೀಲಿಸಬೇಕು.

೧. ಏವಂ ಸ್ವಮಾಯಾರಚಿತೇಷ್ವಸೌ ಪುಮಾನ್
ಗುಣೇಷು ರಾಗಾನುಗತೋ ವಿಮುಹ್ಯತಿ ॥ ೧-೪೩

೨. ಭವೋ ನಿರೋಧಃ ಸ್ಥಿರರಪ್ಯವಿದ್ಯಯಾ
ಕೃತಾ ಯತಸ್ತ್ವಯ್ಯ ಭಯಾಶ್ರಯಾತ್ಮನಿ ॥ ೨-೩೯

೩. ತದನು ತ್ವಂ ಹ್ಯಪ್ರವಿಷ್ಟಃ ಪ್ರವಿಷ್ಟ ಇವ ಭಾವ್ಯಸೇ ॥ ೩-೧೪

೪. ರೂಪಂ ಯತ್ತತ್ ಪ್ರಾಹುರವ್ಯಕ್ತಮಾದ್ಯಂ
ಬ್ರಹ್ಮ ಜ್ಯೋತಿರ್ನಿರ್ಗುಣಂ ನಿರ್ವಿಕಾರಮ್ ।
ಸತ್ತಾ ಮಾತ್ರಂ ನಿರ್ವಿಶೇಷಂ ನಿರೀಹಂ
ಸ ತ್ವಂ ಸಾಕ್ಷಾತ್ ವಿಷ್ಣುರಧ್ಯಾತ್ಮದೀಪಃ ॥ ೩-೨೪

೫. ಏಕ ಏವ ಪರೋ ಹ್ಯಾತ್ಮಾ ಸರ್ವೇಷಾಮಪಿ ದೇಹಿನಾಂ ।
ನಾನೇವ ಗೃಹ್ಯತೇ ಮೂಢೈರ್ಯಥಾ ಜ್ಯೋತಿರ್ಯಥಾ ನಭಃ ॥
೫೪-೪೪

೬. ಯಥಾ ಶಯಾನ ಆತ್ಮಾನಂ ವಿಷಯಾನ್ ಫಲಮೇವ ಚ ।
ಅನುಭುಂಕ್ತೇಽಪ್ಯಸತ್ಯರ್ಥೇ ತಥಾಪ್ನೋತ್ಯಬುಧೋ ಭವಮ್ ॥
೫೪-೪೮

ಇತ್ಯಾದಿ.

ಶ್ರೀರಾಮ-ಶ್ರೀಕೃಷ್ಣ

ತ್ರೇತಾಯುಗದಲ್ಲಿ ಶ್ರೀರಾಮನಾಗಿಯೂ ದ್ವಾಪರಯುಗದಲ್ಲಿ ಶ್ರೀಕೃಷ್ಣನಾಗಿಯೂ ಮಹಾವಿಷ್ಣು ಅವತರಿಸಿದ. ಎರಡು ಅವತಾರಗಳೂ ದುಷ್ಟ ದಮನಕ್ಕಾಗಿ, ಧರ್ಮರಕ್ಷಣೆಗಾಗಿ. ಶ್ರೀರಾಮನು ಒಬ್ಬ ಮಾನವನಂತೆ ಆಚರಿಸಿದ. ಸಾಧಾರಣ ಮನುಷ್ಯನೊಬ್ಬನು ಲೋಕದಲ್ಲಿ ಒಳಗಾಗಬಹುದಾದ ಕಷ್ಟಕೋಟಲೆಗಳಿಗೆ ಒಳಗಾದ. ಹಲವಾರು ಸಮಸ್ಯೆಗಳು ಅವನನ್ನು ಕಾಡಿದವು. ಎಲ್ಲವನ್ನೂ ಲೋಕೋತ್ತರ ಧೈರ್ಯದಿಂದ ಎದುರಿಸಿ, ಜಯಗಳಿಸಿ ಮಹಾತ್ಮನೆಂದೂ ಪುರುಷೋತ್ತಮನೆಂದೂ ಶ್ರೀರಾಮನು ವಿಖ್ಯಾತನಾದನು. ಬ್ರಹ್ಮಾದಿಗಳು ಅವನನ್ನು ನೀನೇ ಪರಮಾತ್ಮನೆಂದು ಸ್ತುತಿಸಿದಾಗ ''ಇದೇನು ಹೀಗೆ ಹೇಳುತ್ತೀರಿ ? ನಾನು

ರಾಮನೆಂಬ ಹೆಸರಿನ ಒಬ್ಬ ಮನುಷ್ಯ. ದಶರಥನ ಮಗ (ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಂ-ಯುದ್ಧಕಾಂಡ ೧೨೦-೧೧)'' ಎಂದು ಹೇಳಿಬಿಡುತ್ತಾನೆ. ಸೀತೆಯನ್ನು ಬಿಟ್ಟು ಇನ್ನೊಬ್ಬಳನ್ನು ಕನಸಿನಲ್ಲಿಯೂ ನೆನೆಯುವುದಿಲ್ಲ.

ಶ್ರೀಕೃಷ್ಣನ ಚರಿತೆ ಇನ್ನೊಂದು ಬಗೆಯದು. ಅವನು ಜನ್ಮಕಾಲದಲ್ಲಿಯೇ ದೇವಕೀವಸುದೇವರಿಗೆ ತನ್ನ ದಿವ್ಯರೂಪವನ್ನು ತೋರಿಸಿ ತಾನು ಯಾರೆಂದು ತಿಳಿಸುತ್ತಾನೆ. ಅವನ ಬಾಲಲೀಲೆಯೂ ಅಮಾನುಷವಾದುದು. ಯಾದವರು, ಪಾಂಡವರು, ದೂರದ ರಾಜರು, ಪ್ರಜೆಗಳು ಎಲ್ಲರೂ ಆತನನ್ನು ಲೋಕೇಶ್ವರನೆಂದೂ ಮಹಾವಿಷ್ಣುವೆಂದೂ ಬಲ್ಲರು. ಲೋಕಕಲ್ಯಾಣಕ್ಕಾಗಿ ಅವತರಿಸಿದ ಮಹಾಪುರುಷನೆಂದು ತಿಳಿದಿದ್ದಾರೆ. ರುಕ್ಮಿ, ಜರಾಸಂಧ, ಶಿಶುಪಾಲ-ಮೊದಲಾದವರು ಏನೆಂದು ಭಾವಿಸಿದ್ದರೋ ನಿಶ್ಚಿತವಾಗಿ ಹೇಳಲಾಗುವುದಿಲ್ಲ. ಅವನನ್ನು ಬಲ್ಲವರೂ ಅವನ ವಿಷಯದಲ್ಲಿ ಅಪ್ರಬುದ್ಧರಂತೆ ನಡೆದುಕೊಳ್ಳುವುದೊಂದು ಅಚ್ಚರಿ.

ಶ್ರೀಕೃಷ್ಣನೂ ತನ್ನ ಸ್ವರೂಪವನ್ನು ಮರೆಮಾಚುವುದಿಲ್ಲ. ಸಮಯ ಬಂದಾಗ ತಾನು ಪರಮಾತ್ಮನೆಂಬುದನ್ನು ಮಾತಿನಿಂದಲೂ ಕೃತಿಯಿಂದಲೂ ವ್ಯಕ್ತಪಡಿಸಿದ್ದಾನೆ.

ಶ್ರೀಕೃಷ್ಣನು ಏಕಪತ್ನೀ ವ್ರತವನ್ನು ಹಿಡಿದವನಲ್ಲ. ಅಷ್ಟಮಹಿಷಿಯರಲ್ಲದೆ ಸಾವಿರಾರು ಪತ್ನಿಯರು ಅವನಿಗಿದ್ದರು. ನಂದಗೋಕುಲದಲ್ಲಿ ಗೋಪಿಯರೊಡನೆ ಶೃಂಗಾರಚೇಷ್ಟೆಯಲ್ಲಿ ನಿರತನಾದವನು ಆತ. ಆತನು ಶೃಂಗಾರ ಪ್ರಿಯನಾದರೂ ಹದಿನಾರು ಸಾವಿರದ ಒಂದುನೂರು ಮಂದಿ ಪತ್ನಿಯರಿದ್ದರೆಂಬುದು ನಮ್ಮ ಊಹೆಗೆ ನಿಲುಕುವುದಿಲ್ಲ. ಅವರಲ್ಲಿ ಲಕ್ಷಾಧಿಕಸಂಖ್ಯೆಯ ಮಕ್ಕಳನ್ನು ಪಡೆದನೆಂಬುದೂ ಊಹೆಗೆ ನಿಲುಕದು. ಆದರಿಂದ ಭಗವಂತನ ಅನಂತಶಕ್ತಿ , ಅನಂತವೈಭವಗಳು ಅಭಿವ್ಯಕ್ತವಾಗುತ್ತವೆಯೆಂದು ಭಾಗವತಕಾರರ ಆಶಯವಿರಬಹುದು.

ಒಂದೊಂದು ಮನೆಯಲ್ಲೂ ಏಕಕಾಲದಲ್ಲಿ ಶ್ರೀಕೃಷ್ಣನು ಆದರ್ಶಗೃಹಸ್ಥನಂತೆ ಸ್ನಾನ ಸಂಧ್ಯಾ ಹೋಮ ದಾನಾದಿ ಕರ್ಮಗಳಲ್ಲಿ ನಿರತನಾಗಿದ್ದನೆಂದು ಭಾಗವತದಲ್ಲಿ ಬಂದಿರುವುದನ್ನು ಓದುಗರು ಗಮನಿಸಬೇಕಾದದ್ದು ಅತ್ಯವಶ್ಯ.

ಗೋಪಿಕಾಲೀಲೆಗಳ ವಿಷಯವಾಗಿ ಡಾ|| ಡಿ.ವಿ.ಜಿ. ಯವರ ಅಭಿಪ್ರಾಯ ವನ್ನು ಪೂರ್ವಾರ್ಧದ ನಿವೇದನೆಯಲ್ಲಿ ಸಂಕ್ಷೇಪಿಸಿ ಬರೆದ್ದಾಗಿದೆ. ಈ ಪ್ರಸಂಗದಲ್ಲಿ ಇನ್ನೊಂದು ಮಾತು -

ಗೋಪಿಯರು ಶ್ರೀಕೃಷ್ಣನಲ್ಲಿಟ್ಟಿದ್ದ ನಿರತಿಶಯವಾದ ಪ್ರೇಮವು ಭಕ್ತಿ ಪ್ರಕಾರ ಗಳಲ್ಲಿ ಒಂದೆಂದು ಪ್ರತಿಪಾದಿಸುವುದು ಭಾಗವತಕಾರರ ಉದ್ದೇಶವಾಗಿರಬೇಕು. ಆ ಸ್ತ್ರೀಯರು ತಮ್ಮ ಗಂಡಂದಿರನ್ನು ಲಕ್ಷಿಸದೆ ಶ್ರೀಕೃಷ್ಣನಲ್ಲಿ ಅನುರಕ್ತರಾದದ್ದು ಲೋಕಶಾಸ್ತ್ರವಿರುದ್ಧವೇನೋ ಹೌದು. ಆದರೆ ಅವರ ಅನುರಾಗ ಒಬ್ಬ ಸಾಮಾನ್ಯ ಪುರುಷನಲ್ಲಾಗಿರದೆ ಸರ್ವಾತ್ಮನಾದ ಭಗವಂತನಲ್ಲಿ ಆಗಿತ್ತು. ಆದ್ದರಿಂದ ಅದು ಲೋಕಾತೀತವಾದ ಪರಮಧರ್ಮವೆಂದು ಭಾಗವತದ ಸಿದ್ಧಾಂತ. ಆ ಸ್ತ್ರೀಯರ ಪ್ರೇಮವು ಕಾಮಪ್ರಚೋದಿತವಾಗಿದ್ದರೂ ಅಶುದ್ಧವಲ್ಲ. ವಾಸ್ತವದಲ್ಲಿ ಶ್ರೀಕೃಷ್ಣನು ಗೋಪಿಯರಿಗೆ ಪರಪುರುಷನೇ ಅಲ್ಲ. ಅವನು ಸರ್ವಹೃದಯಾಂತರ್ಗತನಾದ ಆತ್ಮನೇ ಆಗಿದ್ದಾನೆ. ಅವನು ಯಾರಿಗೂ ಅನ್ಯನಲ್ಲ. ಭಕ್ತಿಯ ತೀವ್ರತೆಯಿಂದ ಒಬ್ಬ ಗಂಡಸು ಹೆಂಡತಿಮಕ್ಕಳ ವ್ಯಾಮೋಹವನ್ನು ಬದಿಗೊತ್ತಿ ಭಗವಂತನಲ್ಲಿ ಅನುರಕ್ತನಾಗುವುದು ಧರ್ಮವಾದರೆ, ಗೋಪಿಯರು ಗಂಡಂದಿರ ವ್ಯಾಮೋಹ ವನ್ನು ತೊರೆದು ಭಗವಂತನಲ್ಲಿ ಅನುರಕ್ತರಾಗುವುದು ಏಕೆ ಧರ್ಮವಾಗದು ? ಇಲ್ಲಿ ಗಂಡಸು-ಹೆಂಗಸೆಂಬ ಭೇದವನ್ನೆಣಿಸುವುದು ಯುಕ್ತವಲ್ಲ. ಭಗವಂತನಲ್ಲಿರಿಸಿದ ಪರಮಪ್ರೇಮವೇ ಭಕ್ತಿ ಎನಿಸುತ್ತದೆ. ಆದರೆ ಗೋಪಿಯರ ಪ್ರೇಮವು ಕಾಮ ಪ್ರಚೋದಿತವಾದದ್ದೆಂಬ ಆಕ್ಷೇಪ ಬರಬಹುದು. ಆದರೇನು? ಯಾವ ಬುದ್ಧಿಯಿಂದ ಕೈಹಾಕಿದರೂ ಬೆಂಕಿ ಸುಡಲೇ ಬೇಕು. ಬಾಯಿಗೆ ಹಾಕಿದರೆ ಸಕ್ಕರೆ ಸಿಹಿಯಾಗಲೇಬೇಕು.

ಶ್ರೀಕೃಷ್ಣನ ಸಂದೇಶವನ್ನು ಹೊತ್ತು ಉದ್ಧವನು ಮಧುರೆಯಿಂದ ಬೃಂದಾವನಕ್ಕೆ ಹೋಗುತ್ತಾನೆ. ಗೋಪಿಯರು ಅವನ ಬಳಿಗೆ ಬಂದು ತಮ್ಮ ವಿರಹ ದುಃಖವನ್ನು ಹಾಡಿಕೊಂಡು ಹುಚ್ಚಿಯರಂತೆ ಪರಿತಪಿಸುತ್ತಾರೆ. ಅವರು ಶ್ರೀಕೃಷ್ಣನಲ್ಲಿರಿಸಿದ ಪ್ರೇಮಾತಿಶಯವನ್ನು ಕಂಡು ವಿಸ್ಮಿತನಾದ ಉದ್ಧವನು ಹೇಳಿಕೊಳ್ಳುತ್ತಾನೆ-

ಕ್ವೇಮಾಃ ಸ್ತ್ರಿಯೋ ವನಚರೀರ್ವ್ಯಭಿಚಾರದುಷ್ಟಾಃ

....|| ೪೭-೫೯

''ಕಾಡಿನಲ್ಲಿ ಅಲೆಯುವ ವ್ಯಭಿಚಾರ ಸ್ವಭಾವದ ಈ ಸ್ತ್ರೀಯರೆಲ್ಲಿ ? ಕೃಷ್ಣಪರಮಾತ್ಮನ ವಿಷಯವಾಗಿ ಇವರಲ್ಲಿ ನೆಲೆಗೊಂಡ ಈ ದೃಢಭಕ್ತಿ ಎಲ್ಲಿ ? ಗೊತ್ತಿಲ್ಲದೆ ಸೇವಿಸಿದರೂ ಶ್ರೇಷ್ಠವಾದ ಔಷಧವು ತಕ್ಕ ಫಲವನ್ನು ನೀಡುವಂತೆ, ಅರಿಯದೆ ಭಜಿಸುವ ಮೂಢರಿಗೂ ಪರಮಾತ್ಮನು ಸಾಕ್ಷಾತ್ತಾಗಿ ಶ್ರೇಯಸ್ಸನ್ನು ಕೊಡುತ್ತಾನೆ ''

ಉದ್ಧವನು ವೃಂದಾವನದಲ್ಲಿ ತಿರುಗಾಡುತ್ತ ಗೋಪಿಯರ ಉತ್ಕಟಪ್ರೇಮವನ್ನೇ ಆಲೋಚಿಸುತ್ತಿದ್ದಾನೆ. ಅವನು ಭಾವಾವಿಷ್ಟನಾಗಿ

....

ಆಸಾಮಹೋ ಚರಣರೇಣುಜುಷಾಮಹಂ ಸ್ಯಾಂ
ವೃಂದಾವನೇ ಕಿಮಪಿ ಗುಲ್ಮಲತೌಷಧೀನಾಮ್ ॥ (೪೭-೬೧)

''ಈ ಗೋಪಿಯರ ಪಾದಧೂಳಿಯಿಂದ ಪಾವನವಾದ ಪೊದರು, ಬಳ್ಳಿ, ಗಿಡಗಳಲ್ಲಿ ಒಂದಾಗಿ ನಾನೂ ವೃಂದಾವನದಲ್ಲಿ ಹುಟ್ಟಬಾರದೆ ! ''

''ಭಗವತ್ ಪ್ರಾಪ್ತಿಮಾರ್ಗವು ಯಾವುದೆಂದು ವೇದಗಳು ಇನ್ನೂ ಹುಡುಕಾಡುತ್ತಿವೆ. ಈ ಗೊಲ್ಲತಿಯರು ಆರ್ಯಧರ್ಮಮಾರ್ಗದಲ್ಲಿ ಸಿದ್ಧಿಯನ್ನು ಪಡೆದು ವೇದಗಳಿಗೂ ಅಗೋಚರವಾದ ಮಾರ್ಗವನ್ನು ಈಗಾಗಲೇ ಸೇರಿಬಿಟ್ಟಿದ್ದಾರೆ !'' ಎನ್ನುತ್ತಾನೆ.

ಒಳ್ಳೆಯದು. ಇದರಿಂದ ಗೊಲ್ಲತಿಯರ ವಿಷಯದಲ್ಲಿ ಸಮರ್ಥನೆಯಾದೀತು. ಆದರೆ ಧರ್ಮಪ್ರವರ್ತಕನಾದ ಶ್ರೀಕೃಷ್ಣನು ಆ ಮುಗ್ಧೆಯರ ಒಲವನ್ನು ನಿಂದ್ಯ ಮಾರ್ಗದಲ್ಲಿ ಬಳಸಿಕೊಳ್ಳಬಹುದೆ ? ಅದಕ್ಕೆ ಪ್ರೋತ್ಸಾಹವನ್ನೀಯಬಹುದೆ ? ಇದಕ್ಕೆ ಉತ್ತರಹೇಳಬೇಕಾದರೆ, ಕೃಷ್ಣನನ್ನು ಒಬ್ಬ ಮಾನವನೆಂದು ತಿಳಿಯಬಾರದು. ಅವನು ಲೋಕನಿಯಾಮಕನಾದ ಪರಮೇಶ್ವರನೇ ಆಗಿದ್ದು ಅದೇ ರೀತಿಯಲ್ಲಿ ಕೃಷ್ಣವತಾರದಲ್ಲಿಯೂ ನಡೆದುಕೊಂಡಿದ್ದಾನೆ. ಜನ್ಮಾಂತರಪುಣ್ಯದಿಂದ ಭಕ್ತರಲ್ಲಿ ಉದಿಸುವ ಒಂದು ಸದ್ಭಾವನೆಗೆ ಪುಷ್ಟಿಯನ್ನಿತ್ತು ಅದನ್ನು ಬೆಳಸಿ ಅನುಗ್ರಹಿಸುವುದು ಅವನ ಕಾರ್ಯವಿಧಾನ.

ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ ॥

ಭ. ಗೀ. ೪-೧೧

'ಯಾರು ಯಾವ ಪ್ರಯೋಜನಕ್ಕಾಗಿ ನನ್ನನ್ನು ಭಜಿಸುತ್ತಾರೋ ಅವರಿಗೆ ಅದನ್ನಿತ್ತು ಅನುಗ್ರಹಿಸುತ್ತೇನೆ'

ಗೋಪಿಯರಿಗೆ ಅನ್ಯಾದೃಶವಾದ ಪ್ರೇಮಭಕ್ತಿ ಉಂಟಾಗಿತ್ತು. ಅದನ್ನು ಬೆಳೆಸಿ ಪ್ರೋತ್ಸಾಹಿಸಿ ಅನುಗ್ರಹಿಸುವುದು ಶ್ರೀಕೃಷ್ಣನ ಕರ್ತವ್ಯವಾಯಿತು. ಅವನು ಗೋಪಿಯರ ಪ್ರೇಮಬಂಧಕ್ಕೆ ಸಿಕ್ಕಿದವನೇ ಅಲ್ಲ. ಕರ್ತವ್ಯದ ಕರೆಬಂದಾಗ ಆ ಬಂಧವನ್ನು ಹುಲ್ಲುಕಡ್ಡಿಯಂತೆ ಕಡಿದು ಮಧುರೆಗೆ ಹೊರಟುಬಿಟ್ಟನು. ತಿರುಗಿ ಬೃಂದಾವನವನ್ನೂ ಗೋಪಿಯರನ್ನೂ ಸ್ಮರಿಸಿಕೊಳ್ಳಲೇ ಇಲ್ಲ. ಬಹುವರ್ಷಗಳ ಮೇಲೆ ಕುರುಕ್ಷೇತ್ರದಲ್ಲಿ ಅವರ ಭೇಟಿಯಾದಾಗ, ಗೋಪಿಯರ ಪ್ರೇಮಭಕ್ತಿಯು ಪರಾಕಷ್ಠೆಯನ್ನೇ ಪಡೆದಿದ್ದಾಗ, ಅವರಿಗೆ ಅಧ್ಯಾತ್ಮವನ್ನು ಬೋಧಿಸಿ ತನ್ನ ಪರತತ್ವವನ್ನರುಹಿ ಸಂತೈಸಿ ಕಳಿಸುತ್ತಾನೆ.

ಭಗವಂತನಾದರೋ ನಿಸ್ಸಂಗ, ನಿತ್ಯಮುಕ್ತ. ಸರ್ವಾಂತರ್ಯಾಮಿಯಾಗಿ ಸರ್ವಭೂತಾತ್ಮಭೂತಾತ್ಮನಾದ ಪರಮಾತ್ಮನಿಗೆ ಪರರೆಂದರೆ ಯಾರು ? ಪರಸ್ತ್ರೀಯ ರೆಂದರೆ ಯಾರು ? ಅವನು ಸ್ಪರ್ಶಿಸದಿರುವ ಸ್ತ್ರೀ ಜಗತ್ತಿನಲ್ಲಿ ಯಾವಳಿದ್ದಾಳೆ ? ಅವನಿಗೆ ಗೋಪ್ಯವಾದ ಸ್ಥಳವಾಗಲಿ ವ್ಯವಹಾರವಾಗಲಿ ಯಾವುದಿದೆ ? ಸರ್ವ ವ್ಯಾಪಿಯಾದ ವಾಯುವನ್ನು ಪರಪುರುಷನೆಂದು ದೂರವಿಡುವ ಪತಿವ್ರತೆ ಯಾರು ?

ಕುರುಕ್ಷೇತ್ರದಲ್ಲಿ ಬಹುಕಾಲಾನಂತರ ಗೋಪಿಯರನ್ನು ಸಂಧಿಸಿದಾಗ ಶ್ರೀಕೃಷ್ಣನು ಅವರಿಗೆ ಹೇಳುತ್ತಾನೆ-

''ನನ್ನಲ್ಲಿ ಭಕ್ತಿಯು ಪ್ರಾಣಿಗಳಿಗೆ ಮೋಕ್ಷವನ್ನು ದೊರಕಿಸಿಕೊಡುತ್ತದೆ. ಪುಣ್ಯವಶದಿಂದ ನಿಮಗೆ ನನ್ನಲ್ಲಿ ಪ್ರೇಮವುಂಟಾಯಿತು. ಅದು ನಿಮ್ಮನ್ನು ನನ್ನ ಬಳಿಗೆ ಸೇರಿಸಿ ಮೋಕ್ಷವನ್ನೀಯುವುದು. ಸಕಲ ಜೀವಜಾತಗಳಿಗೂ ನಾನೇ ಆದಿ, ನಾನೇ ಅಂತ, ಒಳಗೆ ಹೊರಗೆ ಎಲ್ಲವೂ ನಾನೇ' (೮೩-೪೫, ೪೭).

ಗೋಪೀಸಂಬಂಧವು ಶಾಸ್ತ್ರನಿಷಿದ್ಧವೆಂದು ಭಾಗವತಕಾರರಿಗೆ ಗೊತ್ತಿಲ್ಲದೆ ಇಲ್ಲ. ಪರೀಕ್ಷಿತನೇ ಶುಕಮುನಿಗಳಿಗೆ ಪ್ರಶ್ನೆ ಹಾಕಿದ್ದಾನೆ :

''ಜಗದೀಶ್ವರನಾದ ಭಗವಂತನು ಧರ್ಮಸ್ಥಾಪನೆಗಾಗಿಯೂ ಅಧರ್ಮ ವಿನಾಶಕ್ಕಾಗಿಯೂ ಶ್ರೀಕೃಷ್ಣನಾಗಿ ಅವತರಿಸಿದನಲ್ಲವೆ ? ಧರ್ಮಸೇತುಗಳ

ಉಪದೇಶಕನೂ ಕರ್ತನೂ ರಕ್ಷಕನೂ ಆದ ಆತನೇ ಪರಸ್ತ್ರೀಸಂಗವೆಂಬ ಈ ಪಾಪಕೃತ್ಯವನ್ನು ಹೇಗೆ ಆಚರಿಸಿದನು ? ಜುಗುಪ್ಸಿತವಾದ ಈ ಕಾರ್ಯವನ್ನು ಮಾಡಿದ್ದರ ಅಭಿಪ್ರಾಯವಾದರೂ ಏನು ?'' ಎಂದು. ಅದಕ್ಕೆ ಶುಕಮುನಿಗಳು ಹೇಳಿದ್ದೇನೆಂದರೆ-

''ಈಶ್ವರರಾದವರು ಧರ್ಮಮಾರ್ಗವನ್ನು ಉಲ್ಲಂಘಿಸುವುದೂ ಸಾಹಸ ಕೃತ್ಯವನ್ನಾಚರಿಸುವುದೂ ಕಂಡು ಬಂದಿದೆ. ಅತ್ಯಂತ ತೇಜಸ್ವಿಗಳಿಗೆ ಅದು ದೋಷಾವಹವಲ್ಲ. ಸರ್ವವನ್ನೂ ನುಂಗಿ ನೊಣೆಯುವ ಬೆಂಕಿ ಇದ್ದಂತೆ ಅವರು. ಆದರೆ ಈಶ್ವರನಲ್ಲದವನು ಅಂತಹ ಕಾರ್ಯವನ್ನು ಎಂದಿಗೂ ಮನಸ್ಸಿನಲ್ಲಿಯೂ ಆಚರಿಸಕೂಡದು'' (೩೩-೨೭ರಿಂದ೩೧)

ಆದರೆ ಲೋಕಶಿಕ್ಷಣಕ್ಕಾಗಿ ಬಂದವನು ಶ್ರೇಷ್ಠವಾದ ಧರ್ಮಮಾರ್ಗದಲ್ಲಿ ನಡೆದು ಅನ್ಯರಿಗೆ ಆದರ್ಶಪ್ರಾಯನಾಗಿರಬೇಕಲ್ಲವೆ ? ಶ್ರೀರಾಮನ ಆದರ್ಶ ಶ್ರೀಕೃಷ್ಣನಲ್ಲೇಕೆ ಮೂಲೆಗುಂಪಾಯಿತು ? ಇದಕ್ಕೆ ಉತ್ತರವಾಗಿ ಶ್ರೀರಾಮನು ಮಾನವನಂತೆ ನಡೆದನೆಂಬುದನ್ನೂ ಶ್ರೀಕೃಷ್ಣನು ದೇವತ್ವವನ್ನೇ ಪ್ರಧಾನವಾಗಿ ಮೆರೆಸಿದನೆಂಬುದನ್ನೂ ಸ್ಮರಿಸಿಕೊಳ್ಳಬೇಕಾಗುತ್ತದೆ.

ಕೃಷ್ಣನು ಬಾಲ್ಯದಿಂದಲೂ ತನ್ನ ದೇವತ್ವವನ್ನು ಪ್ರಕಟಿಸುತ್ತಲೇ ಹೋಗಿದ್ದಾನೆ. ಅವನಿಗೆ ಬಂದ ವಿಪತ್ತುಗಳೆಲ್ಲ ಬಿರುಗಾಳಿಗೆ ಸಿಕ್ಕಿದ ಮೋಡದ ತುಂಡುಗಳಂತೆ ಕರಗಿಹೋದವು. ಯಾವ ಕಷ್ಟಕೋಟಲೆಗಳು ಎದುರಾದರೂ ಅವನು ಕ್ಷಣಮಾತ್ರವೂ ಚಿಂತಾತುರನಾದದ್ದಿಲ್ಲ. ಜಗತ್ತನ್ನು ಆಟದ ಬೊಂಬೆಯಂತೆ ತಿಳಿದು ಹಾಗೆಯೇ ನಡೆಸಿಕೊಂಡಿದ್ದಾನೆ. ಲೋಕಾತೀತರಾದವರ ಉಪದೇಶವು ನಮಗೆ ಪಥ್ಯವೇ ಹೊರತು ಅವರ ಆಚರಣೆ ಪಥ್ಯವಾಗಬೇಕೆಂಬ ನಿಯಮವಿಲ್ಲ. ಶ್ರೀರಾಮನಾದರೋ ಮಾನವನಂತೆ ನಡೆದವನು. ಲೋಕಮರ್ಯಾದೆಗೆ, ಶಾಸ್ತ್ರದ ನಿಯಮಕ್ಕೆ ಒಳಗಾಗಿ ನಡೆದಿದ್ದಾನೆ. ಅವನು ಧರ್ಮದ ಗೆರೆಯನ್ನು ದಾಟಿದವನಲ್ಲ. ಶ್ರೀಕೃಷ್ಣನಾದರೋ ಲೋಕಾತೀತನಾದವನು. ಶಾಸ್ತ್ರಗಳಿಗೆ ಕರ್ತನಾದವನು. ಧರ್ಮದ ಗೆರೆಯಾದರೋ ಕರ್ಮಬಂಧದಲ್ಲಿ ಸಿಕ್ಕಿದ ಮಾನವರಿಗೆ, ದೇವತೆಗಳಿಗಲ್ಲ. ''ನ ಮಾಂ ಕರ್ಮಾಣಿ ಬಧ್ನಂತಿ ನ ಮೇ ಕರ್ಮಫಲೇ ಸ್ಪೃಹಾ'' ಎಂದು ಹೇಳುವ ಮಹಾತ್ಮನಿಗೆ ಯಾರು ಧರ್ಮದ ಗೆರೆಯನ್ನು ಹಾಕಿಯಾರು ?

ಶ್ರೀಕೃಷ್ಣನ ನಡತೆಯನ್ನು ಆಕ್ಷೇಪಿಸತಕ್ಕ ಆಧುನಿಕರಿಗೆ ಒಂದು ಪ್ರಶ್ನೆಯನ್ನು ಹಾಕತಕ್ಕದ್ದಿದೆ-''ಶ್ರೀಕೃಷ್ಣನು ಗೋಪಿಯರೊಡನೆ ವಿಹರಿಸಿದನೆಂದು ನಿಮಗೆ ಗೊತ್ತಾದದ್ದು ಹೇಗೆ?'' ಎಂದು. ''ಭಾಗವತದಲ್ಲಿಯೇ ಇದೆಯಲ್ಲ'' ಎಂದು ಅವರು ಉತ್ತರಿಸುತ್ತಾರೆ. ''ಶ್ರೀಕೃಷ್ಣನು ಸಾಕ್ಷಾತ್ ಪರಮಾತ್ಮನೆಂದೂ ಅವನಿಗೆ ಯಾವ ಕರ್ಮಬಂಧವೂ ಇಲ್ಲವೆಂದೂ ಭಾಗವತದಲ್ಲೇ ಹೇಳಿದೆಯಲ್ಲ'' ಎಂದು ನಾವು ತಿರುಗಿ ಕೇಳುತ್ತೇವೆ. ಇದಕ್ಕೆ ವಿತಂಡಾವಾದದಿಂದ ಅವರು ತಿರುಗಿ, ಉತ್ತರ ಹೇಳುವರೇ ಹೊರತು ನೇರವಾಗಿ ನ್ಯಾಯವಾದ ಉತ್ತರವನ್ನು ಹೇಳಲಾರರು.

ಒಂದಾನೊಂದು ಧರ್ಮಸೂಕ್ಷ್ಮವನ್ನು ತಿಳಿಸುವುದಕ್ಕಾಗಿಯೇ ಗೋಪೀ ಪ್ರಸಂಗವನ್ನು ಭಾಗವತಕಾರರು ತಂದಿದ್ದಾರೆಂದು ನನ್ನ ನಂಬಿಕೆ. ಹಾಗಿಲ್ಲದಿದ್ದರೆ ಗೋಪಿಯರ ವಿರಹಕಥೆಯನ್ನು ಅವರು ಸಂಪೂರ್ಣವಾಗಿ ಬಿಟ್ಟುಬಿಡಬಹುದಾಗಿತ್ತು. ಅದನ್ನು ಬರೆಯುವಂತೆ ಒತ್ತಾಯಪಡಿಸಿದವರು ಯಾರು ?

ಆಜನ್ಮವೈರಿಗಳಾದ ಶಿಶುಪಾಲಾದಿಗಳು ದ್ವೇಷಬುದ್ಧಿಯಿಂದಲಾದರೂ ಸದಾ ಶ್ರೀಕೃಷ್ಣನನ್ನು ಸ್ಮರಿಸುತ್ತ ಇದ್ದುದರಿಂದ ಸದ್ಗತಿಯನ್ನು ಪಡೆದರೆಂದು ಭಾಗವತ ಹೇಳುತ್ತದೆ. ಪ್ರಹ್ಲಾದನು ತಂದೆಯ ಆಜ್ಞೆಯನ್ನು ಉಲ್ಲಂಘಿಸಿದ್ದು ಧರ್ಮವಾಗಬಹುದೋ ? ಬೇಡರ ಕಣ್ಣಪ್ಪನು ಶಿವಲಿಂಗವನ್ನು ಮುಟ್ಟಿದ್ದು ಕಾಲಿನಿಂದ ಅದನ್ನು ತುಳಿದದ್ದು ಧರ್ಮವೋ ? ಭಕ್ತಿರಾಜ್ಯದಲ್ಲಿ ಜಾತಿನೀತಿಗಳ ಕಟ್ಟಳೆಯೇ ಇಲ್ಲ. ಭಗವದ್ಭಕ್ತಿಯೆಂಬ ಮಹಾಧರ್ಮವು ಎಲ್ಲ ಕಟ್ಟಳೆಗಳನ್ನೂ ಸುಟ್ಟು ಬೂದಿ ಮಾಡುವಂತಹದು. ಸಾರಾಂಶವೇನೆಂದರೆ, ಗೋಪಿಯರ ಪ್ರೇಮವು ಪರಮಶ್ರೇಷ್ಠವಾದ ಭಗವದ್ಭಕ್ತಿಯ ಒಂದು ಪ್ರಕಾರ.

ಈ ಗ್ರಂಥವನ್ನು ಸುಂದರವಾಗಿ ಮುದ್ರಿಸಿ ಪ್ರಕಟಿಸಿದ ರಾಮಾಯಾಣ ಪ್ರಕಾಶನ ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞತಾಪೂರ್ವಕವಾದ ನನ್ನ ವಂದನೆಗಳು ಸಲ್ಲುತ್ತವೆ. ವಿಶೇಷವಾಗಿ ನನ್ನನ್ನು ಪ್ರೋತ್ಸಾಹಿಸಿ ಎಲ್ಲ ಸೌಕರ್ಯಗಳನ್ನೂ ಕಲ್ಪಿಸಿ ಇದರ ಪ್ರಕಟನೆಯಲ್ಲಿ ತುಂಬ ಆಸಕ್ತಿಯನ್ನು ತಳೆದು, ಸಂಸ್ಕೃತ ಮೂಲವನ್ನು ಕನ್ನಡ ಲಿಪಿಯಲ್ಲಿ ಮುದ್ರಣಕ್ಕೆ ಅನುಕೂಲಿಸುವಂತೆ ಬರೆದುಕೊಟ್ಟ ಕಾರ್ಯದರ್ಶಿಗಳಾದ ಶ್ರೀ ಡಿ.ಸಿ. ಅನಂತರಾಮಯ್ಯನವರಿಗೆ ಮತ್ತೊಮ್ಮೆ ನನ್ನ ವಂದನೆಗಳು ಸಲ್ಲುತ್ತವೆ

ನರನಾಕೃತಿಯಂ ತಳೆರ್ದುಂ
ಪರತತ್ತ್ವದ ಪೆರ್ಮೆಯಂ ಪ್ರಬೋಧಿಸಿ ಧರೆಯಂ ।
ಪೊರೆಯುತೆ ದುರುಳರ ತರಿಯುತೆ
ಗುರುವಾಗಿಹ ಕೃಷ್ಣನೆಮಗೆ ನೀಡುಗೆ ಶುಭಮಂ ॥

ಬೆಂಗಳೂರು -ಎನ್.ರಂಗನಾಥಶರ್ಮಾ

ತಾ॥ ೧೮-೪-೧೯೮೩

ಅನುಕ್ರಮಣಿಕೆ

ದಶಮಸ್ಕಂಧ

(ಉತ್ತರಾರ್ಧ)

ಅಧ್ಯಾಯ	ವಿಷಯ	ಪುಟ
೫೦	ಜರಾಸಂಧನು ಮಧುರೆಯನ್ನು ಮುತ್ತಿ ಯುದ್ಧದಲ್ಲಿ ಸೋಲುವುದು. ಕಾಲಯವನನ ಆಗಮನ. ದ್ವಾರಕಾನಗರದ ನಿರ್ಮಾಣ.	೧
೫೧	ಕಾಲಯವನನಿಂದ ಮಧುರೆಯ ಆಕ್ರಮಣ. ಅವನು ಮುಚುಕುಂದನಿಂದ ಸುಟ್ಟು ಭಸ್ಮವಾಗುವುದು. ಮುಚುಕುಂದನಿಗೆ ಶ್ರೀಕೃಷ್ಣನ ಅನುಗ್ರಹ	೧೪
೫೨	ಬಲರಾಮಕೃಷ್ಣರು ಜರಾಸಂಧನನ್ನು ವಂಚಿಸಿ ದ್ವಾರಕೆಯನ್ನು ಸೇರುವುದು. ಬಲರಾಮನ ವಿವಾಹ. ರುಕ್ಮಿಣಿಯು ಶ್ರೀಕೃಷ್ಣನಿಗೆ ಕಳಿಸಿದ ಸಂದೇಶ.	೨೮
೫೩	ಶ್ರೀಕೃಷ್ಣಬಲರಾಮರು ಕುಂಡಿನಪುರಕ್ಕೆ ಹೋಗುವುದು. ರುಕ್ಮಿಣಿಯ ಅಂಬಿಕಾಪೂಜೆ. ರುಕ್ಮಿಣಿಯನ್ನು ಶ್ರೀಕೃಷ್ಣನು ಅಪಹರಿಸುವುದು.	೩೮
೫೪	ಶ್ರೀಕೃಷ್ಣನು ರುಕ್ಮಿಯನ್ನು ಸೆರೆಹಿಡಿಯುವುದು. ಬಲರಾಮನಿಂದ ರುಕ್ಮಿಣಿಗೆ ಸಮಾಧಾನ. ಶ್ರೀಕೃಷ್ಣ ರುಕ್ಮಿಣಿಯರ ವಿವಾಹ.	೫೦
೫೫	ಶಂಬರಾಸುರನಿಂದ ಪ್ರದ್ಯುಮ್ನನ ಅಪಹಾರ. ಶಂಬರವಧೆ. ಪ್ರದ್ಯುಮ್ನನು ರತಿಯೊಡನೆ ದ್ವಾರಕೆಗೆ ಬರುವುದು.	೬೨
೫೬	ಸ್ಯಮಂತಕೋಪಾಖ್ಯಾನ. ಜಾಂಬವತೀಪರಿಣಯ. ಸತ್ಯಭಾಮಾಪಾಣಿಗ್ರಹಣ	೭೦
೫೭	ಶತಧನ್ವನು ಸತ್ರಾಜಿತನನ್ನು ಕೊಂದು ಸ್ಯಮಂತಕಮಣಿಯನ್ನು ಅಪಹರಿಸುವುದು. ಶ್ರೀಕೃಷ್ಣನು ಶತಧನ್ವನನ್ನು ಸಂಹರಿಸಿ ಮಣಿಯನ್ನು ಅಕ್ರೂರನಿಗೆ ಹಿಂದಿರುಗಿಸುವುದು.	೭೯
೫೮	ಶ್ರೀಕೃಷ್ಣನು ಕಾಳಿಂದಿ, ಮಿತ್ರವಿಂದೆ, ಭದ್ರೆ-ಮೊದಲಾದವರನ್ನು ಮದುವೆಯಾಗುವುದು.	೮೮
೫೯	ನರಕಾಸುರನ ಸಂಹಾರ ; ಪಾರಿಜಾತಾಪಹರಣ.	೧೦೦
೬೦	ಶ್ರೀಕೃಷ್ಣ-ರುಕ್ಮಿಣಿಯರ ಪ್ರಣಯಕಲಹ.	೧೧೧
೬೧	ಶ್ರೀಕೃಷ್ಣನ ಸಂತತಿಯ ವರ್ಣನೆ ಅನಿರುದ್ಧನ ವಿವಾಹ. ಬಲರಾಮನಿಂದ ರುಕ್ಮಿಯ ವಧೆ.	೧೨೭

ಅಧ್ಯಾಯ	ವಿಷಯ	ಪುಟ
೬೨	ಉಷೆಯ ಸ್ವಪ್ನ. ಚಿತ್ರಲೇಖೆ ಅನಿರುದ್ಧನನ್ನು ಕರೆತಂದು ಅವಳೊಡನೆ ಸೇರಿಸುವುದು. ಬಾಣಾಸುರನಿಂದ ಅನಿರುದ್ಧನ ಬಂಧನ.	೧೩೭
೬೩	ಶ್ರೀಕೃಷ್ಣನಿಂದ ಬಾಣಾಸುರನ ಪರಾಜಯ. ಅನಿರುದ್ಧನ ಬಿಡುಗಡೆ	೧೪೫
೬೪	ನೃಗೋಪಾಖ್ಯಾನ	೧೫೭
೬೫	ಬಲರಾಮನು ನಂದಗೋಕುಲಕ್ಕೆ ಹೋಗಿ ಗೋಪಿಯರೊಡನೆ ವಿಹರಿಸುವುದು. ಯಮುನಾಕರ್ಷಣೆ	೧೬೬
೬೬	ಶ್ರೀಕೃಷ್ಣನಿಂದ ಪೌಂಡ್ರಕ ಕಾಶೀರಾಜರ ವಧೆ ; ಅಭಿಚಾರಾಗ್ನಿಯಿಂದ ಸುದಕ್ಷಿಣನ ವಿನಾಶ.	೧೭೩
೬೭	ಬಲರಾಮನಿಂದ ದ್ವಿವಿದನ ಸಂಹಾರ	೧೮೨
೬೮	ಕೌರವರು ಸಾಂಬನನ್ನು ಸೆರೆಹಿಡಿಯುವುದು. ಬಲರಾಮನು ಹಸ್ತಿನಾವತಿಯನ್ನು ಹಲಾಯುಧದಿಂದ ಸೆಳೆಯುವುದು.	೧೮೮
೬೯	ಶ್ರೀಕೃಷ್ಣನು ತನ್ನ ಎಲ್ಲ ಪತ್ನಿಯರ ಮನೆಗಳಲ್ಲಿಯೂ ಏಕಕಾಲದಲ್ಲಿ ಇರುವುದನ್ನು ಕಂಡು ನಾರದರ ವಿಸ್ಮಯ	೧೯೯
೭೦	ಜರಾಸಂಧನಿಂದ ಸೆರೆಹಿಡಿಯಲ್ಪಟ್ಟ ರಾಜರ ದೂತನು ಶ್ರೀಕೃಷ್ಣನ ಬಳಿಗೆ ಬರುವುದು. ಧರ್ಮರಾಜನು ರಾಜಸೂಯದಲ್ಲಿ ಉದ್ಯುಕ್ತನಾಗಿದ್ದಾನೆಂದು ತಿಳಿದು ಮುಂದಿನ ಕರ್ತವ್ಯದ ಪರ್ಯಾಲೋಚನೆ.	೨೦೯
೭೧	ಶ್ರೀಕೃಷ್ಣನು ರಾಜಸೂಯಯಾಗಕ್ಕಾಗಿ ಇಂದ್ರಪ್ರಸ್ಥಕ್ಕೆ ತೆರಳುವುದು.	೨೨೧
೭೨	ಯುಧಿಷ್ಠಿರನ ರಾಜಸೂಯಯಾಗಕ್ಕೆ ಶ್ರೀಕೃಷ್ಣನ ಸಂಮತಿ ; ಭೀಮಸೇನನಿಂದ ಜರಾಸಂಧನ ವಧೆ.	೨೩೨
೭೩	ಜರಾಸಂಧನ ಸೆರೆಮನೆಯಲ್ಲಿದ್ದ ರಾಜರ ಬಿಡುಗಡೆ.	೨೪೨
೭೪	ರಾಜಸೂಯಯಾಗ ; ಶ್ರೀಕೃಷ್ಣನಿಗೆ ಅಗ್ರಪೂಜೆ ; ಶಿಶುಪಾಲನ ವಧೆ.	೨೫೦
೭೫	ರಾಜಸೂಯದ ಅವಭೃಥ. ದುರ್ಯೋಧನನಿಗಾದ ಅವಮಾನ. ಅವನ ಅಸೂಯೆ.	೨೬೧
೭೬	ಸಾಲ್ವನು ದ್ವಾರಕೆಯನ್ನು ಮುತ್ತುವುದು. ಯುದ್ಧದಲ್ಲಿ ಪ್ರದ್ಯುಮ್ನನ ಮೂರ್ಛೆ.	೨೭೦
೭೭	ಸಾಲ್ವನ ಮಾಯಾಯುದ್ಧ, ಶ್ರೀಕೃಷ್ಣನಿಂದ ಸಾಲ್ವನ ವಧೆ.	೨೭೭
೭೮	ಶ್ರೀಕೃಷ್ಣನಿಂದ ದಂತವಕ್ತ್ರವಿದೂರಥರ ಸಂಹಾರ ; ಬಲರಾಮನು ರೋಮಹರ್ಷಣನನ್ನು ಕೊಲ್ಲುವುದು.	೨೮೬

ಅಧ್ಯಾಯ	ವಿಷಯ	ಪುಟ
೭೯	ಬಲರಾಮನು ಬಲ್ವಲಾಸುರನನ್ನು ಸಂಹರಿಸುವದು ; ಅವನ ತೀರ್ಥಯಾತ್ರೆ.	೨೯೪
೮೦	ಕುಚೇಲನು ಶ್ರೀಕೃಷ್ಣನ ಅರಮನೆಗೆ ಬರುವುದು. ಅವನಿಗೆ ಶ್ರೀಕೃಷ್ಣನಿಂದ ಸತ್ಕಾರ.	೩೦೧
೮೧	ಶ್ರೀಕೃಷ್ಣನ ಅನುಗ್ರಹದಿಂದ ಕುಚೇಲನಿಗೆ ಐಶ್ವರ್ಯಪ್ರಾಪ್ತಿ.	೩೧೦
೮೨	ಸೂರ್ಯಗ್ರಹಣ ನಿಮಿತ್ತವಾಗಿ ಯಾದವರು ಕುರುಕ್ಷೇತ್ರಕ್ಕೆ ಹೋಗುವುದು. ನಂದಗೋಪಾದಿಗಳೊಡನೆ ಸಂಮಿಲನ.	೩೧೯
೮೩	ಶ್ರೀಕೃಷ್ಣನ ಪತ್ನಿಯರು ತಮ್ಮ ವಿವಾಹದ ವೃತ್ತಾಂತವನ್ನು ದ್ರೌಪದಿಗೆ ಹೇಳುವುದು	೩೩೦
೮೪	ಋಷಿಗಳು ಭಗವಂತನನ್ನು ಸ್ತುತಿಸುವುದು. ವಸುದೇವನು ಯಜ್ಞ ಮಾಡುವುದು	೩೪೨
೮೫	ವಸುದೇವನಿಂದ ತತ್ತ್ವವಿಮರ್ಶೆ, ಕಂಸನಿಂದ ಹತರಾದ ಮಕ್ಕಳನ್ನು ದೇವಕಿಗೆ ಬಲರಾಮಕೃಷ್ಣರು ಸುತಳಲೋಕದಿಂದ ತಂದೊಪ್ಪಿಸುವುದು.	೩೫೮
೮೬	ಅರ್ಜುನನಿಂದ ಸುಭದ್ರಾಹರಣ. ಶ್ರೀಕೃಷ್ಣನು ಬಹುಲಾಶ್ವ ಮತ್ತು ಶ್ರುತದೇವರನ್ನು ಅನುಗ್ರಹಿಸುವುದು.	೩೬೨
೮೭	ಶ್ರುತಿಗೀತೆ-ವೇದಗಳಿಂದ ಪರಮಾತ್ಮನ ಸ್ತುತಿ.	೩೮೫
೮೮	ವೃಕಾಸುರನಿಂದ ಶಿವನು ಸಂಕಟಕ್ಕೆ ಒಳಗಾಗುವುದು. ನಾರಾಯಣನಿಂದ ಪರಿಹಾರ.	೪೦೪
೮೯	ತ್ರಿಮೂರ್ತಿಗಳಲ್ಲಿ ವಿಷ್ಣುವು ಶ್ರೇಷ್ಠನೆಂದು ಭೃಗುಮುನಿಯು ನಿರ್ಣಯಿಸುವುದು. ಮೃತರಾದ ಬ್ರಾಹ್ಮಣ ಪುತ್ರರನ್ನು ಶ್ರೀಕೃಷ್ಣಾರ್ಜುನರು ಭೂಲೋಕಕ್ಕೆ ಕರೆತರುವುದು.	೪೧೩
೯೦	ಸಂಕ್ಷೇಪವಾಗಿ ಶ್ರೀಕೃಷ್ಣ ಲೀಲೆಗಳ ವರ್ಣನೆ. ಆತನ ಪತ್ನಿಯರ ಮತ್ತು ಯದುವಂಶೀಯರ ವಿವರ. ಉಪಸಂಹಾರ.	೪೨೮
	ಅನುಬಂಧ.	೪೪೩

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮ್

ದಶಮಸ್ಕಂಧಃ

(ಉತ್ತರಾರ್ಧಃ)

ಕೃಷ್ಣಂ ನಾರಾಯಣಂ ವಂದೇ ಕೃಷ್ಣಂ ವಂದೇ ವ್ರಜಪ್ರಿಯಮ್ ।
ಕೃಷ್ಣಂ ದ್ವೈಪಾಯನಂ ವಂದೇ ಕೃಷ್ಣಂ ವಂದೇ ಪೃಥಾಸುತಮ್ ॥

ಪಂಚಾಶತ್ತಮಾಧ್ಯಾಯಃ

ಶ್ರೀ ಶುಕ ಉವಾಚ-
ಅಸ್ತಿಃ ಪ್ರಾಪ್ತಿಶ್ಚ ಕಂಸಸ್ಯ ಮಹಿಷ್ಯೌ ಭರತವರ್ಷಭ ।
ಮೃತೇ ಭರ್ತರಿ ದುಃಖಾರ್ತೇ ಈಯತುಃ ಸ್ಮ ಪಿತುರ್ಗೃಹಾನ್ ॥ ೧

ಪಿತ್ರೇ ಮಗಧರಾಜಾಯ ಜರಾಸಂಧಾಯ ದುಃಖಿತೇ ।
ವೇದಯಾಂಚಕ್ರತುಃ ಸರ್ವಮಾತ್ಮವೈಧವ್ಯ ಕಾರಣಮ್ ॥ ೨

ಸ ತದಪ್ರಿಯಮಾಕರ್ಣ್ಯ ಶೋಕಾಮರ್ಷಯುತೋ ನೃಪ ।
ಅಯಾದವೀಂ ಮಹೀಂ ಕರ್ತುಂ ಚಕ್ರೇ ಪರಮಮುದ್ಯಮಮ್ ॥ ೩

ಅಧ್ಯಾಯ ೫೦

ಜರಾಸಂಧನು ಮಧುರೆಯನ್ನು ಮುತ್ತುವುದು. ರಾಮಕೃಷ್ಣರಿಂದ ಸೋಲನ್ನು ಅನುಭವಿಸಿ ಹಿಂದಿರುಗುವುದು. ಕಾಲಯವನನ ಆಗಮನ. ದ್ವಾರಕಾನಗರದ ನಿರ್ಮಾಣ.

ಶ್ರೀ ಶುಕಮಹರ್ಷಿಗಳು ಹೇಳಿದರು : ಪರೀಕ್ಷಿತರಾಜ, ಕಂಸನಿಗೆ ಅಸ್ತಿ, ಪ್ರಾಪ್ತಿ ಎಂಬ ಇಬ್ಬರು ರಾಣಿಯರಿದ್ದರು. ತಮ್ಮ ಪತಿಯಾದ ಕಂಸನು ಸತ್ತಮೇಲೆ ಅವರೀರ್ವರೂ ತಂದೆಯಾದ ಜರಾಸಂಧನ ಮನೆಗೆ ಹೋದರು. ತಂದೆಯೂ ಮಗಧರಾಜನೂ ಆದ ಜರಾಸಂಧನಿಗೆ, ದುಃಖಿತರಾದ ಅವರು ತಮ್ಮ ವೈಧವ್ಯಕ್ಕೆ ಕಾರಣವಾದ ಎಲ್ಲ ವಿಷಯವನ್ನೂ ತಿಳಿಸಿದರು (೧-೨) ರಾಜ,

ಅಕ್ಷೌಹಿಣೀಭಿರ್ವಿಂಶತ್ಯಾ ತಿಸೃಭಿಶ್ಚಾಪಿ ಸಂವೃತಃ ।
ಯದುರಾಜಧಾನೀಂ ಮಥುರಾಂ ನ್ಯರುಣತ್ ಸರ್ವತೋದಿಶಮ್ ॥ ೪

ನಿರೀಕ್ಷ್ಯ ತದ್ಬಲಂ ಕೃಷ್ಣ ಉದ್ವೇಲಮಿವ ಸಾಗರಮ್ ।
ಸ್ವಪುರಂ ತೇನ ಸಂರುದ್ಧಂ ಸ್ವಜನಂ ಚ ಭಯಾಕುಲಮ್ ॥ ೫

ಚಿಂತಯಾಮಾಸ ಭಗವಾನ್ ಹರಿಃ ಕಾರಣಮಾನುಷಃ ।
ತದ್ದೇಶಕಾಲಾನುಗುಣಂ ಸ್ವಾವತಾರಪ್ರಯೋಜನಮ್ ॥ ೬

ಹನಿಷ್ಯಾಮಿ ಬಲಂ ಹ್ಯೇತದ್ ಭುವಿ ಭಾರಂ ಸಮಾಹಿತಮ್ ।
ಮಾಗಧೇನ ಸಮಾನೀತಂ ವಶ್ಯಾನಾಂ ಸರ್ವಭೂಭುಜಾಮ್ ॥ ೭

ಅಕ್ಷೌಹಿಣೀಭಿಃ ಸಂಖ್ಯಾತಂ ಭಟಾಶ್ವರಥಕುಂಜರೈಃ ।
ಮಾಗಧಸ್ತು ನ ಹಂತವ್ಯೋ ಭೂಯಃ ಕರ್ತಾ ಬಲೋದ್ಯಮಮ್ ॥ ೮

ಅಪ್ರಿಯವಾದ ಆ ವಾರ್ತೆಯನ್ನು ಕೇಳಿ ಜರಾಸಂಧನು ಶೋಕ ಕ್ರೋಧಗಳಿಂದ ಉದ್ದೀಪ್ತನಾಗಿ, ಭೂತಳದಲ್ಲಿ ಎದುಕುಲವೇ ಇಲ್ಲದಂತೆ ಮಾಡಬೇಕೆಂದು ಮಹಾ ಪ್ರಯತ್ನವನ್ನು ನಡೆಸಿದನು. ಇಪ್ಪತ್ತುಮೂರು ಅಕ್ಷೌಹಿಣೀ ಸೇನೆಗಳಿಂದ ಪರಿವೃತನಾಗಿ ಬಂದು, ಯದುರಾಜಧಾನಿಯಾದ ಮಥುರೆಗೆ ಎಲ್ಲ ದಿಕ್ಕುಗಳಿಂದಲೂ ಮುತ್ತಿಗೆ ಹಾಕಿದನು. (೩-೪) ಉಕ್ಕೇರಿಬಂದ ಮಹಾ ಸಾಗರದಂತಿದ್ದ ಆ ಸೇನೆಯನ್ನೂ ಅದು ತನ್ನ ನಗರಕ್ಕೆ ಮುತ್ತಿಗೆ ಹಾಕಿರುವುದನ್ನು ತಮ್ಮವರು ಭಯದಿಂದ ಕಂಗೆಟ್ಟಿರುವುದನ್ನೂ ಶ್ರೀ ಕೃಷ್ಣನು ಕಂಡನು. ಕಾರಣಮಾನುಷನಾದ [1] ಭಗವಾನ್ ಶ್ರೀ ಹರಿಯು ತಾನು ಅವತರಿಸಿಸುದಕ್ಕೆ ಪ್ರಯೋಜನವನ್ನು ದೇಶಕಾಲಾನುಗುಣವಾಗಿ ಈ ರೀತಿ ಚಿಂತಿಸಿದನು (೫-೬). ಭೂಮಿಗೆ ಹೊರೆಯಾಗಿ ಕುಳಿತಿರುವ ಈ ಸೇನೆಯನ್ನು ಕೊಲ್ಲುವನು ! ಮಾಗಧನು ತನಗೆ ಅಧೀನರಾದ ಸಮಸ್ತ ರಾಜರ ಸೈನ್ಯವನ್ನು ತಂದಿದ್ದಾನೆ. ಕಾಲಾಳು, ಕುದುರೆ, ತೇರು, ಆನೆಗಳಿಂದ ಕೂಡಿದ ಇದು ಕೆಲವು ಅಕ್ಷೌಹಿಣಿಗಳ ಸಂಖ್ಯೆಯಲ್ಲಿದೆ. ಆದರೆ ಜರಾಸಂಧನನ್ನು ಈಗ ಕೊಲ್ಲಬಾರದು ! ಇವನು ಮತ್ತಷ್ಟು ಸೇನೆಗಳನ್ನು ಸಜ್ಜುಮಾಡಲಿ (೭-೮).

---

೧ ಕಾರಣಮಾನುಷ=ಭೂಭಾರವನ್ನು ಹಿಂಗಿಸುವ ಕಾರಣದಿಂದ ಮನುಷ್ಯನಾಗಿ ಅವತರಿಸಿದವನು, ವಸ್ತುತಃ ಮನುಷ್ಯನಲ್ಲ

ಏತದರ್ಥೋಽವತಾರೋಽಯಂ ಭೂಭಾರಹರಣಾಯ ಮೇ ।
ಸಂರಕ್ಷಣಾಯ ಸಾಧೂನಾಂ ಕೃತೋಽನ್ಯೇಷಾಂ ವಧಾಯ ಚ ॥ ೯

ಅನ್ಯೋಽಪಿ ಧರ್ಮರಕ್ಷಾಯೈ ದೇಹಃ ಸಂಭ್ರಿಯತೇ ಮಯಾ ।
ವಿರಾಮಾಯಾಪ್ಯಧರ್ಮಸ್ಯ ಕಾಲೇ ಪ್ರಭವತಃ ಕ್ವಚಿತ್ ॥ ೧೦

ಏವಂ ಧ್ಯಾಯತಿ ಗೋವಿಂದ ಆಕಾಶಾತ್ ಸೂರ್ಯವರ್ಚಸೌ ।
ರಥಾವುಪಸ್ಥಿತೌ ಸದ್ಯಃ ಸಸೂತೌ ಸಪರಿಚ್ಛದೌ ॥ ೧೧

ಆಯುಧಾನಿ ಚ ದಿವ್ಯಾನಿ ಪುರಾಣಾನಿ ಯದೃಚ್ಛಯಾ ।
ದೃಷ್ಟ್ವಾ ತಾನಿ ಹೃಷೀಕೇಶಃ ಸಂಕರ್ಷಣಮಥಾಬ್ರವೀತ್ ॥ ೧೨

ಪಶ್ಯಾರ್ಯ ವ್ಯಸನಂ ಪ್ರಾಪ್ತಂ ಯದೂನಾಂ ತ್ವಾವ್ ತಾಂ ಪ್ರಭೋ ।
ಏಷ ತೇ ರಥ ಆಯಾತೋ ದಯಿತಾನ್ಯಾಯುಧಾನಿ ಚ ॥ ೧೩

ಯಾನಮಾಸ್ಥಾಯ ಜಹ್ಯೇತದ್ ವ್ಯಸನಾತ್ ಸ್ವಾನ್ ಸಮುದ್ಧರ ।
ಏತದರ್ಥಂ ಹಿ ನೌ ಜನ್ಮ ಸಾಧೂನಾಮೀಶ ಶರ್ಮಕೃತ್ ॥ ೧೪

ಇದಕ್ಕಾಗಿಯೇ ನನ್ನ ಅವತಾರ, ಭೂಭಾರವನ್ನು ಹಿಂಗಿಸುವುದಕ್ಕಾಗಿ, ಸಜ್ಜನರನ್ನು ಸಂರಕ್ಷಿಸುವುದಕ್ಕೂ ದುರ್ಜನರನ್ನು ವಧಿಸುವುದಕ್ಕೂ ಅವತರಿಸುತ್ತಿದ್ದೇನೆ. ಧರ್ಮವನ್ನು ಉಳಿಸಿ ಅಧರ್ಮವನ್ನು ಅಳಿಸಬೇಕೆಂದು, ಆಯಾ ಕಾಲದಲ್ಲಿ ಅಲ್ಲಲ್ಲಿ ಅವತರಿಸಿ ಬೇರೆ ಬೇರೆ ದೇಹವನ್ನು ಧರಿಸುತ್ತಿದ್ದೇನೆ'' (೯-೧೦). ಹೀಗೆ ಗೋವಿಂದನು ಆಲೋಚಿಸುತ್ತಿರಲು, ಒಡನೆಯೇ ಸಾರಥಿಗಳಿಂದಲೂ ಧ್ವಜ ಕವಚಾದಿ ಪರಿಕರಗಳಿಂದಲೂ ಕೂಡಿದ ಎರಡು ರಥಗಳು ಸೂರ್ಯನಂತೆ ಬೆಳಗುತ್ತ ಆಕಾಶದಿಂದ ಇಳಿದು ಬಂಥವು (೧೧). ಅವುಗಳಲ್ಲಿ ಶಾರ್ಙ್ಗಧನಸ್ಸು ಮೊದಲಾದ ಪುರಾತನ ದಿವ್ಯಾಯುಧಗಳಿದ್ದವು. ತಾನಾಗಿ ಒದಗಿದ ಆ ಆಯುಧಗಳನ್ನು ನೋಡಿ ಶ್ರೀಕೃಷ್ಣನು ಬಲರಾಮನನ್ನು ಕುರಿತು ''ಅಣ್ಣ, ನೀನು ಪಾಲಿಸುತ್ತಿರುವ ಯಾದವರಿಗೆ ಬಂದ ವಿಪತ್ತನ್ನು ನೋಡು! ಈ ರಥವೂ ಪ್ರಿಯವಾದ ಆಯುಧಗಳೂ ನಿನಗಾಗಿ ಬಂದಿವೆ. ತೇರನ್ನೇರಿ ಸೇನೆಯನ್ನು ಸಂಹರಿಸು. ನಿನ್ನವರನ್ನು ವಿಪತ್ತಿನಿಂದ ಪಾರುಮಾಡು. ಹೇ ಪ್ರಭು, ಇದಕ್ಕಾಗಿಯೇ ಅಲ್ಲವೆ ನಾವು ಹುಟ್ಟಿರುವುದು ? ಸಜ್ಜನರಿಗೆ ಸುಖವನ್ನುಂಟು

---

೧ ಅನುಬಂಧವನ್ನು ನೋಡಿ.

ತ್ರಯೋವಿಂಶತ್ಯನೀಕಾಖ್ಯಂ ಭೂಮೇರ್ಭಾರಮಪಾಕುರು ।
ಏವಂ ಸಮ್ಮಂತ್ರ್ಯ ದಾಶಾರ್ಹೌ ದಂಶಿತೌ ರಥಿನೌ ಪುರಾತ್ ॥ ೧೫

ನಿರ್ಜಗ್ಮತುಃ ಸ್ವಾಯುಧಾಢ್ಯೌ ಬಲೇನಾಲ್ಪೀಯಸಾಽಽವೃತೌ ।
ಶಂಖಂ ದಧ್ಮೌ ವಿನಿರ್ಗತ್ಯ ಹರಿರ್ದಾರುಕಸಾರಥಿಃ ॥ ೧೬

ತತೋಽಭೂತ್ ಪರಸೈನ್ಯಾನಾಂ ಹೃದಿ ವಿತ್ರಾಸವೇಪಥುಃ ।
ತಾವಾಹ ಮಾಗಧೋ ವೀಕ್ಷ್ಯ ಹೇ ಕೃಷ್ಣ ಪುರುಷಾಧಮ ॥ ೧೭

ನ ತ್ವಯಾ ಯೋದ್ಧುಮಿಚ್ಛಾಮಿ ಬಾಲೇನೈಕೇನ ಲಜ್ಜಯಾ ।
ಗುಪ್ತೇನ ಹಿ ತ್ವಯಾ ಮಂದ ನ ಯೋತ್ಸ್ಯೇ ಯಾಹಿ ಬಂಧುಹನ್ ॥

ತವ ರಾಮ ಯದಿ ಶ್ರದ್ಧಾ ಯುಧ್ಯಸ್ವ ಧೈರ್ಯಮುದ್ವಹ ।
ಹಿತ್ವಾ ವಾ ಮಚ್ಛರೈಶ್ಛಿನ್ನಂ ದೇಹಂ ಸ್ವರ್ಯಾಹಿ ಮಾಂ ಜಹಿ ॥ ೧೯

ಶ್ರೀ ಭಗವಾನುವಾಚ-
ನ ವೈ ಶೂರಾ ವಿಕತ್ಥಂತೇ ದರ್ಶಯಂತ್ಯೇವ ಪೌರುಷಮ್ ।
ನ ಗೃಹ್ಣೀಮೋ ವಚೋ ರಾಜನ್ನಾತುರಸ್ಯ ಮುಮೂರ್ಷತಃ ॥ ೨೦

ಮಾಡುವುದು ನಮ್ಮ ಉದ್ದೇಶ (೧೨-೧೪). ಇಪ್ಪತ್ತುಮೂರು ಅಕ್ಷೌಹಿಣೀ ಬಲವೆಂಬ ಈ ಭೂಭಾರವನ್ನು ಹೋಗಲಾಡಿಸು'' ಎಂದನು. ಹೀಗೆ ಸಮಾಲೋಚಿಸಿ ಶ್ರೀಕೃಷ್ಣಬಲರಾಮರು ಕವಚಗಳನ್ನು ತೊಟ್ಟು ರಥಗಳನ್ನೇರಿದರು. ತಮ್ಮ ತಮ್ಮ ಆಯುಧಗಳನ್ನು ಧರಿಸಿ ಸ್ವಲ್ಪ ಸೈನಿಕರಿಂದ ಪರಿವೃತರಾಗಿ ನಗರದಿಂದ ಹೊರಟರು. ದಾರುಕನು ಸಾರಥಿಯಾಗಿರಲು ಹರಿಯು ಶಂಖವನ್ನೂದಿದನು (೧೫-೧೬). ಅದನ್ನು ಕೇಳಿ ಎದುರಾಳಿಗಳ ಎದೆ ಹೆದರಿಕೆಯಿಂದ ಅದುರಿತು ! ರಾಮಕೃಷ್ಣರನ್ನು ನೋಡಿ ಮಾಗಧನು ''ಎಲೋ ಕೃಷ್ಣ, ನೀಚ ! ಹುಡುಗನಾದ ನಿನ್ನೊಬ್ಬನೊಡನೆ ಹೊಡೆದಾಡಲು ನನಗೆ ಲಜ್ಜೆಯಾಗುವುದು. ನಿನ್ನೊಡನೆ ಯುದ್ಧಮಾಡಲು ಇಚ್ಛೆ ಇಲ್ಲ, ನೀನು ಸೇನಾರಕ್ಷಿತನಾಗಿ ಬಂದರೂ ಯುದ್ಧ ಮಾಡೆನು. ಅವಿವೇಕಿ, ಬಂಧುವನ್ನು ಕೊಂದವನೆ ! ತೊಲಗು (೧೭-೧೮). ಎಲೈ ರಾಮ, ನಿನಗೆ ಆಸಕ್ತಿ ಇದ್ದರೆ ಯುದ್ಧಕ್ಕೆ ಸಿದ್ಧನಾಗು. ಧೈರ್ಯವನ್ನವಲಂಬಿಸು. ನನ್ನ ಶರಗಳಿಂದ ಕೊರೆದು ಹೋದ ಶರೀರವನ್ನು ತೊರೆದು ಸ್ವರ್ಗಕ್ಕೆ ತೆರಳು ! ಅಥವಾ ನನ್ನನ್ನಾದರೂ ಸಂಹರಿಸು'' ಎಂದನು (೧೯).

ಜರಾಸುತಸ್ತಾವಭಿಸೃತ್ಯ ಮಾಧವೌ
ಮಹಾಬಲೌಘೇನ ಬಲೀಯಸಾऽऽವೃಣೋತ್ ।
ಸಸೈನ್ಯಯಾನಧ್ವಜವಾಜಿಸಾರಥೀ
ಸೂರ್ಯಾನಲೌ ವಾಯುರಿವಾಭ್ರರೇಣುಭಿಃ ॥ ೨೧

ಸುಪರ್ಣತಾಲಧ್ವಜಚಿಹ್ನಿತೌ ರಥಾ-
ವಲಕ್ಷಯಂತ್ಯೋ ಹರಿರಾಮಯೋರ್ಮೃಧೇ ।
ಸ್ತ್ರಿಯಃ ಪುರಾಟ್ಟಾಲಕಹರ್ಮ್ಯ ಗೋಪುರಂ
ಸಮಾಶ್ರಿತಾಃ ಸಂಮುಮುಹುಃ ಶುಚಾರ್ದಿತಾಃ ॥ ೨೨

ಹರಿಃ ಪರಾನೀಕಪಯೋಮುಚಾಂ ಮುಹುಃ
ಶಿಲೀಮುಖಾತ್ಯುಲ್ಬಣವರ್ಷಪೀಡಿತಮ್ ।
ಸ್ವಸೈನ್ಯ ಮಾಲೋಕ್ಯ ಸುರಾಸುರಾರ್ಚಿತಂ
ವ್ಯಸ್ಫೂರ್ಜಯಚ್ಛಾರ್ಙ್ಗಶರಾಸನೋತ್ತಮಮ್ ॥ ೨೩

ಆಗ ಶ್ರೀ ಕೃಷ್ಣನು ಹೇಳಿದನು: ''ಎಲೈ ರಾಜ, ಶೂರರು ಜಂಬಕೊಚ್ಚಿ ಕೊಳ್ಳುವುದಿಲ್ಲ; ತಮ್ಮ ಪೌರುಷವನ್ನೇ ಮೆರಸುವರು. ಸಾಯುತ್ತಿರುವ ರೋಗಿಯ ಮಾತನ್ನು ನಾವು ಕೇಳತಕ್ಕವರಲ್ಲ !'' (೨೦). ಆಗ ಜರಾಸಂಧನು ಮುಂದೆ ನುಗ್ಗಿ ತನ್ನ ಪ್ರಬಲವಾದ ಸೇನಾ ಸಮೂಹದಿಂದ ಪದಾತಿ ರಥ ಧ್ವಜಹಯ ಸಾರಥಿ ಸಮೇತರಾದ ರಾಮಕೃಷ್ಣರನ್ನು, ವಾಯುವು ಮೋಡಗಳನ್ನು ನುಗ್ಗಿಸಿ ಸೂರ್ಯನನ್ನೂ ಧೂಳಿಗಳನ್ನು ಹರಡಿ ಅಗ್ನಿಯನ್ನೂ ಆವರಿಸುವಂತೆ, ಸುತ್ತಲೂ ಮುತ್ತಿದನು (೨೧). ಮಧುರಾನಗರದ ಎತ್ತರವಾದ ಅಟ್ಟ, ಸೌಧ, ಗೋಪುರಗಳನ್ನು ಹತ್ತಿ ನಿಂತಿದ್ದ ಸ್ತ್ರೀಯರು ಗರುಡಧ್ವಜಾಂಕಿತವಾದ ಶ್ರೀಕೃಷ್ಣನ ರಥವನ್ನೂ ತಾಳಧ್ವಜಾಂಕಿತವಾದ ಬಲರಾಮನ ರಥವನ್ನೂ ಕಾಣದೆ ಶೋಕ ಸಂತಪ್ತರಾಗಿ ಎಚ್ಚರದಪ್ಪಿದರು (೨೨). ಶತ್ರುಸೇನೆಗಳೆಂಬ ಮೋಡಗಳಿಂದ ಒಂದೇ ಸಮನೆ ಸುರಿಯುವ ಶರಗಳೆಂಬ ಉಲ್ಬಣ ವೃಷ್ಟಿಧಾರೆಗಳಿಂದ ತನ್ನ ಸೈನ್ಯವು ಪೀಡಿತವಾದ್ದನ್ನು ಕಂಡು ಶ್ರೀಕೃಷ್ಣನು, ದೇವದಾನವ ಪೂಜಿತವಾದ ಶಾರ್ಙ್ಗ

ಗೃಹ್ಣನ್ ನಿಷಙ್ಗಾದಥ ಸಂದಧಚ್ಛರಾನ್
ವಿಕೃಷ್ಯ ಮುಂಚನ್ ಶಿತಬಾಣಪೂಗಾನ್ ।
ನಿಘ್ನನ್ ರಥಾನ್ ಕುಂಜರವಾಜಿಪತ್ತೀನ್
ನಿರಂತರಂ ಯದ್ವದಲಾತಚಕ್ರಮ್ ॥ ೨೪

ನಿರ್ಭಿನ್ನಕುಂಭಾಃ ಕರಿಣೋ ನಿಪೇತು-
ರನೇಕಶೋಽಶ್ವಾಃ ಶರವೃಕ್ಣಕಂಧರಾಃ।
ರಥಾ ಹತಾಶ್ವಧ್ವಜಸೂತನಾಯಕಾಃ
ಪದಾತಯಶ್ಛಿನ್ನಭುಜೋರುಕಂಧರಾಃ॥ ೨೫

ಸಂಛಿದ್ಯಮಾನದ್ವಿಪದೇಭವಾಜಿನಾ-
ಮಂಗಪ್ರಸೂತಾಃ ಶತಶೋಽಸೃಗಾಪಗಾಃ ।
ಭುಜಾಹಯಃ ಪೂರುಷಶೀರ್ಷಕಚ್ಛಪಾ
ಹತದ್ವಿಪದ್ವೀಪಹಯಗ್ರಹಾಕುಲಾಃ ॥ ೨೬

ಧನಸ್ಸನ್ನು ಮಿಡಿದನು (೨೩). ಬತ್ತಳಿಕೆಯಿಂದ ಬಾಣಗಳನ್ನು ಸೆಳೆದು ಹೂಡಿ ಹೆದೆಯನ್ನು ಮೀಟಿ ನಿಶಿತಾಸ್ತ್ರಗಳನ್ನು ಚಿಮ್ಮಿ, ವೈರಿಗಳ ರಥಗಳನ್ನೂ ಗಜವಾಜಿ ಪದಾತಿಗಳನ್ನೂ ಎಡೆಬಿಡದೆಪ್ರಹರಿಸಿದನು. ಅವನ ಧನಸ್ಸು ಅಲಾತಚಕ್ರದಂತೆ ಕಂಗೊಳಿಸುತಿತ್ತು(೨೪). ಕುಂಭಸ್ಥಳಗಳು ಸೀಳಲಾಗಿ ಲೆಕ್ಕವಿಲ್ಲದಷ್ಟು ಆನೆಗಳು ಒರಗಿದವು. ಶರಗಳಿಂದ ಕೊರಳು ತರಿದು ಹೋಗಲಾಗಿ ಕುದುರೆಗಳು ಕುಕ್ಕರಿಸಿದವು. ಅಶ್ವಗಳು ಹತವಾಗಿ ಧ್ವಜಗಳು ಮುರಿದು ಸಾರಥಿಗಳು ಸತ್ತು ರಥಿಕರು ಮೃತರಾಗಲು, ರಥಗಳು ಉರುಳಿಬಿದ್ದವು. ತೋಳು ತೊಡೆ ಕತ್ತುಗಳು ಕತ್ತರಿಸಿಹೋಗಲು , ಕಾಲಾಳುಗಳು ಕೆಳಗೆ ಬಿದ್ದರು (೨೫). ನೂರು ನೂರಾಗಿ ಅಸ್ತ್ರಗಳಿಂದ ಕೊಚ್ಚಿಹಾಕಲ್ಪಡುತ್ತಿದ್ದ ಸೈನಿಕರ, ಆನೆಗಳ ಮತ್ತು ಕುದುರೆಗಳ ಅಂಗಗಳಿಂದ ಹರಿದ ನೆತ್ತರಿನ ಹೊಳೆಗಳು ಒಂದುಗೂಡಿದವು ! ಆ ಹೊಳೆಗಳಲ್ಲಿ ಸೈನಿಕರ ತೋಳುಗಳೇ ಹಾವುಗಳು! ತಲೆಗಳೇ ಆಮೆಗಳು ! ಸತ್ತುಹೋದ ಆನೆಗಳೇ ದ್ವೀಪಗಳು ! ಕುದುರೆಗಳೇ ಮೊಸಳೆಗಳು (೨೬).

ಕರೋರುಮೀನಾ ನರಕೇಶಶೈವಲಾ
ಧನುಸ್ತರಂಗಾಯುಧಗುಲ್ಮ ಸಂಕುಲಾಃ ।
ಅಚ್ಛೂರಿಕಾವರ್ತಭಯಾನಕಾ ಮಹಾ-
ಮಣಿಪ್ರವೇಕಾಭರಣಾಶ್ಮಶರ್ಕರಾಃ ॥ ೨೭

ಪ್ರವರ್ತಿತಾ ಭೀರುಭಯಾವಹಾ ಮೃಧೇ
ಮನಸ್ವಿನಾಂ ಹರ್ಷಕರೀಃ ಪರಸ್ಪರಮ್ ।
ವಿನಿಘ್ನತಾರೀನ್ ಮುಸಲೇನ ದುರ್ಮದಾನ್
ಸಂಕರ್ಷಣೇನಾಪರಿಮೇಯತೇಜಸಾ ॥ ೨೮

ಬಲಂ ತದಂಗಾರ್ಣವದುರ್ಗಭೈರವಂ
ದುರಂತಪಾರಂ ಮಗಧೇಂದ್ರ ಪಾಲಿತಮ್ ।
ಕ್ಷಯಂ ಪ್ರಣೀತಂ ವಸುದೇವಪುತ್ರಯೋ-
ರ್ವಿಕ್ರೀಡಿತಂ ತಜ್ಜಗದೀಶಯೋಃ ಪರಮ್ ॥ ೨೯

ಸೈನಿಕರ ಕೈ ಮತ್ತು ತೊಡೆಗಳೇ ಮೀನುಗಳು ! ತಲೆಗೂದಲೇ ಪಾಚಿಯಾಯಿತು! ಬಿಲ್ಲುಗುಳು ಅಲೆಗಳಾದವು! ಇತರ ಆಯುಧಗಳು ಪೊದೆಗಳಾದವು, ಡಾಲುಗಳು ಸುಳಿಗಳಾಗಿ ರಕ್ತನದಿಗಳು ಭಯಾನಕವಾದವು. (ಯೋಧರು ಧರಿಸಿದ್ದ) ಮಹಾಮಣಿಗಳು ಕಲ್ಲುಗಳೂ, ಒಡವೆಗಳು ಮರಳೂ ಆದವು! (೨೭). ರಣರಂಗದಲ್ಲಿ ಹರಿದ ಆ ರಕ್ತನದಿಗಳು ಹೇಡಿಗಳಿಗೆ ಭಯವನ್ನೂ ಧೀರರಿಗೆ ಹರ್ಷವನ್ನೂ ಉಂಟುಮಾಡಿದವು. ಪರೀಕ್ಷಿತರಾಜ, ಊಹಾತೀತಬಲನಾದ ಬಲರಾಮನು ಮದಾಂಧರಾದ ವೈರಿಗಳನ್ನು ಮುಸಲಾಯುಧದಿಂದ ಸದೆಬಡಿದು, ಕಡಲಿನಂತೆ ದುರ್ಗಮವೂ ಭೀಷಣವೂ ಅಗಾಧವೂ ಮೇರೆಯಿಲ್ಲದ್ದೂ ಮಗಧರಾಜಪಾಲಿತವೂ ಆದ ಸೈನ್ಯವನ್ನು ನಾಶಗೊಳಿಸಿದನು. ಆ ಕಾರ್ಯವು ಜಗದೀಶ್ವರರಾದ ವಸುದೇವ ಪುತ್ರರ ಒಂದು ಕ್ರೀಡೆ, ಅಷ್ಟೆ (೨೮-೨೯). ಮೂರುಲೋಕಗಳ ಜನ್ಮಸ್ಥಿತಿಲಯಗಳನ್ನು ತನ್ನ ಒಂದು ಲೀಲಾಮಾತ್ರದಿಂದ ಯಾವನು ಎಸಗಬಲ್ಲನೋ ಅಂತಹ ಅನಂತಗುಣನಾದ ಭಗವಂತನಿಗೆ ಶತ್ರುಸೇನಾವಿಮರ್ದವು ಅಚ್ಚರಿಯಲ್ಲ. ಆದರೂ ಮನುಷ್ಯರಂತೆ

ಸ್ಥಿತ್ಯುದ್ಭವಾಂತಂ ಭುವನತ್ರಯಸ್ಯ ಯಃ
ಸಮೀಹತೇಽನಂತಗುಣಃ ಸ್ವಲೀಲಯಾ ।
ನ ತಸ್ಯ ಚಿತ್ರಂ ಪರಪಕ್ಷನಿಗ್ರಹ-
ಸ್ತಥಾಪಿ ಮರ್ತ್ಯಾನುವಿಧಸ್ಯ ವರ್ಣ್ಯತೇ ॥ ೩೦

ಜಗ್ರಾಹ ವಿರಥಂ ರಾಮೋ ಜರಾಸಂಧಂ ಮಹಾಬಲಮ್ ।
ಹತಾನೀಕಾವಶಿಷ್ಟಾಸುಂ ಸಿಂಹಃ ಸಿಂಹಮಿವೌಜಸಾ ॥ ೩೧

ಬಧ್ಯಮಾನಂ ಹತಾರಾತಿಂ ಪಾಶೈರ್ವಾರುಣಮಾನುಷೈಃ ।
ವಾರಯಾಮಾಸ ಗೋವಿಂದಸ್ತೇನ ಕಾರ್ಯಚಿಕೀರ್ಷಯಾ ॥ ೩೨

ಸ ಮುಕ್ತೋ ಲೋಕನಾಥಾಭ್ಯಾಂ ವ್ರೀಡಿತೋ ವೀರಸಮ್ಮತಃ ।
ತಪಸೇ ಕೃತಸಂಕಲ್ಪೋ ವಾರಿತಃ ಪಥಿ ರಾಜಭಿಃ ॥ ೩೩

ವಾಕ್ಯೈಃ ಪವಿತ್ರಾರ್ಥಪದೈರ್ನಯನೈಃ ಪ್ರಾಕೃತೈರಪಿ ।
ಸ್ವಕರ್ಮಬಂಧಪ್ರಾಪ್ತೋಽಯಂ ಯದುಭಿಸ್ತೇ ಪರಾಭವಃ ॥ ೩೪

ವರ್ತಿಸುತ್ತಿದ್ದ ಅವನ ಕಾರ್ಯವನ್ನು ಇಲ್ಲಿ ವರ್ಣಿಸಲಾಗುತ್ತಿದೆ (೩೦). ಹೀಗೆ ಸೇನೆಯು ಅಳಿಯಲಾಗಿ ಜೀವಮಾತ್ರದಿಂದ ಉಳಿದ ಮಹಾಬಲನಾದ ಜರಾಸಂಧನನ್ನು, ಸಿಂಹವನ್ನು ಸಿಂಹವು ಆಕ್ರಮಿಸುವಂತೆ ಬಲರಾಮನು ವಿಕ್ರಮದಿಂದ ಆಕ್ರಮಿಸಿ ರಥದಿಂದಳೆದು ಸೆರೆಹಿಡಿದನು (೩೧). ವಾರುಣ ಮತ್ತು ಮಾನುಷಪಾಶಗಳಿಂದ ಬಲರಾಮನು ಹತ ಸೈನ್ಯನಾದ ಮಾಗಧನನ್ನು ಕೊಲ್ಲಲು ಉದ್ಯುಕ್ತನಾಗಲು, ಆತನಿಂದ ಕಾರ್ಯಾಂತರವಾಗಬೇಕೆಂಬ ಉದ್ದೇಶದಿಂದ ಶ್ರೀಕೃಷ್ಣನು ತಡೆದನು (೩೨). ಲೋಕನಾಥರಾದ ಬಲರಾಮ ಶ್ರೀಕೃಷ್ಣರಿಂದ ಬಿಡುಗಡೆ ಹೊಂದಿದ ವೀರನಾದ ಜರಾಸಂಧನು ಲಜ್ಜಿತನಾಗಿ ತಪಸ್ಸುಮಾಡ ಬೇಕೆಂದು ಸಂಕಲ್ಪಿಸಿ ಅಲ್ಲಿಂದ ಹೊರಟನು. ದಾರಿಯಲ್ಲಿ ಅವನ ಪಕ್ಷದ ರಾಜರು ತಡೆದರು. ''ಮಗಧರಾಜ, (ಅಲ್ಪರಾದ) ಯಾದವರಿಂದ ನಿನಗಾದ ಸೋಲು ಪ್ರಾರಬ್ಧಕರ್ಮವಶದಿಂದ ಬಂದದ್ದು. (ಇಷ್ಟು ಮಾತ್ರದಿಂದ ಅಧೀರ ನಾಗಬೇಡ) ಇತ್ಯಾದಿ ಲೌಕಿಕನ್ಯಾಯಗಳಿಂದಲೂ ಕ್ಷತ್ರಿಯಧರ್ಮೋಚಿತವಾದ ನುಡಿಗಳಿಂದಲೂ ಸಂತೈಸಿ ಅವನನ್ನು ತಡೆದರು (೩೪). ಹೀಗೆ ಸಮಸ್ತ

ಹತೇಷು ಸರ್ವಾನೀಕೇಷು ನೃಪೋ ಬಾರ್ಹದ್ರಥಸ್ತದಾ ।
ಉಪೇಕ್ಷಿತೋ ಭಗವತಾ ಮಗಧಾನ್ ದುರ್ಮನಾ ಯಯೌ ॥ ೩೫

ಮುಕುಂದೋಽಪ್ಯಕ್ಷತಬಲೋ ನಿಸ್ತೀರ್ಣಾರಿಬಲಾರ್ಣವಃ ।
ವಿಕೀರ್ಯಮಾಣಃ ಕುಸುಮೈಸ್ತ್ರಿದಶೈರನುಮೋದಿತಃ ॥ ೩೬

ಮಾಥುರೈರುಪಸಂಗಮ್ಯ ವಿಜ್ವರೈರ್ಮುದಿತಾತ್ಮಭಿಃ ।
ಉಪಗೀಯಮಾನವಿಜಯಃ ಸೂತಮಾಗಧವಂದಿಭಿಃ ॥ ೩೭

ಶಂಖದುಂದುಭಯೋ ನೇದುರ್ಭೇರೀತೂರ್ಯಾಣ್ಯನೇಕಶಃ ।
ವೀಣಾವೇಣುಮೃದಂಗಾನಿ ಪುರಂ ಪ್ರವಿಶತಿ ಪ್ರಭೌ ॥ ೩೮

ಸಿಕ್ತಮಾರ್ಗಾಂ ಹೃಷ್ಟಜನಾಂ ಪತಾಕಾಭಿರಲಂಕೃತಾಮ್ ।
ನಿರ್ಘುಷ್ಟಾಂ ಬ್ರಹ್ಮಘೋಷೇಣ ಕೌತುಕಾಬದ್ಧತೋರಣಾಮ್ ॥

ನಿಚೀಯಮಾನೋ ನಾರೀಭಿರ್ಮಾಲ್ಯದಧ್ಯಕ್ಷತಾಂಕುರೈಃ ।
ನಿರೀಕ್ಷ್ಯಮಾಣಃ ಸಸ್ನೇಹಂ ಪ್ರೀತ್ಯುತ್ಕಲಿತಲೋಚನೈಃ ॥ ೪೦

ಸೈನ್ಯವೂ ನಾಶವಾಗಲಾಗಿ ಬೃಹದ್ರಥತನಯನಾದ ಜರಾಸಂಧನು ಭಗವಂತನಿಂದ ಉಪೇಕ್ಷಿತನಾಗಿ, ಖಿನ್ನ ಮನಸ್ಸಿನಿಂದ ಮಗಧದೇಶಕ್ಕೆ ಹಿಂದಿರುಗಿದನು (೩೫). ಇತ್ತ ಮುಕಂದನು ತನ್ನ ಸೇನೆಗೆ ಗಾಸಿಯಾಗದಂತೆ ಶತ್ರು ಸೇನಾಸಾಗರವನ್ನು ದಾಟಿದವನಾಗಿ, ಮಧುರಾ ನಗರವನ್ನು ಪ್ರವೇಶಿಸಿದನು. ದೇವತೆಗಳು 'ಸಾಧು, ಸಾಧು' ಎಂದು ಜಯಕಾರ ಮಾಡುತ್ತ ಪುಷ್ಪವೃಷ್ಟಿಯನ್ನುಸುರಿದರು (೩೬). ನಿರಾತಂಕರಾಗಿ ಆನಂದಿಸುತ್ತಿದ್ದ ಮಧುರಾ ಪುರಜನರು ಜೊತೆಗೂಡಿದರು. ಸೂತಮಾಗದ ವಂದಿಗಳು ಶ್ರೀಕೃಷ್ಣನ ವಿಜಯೋತ್ಸವವನ್ನು ಹಾಡುತ್ತಿದ್ದರು. ಸ್ವಾಮಿಯು ನಗರವನ್ನು ಪ್ರವೇಶಿಸುತ್ತಿರುವಾಗ ಶಂಖಗಳು ಊದಿದವು. ಭೇರೀವಾದ್ಯಗಳು ಮೊಳಗಿದವು. ವೀಣೆ, ಕೊಳಲು, ಮೃದಂಗಗಳು ಧ್ವನಿಗೈದವು (೩೭-೩೮). ಸಂತುಷ್ಟ ಪ್ರಜೆಗಳಿಂದ ತುಂಬಿದ ರಾಜಧಾನಿಯ ರಸ್ತೆಗಳಿಗೆ ನೀರೆರಚಿ ಪತಾಕೆಗಳಿಂದ ಅಲಂಕರಿಸಲಾಗಿತ್ತು. ವೇದಘೋಷವು ಮೊಳಗುತ್ತಿತ್ತು. ಉತ್ಸವಾರ್ಥವಾಗಿ ತೋರಣಗಳನ್ನು ನಿರ್ಮಿಸಲಾಗಿತ್ತು (೩೯). ಸುಮಂಗಲಿಯರು ಸ್ನೇಹಪ್ರೀತಿಗಳಿಂದ ಹಿರಿಹಿಗ್ಗಿದ

ಆಯೋಧನಗತಂ ವಿತ್ತಮನಂತಂ ವೀರಭೂಷಣಮ್ ।
ಯದುರಾಜಾಯ ತತ್ ಸರ್ವಮಾಹೃತಂ ಪ್ರಾದಿಶತ್ಪ್ರಭುಃ ॥ ೪೧

ಏವಂ ಸಪ್ತದಶಕೃತ್ವಸ್ತಾವತ್ಯಕ್ಷೌಹಿಣೀಬಲಃ ।
ಯುಯುಧೇ ಮಾಗಧೋ ರಾಜಾ ಯದುಭಿಃ ಕೃಷ್ಣಪಾಲಿತೈಃ ॥ ೪೨

ಅಕ್ಷಿಣ್ವಂಸ್ತದ್ಬಲಂ ಸರ್ವಂ ವೃಷ್ಣಯಃ ಕೃಷ್ಣತೇಜಸಾ ।
ಹತೇಷು ಸ್ವೇಷ್ವನೀಕೇಷು ತ್ಯಕ್ತೋऽಯಾದರಿಭಿರ್ನೃಪಃ ॥ ೪೩

ಅಷ್ಟಾದಶಮಸಂಗ್ರಾಮೇ ಆಗಾಮಿನಿ ತದಂತರಾ ।
ನಾರದಪ್ರೇಷಿತೋ ವೀರೋ ಯವನಃ ಪ್ರತ್ಯದೃಶ್ಯತ ॥ ೪೪

ರುರೋಧ ಮಥುರಾಮೇತ್ಯ ತಿಸೃಭಿರ್ಮ್ಲೇಚ್ಛಕೋಟಿಭಿಃ ।
ನೃಲೋಕೇ ಚಾಪ್ರತಿದ್ವಂದ್ವೋವೃಷ್ಣೀಞ್ಶ್ರುತ್ವಾऽತ್ಮ ಸಂಮಿತಾನ್ ॥
ತಂ ದೃಷ್ಟ್ವಾಽಚಿಂತಯತ್ ಕೃಷ್ಣಃ ಸಂಕರ್ಷಣಸಹಾಯವಾನ್ ।
ಅಹೋ ಯದೂನಾಂ ವೃಜಿನಂ ಪ್ರಾಪ್ತಂ ಹ್ಯುಭಯತೋ ಮಹತ್ ॥

ಕಣ್ಣುಗಳಿಂದ ಶ್ರೀಕೃಷ್ಣನನ್ನು ನೋಡುತ್ತ ಹೂವು ಮೊಸರು ಅಕ್ಷತೆ ಅಂಕುರಗಳಿಂದ ನಿವಾಳಿಸಿದರು (೪೦). ರಣಭೂಮಿಯಲ್ಲಿ ದೊರಕಿದ ಲೆಕ್ಕವಿಲ್ಲದಷ್ಟು ವೀರಾಭರಣಗಳನ್ನು ತಂದು ಅವೆಲ್ಲವನ್ನೂ ಸ್ವಾಮಿಯು ಯದುರಾಜನಾದ ಉಗ್ರಸೇನನಿಗೆ ಒಪ್ಪಿಸಿದನು. ಈ ಪರಿಸ್ಥಿತಿಯಾದರೂ ಮಗಧರಾಜನು ಅಕ್ಷೌಹಿಣೀ ಬಲಸಹಿತನಾಗಿ ಮತ್ತೆ ಮತ್ತೆ ಬಂದು, ಶ್ರೀಕೃಷ್ಣಪಾಲಿತರಾದ ಯಾದವರೊಡನೆ ಹದಿನೇಳು ಬಾರಿ ಹೋರಾಡಿದನು ! (೪೧-೪೨). ಯಾದವರು ಶ್ರೀಕೃಷ್ಣನ ತೇಜೋಬಲದಿಂದ ಜರಾಸಂಧನ ಸಮಸ್ತಬಲವನ್ನೂ ನಾಶಗೊಳಿಸುತ್ತಿದ್ದರು. ಸೇನೆಗಳು ನಾಶವಾಗಲಾಗಿ ಮಗಧರಾಜನು ವೈರಿಗಳಿಂದ ಬಿಡುಗಡೆ ಹೊಂದಿ ಮತ್ತೆ ಹಿಂದಿರುಗುತ್ತಿದ್ದನು (೪೩). ಹೀಗೆ ಹದಿನೆಂಟನೆಯ ಸಂಗ್ರಾಮವು ಒದಗಿ ಬರಲಿರುವಾಗ, ನಡುವೆ ನಾರದಮುನಿಗಳು ವೀರನಾದ ಕಾಲಯವನನ್ನು ಯುದ್ಧಕ್ಕೆ ಹುರಿದುಂಬಿಸಿ ಕಳಿಸಿದರು! ಅವನು ಬಂದು ಕಾಣಿಸಿಕೊಂಡನು! (೪೪). ಕಾಲಯವನನು ಭೂಲೋಕದಲ್ಲಿ ಅಪ್ರತಿಮವೀರನೆಂದು ವಿಖ್ಯಾತನಾಗಿದ್ದನು. ಯಾದವರು ತನಗೆ ಸಮಾನಪರಾಕ್ರಮಿಗಳೆಂದು ಕೇಳಿದ ಆತನು ಮೂರು ಕೋಟಿ ಮ್ಲೇಚ್ಛ ಸೈನಿಕರೊಡನೆ ಬಂದು ಮಥುರೆಯನ್ನು ಮುತ್ತಿದನು (೪೫).

ಯವನೋಽಯಂ ನಿರುಂಧೇಽಸ್ಮಾನದ್ಯ ತಾವನ್ಮಹಾಬಲಃ ।
ಮಾಗಧೋಽಪ್ಯದ್ಯ ವಾ ಶ್ವೋ ವಾ ಪರಶ್ವೋ ವಾಽಽಗಮಿಷ್ಯತಿ ॥

ಆವಯೋರ್ಯುಧ್ಯತೋರಸ್ಯ ಯದ್ಯಾಗಂತಾ ಜರಾಸುತಃ ।
ಬಂಧೂನ್ ವಧಿಷ್ಯತ್ಯಥವಾ ನೇಷ್ಯತೇ ಸ್ವಪುರಂ ಬಲೀ ॥ ೪೮

ತಸ್ಮಾದದ್ಯ ವಿಧಾಸ್ಯಾಮೋ ದುರ್ಗಂ ದ್ವಿಪದದುರ್ಗಮಮ್ ।
ತತ್ರ ಜ್ಞಾತೀನ್ ಸಮಾಧಾಯ ಯವನಂ ಘಾತಯಾಮಹೇ ॥ ೪೯

ಇತಿ ಸಂಮಂತ್ರ್ಯ ಭಗವಾನ್ ದುರ್ಗಂ ದ್ವಾದಶಯೋಜನಮ್ ।
ಅಂತಃಸಮುದ್ರೇ ನಗರಂ ಕೃತ್ಸ್ನಾದ್ಭುತಮಚೀಕರತ್ ॥ ೫೦

ದೃಶ್ಯತೇ ಯತ್ರ ಹಿ ತ್ವಾಷ್ಟ್ರಂ ವಿಜ್ಞಾನಂ ಶಿಲ್ಪನೈಪುಣಮ್ ।
ರಥ್ಯಾಚತ್ವರವೀಥೀಭಿರ್ಯಥಾವಾಸ್ತು ವಿನಿರ್ಮಿತಮ್ ॥ ೫೧

ಸುರದ್ರುಮಲತೋದ್ಯಾನವಿಚಿತ್ರೋಪವನಾನ್ವಿತಮ್ ।
ಹೇಮಶೃಂಗೈರ್ದಿವಿಸ್ಪೃಗ್ಭಿಃ ಸ್ಫಾಟಿಕಾಟ್ಟಾಲಗೋಪುರೈಃ ॥ ೫೨

ಅವನನ್ನು ಕಂಡು ಶ್ರೀಕೃಷ್ಣನು ಬಲರಾಮನೊಡನೆ ಹೀಗೆ ಸಂಮಂತ್ರಿಸಿದನು, ''ಆಹಾ ! ಯಾದವರಿಗೆ ಎಂತಹ ಕಷ್ಟಬಂದಿತು ! ಎರಡು ಕಡೆಯಿಂದಲೂ ಮಹತ್ತರವಾದ ಬಿಕ್ಕಟ್ಟು ಒದಗಿತು. ಬಲಾಢ್ಯನಾದ ಯವನನು ಈಗ ನಮ್ಮನ್ನು ಆಕ್ರಮಿಸಿದ್ದಾನೆ. ಜರಾಸಂಧನೂ ಸಹ ಇಂದೋ ನಾಳೆಯೋ ನಾಡಿದ್ದೋ ಬರುವನು ! (೪೬-೪೭). ನಾವಿಬ್ಬರೂ ಈತನೊಡನೆ ಕಾದಾಡುತ್ತಿರುವಾಗ ಬಲಶಾಲಿಯಾದ ಜರಾಸಂಧನು ನಮ್ಮ ಬಂಧುಗಳನ್ನು ಸಂಹರಿಸುವನು. ಇಲ್ಲವೆ, ಸೆರೆಹಿಡಿದು ತನ್ನ ನಗರಕ್ಕೆ ಒಯ್ಯುವನು (೪೮). ಆದ್ದರಿಂದ ಈಗ ಮನುಷ್ಯ ಮಾತ್ರರಿಗೆ ದುರ್ಗಮವಾದ ಒಂದು ದುರ್ಗವನ್ನು ನಿರ್ಮಿಸೋಣ. ಅಲ್ಲಿ ನಮ್ಮ ಬಂಧುಗಳನ್ನು ಕ್ಷೇಮವಾಗಿ ಇರಿಸಿ ಯವನನನ್ನು ಹನನಮಾಡೋಣ'' (೪೯). ಹೀಗೆ ಸಂಮಂತ್ರಿಸಿ ಭಗವಂತನು ಸಮುದ್ರದ ನಡುವೆ ಹನ್ನೆರಡು ಯೋಜನ ವಿಸ್ತಾರವಾಗಿ ಸರ್ವಾಶ್ಚರ್ಯಮಯವಾದ (ದ್ವಾರಕಾ) ನಗರವನ್ನು ನಿರ್ಮಾಣ ಮಾಡಿಸಿದನು. ಅದರಲ್ಲಿ ವಿಶ್ವಕರ್ಮನ ಶಿಲ್ಪ ವಿಜ್ಞಾನವೂ ಕಲಾಕೌಶಲವೂ ಪ್ರಕಟವಾಗಿತ್ತು. ವಾಸ್ತು ಶಾಸ್ತ್ರಾನುಸಾರವಾಗಿ ರಾಜಮಾರ್ಗಗಳೂ ಚೌಕಗಳೂ ಉಪಮಾರ್ಗಗಳೂ ನಿರ್ಮಿತವಾಗಿದ್ದವು (೫೦-೫೧). ದೇವಲೋಕದ

ರಾಜತಾರಕುಟೈಃ ಕೋಷ್ಠೈರ್ಹೇಮಕುಂಭೈರಲಂಕೃತೈಃ ।
ರತ್ನಕೂಟೈರ್ಗೃಹೈರ್ಹೈಮೈರ್ಮಹಾಮರಕತಸ್ಥಲೈಃ ॥ ೫೩

ವಾಸ್ತೋಷ್ಪತೀನಾಂ ಚ ಗೃಹೈರ್ವಲಭೀಭಿಶ್ಚ ನಿರ್ಮಿತಮ್ ।
ಚಾತುರ್ವರ್ಣ್ಯಜನಾಕೀರ್ಣಂ ಯದುದೇವಗೃಹೋಲ್ಲಸತ್ ॥ ೫೪

ಸುಧರ್ಮಾಂ ಪಾರಿಜಾತಂ ಚ ಮಹೇಂದ್ರಃ ಪ್ರಾಹಿಣೋದ್ಧರೇಃ ।
ಯತ್ರ ಚಾವಸ್ಥಿತೋ ಮರ್ತ್ಯೋ ಮರ್ತ್ಯಧರ್ಮೈರ್ನ ಯುಜ್ಯತೇ ॥

ಶ್ಯಾಮೈಕಕರ್ಣಾನ್ ವರುಣೋ ಹಯಾನ್ ಶುಕ್ಲಾನ್ ಮನೋಜವಾನ್ ।
ಅಷ್ಟೌ ನಿಧಿಪತಿಃ ಕೋಶಾನ್ ಲೋಕಪಾಲೋ ನಿಜೋದಯಾನ್ ॥

ವೃಕ್ಷಲತೆಗಳು ತುಂಬಿದ ವಿಚಿತ್ರವಾದ ಕ್ರೀಡಾವನಗಳಿಂದಲೂ ಕೈದೋಟಗಳಿಂದಲೂ ಆ ಪಟ್ಟಣವು ಯುಕ್ತವಾಗಿತ್ತು. ಚಿನ್ನದ ಶಿಖರಗಳಿಂದ ಸ್ವರ್ಗವನ್ನು ತಾಗುತ್ತಿರುವ ಸ್ಫಟಿಕಮಯವಾದ ಮಹಡಿಗಳಿಂದಲೂ ಗೋಪುರಗಳಿಂದಲೂ ಕೂಡಿತ್ತು (೫೨). ಬೆಳ್ಳಿ ಮತ್ತು ಹಿತ್ತಾಳೆಗಳಿಂದ ನಿರ್ಮಿತವಾಗಿ ಬಂಗಾರದ ಕಲಶಗಳಿಂದ ಅಲಂಕೃತವಾದ ಅಶ್ವಶಾಲೆ ಮೊದಲಾದವುಗಳಿಂದಲೂ ಪದ್ಮರಾಗಾದಿ ರತ್ನಖಚಿತ ಶಿಕರಗಳುಳ್ಳ ಸುವರ್ಣಗೃಹಗಳಿಂದಲೂ ಮಹಾಮರಕತದ ನೆಲೆಗಟ್ಟುಗಳುಳ್ಳ ಗೃಹಗಳಿಂದಲೂ ದ್ವಾರಕೆಯು ವಿರಾಜಿತವಾಗಿತ್ತು (೫೩). ಅಲ್ಲಲ್ಲಿ ದೇವಾಲಯಗಳಿಂದಲೂ ಚಂದ್ರಶಾಲೆಗಳಿಂದಲೂ ಕೂಡಿತ್ತು. ಚಾತುರ್ವರ್ಣ್ಯದ ಜನರಿಂದ ನಿಬಿಡವಾಗಿ ಯದುರಾಜನ ಅರಮನೆಯಿಂದ ವಿಭೂಷಿತವಾಗಿತ್ತು. ಸುಧರ್ಮವೆಂಬ ದೇವಸಭಾಮಂಟಪವನ್ನೂ ಪಾರಿಜಾತವೃಕ್ಷವನ್ನೂ೧ ಶ್ರೀಕೃಷ್ಣನಿಗಾಗಿ ದೇವೇಂದ್ರನು ಕಳಿಸಿಕೊಟ್ಟನು. ಸುಧರ್ಮದಲ್ಲಿ ಕುಳಿತ ಮನುಷ್ಯನಿಗೆ ಹಸಿವು ಬಾಯಾರಿಕೆ ಮೊದಲಾದ ಮನುಷ್ಯ ಧರ್ಮವು ಸೋಂಕುವುದಿಲ್ಲ (೫೪-೫೫). ವರುಣನು ಮನೋವೇಗದಲ್ಲಿ ಓಡಬಲ್ಲ, ಒಂದು ಕಿವಿ ಕಪ್ಪಾಗಿರುವ ಬಿಳಿಯ ಕುದುರೆಗಳನ್ನೂ

---

೧ ಪಾರಿಜಾತಹರಣವು ಮುಂದೆ ೫೯ನೆಯ ಅಧ್ಯಾಯದಲ್ಲಿ ಬರುತ್ತದೆ. ಆದರೂ ಪರೀಕ್ಷಿತನಿಗೆ ಶುಕರು ಕಥೆಯನ್ನು ಹೇಳುವಾಗ ಪಾರಿಜಾತವು ಬಂದುಬಿಟ್ಟಿದ್ದರಿಂದ ಇಲ್ಲಿ ಭೂತಕಾಲದ ನಿರ್ದೇಶವಿದೆ.

ಯದ್‌ಯದ್ ಭಗವತಾ ದತ್ತಮಾಧಿಪತ್ಯಂ ಸ್ವಸಿದ್ಧಯೇ ।
ಸರ್ವಂ ಪ್ರತ್ಯರ್ಪಯಾಮಾಸುರ್ಹರೌ ಭೂಮಿಗತೇ ನೃಪ ॥ ೫೭

ತತ್ರ ಯೋಗಪ್ರಭಾವೇಣ ನೀತ್ವಾ ಸರ್ವಜನಂ ಹರಿಃ ।
ಪ್ರಜಾಪಾಲೇನ ರಾಮೇಣ ಕೃಷ್ಣಃ ಸಮನುಮಂತ್ರಿತಃ ।
ನಿರ್ಜಗಾಮ ಪುರದ್ವಾರಾತ್ ಪದ್ಮಮಾಲೀ ನಿರಾಯುಧಃ ॥ ೫೮

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಪಂಚಾಶತ್ತಮಾಧ್ಯಾಯಃ

ಕುಬೇರನು ತನ್ನ ವಿಭೂತಿಗಳೆನಿಸಿದ ಎಂಟು[೧] ನಿಧಿಗಳನ್ನೂ ಕಳಿಸಿದರು. ಪರೀಕ್ಷಿತರಾಜ, ಹೀಗೆಯೇ ಇತರ ಸಿದ್ಧಪುರುಷರಿಗೆ ತಮ್ಮ ತಮ್ಮ ಅಧಿಕಾರಪಾಲನೆ ಮಾಡಲೆಂದು ಭಗವಂತನು ಯಾವುಯಾವುದರ ಒಡೆತನವನ್ನು ಕರುಣಿಸಿದ್ದನೋ ಅವೆಲ್ಲವನ್ನೂ ಅವರು ಭೂಮಿಯಲ್ಲವತರಿಸಿದ ಶ್ರೀಹರಿಗೆ ಒಪ್ಪಿಸಿದರು (೫೬-೫೭). ಶ್ರೀಕೃಷ್ಣನು ತನ್ನ ಯೋಗ ಮಹಿಮೆಯಿಂದ ಮಧುರೆಯ ಸಕಲ ಜನರನ್ನೂ ಆ ದ್ವಾರಕಾನಗರಕ್ಕೆ ಸೇರಿಸಿ, ಅವರನ್ನು ರಕ್ಷಿಸುವಂತೆ ನಿಯುಕ್ತನಾದ ಬಲರಾಮನಿಂದ ಅನುಮತಿಯನ್ನು ಪಡೆದು, ತಾನು ಪದ್ಮಮಾಲೆಯನ್ನು ಧರಿಸಿ ನಿರಾಯುಧನಾಗಿ ಮಧುರಾನಗರ ದ್ವಾರದಿಂದ ಹೊರಗೆ ಬಂದನು (೫೮).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಐವತ್ತನೆಯ ಅಧ್ಯಾಯ

---

೧ ಪದ್ಮಶ್ಚೈವ ಮಹಾಪದ್ಮೋ ಮತ್ಸ್ಯಕೂರ್ಮೌ ತಥೌದಕಃ ।
ನೀಲೋ ಮುಕುಂದಃ ಶಂಖಶ್ಚ ನಿಧಯೋಽಷ್ಟೌ ಪ್ರಕೀರ್ತಿತಾಃ ॥
ಎಂದು ಅಷ್ಟನಿಧಿಗಳನ್ನು ಹೇಳಲಾಗಿದೆ. ನವನಿಧಿಗಳೆಂದೂ ಪ್ರಸಿದ್ಧಿಯುಂಟುಃ
ಮಹಾಪದ್ಮಶ್ಚ ಪದ್ಮಶ್ಚ ಶಂಖೋ ಮಕರಕಚ್ಛಪೌ ।
ಮುಕುಂದಕುಂದನೀಲಾಶ್ಚ ಖರ್ವಶ್ಚ ನಿಧಯೋ ನವ ॥

ಏಕಪಂಚಾಶತ್ತಮೋಧ್ಯಾಯಃ

ಶ್ರೀಶುಕ ಉವಾಚ-

ತಂ ವಿಲೋಕ್ಯ ವಿನಿಷ್ಕ್ರಾಂತಮುಜ್ಜಿಹಾನಮಿವೋಡುಪಮ್ ।
ದರ್ಶನೀಯತಮಂ ಶ್ಯಾಮಂ ಪೀತಕೌಶೇಯವಾಸಸಮ್ ॥ ೧

ಶ್ರೀವತ್ಸ ವಕ್ಷಸಂ ಭ್ರಾಜತ್ಕೌಸ್ತುಭಾಮುಕ್ತಕಂಧರಮ್ ।
ಪೃಥುದೀರ್ಘಚತುರ್ಬಾಹುಂ ನವಕಂಜಾರುಣೇಕ್ಷಣಮ್ ॥ ೨

ನಿತ್ಯಪ್ರಮುದಿತಂ ಶ್ರೀಮತ್ಸುಕಪೋಲಂ ಶುಚಿಸ್ಮಿತಮ್ ।
ಮುಖಾರವಿಂದಂ ಬಿಭ್ರಾಣಂ ಸ್ಫುರನ್ಮಕರಕುಂಡಲಮ್ ॥ ೩

ವಾಸುದೇವೋ ಹ್ಯಯಮಿತಿ ಪುಮಾನ್ ಶ್ರೀವತ್ಸಲಾಂಛನಃ ।
ಚತುರ್ಭುಜೋಽರವಿಂದಾಕ್ಷೋ ವನಮಾಲ್ಯತಿಸುಂದರಃ ॥ ೪

ಅಧ್ಯಾಯ ೫೧

ಕಾಲಯವನನಿಂದ ಮಧುರೆಯ ಆಕ್ರಮಣ. ದ್ವಾರಕಾನಿರ್ಮಾಣ. ಮುಚುಕುಂದನಿಂದ ಯವನನು ಭಸ್ಮವಾಗುವುದು; ಮುಚುಕುಂದನ ಸ್ತುತಿ. ಶ್ರೀಕೃಷ್ಣನಿಂದ ಅನುಗ್ರಹ.

ಅತ್ಯಂತಸುಂದರನಾದ ಶ್ರೀಕೃಷ್ಣನು ಉದಯಿಸುವ ಪೂರ್ಣಚಂದ್ರನಂತೆ ನಗರದಿಂದ ಹೊರಗೆ ಬಂದನು. ಆತನು ಶ್ಯಾಮಲಾಂಗನಾಗಿ ಪೀತಾಂಬರವನ್ನು ಧರಿಸಿದ್ದನು. ವಕ್ಷಸ್ಥಳದಲ್ಲಿ ಶ್ರೀವತ್ಸಲಾಂಛನವಿದ್ದಿತು. ತೊಳತೊಳಗುವ ಕೌಸ್ತುಭ ಮಣಿಯು ಕೊರಳಿನ ಸರದಲ್ಲಿ ಬೆಳಗುತ್ತಿತ್ತು. ತೋರವಾದ ನಾಲ್ಕು ನೀಳ ತೋಳುಗಳಿಂದ ಯುಕ್ತನಾದ ಶ್ರೀಕೃಷ್ಣನು ಹೊಸತಾವರೆಯಂತಹ ಅರುಣನೇತ್ರ ಗಳಿಂದ ಶೋಭಿಸುತ್ತಿದ್ದನು (೧-೨). ಸದಾ ಹರ್ಷೋಲ್ಲಸಿತವಾದ ಅವನ ಮುಖಾರವಿಂದವು ಸುಂದರಕಪೋಲಗಳಿಂದ ರಂಜಿತವಾಗಿ ಶುಭ್ರವಾದ ಮುಗುಳ್ನಗೆಯನ್ನು ಹೊರಸೂಸುತ್ತ ಮಕರಕುಂಡಲಗಳಿಂದ ವಿರಾಜಿಸುತ್ತಿತ್ತು(೩). ಅವನನ್ನು ನೋಡಿ ಕಾಲಯವನನು ಈ ಮನುಷ್ಯನೇ ವಸುದೇವನ ಮಗನಾದ ಕೃಷ್ಣನಾಗಿರಬೇಕು! ಇವನಿಗೆ ಶ್ರೀವತ್ಸದ ಚಿಹ್ನೆಯುಂಟು. ನಾಲ್ಕು ತೋಳುಗಳಿವೆ. ಕಣ್ಣುಗಳು ಕಮಲದಂತಿವೆ. ವನಮಾಲೆಯನ್ನು ಧರಿಸಿದ ಈತನು ಅತ್ಯಂತ

ಲಕ್ಷಣೈರ್ನಾರದಪ್ರೋಕ್ತೈರ್ನಾನ್ಯೋ ಭವಿತುಮರ್ಹತಿ ।
ನಿರಾಯುಧಶ್ಚಲನ್ ಪದ್ಭ್ಯಾಂ ಯೋತ್ಸ್ಯೇಽನೇನ ನಿರಾಯುಧಃ ॥ ೫

ಇತಿ ನಿಶ್ಚಿತ್ಯ ಯವನಃ ಪ್ರಾದ್ರವಂತಂ ಪರಾಙ್ಮುಖಮ್ ।
ಅನ್ವಧಾವಜ್ಜಿಘೃಕ್ಷುಸ್ತಂ ದುರಾಪಮಪಿ ಯೋಗಿನಾಮ್ ॥ ೬

ಹಸ್ತಪ್ರಾಪ್ತಮಿವಾತ್ಮಾನಂ ಹರಿಣಾ ಸ ಪದೇ ಪದೇ ।
ನೀತೋ ದರ್ಶಯತಾ ದೂರಂ ಯವನೇಶೋಽದ್ರಿಕಂದರಮ್ ॥ ೭

ಪಲಾಯನಂ ಯದುಕುಲೇ ಜಾತಸ್ಯ ತವ ನೋಚಿತಮ್ ।
ಇತಿ ಕ್ಷಿಪನ್ನನುಗತೋ ನೈನಂ ಪ್ರಾಪಾಹತಾಶುಭಃ ॥ ೮

ಏವಂ ಕ್ಷಿಪ್ತೋಽಪಿ ಭಗವಾನ್ ಪ್ರಾವಿಶದ್ ಗಿರಿಕಂದರಮ್ ।
ಸೋಽಪಿ ಪ್ರವಿಷ್ಟಸ್ತತ್ರಾನ್ಯಂ ಶಯಾನಂ ದದೃಶೇ ನರಮ್ ॥ ೯

ನನ್ವಸೌ ದೂರಮಾನೀಯ ಶೇತೇ ಮಾಮಿಹ ಸಾಧುವತ್ ।
ಇತಿ ಮತ್ವಾಚ್ಯುತಂ ಮೂಢಸ್ತಂ ಪದಾ ಸಮತಾಡಯತ್ ॥ ೧೦

ಸುಂದರನಾಗಿದ್ದಾನೆ (೪). ನಾರದನು ಹೇಳಿದ ಲಕ್ಷಣಗಳನ್ನು ಗಮನಿಸಿದರೆ ಇವನು ಕೃಷ್ಣನಲ್ಲದೆ ಬೇರೊಬ್ಬನಲ್ಲ! ನಿರಾಯುಧನಾಗಿ ಕಾಲ್ನಡಗೆಯಲ್ಲಿ ಹೋಗುತ್ತಿದ್ದಾನೆ. ನಾನೂ ನಿರಾಯುಧನಾಗಿ ಇವನೊಡನೆ ಯುದ್ಧ ಮಾಡುವೆನು'' ಎಂದು ನಿಶ್ಚಯಿಸಿದನು (೫). ಅಷ್ಟರಲ್ಲಿ ಶ್ರೀಕೃಷ್ಣನು ಪರಾಙ್ಮುಖನಾಗಿ ಓಡಲಾರಂಭಿಸಿದನು ! ಯೋಗಿಗಳಿಗೂ ದುರಾಪನಾದ ಆತನನ್ನು ಹಿಡಿಯಬೇಕೆಂದು ಯವನನು ಬೆನ್ನಟ್ಟಿದನು. ಇನ್ನೇನು ಕೈಗೆ ಸಿಕ್ಕಿದನೋ ಎಂಬಂತೆ ಮತ್ತೆ ಮತ್ತೆ ನಟಿಸುತ್ತ ಶ್ರೀಹರಿಯು ಆ ಯವನೇಶ್ವರನನ್ನು ಬಹು ದೂರ ಓಡಿಸಿ ಒಂದು ಬೆಟ್ಟದ ಗುಹೆಯ ಬಳಿಗೆ ಒಯ್ದನು (೬-೭). ''ಎಲೈ, ಯದುಕುಲದಲ್ಲಿ ಜನಿಸಿದ ನಿನಗೆ ಪಲಾಯನವು ಯೋಗ್ಯವಲ್ಲ'' ಎಂದು ನಿಂದಿಸುತ್ತಲೇ ಯವನನು ಬೆನ್ನಟ್ಟಿ ಓಡುತ್ತಿದ್ದನು. ಆ ಯವನನ ದುಷ್ಕರ್ಮವು ಇನ್ನೂ ಉಳಿದಿದ್ದುದರಿಂದ ಅವನಿಗೆ ಶ್ರೀಕೃಷ್ಣನನ್ನು ಹಿಡಿಯಲಾಗಲಿಲ್ಲ (೮). ಹೀಗೆ ಹೀಯಾಳಿಸಲ್ಪಡುತ್ತಿದ್ದರೂ ಭಗವಂತನು ಓಡುತ್ತ ಹೋಗಿ ಆ ಬೆಟ್ಟದ ಗುಹೆಯಲ್ಲಿ ಹೊಕ್ಕನು. ಯವನನೂ ಒಳಗೆ ಹೋಗಿ, ಅಲ್ಲಿ ಮಲಗಿದ್ದ ಬೇರೊಬ್ಬ ಮಾನವನನ್ನು ನೋಡಿದನು (೯).

ಸ ಉತ್ಥಾಯ ಚಿರಂ ಸುಪ್ತಃ ಶನೈರುನ್ಮೀಲ್ಯ ಲೋಚನೇ ।
ದಿಶೋ ವಿಲೋಕಯನ್ ಪಾರ್ಶ್ವೇ ತಮದ್ರಾಕ್ಷೀದವಸ್ಥಿತಮ್ ॥ ೧೧

ಸ ತಾವತ್ತಸ್ಯ ರುಷ್ಟಸ್ಯ ದೃಷ್ಟಿಪಾತೇನ ಭಾರತ ।
ದೇಹಜೇನಾಗ್ನಿನಾ ದಗ್ಧೋ ಭಸ್ಮಸಾದಭವತ್ ಕ್ಷಣಾತ್ ॥ ೧೨

ರಾಜೋವಾಚ

ಕೋ ನಾಮ ಸ ಪುಮಾನ್ ಬ್ರಹ್ಮನ್ ಕಸ್ಯ ಕಿಂವೀರ್ಯ ಏವ ಚ ।
ಕಸ್ಮಾದ್ ಗುಹಾಂ ಗತಃ ಶಿಶ್ಯೇ ಕಿಂತೇಜೋ ಯವನಾರ್ದನಃ ॥ ೧೩

ಶ್ರೀಶುಕ ಉವಾಚ

ಸ ಇಕ್ಷ್ವಾಕುಕುಲೇ ಜಾತೋ ಮಾಂಧಾತೃತನಯೋ ಮಹಾನ್ ।
ಮುಚುಕುಂದ ಇತಿ ಖ್ಯಾತೋ ಬ್ರಹ್ಮಣ್ಯಃ ಸತ್ಯಸಂಗರಃ ॥ ೧೪

ಸ ಯಾಚಿತಃ ಸುರಗಣೈರಿಂದ್ರಾದ್ಯೈರಾತ್ಮರಕ್ಷಣೇ ।
ಅಸುರೇಭ್ಯಃ ಪರಿತ್ರಸ್ತೈಸ್ತದ್ರಕ್ಷಾಂ ಸೋಽಕರೋಚ್ಚಿರಮ್ ॥ ೧೫

''ಓಹೋ ! ಈತನು ನನ್ನನ್ನು ದೂರ ಕರೆತಂದು ಇಲ್ಲಿ ಏನೂ ಅರಿಯದ ಸಾಧುಪುರುಷನಂತೆ ಮಲಗಿದ್ದಾನೆ ! '' ಎಂದು ಅಲ್ಲಿ ಮಲಗಿದ್ದ ಪುರುಷನನ್ನು ಕೃಷ್ಣನಂದೇ ತಿಳಿದು ಆ ಮೂಢನು ಅವನನ್ನು ಕಾಲಿಂದ ಒದ್ದನು (೧೦). ಬಹಳ ಕಾಲದಿಂದ ಮಲಗಿದ್ದ ಆ ಪುರುಷನು ಎದ್ದು ಮೆಲ್ಲನೆ ಕಣ್ಣುಗಳನ್ನು ಉಜ್ಜಿ ಎಲ್ಲ ದಿಕ್ಕಿಗೂ ದೃಷ್ಟಿಯನ್ನು ಹೊರಳಿಸಿ ಬಳಿಯಲ್ಲಿದ್ದ ಕಾಲಯವನನ್ನು ಕಂಡನು (೧೧). ಪರೀಕ್ಷಿತರಾಜ, ಕ್ರುದ್ಧನಾದ ಆ ಪುರುಷನ ದೃಷ್ಟಿಪಾತದಿಂದ ಭುಗಿಲೆಂದ ದೇಹಜನ್ಯ ಅಗ್ನಿಯು ಆ ಯವನೇಶ್ವರನನ್ನು ಒಂದು ಕ್ಷಣದಲ್ಲಿ ಸುಟ್ಟು ಬೂದಿಮಾಡಿತು! (೧೨). ಆಗ ಪರೀಕ್ಷಿತರಾಜನು ಹೇಳಿದನು. ''ಹೇ ಬ್ರಹ್ಮರ್ಷಿಗಳೆ ಯವನನನ್ನು ನಾಶಗೊಳಿಸಿದ ಆ ಪುರುಷನು ಯಾರು ? ಯಾರ ವಂಶದವನು ? ಯಾರ ಮಗ ? ಗುಹೆಗೆ ಹೋಗಿ ಆತನು ಮಲಗಿದ್ದೇಕೆ ? ಆತನ ತೇಜಸ್ಸು ಎಂತಹುದು?'' (೧೩). ಶುಕಮುನಿಗಳು ಹೇಳಿದರು. ಅವನು ಇಕ್ಷ್ವಾಕುವಂಶದಲ್ಲಿ ಜನಿಸಿದ ಒಬ್ಬ ಮಹಾಪುರುಷ, ಮಾಂಧಾತೃವಿನ ಮಗ, ಮುಚುಕುಂದನೆಂದು ವಿಖ್ಯಾತನಾದ ಒಬ್ಬ ಬ್ರಹ್ಮನಿಷ್ಠ, ಸತ್ಯಪ್ರತಿಜ್ಞೆಯುಳ್ಳವನು (೧೪). ಅಸುರರಿಗೆ ಹೆದರಿದ ಇಂದ್ರಾದಿ ದೇವತೆಗಳು ತಮ್ಮನ್ನು ಕಾಪಾಡಬೇಕೆಂದು ಆತನನ್ನು ಬೇಡಿ

ಲಬ್ಧ್ವಾ ಗುಹಂ ತೇ ಸ್ವಃಪಾಲಂ ಮುಚುಕುಂದಮಥಾಬ್ರುವನ್ ।
ರಾಜನ್ ವಿರಮತಾಂ ಕೃಚ್ಛ್ರಾದ್ ಭವಾನ್ ನಃ ಪರಿಪಾಲನಾತ್ ॥ ೧೬

ನರಲೋಕೇ ಪರಿತ್ಯಜ್ಯ ರಾಜ್ಯಂ ನಿಹತಕಂಟಕಮ್ ।
ಅಸ್ಮಾನ್ ಪಾಲಯತೋ ವೀರ ಕಾಮಾಸ್ತೇ ಸರ್ವ ಉಜ್ಝಿತಾಃ ॥ ೧೭

ಸುತಾ ಮಹಿಷ್ಯೋ ಭವತೋ ಜ್ಞಾತಯೋಽಮಾತ್ಯಮಂತ್ರಿಣಃ ।
ಪ್ರಜಾಶ್ಚ ತುಲ್ಯಕಾಲೀಯಾ ನಾಧುನಾ ಸಂತಿ ಕಾಲಿತಾಃ ॥ ೧೮

ಕಾಲೋ ಬಲೀಯಾನ್ ಬಲಿನಾಂ ಭಗವಾನೀಶ್ವರೋಽವ್ಯಯಃ ।
ಪ್ರಜಾಃ ಕಾಲಯತೇ ಕ್ರೀಡನ್ ಪಶುಪಾಲೋ ಯಥಾ ಪಶೂನ್ ॥ ೧೯

ವರಂ ವೃಣೀಷ್ವ ಭದ್ರಂ ತೇ ಋತೇ ಕೈವಲ್ಯಮದ್ಯ ನಃ ।
ಏಕ ಏವೇಶ್ವರಸ್ತಸ್ಯ ಭಗವಾನ್ ವಿಷ್ಣುರವ್ಯಯಃ ॥ ೨೦

ಕೊಂಡರು. ಮುಚುಕುಂದನು ಬಹಳ ಕಾಲದವರೆಗೆ ದೇವತೆಗಳನ್ನು ರಕ್ಷಿಸಿದನು (೧೫). ಆಮೇಲೆ ದೇವತೆಗಳಿಗೆ ಕುಮಾರಸ್ವಾಮಿಯು ಸ್ವರ್ಗಸಂರಕಕ್ಷಕನಾದ ಸೇನಾನಿಯಾಗಿ ದೊರೆತನು. ಆಗ ದೇವತೆಗಳು ಮುಚುಕುಂದನನ್ನು ಕುರಿತು ಹೀಗೆಂದರು : ''ಮಹಾರಾಜ, ನಮ್ಮನ್ನು ಪಾಲಿಸುವ ಕಷ್ಟದಿಂದ ನೀನೀಗ ವಿಶ್ರಾಂತಿಯನ್ನು ತೆಗೆದುಕೊ (೧೬). ನರಲೋಕದಲ್ಲಿರುವ ನಿನ್ನ ರಾಜ್ಯವನ್ನು ತ್ಯಜಿಸಿ ಬಂದು ಶತ್ರುಗಳನ್ನು ಸಂಹರಿಸಿ ನಮ್ಮನ್ನು ರಕ್ಷಿಸುತ್ತಾ ಇದ್ದೀಯೇ. ಎಲೈ ವೀರನೆ, (ನಮಗಾಗಿ) ನಿನ್ನ ಎಲ್ಲ ಇಷ್ಟ ಭೋಗಗಳನ್ನು ತ್ಯಜಸಿಬಿಟ್ಟಿರುವೆ (೧೭). ನಿನ್ನ ಜೊತೆಗಿದ್ದ ನಿನ್ನ ಮಕ್ಕಳು, ಮಡದಿಯರು, ಬಂಧುಗಳು, ಅಮಾತ್ಯ ಮಂತ್ರಿಗಳು, ಪ್ರಜೆಗಳು-ಎಲ್ಲರೂ ಈಗ ಇಲ್ಲ! ಕಾಲವಶರಾಗಿಹೋಗಿದ್ದಾರೆ ! ಕಾಲವೆಂಬುದು ಬಲಿಷ್ಠರಲ್ಲಿ ಬಲೀಯ. ಅದು ಶಾಶ್ವತವಾದ ಭಗವಾನ್ ಈಶ್ವರ, ದನಕಾಯುವವನು ದನಗಳನ್ನು ಹೇಗೋ ಹಾಗೆ ಕಾಲವು ಕ್ರೀಡಿಸುತ್ತಾ ಸಕಲ ಪ್ರಜೆಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತದೆ (೧೮-೧೯). ನಿನಗೆ ಶುಭವಾಗಲಿ! ಮುಕ್ತಿಯೊಂದನ್ನು ಬಿಟ್ಟು ನಮ್ಮಿಂದ ಬೇಕಾದ ವರವನ್ನು ಕೇಳಿಕೋ. ಅವ್ಯಯನಾದ ಭಗವಾನ್ ವಿಷ್ಣು ಒಬ್ಬನೇ ಮುಕ್ತಿಯನ್ನು ಕರುಣಿಸಲು ಸಮರ್ಥ''

ಏವಮುಕ್ತಃ ಸ ವೈ ದೇವಾನಭಿವಂದ್ಯ ಮಹಾಯಶಾಃ ।
ನಿದ್ರಾಮೇವ ತದಾ ವವ್ರೇ ಸ ರಾಜಾ ಶ್ರಮಕರ್ಷಿತಃ ॥ ೨೧

ಯಃ ಕಶ್ಚಿನ್ಮಮ ನಿದ್ರಾಯಾಃ ಭಂಗಂ ಕುರ್ಯಾತ್ ಸುರೋತ್ತಮಾಃ ।
ಸ ಹಿ ಭಸ್ಮೀಭವೇದಾಶು ತಥೋಕ್ತಶ್ಚ ಸುರೈಸ್ತದಾ ।
ಅಶಯಿಷ್ಟ ಗುಹಾವಿಷ್ಟೋ ನಿದ್ರಯಾ ದೇವದತ್ತಯಾ ॥ ೨೨

ಯವನೇ ಭಸ್ಮಸಾನ್ನೀತೇ ಭಗವಾನ್ ಸಾತ್ವತರ್ಷಭಃ ।
ಆತ್ಮಾನಂ ದರ್ಶಯಾಮಾಸ ಮುಚುಕುಂದಾಯ ಧೀಮತೇ ॥ ೨೩

ತಮಾಲೋಕ್ಯ ಘನಶ್ಯಾಮಂ ಪೀತಕೌಶೇಯವಾಸಸಮ್ ।
ಶ್ರೀವತ್ಸವಕ್ಷಸಂ ಭ್ರಾಜತ್ಕೌಸ್ತುಭೇನ ವಿರಾಜಿತಮ್ ॥ ೨೪

ಚತುರ್ಭುಜಂ ರೋಚಮಾನಂ ವೈಜಯಂತ್ಯಾ ಚ ಮಾಲಯಾ ।
ಚಾರುಪ್ರಸನ್ನವದನಂ ಸ್ಫುರನ್ಮಕರಕುಂಡಲಮ್ ॥ ೨೫

ಪ್ರೇಕ್ಷಣೀಯಂ ನೃಲೋಕಸ್ಯ ಸಾನುರಾಗಸ್ಮಿತೇಕ್ಷಣಮ್ ।
ಅಪೀಚ್ಯವಯಸಂ ಮತ್ತಮೃಗೇಂದ್ರೋದಾರವಿಕ್ರಮಮ್ ॥ ೨೬

ಎಂದರು (೨೦). ದೇವತೆಗಳು ಹೀಗೆ ನುಡಿಯಲಾಗಿ ಕೀರ್ತಿಶಾಲಿಯಾದ ಮುಚುಕುಂದನು ಅವರಿಗೆ ವಂದಿಸಿ ನಿದ್ರೆಯೊಂದನ್ನೇ ವರವಾಗಿ ಬೇಡಿದನು. ಏಕೆಂದರೆ, ಆ ರಾಜನು ಕ್ಲಿಷ್ಟಕಾರ್ಯಗಳಿಂದ ಬಳಲಿಹೋಗಿದ್ದನು (೨೧). ''ಎಲೈ ದೇವೋತ್ತಮರೆ, ಯಾವನಾದರೂ ನನ್ನ ನಿದ್ರೆಗೆ ಭಂಗವನ್ನುಂಟು ಮಾಡಿದರೆ ಒಡನೆಯೇ ಅವನು ಸುಟ್ಟು ಬೂದಿಯಾಗಲಿ!'' ಎಂದು ಕೇಳಿದನು. ದೇವತೆಗಳು 'ತಥಾಸ್ತು' ಎಂದರು. ಅನಂತರ ಮುಚುಕುಂದನು ಆ ಗುಹೆಗೆ ಹೋಗಿ ದೇವದತ್ತವಾದ ನಿದ್ರೆಯನ್ನು ಪಡೆದು ಮಲಗಿದನು (೨೨). ಹೀಗೆ ಯವನನು ಭಸ್ಮವಾಗಲು, ಯದುಕುಲೋತ್ತಂಸನಾದ ಭಗವಂತನು ಪ್ರಾಜ್ಞನಾದ ಮುಚುಕುಂದನಿಗೆ ಕಾಣಿಸಿಕೊಂಡನು (೨೩). ಭಗವಂತನಾದರೋ ನೀಲಮೇಘ ಶ್ಯಾಮನಾಗಿ ಪಿತಾಂಬರವನ್ನುಟ್ಟಿದ್ದನು. ಶ್ರೀವತ್ಸಲಾಂಛನನಾಗಿ ಮಿರುಗುವ ಕೌಸ್ತುಭಮಣಿಯಿಂದ ವಿರಾಜಿತನಾಗಿದ್ದನು. ಚತುರ್ಭುಜನಾಗಿ ವೈಜಯಂತೀ ಮಾಲೆಯಿಂದ ಶೋಭಿಸುತ್ತಿದ್ದನು. ಮಧುರಪ್ರಸನ್ನವದನನಾಗಿ ಮಕರಕುಂಡಲ ಗಳಿಂದ ಕಂಗೊಳಿಸುತ್ತಿದ್ದನು (೨೪-೨೫). ಮಾನವಲೋಕಕ್ಕೆ ದರ್ಶನೀಯನೂ

ಪರ್ಯಪೃಚ್ಛನ್ಮಹಾಬುದ್ಧಿಸ್ತೇಜಸಾ ತಸ್ಯ ಧರ್ಷಿತಃ ।
ಶಂಕಿತಃ ಶನಕೈ ರಾಜಾ ದುರ್ಧರ್ಷಮಿವ ತೇಜಸಾ ॥ ೨೭

ಮುಚುಕುಂದ ಉವಾಚ-

ಕೋ ಭವಾನಿಹ ಸಂಪ್ರಾಪ್ತೋ ವಿಪಿನೇ ಗಿರಿಗಹ್ವರೇ ।
ಪದ್ಭ್ಯಾಂ ಪದ್ಮಪಲಾಶಾಭ್ಯಾಂ ವಿಚರಸ್ಯುರುಕಂಟಕೇ ॥ ೨೮

ಕಿಂಸ್ವಿತ್ತೇಜಸ್ವಿನಾಂ ತೇಜೋ ಭಗವಾನ್ ವಾ ವಿಭಾವಸುಃ ।
ಸೂರ್ಯಃ ಸೋಮೋ ಮಹೇಂದ್ರೋ ವಾ
ಲೋಕಪಾಲೋಽಪರೋಽಪಿ ವಾ ॥ ೨೯

ಮನ್ಯೇ ತ್ವಾಂ ದೇವದೇವಾನಾಂ ತ್ರಯಾಣಾಂ ಪುರುಷರ್ಷಭಮ್ ।
ಯದ್ ಬಾಧಸೇ ಗುಹಾಧ್ವಾಂತಂ ಪ್ರದೀಪಃ ಪ್ರಭಯಾ ಯಥಾ ॥ ೩೦
ಶುಶ್ರೂಷತಾಮವ್ಯಲೀಕಮಸ್ಮಾಕಂ ನರಪುಂಗವ ।
ಸ್ವಜನ್ಮ ಕರ್ಮ ಗೋತ್ರಂ ವಾ ಕಥ್ಯತಾಂ ಯದಿ ರೋಚತೇ ॥ ೩೧

ಅನುರಾಗವನ್ನು ಸೂಸುವ ಮುಗುಳ್ನಗೆಯಿಂದಲೂ ನೇತ್ರಗಳಿಂದಲೂ ಯುಕ್ತನೂ ಮೋಹಕವಾದ ತರುಣವಯಸ್ಸಿನವನೂ ಮದಿಸಿದ ಕಂಠೀರವದಂತೆ ಗಂಭೀರವಾದ ನಡಿಗೆಯುಳ್ಳವನೂ ತೇಜೋವಿಶೇಷದಿಂದ ದುರ್ಧರ್ಷನೂ ಆದ ಶ್ರೀಕೃಷ್ಣನನ್ನು ನೋಡಿ, ಅವನ ತೇಜಸ್ಸಿಗೆ ಹಿಮ್ಮೆಟ್ಟಿದ ಮುಚುಕುಂದನು ಶಂಕಿಸುತ್ತಲೇ ಮೆಲ್ಲಗೇ ಮಾತಾಡಿದನು (೨೬-೨೭). ಮುಚುಕುಂದನು ಹೇಳಿದನು: ''ನೀನು ಯಾರು ? ಬೆಟ್ಟತಿಟ್ಟುಗಳಿಂದ ಕೂಡಿದ ಅರಣ್ಯಕ್ಕೆ ಬಂದಿರುವೆ. ಮುಳ್ಳುಗಳಿರುವ ಕಾಡಿನಲ್ಲಿ ಕಮಲದಳದಂತೆ ಕೋಮಲವಾದ ಕಾಲುಗಳಿಂದ ನಡೆಯುತ್ತಿರುವೆ (೨೮). ತೇಜಸ್ವಿಗಳಲ್ಲಿ ತೇಜಸ್ವಿಯಾದ ನೀನು ಯಾರು ? ಭಗವಾನ್ ಅಗ್ನಿಯೋ ? ಸೂರ್ಯನೋ ಸೋಮನೋ ಮಹೇಂದ್ರನೊ ? ಅಥವಾ ಇನ್ನೊಬ್ಬ ಲೋಕಪಾಲನೋ ? (೨೯). ಪುರುಷಶ್ರೇಷ್ಠನಾದ ನೀನು ದೇವತೆಗಳಿಗೂ ದೇವತೆಗಳಾದ ತ್ರಿಮೂರ್ತಿಗಳಲ್ಲೊಬ್ಬನೆಂದು ಭಾವಿಸುತ್ತೇನೆ. ಪ್ರದೀಪವು ಪ್ರತಿಭೆಯಿಂದ ಕತ್ತಲೆಯನ್ನು ಹೋಗಲಾಡಿಸುವಂತೆ ನಿನ್ನ ಪ್ರಭೆಯಿಂದ ಈ ಗುಹೆಯ ಕತ್ತಲೆಯನ್ನು ಹೋಗಲಾಡಿಸುತ್ತಿದ್ದೀಯೆ! (೩೦). ಎಲೈ ಪುರುಷೋತ್ತಮ, ನಾವು ಋಜುಬುದ್ಧಿಯಿಂದ ನಿನ್ನ ವಿಷಯವನ್ನು ಕೇಳಲು

ವಯಂ ತು ಪುರುಷವ್ಯಾಘ್ರ ಐಕ್ಷ್ವಾಕಾಃ ಕ್ಷತ್ರಬಂಧವಃ।
ಮುಚುಕುಂದ ಇತಿ ಪ್ರೋಕ್ತೋ ಯೌವನಾಶ್ವಾತ್ಮಜಃ ಪ್ರಭೋ॥ ೩೨

ಚಿರಪ್ರಜಾಗರಶ್ರಾಂತೋ ನಿದ್ರಯೋಪಹತೇಂದ್ರಿಯಃ।
ಶಯೇಽಸ್ಮಿನ್ ವಿಜನೇ ಕಾಮಂ ಕೇನಾಪ್ಯುತ್ಥಾಪಿತೋಽಧುನಾ॥ ೩೩

ಸೋಽಪಿ ಭಸ್ಮೀಕೃತೋ ನೂನಮಾತ್ಮೀಯೇನೈವ ಪಾಪ್ಮನಾ।
ಅನಂತರಂ ಭವಾನ್ ಶ್ರೀಮಾನ್ ಲಕ್ಷಿತೋಽಮಿತ್ರಶಾತನಃ॥ ೩೪

ತೇಜಸಾ ತೇಽವಿಷಹ್ಯೇಣ ಭೂರಿ ದ್ರಷ್ಟುಂ ನ ಶಕ್ನುಮಃ।
ಹತೌಜಸೋ ಮಹಾಭಾಗ ಮಾನನೀಯೋಽಸಿ ದೇಹಿನಾಮ್॥ ೩೫

ಏವಂ ಸಂಭಾಷಿತೋ ರಾಜ್ಞಾ ಭಗವಾನ್ ಭೂತಭಾವನಃ।
ಪ್ರತ್ಯಾಹ ಪ್ರಹಸನ್ ವಾಣ್ಯಾ ಮೇಘನಾದಗಭೀರಯಾ॥ ೩೬

ಶ್ರೀ ಭಗವಾನುವಾಚ-
ಜನ್ಮಕರ್ಮಾಭಿಧಾನಾನಿ ಸಂತಿ ಮೇಽಂಗ ಸಹಸ್ರಶಃ।
ನ ಶಕ್ಯಂತೇಽನುಸಂಖ್ಯಾತುಮನಂತತ್ವಾನ್ಮಯಾಪಿ ಹಿ॥ ೩೭

ಬಯಸಿದ್ದೇವೆ. ನಿನಗೆ ಇಷ್ಟವಾದರೆ ನಿನ್ನ ಜನ್ಮ ಕರ್ಮಗೋತ್ರಗಳನ್ನು ತಿಳಿಸು (೩೧). ನಾವಾದರೋ ಇಕ್ಷ್ವಾಕುವಂಶದಲ್ಲಿಹುಟ್ಟಿದ ಕ್ಷತ್ರಿಯರು. ಹೇ ಪ್ರಭುವೇ, ನಾನು ಯುವನಾಶ್ವನ ಮಗನಾದ ಮಾಂಧಾತೃವಿನ ಪುತ್ರ. ನನ್ನ ಹೆಸರು ಮುಚುಕುಂದ (೩೨). ಬಹಳಕಾಲ ಜಾಗರಣೆಯಿಂದ ಬಳಲಿ ಇಂದ್ರಿಯ ಶಕ್ತಿಯು ಕುಗ್ಗಲಾಗಿ, ಈ ನಿರ್ಜನಪ್ರದೇಶದಲ್ಲಿ ಯಥೇಷ್ಟವಾಗಿ ನಿದ್ರಿಸುತ್ತ ಮಲಗಿದ್ದೆನು. ಈಗ ಯಾವನೋ ! ಒಬ್ಬನು ನನ್ನನ್ನು ಎಚ್ಚರಗೊಳಿಸಿಬಿಟ್ಟನು ! ತಾನು ಮಾಡಿದ ಪಾಪದ ಫಲವಾಗಿ ಆತನು ಸುಟ್ಟು ಬೂದಿಯಾದನು. ಅನಂತರ ಶತ್ರುಘಾತಿಯೂ ತೇಜಸ್ವಿಯೂ ಆದ ನಿನ್ನನ್ನು ಕಂಡೆನು (೩೩-೩೪). ಸಹಿಸಲು ಅಶಕ್ಯವಾದ ನಿನ್ನ ತೇಜಸ್ಸಿನಿಂದ ನಮ್ಮ ಸಾಮರ್ಥ್ಯವು ನಷ್ಟವಾದ್ದರಿಂದ ನಿನ್ನನ್ನು ಸರಿಯಾಗಿ ನೋಡಲೂ ನಮಗೆ ಶಕ್ತಿ ಇಲ್ಲ! ಹೇ ಮಹಾಭಾಗ, ಸಕಲ ಮಾನವರಿಗೂ ನೀನು ಮಾನ್ಯನಾಗಿರುವೆ'' ಎಂದನು (೩೫). ಹೀಗೆ ಮುಚುಕುಂದರಾಜನು ನುಡಿಯಲಾಗಿ ಭೂತಭಾವನನಾದ ಭಗವಂತನು ನಗುತ್ತ ಗುಡುಗಿನಂತೆ ಗಂಭೀರ ವಾದ ವಾಣಿಯಿಂದ ಮಾತಾಡಿದನು (೩೬). ಶ್ರೀಕೃಷ್ಣನು ಹೇಳಿದನು: '' ರಾಜ, ನನಗೆ

ಕ್ವಚಿದ್ ರಜಾಂಸಿ ವಿಮಮೇ ಪಾರ್ಥಿವಾನ್ಯುರುಜನ್ಮಭಿಃ ।
ಗುಣಕರ್ಮಾಭಿಧಾನಾನಿ ನ ಮೇ ಜನ್ಮಾನಿ ಕರ್ಹಿಚಿತ್ ॥ ೩೮

ಕಾಲತ್ರಯೋಪಪನ್ನಾನಿ ಜನ್ಮಕರ್ಮಾಣಿ ಮೇ ನೃಪ ।
ಅನುಕ್ರಮಂತೋ ನೈವಾಂತಂ ಗಚ್ಛಂತಿ ಪರಮರ್ಷಯಃ ॥ ೩೯

ತಥಾಪ್ಯದ್ಯತನಾನ್ಯಂಗ ಶೃಣುಷ್ವ ಗದತೋ ಮಮ ।
ವಿಜ್ಞಾಪಿತೋ ವಿರಿಂಚೇನ ಪುರಾಹಂ ಧರ್ಮಗುಪ್ತಯೇ ॥
ಭೂಮೇರ್ಭಾರಾಯಮಾಣಾನಾಮಸುರಾಣಾಂ ಕ್ಷಯಾಯ ಚ ॥ ೪೦

ಅವತೀರ್ಣೋ ಯದುಕುಲೇ ಗೃಹ ಆನಕದುಂದುಭೇಃ ।
ವದಂತಿ ವಾಸುದೇವೇತಿ ವಸುದೇವಸುತಂ ಹಿ ಮಾಮ್ ॥ ೪೧

ಕಾಲನೇಮಿರ್ಹತಃ ಕಂಸಃ ಪ್ರಲಂಬಾದ್ಯಾಶ್ಚ ಸದ್ದ್ವಿಷಃ ।
ಅಯಂ ಚ ಯವನೋ ದಗ್ಧೋ ರಾಜಂಸ್ತೇ ತಿಗ್ಮಚಕ್ಷುಷಾ ॥ ೪೨

ಜನ್ಮ ಕರ್ಮನಾಮಧೇಯಗಳು ಸಾವಿರಗಟ್ಟಲೆ ಇವೆ! ಅವು ಅನಂತಸಂಖ್ಯೆಯಲ್ಲಿರುವುದರಿಂದ ಎಣಿಸಿ ಹೇಳಲು ನನಗೂ ಸಾಧ್ಯವಿಲ್ಲ! (೩೭). ಯಾವನಾದರೂ ಹಲವಾರು ಜನ್ಮಗಳನ್ನೆತ್ತಿ ಮಣ್ಣಿನ ಕಣಗಳನ್ನಾದರೂ ಎಣಿಸಿಯಾನು, ಆದರೆ ನನ್ನ ಗುಣ ಕರ್ಮ ನಾಮಧೇಯಗಳನ್ನೂ ಜನ್ಮಗಳನ್ನೂ ಅವನೆಂದಿಗೂ ಎಣಿಸಲಾರ! (೩೮). ಭೂತ ವರ್ತಮಾನ ಭವಿಷ್ಯತ್-ಎಂಬ ಕಾಲತ್ರಯದಲ್ಲಿ ನನಗೆ ಸಂಭವಿಸುವ ಜನ್ಮ ಕರ್ಮಗಳನ್ನು ಪರಮರ್ಷಿಗಳು ಎಣಿಸತೊಡಗಿದರೂ ಕೊನೆಯನ್ನು ಮುಟ್ಟಲಾರರು! (೩೯). ಆದರೂ ಈಗಿನ ಜನ್ಮಾದಿವಿಷಯಗಳನ್ನು ಹೇಳುತ್ತೇನೆ, ಕೇಳು. ಧರ್ಮವನ್ನು ರಕ್ಷಿಸಬೇಕೆಂದೂ ಭೂಮಿಗೆ ಹೊರೆಯಾಗಿರುವ ಅಸುರರನ್ನು ಸಂಹರಿಸಬೇಕೆಂದೂ ಹಿಂದೆ ಬ್ರಹ್ಮನು ನನ್ನನ್ನು ಕೇಳಿಕೊಂಡನು (೪೦). ಅದರಂತೆ ನಾನು ಯದುಕುಲದಲ್ಲಿ ಆನಕದುಂದುಬಿಯ (ವಸುದೇವನ) ಗೃಹದಲ್ಲಿ ಅವತರಿಸಿದೆನು. ವಸುದೇವನ ಮಗನಾದ್ದರಿಂದ ನನ್ನನ್ನು ವಾಸುದೇವನೆಂದು ಕರೆಯುತ್ತಾರೆ. (ಜನ್ಮಾಂತರದಲ್ಲಿ) ಕಾಲನೇಮಿಯಾಗಿದ್ದ ಕಂಸನೂ ಸಾಧುವಿದ್ವೇಷಿಗಳಾದ ಪ್ರಲಂಬಾದಿಗಳೂ ನನ್ನಿಂದ ಹತರಾದರು. ಎಲೈ ರಾಜನೇ, ಈ ಕಾಲಯವನನನ್ನು ಸಹ ನಿನ್ನ ಉರಿಗಣ್ಣಿನ ಮೂಲಕ ನಾನು ಸುಟ್ಟುಹಾಕಿದೆನು!

ಸೋಽಹಂ ತವಾನುಗ್ರಹಾರ್ಥಂ ಗುಹಾಮೇತಾಮುಪಾಗತಃ ।
ಪ್ರಾರ್ಥಿತಃ ಪ್ರಚುರಂ ಪೂರ್ವಂ ತ್ವಯಾಹಂ ಭಕ್ತವತ್ಸಲಃ ॥ ೪೩

ವರಾನ್ ವೃಣೀಷ್ವ ರಾಜರ್ಷೇ ಸರ್ವಾನ್ ಕಾಮಾನ್ ದದಾಮಿ ತೇ ।
ಮಾಂ ಪ್ರಪನ್ನೋ ಜನಃಕಶ್ಚಿನ್ನ ಭೂಯೋಽರ್ಹತಿ ಶೋಚಿತುಮ್॥ ೪೪

ಶ್ರೀಶುಕ ಉವಾಚ-

ಇತ್ಯುಕ್ತಸ್ತಂ ಪ್ರಣಮ್ಯಾಹ ಮುಚುಕುಂದೋ ಮುದಾನ್ವಿತಃ ।
ಜ್ಞಾತ್ವಾನಾರಾಯಣಂ ದೇವಂ ಗರ್ಗವಾಕ್ಯಮನುಸ್ಮರನ್ ॥ ೪೫

ಮುಚುಕುಂದ ಉವಾಚ

ವಿಮೋಹಿತೋಽಯಂ ಜನ ಈಶ ಮಾಯಯಾ
ತ್ವದೀಯಯಾ ತ್ವಾಂ ನ ಭಜತ್ಯನರ್ಥದೃಕ್ ।
ಸುಖಾಯಾ ದುಃಖಪ್ರಭವೇಷು ಸಜ್ಜತೇ
ಗೃಹೇಷು ಯೋಷಿತ್ ಪುರುಷಶ್ಚ ವಂಚಿತಃ ॥ ೪೬

(೪೧-೪೨). ಭಕ್ತವತ್ಸಲನಾದ ನನ್ನನ್ನು ನೀನು ಹಿಂದೆ ವಿಶೇಷವಾಗಿ ಪ್ರಾರ್ಥಿಸಿಕೊಂಡಿದ್ದುದರಿಂದ ನಿನ್ನನ್ನು ಅನುಗ್ರಹಿಸುವದಕ್ಕಾಗಿ ಈ ಗುಹೆಗೆ ಬಂದೆನು. ಹೇ ರಾಜರ್ಷಿ, ಬೇಕಾದ ವರಗಳನ್ನು ಕೇಳಿಕೋ. ನಿನ್ನ ಸಮಸ್ತ ಕಾಮನೆಗಳನ್ನೂ ನೆರವೇರಿಸುವೆನು. ನನಗೆ ಶರಣಾಗತನಾದ ಯಾವನೂ ಮತ್ತೊಮ್ಮೆ ದುಃಖಿಸಬೇಕಾದ ಸಂದರ್ಭವಿಲ್ಲ!'' ಎಂದು ನುಡಿದನು (೪೩-೪೪). ಹೀಗೆ ನುಡಿಯಲು ಮುಚುಕುಂದನಿಗೆ ಗರ್ಗವಾಕ್ಯದ[1] ಸ್ಮರಣೆಯಾಗಿ, ಈತನು ಶ್ರೀಮನ್ನಾರಾಯಣನೆಂದು ಗೊತ್ತಾಯಿತು. ಅವನು ಆನಂದದಿಂದ ಶ್ರೀಕೃಷ್ಣನನ್ನು ನಮಸ್ಕರಿಸಿ ಈ ಪ್ರಕಾರ ಸ್ತುತಿಸಿದನು (೪೫). ''ಹೇ ಜಗದೀಶ್ವರ, ಸ್ತ್ರೀ ಪುರುಷರೆಂಬ ಭೇದವಿಲ್ಲದೆ ಎಲ್ಲ ಜನರೂ ನಿನ್ನ ಮಾಯೆಯಿಂದ ಮೋಹಿತರಾಗಿ ಪರಮಾರ್ಥವನ್ನರಿಯದೆ ನಿನ್ನನ್ನು ಭಜಿಸುತ್ತಿಲ್ಲ. ಅವರು ಅನ್ಯೋನ್ಯವಂಚಿತರಾಗಿ ಸುಖವು ಬೇಕೆಂದು ದುಃಖಕಾರಣವಾದ ಮನೆ

---

೧ ಇಪ್ಪತ್ತೆಂಟನೆಯ ದ್ವಾಪರಯುಗದಲ್ಲಿ ಶ್ರೀಮನ್ನಾರಯಣನು ವಸುದೇವಸುತನಾಗಿ ಅವತರಿಸುವನೆಂದು ವೃದ್ಧಗರ್ಗನು ಮುಚುಕುಂದನಿಗೆ ಹೇಳಿದ್ದನು.

ಲಬ್ಧ್ವಾ ಜನೋ ದುರ್ಲಭಮತ್ರ ಮಾನುಷಂ
ಕಥಂಚಿದವ್ಯಂಗಮಯತ್ನತೋಽನಘ।
ಪಾದಾರವಿಂದಂ ನ ಭಜತ್ಯಸನ್ಮತಿ-
ರ್ಗೃಹಾಂಧಕೂಪೇ ಪತಿತೋ ಯಥಾ ಪಶುಃ॥ ೪೭

ಮಮೈಷ ಕಾಲೋಽಜಿತ ನಿಷ್ಫಲೋ ಗತೋ
ರಾಜ್ಯಶ್ರಿಯೋನ್ನದ್ಧಮದಸ್ಯ ಭೂಪತೇಃ।
ಮರ್ತ್ಯಾತ್ಮಬುದ್ಧೇಃ ಸುತದಾರಕೋಶಭೂ-
ಷ್ವಾಸಜ್ಜಮಾನಸ್ಯ ದುರುಂತಚಿಂತಯಾ॥ ೪೮

ಕಲೇವರೇಽಸ್ಮಿನ್ ಘಟಕುಡ್ಯಸನ್ನಿಭೇ
ನಿರೂಢಮಾನೋ ನರದೇವ ಇತ್ಯಹಮ್।
ವೃತೋ ರಥೇಭಾಶ್ವಪದಾತ್ಯನೀಕಪೈ-
ರ್ಗಾಂ ಪರ್ಯಟಂಸ್ತ್ವಾಗಣಯನ್ ಸುದುರ್ಮದಃ॥ ೪೯

ಮಠಗಳಲ್ಲಿ ಆಸಕ್ತರಾಗಿದ್ದಾರೆ! (೪೬). ಈ ಲೋಕದಲ್ಲಿ ಜನರು ಅಂಗವೈಕಲ್ಯ ವಿಲ್ಲದ್ದೂ ದುರ್ಲಭವೂ ಆದ ಮನುಷ್ಯ ಜನ್ಮವನ್ನು ಹೇಗೋ ಯತ್ನವಿಲ್ಲದೆಯೇ ಪಡಿದಿರುತ್ತಾರೆ. ಆದರೂ ಸಹ, ಹೇ ಸ್ವಾಮಿ, ಅನುಚಿತವಾದ ವಿಷಯಸುಖದಲ್ಲಿ ಮಗ್ನರಾಗಿ ಪಶುವಿನಂತೆ ಮನೆಯೆಂಬ ಅಂಧಕೂಪದಲ್ಲಿ ಬಿದ್ದು ನಿನ್ನ ಪಾದಾರ ವಿಂದವನ್ನು ಭಜಿಸುವುದಿಲ್ಲ(೪೭). ಹೇ ಅಜಿತ, ರಾಜ್ಯ ಲಕ್ಷ್ಮಿಯಿಂದ ಮದಿಸಿ ಭೂಪತಿಯೆಂದು ಗರ್ವಿಸುತ್ತಿದ್ದ ನನ್ನ ಆಯುಸ್ಸೇ ವ್ಯರ್ಥವಾಗಿ ಕಳೆದು ಹೋಯಿತು! ಅಳಿದು ಹೋಗುವ ದೇಹವನ್ನು ಆತ್ಮವೆಂದು ತಿಳಿದು ಮಕ್ಕಳು, ಮಡದಿ, ಭಂಡಾರ, ಭೂಮಿಗಳಲ್ಲಿ ಆಸಕ್ತನಾಗಿದ್ದ ನನಗೆ ದುರಂತಚಿಂತೆ ಯಿಂದಲೇ ಕಾಲವು ಗತಿಸಿತು (೪೮). ಮಣ್ಣಿನ ಗಡಿಗೆಯಂತೆ, ಗೋಡೆಯಂತೆ, ನಶ್ವರವಾದ ಈ ದೇಹದಲ್ಲಿ 'ನಾನು ಮಹಾರಾಜ-ಮನುಷ್ಯ ರೂಪಿನ ದೇವತೆ' ಎಂಬ ಅಭಿಮಾನವನ್ನು ಬೆಳಸಿಕೊಂಡಿದ್ದೆನು. ರಥ, ಆನೆ, ಕುದುರೆ, ಪದಾತಿ, ಸೇನಾಪತಿಗಳಿಂದ ಪರಿವೃತನಾಗಿ ಔದ್ಧತ್ಯದಿಂದ ಭೂಮಿಯನ್ನು ಸುತ್ತುತ್ತ ನಿನ್ನನ್ನು

ಪ್ರಮತ್ತಮುಚ್ಚೈರಿತಿಕೃತ್ಯಚಿಂತಯಾ
ಪ್ರವೃದ್ಧಲೋಭಂ ವಿಷಯೇಷು ಲಾಲಸಮ್ ।
ತ್ವಮಪ್ರಮತ್ತಃ ಸಹಸಾಭಿಪದ್ಯಸೇ
ಕ್ಷುಲ್ಲೇಲಿಹಾನೋಽಹಿರಿವಾಖುಮಂತಕಃ ॥ ೫೦

ಪುರಾ ರಥೈರ್ಹೇಮಪರಿಷ್ಕೃತೈಶ್ಚರನ್
ಮತಂಗಜೈರ್ವಾ ನರದೇವಸಂಜ್ಞಿತಃ ।
ಸ ಏವ ಕಾಲೇನ ದುರತ್ಯಯೇನ ತೇ
ಕಲೇವರೋ ವಿಟ್ಕೃಮಿಭಸ್ಮಸಂಜ್ಞಿತಃ ॥ ೫೧

ನಿರ್ಜಿತ್ಯ ದಿಕ್ಚಕ್ರಮಭೂತವಿಗ್ರಹೋ
ವರಾಸನಸ್ಥಃ ಸಮರಾಜವಂದಿತಃ ।
ಗೃಹೇಷು ಮೈಥುನ್ಯ ಸುಖೇಷು ಯೋಷಿತಾಂ
ಕ್ರೀಡಾಮೃಗಃ ಪೂರುಷ ಈಶ ನೀಯತೇ ॥ ೫೨

ಗಣಿಸಲಿಲ್ಲ (೪೯). "ಹೀಗೆ ಮಾಡಬೇಕು, ಹಾಗೆ ಮಾಡಬೇಕು" ಎಂದು ಚಿಂತಿಸುತ್ತ ಮನೋರಥಪರಂಪರೆಯನ್ನು ಬೆಳಸಿಕೊಂಡು ವಿಷಯಲಂಪಟನಾದ ಅವಿವೇಕಿಯನ್ನು ಅಪ್ರಮತ್ತನಾದ ನೀನು, ಹಸಿವಿನಿಂದ ನಾಲಗೆಯನ್ನು ಚಪ್ಪರಿಸುವ ಹಾವು ಇಲಿಯನ್ನು ಆಕ್ರಮಿಸುವಂತೆ ಯಮನಾಗಿ ಥಟ್ಟನೆ ಆಕ್ರಮಿಸಿ ಬಿಡುವೆ ! (೫೦). ಮೊದಲು ಸುವರ್ಣಾಲಂಕೃತವಾದ ರಥಗಳಲ್ಲಿಯೋ ಆನೆಗಳ ಮೇಲೋ ಸಂಚರಿಸುತ್ತ ಮಹಾರಾಜನೆಂದು ಹೆಸರುಗಳಿಸಿದ ಶರೀರವು, ಅನುಲ್ಲಂಘನೀಯನೂ ಕಾಲಾತ್ಮಕನೂ ಆದ ನಿನ್ನಿಂದ ಆಕ್ರಾಂತವಾಗಿ, ಆಮೇಲೆ ಅಮೇಧ್ಯವಾಗಿ ಕ್ರಿಮಿಯಾಗಿ ಬೂದಿಯಾಗಿಬಿಡುತ್ತದೆ (೫೧). ಹೇ ಸ್ವಾಮಿ, ಮುಂದೆ ಸಂಗ್ರಾಮವೇ ನಡೆಯದಂತೆ ದಿಕ್‌ಚಕ್ರಗಳನ್ನು ಜಯಿಸಿ ಸಿಂಹಾಸನದಲ್ಲಿ ಮಂಡಿಸಿ, ಮೊದಲು ತನಗೆ ಸಮಾನರಾಗಿದ್ದ ರಾಜರಿಂದಲೂ ವಂದಿತನಾಗಿರತಕ್ಕವನು, ಮೈಥುನ ಸುಖವನ್ನೀಯುವ ಸ್ತ್ರೀಯರ ಗೃಹಗಳಲ್ಲಿ ಕ್ರೀಡಾಮೃಗವಾಗಿ ಇಲ್ಲಿಂದಲ್ಲಿಗೆ ಎಳೆಯಲ್ಪಡುವನು ! (೫೨). ಅತ್ಯಾಸೆಯುಳ್ಳ

ಕರೋತಿ ಕರ್ಮಾಣಿ ತಪಸ್ಸುನಿಷ್ಠಿತೋ
ನಿವೃತ್ತಭೋಗಸ್ತದಪೇಕ್ಷಯಾ ದದತ್ ।
ಪುನಶ್ಚ ಭೂಯೇಯಮಹಂ ಸ್ವರಾಡಿತಿ
ಪ್ರವೃದ್ಧತರ್ಷೋ ನ ಸುಖಾಯ ಕಲ್ಪತೇ ॥ ೫೩

ಭವಾಪವರ್ಗೋ ಭ್ರಮತೋ ಯದಾ ಭವೇ-
ಜ್ಜನಸ್ಯ ತರ್ಹ್ಯಚ್ಯುತ ಸತ್ಸಮಾಗಮಃ ।
ಸತ್ಸಂಗಮೋ ಯರ್ಹಿ ತದೈವ ಸದ್ಗತೌ
ಪರಾವರೇಶೇ ತ್ವಯಿ ಜಾಯತೇ ಮತಿಃ ॥ ೫೪

ಮನ್ಯೇ ಮಮಾನುಗ್ರಹ ಈಶ ತೇ ಕೃತೋ
ರಾಜ್ಯಾನುಬಂಧಾಪಗಮೋ ಯದೃಚ್ಛಯಾ ।
ಯಃ ಪ್ರಾರ್ಥ್ಯತೇ ಸಾಧುಭಿರೇಕಚರ್ಯಯಾ
ವನಂ ವಿವಿಕ್ಷದ್ಭಿರಖಂಡಭೂಮಿಪೈಃ ॥ ೫೫

ಮನುಷ್ಯನು 'ಪುನಃ ನಾನು ಚಕ್ರವರ್ತಿಯಾಗಬೇಕು-ದೇವೇಂದ್ರನಾಗಬೇಕು' ಎಂಬ ಹಂಬಲದಿಂದ ಬ್ರಹ್ಮಚರ್ಯಾದಿ ವ್ರತಗಳಲ್ಲಿ ನಿಷ್ಠೆಯಿಂದ ಇದ್ದು ಕರ್ಮಗಳನ್ನು ಮಾಡುತ್ತಾನೆ. ಎಲ್ಲ ಭೋಗಗಳನ್ನು ತ್ಯಜಿಸಿ ಭೋಗಾಪ್ರೇಕ್ಷೆಯಿಂದಲೇ ದಾನ ಮಾಡುತ್ತಾನೆ ! ಅಂತಹವನು ಸುಕವನ್ನು ಪಡೆಯುವುದೇ ಇಲ್ಲ (೫೩). ಅಚ್ಯುತ, ಸಂಸಾರದಲ್ಲಿ ಅಲೆಯುವ ಮನುಷ್ಯನಿಗೆ ಯಾವಾಗ ಬಂಧನದ ಬಿಡುಗಡೆಯ ಕಾಲವು (ನಿನ್ನ ಅನುಗ್ರಹದಿಂದ) ಒದಗುವುದೋ ಆಗ ಸತ್ಸಂಗವು ದೊರೆಯುತ್ತದೆ. ಸತ್ಸಂಗವು ದೊರೆತೊಡನೆ ಸದ್ಗತಿಯನ್ನು ಪಡೆಯಲು ಮನಸ್ಸಾಗುವುದು. ಆಗ ಜಗದೀಶ್ವರನಾದ ನಿನ್ನಲ್ಲಿ ಭಕ್ತಿ ಹುಟ್ಟುವುದು (೫೪). ಅಖಂಡ ಭೂಮೀಶ್ವರರಾಗಿದ್ದು (ವೈರಾಗ್ಯದಿಂದ) ವನಕ್ಕೆ ಹೋಗಲಿಚ್ಛಿಸುವ ಸಜ್ಜನರು ತಮಗೆ ರಾಜ್ಯ ಸಂಬಂಧದ ವಿಚ್ಛೇದವಾಗಲೆಂದು ಏಕಾಗ್ರತೆಯಿಂದ ಪ್ರಾರ್ಥಿಸುತ್ತಾರೆ. ಅಂತಹ ರಾಜ್ಯ ಸಂಬಂಧ ವಿಚ್ಛೇದವು ನನಗೆ ತಾನಾಗಿಯೇ ಒದಗಿಬಿಟ್ಟಿದೆ ! ಇದು ನಿನ್ನ ಅನುಗ್ರಹವೆಂದೇ ತಿಳಿಯುತ್ತೇನೆ (೫೫). ಹೇ ಪ್ರಭುವೆ, ಅಭಿಮಾನರಹಿತರಾದವರು ದೃಢವಾಗಿ

ನ ಕಾಮಯೇಽನ್ಯಂ ತವ ಪಾದಸೇವನಾ-
ದಕಿಂಚನಪ್ರಾರ್ಥ್ಯತಮಾದ್ ವರಂ ವಿಭೋ ।
ಆರಾಧ್ಯ ಕಸ್ತ್ವಾಂ ಹ್ಯಪವರ್ಗದಂ ಹರೇ
ವೃಣೀತ ಆರ್ಯೋ ವರಮಾತ್ಮಬಂಧನಮ್ ॥ ೫೬

ತಸ್ಮಾದ್ ವಿಸೃಜ್ಯಾಶಿಷ ಈಶ ಸರ್ವತೋ
ರಜಸ್ತಮಃಸತ್ತ್ವಗುಣಾನುಬಂಧನಾಃ ।
ನಿರಂಜನಂ ನಿರ್ಗುಣಮದ್ವಯಂ ಪರಂ
ತ್ವಾಂ ಜ್ಞಪ್ತಿಮಾತ್ರಂ ಪುರುಷಂ ವ್ರಜಾಮ್ಯಹಮ್ ॥ ೫೭

ಚಿರಮಿಹ ವೃಜಿನಾರ್ತಸ್ತಪ್ಯಮಾನೋಽನುತಾಪೈ-
ರವಿತೃಷಷಡಮಿತ್ರೋಽಲಬ್ಧಶಾಂತಿಃ ಕಥಂಚಿತ್ ।
ಶರಣದ ಸಮುಪೇತಸ್ತ್ವತ್ಪದಾಬ್ಜಂ ಪರಾತ್ಮ-
ನ್ನಭಯಮೃತಮಶೋಕಂ ಪಾಹಿ ಮಾಽಽಪನ್ನಮೀಶ ॥ ೫೮

ಯಾವುದನ್ನು ಪ್ರಾರ್ಥಿಸುವರೋ ಅಂತಹ ನಿನ್ನ ಪಾದಸೇವೆಗಿಂತ ಇನ್ನೊಂದು ನನಗೆ ಬೇಡ. ಶ್ರೀಹರಿಯೆ, ಮುಕ್ತಿಪ್ರದಾತನಾದ ನಿನ್ನನ್ನು ಆರಾಧಿಸಿರುವ ಯಾವ ವಿವೇಕಿಯು ತಾನೇ ಆತ್ಮಬಂಧನಕಾರಿಯಾದ ಇನ್ನೊಂದು ವರವನ್ನು ಬೇಡಿಯಾನು ? (೫೬). ಆದ್ದರಿಂದ, ಸ್ವಾಮಿಯೆ, ಸತ್ತ್ವರಜಸ್ತಮೋಗುಣಗಳಿಂದ ಅನುಬದ್ಧವಾದ ಐಶ್ವರ್ಯಾದಿ ಕಾಮನೆಗಳನ್ನು ಪರಿತ್ಯಜಿಸಿ, ನಿರಂಜನನೂ ನಿರ್ಗುಣನೂ ಅದ್ವಯನೂ ಜ್ಞಾನಘನನೂ ಪರಮಪುರುಷನೂ ಆದ ನಿನಗೆ ಶರಣಾಗಿದ್ದೇನೆ (೫೭). ಹೇ ಶರಣ್ಯ, ಬಹುಕಾಲದವರೆಗೆ ಕರ್ಮಫಲಗಳಿಂದ ಪೀಡಿತನಾಗಿ ತಾಪತ್ರಯಗಳಿಂದ ನರಳುತ್ತ ತೃಪ್ತಿಯೇ ಇಲ್ಲದ ಪಂಚೇಂದ್ರಿಯಗಳು ಮತ್ತು ಮನಸ್ಸೆಂಬ ಆರು ವೈರಿಗಳಿಂದ ಆಕ್ರಾಂತನಾಗಿ ಶಾಂತಿಯನ್ನೇ ಕಾಣದವನಾಗಿದ್ದೇನೆ. ಹೇ ಪರಮಾತ್ಮ, ಈಶ್ವರ, ನಿರ್ಭಯವೂ ಸತ್ಯವೂ ಶೋಕನಾಶಕವೂ ಆದ ನಿನ್ನ ಪಾದಪದ್ಮವನ್ನು ಆಶ್ರಯಿಸಿದ್ದೇನೆ. ಆಪತ್ತಿಗೆ ಒಳಗಾದ ನನ್ನನ್ನು ಪಾಲಿಸು'' ಎಂದು ಪ್ರಾರ್ಥಿಸಿದನು (೫೮). ಭಗವಂತನು ಹೇಳಿದನು : ''ಸಾರ್ವಭೌಮ-ಮಹಾರಾಜ, ನಿನ್ನ ಬುದ್ಧಿಯು

ಶ್ರೀಭಗವಾನುವಾಚ-

ಸಾರ್ವಭೌಮ ಮಹಾರಾಜ ಮತಿಸ್ತೇ ವಿಮಲೋರ್ಜಿತಾ ।
ವರೈಃ ಪ್ರಲೋಭಿತಸ್ಯಾಪಿ ನ ಕಾಮೈರ್ವಿಹತಾ ಯತಃ ॥ ೫೯

ಪ್ರಲೋಭಿತೋ ವರೈರ್ಯತ್ತ್ವಮಪ್ರಮಾದಾಯ ವಿದ್ಧಿ ತತ್ ।
ನ ಧೀರ್ಮಯ್ಯೇಕಭಕ್ತಾನಾಮಾಶೀರ್ಭಿರ್ಭಿದ್ಯತೇ ಕ್ವಚಿತ್ ॥ ೬೦

ಯುಂಜಾನಾನಾಮಭಕ್ತಾನಾಂ ಪ್ರಾಣಾಯಾಮಾದಿಭಿರ್ಮನಃ ।
ಅಕ್ಷೀಣವಾಸನಂ ರಾಜನ್ ದೃಶ್ಯತೇ ಪುನರುತ್ಥಿತಮ್ ॥ ೬೧

ವಿಚರಸ್ವ ಮಹೀಂ ಕಾಮಂ ಮಯ್ಯಾವೇಶಿತಮಾನಸಃ ।
ಅಸ್ತ್ವೇವ ನಿತ್ಯದಾ ತುಭ್ಯಂ ಭಕ್ತಿರ್ಮಯ್ಯನಪಾಯಿನೀ ॥ ೬೨

ಕ್ಷಾತ್ರಧರ್ಮಸ್ಥಿತೋ ಜಂತೂನ್ ನ್ಯವಧೀರ್ಮೃಗಯಾದಿಭಿಃ ।
ಸಮಾಹಿತಸ್ತತ್ತಪಸಾ ಜಹ್ಯಘಂ ಮದುಪಾಶ್ರಿತಃ ॥ ೬೩

ಪರಿಶುದ್ಧವೂ ಶ್ರೇಷ್ಠವೂ ಆಗಿದೆ. ಏಕೆಂದರೆ ವರಗಳನ್ನು ಪಡೆಯುವ ಪ್ರಲೋಭನೆಗೊಳಗಾದರೂ ಅದು ಕಾಮನೆಗಳಿಂದ ಪರಾಹತವಾಗಲಿಲ್ಲ (೫೯). ವರಗಳಿಂದ ಪ್ರಲೋಭಿತನಾದರೂ ನೀನು ಪ್ರಮಾದಕ್ಕೆ ಒಳಗಾಗಿಲ್ಲ. ಆದ್ದರಿಂದ ನನ್ನ ಏಕಾಂತಭಕ್ತರ ಬುದ್ಧಿಯು ಎಂದಿಗೂ ಕಾಮಗಳಿಗೆ ಸಿಕ್ಕಿ ಬೇರೆಯಾಗುವುದಿಲ್ಲವೆಂದು ತಿಳಿ (೬೦). ರಾಜ, ಪ್ರಾಣಾಯಾಮಾದಿಗಳಿಂದ ಮನಸ್ಸನ್ನು ಹತೋಟಿಗೆ ಒಳಪಡಿಸುತ್ತಿದ್ದರೂ ಯಾರು ನನ್ನ ಭಕ್ತರಾಗಿರುವುದಿಲ್ಲವೋ ಅವರ ಮನಸ್ಸು ವಿಷಯವಾಸನೆಗಳಿಂದ ಮುಕ್ತವಾಗಿರುವುದಿಲ್ಲ. ಅದು ಮತ್ತೆ ವಿಷಯಾಭಿಮುಖವಾಗುವುದು ಕಂಡುಬರುತ್ತದೆ (೬೧). ನನ್ನಲ್ಲಿಯೇ ನೆಟ್ಟ ಮನಸ್ಸುಳ್ಳವನಾಗಿ ಯಥೇಷ್ಟವಾಗಿ ಭೂಮಿಯಲ್ಲಿ ಸಂಚರಿಸುತ್ತಿರು. ನನ್ನಲ್ಲಿ ನಿನಗೆ ಸ್ಥಿರವಾದ ಭಕ್ತಿಯು ಸದಾ ಇರಲಿ. ನೀನು ಕ್ಷಾತ್ರ ಧರ್ಮದಲ್ಲಿದ್ದು ಬೇಟೆ ಮೊದಲಾದವುಗಳಿಂದ ಪ್ರಾಣಿಗಳನ್ನು ಸಂಹರಿಸಿದ್ದೀಯೆ. ಆ ಪಾಪವನ್ನು ನನ್ನನ್ನೇ ಭಜಿಸುತ್ತ ಶಾಂತಚಿತ್ತನಾಗಿ ತಪಸ್ಸಿನಿಂದ ಪರಿಹರಿಸಿಕೋ (೬೨-೬೩).

ಜನ್ಮನ್ಯನಂತರೇ ರಾಜನ್ ಸರ್ವಭೂತಸುಹೃತ್ತಮಃ।
ಭೂತ್ವಾದ್ವಿಜವರಸ್ತ್ವಂ ವೈ ಮಾಮುಪೈಷ್ಯಸಿ ಕೇವಲಮ್ ॥ ೬೪

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಏಕಪಂಚಾಶತ್ತಮಾಧ್ಯಾಯಃ

ದ್ವಿಪಂಚಾಶತ್ತಮಾಧ್ಯಾಯಃ

ಶ್ರೀ ಶುಕ ಉವಾಚ-

ಇತ್ಥಂ ಸೋಽನುಗೃಹೀತೋಽಂಗ ಕೃಷ್ಣೇನೇಕ್ಷ್ವಾಕುನಂದನಃ।
ತಂ ಪರಿಕ್ರಮ್ಯ ಸಂನಮ್ಯ ನಿಶ್ಚಕ್ರಾಮ ಗುಹಾಮುಖಾತ್ ॥ ೧

ಸ ವೀಕ್ಷ್ಯಕ್ಷುಲ್ಲಕಾನ್ ಮರ್ತ್ಯಾನ್ ಪಶೂನ್ ವೀರುದ್ವನಸ್ಪತೀನ್।
ಮತ್ವಾ ಕಲಿಯುಗಂ ಪ್ರಾಪ್ತಂ ಜಗಾಮ ದಿಶಮುತ್ತರಾಮ್ ॥ ೨

ಮಹಾರಾಜ, ಮುಂದಿನ ಜನ್ಮದಲ್ಲಿ ಸರ್ವಭೂತಗಳಲ್ಲಿಯೂ ಪ್ರೀತಿಯುಳ್ಳ ದ್ವಿಜಶ್ರೇಷ್ಠನಾಗಿ ಜನಿಸಿ, ಆಗ ಮಾತ್ರವೇ ನನ್ನನ್ನು ಸೇರುವೆ'' ಎಂದನು (೬೪).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಐವತ್ತೊಂದನೆಯ ಅಧ್ಯಾಯ

ಅಧ್ಯಾಯ ೫೨

ಬಲರಾಮಕೃಷ್ಣರು ಜರಾಸಂಧನನ್ನು ವಂಚಿಸಿ ದ್ವಾರಕೆಯನ್ನು ಸೇರುವುದು.
ಬಲರಾಮನ ವಿವಾಹ, ರುಕ್ಮಿಣಿಯು ಶ್ರೀಕೃಷ್ಣನಿಗೆ ಕಳಿಸಿದ ಸಂದೇಶ

ಹೀಗೆ ಇಕ್ಷ್ವಾಕುವಂಶೀಯನಾದ ಮುಚುಕುಂದನು ಶ್ರೀ ಕೃಷ್ಣನಿಂದ ಅನುಗೃಹೀತನಾಗಿ, ಶ್ರೀ ಕೃಷ್ಣನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಗುಹಾ ದ್ವಾರದಿಂದ ಹೊರಟನು. ಅಲ್ಪದೇಹದ ಕ್ಷುಲ್ಲಕ ಮನುಷ್ಯರನ್ನೂ ಪಶುಗಳನ್ನೂ ಲತಾವೃಕ್ಷಗಳನ್ನೂ ಕಂಡು ಕಲಿಯುಗವು ಬಂದಿದೆಯೆಂದು ತಿಳಿದು ಆ ಮುಚು

ತಪಃಶ್ರದ್ಧಾಯುತೋ ಧೀರೋ ನಿಃಸಂಗೋ ಮುಕ್ತಸಂಶಯಃ।
ಸಮಾಧಾಯ ಮನಃ ಕೃಷ್ಣೇ ಪ್ರಾವಿಶದ್ ಗಂಧಮಾದನಮ್ ॥ ೩

ಬದರ್ಯಾಶ್ರಮಮಾಸಾದ್ಯ ನರನಾರಾಯಣಾಲಯಮ್ ।
ಸರ್ವದ್ವಂದ್ವಸಹಃ ಶಾಂತಸ್ತಪಸಾಽಽರಾಧಯದ್ಧರಿಮ್ ॥ ೪

ಭಗವಾನ್ ಪುನರಾವ್ರಜ್ಯ ಪುರೀಂ ಯವನವೇಷ್ಟಿತಾಮ್ ।
ಹತ್ವಾಮ್ಲೇಚ್ಛಬಲಂ ನಿನ್ಯೇ ತದೀಯಂ ದ್ವಾರಕಾಂ ಧನಮ್ ॥ ೫

ನೀಯಮಾನೇ ಧನೇ ಗೋಭಿರ್ನೃಭಿಶ್ಚಾಚ್ಯುತಚೋದಿತೈಃ।
ಆಜಗಾಮ ಜರಾಸಂಧಸ್ತ್ರಯೋವಿಂಶತ್ಯನೀಕಪಃ॥ ೬

ವಿಲೋಕ್ಯ ವೇಗರಭಸಂ ರಿಪುಸೈನ್ಯಸ್ಯ ಮಾಧವೌ।
ಮನುಷ್ಯ ಚೇಷ್ಟಾಮಾಪನ್ನೌ ರಾಜನ್ ದುದ್ರುವತುರ್ದ್ರುತಮ್ ॥ ೭

ವಿಹಾಯ ವಿತ್ತಂ ಪ್ರಚುರಮಭೀತೌ ಭೀರುಭೀತವತ್ ।
ಪದ್ಭ್ಯಾಂ ಪದ್ಮ ಪಲಾಶಾಭ್ಯಾಂ ಚೇರತುರ್ಬಹುಯೋಜನಮ್ ॥ ೮

ಕುಂದನು ಉತ್ತರ ದಿಕ್ಕಿಗೆ ಪ್ರಯಾಣ ಮಾಡಿದನು (೧-೨). ಆ ಧೀರನು ತಪಸ್ಸಿನಲ್ಲಿ ಶ್ರದ್ಧೆಯಿಟ್ಟು ನಿಃಸಂಗನೂ ನಿಃಸಂಶಯನೂ ಆಗಿ ಶ್ರೀಕೃಷ್ಣನಲ್ಲಿ ಚಿತ್ತವನ್ನು ನೆಲೆಗೊಳಿಸಿ ಗಂಧಮಾದನಗಿರಿಗೆ ಹೋದನು. ಆಮೇಲೆ ನರ ನಾರಾಯಣರು ನೆಲೆಸಿದ್ದ ಬದರಿಕಾಶ್ರಮಕ್ಕೆ ಹೋಗಿ, ಶೀತೋಷ್ಣಾದಿ ಸಕಲ ದ್ವಂದ್ವಗಳನ್ನು ಸಹಿಸುತ್ತ ಶಾಂತಮನಸ್ಕನಾಗಿ ಶ್ರೀಹರಿಯನ್ನು ಆರಾಧಿಸಿದನು (೩-೪). ಇತ್ತ ಭಗವಂತನು ಯವಸೇನಾವೇಷ್ಟಿತವಾದ ಮಧುರೆಗೆ ಹಿಂದಿರುಗಿ ಬಂದು ಸಮಸ್ತ ಮ್ಲೇಚ್ಛಸೇನೆಯನ್ನೂ ಸಂಹರಿಸಿ ಅವರ ಬಳಿಯಿದ್ದ ಧನವನ್ನು ದ್ವಾರಕೆಗೆ ಸಾಗಿಸಿಕೊಂಡು ಹೋಗುತ್ತಿದ್ದನು (೫). ಅಚ್ಯುತನ ಆಜ್ಞೆಯಂತೆ ಜನರೂ ಎತ್ತುಗಳೂ ಧನವನ್ನು ಹೊತ್ತುಕೊಂಡು ಹೋಗುತ್ತಿರುವಾಗ, ಇಪ್ಪತ್ತು ಮೂರು ಅಕ್ಷೌಹಿಣೀ ಸೇನೆಗಳಿಗೆ ಪತಿಯಾದ ಜರಾಸಂಧನು ಬಂದನು. ಶತ್ರು ಸೇನೆಯ ವೇಗವನ್ನು ರಭಸವನ್ನು ಕಂಡು ರಾಮಕೃಷ್ಣರು ಬೇಗಬೇಗನೆ ಓಡಿದರು. ಪರೀಕ್ಷಿತರಾಜ, ಮನುಷ್ಯ ಚೇಷ್ಟೆಯನ್ನು ನಟಿಸುತ್ತ ಹಾಗೆ ಓಡಿದರು (೬-೭). ಹೆದರಿಕೆ ಇಲ್ಲದಿದ್ದರೂ ಹೆದರಿದವರಂತೆ, ವಿಪುಲವಾದ ಧನವನ್ನೂ

ಪಲಾಯಮಾನೌ ತೌ ದೃಷ್ಟ್ವಾ ಮಾಗಧಃ ಪ್ರಹಸನ್ ಬಲೀ ।
ಅನ್ವಧಾವದ್ ರಥಾನೀಕೈರೀಶಯೋರಪ್ರಮಾಣವಿತ್ ॥ ೯

ಪ್ರದ್ರುತ್ಯ ದೂರಂ ಸಂಶ್ರಾಂತೌ ತುಂಗಮಾರುಹತಾಂ ಗಿರಿಮ್ ।
ಪ್ರವರ್ಷಣಾಖ್ಯಂ ಭಗವಾನ್ ನಿತ್ಯದಾ ಯತ್ರ ವರ್ಷತಿ ॥ ೧೦

ಗೌರಿ ನಿಲೀನಾವಾಜ್ಞಾಯ ನಾಧಿಗಮ್ಯ ಪದಂ ನೃಪ ।
ದದಾಹ ಗಿರಿಮೇಧೋಭಿಃ ಸಮಂತಾದಗ್ನಿ ಮುತ್ಸೃಜನ್ ॥ ೧೧

ತತ ಉತ್ಪತ್ಯ ತರಸಾ ದಹ್ಯಮಾನತಟಾದುಭೌ ।
ದಶೈಕಯೋಜನೋತ್ತುಂಗಾನ್ನಿಪೇತತುರಧೋ ಭುವಿ ॥ ೧೨

ಅಲಕ್ಷ್ಯಮಾಣೌ ರಿಪುಣಾ ಸಾನುಗೇನ ಯದೂತ್ತಮೌ ।
ಸ್ವಪುರಂ ಪುನರಾಯಾತೌ ಸಮುದ್ರಪರಿಖಾಂ ನೃಪ ॥ ೧೩

ಸೋಽಪಿ ದಗ್ಧಾವಿತಿ ಮೃಷಾ ಮನ್ವಾನೋ ಬಲಕೇಶವೌ ।
ಬಲಮಾಕೃಷ್ಯ ಸುಮಹನ್ಮಗಧಾನ್ ಮಾಗಧೋ ಯಯೌ ॥ ೧೪

ಬಿಟ್ಟು ಪದ್ಮಪೇಶಲಗಳಿಂದಲೇ ಬಹುಯೋಜನ ದೂರ ಧಾವಿಸಿದರು (೮). ಪಲಾಯನ ಮಾಡುತ್ತಿದ್ದ ರಾಮಕೃಷ್ಣರನ್ನು ನೋಡಿ ಬಲಿಷ್ಠನಾದ ಮಾಗಧನು ಗಟ್ಟಿಯಾಗಿ ನಕ್ಕು, ರಥಸೇನೆಗಳೊಡನೆ ಅವರನ್ನು ಬೆನ್ನಟ್ಟಿ ಧಾವಿಸಿದನು. ಜಗದೀಶರಾದ ಅವರ ಆಳವೇನೆಂಬುದು ಮಾಗಧನಿಗೆ ತಿಳಿಯದು (೯). ಬಲರಾಮಕೇಶವರು ಬಹುದೂರ ಓಡಿ ಬಳಲಿ ಉನ್ನತವಾದ ಪ್ರವರ್ಷಣವೆಂಬ ಪರ್ವತವನ್ನು ಹತ್ತಿದರು ಆ ಪರ್ವತದಲ್ಲಿ ಭಗವಾನಿಂದ್ರನು ಸದಾ ಮಳೆಗರೆಯುತ್ತಾನೆ (೧೦). ಪರ್ವತದಲ್ಲಿ ಅವರು ಅಡಗಿದ್ದಾರೆಂಬುದನ್ನರಿತು ಜರಾಸಂಧನು ಎಷ್ಟು ಹುಡುಕಿದರೂ ಅವರ ಸುಳಿವು ಸಿಗಲಿಲ್ಲ. ಆಗ ಮಗಧ ರಾಜನು ಸುತ್ತಲೂ ಕಟ್ಟಿಗೆಗಳಿಗೆ ಬೆಂಕಿಯಿಟ್ಟು ಬೆಟ್ಟವನ್ನು ಸುಟ್ಟನು (೧೧). ಆ ಸಮಯದಲ್ಲಿ ಒಂದು ಕಡೆ ಉರಿಯುತ್ತಿದ್ದ ಹನ್ನೊಂದು ಯೋಜನದಷ್ಟು ಎತ್ತರವಿರುವ ಗಿರಿ ಶಿಖರದಿಂದ ಶತ್ರುಸೈನಿಕರಿಗೂ ಮಾಗಧನಿಗೂ ಕಾಣದಂತೆ ಬಲರಾಮಕೇಶವರು ನೆಲಕ್ಕೆ ಧುಮುಕಿ ಸಮುದ್ರವೇ ಪರಿಖೆಯಾಗಿರುವ ತಮ್ಮ ದ್ವಾರಕಾನಗರಕ್ಕೆ ಬಂದರು (೧೨-೧೩). ಅತ್ತ ಜರಾಸಂಧನು ಬೆಟ್ಟದಲ್ಲಿ ಬಲ

ಆನರ್ತಾಧಿಪತಿಃ ಶ್ರೀಮಾನ್ ರೈವತೋ ರೇವತೀಂ ಸುತಾಮ್ ।
ಬ್ರಹ್ಮಣಾ ಚೋದಿತಃ ಪ್ರಾದಾದ್ ಬಲಾಯೇತಿ ಪುರೋದಿತಮ್ ॥ ೧೫

ಭಗವಾನಪಿ ಗೋವಿಂದ ಉಪಯೇಮೇ ಕುರೂದ್ವಹ ।
ವೈದರ್ಭೀಂ ಭೀಷ್ಮಕಸುತಾಂ ಶ್ರಿಯೋ ಮಾತ್ರಾಂ ಸ್ವಯಂವರೇ ॥ ೧೬

ಪ್ರಮಥ್ಯ ತರಸಾ ರಾಜ್ಞಃ ಶಾಲ್ವಾದೀಂಶ್ಚೈದ್ಯಪಕ್ಷಗಾನ್ ।
ಪಶ್ಯತಾಂ ಸರ್ವಲೋಕಾನಾಂ ತಾರ್ಕ್ಷ್ಯಪುತ್ರಃ ಸುಧಾಮಿವ ॥ ೧೭

ರಾಜೋವಾಚ-
ಭಗವಾನ್ ಭೀಷ್ಮಕಸುತಾಂ ರುಕ್ಮಿಣೀಂ ರುಚಿರಾನನಾಮ್ ।
ರಾಕ್ಷಸೇನ ವಿಧಾನೇನ ಉಪಯೇಮ ಇತಿ ಶ್ರುತಮ್ ॥ ೧೮

ಭಗವನ್ ಶ್ರೋತುಮಿಚ್ಛಾಮಿ ಕೃಷ್ಣಸ್ಯಾಮಿತತೇಜಸಃ ।
ಯಥಾ ಮಾಗಧಶಾಲ್ವಾದೀನ್ ಜಿತ್ವಾ ಕನ್ಯಾಮುಪಾಹರತ್ ॥ ೧೯

ರಾಮಕೇಶವರು ಸುಟ್ಟು ಹೋದರೆಂದು ತಪ್ಪಾಗಿ ತಿಳಿದುಕೊಂಡು, ಮಹತ್ತರವಾದ ತನ್ನ ಸೇನೆಯೊಡನೆ ಮಗಧ ದೇಶಕ್ಕೆ ಹೋದನು (೧೪). ಪರೀಕ್ಷಿತರಾಜ, ಆನರ್ತದೇಶಾಧಿ ಪತಿಯಾದ ಶ್ರೀಮಾನ್ ರೈವತನು ಬ್ರಹ್ಮನಿಂದ ಪ್ರೇರಿತನಾಗಿ ತನ್ನ ಮಗಳಾದ ರೇವತಿಯನ್ನು ಬಲರಾಮನಿಗೆ ಮದುವೆ ಮಾಡಿಕೊಟ್ಟನೆಂದು ಹಿಂದೆ ಹೇಳಿದ್ದೇನೆ[೧] (೧೫). ಭಗವಾನ್ ಗೋವಿಂದನೂ ಸಹ ಭೀಷ್ಮಕರಾಜನ ಸುತೆಯು ಲಕ್ಷ್ಮೀದೇವಿಯ ಅಂಶಸಂಭೂತಳೂ ಆದ ವೈದರ್ಭಿಯನ್ನು (ರುಕ್ಮಿಣಿಯನ್ನು) ಸ್ವಯಂವರದಲ್ಲಿ ಮದುವೆಯಾದನು (೧೬). ಶಿಶುಪಾಲನ ಪಕ್ಷೀಯರಾದ ಸಾಲ್ವಾದಿ ಭೂಪತಿಗಳನ್ನು ಪರಾಕ್ರಮದಿಂದ ತರಿದಟ್ಟಿ ಗರುಡನು ಸುಧೆಯನ್ನು ತಂದಂತೆ ಸಕಲ ಜನರೂ ನೋಡುತ್ತಿರುವಾಗಲೇ ವೈದರ್ಭಿಯನ್ನು ತಂದು ಮದುವೆಯಾದನು (೧೭). ಆಗ ಪರೀಕ್ಷಿತನು ಹೇಳಿದನು: ''ಭೀಷ್ಮಕಸುತೆಯೂ ಸುಂದರಾನನೆಯೂ ಆದ ರುಕ್ಮಿಣಿಯನ್ನು ಭಗವಂತನು ರಾಕ್ಷಸವಿಧಿಯಿಂದ ಮದುವೆಯಾದನೆಂದು ಕೇಳಿದನು. ಅಪಾರ

---

೧. ಈ ವೃತ್ತಾಂತವು ನವಮಸ್ಕಂಧದ ತೃತೀಯಾಧ್ಯಾಯದಲ್ಲಿ ಬಂದಿದೆ.

ಬ್ರಹ್ಮನ್ ಕೃಷ್ಣಕಥಾಃ ಪುಣ್ಯಾ ಮಾಧ್ವೀರ್ಲೋಕಮಲಾಪಹಾಃ।
ಕೋ ನು ತೃಪ್ಯೇತ ಶೃಣ್ವಾನಃ ಶ್ರುತಜ್ಞೋ ನಿತ್ಯನೂತನಾಃ॥ ೨೦

ಶ್ರೀಶುಕ ಉವಾಚ-

ರಾಜಾಸೀದ್ ಭೀಷ್ಮಕೋ ನಾಮ ವಿದರ್ಭಾಧಿಪತಿರ್ಮಹಾನ್।
ತಸ್ಯ ಪಂಚಾಭವನ್ ಪುತ್ರಾಃ ಕನ್ಯೈಕಾಚ ವರಾನನಾ॥ ೨೧

ರುಕ್ಮ್ಯಗ್ರಜೋ ರುಕ್ಮರಥೋ ರುಕ್ಮಬಾಹುರನಂತರಃ।
ರುಕ್ಮಕೇಶೋ ರುಕ್ಮಮಾಲೀ ರುಕ್ಮಿಣ್ಯೇಷಾಂ ಸ್ವಸಾ ಸತೀ॥ ೨೨

ಸೋಪಶ್ರುತ್ಯ ಮುಕುಂದಸ್ಯ ರೂಪವೀರ್ಯಗುಣಶ್ರಿಯಃ।
ಗೃಹಾಗತೈರ್ಗೀಯಮಾನಾಸ್ತಂ ಮೇನೇ ಸದೃಶಂ ಪತಿಮ್॥ ೨೩

ತಾಂ ಬುದ್ಧಿಲಕ್ಷಣೌದಾರ್ಯರೂಪಶೀಲಗುಣಾಶ್ರಯಾಮ್।
ಕೃಷ್ಣಶ್ಚ ಸದೃಶೀಂ ಭಾರ್ಯಾಂ ಸಮುದ್ವೋಢುಂ ಮನೋ ದಧೇ॥ ೨೪

ತೇಜೋನಿಧಿಯಾದ ಶ್ರೀಕೃಷ್ಣನು ಮಾಗಧಸಾಲ್ವ-ಮೊದಲಾದವರನ್ನು ಜಯಿಸಿ ಆ ಕನ್ಯೆಯನ್ನು ಕರೆದೊಯ್ದ ವಿಧಾನವನ್ನು ಕೇಳಲಿಚ್ಛಿಸುವೆನು (೧೮-೧೯). ಬ್ರಹ್ಮರ್ಷಿಗಳೆ, ಶ್ರೀ ಕೃಷ್ಣನ ಚಾರಿತ್ರಗಳು ಪವಿತ್ರವಾದವು. ರಮಣೀಯವಾದವು, ಲೋಕಪಾವನವಾದವು. ಕೇಳಿ ತಿಳಿಯುವುದರಲ್ಲಿ ಸಾರಜ್ಞನಾದ ಯಾವನು ತಾನೆ ನಿತ್ಯನೂತನವಾಗಿ ತೋರುವ ಅವನ್ನು ಕೇಳಿ ತೃಪ್ತಿಗೊಂಡಾನು? ಎಂದನು (೨೦). ಆಗ ಶುಕಮುನಿಗಳು ಹೇಳಿದರು : ವಿದರ್ಭದೇಶದಲ್ಲಿ ಭೀಷ್ಮಕನೆಂಬ ಮಹಾರಾಜನಿದ್ದನು. ಅವನಿಗೆ ಐವರು ಗಂಡು ಮಕ್ಕಳೂ ಸುಂದರಿಯಾದ ಒಬ್ಬ ಹೆಣ್ಣು ಮಗಳೂ ಇದ್ದರು (೨೧). ಅವರಲ್ಲಿ ಹಿರಿಯನಾದವನು ರುಕ್ಮಿ, ಅನಂತರ ರುಕ್ಮರಥ, ರುಕ್ಮಬಾಹು, ರುಕ್ಮಕೇಶ ಮತ್ತು ರುಕ್ಮಮಾಲಿ ಎಂಬುವರು. ಇವರಿಗೆ ರುಕ್ಮಿಣಿ ಎಂಬ ಸಾಧ್ವಿಯಾದ ತಂಗಿ ಇದ್ದಳು (೨೨). ಅರಮನೆಗೆ ಬಂದ ಜನರು ಮುಕುಂದನ ರೂಪ, ಪರಾಕ್ರಮ, ಗುಣ, ಸಂಪತ್ತುಗಳನ್ನು ಹಾಡಿ ಹೊಗಳುವುದನ್ನು ಕೇಳಿ ರುಕ್ಮಿಣಿಯು, ಮುಕುಂದನೇ ತನಗೆ ಸರಿಯಾದ ಪತಿಯೆಂದು ಭಾವಿಸಿದಳು (೨೩). ಇತ್ತ ಶ್ರೀಕೃಷ್ಣನೂ ಸಹ ರುಕ್ಮಿಣಿಯಲ್ಲಿ ಬುದ್ಧಿ,

ಬಂಧೂನಾಮಿಚ್ಛತಾಂ ದಾತುಂ ಕೃಷ್ಣಾಯ ಭಗಿನೀಂ ನೃಪ ।
ತತೋ ನಿವಾರ್ಯ ಕೃಷ್ಣದ್ವಿಡ್ ರುಕ್ಮೀ ಚೈದ್ಯಮಮನ್ಯತ ॥ ೨೫

ತದವೇತ್ಯಾಸಿತಾಪಾಂಗೀ ವೈದರ್ಭೀ ದುರ್ಮನಾ ಭೃಶಮ್ ।
ವಿಚಿಂತ್ಯಾಪ್ತಂ ದ್ವಿಜಂ ಕಂಚಿತ್ ಕೃಷ್ಣಾಯಾ
ಪ್ರಾಹಿಣೋದ್ ದ್ರುತಮ್ ॥ ೨೬

ದ್ವಾರಕಾಂ ಸ ಸಮಭ್ಯೇತ್ಯ ಪ್ರತೀಹಾರೈಃ ಪ್ರವೇಶಿತಃ ।
ಅಪಶ್ಯದಾದ್ಯಂ ಪುರುಷಮಾಸೀನಂ ಕಾಂಚನಾಸನೇ ॥ ೨೭

ದೃಷ್ಟ್ವಾ ಬ್ರಹ್ಮಣ್ಯದೇವಸ್ತಮವರುಹ್ಯ ನಿಜಾಸನಾತ್ ।
ಉಪವೇಶ್ಯಾರ್ಹಯಾಂಚಕ್ರೇ ಯಥಾಽಽತ್ಮಾನಂ ದಿವೌಕಸಃ ॥ ೨೮

ತಂ ಭುಕ್ತವಂತಂ ವಿಶ್ರಾಂತಮುಪಗಮ್ಯ ಸತಾಂ ಗತಿಃ ।
ಪಾಣಿನಾಭಿಮೃಶನ್ ಪಾದಾವವ್ಯಗ್ರಸ್ತಮಪೃಚ್ಛತ ॥ ೨೯

ಲಕ್ಷಣ, ಔದಾರ್ಯ, ರೂಪ, ಶೀಲ, ಗುಣಗಳು ನೆಲೆಸಿವೆಯೆಂಬುದನ್ನು ಕೇಳಿ ಅವಳು ತನಗೆ ಅನುರೂಪಳಾದ ಪತ್ನಿಯೆಂದು ಭಾವಿಸಿ ಅವಳನ್ನು ವಿವಾಹವಾಗ ಬೇಕೆಂದು ಸಂಕಲ್ಪಿಸಿಕೊಂಡನು (೨೪). ಪರೀಕ್ಷಿತರಾಜ, ರುಕ್ಮಿಣಿಯ ಬಂಧು ಗಳೆಲ್ಲರೂ ಅವಳನ್ನು ಶ್ರೀಕೃಷ್ಣನಿಗೆ ಕೊಡಲು ಒಪ್ಪಿದರು. ಆದರೆ ಕೃಷ್ಣ ದ್ವೇಷಿಯಾದ ರುಕ್ಮಿಯು ಅವರನ್ನು ತಡೆದು ತನ್ನ ತಂಗಿಗೆ ಶಿಶುಪಾಲನೇ ಸರಿಯಾದ ವರನೆಂದು ನಿಶ್ಚಯಿಸಿದನು (೨೫). ಇದನ್ನರಿತು ಕಪ್ಪಾದ ಕುಡಿ ನೋಟವುಳ್ಳ ರುಕ್ಮಿಣಿಯು ಅತ್ಯಂತ ದುಃಖಿತಳಾಗಿ ತನ್ನಲ್ಲಿಯೇ ಚಿಂತಿಸಿ, ಆಪ್ತನಾದ ಒಬ್ಬ ಬ್ರಾಹ್ಮಣನನ್ನು ಶ್ರೀಕೃಷ್ಣನ ಬಳಿಗೆ ತ್ವರೆಯಿಂದ ಕಳಿಸಿದಳು (೨೬). ಆ ಬ್ರಾಹ್ಮಣನು ದ್ವಾರಕೆಗೆ ಬಂದು ದ್ವಾರಪಾಲರಿಂದ ಒಳಗೆ ಪ್ರವೇಶಿತನಾಗಿ, ಸುವರ್ಣಪೀಠದಲ್ಲಿ ಮಂಡಿಸಿದ್ದ ಆದಿಪುರುಷನಾದ ಶ್ರೀಕೃಷ್ಣನನ್ನು ಕಂಡನು (೨೭). ಬ್ರಾಹ್ಮಣನನ್ನು ದೇವತೆಯೆಂದು ತಿಳಿಯುವ ಶ್ರೀಕೃಷ್ಣನು ಆತನನ್ನು ನೋಡಿ ತನ್ನ ಪೀಠದಿಂದಿಳಿದು ಆಸನದಲ್ಲಿ ಕುಳ್ಳಿರಿಸಿ, ತನ್ನನ್ನು ದೇವತೆಗಳು ಹೇಗೆ ಗೌರವಿಸಿ ಪೂಜಿಸುವರೋ ಹಾಗೆ ಆ ಬ್ರಾಹ್ಮಣನನ್ನು

ಕಚ್ಚಿದ್ ದ್ವಿಜವರಶ್ರೇಷ್ಠ ಧರ್ಮಸ್ತೇ ವೃದ್ಧಸಮ್ಮತಃ।
ವರ್ತತೇ ನಾತಿಕೃಚ್ಛ್ರೇಣ ಸಂತುಷ್ಟಮನಸಃ ಸದಾ ॥ ೩೦

ಸಂತುಷ್ಟೋ ಯರ್ಹಿ ವರ್ತೇತ ಬ್ರಾಹ್ಮಣೋ ಯೇನಕೇನಚಿತ್ ।
ಅಹೀಯಮಾನಃ ಸ್ವಾದ್ಧರ್ಮಾತ್ ಸ ಹ್ಯಸ್ಯಾಖಿಲಕಾಮಧುಕ್ ॥ ೩೧

ಅಸಂತುಷ್ಟೋಽಸಕೃಲ್ಲೋಕಾನಾಪ್ನೋತ್ಯಪಿ ಸುರೇಶ್ವರಃ।
ಅಕಿಂಚನೋಽಪಿ ಸಂತುಷ್ಟಃ ಶೇತೇ ಸರ್ವಾಂಗವಿಜ್ವರಃ ॥ ೩೨

ವಿಪ್ರಾನ್ ಸ್ವಲಾಭಸಂತುಷ್ಟಾನ್ ಸಾಧೂನ್ ಭೂತಸುಹೃತ್ತಮಾನ್ ।
ನಿರಹಂಕಾರಿಣಃ ಶಾಂತಾನ್ ನಮಸ್ಯೇ ಶಿರಸಾಽಸಕೃತ್ ॥ ೩೩

ಕಚ್ಚಿದ್ ವಃ ಕುಶಲಂ ಬ್ರಹ್ಮನ್ ರಾಜತೋ ಯಸ್ಯ ಹಿ ಪ್ರಜಾಃ।
ಸುಖಂ ವಸಂತಿ ವಿಷಯೇ ಪಾಲ್ಯಮಾನಃ ಸ ಮೇ ಪ್ರಿಯಃ ॥ ೩೪

ಪೂಜಿಸಿದನು (೨೮). ಅನಂತರ ಆ ದ್ವಿಜನು ಊಟಮಾಡಿ ವಿಶ್ರಮಿಸಿದ ಮೇಲೆ, ಸಜ್ಜನರಿಗೆ ಗತಿಯೆನಿಸಿದ ಮುಕುಂದನು ತನ್ನ ಕೈಯಿಂದ ದ್ವಿಜನ ಕಾಲುಗಳನ್ನು ನಿಶ್ಚಿಂತೆಯಿಂದ ನೀವುತ್ತ ಕೇಳಿದನು (೨೯). "ಹೇ ಬ್ರಾಹ್ಮಣೋತ್ತಮ, ಹಿರಿಯರು ಪಾಲಿಸಿಕೊಂಡು ಬಂದ ಸ್ವಧರ್ಮವನ್ನು ನಡೆಸುವುದು ಬಹಳ ಕಠಿಣವಾಗಿ ತೋರುವುದಿಲ್ಲವಷ್ಟೆ? ಸದಾ ಸಂತೃಪ್ತನಾಗಿ ಇರುವೆಯಷ್ಟೆ? (೩೦). ವೇದಜ್ಞನಾದವನು ಯದೃಚ್ಛಾಲಾಭದಿಂದ ಸಂತುಷ್ಟನಾಗಿ ತನ್ನ ಧರ್ಮವನ್ನು ತಪ್ಪದೆ ನಡೆಸುತ್ತಿರಬೇಕು. ಧರ್ಮವೇ ಆತನಿಗೆ ಸಕಲೇಷ್ಟಗಳನ್ನು ಕೊಡುವ ಕಾಮಧೇನು (೩೧). ತೃಪ್ತಿ ಇಲ್ಲದವನು ದೇವೇಂದ್ರನೇ ಆದರೂ ದೇಶದಿಂದ ದೇಶಕ್ಕೆ ಮತ್ತೆ ಮತ್ತೆ ಸುತ್ತುತ್ತಲೇ ಇರುವನು. ತೃಪ್ತಿಯುಳ್ಳವನು ಬಡವನಾದರೂ ಸರ್ವಾಂಗಗಳಿಗೂ ನೋವಿಲ್ಲದಂತೆ ಸುಖವಾಗಿ ಇರುವನು (೩೨). ತಾನಾಗಿ ದೊರಕಿದ್ದರಿಂದ ಸಂತೃಪ್ತರೂ ಸಾಧುಗಳೂ ಭೂತದಯಾಪರರೂ ನಿರಹಂಕಾರಿಗಳೂ ಶಾಂತರೂ ಆದ ವಿಪ್ರರಿಗೆ ನಾನು ತಲೆಬಾಗಿ ಬಾರಿಬಾರಿಗೂ ನಮಸ್ಕರಿಸುತ್ತೇನೆ (೩೩). ಬ್ರಾಹ್ಮಣೋತ್ತಮ, ರಾಜನಿಂದ ನಿಮಗೆ ಕ್ಷೇಮ

ಯತಸ್ತ್ವಮಾಗತೋ ದುರ್ಗಂ ನಿಸ್ತೀರ್ಯೇಹ ಯದಿಚ್ಛಯಾ ।
ಸರ್ವಂ ನೋ ಬ್ರೂಹ್ಯಗುಹ್ಯಂ ಚೇತ್ ಕಿಂ ಕಾರ್ಯಂ ಕರವಾಮ ತೇ ॥

ಏವಂ ಸಂಪೃಷ್ಟಸಂಪ್ರಶ್ನೋ ಬ್ರಾಹ್ಮಣಃ ಪರಮೇಷ್ಠಿನಾ ।
ಲೀಲಾಗೃಹೀತದೇಹೇನ ತಸ್ಮೈ ಸರ್ವಮವರ್ಣಯತ್ ॥ ೩೬

ರುಕ್ಮಿಣ್ಯುವಾಚ-

ಶ್ರುತ್ವಾ ಗುಣಾನ್ ಭುವನಸುಂದರ ಶೃಣ್ವತಾಂ ತೇ
ನಿರ್ವಿಶ್ಯ ಕರ್ಣವಿವರೈರ್ಹರತೋಽಂಗತಾಪಮ್ ।
ರೂಪಂ ದೃಶಾಂ ದೃಶಿಮತಾಮಖಿಲಾರ್ಥಲಾಭಂ
ತ್ವಯ್ಯಚ್ಯುತಾವಿಶತಿ ಚಿತ್ತಮಪತ್ರಪಂ ಮೇ ॥ ೩೭

ವಾಗುವುದಷ್ಟೆ? ಯಾವಾತನ ರಾಜ್ಯದಲ್ಲಿ ಪ್ರಜೆಗಳು ಪಾಲಿತರಾಗಿ ನೆಮ್ಮದಿಯಿಂದ ಇರುವರೋ, ಆ ರಾಜನು ನನಗೆ ಪ್ರೀತಿಪಾತ್ರನು (೩೪). ದುರ್ಗಮವಾದ ದಾರಿಯನ್ನು ದಾಟಿ ಯಾವ ಉದ್ದೇಶದಿಂದ ನೀನು ಇಲ್ಲಿಗೆ ಬಂದಿರುವೆ? ರಹಸ್ಯವಲ್ಲದಿದ್ದರೆ ಎಲ್ಲವನ್ನೂ ತಿಳಿಸು. ನಿನ್ನ ಯಾವ ಕಾರ್ಯವನ್ನು ನಡೆಸಿಕೊಡಬೇಕು ?'' ಎಂದು ಕೇಳಿದನು (೩೫). ಹೀಗೆ ಲೀಲಾರ್ಥವಾಗಿ ದೇಹವನ್ನು ಧರಿಸಿದ್ದ ಪರಮೇಶ್ವರನಾದ ಮುಕುಂದನು ಕೇಳಬೇಕಾದ್ದನ್ನು ಕೇಳಲಾಗಿ ಆ ಬ್ರಾಹ್ಮಣನು ಎಲ್ಲಸಂದರ್ಭವನ್ನೂ ಆತನಿಗೆ ವಿವರಿಸಿದನು. (ಮತ್ತು ರುಕ್ಮಿಣಿಯು ರಹಸ್ಯವಾಗಿ ಬರೆದು ಕಳಿಸಿದ ಪತ್ರದ ಮುದ್ರೆಯನ್ನು ಶ್ರೀಕೃಷ್ಣನ ಅನುಜ್ಞೆಯಿಂದ ತೆರೆದು ಆ ಪತ್ರವನ್ನು ಓದಿದನು) (೩೬). ಪತ್ರದಲ್ಲಿ ರುಕ್ಮಿಣಿಯು ಹೀಗೆ ಹೇಳಿದ್ದಳು : ''ಶ್ರೀಕೃಷ್ಣಭುವನಮೋಹನರೂಪಶಾಲಿ, ಕೇಳುವವರ ಕಿವಿಗಳಲ್ಲಿಳಿದು ಅವರ ಅಂಗತಾಪವನ್ನು ಪರಿಹರಿಸುವ ನಿನ್ನ ಸದ್ಗುಣಗಳನ್ನೂ ಕಣ್ಣದ್ದವರ ಕಣ್ಣಿಗೆ ಸರ್ವಾರ್ಥಲಾಭವನ್ನು ಕೊಡುವ ನಿನ್ನ ರೂಪವನ್ನೂ ಕೇಳಿ ತಿಳಿದಿದ್ದೇನೆ. ಆದ್ದರಿಂದ ಲಜ್ಜೆಗೆಟ್ಟ ನನ್ನ ಮನಸ್ಸು ನಿನ್ನಲ್ಲಿ ನೆಟ್ಟು ಹೋಗಿದೆ (೩೭).

ಕಾ ತ್ವಾಮುಕುಂದ ಮಹತೀ ಕುಲಶೀಲರೂಪ-
ವಿದ್ಯಾವಯೋದ್ರವಿಣಧಾಮಭಿರಾತ್ಮತುಲ್ಯಮ್ ।
ಧೀರಾ ಪತಿಂ ಕುಲವತೀ ನ ವೃಣೀತ ಕನ್ಯಾ
ಕಾಲೇ ನೃಸಿಂಹ ನರಲೋಕಮನೋಽಭಿರಾಮಮ್ ॥ ೩೮

ತನ್ಮೇ ಭವಾನ್ ಖಲು ವೃತಃ ಪತಿರಂಗ ಜಾಯಾ-
ಮಾತ್ಮಾರ್ಪಿತಶ್ಚ ಭವತೋಽತ್ರ ವಿಭೋ ವಿಧೇಹಿ
ಮಾ ವೀರಭಾಗಮಭಿಮರ್ಶತು ಚೈದ್ಯ ಆರಾದ್
ಗೋಮಾಯುವನ್ಮೃಗಪತೇರ್ಬಲಿಮಂಬುಜಾಕ್ಷ॥ ೩೯

ಪೂರ್ತೇಷ್ಟದತ್ತನಿಯಮವ್ರತದೇವವಿಪ್ರ-
ಗುರ್ವರ್ಚನಾದಿಭಿರಲಂ ಭಗವಾನ್ ಪರೇಶಃ।
ಆರಾಧಿತೋ ಯದಿ ಗದಾಗ್ರಜ ಏತ್ಯ ಪಾಣಿಂ
ಗೃಹ್ಣಾತು ಮೇ ನ ದಮಘೋಷಸುತಾದಯೋಽನ್ಯೇ ॥ ೪೦

ಹೇ ಪುರುಷೋತ್ತಮ, ಕುಲ ಶೀಲ ರೂಪ ವಿದ್ಯೆ ವಯಸ್ಸು ಧನ ಪ್ರಭಾವಗಳಲ್ಲಿ ನಿನಗೆ ನೀನೇ ಸಮನಾಗಿದ್ದೀಯೇ. ಹೀಗೆ ನಿರುಪಮನೂ ಮಾನವ ಲೋಕದ ಮನೋಭಿರಾಮನೂ ಆದ ನಿನ್ನನ್ನು ಮುಕುಂದ, ಉತ್ತಮಳೂ ಧೀರಳೂ ಕುಲೀನಳೂ ಆದ ಯಾವ ಕನ್ಯೆಯು, ತನ್ನ ವಿವಾಹಸಮಯ ಒದಗಿದಾಗ ಪತಿಯೆಂದು ವರಿಸದೆ ಇದ್ದಾಳು? (೩೮). ಆದ್ದರಿಂದ ಸ್ವಾಮಿ, ನೀನೇ ನನ್ನ ಪತಿಯೆಂದು ವರಿಸಿದ್ದೇನೆ. ನನ್ನನ್ನು ನಿನಗೆ ಒಪ್ಪಿಸಿದ್ದೇನೆ. ಇಲ್ಲಿಗೆ ಬಂದು ನನ್ನನ್ನು ಪತ್ನಿಯನ್ನಾಗಿ ಸ್ವೀಕರಿಸು. ಓ ಕಮಲನಯನ, ಮೃಗರಾಜನಾದ ಕಂಠೀರವನಿಗೆ ಅರ್ಪಿತವಾದ ಉಪಹಾರವನ್ನು ನರಿಯು ಮುಟ್ಟುವಂತೆ, ವೀರನಾದ ನಿನಗೆ ಸಲ್ಲತಕ್ಕ ನನ್ನನ್ನು ಚೈದ್ಯನು ಸಮೀಪಿಸಿ ಮುಟ್ಟದಿರಲಿ (೩೯). ಪೂರ್ತ[1], ಇಷ್ಟ[2] ನಿಯಮ, ವ್ರತಗಳಿಂದಲೂ ದೇವ ಬ್ರಾಹ್ಮಣ ಗುರು

---

೧ ವಾಪೀಕೂಪತಡಾಗಾದಿ ದೇವತಾಯತನಾನಿ ಚ ।
ಅನ್ನಪ್ರಾದಾನಮಾರಾಮಃ ಪೂರ್ತಮಿತ್ಯಭಿಧೀಯತೇ ॥

೨ ಅಗ್ನಿಹೋತ್ರಂ ತಪಃ ಸತ್ಯಂ ವೇದಾನಾಂ ಚೈವ ಪಾಲನಂ ।
ಆತಿಥ್ಯಂ ವೈಶ್ವದೇವಶ್ಚ ಇಷ್ಟಮಿತ್ಯಭಿಧೀಯತೇ ॥

ಶ್ವೋ ಭಾವಿನಿ ತ್ವಮಜಿತೋದ್ವಹನೇ ವಿದರ್ಭಾನ್
ಗುಪ್ತಃ ಸಮೇತ್ಯ ಪೃತನಾಪತಿಭಿಃ ಪರೀತಃ ।
ನಿರ್ಮಥ್ಯ ಚೈದ್ಯಮಗಧೇಂದ್ರಬಲಂ ಪ್ರಸಹ್ಯ
ಮಾಂ ರಾಕ್ಷಸೇನ ವಿಧಿನೋದ್ವಹ ವೀರ್ಯಶುಲ್ಕಾಮ್ ॥ ೪೧

ಅಂತಃಪುರಾಂತರಚರೀಮನಿಹತ್ಯ ಬಂಧೂಂ-
ಸ್ತ್ವಾಮುದ್ವಹೇ ಕಥಮಿತಿ ಪ್ರವದಾಮ್ಯುಪಾಯಮ್ ।
ಪೂರ್ವೇದ್ಯುರಸ್ತಿ ಮಹತೀ ಕುಲದೇವಿಯಾತ್ರಾ
ಯಸ್ಯಾಂ ಬಹಿರ್ನವವಧೂರ್ಗಿರಿಜಾಮುಪೇಯಾತ್ ॥ ೪೨

ಯಸ್ಯಾಂಘ್ರಿಪಂಕಜರಜಃಸ್ನಪನಂ ಮಹಾಂತೋ ।
ವಾಂಛಂತ್ಯುಮಾಪತಿರಿವಾತ್ಮತಮೋಽಪಹತ್ಯೈ ।
ಯರ್ಹ್ಯಂಬುಜಾಕ್ಷ ನ ಲಭೇಯ ಭವತ್ಪ್ರಸಾದಂ
ಜಹ್ಯಾಮಸೂನ್ ವ್ರತಕೃಶಾನ್ ಶತಜನ್ಮಭಿಃ ಸ್ಯಾತ್ ॥ ೪೩

ಸೇವೆಗಳಿಂದಲೂ ನಾನು ಭಗವಂತನನ್ನು ಆರಾಧಿಸಿರುವುದು ದಿಟವಾದರೆ, ಶ್ರೀಕೃಷ್ಣನು ಆಗಮಿಸಿ ನನ್ನ ಪಾಣಿಗ್ರಹಣವನ್ನು ಮಾಡಲಿ. ದಮಘೋಷಸುತ ಶಿಶುಪಾಲಾದಿಗಳು ಯಾರೂ ನನ್ನ ಪಾಣಿಯನ್ನು ಸ್ಪರ್ಶಿಸದಂತೆ ಆಗಲಿ (೪೦). ನಾಳೆ ನೆಡೆಯಲಿರುವ ವಿವಾಹ ಸಮಯದಲ್ಲಿ ಅಜಿತ, ನೀನು ಸೇನಾಪತಿಗಳಿಂದ ಪರಿವೃತನಾಗಿ ಗುಪ್ತವಾಗಿ ವಿದರ್ಭಕ್ಕೆ ಬಂದು ಶಿಶುಪಾಲ ಜರಾಸಂಧಾದಿಗಳ ಸೇನೆಯನ್ನು ಸದೆ ಬಡಿದು, ವೀರ್ಯವೇ ಶುಲ್ಕವಾಗಿ ಉಳ್ಳ ನನ್ನನ್ನು ರಾಕ್ಷಸ ವಿಧಿಯಿಂದ ಬಲಾತ್ಕಾರವಾಗಿ ಅಪಹರಿಸಿಕೊಂಡು ಹೋಗು ! (೪೧). 'ಬಂಧುಗಳನ್ನು ಸಂಹರಿಸದೆ ಅಂತಃ ಪುರದಲ್ಲಿರುವ ನನ್ನನ್ನು ಹೇಗೆ ಒಯ್ಯ ಬೇಕೆಂದು' ನೀನು ಚಿಂತಿಸುವುದಾದರೆ, ಅದಕ್ಕೊಂದು ಉಪಾಯವನ್ನು ಹೇಳುತ್ತೇನೆ ! ಮದುವೆಯ ಹಿಂದಿನ ದಿನ ಮದುವಣಗಿತ್ತಿಯು ಅಂಬಿಕೆಯನ್ನು ಪೂಜಿಸುವುದಕ್ಕಾಗಿ ನಗರದ ಹೊರಗಡೆ ಇರುವ ಕುಲದೇವತೆಯ ಗುಡಿಗೆ ಹೋಗುವ ಒಂದು ದೊಡ್ಡ ಉತ್ಸವ ಇರುತ್ತದೆ (ಕುಲದೇವತೆಯ ಗುಡಿಯಿಂದ ನನ್ನನ್ನು ಅಪಹರಿಸಬಹುದು) (೪೨). ಓ ಪುಂಡರೀಕಾಕ್ಷ, ಮಹಾತ್ಮರಾದ ಯೋಗಿಗಳೂ ಸಹ ಪಾರ್ವತೀಪತಿಯಂತೆ ತಮ್ಮ ಪಾಪವನ್ನು ಕಳೆದು

ಬ್ರಾಹ್ಮಣ ಉವಾಚ-

ಇತ್ಯೇತೇ ಗುಹ್ಯಸಂದೇಶಾ ಯದುದೇವ ಮಯಾऽऽಹೃತಾಃ।
ವಿಮೃಶ್ಯ ಕರ್ತುಂ ಯಚ್ಚಾತ್ರ ಕ್ರಿಯತಾಂ ತದನಂತರಮ್ ॥ ೪೪

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ದ್ವಿಪಂಚಾಶತ್ತಮಾಧ್ಯಾಯಃ

ತ್ರಿಪಂಚಾಶತ್ತಮಾಧ್ಯಾಯಃ

ಶ್ರೀಶುಕ ಉವಾಚ-

ವೈದರ್ಭ್ಯಾಃ ಸ ತು ಸಂದೇಶಂ ನಿಶಮ್ಯ ಯದುನಂದನಃ।
ಪ್ರಗೃಹ್ಯ ಪಾಣಿನಾ ಪಾಣಿಂ ಪ್ರಹಸನ್ನಿದಮಬ್ರವೀತ್ ॥ ೧

ಕೊಳ್ಳುವುದಕ್ಕಾಗಿ ನಿನ್ನ ಪಾದಪದ್ಮದ ಧೂಳಿಯಲ್ಲಿ ಸ್ನಾನ ಮಾಡಲು ಬಯಸುವವರು. ಅಂತಹ ನಿನ್ನ ಅನುಗ್ರಹವು ದೊರಕದೆ ಹೋದರೆ ಉಪವಾಸಾದಿಗಳಿಂದ ದುರ್ಬಲವಾದ ಪ್ರಾಣವನ್ನು ನಾನು ಬಿಡುವುದೇ ನಿಶ್ಚಯ. ನಿನ್ನ ಅನುಗ್ರಹವು ದೊರಕುವವರೆಗೆ ನೂರಾರು ಜನ್ಮಗಳನ್ನೆತ್ತಿದರೂ ಹೀಗೆಯೇ ಪ್ರಾಣವನ್ನು ಬಿಡುತ್ತಿರುವೆನು ! '' ಎಂದು ಬರೆದಿದ್ದಳು (೪೩). ಅನಂತರ ಬ್ರಾಹ್ಮಣನು ''ಶ್ರೀಕೃಷ್ಣ ಈ ರೀತಿಯಲ್ಲಿ ರುಕ್ಮಿಣಿಯ ಗುಪ್ತ ಸಂದೇಶಗಳನ್ನು ತಂದಿದ್ದೇನೆ. ಈ ವಿಷಯವಾಗಿ ನೀನು ಪರಿಶೀಲಿಸಿ ಮುಂದೆ ಯುಕ್ತವಾದದ್ದನ್ನು ಮಾಡು'' ಎಂದನು (೪೪).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಐವತ್ತೆರಡನೆಯ ಅಧ್ಯಾಯ

ಅಧ್ಯಾಯ ೫೩

ಶ್ರೀಕೃಷ್ಣಬಲರಾಮರು ಕುಂಡಿನಪುರಕ್ಕೆ ಹೋಗುವುದು. ರುಕ್ಮಿಣಿಯ ವಿವಾಹ ಸಿದ್ಧತೆ. ಅಂಬಿಕಾ ಪೂಜೆ. ಶ್ರೀಕೃಷ್ಣನಿಂದ ರುಕ್ಮಿಣಿಯ ಅಪಹರಣ.

ವೈದರ್ಭಿಯ ಸಂದೇಶವನ್ನು ಕೇಳಿ ಯದುನಂದನನು ಆ ವಿಪ್ರನ ಕೈಯನ್ನು

ಶ್ರೀಭಗವಾನುವಾಚ-

ತಥಾಹಮಪಿ ತಚ್ಚಿತ್ತೋ ನಿದ್ರಾಂ ಚ ನ ಲಭೇ ನಿಶಿ ।
ವೇದಾಹಂ ರುಕ್ಮಿಣಾ ದ್ವೇಷಾನ್ಮಮೋದ್ವಾಹೋ ನಿವಾರಿತಃ ॥ ೨

ತಾಮಾನಯಿಷ್ಯ ಉನ್ಮಥ್ಯ ರಾಜನ್ಯಾಪಸದಾನ್ ಮೃಧೇ ।
ಮತ್ಪರಾಮನವದ್ಯಾಂಗೀಮೇಧಸೋಽಗ್ನಿಶಿಖಾಮಿವ ॥ ೩

ಶ್ರೀಶುಕ ಉವಾಚ-

ಉದ್ವಾಹರ್ಕ್ಷಂ ಚ ವಿಜ್ಞಾಯ ರುಕ್ಮಿಣ್ಯಾ ಮಧುಸೂದನಃ ।
ರಥಂ ಸಂಯುಜ್ಯತಾಮಾಶು ದಾರುಕೇತ್ಯಾಹ ಸಾರಥಿಮ್ ॥ ೪

ಸ ಚಾಶ್ವೈಃ ಶೈಬ್ಯಸುಗ್ರೀವಮೇಘಪುಷ್ಪಬಲಾಹಕೈಃ ।
ಯುಕ್ತಂ ರಥಮುಪಾನೀಯ ತಸ್ಥೌ ಪ್ರಾಂಜಲಿರಗ್ರತಃ ॥ ೫

ಆರುಹ್ಯ ಸ್ಯಂದನಂ ಶೌರಿರ್ದ್ವಿಜಮಾರೋಪ್ಯ ತೂರ್ಣಗೈಃ ।
ಆನರ್ತಾದೇಕರಾತ್ರೇಣ ವಿದರ್ಭಾನಗಮದ್ಧಯೈಃ ॥ ೬

ತನ್ನ ಕೈಯಿಂದ ಹಿಡಿದುಕೊಂಡು ನಗುತ್ತ ಹೀಗೆಂದನು (೧). ''ವಿಪ್ರೋತ್ತಮ, ನನ್ನ ಮನಸ್ಸೂ ಅವಳಲ್ಲಿ ನೆಟ್ಟು ಹೋಗಿದೆ. ರಾತ್ರಿ ನನಗೆ ನಿದ್ರೆಯೇ ಬರುವುದಿಲ್ಲ! ರುಕ್ಮಿಯು ನನ್ನ ಮೇಲಿನ ದ್ವೇಷದಿಂದ ನನ್ನೊಡನೆ ಆಗಬೇಕಾದ ವಿವಾಹವನ್ನು ತಡೆದಿದ್ದಾನೆಂಬುದು ನನಗೆ ಗೊತ್ತಾಗಿದೆ (೨). ಕ್ಷುದ್ರರಾದ ಆ ಕ್ಷತ್ರಿಯರನ್ನು ರಣರಂಗದಲ್ಲಿ ಕಡೆದು, ಅರಣಿಗಳನ್ನು ಕಡೆದು ಅಗ್ನಿಜ್ವಾಲೆಯನ್ನು ಹೊರ ತರುವಂತೆ ನನ್ನಲ್ಲಿ ಅನುರಕ್ತಳಾದ ರುಕ್ಮಣಿಯನ್ನು ಕರೆತರುವೆನು'' ಎಂದು ನುಡಿದನು (೩). ಅನಂತರ ಮಧುಸೂದನನು ರುಕ್ಮಣಿಯ ವಿವಾಹಕ್ಕೆ ಗೊತ್ತಾದ ನಕ್ಷತ್ರವನ್ನು ಕೇಳಿ ತಿಳಿದು, ತನ್ನ ಸಾರಥಿಯನ್ನು ಕರೆದು ''ದಾರುಕ, ಬೇಗನೆ ರಥವನ್ನು ಸಜ್ಜುಗೊಳಿಸು'' ಎಂದು ಆಜ್ಞಾಪಿಸಿದನು (೪). ಆಗ ದಾರುಕನು ಶೈಬ್ಯ, ಸುಗ್ರೀವ, ಮೇಘಪುಷ್ಪ, ಬಲಾಹಕ ಎಂಬ ನಾಲ್ಕು ಕುದುರೆಗಳನ್ನು ಹೂಡಿ ಸಜ್ಜಾದ ರಥವನ್ನು ತಂದು ಶ್ರೀಕೃಷ್ಣನೆದುರಿಗೆ ಕೈಮುಗಿದು ನಿಂತುಕೊಂಡನು (೫). ಶ್ರೀಕೃಷ್ಣನು ರಥವನ್ನೇರಿ ಆ ಬ್ರಾಹ್ಮಣನನ್ನೂ ರಥದಲ್ಲಿ ಕುಳ್ಳಿರಿಸಿಕೊಂಡು ವೇಗದಿಂದೋಡುವ ಅಶ್ವಗಳ ನೆರವಿನಿಂದ ಒಂದು ರಾತ್ರಿಯಲ್ಲಿಯೇ

ರಾಜಾ ಸ ಕುಂಡಿನಪತಿಃ ಪುತ್ರಸ್ನೇಹವಶಂ ಗತಃ ।
ಶಿಶುಪಾಲಾಯ ಸ್ವಾಂ ಕನ್ಯಾಂ ದಾಸ್ಯನ್ ಕರ್ಮಾಣ್ಯಕಾರಯತ್ ॥ ೭

ಪುರಂ ಸಂಮೃಷ್ಟಸಂಸಿಕ್ತಮಾರ್ಗರಥ್ಯಾಚತುಷ್ಪಥಮ್ ।
ಚಿತ್ರಧ್ವಜಪತಾಕಾಭಿಸ್ತೋರಣೈಃ ಸಮಲಂಕೃತಮ್ ॥ ೮

ಸ್ರಗ್ಗಂಧಮಾಲ್ಯಾಭರಣೈರ್ವಿರಜೋಽಂಬರಭೂಷಿತೈಃ ।
ಜುಷ್ಟಂ ಸ್ತ್ರೀಪುರುಷೈಃ ಶ್ರೀಮದ್ಗೃಹೈರಗುರುಧೂಪಿತೈಃ ॥ ೯

ಪಿತೄನ್‌ದೇವಾನ್ ಸಮಭ್ಯರ್ಚ್ಯ ವಿಪ್ರಾಂಶ್ಚ ವಿಧಿವನ್ನೃಪ ।
ಭೋಜಯಿತ್ವಾಯಥಾನ್ಯಾಯಂ ವಾಚಯಾಮಾಸ ಮಂಗಲಮ್ ॥೧೦

ಸುಸ್ನಾತಾಂ ಸುದತೀಂ ಕನ್ಯಾಂ ಕೃತಕೌತುಕಮಂಗಲಾಮ್ ।
ಅಹತಾಂಶುಕಯುಗ್ಮೇನ ಭೂಷಿತಾಂ ಭೂಷಣೋತ್ತಮೈಃ ॥ ೧೧

ಆನರ್ತದೇಶವನ್ನು ದಾಟಿ ವಿದರ್ಭ ದೇಶಕ್ಕೆ ಹೋಗಿ ಸೇರಿದನು (೬). (ವಿದರ್ಭರಾಜಧಾನಿಯಾದ) ಕುಂಡಿನಪುರದ ದೊರೆ ಭೀಷ್ಮಕನು ಮಗನಾದ ರುಕ್ಮಿಯ ಪ್ರೀತಿಗೆ ವಶನಾಗಿ, ಶಿಶುಪಾಲನಿಗೆ ಮಗಳನ್ನು ಕೊಡಬೇಕೆಂದು ಮಂಗಳಕಾರ್ಯವನ್ನು ಮಾಡಿಸುತ್ತಿದ್ದನು (೭). ಕುಂಡಿನಪುರದ ರಾಜಬೀದಿ, ರಸ್ತೆ, ಚೌಕಗಳನ್ನು ಸ್ವಚ್ಛವಾಗಿ ಗುಡಿಸಿ, ನೀರು ಚಿಮುಕಿಸಿ, ಬಣ್ಣಬಣ್ಣದ ಧ್ವಜ ಪತಾಕೆಗಳಿಂದಲೂ ತೋರಣಗಳಿಂದಲೂ ಪಟ್ಟಣವನ್ನು ಅಲಂಕರಿಸಲಾಗಿತ್ತು (೮). ಸ್ತ್ರೀ ಪುರುಷರೆಲ್ಲರೂ ಹಾರ, ಗಂಧ, ಹೂಗಳಿಂದ ಸಿಂಗರಿಸಿಕೊಂಡು ಶುಭ್ರವಾದ ಬಟ್ಟೆಗಳಿಂದ ಭೂಷಿತರಾಗಿದ್ದರು. ಸಂಪದ್ಭರಿತವಾದ ಮನೆಗಳಲ್ಲಿ ಅಗರು ಧೂಪಗಳ ಹೊಗೆ ಹೊಮ್ಮುತ್ತಿತ್ತು (೯). ಪರೀಕ್ಷಿತರಾಜ, ಭೀಷ್ಮಕನು ಪಿತೃಗಳನ್ನೂ ದೇವತೆಗಳನ್ನೂ ಅರ್ಚಿಸಿ, ಬ್ರಾಹ್ಮಣರಿಗೆ ವಿಧಿವತ್ತಾಗಿ ಭೋಜನವನ್ನು ಮಾಡಿಸಿ ಅವರಿಂದ ಶಾಸ್ತ್ರೀಯವಾಗಿ ಸ್ವಸ್ತಿವಾಚನವನ್ನು ಹೇಳಿಸಿದನು (೧೦). ಸುಂದರಿಯಾದ ಕನ್ಯೆ ವೈದರ್ಭಿಯು ಮಂಗಳ ಸ್ನಾನವನ್ನು ಮಾಡಿ ನೂತನ ವಸ್ತ್ರಯುಗಳವನ್ನು ಧರಿಸಿ ದಿವ್ಯಾಭರಣಗಳಿಂದ ಭೂಷಿತಳಾಗಲು, ಅವಳಿಗೆ ಕಂಕಣ ಬಂಧನವನ್ನು ಮಾಡಿಸಿದರು. ದ್ವಿಜೋತ್ತಮರು ಋಗ್ಯಜುಃ ಸಾಮ ಮಂತ್ರಗಳನ್ನು ಪಠಿಸುತ್ತ ವಧುವಿಗೆ ರಕ್ಷಾ

ಚಕ್ರುಃ ಸಾಮರ್ಗ್ಯಜುರ್ಮಂತ್ರೈರ್ವಧ್ವಾ ರಕ್ಷಾಂ ದ್ವಿಜೋತ್ತಮಾಃ ।
ಪುರೋಹಿತೋಽಥರ್ವವಿದ್ ವೈ ಜುಹಾವ ಗ್ರಹಶಾಂತಯೇ ॥ ೧೨

ಹಿರಣ್ಯರೂಪ್ಯವಾಸಾಂಸಿ ತಿಲಾಂಶ್ಚ ಗುಡಮಿಶ್ರಿತಾನ್ ।
ಪ್ರಾದಾದ್ ಧೇನೂಶ್ಚ ವಿಪ್ರೇಭ್ಯೋ ರಾಜಾ ವಿಧಿವಿದಾಂ ವರಃ ॥ ೧೩

ಏವಂ ಚೇದಿಪತೀ ರಾಜಾ ದಮಘೋಷಃ ಸುತಾಯ ವೈ ।
ಕಾರಯಾಮಾಸ ಮಂತ್ರಜ್ಞೈಃ ಸರ್ವಮಭ್ಯುದಯೋಚಿತಮ್ ॥ ೧೪

ಮದಚ್ಯುದ್ಭಿರ್ಗಜಾನೀಕೈಃ ಸ್ಯಂದನೈರ್ಹೇಮಮಾಲಿಭಿಃ ।
ಪತ್ತ್ಯಶ್ವಸಂಕುಲೈಃ ಸೈನ್ಯೈಃ ಪರೀತಃ ಕುಂಡಿನಂ ಯಯೌ ॥ ೧೫

ತಂ ವೈ ವಿದರ್ಭಾಧಿಪತಿಃ ಸಮಭ್ಯೇತ್ಯಾಭಿಪೂಜ್ಯ ಚ ।
ನಿವೇಶಯಾಮಾಸ ಮುದಾ ಕಲ್ಪಿತಾನ್ಯನಿವೇಶನೇ ॥ ೧೬

ತತ್ರ ಶಾಲ್ವೋ ಜರಾಸಂಧೋ ದಂತವಕ್ತ್ರೋ ವಿದೂರಥಃ ।
ಆಜಗ್ಮುಶ್ಚೈದ್ಯಪಕ್ಷೀಯಾಃ ಪೌಂಡ್ರಕಾದ್ಯಾಃ ಸಹಸ್ರಶಃ ॥ ೧೭

ಬಂಧನವನ್ನು ಮಾಡಿದರು. ಅಥರ್ವವೇದಜ್ಞನಾದ ಪುರೋಹಿತನು ಗ್ರಹಶಾಂತಿಗಾಗಿ ಹೋಮ ಮಾಡಿದನು (೧೧-೧೨). ವಿಧಿಜ್ಞನಾದ ಭೀಷ್ಮಕರಾಜನು ಬಂಗಾರ, ಬೆಳ್ಳಿ, ವಸ್ತ್ರ ಗುಡಮಿಶ್ರವಾದ ಎಳ್ಳು ಮತ್ತು ಹಸುಗಳನ್ನು ವಿಪ್ರರಿಗೆ ದಾನ ಮಾಡಿದನು. ಹೀಗೆಯೇ ಚೇದಿರಾಜನಾದ ದಮಘೋಷನು, ಮಗನಾದ ಶಿಶುಪಾಲನಿಗೆ ಯೋಗ್ಯವಾದ ಎಲ್ಲ ಮಂಗಳ ಕಾರ್ಯಗಳನ್ನೂ ವೇದಜ್ಞರಾದ ವಿಪ್ರರಿಂದ ಮಾಡಿಸಿದನು (೧೩-೧೪). ಅನಂತರ ಮದೋದಕವನ್ನು ಸುರಿಸುವ ಆನೆಗಳಿಂದಲೂ ಸುವರ್ಣ ಭೂಷಿತವಾದ ರಥಗಳಿಂದಲೂ ಕಾಲಾಳು ಕುದುರೆಗಳಿಂದಲೂ ಸಹಿತವಾದ ಸೇನೆಯಿಂದ ಪರಿವೃತನಾಗಿ ಕುಂಡಿನಪುರಕ್ಕೆ ಆಗಮಿಸಿದನು (೧೫). ವಿದರ್ಭರಾಜನಾದ ಭೀಷ್ಮಕನು ಆ ಚೇದಿರಾಜನನ್ನು ಸಂತೋಷದಿಂದ ಎದುರ್ಗೊಂಡು ಗೌರವಿಸಿ ಅವನಿಗಾಗಿ ಏರ್ಪಡಿಸಿದ್ದ ಇನ್ನೊಂದು ಗೃಹದಲ್ಲಿ ಬಿಡಾರ ಮಾಡಿಸಿದನು (೧೬). ಆಗ ಶಿಶುಪಾಲನ ಪಕ್ಷದವರಾದ ಸಾಲ್ವ, ಜರಾಸಂಧ, ದಂತವಕ್ತ್ರ ವಿದೂರಥ, ಪೌಂಡ್ರಕ ಮೊದಲಾದವರು ಸಾವಿರಾರು ಸಂಖ್ಯೆಯಲ್ಲಿ ಅಲ್ಲಿಗೆ ಆಗಮಿಸಿದರು

ಕೃಷ್ಣರಾಮದ್ವಿಷೋ ಯತ್ತಾಃ ಕನ್ಯಾಂ ಚೈದ್ಯಾಯ ಸಾಧಿತುಮ್ ।
ಯದ್ಯಾಗತ್ಯ ಹರೇತ್ ಕೃಷ್ಣೋ ರಾಮಾದ್ಯೈರ್ಯದುಭಿರ್ವೃತಃ ॥ ೧೮

ಯೋತ್ಸ್ಯಾಮಃ ಸಂಹತಾಸ್ತೇನ ಇತಿ ನಿಶ್ಚಿತಮಾನಸಾಃ ।
ಆಜಗ್ಮುರ್ಭೂಭುಜಃ ಸರ್ವೇ ಸಮಗ್ರಬಲವಾಹನಾಃ ॥ ೧೯

ಶ್ರುತ್ವೈತದ್ ಭಗವಾನ್ ರಾಮೋ ವಿಪಕ್ಷೀಯನೃಪೋದ್ಯಮಮ್ ।
ಕೃಷ್ಣಂ ಚೈಕಂ ಗತಂ ಹರ್ತುಂ ಕನ್ಯಾಂ ಕಲಹಶಂಕಿತಃ ॥ ೨೦

ಬಲೇನ ಮಹತಾ ಸಾರ್ಧಂ ಭ್ರಾತೃಸ್ನೇಹಪರಿಪ್ಲುತಃ ।
ತ್ವರಿತಃ ಕುಂಡಿನಂ ಪ್ರಾಗಾದ್ ಗಜಾಶ್ವರಥಪತ್ತಿಭಿಃ ॥ ೨೧

ಭೀಷ್ಮಕನ್ಯಾ ವರಾರೋಹಾ ಕಾಂಕ್ಷಂತ್ಯಾಗಮನಂ ಹರೇಃ ।
ಪ್ರತ್ಯಾಪತ್ತಿಮಪಶ್ಯಂತೀ ದ್ವಿಜಸ್ಯಾಚಿಂತಯತ್ತದಾ ॥ ೨೨

ಅಹೋ ತ್ರಿಯಾಮಾಂತರಿತ ಉದ್ವಾಹೋ ಮೇಽಲ್ಪರಾಧಸಃ ।
ನಾಗಚ್ಛತ್ಯರವಿಂದಾಕ್ಷೋ ನಾಹಂ ವೇದ್ಮ್ಯತ್ರ ಕಾರಣಮ್ ।
ಸೋಽಪಿ ನಾವರ್ತತೇಽದ್ಯಾಪಿ ಮತ್ಸಂದೇಶಹರೋ ದ್ವಿಜಃ ॥ ೨೩

---

(೧೭). ಅವರು ಬಲರಾಮಕೃಷ್ಣರ ದ್ವೇಷಿಗಳು. 'ಶ್ರೀಕೃಷ್ಣನು ಬಲರಾಮಾದಿ ಯಾದವರೊಡನೆ ಬಂದು ರುಕ್ಮಿಣಿಯನ್ನು ಅಪಹರಿಸಿಯಾನು. ಆ ಕನ್ಯೆಯನ್ನು ಶಿಶುಪಾಲನಿಗೇ ಕೊಡಿಸಬೇಕು' ಎಂಬ ಉದ್ದೇಶದಿಂದ ಸಾಲ್ವಾದಿಗಳು ಯುದ್ಧ ಸಂನದ್ಧರಾಗಿ ಬಂದಿದ್ದರು (೧೮). ಎಲ್ಲರೂ ಒಟ್ಟಾಗಿ ಹೋರಾಡಬೇಕು ಎಂದು ನಿಶ್ಚಯಿಸಿಕೊಂಡು ಆ ಎಲ್ಲ ರಾಜರೂ ಸಮಗ್ರ ಸೇನಾವಾಹನ ಸಮೇತರಾಗಿ ಬಂದರು (೧೯). ಬಲರಾಮನಿಗೆ ಆ ಶತ್ರುರಾಜರ ಉದ್ಯಮವು ಕಿವಿಗೆ ಬಿದ್ದಿತು. ಈಗ ಶ್ರೀಕೃಷ್ಣನು ಕನ್ಯೆಯನ್ನು ತರಲು ಒಬ್ಬನೇ ಹೋದನೆಂಬುದನ್ನು ಕೇಳಿ, ಯುದ್ಧವು ನಡೆಯುವುದೆಂದು ಅವನಿಗೆ ಶಂಕೆಯಾಯಿತು (೨೧). ಒಡನೆಯೇ ಭ್ರಾತೃವಾತ್ಸಲ್ಯದಲ್ಲಿ ಮುಳುಗಿದ ಬಲರಾಮನು ಗಜಾಶ್ವರಥಪಾದಾತಿಗಳಿಂದ ಕೂಡಿದ ಮಹತ್ತರವಾದ ಸೈನ್ಯದೊಡನೆ ಕುಂಡಿನಪುರಕ್ಕೆ ಧಾವಿಸಿದನು (೨೧). ಇತ್ತ ಶ್ರೀಕೃಷ್ಣಾಗಮನವನ್ನು ನಿರೀಕ್ಷಿಸುತ್ತಿದ್ದ ಸುಂದರಾಂಗಿಯಾದ ಭೀಷ್ಮಕ ಪುತ್ರಿಯು, ಬ್ರಾಹ್ಮಣನೂ ಸಹ ಇನ್ನೂ ಹಿಂದಿರುಗದಿರುವುದನ್ನು ಕಂಡು

ಅಪಿ ಮಯ್ಯನವದ್ಯಾತ್ಮಾ ದೃಷ್ಟ್ವಾ ಕಿಂಚಿಜ್ಜುಗುಪ್ಸಿತಮ್ ।
ಮತ್ಪಾಣಿಗ್ರಹಣೇ ನೂನಾಂ ನಾಯಾತಿ ಹಿ ಕೃತೋದ್ಯಮಃ ॥ ೨೪

ದುರ್ಭಗಾಯಾ ನ ಮೇ ಧಾತಾ ನಾನುಕೂಲೋ ಮಹೇಶ್ವರಃ ।
ದೇವೀ ವಾ ವಿಮುಖಾ ಗೌರೀ ರುದ್ರಾಣೀ ಗಿರಿಜಾ ಸತೀ ॥ ೨೫

ಏವಂ ಚಿಂತಯತೀ ಬಾಲಾ ಗೋವಿಂದಹೃತಮಾನಸಾ ।
ನ್ಯಮೀಲಯತ ಕಾಲಜ್ಞಾ ನೇತ್ರೇ ಚಾಶ್ರುಕಲಾಕುಲೇ ॥ ೨೬

ಏವಂ ವಧ್ವಾಃ ಪ್ರತೀಕ್ಷಂತ್ಯಾ ಗೋವಿಂದಾಗಮನಂ ನೃಪ ।
ವಾಮ ಊರುರ್ಭುಜೋ ನೇತ್ರಮಸ್ಫುರನ್ ಪ್ರಿಯಭಾಷಿಣಃ ॥ ೨೭

ಅಥ ಕೃಷ್ಣವಿನಿರ್ದಿಷ್ಟಃ ಸ ಏವ ದ್ವಿಜಸತ್ತಮಃ ।
ಅಂತಃಪುರಚರೀಂ ದೇವೀಂ ರಾಜಪುತ್ರೀಂ ದದರ್ಶ ಹ ॥ ೨೮

ಚಿಂತಾಮಗ್ನಳಾದಳು (೨೨). ''ಮದುವೆಗೆ ಒಂದು ರಾತ್ರಿ ಉಳಿಯಿತು. ಅಯ್ಯೋ, ನಾನು ಭಾಗ್ಯಹೀನಳು. ಅರವಿಂದ ನೇತ್ರನಾದ ಶ್ರೀಕೃಷ್ಣನು ಬರಲಿಲ್ಲ. ಇದಕ್ಕೆ ಕಾರಣವೇನೋ ತಿಳಿಯೆನಲ್ಲ. ನನ್ನಸಂದೇಶವನ್ನೊಯ್ದ ಬ್ರಾಹ್ಮಣನೂ ಸಹ ಇನ್ನೂ ಹಿಂದಿರುಗಿ ಬರಲಿಲ್ಲ (೨೩). ನಿಷ್ಕಳಂಕನಾದ ಕೃಷ್ಣನು ನನ್ನಲ್ಲಿ ಏನಾದರೂ ಕಳಂಕವನ್ನು ಕಂಡಿರಬಹುದೆ ? ಆದ್ದರಿಂದ ನನ್ನ ಕೈಹಿಡಿಯಲು ಉದ್ಯುಕ್ತ ನಾಗದೆ ಬಾರದಿರಬೇಕು (೨೪). ದುರ್ಭಾಗ್ಯಳಾದ ನನ್ನ ಮೇಲೆ ಬ್ರಹ್ಮನಿಗೂ ಅನುಗ್ರಹವಿಲ್ಲ, ಮಹೇಶ್ವರನಿಗೂ ಇಲ್ಲ. ಈಶ್ವರಪತ್ನಿಯೂ ಗಿರಿಜೆಯೂ ಪತಿವ್ರತಾ ಶಿರೋಮಣಿಯೂ ಆದ ಗೌರೀದೇವಿಯೂ ನನ್ನ ವಿಷಯದಲ್ಲಿ ವಿಮುಖಳಾದಳು'' (೨೫). ಎಂದು ಚಿಂತಿಸುತ್ತ ಆ ಬಾಲೆಯು ಗೋವಿಂದನನ್ನೇ ಧ್ಯಾನಿಸುತ್ತ, 'ಆತನು ಬರಲು ಇನ್ನೂ ಸಮಯ ಉಂಟು' ಎಂದು ಭಾವಿಸುತ್ತ ಕಂಬನಿದುಂಬಿದ ಕಣ್ಣುಗಳನ್ನು ಮುಚ್ಚಿಕೊಂಡಳು (೨೬). ಪರೀಕ್ಷಿತರಾಜ, ಹೀಗೆ ಗೋವಿಂದಾಗಮನವನ್ನೇ ಹಾರೈಸುತ್ತಿದ್ದ ಆ ವಧುವಿಗೆ ಎಡಗಡೆಯ ತೊಡೆ ತೋಳು ಕಣ್ಣುಗಳು ಶುಭಶಕುನವನ್ನು ಸೂಚಿಸುತ್ತ ಅದುರಿದವು! (೨೭). (ಅಷ್ಟರಲ್ಲಿ) ಆ ಬ್ರಾಹ್ಮಣನೇ ಶ್ರೀಕೃಷ್ಣನಿಂದ ಪ್ರೇಷಿತನಾಗಿ ಬಂದು ಅಂತಃ ಪುರದಲ್ಲಿದ್ದ ರಾಜಪುತ್ರಿಯಾದ ರುಕ್ಮಿಣೀದೇವಿಯನ್ನು ಸಂದರ್ಶಿಸಿದನು (೨೮).

ಸಾ ತಂ ಪ್ರಹೃಷ್ಟವದನಮವ್ಯಗ್ರಾತ್ಮಗತಿಂ ಸತೀ ।
ಆಲಕ್ಷ್ಯ ಲಕ್ಷಣಾಭಿಜ್ಞಾ ಸಮಪೃಚ್ಛಚ್ಛುಚಿಸ್ಮಿತಾ ॥ ೨೯

ತಸ್ಯಾ ಆವೇದಯತ್ ಪ್ರಾಪ್ತಂ ಶಶಂಸ ಯದುನಂದನಮ್ ।
ಉಕ್ತಂ ಚ ಸತ್ಯವಚನಮಾತ್ಮೋಪನಯನಂ ಪ್ರತಿ ॥ ೩೦

ತಮಾಗತಂ ಸಮಾಜ್ಞಾಯ ವೈದರ್ಭೀ ಹೃಷ್ಟಮಾನಸಾ ।
ನ ಪಶ್ಯಂತೀ ಬ್ರಾಹ್ಮಣಾಯ ಪ್ರಿಯಮನ್ಯನ್ನನಾಮ ಸಾ ॥ ೩೧

ಪ್ರಾಪ್ತೌ ಶ್ರುತ್ವಾ ಸ್ವದುಹಿತುರುದ್ವಾಹಪ್ರೇಕ್ಷಣೋತ್ಸುಕೌ ।
ಅಭ್ಯಯಾತ್ತೂರ್ಯಘೋಷೇಣ ರಾಮಕೃಷ್ಣೌ ಸಮರ್ಹಣೈಃ ॥ ೩೨

ಮಧುಪರ್ಕಮುಪಾನೀಯ ವಾಸಾಂಸಿ ವಿರಜಾಂಸಿ ಸಃ ।
ಉಪಾಯನಾನ್ಯಭೀಷ್ಟಾನಿ ವಿಧಿವತ್ ಸಮಪೂಜಯತ್ ॥ ೩೩

ಮುಖದಲ್ಲಿ ಪ್ರಸನ್ನತೆಯನ್ನು ಬೀರುತ್ತ ಯಾವ ಕೊರತೆಯೂ ಇಲ್ಲದೆ ಧೀರ ಗತಿಯಿಂದ ಬರುತ್ತಿದ್ದ ಆ ಬ್ರಾಹ್ಮಣನನ್ನು ನೋಡಿ ದೂತಲಕ್ಷಣವನ್ನರಿತ ರಾಜಕುಮಾರಿಯು (ಸಂತುಷ್ಟಳಾಗಿ) ನಸುನಗುತ್ತ ಏನಾಯಿತೆಂದು ಬೆಸಗೊಂಡಳು (೨೯). ಯದುನಂದನನು ಬಂದಿರುವನೆಂದು ಬ್ರಾಹ್ಮಣನು ಹೇಳಿ, ಆಕೆಯನ್ನು ಕರೆದೊಯ್ಯುವನೆಂಬ ಶ್ರೀಕೃಷ್ಣನ ಸತ್ಯ ಪ್ರತಿಜ್ಞೆಯನ್ನು ರುಕ್ಮಿಣಿಗೆ ತಿಳಿಸಿದನು (೩೦). ಶ್ರೀಕೃಷ್ಣನು ಬಂದಿರುವನೆಂಬುದನ್ನು ತಿಳಿದು ವೈದರ್ಭಿಯು ಹಿರಿ ಹಿಗ್ಗಿದಳು. ಸಂತೋಷದ ಸುದ್ದಿಯನ್ನು ತಂದ ಬ್ರಾಹ್ಮಣನಿಗೆ ಯಾವ ಪಾರಿತೋಷಕವನ್ನೀಯಬೇಕೆಂಬುದು ತೋರದೆ (ಯಾವುದೂ ಸಾಲದೆಂದಣಿಸಿ) ಆದರದಿಂದ ಕೈಮುಗಿದಳು ! (೩೧). ಭೀಷ್ಮಕರಾಜನು ತನ್ನ ಮಗಳ ಮದುವೆಯನ್ನು ನೋಡಲು ಉತ್ಸಾಹದಿಂದ ಬಲರಾಮಕೃಷ್ಣರು ಬಂದಿರುವರೆಂಬುದನ್ನು ಕೇಳಿ, ಉಪಚಾರ ಸಾಮಗ್ರಿಗಳನ್ನು ತೆಗೆಸಿಕೊಂಡು ವಾದ್ಯಘೋಷದೊಡನೆ ಹೋಗಿ ಅವರನ್ನು ಸ್ವಾಗತಿಸಿದನು (೩೨). ಅವರಿಗೆ ಮಧುಪರ್ಕವನ್ನಿತ್ತು ಶುಭ್ರವಾದ ವಸ್ತ್ರಗಳನ್ನರ್ಪಿಸಿ, ಪ್ರಿಯವಾದ ಕಾಣಿಕೆಗಳನ್ನು ಕೊಟ್ಟು ವಿಧಿವತ್ತಾಗಿ ಬಲರಾಮಕೃಷ್ಣರನ್ನು ಸತ್ಕರಿಸಿದನು (೩೩). ಪ್ರಾಜ್ಞನಾದ

ತಯೋರ್ನಿವೇಶನಂ ಶ್ರೀಮದುಪಕಲ್ಪ್ಯ ಮಹಾಮತಿಃ ।
ಸಸೈನ್ಯಯೋಃ ಸಾನುಗಯೋರಾತಿಥ್ಯಂ ವಿದಧೇ ಯಥಾ ॥ ೩೪

ಏವಂ ರಾಜ್ಞಾಂ ಸಮೇತಾನಾಂ ಯಥಾವೀರ್ಯಂ ಯಥಾವಯಃ ।
ಯಥಾಬಲಂ ಯಥಾವಿತ್ತಂ ಸರ್ವೈಃ ಕಾಮೈಃ ಸಮರ್ಹಯತ್ ॥ ೩೫

ಕೃಷ್ಣಮಾಗತಮಾಕರ್ಣ್ಯ ವಿದರ್ಭಪುರವಾಸಿನಃ ।
ಆಗತ್ಯ ನೇತ್ರಾಂಜಲಿಭಿಃ ಪಪುಸ್ತನ್ಮುಖಪಂಕಜಮ್ ॥ ೩೬

ಅಸ್ಯೈವ ಭಾರ್ಯಾ ಭವಿತುಂ ರುಕ್ಮಿಣ್ಯರ್ಹತಿ ನಾಪರಾ ।
ಅಸಾವಪ್ಯನವದ್ಯಾತ್ಮಾ ಭೈಷ್ಮ್ಯಾಃ ಸಮುಚಿತಃ ಪತಿಃ ॥ ೩೭

ಕಿಂಚಿತ್ಸುಚರಿತಂ ಯನ್ನಸ್ತೇನ ತುಷ್ಟಸ್ತ್ರಿಲೋಕಕೃತ್ ।
ಅನುಗೃಹ್ಣಾತು ಗೃಹ್ಣಾತು ವೈದರ್ಭ್ಯಾಃ ಪಾಣಿಮಚ್ಯುತಃ ॥ ೩೮

ಏವಂ ಪ್ರೇಮಕಲಾಬದ್ಧಾ ವದಂತಿ ಸ್ಮ ಪುರೌಕಸಃ ।
ಕನ್ಯಾ ಚಾಂತಃಪುರಾತ್ ಪ್ರಾಗಾದ್ ಭಟೈರ್ಗುಪ್ತಾಂಬಿಕಾಲಯಮ್ ॥

ಆ ಮಹಾರಾಜನು ಅವರಿಬ್ಬರನ್ನು ವೈಭವೋಪೇತವಾದ ಬಿಡಾರದಲ್ಲಿಳಿಸಿ ಅವರ ಸೈನ್ಯಪರಿವಾರಗಳಿಗೆ ಆತಿಥ್ಯವನ್ನಿತ್ತನು (೩೪). ಹೀಗೆ ವಿವಾಹೋತ್ಸವಕ್ಕೆ ಆಗಮಿಸಿದ ಎಲ್ಲ ರಾಜರಿಗೂ ಅವರ ಪರಾಕ್ರಮ, ವಯಸ್ಸು, ಬಲ, ಐಶ್ವರ್ಯಗಳಿಗೆ ಅನುಗುಣವಾಗಿ ಸಕಲೇಷ್ಟಾರ್ಥಗಳಿಂದಲೂ ಸತ್ಕರಿಸಿದನು (೩೫). ಶ್ರೀಕೃಷ್ಣನು ಬಂದಿರುವನೆಂಬುದನ್ನು ಕೇಳಿ ವಿದರ್ಭನಗರದ ಪೌರರು ಬಂದು ಬಂದು ತಮ್ಮ ಕಣ್ಣುಗಳೆಂಬ ಬೊಗಸೆಗಳಿಂದ ಆತನ ಮೊಗದಾವರೆಯ ಸೊಬಗನ್ನು ಕುಡಿದರು (೩೬). ''ಈತನಿಗೇ ರುಕ್ಮಿಣಿಯು ಮಡದಿಯಾಗಲು ಅರ್ಹಳು. ಇವನಿಗೆ ರುಕ್ಮಿಣಿಯೇ ಮಡದಿಯಾಗಬೇಕು, ಬೇರೊಬ್ಬಳಲ್ಲ. ಶುದ್ಧಾತ್ಮನಾದ ಶ್ರೀಕೃಷ್ಣನು ವೈದರ್ಭಿಗೆ ಯೋಗ್ಯನಾದ ಪತಿ. ನಮ್ಮ ಪುಣ್ಯವೇನಾದರೂ ಇದ್ದರೆ ಭುವನತ್ರಯವನ್ನು ಸೃಜಿಸಿದ ಪರಮಾತ್ಮನು ಅನುಗ್ರಹಿಸಲಿ. ಶ್ರೀಕೃಷ್ಣನು ವೈದರ್ಭಿಯ ಕೈಹಿಡಿಯುವಂತೆ ಮಾಡಲಿ''

ಪದ್ಭ್ಯಾಂ ವಿನಿರ್ಯಯೌ ದ್ರಷ್ಟುಂ ಭವಾನ್ಯಾಃ ಪಾದಪಲ್ಲವಮ್ ।
ಸಾ ಚಾನುಧ್ಯಾಯತೀ ಸಮ್ಯಙ್ಮುಕುಂದಚರಣಾಂಬುಜಮ್ ॥ ೪೦

ಯತವಾಙ್ಮಾತೃಭಿಃ ಸಾರ್ಧಂ ಸಖೀಭಿಃ ಪರಿವಾರಿತಾ ।
ಗುಪ್ತಾ ರಾಜಭಟೈಃ ಶೂರೈಃ ಸನ್ನದ್ಧೈರುದ್ಯತಾಯುಧೈಃ ।
ಮೃದಂಗಶಂಖಪಣವಾಸ್ತೂರ್ಯಭೇರ್ಯಶ್ಚ ಜಘ್ನಿರೇ ॥ ೪೧

ನಾನೋಪಹಾರಬಲಿಭಿರ್ವಾರಮುಖ್ಯಾಃ ಸಹಸ್ರಶಃ ।
ಸ್ರಗ್ಗಂಧವಸ್ತ್ರಾಭರಣೈರ್ದ್ವಿಜಪತ್ನ್ಯಃ ಸ್ವಲಂಕೃತಾಃ ॥ ೪೨

ಗಾಯಂತಶ್ಚ ಸ್ತುವಂತಶ್ಚ ಗಾಯಕಾ ವಾದ್ಯವಾದಕಾಃ ।
ಪರಿವಾರ್ಯ ವಧೂಂ ಜಗ್ಮುಃ ಸೂತಮಾಗಧವಂದಿನಃ ॥ ೪೩

ಆಸಾದ್ಯ ದೇವೀಸದನಂ ಧೌತಪಾದಕರಾಂಬುಜಾ ।
ಉಪಸ್ಪೃಶ್ಯ ಶುಚಿಃ ಶಾಂತಾ ಪ್ರವಿವೇಶಾಂಬಿಕಾಂತಿಕಮ್ ॥ ೪೪

(೩೭-೩೮). ಹೀಗೆ ಸ್ನೇಹಪಾಶದಿಂದ ಬದ್ಧರಾದ ಪೌರರು ಹೇಳಿಕೊಳ್ಳುತ್ತಿದ್ದರು. ಇತ್ತ ಮದವಣಗಿತ್ತಿಯು ಭಟರ ಕಾವಲಿನೊಡನೆ ಅಂತಃಪುರದಿಂದ ಅಂಭಿಕಾದೇವಾಲಯಕ್ಕೆ ಹೊರಟಳು. ಅವಳು ಭವಾನಿಯ ಪಾದಪಲ್ಲವವನ್ನು ನೋಡಲು ಕಾಲ್ನಡಿಗೆಯಿಂದ ಹೋಗುತ್ತಿದ್ದಳು. ಮನಸ್ಸಿನಲ್ಲಿ ಮುಕುಂದನ ಪಾದಕಮಲವನ್ನೇ ಧ್ಯಾನಿಸುತ್ತಿದ್ದಳು (೩೯-೪೦). ರುಕ್ಮಿಣಿಯು ತಾಯಂದಿರಿಂದಲೂ ಗೆಳತಿಯರಿಂದಲೂ ಪರಿವೃತಳಾಗಿ ಮೌನವ್ರತವನ್ನು ಧರಿಸಿದ್ದಳು. ಶೂರರಾದ ರಾಜಭಟರು ಕವಚಗಳನ್ನು ತೊಟ್ಟು ಆಯುಧಗಳನ್ನು ಹಿಡಿದು ಅವಳನ್ನು ರಕ್ಷಿಸುತ್ತ ಹೋಗುತ್ತಿದ್ದರು. ಮೃದಂಗ ಶಂಖಪಣವಗಳೂ ವಾದ್ಯಗಳೂ ಭೇರಿಗಳೂ ಮೊಳಗುತ್ತಿದ್ದವು (೪೧). ವೇಶ್ಯೆಯರು ನಾನಾ ಬಗೆಯ ಪೂಜಾ ಸಾಮಗ್ರಿಗಳನ್ನು ಹಿಡಿದಿದ್ದರು. ಬ್ರಾಹ್ಮಣ ಪತ್ನಿಯರು ಹೂಮಾಲೆ ಗಂಧ ವಸ್ತ್ರಾಭರಣಗಳಿಂದ ಅಲಂಕರಿಸಿಕೊಂಡಿದ್ದರು (೪೨). ಸೂತಮಾಗಧ ಬಂದಿಗಳು ಹಾಡುತ್ತ ಹೊಗಳುತ್ತ ವಾದ್ಯವನ್ನು ನುಡಿಸುತ್ತ ಸುತ್ತುಗಟ್ಟಿ ವಧುವಿನ ಜೊತೆಗೆ ಹೋದರು. ರುಕ್ಮಿಣಿಯು ಅಂಬಿಕಾದೇವಾಲಯದ

ತಾಂ ವೈ ಪ್ರವಯಸೋ ಬಾಲಾಂ ವಿಧಿಜ್ಞಾ ವಿಪ್ರಯೋಷಿತಃ ।
ಭವಾನೀಂ ವಂದಯಾಂಚಕ್ರುರ್ಭವಪತ್ನೀಂ ಭವಾನ್ವಿತಾಮ್ ॥ ೪೫

ನಮಸ್ಯೇ ತ್ವಾಂಬಿಕೇऽಭೀಕ್ಷ್ಣಂ ಸ್ವಸಂತಾನಯುತಾಂ ಶಿವಾಮ್ ।
ಭೂಯಾತ್ ಪತಿರ್ಮೇ ಭಗವಾನ್ ಕೃಷ್ಣಸ್ತದನುಮೋದತಾಮ್ ॥ ೪೬

ಅದ್ಭಿರ್ಗಂಧಾಕ್ಷತೈರ್ಧೂಪೈರ್ವಾಸಃ ಸ್ರಙ್ಮಾಲ್ಯಭೂಷಣೈಃ ।
ನಾನೋಪಹಾರಬಲಿಭಿಃ ಪ್ರದೀಪಾವಲಿಭಿಃ ಪೃಥಕ್ ॥ ೪೭

ವಿಪ್ರಸ್ತ್ರಿಯಃ ಪತಿಮತೀಸ್ತಥಾ ತೈಃ ಸಮಪೂಜಯತ್ ।
ಲವಣಾಪೂಪತಾಂಬೂಲಕಂಠಸೂತ್ರಫಲೇಕ್ಷುಭಿಃ ॥ ೪೮

ತಸ್ಯೈ ಸ್ತ್ರಿಯಸ್ತಾಃ ಪ್ರದದುಃ ಶೇಷಾಂ ಯುಯುಜುರಾಶಿಷಃ ।
ತಾಭ್ಯೋ ದೇವ್ಯೈ ನಮಶ್ಚಕ್ರೇ ಶೇಷಾಂ ಚ ಜಗೃಹೇ ವಧೂಃ ॥ ೪೯

ಮುನಿವ್ರತಮಥ ತ್ಯಕ್ತ್ವಾ ನಿಶ್ಚಕ್ರಾಮಾಂಬಿಕಾಗೃಹಾತ್ ।
ಪ್ರಗೃಹ್ಯ ಪಾಣಿನಾ ಭೃತ್ಯಾಂ ರತ್ನಮುದ್ರೋಪಶೋಭಿನಾ ॥ ೫೦

ಬಳಿಗೆ ಹೋಗಿ ಕೈಕಾಲುಗಳನ್ನು ತೊಳೆದು ಆಚಮನಮಾಡಿ ಶುಚಿಯಾಗಿ ಶಾಂತ ಭಾವದಿಂದ ದೇವಾಲಯವನ್ನು ಪ್ರವೇಶಿಸಿದಳು (೪೩-೪೪). ಪೂಜಾ ವಿಧಿಯನ್ನು ಬಲ್ಲ ಹಿರಿಯರಾದ ಬ್ರಾಹ್ಮಣ ಸ್ತ್ರೀಯರು ಶಿವಸಹಿತಳೂ ಶಿವಪತ್ನಿಯೂ ಆದ ದೇವಿಗೆ ಬಾಲೆಯಾದ ರುಕ್ಮಿಣಿಯಿಂದ ನಮಸ್ಕಾರ ಮಾಡಿಸಿದರು (೪೫). ''ಅಂಬಿಕೆ, ನಿನಗೂ ಶಿವನಿಗೂ ನಿಮ್ಮ ಪುತ್ರರಾದ ಗಣಪತಿಗೂ ಕುಮಾರಸ್ವಾಮಿಗೂ ಮತ್ತೆ ಮತ್ತೆ ವಂದಿಸುತ್ತೇನೆ. ಓ ತಾಯಿ, ಭಗವಾನ್ ಶ್ರೀಕೃಷ್ಣನು ನನ್ನ ಪತಿಯಾಗಲಿ. ಅನುಗ್ರಹಿಸು'' ಎಂದು ಅವಳು ಪ್ರಾರ್ಥಿಸಿಕೊಂಡಳು (೪೬). ನೀರು, ಗಂಧ, ಅಕ್ಷತೆ, ಧೂಪ, ವಸ್ತ್ರ ಹಾರ, ಹೂ, ಆಭರಣಗಳಿಂದಲೂ ಹಲವು ಬಗೆಯ ಕಾಣಿಕೆ ನೈವೇದ್ಯಗಳಿಂದಲೂ ಮಂಗಳಾರತಿಗಳಿಂದಲೂ ಕ್ರಮವಾಗಿ ಅಂಬಿಕೆಯನ್ನು ಪೂಜಿಸಿದಳು. ವಿಪ್ರಸ್ತ್ರೀಯರೂ ಹಾಗೆಯೇ ಪೂಜಿಸಿದರು. ಆಮೇಲೆ ರುಕ್ಮಿಣಿಯು ಉಪ್ಪು, ಭಕ್ಷ್ಯ, ತಾಂಬೂಲ, ಕರಿಮಣಿಯ ಮಂಗಳ ಸೂತ್ರ, ಹಣ್ಣು, ಕಬ್ಬಿನ ತುಂಡುಗಳಿರುವ ಬಾಗಿನ

ತಾಂ ದೇವಮಾಯಾಮಿವ ವೀರಮೋಹಿನೀಂ
ಸುಮಧ್ಯಮಾಂ ಕುಂಡಲಮಂಡಿತಾನನಾಮ್ ।
ಶ್ಯಾಮಾಂ ನಿತಂಬಾರ್ಪಿತರತ್ನಮೇಖಲಾಂ
ವ್ಯಂಜತ್‌ಸ್ತನೀಂ ಕುಂತಲಶಂಕಿತೇಕ್ಷಣಾಮ್ ॥ ೫೧
ಶುಚಿಸ್ಮಿತಾಂ ಬಿಂಬಫಲಾಧರದ್ಯುತಿ-
ಶೋಣಾಯಮಾನದ್ವಿಜಕುಂದಕುಡ್ಮಲಾಮ್ ।
ಪದಾ ಚಲಂತೀಂ ಕಲಹಂಸಗಾಮಿನೀಂ
ಶಿಂಜತ್ಕಲಾನೂಪುರಧಾಮಶೋಭಿನಾ ॥
ವಿಲೋಕ್ಯ ವೀರಾ ಮುಮುಹುಃ ಸಮಾಗತಾ
ಯಶಸ್ವಿನಸ್ತತ್ಕೃತಹೃಚ್ಛಯಾರ್ದಿತಾಃ ॥ ೫೨

ಗಳನ್ನಿತ್ತು ಮುತ್ತೈದೆಯರನ್ನು ಪೂಜಿಸಿದಳು (೪೭-೪೮). ಮುತ್ತೈದೆಯರು ವಧುವಿಗೆ ದೇವರ ಪೂಜಾನಿರ್ಮಾಲ್ಯ ಪ್ರಸಾದಗಳನ್ನಿತ್ತು ಆಶೀರ್ವದಿಸಿದರು. ರುಕ್ಮಿಣಿಯು ಅಂಬಿಕೆಗೂ ಮುತ್ತೈದೆಯರಿಗೂ ನಮಸ್ಕರಿಸಿ ಪ್ರಸಾದವನ್ನು ಸ್ವೀಕರಿಸಿದಳು. ಅನಂತರ ಮೌನವ್ರತವನ್ನು ತ್ಯಜಿಸಿ ರತ್ನದ ಉಂಗುರವನ್ನು ಧರಿಸಿದ್ದ ಕೈಯಿಂದ ತನ್ನ ಸಖಿಯ ಕೈಯನ್ನು ಹಿಡಿದು ದೇವಾಲಯದಿಂದ ಹೊರಟಳು (೪೯-೫೦). ಆಗ ವೈದರ್ಭಿಯು ವೀರಲೋಕವನ್ನು ಮೋಹಗೊಳಿಸುವ ದೇವಮಾಯೆಯೋ ಎಂಬಂತೆ ರಂಜಿಸಿದಳು. ಸುಂದರವಾದ ನಡು. ಕಿವಿಯ ಓಲೆಗಳು ಮುಖದ ಶೋಭೆಯನ್ನು ವಿಸ್ತರಿಸಿದ್ದವು. ಸೊಂಟದಲ್ಲಿ ರತ್ನಖಚಿತವಾದ ಒಡ್ಯಾಣವಿತ್ತು. ಕುಚಕುಟ್ಮಲಗಳಿಂದ ಕಂಗೊಳಿಸುತ್ತಿದ್ದ ಆ ಕನ್ಯೆಯ ಕಂಗಳು ಕುಟಿಲ ಕುಂತಲಗಳಿಂದ ಚಂಚಲವಾಗಿದ್ದವು (೫೧). ಎಳನಗೆಯನ್ನು ಬೀರುತ್ತಿದ್ದ ಅವಳ ಮಲ್ಲಿಗೆಯ ಮೊಗ್ಗುಗಳಂತೆ ಬೆಳ್ಳನೆಯ ಹಲ್ಲುಗಳು ತೊಂಡೆ ಹಣ್ಣಿನಂತಹ ತುಟಿಗಳ ಕಾಂತಿಯಿಂದ ಕೆಂಪಗೆ ಕಾಣುತ್ತಿದ್ದವು. ಮಂಜುಳವಾಗಿ ಜಂಜಣಗುಟ್ಟುವ ಕಾಲಂದಿಗೆಗಳ ಕಾಂತಿಯಿಂದ ಕಮನೀಯವಾದ ಕಾಲುಗಳಿಂದ ಕಲಹಂಸಿಯಂತೆ ನಡೆಯುತ್ತಿದ್ದಳು. ಆ ರುಕ್ಮಿಣಿಯನ್ನು ನೋಡಿ ಅಲ್ಲಿ ಬಂದಿದ್ದ ಕೀರ್ತಿಶಾಲಿಗಳಾದ ವೀರರು ಮನ್ಮಥ ಪೀಡೆಯಿಂದ ಮರುಳಾಗಿ ಮೋಹಗೊಂಡರು (೫೨). ಪೂಜಾಯಾತ್ರೆಯ ನೆವದಿಂದ ತನ್ನ ಸೌಂದರ್ಯವನ್ನು

ಯಾಂ ವೀಕ್ಷ್ಯ ತೇ ನೃಪತಯಸ್ತದುದಾರಹಾಸ-
ವ್ರೀಡಾವಲೋಕಹೃತಚೇತಸ ಉಜ್ಝಿತಾಸ್ತ್ರಾಃ ।
ಪೇತುಃ ಕ್ಷಿತೌ ಗಜರಥಾಶ್ವಗತಾ ವಿಮೂಢಾ
ಯಾತ್ರಾಚ್ಛಲೇನ ಹರಯೇಽರ್ಪಯತೀಂ ಸ್ವಶೋಭಾಮ್ ॥ ೫೩

ಸೈವಂ ಶನೈಶ್ಚಲಯತೀ ಚಲಪದ್ಮಕೋಶೌ
ಪ್ರಾಪ್ತಿಂ ತದಾ ಭಗವತಃ ಪ್ರಸಮೀಕ್ಷಮಾಣಾ ।
ಉತ್ಸಾರ್ಯ ವಾಮಕರಜೈರಲಕಾನಪಾಂಗೈಃ
ಪ್ರಾಪ್ತಾನ್ ಹ್ರಿಯೈಕ್ಷತ ನೃಪಾನ್ ದದೃಶೇಽಚ್ಯುತಂ ಸಾ ॥ ೫೪

ತಾಂ ರಾಜಕನ್ಯಾಂ ರಥಮಾರುರುಕ್ಷತೀಂ
ಜಹಾರ ಕೃಷ್ಣೋ ದ್ವಿಷತಾಂ ಸಮೀಕ್ಷತಾಮ್ ।
ರಥಂ ಸಮಾರೋಪ್ಯ ಸುಪರ್ಣಲಕ್ಷಣಂ
ರಾಜನ್ಯಚಕ್ರಂ ಪರಿಭೂಯ ಮಾಧವಃ ॥ ೫೫

ಶ್ರೀಕೃಷ್ಣನಿಗೆ ಅರ್ಪಿಸಲು ಹೊರಟಿದ್ದ ರುಕ್ಮಿಣಿಯನ್ನು ನೋಡಿ, ಗಜರಥಾಶ್ವಗಳಲ್ಲಿ ಕುಳಿತಿದ್ದ ರಾಜಪುತ್ರರು, ಅವಳ ನಲ್ಮೆಯ ನಗು ನಾಚಿಕೆಯ ನೋಟಗಳಿಂದ ಅಪಹೃತಚಿತ್ತರಾಗಿ ಮೈಮರೆತು, ಕೈಯಲ್ಲಿದ್ದ ಆಯುಧಗಳೂ ಸಡಲಿಹೋಗಲು, ಕೆಳಗೆ ನೆಲದಮೇಲೆ ಬಿದ್ದರು ! (೫೩). ಹೀಗೆ ವೈದರ್ಭಿಯು ಚಲಿಸುವ ತಾವರೆಯ ಮೊಗ್ಗುಗಳಂತಿರುವ ತನ್ನ ಅಡಿಗಳನ್ನು ಮೆಲ್ಲಗೆ ಇಟ್ಟು ನಡೆಯುತ್ತ ಭಗವಂತನು ಬಂದಿರುವನೇ ಎಂಬುದನ್ನು ಕಾಣುವುದಕ್ಕಾಗಿ ಎಡಗೈ ಬೆರಳುಗಳಿಂದ ಮುಂಗುರುಳನ್ನು ಸರಿಸಿ ಅಲ್ಲಿ ನೆರೆದಿದ್ದ ರಾಜರನ್ನು ನಾಚುತ್ತ ನೋಡುತ್ತ ಶ್ರೀಕೃಷ್ಣನನ್ನು ಕಂಡಳು (೫೪). ಇನ್ನೇನು ರಾಜಕನ್ಯೆಯು ರಥವನ್ನು ಹತ್ತಬೇಕು ಎಂಬಷ್ಟರಲ್ಲಿ ಮಾಧವನು ಮುಂದೆ ಬಂದು, ವೈರಿಗಳು ಮಿಟಮಿಟನೆ ನೋಡುತ್ತಿರುವಾಗಲೇ ರುಕ್ಮಿಣಿಯನ್ನು ಗರುಡ ಚಿಹ್ನಾಂಕಿತವಾದ ತನ್ನ ರಥದಲ್ಲೇರಿಸಿದನು. ನರಿಗಳ ನಡುವೆ ನುಗ್ಗಿ ಸಿಂಹವು ತನ್ನ ಪಾಲನ್ನು ಕೊಂಡೊಯ್ಯುವಂತೆ, ನೆರೆದಿದ್ದ ನೃಪತಿಗಳನ್ನು ಧಿಕ್ಕರಿಸಿ ಶ್ರೀಕೃಷ್ಣನು ರುಕ್ಮಿಣಿಯನ್ನಪಹರಿಸಿಕೊಂಡು ಬಲರಾಮಾದಿಗಳೊಡನೆ ಹೊರಟುಹೋದನು (೫೫). ಆಗ ಜರಾಸಂಧನ ನೇತೃತ್ವದಲ್ಲಿದ್ದ ಅಭಿಮಾನಶಾಲಿಗಳಾದ ಶತ್ರುರಾಜರು ತಮಗಾದ

ತತೋ ಯಯೌ ರಾಮಪುರೋಗಮೈಃ ಶನೈಃ
ಸೃಗಾಲಮಧ್ಯಾದಿವ ಭಾಗಹೃದ್ಧರಿಃ ॥

ತಂ ಮಾನಿನಃ ಸ್ವಾಭಿಭವಂ ಯಶಃಕ್ಷಯಂ
ಪರೇ ಜರಾಸಂಧವಶಾ ನ ಸೇಹಿರೇ ।
ಅಹೋ ಧಿಗಸ್ಮಾನ್ ಯಶ ಆತ್ತಧನ್ವನಾಂ
ಗೋಪೈರ್ಹೃತಂ ಕೇಸರಿಣಾಂ ಮೃಗೈರಿವ ॥ ೫೭

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಉತ್ತರಾರ್ಧೇ
ತ್ರಿಪಂಚಾಶತ್ತಮಾಧ್ಯಾಯಃ

ಚತುಃಪಂಚಾಶತ್ತಮಾಧ್ಯಾಯಃ

ಶ್ರೀಶುಕ ಉವಾಚ-
ಇತಿ ಸರ್ವೇ ಸುಸಂರಬ್ಧಾ ವಾಹಾನಾರುಹ್ಯ ದಂಶಿತಾಃ ।
ಸ್ವೈಃ ಸ್ವೈರ್ಬಲೈಃ ಪರಿಕ್ರಾಂತಾ ಅನ್ವೀಯುರ್ಧೃತಕಾರ್ಮುಕಾಃ ॥ ೧

ಅವಮಾನವನ್ನೂ ಕೀರ್ತಿಕ್ಷಯವನ್ನೂ ಸಹಿಸಲಾರದೆ "ಆಃ, ನಮಗೆ ಧಿಕ್ಕಾರ ! ಧನುರ್ಧಾರಿಗಳಾದ ನಮ್ಮ ಕೀರ್ತಿಯನ್ನು ದನಕಾಯುವವರು ಅಪಹರಿಸಿದರಲ್ಲ! ಸಿಂಹಗಳ ಕೀರ್ತಿಯನ್ನು ಜಿಂಕೆಗಳು ಕಸಿದುಕೊಂಡಂತಾಯಿತು !" ಎಂದು ಹೇಳಿಕೊಂಡರು (೫೭).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಐವತ್ತುಮೂರನೆಯ ಅಧ್ಯಾಯ

ಅಧ್ಯಾಯ ೫೪

ಯಾದವರಿಂದ ಜರಾಸಂಧಾದಿಗಳ ಸೋಲು, ಶ್ರೀಕೃಷ್ಣನು ರುಕ್ಮಿಯನ್ನು ಸೆರೆಹಿಡಿಯುವುದು, ಬಲರಾಮನು ರುಕ್ಮಿಣಿಗೆ ಸಮಾಧಾನ ಹೇಳುವುದು, ದ್ವಾರಕೆಯಲ್ಲಿ ಶ್ರೀಕೃಷ್ಣರುಕ್ಮಿಣಿಯರ ವಿವಾಹ.

ಹೀಗೆ ಸಕಲನೃಪಾಲರೂ ಸಂಕ್ಷುಬ್ಧರಾಗಿ ಕವಚವನ್ನು ತೊಟ್ಟು ಧನಸ್ಸುಗಳನ್ನು ಧರಿಸಿ ವಾಹನಗಳನ್ನೇರಿ ತಮ್ಮ ತಮ್ಮ ಸೇನೆಗಳಿಂದ ಪರಿವೃತರಾಗಿ ಬಲರಾಮ

ತಾನಾಪತತ ಆಲೋಕ್ಯ ಯಾದವಾನೀಕಯೂಥಪಾಃ ।
ತಸ್ಥುಸ್ತತ್ಸಂಮುಖಾ ರಾಜನ್ವಿಸ್ಫೂರ್ಜ್ಯ ಸ್ವಧನೂಂಷಿ ತೇ ॥ ೨

ಅಶ್ವಪೃಷ್ಠೇ ಗಜಸ್ಕಂಧೇ ರಥೋಪಸ್ಥೇ ಚ ಕೋವಿದಾಃ ।
ಮುಮುಚುಃ ಶರವರ್ಷಾಣಿ ಮೇಘಾ ಅದ್ರಿಷ್ವಪೋ ಯಥಾ ॥ ೩

ಪತ್ಯುರ್ಬಲಂ ಶರಾಸಾರೈಶ್ಛನ್ನಂ ವೀಕ್ಷ್ಯ ಸುಮಧ್ಯಮಾ ।
ಸವ್ರೀಡಮೈಕ್ಷತ್ತದ್ವಕ್ತ್ರಂ ಭಯವಿಹ್ವಲಲೋಚನಾ ॥ ೪

ಪ್ರಹಸ್ಯ ಭಗವಾನಾಹ ಮಾ ಸ್ಮ ಭೈರ್ವಾಮಲೋಚನೇ ।
ವಿನಂಕ್ಷ್ಯತ್ಯಧುನೈವೈತತ್ ತಾವಕೈಃ ಶಾತ್ರವಂ ಬಲಮ್ ॥ ೫

ತೇಷಾಂ ತದ್ವಿಕ್ರಮಂ ವೀರಾ ಗದಸಂಕರ್ಷಣಾದಯಃ ।
ಅಮೃಷ್ಯಮಾಣಾ ನಾರಾಚೈರ್ಜಘ್ನುರ್ಹಯಗಜಾನ್ ರಥಾನ್ ॥ ೬

ಪೇತುಃ ಶಿರಾಂಸಿ ರಥಿನಾಮಶ್ವಿನಾಂ ಗಜಿನಾಂ ಭುವಿ ।
ಸಕುಂಡಲಕಿರೀಟಾನಿ ಸೋಷ್ಣೀಷಾಣಿ ಚ ಕೋಟಿಶಃ ॥ ೭

ಕೃಷ್ಣರನ್ನು ಬೆನ್ನಟ್ಟಿ ಹೋದರು (೧). ಹೀಗೆ ಅಟ್ಟಿಸಿಕೊಂಡು ಬರುವ ರಾಜರನ್ನು ನೋಡಿ ಯಾದವ ಸೇನಾಪತಿಗಳು ತಮ್ಮ ಧನಸ್ಸುಗಳನ್ನು ಝೇಂಕರಿಸುತ್ತ ಅವರನ್ನು ಎದುರಿಸಿದರು. ಕುದುರೆಗಳ ಬೆನ್ನಲ್ಲಿ-ಆನೆಗಳ ಹೆಗಲಲ್ಲಿ-ರಥಗಳ ಮಧ್ಯದಲ್ಲಿ ಕುಳಿತು ಯುದ್ಧ ಮಾಡಲು ಚತುರರಾದ ಜರಾಸಂಧಾದಿಗಳು ಬೆಟ್ಟಗಳ ಮೇಲೆ ಮೋಡಗಳು ಮಳೆ ಸುರಿಯುವಂತೆ, ಯಾದವರ ಮೇಲೆ ಬಾಣಗಳ ಮಳೆಗರೆದರು (೨-೩). ಶರಗಳ ಜಡಿಮಳೆಯಿಂದ ಶ್ರೀಕೃಷ್ಣನ ಸೇನೆಯು ಆಕ್ರಾಂತವಾದುದನ್ನು ಕಂಡು ರುಕ್ಮಿಣಿಯು ಹೆದರಿ ತತ್ತರಿಸುವ ಕಣ್ಣುಗಳಿಂದ ಪತಿಯ ಮುಖವನ್ನು ನಾಚುತ್ತ ನೋಡಿದಳು (೪). ಶ್ರೀಕೃಷ್ಣನು ನಗುತ್ತ ''ಸುಂದರಿ, ಹೆದರಬೇಡ ನಿನ್ನ ಯಾದವ ಸೈನಿಕರಿಂದ ಈಗಲೇ ಶತ್ರು ಬಲವು ಕಣ್ಣಿಗೆ ಕಾಣದಂತೆ ಲಯಗೊಳ್ಳುವುದು'' ಎಂದನು (೫). ಬಲರಾಮ, ಗದ-ಮೊದಲಾದ ವೀರರು ವೈರಿಗಳ ಆಕ್ರಮಣವನ್ನು ಸೈರಿಸದೆ, ವೈರಿಗಳ ಅಶ್ವಗಜರಥಗಳನ್ನು ನಾರಾಚಗಳಿಂದ ಸದೆಬಡಿಯಲಾರಂಭಿಸಿದರು. ರಥಿಕರ,

ಹಸ್ತಾಃ ಸಾಸಿಗದೇಷ್ವಾಸಾಃ ಕರಭಾ ಊರವೋಽಂಘ್ರಯಃ ।
ಅಶ್ವಾಶ್ವತರನಾಗೋಷ್ಟ್ರಖರಮರ್ತ್ಯಶಿರಾಂಸಿ ಚ ॥ ೮

ಹನ್ಯಮಾನಬಲಾನೀಕಾ ವೃಷ್ಣಿಭಿರ್ಜಯಕಾಂಕ್ಷಿಭಿಃ ।
ರಾಜಾನೋ ವಿಮುಖಾ ಜಗ್ಮುರ್ಜರಾಸಂಧಪುರಃಸರಾಃ ॥ ೯

ಶಿಶುಪಾಲಂ ಸಮಭ್ಯೇತ್ಯ ಹೃತದಾರಮಿವಾತುರಮ್ ।
ನಷ್ಟತ್ವಿಷಂ ಗತೋತ್ಸಾಹಂ ಶುಷ್ಯದ್ವದನಮಬ್ರುವನ್ ॥ ೧೦

ಭೋ ಭೋಃ ಪುರುಷಶಾರ್ದೂಲ ದೌರ್ಮನಸ್ಯಮಿದಂ ತ್ಯಜ ।
ನ ಪ್ರಿಯಾಪ್ರಿಯಯೋ ರಾಜನ್ ನಿಷ್ಠಾ ದೇಹಿಷು ದೃಶ್ಯತೇ ॥ ೧೧

ಯಥಾ ದಾರುಮಯೀ ಯೋಷಿನ್ನೃತ್ಯತೇ ಕುಹಕೇಚ್ಛಯಾ ।
ಏವಮೀಶ್ವರತಂತ್ರೋಽಯಮೀಹತೇ ಸುಖದುಃಖಯೋಃ ॥ ೧೨

ಶೌರೇಃ ಸಪ್ತದಶಾಹಂ ವೈ ಸಂಯುಗಾನಿ ಪರಾಜಿತಃ ।
ತ್ರಯೋವಿಂಶತಿಭಿಃ ಸೈನ್ಯೈರ್ಜಿಗ್ಯ ಏಕಮಹಂ ಪರಮ್ ॥ ೧೩

ಸವಾರರ ಮತ್ತು ಗಜಾರೋಹಿಗಳ ತಲೆಗಳು ಕುಂಡಲ ಕಿರೀಟ ರುಮಾಲುಗಳ ಸಹಿತವಾಗಿ ಲೆಕ್ಕವಿಲ್ಲದಷ್ಟು ಧರೆಗುರುಳಿದವು (೬-೭). ಕತ್ತಿ ಗದೆ ಬಿಲ್ಲುಗಳನ್ನು ಹಿಡಿದ ಕೈಗಳು ಸೊಂಡಿಲುಗಳು ತೊಡೆಗಳು ಕಾಲುಗಳು ಮತ್ತು ಕುದುರೆ ಹೇಸರಗತ್ತೆ ಆನೆ ಒಂಟೆ ಕತ್ತೆ ಮನುಷ್ಯರ ಶಿರಗಳೂ ಉರುಳಿದವು (೮). ಜಯ ಕಾಂಕ್ಷಿಗಳಾದ ಯಾದವರ ಜಡಿತದಿಂದ ವೈರಿ ಸೈನಿಕರು ತತ್ತರಿಸಿ ಸತ್ತು ಬೀಳುತ್ತಿರಲು, ಜರಾಸಂಧಾದಿ ನೃಪಾಲರು ಹಿಮ್ಮೆಟ್ಟಿ ವಿಮುಖರಾಗಿ ಓಡಿ ಹೋದರು (೯). ಇತ್ತ ಶಿಶುಪಾಲನು ಹೆಂಡತಿಯನ್ನು ಕಳೆದು ಕೊಂಡವನಂತೆ ಖಿನ್ನನಾಗಿ ಕಳೆಗುಂದಿ ಗೆಲುವಿಲ್ಲದೆ ಬಾಡಿದ ಮೋರೆಯವನಾದನು (೧೦). ಅವನನ್ನು ನೋಡಿ ಜರಾಸಂಧಾದಿಗಳು "ಅಯ್ಯಾ ಪುರುಷಶಾರ್ದೂಲ, ಈ ಮನೋವಿಷಣ್ಣತೆಯನ್ನು ಬಿಡು. ಮಹಾರಾಜ, ಮನುಷ್ಯರಲ್ಲಿ ಸುಖ ದುಃಖಗಳು ಶಾಶ್ವತವಲ್ಲ. ಮರದ ಹೆಣ್ಣುಬೊಂಬೆಯು ಸೂತ್ರಧಾರನ ಇಚ್ಛೆಯ ನ್ನನುಸರಿಸಿ ಕುಣಿಯುವಂತೆ, ಮನುಷ್ಯನು ಈಶ್ವರನಿಗೆ ಅಧೀನನಾಗಿ ಸುಖ ದುಃಖಗಳಿಗೆ ಒಳಗಾಗಿ ನಡೆದುಕೊಳ್ಳುವನು (೧೧-೧೨). (ಜರಾಸಂಧನು

ತಥಾಪ್ಯಹಂ ನ ಶೋಚಾಮಿ ನ ಪ್ರಹೃಷ್ಯಾಮಿ ಕರ್ಹಿಚಿತ್ ।
ಕಾಲೇನ ದೈವಯುಕ್ತೇನ ಜಾನನ್ ವಿದ್ರಾವಿತಂ ಜಗತ್ ॥ ೧೪

ಅಧುನಾಪಿ ವಯಂ ಸರ್ವೇ ವೀರಯೂಥಪಯೂಥಪಾಃ ।
ಪರಾಜಿತಾಃ ಫಲ್ಗು ತಂತ್ರೈರ್ಯದುಭಿಃ ಕೃಷ್ಣಪಾಲಿತೈಃ ॥ ೧೫

ರಿಪವೋ ಜಿಗ್ಯುರಧುನಾ ಕಾಲ ಆತ್ಮಾನುಸಾರಿಣಿ ।
ತದಾ ವಯಂ ವಿಜೇಷ್ಯಾಮೋ ಯದಾ ಕಾಲಃ ಪ್ರದಕ್ಷಿಣಃ ॥ ೧೬

ಏವಂ ಪ್ರಬೋಧಿತೋ ಮಿತ್ರೈಶ್ಚೈದ್ಯೋಽಗಾತ್ ಸಾನುಗಃ ಪುರಮ್ ।
ಹತಶೇಷಾಃ ಪುನಸ್ತೇಽಪಿ ಯಯುಃ ಸ್ವಂ ಸ್ವಂ ಪುರಂ ನೃಪಾಃ ॥ ೧೭
ರುಕ್ಮೀ ತು ರಾಕ್ಷಸೋದ್ವಾಹಂ ಕೃಷ್ಣದ್ವಿಡಸಹನ್ ಸ್ವಸುಃ ।
ಪೃಷ್ಠತೋಽನ್ವಗಮತ್ ಕೃಷ್ಣಮಕ್ಷೌಹಿಣ್ಯಾ ವೃತೋ ಬಲೀ ॥ ೧೮

ರುಕ್ಮ್ಯಮರ್ಷೀ ಸುಸಂರಬ್ಧಃ ಶೃಣ್ವತಾಂ ಸರ್ವಭೂಭುಜಾಮ್ ।
ಪ್ರತಿಜಜ್ಞೇ ಮಹಾಬಾಹುರ್ದಂಶಿತಃ ಸಶರಾಸನಃ ॥ ೧೯

ಹೇಳುತ್ತಾನೆ)- ಇಪ್ಪತ್ತು ಮೂರು ಅಕ್ಷೌಹಿಣೀ ಸೇನೆಗಳಿಂದ ಸಹಿತನಾಗಿ ಹೋದರೂ ನಾನು ಕೃಷ್ಣನಿಂದ ಹದಿನೇಳು ಯುದ್ಧಗಳಲ್ಲಿ ಸೋತು ಹೋದೆನು. ಕಡೆಗೆ ಇನ್ನೊಂದು ಯುದ್ಧದಲ್ಲಿ ಮಾತ್ರ ನಾನು ಗೆದ್ದೆನು (೧೩). ಆದರೂ ನಾನು ಎಂದಿಗೂ ಕುಗ್ಗುವುದೂ ಇಲ್ಲ, ಹಿಗ್ಗುವುದೂ ಇಲ್ಲ. ಏಕೆಂದರೆ, ಈ ಜಗತ್ತು ದೈವಾಧೀನವಾದ ಕಾಲದ ತೂರಾಟದಲ್ಲಿ ಸಿಕ್ಕಿಕೊಂಡಿದೆಯೆಂದು ಬಲ್ಲೆನು. ಈಗಲೂ ಸಹ ಕೃಷ್ಣನ ಕೈಕೆಳಗಿದ್ದ ಸೈನಿಕರು ಅಲ್ಪರಾಗಿದ್ದರೂ ಮಹಾವೀರಾಧಿವೀರರಾದ ನಾವು ಸೋತುಹೋದೆವು! (೧೪-೧೫). ಕಾಲವು ಈಗ ವೈರಿಗಳಿಗೆ ಅನುಕೂಲವಾಗಿದ್ದುದರಿಂದ ಅವರು ಗೆದ್ದರು. ಕಾಲವು ನಮಗೆ ಅನುಕೂಲವಾದಾಗ ನಾವೂ ಗೆಲ್ಲುವೆವು'' ಎಂದರು (೧೬). ಹೀಗೆ ಮಿತ್ರರು ಸಂತೈಸಲಾಗಿ ಶಿಶುಪಾಲನು ಪರಿವಾರದೊಂದಿಗೆ ತನ್ನ ನಗರಕ್ಕೆ ಹಿಂದಿರುಗಿದನು. ಅಳಿದುಳಿದ ರಾಜರೂ ಸಹ ತಮ್ಮ ತಮ್ಮ ನಗರಗಳಿಗೆ ಹೋದರು (೧೭). ಕೃಷ್ಣದ್ವೇಷಿಯೂ ಬಲಾಢ್ಯನೂ ಆದ ರುಕ್ಮಿಯು ತನ್ನ ತಂಗಿಯ ಈ ಬಲಾತ್ಕಾರ ವಿವಾಹವನ್ನು ತಾಳಲಾರದೆ, ಒಂದು ಅಕ್ಷೌಹಿಣೀ ಸೇನೆಯೊಡನೆ ಶ್ರೀಕೃಷ್ಣನ ಬೆನ್ನಟ್ಟಿ

ಅಹತ್ವಾ ಸಮರೇ ಕೃಷ್ಣಮಪ್ರತ್ಯೂಹ್ಯ ಚ ರುಕ್ಮಿಣೀಮ್ ।
ಕುಂಡಿನಂ ನ ಪ್ರವೇಕ್ಷ್ಯಾಮಿ ಸತ್ಯಮೇತದ್ ಬ್ರವೀಮಿ ವಃ ॥ ೨೦

ಇತ್ಯುಕ್ತ್ವಾ ರಥಮಾರುಹ್ಯ ಸಾರಥಿಂ ಪ್ರಾಹ ಸತ್ವರಃ ।
ಚೋದಯಾಶ್ವಾನ್ ಯತಃ ಕೃಷ್ಣಸ್ತಸ್ಯ ಮೇ ಸಂಯುಗಂ ಭವೇತ್ ೨೧

ಅದ್ಯಾಹಂ ನಿಶಿತೈರ್ಬಾಣೈರ್ಗೋಪಾಲಸ್ಯ ಸುದುರ್ಮತೇಃ ।
ನೇಷ್ಯೇ ವೀರ್ಯಮದಂ ಯೇನ ಸ್ವಸಾ ಮೇ ಪ್ರಸಭಂ ಹೃತಾ ॥ ೨೨

ವಿಕತ್ಥಮಾನಃ ಕುಮತಿರೀಶ್ವರಸ್ಯಾಪ್ರಮಾಣವಿತ್ ।
ರಥೇನೈಕೇನ ಗೋವಿಂದಂ ತಿಷ್ಠ ತಿಷ್ಠೇತ್ಯಥಾಹ್ವಯತ್ ॥ ೨೩

ಧನುರ್ವಿಕೃಷ್ಯ ಸುದೃಢಂ ಜಘ್ನೇ ಕೃಷ್ಣಂ ತ್ರಿಭಿಃ ಶರೈಃ ।
ಆಹ ಚಾತ್ರ ಕ್ಷಣಂ ತಿಷ್ಠ ಯದೂನಾಂ ಕುಲಪಾಂಸನ ॥ ೨೪

ಕುತ್ರ ಯಾತಿ ಸ್ವಸಾರಂ ಮೇ ಮುಷಿತ್ವಾ ಧ್ವಾಂಕ್ಷವದ್ಧವಿಃ ।
ಹರಿಷ್ಯೇಽದ್ಯ ಮದಂ ಮಂದ ಮಾಯಿನಃ ಕೂಟಯೋಧಿನಃ ॥ ೨೫

ಹೋದನು (೧೮). ಹೋಗುವಾಗ ಮಹಾಬಾಹುವಾದ ರುಕ್ಮಿಯು ಅತ್ಯಂತ ಕ್ರೋಧದಿಂದ ತಳಮಳಗೊಂಡು ಕವಚಧಾರಿಯಾಗಿ ಧನಸ್ಸನ್ನು ಹಿಡಿದು ಸಕಲ ರಾಜರೆದುರಿಗೆ ''ರಣರಂಗದಲ್ಲಿ ಕೃಷ್ಣನನ್ನು ಕೊಲ್ಲದೆ ರುಕ್ಮಿಣಿಯನ್ನು ಹಿಂದಕ್ಕೆ ಕರೆತರದೆ ಕುಂಡಿನಪುರವನ್ನು ಪ್ರವೇಶಿಸುವುದಿಲ್ಲ! ನಿಮ್ಮೆದುರಿಗೆ ಸತ್ಯಪ್ರತಿಜ್ಞೆ ಮಾಡುತ್ತಿದ್ದೇನೆ'' ಎಂದನು (೧೯-೨೦). ಹೀಗೆ ನುಡಿದು ರುಕ್ಮಿಯು ರಥವನ್ನೇರಿ ಸಾರಥಿಯನ್ನು ಕುರಿತು ''ಸಾರಥಿ, ಕೃಷ್ಣನು ಹೋದೆಡೆಗೆ ರಥವನ್ನೋಡಿಸು. ಇಂದು ಅವನೊಡನೆ ನನಗೆ ಹೋರಾಟ ನಡೆಯುವುದು. ನನ್ನ ತಂಗಿಯನ್ನು ಆ ಗೊಲ್ಲನು ಬಲಾತ್ಕಾರದಿಂದ ಅಪಹರಿಸಿದ್ದಾನೆ. ಆ ದುಷ್ಟನ ಶೌರ್ಯಮದವನ್ನು ನಿಶಿತಾಸ್ತ್ರಗಳಿಂದ ಅಡಗಿಸುವೆನು'' ಎಂದನು (೨೧-೨೨). ಹೀಗೆ ಆ ದುರ್ಬುದ್ಧಿಯು ಜಗದೊಡೆಯನ ಸಾಮರ್ಥ್ಯದ ಬಲುಹನ್ನರಿಯದೆ ಜಂಬವನ್ನು ಕೊಚ್ಚುತ್ತ ಧಾವಿಸಿ ಏಕರಥದಲ್ಲಿ ಮುಂದೆಹೋಗಿ ಗೋವಿಂದನನ್ನು ತಡೆದು 'ನಿಲ್ಲು ನಿಲ್ಲು' ಎಂದು ಯುದ್ಧಕ್ಕೆ ಕರೆದನು (೨೩). ಬಲವಾಗಿ ಧನುಸ್ಸಿನ ಹೆದೆಯನ್ನು ಮೀಟಿ ಶ್ರೀಕೃಷ್ಣನ ಮೇಲೆ ಮೂರು ಬಾಣಗಳನ್ನು ತೂರಿದನು. ಮತ್ತು

ಯಾವನ್ನ ಮೇ ಹತೋ ಬಾಣೈಃ ಶಯೀಥಾ ಮುಂಚ ದಾರಿಕಾಮ್ ।
ಸ್ಮಯನ್ ಕೃಷ್ಣೋ ಧನುಶ್ಛಿತ್ತ್ವಾ ಷಡ್ಭಿರ್ವಿವ್ಯಾಧ ರುಕ್ಮಿಣಮ್ ॥ ೨೬

ಅಷ್ಟಭಿಶ್ಚತುರೋ ವಾಹಾನ್ ದ್ವಾಭ್ಯಾಂ ಸೂತಂ ಧ್ವಜಂ ತ್ರಿಭಿಃ ।
ಸ ಚಾನ್ಯದ್ ಧನುರಾದಾಯ ಕೃಷ್ಣಂ ವಿವ್ಯಾಧ ಪಂಚಭಿಃ ॥ ೨೭

ತೈಸ್ತಾಡಿತಃ ಶರೌಘೈಸ್ತು ಚಿಚ್ಛೇದ ಧನುರಚ್ಯುತಃ ।
ಪುನರನ್ಯದುಪಾದತ್ತ ತದಪ್ಯಚ್ಛಿನದವ್ಯಯಃ ॥ ೨೮

ಪರಿಘಂ ಪಟ್ಟಿಶಂ ಶೂಲಂ ಚರ್ಮಾಸೀ ಶಕ್ತಿತೋಮರೌ ।
ಯದ್ ಯದಾಯುಧಮಾದತ್ತ ತತ್ ಸರ್ವಂ ಸೋಽಚ್ಛಿನದ್ಧರಿಃ ॥ ೨೯

ತತೋ ರಥಾದವಪ್ಲುತ್ಯ ಖಡ್ಗಪಾಣಿರ್ಜಿಘಾಂಸಯಾ ।
ಕೃಷ್ಣಮಭ್ಯದ್ರವತ್ ಕ್ರುದ್ಧಃ ಪತಂಗ ಇವ ಪಾವಕಮ್ ॥ ೩೦

''ಎಲೋ ಯದುವಂಶದ ಕುಲಗೇಡಿ! ಒಂದು ಕ್ಷಣ ಕಾಲ ನಿಲ್ಲು. ಕಾಗೆಯು ಹವಿಸ್ಸನ್ನು ಅಪಹರಿಸುವಂತೆ ನನ್ನ ತಂಗಿಯನ್ನು ಎಲ್ಲಿಗೆ ಕದ್ದೊಯ್ಯುವೆ ? ಬುದ್ಧಿಗೇಡಿ, ಕಪಟಯುದ್ಧಮಾಡುವ ಮೋಸಗಾರನಾದ ನಿನ್ನ ಮದವನ್ನು ಈದಿನ ಮುಗಿಸುವೆನು (೨೪-೨೫). ನನ್ನ ಶರಗಳಿಂದ ಪ್ರಾಣವನ್ನು ತೊರೆದು ಒರಗುವುದರೊಳಗಾಗಿ ಈ ಹುಡುಗಿಯನ್ನು ಬಿಟ್ಟುಬಿಡು'' ಎಂದು ಕೂಗಿದನು. ಶ್ರೀಕೃಷ್ಣನು ನಗುತ್ತ ರುಕ್ಮಿಯ ಧನುಸ್ಸನ್ನು ಕತ್ತರಿಸಿ ಅವನ ಮೇಲೆ ಆರು ಬಾಣಗಳನ್ನು ತೂರಿದನು (೨೬). ಮತ್ತು ರುಕ್ಮಿಯ ನಾಲ್ಕು ಕುದುರೆಗಳನ್ನು ಎಂಟು ಶರಗಳಿಂದ ಬಿಗಿದು ಎರಡು ಅಂಬುಗಳಿಂದ ಸಾರಥಿಯನ್ನು ಹೊಡೆದು ಮೂರರಿಂದ ಧ್ವಜವನ್ನು ಕತ್ತರಿಸಿದನು. ಆಗ ರುಕ್ಮಿಯು ಮತ್ತೊಂದು ಬಿಲ್ಲನ್ನು ಹಿಡಿದು ಶ್ರೀಕೃಷ್ಣನನ್ನು ಐದು ಸರಳುಗಳಿಂದ ಹೊಡೆದನು. ಅವುಗಳಿಂದ ಗಾಯಗೊಂಡ ಅಚ್ಯುತನು ಮತ್ತೆ ಅವನ ಚಾಪವನ್ನು ಛೇದಿಸಿದನು. ಅವನು ಮತ್ತೊಂದು ಚಾಪವನ್ನು ಎತ್ತಿಕೊಳ್ಳಲು ಅದನ್ನೂ ಕತ್ತರಿಸಿದನು (೨೭-೨೮). ಆಮೇಲೆ ರುಕ್ಮಿಯು ಪರಿಘ, ಪಟ್ಟಿಶ, ಶೂಲ, ಢಾಲು, ಕತ್ತಿ, ಶಕ್ತಿ, ತೋಮರ ಮುಂತಾದ ಯಾವ ಯಾವ ಆಯುಧವನ್ನು ಹಿಡಿದನೋ ಅದೆಲ್ಲವನ್ನೂ ಶ್ರೀಕೃಷ್ಣನು ಕಡಿದೊಗೆದನು (೨೯). ಕಡೆಗೆ ಕ್ರುದ್ಧನಾದ ರುಕ್ಮಿಯು ಕೃಷ್ಣನನ್ನು ಕೊಲ್ಲಬೇಕೆಂದು

ತಸ್ಯ ಚಾಪತತಃ ಖಡ್ಗಂ ತಿಲಶಶ್ಚರ್ಮ ಚೇಷುಭಿಃ ।
ಛಿತ್ವಾಸಿಮಾದದೇ ತಿಗ್ಮಂ ರುಕ್ಮಿಣಂ ಹಂತುಮುದ್ಯತಃ ॥ ೩೧

ದೃಷ್ಟ್ವಾ ಭ್ರಾತೃವಧೋದ್ಯೋಗಂ ರುಕ್ಮಿಣೀ ಭಯವಿಹ್ವಲಾ ।
ಪತಿತ್ವಾ ಪಾದಯೋರ್ಭರ್ತುರುವಾಚ ಕರುಣಂ ಸತೀ ॥ ೩೨

ಯೋಗೇಶ್ವರಾಪ್ರಮೇಯಾತ್ಮನ್ ದೇವದೇವ ಜಗತ್ಪತೇ ।
ಹಂತುಂ ನಾರ್ಹಸಿ ಕಲ್ಯಾಣ ಭ್ರಾತರಂ ಮೇ ಮಹಾಭುಜ ॥ ೩೩

ಶ್ರೀಶುಕ ಉವಾಚ-

ತಯಾ ಪರಿತ್ರಾಸವಿಕಂಪಿತಾಂಗಯಾ
ಶುಚಾವಶುಷ್ಯನ್ಮುಖರುದ್ಧಕಂಠಯಾ ।
ಕಾತರ್ಯ ವಿಸ್ರಂಸಿತಹೇಮಮಾಲಯಾ
ಗೃಹೀತಪಾದಃ ಕರುಣೋ ನ್ಯವರ್ತತ ॥ ೩೪

ಚೈಲೇನ ಬದ್ಧ್ವಾ ತಮಸಾಧುಕಾರಿಣಂ
ಸಶ್ಮಶ್ರುಕೇಶಂ ಪ್ರವಪನ್ ವ್ಯರೂಪಯತ್ ।
ತಾವನ್ಮಮರ್ದುಃ ಪರಸೈನ್ಯಮದ್ಭುತಂ
ಯದುಪ್ರವೀರಾ ನಲಿನೀಂ ಯಥಾ ಗಜಾಃ ॥ ೩೫

ಕತ್ತಿಯನ್ನೆತ್ತಿ ಹಿಡಿದು ರಥದಿಂದ ಧುಮುಕಿ, ದೀಪದ ಹುಳು ಬೆಂಕಿಯ ಮೇಲೆ ಎರಗುವಂತೆ ನುಗ್ಗಿ ಬಂದನು (೩೦). ನುಗ್ಗಿ ಬರುತ್ತಿದ್ದ ರುಕ್ಮಿಯ ಕತ್ತಿಯನ್ನೂ ಡಾಲನ್ನೂ ಶ್ರೀಕೃಷ್ಣನು ಬಾಣಗಳಿಂದ ಚೂರುಚೂರಾಗಿ ಕತ್ತರಿಸಿ, ರುಕ್ಮಿಯನ್ನು ಸಂಹರಿಸಬೇಕೆಂದು ಹರಿತವಾದ ಖಡ್ಗವನ್ನು ಸೆಳೆದನು (೩೧). ಅಣ್ಣನನ್ನು ತುಂಡರಿಸಲು ಶ್ರೀಕೃಷ್ಣನು ಉದ್ಯುಕ್ತನಾದುದನ್ನು ನೋಡಿ ರುಕ್ಮಿಣಿಯು ಭಯದಿಂದ ಕಂಗೆಟ್ಟು ಪತಿಯ ಪಾದಗಳಿಗೆ ಅಡ್ಡಬಿದ್ದು ಕರುಣಸ್ವರದಿಂದ ''ಯೋಗೇಶ್ವರ, ಅಚಿಂತ್ಯಮಹಿಮ, ದೇವ ದೇವ, ಜಗತ್ಪತಿ, ನನ್ನ ಅಣ್ಣನನ್ನು ಹೇ ಶುಭಾಂಗ, ಕೊಲ್ಲಬೇಡ'' ಎಂದು ಬೇಡಿಕೊಂಡಳು (೩೨-೩೩). ಪರೀಕ್ಷಿತರಾಜ, ಇಂತು ಭಯದಿಂದ ಸರ್ವಾಂಗಗಳೂ ನಡುಗುತ್ತಿರಲು, ಶೋಕದಿಂದ ಬಾಯಿ ಒಣಗಿ ಕುತ್ತಿಗೆಯು ಒತ್ತಿಬಂದಿರಲು, ಹೆದರಿಕೆಯಿಂದ ಚಿನ್ನದ ಮಾಲೆ ಸಡಲಿ ಜಾರುತ್ತಿರಲು

ಕೃಷ್ಣಾಂತಿಕಮುಪವ್ರಜ್ಯ ದದೃಶುಸ್ತತ್ರ ರುಕ್ಮಿಣಮ್ ।
ತಥಾಭೂತಂ ಹತಪ್ರಾಯಂ ದೃಷ್ಟ್ವಾ ಸಂಕರ್ಷಣೋ ವಿಭುಃ ।
ವಿಮುಚ್ಯ ಬದ್ಧಂ ಕರುಣೋ ಭಗವಾನ್ ಕೃಷ್ಣಮಬ್ರವೀತ್ ॥ ೩೬

ಅಸಾಧ್ವಿದಂ ತ್ವಯಾ ಕೃಷ್ಣ ಕೃತಮಸ್ಮಜ್ಜುಗುಪ್ಸಿತಮ್ ।
ವಪನಂ ಶ್ಮಶ್ರುಕೇಶಾನಾಂ ವೈರೂಪ್ಯಂ ಸೂಹೃದೋ ವಧಃ ॥ ೩೭

ಮೈವಾಸ್ಮಾನ್ ಸಾಧ್ವ್ಯಸೂಯೇಥಾ ಭ್ರಾತುರ್ವೈರೂಪ್ಯಚಿಂತಯಾ ।
ಸುಖದುಃಖದೋ ನ ಚಾನ್ಯೋಽಸ್ತಿ ಯತಃ ಸ್ವಕೃತಭುಕ್ ಪುಮಾನ್ ॥

ಬಂಧುರ್ವಧಾರ್ಹದೋಷೋಽಪಿ ನ ಬಂಧೋರ್ವಧಮರ್ಹತಿ ।
ತ್ಯಾಜ್ಯಃ ಸ್ವೇನೈವ ದೋಷೇಣ ಹತಃ ಕಿಂ ಹನ್ಯತೇ ಪುನಃ ॥ ೩೯

ರುಕ್ಮಿಣಿಯು ಶ್ರೀಕೃಷ್ಣನ ಪಾದಗಳನ್ನು ಹಿಡಿದುಕೊಳ್ಳಲಾಗಿ ಅವನು ಕಾರುಣ್ಯದಿಂದ ರುಕ್ಮಿಯನ್ನು ಕೊಲ್ಲದೆ ಹಿಮ್ಮೆಟ್ಟಿದನು (೩೪). ಅಕಾರ್ಯವನ್ನು ಮಾಡಿದ ರುಕ್ಮಿಯನ್ನು ಬಟ್ಟೆಯಿಂದ ಬಿಗಿದು ಕಟ್ಟಿ ಅವನ ಗಡ್ಡ ಮೀಸೆಗಳನ್ನೂ ತಲೆಗೂದಲನ್ನೂ ಅಲ್ಲಲ್ಲಿ ಬೋಳಿಸಿ ವಿರೂಪಗೊಳಿಸಿದನು. ಅಷ್ಟರಲ್ಲಿ ಆನೆಗಳು ತಾವರೆಯ ಕೊಳವನ್ನು ಕಿತ್ತು ಈಡಾಡುವಂತೆ, ಯದುವೀರರು ಶತ್ರು ಸೈನ್ಯವನ್ನು ಅದ್ಭುತರೀತಿಯಲ್ಲಿ ಮರ್ದಿಸಿ ನಾಶಗೊಳಿಸಿದರು (೩೫). ಅನಂತರ ಶ್ರೀಕೃಷ್ಣನ ಬಳಿಗೆ ಬಂದು ರುಕ್ಮಿಯನ್ನು ಕಂಡರು. ವಿರೂಪಗೊಂಡ ಹತಪ್ರಾಯನಾಗಿದ್ದ ರುಕ್ಮಿಯನ್ನು ನೋಡಿ ಭಗವಾನ್ ಬಲರಾಮನು ಮರುಕದಿಂದ ಅವನ ಕಟ್ಟುಗಳನ್ನು ಬಿಚ್ಚಿ ಶ್ರೀಕೃಷ್ಣನನ್ನು ಕುರಿತು ಹೀಗೆಂದನು (೩೬). ''ಕೃಷ್ಣ ನೀನು ಮಾಡಿದ್ದು ಸರಿಯಲ್ಲ. ನಮಗೆ ಜುಗುಪ್ಸೆಯಾಗುವ ಕಾರ್ಯವನ್ನು ನಡೆಸಿದೆ. ಗಡ್ಡಮೀಸೆಗಳನ್ನೂ ತಲೆಗೂದಲನ್ನೂ ಬೋಳಿಸಿ ವಿರೂಪಗೊಳಿಸುವುದೆಂದರೆ ಮಿತ್ರನ ವಧೆಮಾಡಿದಂತೆ'' (೩೭). (ರುಕ್ಮಿಣಿಯ ಕಡೆ ತಿರುಗಿ) ಸಾಧ್ವಿ, ಸೋದರನಿಗೆ ವಿರೂಪವಾಯಿತೆಂಬ ಚಿಂತೆಯಿಂದ ನಮ್ಮಲ್ಲಿ ದೋಷ ವನ್ನೆಣಿಸಬೇಡ. ಮನುಷ್ಯನಿಗೆ ಸುಖದುಃಖಗಳನ್ನು ಕೊಡತಕ್ಕವನು ಬೇರೊಬ್ಬನಿಲ್ಲ. ತನ್ನ ಕರ್ಮಫಲವನ್ನು ತಾನೇ ಅನುಭವಿಸುತ್ತಾನೆ (೩೮). (ಶ್ರೀಕೃಷ್ಣನನ್ನು ನೋಡಿ) ''ಬಂಧುವಾದವನು ವಧಾರ್ಹವಾದ ಅಪರಾಧವನ್ನು ಮಾಡಿದ್ದರೂ ಅವನು

ಕ್ಷತ್ರಿಯಾಣಾಮಯಂ ಧರ್ಮಃ ಪ್ರಜಾಪತಿವಿನಿರ್ಮಿತಃ ।
ಭ್ರಾತಾಪಿ ಭ್ರಾತರಂ ಹನ್ಯಾದ್ ಯೇನ ಘೋರತರಸ್ತತಃ ॥ ೪೦

ರಾಜ್ಯಸ್ಯ ಭೂಮೇರ್ವಿತ್ತಸ್ಯ ಸ್ತ್ರಿಯಾ ಮಾನಸ್ಯ ತೇಜಸಃ ।
ಮಾನಿನೋಽನ್ಯಸ್ಯ ವಾ ಹೇತೋಃ ಶ್ರೀಮದಾಂಧಾಃ ಕ್ಷಿಪಂತಿ ಹಿ ॥ ೪೧

ತವೇಯಂ ವಿಷಮಾ ಬುದ್ಧಿಃ ಸರ್ವಭೂತೇಷು ದುರ್ಹೃದಾಮ್ ।
ಯನ್ಮನ್ಯಸೇ ಸದಾಭದ್ರಂ ಸುಹೃದಾಂ ಭದ್ರಮಜ್ಞವತ್ ॥ ೪೨

ಆತ್ಮಮೋಹೋ ನೃಣಾಮೇಷ ಕಲ್ಪ್ಯತೇ ದೇವಮಾಯಯಾ ।
ಸುಹೃದ್ ದುರ್ಹೃದುದಾಸೀನ ಇತಿ ದೇಹಾತ್ಮಾ ಮಾನಿನಾಮ್ । ೪೩

ಏಕ ಏವ ಪರೋ ಹ್ಯಾತ್ಮಾ ಸರ್ವೇಷಾಮಪಿ ದೇಹಿನಾಮ್
ನಾನೇವ ಗೃಹ್ಯತೇ ಮೂಢೈರ್ಯಥಾ ಜ್ಯೋತಿರ್ಯಥಾ ನಭಃ ॥ ೪೪

ಬಂಧುವೆ. ಅವನನ್ನುವಧಿಸಬಾರದು. ಅವನನ್ನುತ್ಯಜಿಸಬಹುದು. ತನ್ನ ತಪ್ಪಿನಿಂದ ಮೊದಲೇ ಸತ್ತುಹೋದವನನ್ನು ಮತ್ತೆ ಸಾಯಿಸುವುದೇನು ? '' (೩೯). (ರುಕ್ಮಿಣಿಯ ಕಡೆ ತಿರುಗಿ) ''ರಾಜಪುತ್ರಿ, ಬ್ರಹ್ಮನೇ ಗೊತ್ತು ಮಾಡಿದ ಕ್ಷತ್ರಿಯಧರ್ಮವಿದು. ಅದರ ಪ್ರಕಾರ ಸೋದರನು ಸೋದರನನ್ನೇ ಸಂಹರಿಸಬೇಕಾಗುತ್ತದೆ. ಇದಕ್ಕಿಂತ ಘೋರವಾವುದು ? '' (೪೦). (ಶ್ರೀಕೃಷ್ಣನನ್ನು ನೋಡಿ) ''ರಾಜ್ಯ, ನೆಲ, ಸಂಪತ್ತು, ಸ್ತ್ರೀ, ಮಾನ, ಕೀರ್ತಿ - ಇವುಗಳ ನಿಮಿತ್ತದಿಂದಲೋ ಬೇರೊಂದು ನಿಮಿತ್ತದಿಂದಲೋ ಮದಾಂಧರಾದ ಅಭಿಮಾನಿಗಳು ಅನ್ಯರನ್ನು ಪ್ರಹರಿಸುತ್ತಾರೆ'' (೪೧). (ರುಕ್ಮಿಣಿಯ ಕಡೆ ತಿರುಗಿ) ''ರುಕ್ಮಿಣಿ, ಸರ್ವಪ್ರಾಣಿಗಳಲ್ಲಿ ಶತ್ರುಗಳಿಗೆ ಸದಾ ಅಶುಭವೂ ಮಿತ್ರರಿಗೆ ಶುಭವೂ ಆಗಲೆಂದು ಅಜ್ಞಳಂತೆ ನೀನು ಹಾರೈಸುವುದು ನಿನ್ನ ಅವಿವೇಕವಾಗುತ್ತದೆ[1] (೪೨). ಏಕೆಂದರೆ ದೇಹವೇ ಆತ್ಮವೆಂದು ತಿಳಿದಿರುವ ಜನರಿಗೆ ಮಿತ್ರ, ಶತ್ರು, ಉದಾಸೀನ ಎಂಬ ಸ್ವರೂಪಭ್ರಾಂತಿಯು ಭಗವನ್ಮಾಯೆಯಿಂದ ಉಂಟಾಗಿರುತ್ತದೆ. ಸಕಲ ದೇಹಿಗಳಲ್ಲಿಯೂ ಇರತಕ್ಕವನು ಒಬ್ಬನೇ ಶುದ್ಧನಾದ ಆತ್ಮ. ಒಂದೇ ಸೂರ್ಯಜ್ಯೋತಿಯು ವಿಭಿನ್ನ ಜಲಾಶಯಗಳಲ್ಲಿಯೂ ಒಂದೇ ಆಕಾಶವು ಘಟಮಠಾದ್ಯುಪಾಧಿಗಳಲ್ಲಿಯೂ

---

೧ ಈ ಶ್ಲೋಕಕ್ಕೆ ವ್ಯಾಖ್ಯಾನಕಾರರು ಬರೆದ ಅರ್ಥವು ಕ್ಲಿಷ್ಟವೆಂದು ತಿಳಿದು ಇಲ್ಲಿ ಸ್ವೀಕರಿಸಿಲ್ಲ

ದೇಹ ಆದ್ಯಂತವಾನೇಷ ದ್ರವ್ಯಪ್ರಾಣಗುಣಾತ್ಮಕಃ।
ಆತ್ಮನ್ಯವಿದ್ಯಯಾಕ್ಲೃಪ್ತಃ ಸಂಸಾರಯತಿ ದೇಹಿನಮ್ ॥ ೪೫

ನಾತ್ಮನೋಽನ್ಯೇನ ಸಂಯೋಗೋ ವಿಯೋಗಶ್ಚಾಸತಃ ಸತಿ।
ತದ್ಧೇತುತ್ವಾತ್ತತ್ಪ್ರಸಿದ್ಧೇರ್ದೃಗ್ರೂಪಾಭ್ಯಾಂ ಯಥಾ ರವೇಃ॥ ೪೬

ಜನ್ಮಾದಯಸ್ತು ದೇಹಸ್ಯ ವಿಕ್ರಿಯಾ ನಾತ್ಮನಃ ಕ್ವಚಿತ್।
ಕಲಾನಾಮಿವ ನೈವೇಂದೋರ್ಮೃತಿರ್ಹ್ಯಸ್ಯ ಕುಹೂರಿವ॥ ೪೭

ಯಥಾ ಶಯಾನ ಆತ್ಮಾನಂ ವಿಷಯಾನ್ ಫಲಮೇವ ಚ।
ಅನುಭುಂಕ್ತೇಽಪ್ಯಸತ್ಯರ್ಥೇ ತಥಾಽಽಪ್ನೋತ್ಯಬುಧೋ ಭವಮ್ ॥ ೪೮

ವಿಭಿನ್ನವಾಗಿ ತೋರುವಂತೆ ಆತ್ಮನೂ ತೋರುತ್ತಾನೆ. ಮೂಢರು ಅನೇಕಾತ್ಮರಿದ್ದಾರೆಂದು ತಿಳಿದಿದ್ದಾರೆ (೪೩-೪೪). ಪಾಂಚಭೌತಿಕವಾದ ದ್ರವ್ಯ, ಪ್ರಾಣ ಮತ್ತು ಇಂದ್ರಿಯಗಳು, ಸತ್ತ್ವರಜಸ್ತಮೋಗುಣಗಳು-ಇವುಗಳ ಉಪಾಧಿಯಿಂದ ಕೂಡಿದ ದೇಹಕ್ಕೆ ಹುಟ್ಟುಸಾವುಗಳುಂಟು. ಈ ದೇಹವು ಅವಿದ್ಯೆಯಿಂದ ಆತ್ಮನಲ್ಲಿ ಕಲ್ಪಿತವಾಗಿ ಜೀವನನ್ನು ಸಂಸಾರದಲ್ಲಿ ತೊಡಗಿಸಿದೆ (೪೫). ಹೇ ಪತಿವ್ರತೆ, ವಸ್ತುತಃ ಪಂಚಭೂತಾದಿಗಳು ಕಲ್ಪಿತವಾದವು. ಪರಮಾರ್ಥದಲ್ಲಿ ಅವು ಇಲ್ಲವಾದ್ದರಿಂದ ಆತ್ಮನಿಗೆ ಅವುಗಳಿಂದ ಸಂಯೋಗವಾಗಲಿ, ವಿಯೋಗವಾಗಲಿ ಸಂಭವಿಸುವುದೇ ಇಲ್ಲ. ಏಕೆಂದರೆ ನೋಡುವ ದ್ರಷ್ಟೃ, ನೋಡಿಸಿಕೊಳ್ಳುವ ದೇಹಾದಿ ದೃಶ್ಯ-ಇವು ಆತ್ಮನಿಂದಲೇ ಉಂಟಾಗಿ ಆತ್ಮನಿಂದಲೇ ಪ್ರಕಾಶಿಸುತ್ತ ಇವೆ. ನೋಡುವ ನೇತ್ರೇಂದ್ರಿಯ, ನೋಡಿಸಿಕೊಳ್ಳುವ ರೂಪ ಇವು-(ತೈಜಸವಾದ್ದರಿಂದ) ಪ್ರಕಾಶ ಸ್ವರೂಪನಾದ ಸೂರ್ಯನಿಂದ ಜನಿಸಿ ಸೂರ್ಯನಿಂದಲೇ ಪ್ರಕಾಶಿಸುತ್ತಿರುವ ಹಾಗೆ ಎಂದು ತಿಳಿ[1] (೪೬). ಜನನ ಮರಣಾದಿ ವಿಕಾರಗಳು ದೇಹಕ್ಕೇ ಹೊರತು ಆತ್ಮನಿಗೆ ಎಂದಿಗೂ ಇಲ್ಲ. ಆ ವಿಕಾರಗಳು ಚಂದ್ರನ ಕಲೆಗಳಿಗೆ ಇದ್ದಂತೆ. ಕಲಾನಾಶವು ಚಂದ್ರನಿಲ್ಲದ ಅಮಾವಾಸ್ಯೆಯೆಂದು ತಿಳಿಯುವಂತೆ (ಚಂದ್ರನು ಮಾತ್ರ ಇದ್ದೇ ಇರುವನು) (೪೭). ನಿದ್ರಿಸುವ ಮನುಷ್ಯನು ವಸ್ತುವಿಲ್ಲದಿದ್ದರೂ ಸ್ವಪ್ನದಲ್ಲಿ ಭೋಕ್ತನಾದ ತನ್ನನ್ನು

೧ಹೋಲಿಸಿ-
ದೀಪಶ್ಚಕ್ಷುಶ್ಚ ರೂಪಂ ಚ ಜ್ಯೋತಿಷೋ ನ ಪೃಥಕ್ ಭವೇತ್।
ಏವಂ ಧೀಃ ಖಾನಿ ಮಾತ್ರಾಶ್ಚ ನ ಸ್ಯುರನ್ಯತಮಾದೃತಾತ್॥

ತಸ್ಮಾದಜ್ಞಾನಜಂ ಶೋಕಮಾತ್ಮಶೋಷವಿಮೋಹನಮ್ ।
ತತ್ತ್ವಜ್ಞಾನೇನ ನಿರ್ಹೃತ್ಯ ಸ್ವಸ್ಥಾ ಭವ ಶುಚಿಸ್ಮಿತೇ ॥ ೪೯

ಶ್ರೀಶುಕ ಉವಾಚ-
ಏವಂ ಭಗವತಾ ತನ್ವೀ ರಾಮೇಣ ಪ್ರತಿಬೋಧಿತಾ ।
ವೈಮನಸ್ಯಂ ಪರಿತ್ಯಜ್ಯ ಮನೋ ಬುದ್ಧ್ಯಾ ಸಮಾದಧೇ ॥ ೫೦

ಪ್ರಾಣಾವಶೇಷ ಉತ್ಸೃಷ್ಟೋ ದ್ವಿಡ್ಭಿರ್ಹತಬಲಪ್ರಭಃ ।
ಸ್ಮರನ್ ವಿರೂಪಕರಣಂ ವಿತಥಾತ್ಮಮನೋರಥಃ ॥ ೫೧

ಚಕ್ರೇ ಭೋಜಕಟಂ ನಾಮ ನಿವಾಸಾಯ ಮಹತ್ ಪುರಮ್ ।
ಅಹತ್ವಾ ದುರ್ಮತಿಂ ಕೃಷ್ಣಮಪ್ರತ್ಯೂಹ್ಯ ಯವೀಯಸೀಮ್ ।
ಕುಂಡಿನಂ ನ ಪ್ರವೇಕ್ಷ್ಯಾಮೀತ್ಯುಕ್ತ್ವಾ ತತ್ರಾವಸದ್ ರುಷಾ ॥ ೫೨

ಭಗವಾನ್ ಭೀಷ್ಮಕಸುತಾಮೇವಂ ನಿರ್ಜಿತ್ಯ ಭೂಮಿಪಾನ್ ।
ಪುರಮಾನೀಯ ವಿಧಿವದುಪಯೇಮೇ ಕುರೂದ್ವಹ ॥ ೫೩

ಭೋಗ್ಯಗಳಾದ ವಿಷಯಗಳನ್ನೂ ಭೋಗವೆಂಬ ಫಲವನ್ನೂ (ಪ್ರಾತಿಭಾಸಿಕವಾಗಿ) ತಿಳಿದು ಅನುಭವಿಸುವನೋ ಹಾಗೆಯೋ ಅಜ್ಞಾನಿಯು (ವಸ್ತುವಿಲ್ಲದಿದ್ದರೂ) ಸಂಸಾರವನ್ನು ಅನುಭವಿಸುತ್ತಿದ್ದಾನೆ (೪೮). ಆದ್ದರಿಂದ, ಮಂದಹಾಸಿನಿ, ಬುದ್ಧಿಯನ್ನು ಶೋಷಿಸಿ ಭ್ರಮೆಗೊಳಿಸುವ ಅಜ್ಞಾನ ಜನ್ಯವಾದ ಶೋಕವನ್ನು ತತ್ತ್ವಜ್ಞಾನದಿಂದ ಹೋಗಲಾಡಿಸಿಕೊಂಡು ಸ್ವಸ್ಥಳಾಗು'' ಎಂದು ಸಂತೈಸಿದನು (೪೯). ಹೀಗೆ ಭಗವಾನ್ ಬಲರಾಮನು ಬುದ್ಧಿ ಹೇಳಿ ತಿಳಿಸಲಾಗಿ ರುಕ್ಮಿಣಿಯು ಅಸಮಾಧಾನವನ್ನು ತೊರೆದು ನಿಶ್ಚಯಜ್ಞಾನದಿಂದ ಮನಸ್ಸನ್ನು ಸಂತೈಸಿಕೊಂಡಳು (೫೦). ರುಕ್ಮಿಯು ಹೀಗೆ ಶತ್ರುಗಳಿಂದ ಬಲ ತೇಜಸ್ಸುಗಳನ್ನು ಕಳೆದುಕೊಂಡು ಪ್ರಾಣಮಾತ್ರದಿಂದ ಉಳಿಸಲ್ಪಟ್ಟು ಬಿಡುಗಡೆ ಹೊಂದಿದನು. ಇಷ್ಟಾರ್ಥವೂ ನೆರವೇರದೆ ವಿಕಾರ ರೂಪವು ಆದುದನ್ನು ಸ್ಮರಿಸಿಕೊಂಡು ಆತನು ರೋಷಾವಿಷ್ಟನಾಗಿ ''ದುರ್ಮತಿಯಾದ ಕೃಷ್ಣನನ್ನು ಕೊಲ್ಲದೆ, ತಂಗಿಯನ್ನು ಬಿಡಿಸಿಕೊಂಡು ಹೋಗದೆ ಕುಂಡಿನಪುರವನ್ನು ಪ್ರವೇಶಿಸುವುದಿಲ್ಲ'' ಎಂದು ನುಡಿದು ಅಲ್ಲಿಯೇ ನೆಲೆಸಿದನು[೧] (೫೧-೫೨). ಪರೀಕ್ಷಿತರಾಜ, ಹೀಗೆ ಶ್ರೀಕೃಷ್ಣನು

[೧] ಅವನು ನೆಲೆಸಿದ ಪಟ್ಟಣಕ್ಕೆ ಭೋಜಕಟವೆಂದು ಹೆಸರು.

ತದಾ ಮಹೋತ್ಸವೋ ನೄಣಾಂ ಯದುಪುರ್ಯಾಂ ಗೃಹೇ ಗೃಹೇ ।
ಅಭೂದನನ್ಯಭಾವಾನಾಂ ಕೃಷ್ಣೇ ಯದುಪತೌ ನೃಪ ॥ ೫೪

ನರಾ ನಾರ್ಯಶ್ಚ ಮುದಿತಾಃ ಪ್ರಮೃಷ್ಟಮಣಿಕುಂಡಲಾಃ ।
ಪಾರಿಬರ್ಹಮುಪಾಜಹ್ರುರ್ವರಯೋಶ್ಚಿತ್ರವಾಸಸೋಃ ॥ ೫೫

ಸಾ ವೃಷ್ಣಿಪುರ್ಯುತ್ತಭಿತೇಂದ್ರಕೇತುಭಿ-
ರ್ವಿಚಿತ್ರಮಾಲ್ಯಾಂಬರರತ್ನತೋರಣೈಃ
ಬಭೌ ಪ್ರತಿದ್ವಾರ್ಯುಪಕ್ಲ್‌ಪ್ತಮಂಗಲೈ-
ರಾಪೂರ್ಣಕುಂಭಾಗುರುಧೂಪದೀಪಕೈಃ ॥ ೫೬

ಸಿಕ್ತಮಾರ್ಗಾ ಮದಚ್ಯುದ್ಭಿರಾಹೂತಪ್ರೇಷ್ಠ ಭೂಭುಜಾಮ್ ।
ಗಜೈರ್ದ್ವಾಸ್ಸು ಪರಾಮೃಷ್ಟರಂಭಾಪೂಗೋಪಶೋಭಿತಾ ॥ ೫೭

ಕುರುಸೃಂಜಯಕೈಕೇಯವಿದರ್ಭಯದುಕುಂತಯಃ ।
ಮಿಥೋ ಮುಮುದಿರೇ ತಸ್ಮಿನ್ ಸಂಭ್ರಮಾತ್ ಪರಿಧಾವತಾಮ್ ॥೫೮

ಶತ್ರು ಭೂಪಾಲರನ್ನು ಜಯಿಸಿ ಭೀಷ್ಮಕಸುತೆಯಾದ ರುಕ್ಮಿಣಿಯನ್ನು ದ್ವಾರಕಾಪುರಕ್ಕೆ ಕರೆತಂದು ಶಾಸ್ತ್ರೋಕ್ತ ವಿಧಾನದಿಂದ ಮದುವೆಯಾದನು (೫೩). ಆಗ ಯದುಪತಿಯಾದ ಶ್ರೀಕೃಷ್ಣನಲ್ಲಿ ಅನನ್ಯ ಭಕ್ತಿಯುಳ್ಳ ದ್ವಾರಕಾನಗರದ ಜನರ ಮನೆಮನೆಯಲ್ಲಿಯೂ ಮಹೋತ್ಸವವು ನಡೆಯಿತು (೫೪). ಜಗಜಗಿಸುವ ಮಣಿ ಕುಂಡಲಗಳನ್ನು ಧರಿಸಿದ ಸ್ತ್ರೀ ಪುರುಷರು ಆನಂದಿಸುತ್ತ ಬಂದು, ರಂಗುರಂಗಿನ ವಸ್ತ್ರಗಳನ್ನುಟ್ಟಿದ್ದ ವಧೂವರರಿಗೆ ಉಡುಗೊರೆಗಳನ್ನರ್ಪಿಸಿದರು (೫೫). ಆ ಯದುಪುರಿಯು ಎತ್ತಿಕಟ್ಟಿದ ಪತಾಕೆಗಳಿಂದಲೂ ನಾನಾ ಬಣ್ಣದ ಹೂಮಾಲೆ ವಸ್ತ್ರರತ್ನ ಸಹಿತವಾದ ತೋರಣಗಳಿಂದಲೂ ಮನೆಮನೆಯ ಬಾಗಿಲಲ್ಲಿ ಅರಳು, ಹೂ ಮೊದಲಾದ ಮಂಗಳ ದ್ರವ್ಯಗಳಿಂದಲೂ ಪೂರ್ಣಕಳಶ ಅಗರು ಧೂಪ ದೀಪಗಳಿಂದಲೂ ಶೋಭಿಸಿತು (೫೬). ವಿವಾಹಮಹೋತ್ಸವಕ್ಕೆ ಆಹೂತರಾಗಿ ಬಂದ ಮಹಾರಾಜರುಗಳ ಮದೋದಕಸ್ರಾವಿಗಳಾದ ಮಾತಂಗಗಳು ಮದೋದಕವನ್ನು ಸುರಿಸಿ ರಾಜಬೀದಿಗಳನ್ನು ನೆನೆಸಿದವು. ಮನೆಬಾಗಿಲುಗಳಲ್ಲಿ ಕಟ್ಟಿದ್ದ ಬಾಳೆಮರ ಅಡಿಕೆಮರಗಳನ್ನು ಆನೆಗಳು ಎಳೆದಾಡುತ್ತಿದ್ದವು. ಈ ರೀತಿಯಲ್ಲಿ ನಗರಕ್ಕೆ ಒಂದು ಶೋಭೆಯುಂಟಾಯಿತು (೫೭). ಸಂಭ್ರಮದಿಂದ

ರುಕ್ಮಿಣ್ಯಾ ಹರಣಂ ಶ್ರುತ್ವಾ ಗೀಯಮಾನಂ ತತಸ್ತತಃ ।
ರಾಜಾನೋ ರಾಜಕನ್ಯಾಶ್ಚ ಬಭೂವುರ್ಭೃಶವಿಸ್ಮಿತಾಃ ॥ ೫೯

ದ್ವಾರಕಾಯಾಮಭೂದ್ ರಾಜನ್ ಮಹಾಮೋದಃ ಪುರೌಕಸಾಮ್ ।
ರುಕ್ಮಿಣ್ಯಾ ರಮಯೋಪೇತಂ ದೃಷ್ಟ್ವಾ ಕೃಷ್ಣಂ ಶ್ರಿಯಃ ಪತಿಮ್ ॥

ಇತಿ ಶ್ರೀ ಮದ್ಭಾಗವತೇ ದಶಮಸ್ಕಂಧೇ ಉತ್ತಾರಾರ್ಧೇ
ಚತುಃಪಂಚಾಶತ್ತಮಾಧ್ಯಾಯಃ

ಪಂಚಪಂಚಾಶತ್ತಮಾಧ್ಯಾಯಃ

ಶ್ರೀಶುಕ ಉವಾಚ-
ಕಾಮಸ್ತು ವಾಸುದೇವಾಂಶೋ ದಗ್ಧಃ ಪ್ರಾಗ್ ರುದ್ರಮನ್ಯುನಾ ।
ದೇಹೋಪಪತ್ತಯೇ ಭೂಯಸ್ತಮೇವ ಪ್ರತ್ಯಪದ್ಯತ ॥ ೧

ಓಡಾಡುತ್ತಿದ್ದ ಬಂಧುಮಿತ್ರರಲ್ಲಿ ಕುರುಗಳು, ಸೃಂಜಯರು, ಕೈಕೇಯರು, ವಿದರ್ಭದೇಶೀಯರು, ಯಾದವರು, ಕುಂತೀದೇಶೀಯರೂ ಇದ್ದು ಅನ್ಯೋನ್ಯವಾಗಿ ಆನಂದಿಸಿದರು (೫೮). ರುಕ್ಮಿಣೀಹರಣದ ವಿಷಯವಾಗಿ ಹಾಡುಕಟ್ಟಿ ಅಲ್ಲಲ್ಲಿ ಹಾಡುತ್ತಿರುವುದನ್ನು ಕೇಳಿ ಅಲ್ಲಿಗೆ ಬಂದಿದ್ದ ರಾಜರೂ ರಾಜಪುತ್ರಿಯರೂ ವಿಸ್ಮಿತರಾದರು. ಮಹಾರಾಜ-ಪರೀಕ್ಷಿತ, ಲಕ್ಷ್ಮೀಪತಿಯಾದ ಶ್ರೀಕೃಷ್ಣನು ಲಕ್ಷ್ಮಿಯೇ ಆದ ರುಕ್ಮಿಣಿಯಿಂದ ಸಮೇತನಾದುದನ್ನು ಕಂಡು, ದ್ವಾರಕಾ ನಗರವಾಸಿಗಳಿಗೆ ಪರಮಾನಂದವಾಯಿತು (೫೯).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಐವತ್ತುನಾಲ್ಕನೆಯ ಅಧ್ಯಾಯ

ಅಧ್ಯಾಯ ೫೫

ರುಕ್ಮಿಣಿಯ ಮಗನಾದ ಪ್ರದ್ಯುಮ್ನನನ್ನು ಶಂಬರಾಸುರನು ಅಪಹರಿಸುವುದು.
ಶಂಬರ ವಧೆ. ಪ್ರದ್ಯುಮ್ನನು ರತಿಯೊಡನೆ ದ್ವಾರಕೆಗೆ ಮರಳುವುದು.

ಶುಕಮುನಿಗಳು ಹೇಳಿದರು : ವಾಸುದೇವನ ಅಂಶನಾದ ಕಾಮನು[1] ಹಿಂದೆ ಪರಮೇಶ್ವರನ ಕೋಪಾಗ್ನಿಯಿಂದ ಸುಟ್ಟು ಬೂದಿಯಾಗಿದ್ದನಷ್ಟೇ. ಆತನು ಮತ್ತೆ

---

[1] ವಿಷ್ಣುವಿನಿಂದ ಅಧಿಷ್ಠಿತವಾದ ಚಿತ್ತದಲ್ಲಿ ಹುಟ್ಟುವುದರಿಂದಲೂ ಸೃಷ್ಟಿಗೆ ಕಾರಣನಾದ್ದರಿಂದಲೂ ಕಾಮನು ವಾಸುದೇವಾಂಶನೆಂದು ಹೇಳಿದೆ.

ಸ ಏವ ಜಾತೋ ವೈದರ್ಭ್ಯಾಂ ಕೃಷ್ಣವೀರ್ಯಸಮುದ್ಭವಃ ।
ಪ್ರದ್ಯುಮ್ನ ಇತಿ ವಿಖ್ಯಾತಃ ಸರ್ವತೋಽನವಮಃ ಪಿತುಃ ॥ ೨

ತಂ ಶಂಬರಃ ಕಾಮರೂಪೀ ಹೃತ್ವಾತೋಕಮನಿರ್ದಶಮ್ ।
ಸ ವಿದಿತ್ವಾಽಽತ್ಮನಃ ಶತ್ರುಂ ಪ್ರಾಸ್ಯೋದನ್ವತ್ಯಗಾದ್ ಗೃಹಮ್ ॥ ೩

ತಂ ನಿರ್ಜಗಾರ ಬಲವಾನ್ ಮೀನಃ ಸೋಽಪ್ಯಪರೈಃ ಸಹ ।
ವೃತೋ ಜಾಲೇನ ಮಹತಾ ಗೃಹೀತೋ ಮತ್ಸ್ಯಜೀವಿಭಿಃ ॥ ೪

ತಂ ಶಂಬರಾಯ ಕೈವರ್ತಾ ಉಪಾಜಹ್ರುರುಪಾಯನಮ್ ।
ಸೂದಾ ಮಹಾನಸಂ ನೀತ್ವಾವದ್ಯನ್ ಸ್ವಧಿತಿನಾದ್ಭುತಮ್ ॥ ೫

ದೃಷ್ಟ್ವಾ ತದುದರೇ ಬಾಲಂ ಮಾಯಾವತ್ಯೈ ನ್ಯವೇದಯನ್ ।
ನಾರದೋಽಕಥಯತ್ ಸರ್ವಂ ತಸ್ಯಾಃ ಶಂಕಿತಚೇತಸಃ ।
ಬಾಲಸ್ಯ ತತ್ತ್ವಮುತ್ಪತ್ತಿಂ ಮತ್ಸ್ಯೋದರನಿವೇಶನಮ್ ॥ ೬

ದೇಹವನ್ನು ಪಡೆಯುವುದಕ್ಕಾಗಿ ವಾಸುದೇವನಾದ ಶ್ರೀಕೃಷ್ಣನನ್ನು ಸೇರಿದನು (೧). ಆತನು ಶ್ರೀಕೃಷ್ಣನಿಂದ ರುಕ್ಮಿಯಲ್ಲಿ ಹುಟ್ಟಿ ಪ್ರದ್ಯುಮ್ನನೆಂದು ವಿಖ್ಯಾತನಾದನು. ಅವನು ಶೌರ್ಯಾದಿ ಗುಣಗಳಲ್ಲಿ ತಂದೆಗೆ ಸಮಾನನಾಗಿದ್ದನು (೨). ಪ್ರದ್ಯುಮ್ನನು ಹುಟ್ಟಿ ಹತ್ತು ದಿನಗಳಾಗುವುದಕ್ಕೆ ಮೊದಲೇ, ಅವನು ತನ್ನ ಶತ್ರುವಾಗುವನೆಂದು ತಿಳಿದಿದ್ದ ಶಂಬರನೆಂಬ ಕಾಮರೂಪಿಯಾದ ದಾನವನು ಆ ಮಗುವನ್ನು ಎತ್ತಿಕೊಂಡು ಹೋಗಿ ಸಮುದ್ರದಲ್ಲಿ ಎಸೆದು ತನ್ನ ಮನೆಗೆ ಹೋದನು (೩). ಆ ಮಗುವನ್ನು ಒಂದು ಬಲಾಢ್ಯವಾದ ಮೀನು ನುಂಗಿಬಿಟ್ಟಿತು. ಅದು ಇತರ ಮೀನುಗಳೊಡನೆ ಸೇರಿಕೊಂಡಿರಲಾಗಿ ಬೆಸ್ತರು ದೊಡ್ಡ ಬಲೆಯನ್ನು ಬೀಸಿ ಅವೆಲ್ಲವನ್ನು ಹಿಡಿದು ಆ ದೊಡ್ಡ ಮೀನನ್ನು ಶಂಬರನಿಗೆ ಕಾಣಿಕೆಯಾಗಿ ಒಪ್ಪಿಸಿದರು ಅಡಿಗೆಯವರು ಅದನ್ನು ಪಾಕಶಾಲೆಗೆ ಒಯ್ದು ಆಯುಧದಿಂದ ಕೊಯ್ದರು (೪-೫). ಮೀನಿನ ಹೊಟ್ಟೆಯಲ್ಲಿ ಅಚ್ಚರಿಯುಂಟುಮಾಡುವ ಶಿಶುವಿರುವುದನ್ನು ಕಂಡು ಅಡಿಗೆಯವರು ಈ ವಿಷಯವನ್ನು ಮಾಯಾವತಿಗೆ ತಿಳಿಸಿದರು. ಅದೇನಿರಬಹುದೆಂದು ಅವಳು ಶಂಕಿಸುತ್ತಿರುವಾಗ ನಾರದ ಮುನಿಗಳು ಬಂದು ಬಾಲಕನ ಯಥಾರ್ಥತೆಯನ್ನೂ ಉತ್ಪತ್ತಿಯನ್ನೂ ಮೀನಿನ ಹೊಟ್ಟೆಯಲ್ಲಿ ಸೇರಿದ

ಸಾ ಚ ಕಾಮಸ್ಯ ವೈ ಪತ್ನೀ ರತಿರ್ನಾಮ ಯಶಸ್ವಿನೀ ।
ಪತ್ಯುರ್ನಿರ್ದಗ್ಧದೇಹಸ್ಯ ದೇಹೋತ್ಪತ್ತಿಂ ಪ್ರತೀಕ್ಷತೀ ॥ ೭

ನಿರೂಪಿತಾ ಶಂಬರೇಣ ಸಾ ಸೂಪೌದನಸಾಧನೇ ।
ಕಾಮದೇವಂ ಶಿಶುಂ ಬುದ್ಧ್ವಾ ಚಕ್ರೇ ಸ್ನೇಹಂ ತದಾರ್ಭಕೇ ॥ ೮

ನಾತಿದೀರ್ಘೇಣ ಕಾಲೇನ ಸ ಕಾರ್ಷ್ಣಿ ರೂಢಯೌವನಃ ।
ಜನಯಾಮಾಸ ನಾರೀಣಾಂ ವೀಕ್ಷಂತೀನಾಂ ಚ ವಿಭ್ರಮಮ್ ॥ ೯

ಸಾ ತಂ ಪತಿಂ ಪದ್ಮದಲಾಯತೇಕ್ಷಣಂ
ಪ್ರಲಂಬಬಾಹುಂ ನರಲೋಕಸುಂದರಮ್ ।
ಸ ವ್ರೀಡಹಾಸೋತ್ತಭಿತಭ್ರುವೇಕ್ಷತೀ
ಪ್ರೀತ್ಯೋಪತಸ್ಥೇ ರತಿರಂಗಸೌರತೈಃ ॥ ೧೦

ಬಗೆಯನ್ನೂ ಹೇಳಿದರು (೬). ಮಾಯಾವತಿಯಾದರೋ ಕಾಮನ ಪತ್ನಿಯೂ ಪತಿವ್ರತೆಯೂ ಆದ ರತಿಯಾಗಿದ್ದಳು. ಪತಿಯ ದೇಹವು ಭಸ್ಮವಾಗಲು ಅವನ ಪುನರುತ್ಪತ್ತಿಯನ್ನು ನಿರೀಕ್ಷಿಸುತ್ತ ಅಲ್ಲಿದ್ದಳು[೧] (೭). ತೊವ್ವೆ ಅನ್ನ ಮೊದಲಾದ ಅಡಿಗೆಯ ವಿಚಾರವನ್ನು ನೋಡಿಕೊಳ್ಳುವುದಕ್ಕಾಗಿ ಅವಳು ಶಂಬರನಿಂದ ನಿಯುಕ್ತಳಾಗಿದ್ದಳು. ಕಾಮದೇವನು ಈಗ ಶಿಶುವಾಗಿರುವ ನೆಂಬುದನ್ನರಿತು ಮಾಯಾವತಿಯು ಆ ಬಾಲಕನಲ್ಲಿ ಪ್ರೀತಿಯಿಟ್ಟಳು (೮). ಸ್ವಲ್ಪಕಾಲದಲ್ಲಿ ಆ ಶ್ರೀಕೃಷ್ಣ ಪುತ್ರನು ಯೌವನವನ್ನು ಪಡೆದು ನೋಡುವ ಸ್ತ್ರೀಯರಿಗೆ ಉಲ್ಲಾಸವನ್ನುಂಟುಮಾಡಿದನು. ಪರೀಕ್ಷಿತರಾಜ, ಕಮಲದಳದಂತೆ ವಿಸ್ತಾರವಾದ ನೇತ್ರಉಳ್ಳವನೂ ಆಜಾನುಬಾಹುವೂ ಮಾನವ ಲೋಕದ ದಿವ್ಯ ಸುಂದರನೂ ಆದ ಪ್ರದ್ಯುಮ್ನನನ್ನು ರತಿಯು ತನ್ನ ಪತಿಯೆಂದು ನಿಶ್ಚಯಿಸಿ, ಲಜ್ಜಾ ಮಂದಹಾಸಗಳಿಂದ ಮನೋಹರವಾದ ಹುಬ್ಬನ್ನು ಹಾರಿಸಿ ನೋಡುತ್ತ ಕ್ರೀಡಾಭಾವದಿಂದ ಅವನ ಬಳಿ ಉಪಸ್ಥಿತಳಾದಳು (೯-೧೦).

೧ಇವಳು ಶಂಬರನಿಗೆ ನಾಮಮಾತ್ರದಿಂದ ಪತ್ನಿಯಾಗಿದ್ದಳು. ಶಂಬರನ ಭೋಗ ಕಾಲದಲ್ಲಿ ಇನ್ನೊಂದು ಮಾಯಾರೂಪವನ್ನುಧರಿಸಿ ಉಪಸ್ಥಿತಳಾಗುತ್ತಿದ್ದಳೆಂದುವಿಷ್ಣುಪುರಾಣದಲ್ಲಿಹೇಳಿದೆ (ವಿ.ಪು. ೫-೨೭).

ತಾಮಾಹ ಭಗವಾನ್ ಕಾರ್ಷ್ಣಿರ್ಮಾತಸ್ತೇ ಮತಿರನ್ಯಥಾ ।
ಮಾತೃಭಾವಮತಿಕ್ರಮ್ಯ ವರ್ತಸೇ ಕಾಮಿನೀ ಯಥಾ ॥ ೧೧

ರತಿರುವಾಚ-
ಭವಾನ್ ನಾರಾಯಣಸುತಃ ಶಂಬರೇಣಾಹೃತೋ ಗೃಹಾತ್ ।
ಅಹಂ ತೇಽಧಿಕೃತಾ ಪತ್ನೀ ರತಿಃ ಕಾಮೋ ಭವಾನ್ ಪ್ರಭೋ ॥ ೧೨

ಏಷ ತ್ವಾನಿರ್ದಶಂ ಸಿಂಧಾವಕ್ಷಿಪಚ್ಛಂಬರೋಽಸುರಃ ।
ಮತ್ಸ್ಯೋಽಗ್ರಸೀತ್ತದುದರಾದಿಹ ಪ್ರಾಪ್ತೋ ಭವಾನ್ ಪ್ರಭೋ ॥ ೧೩

ತಮಿಮಂ ಜಹಿ ದುರ್ಧರ್ಷಂ ದುರ್ಜಯಂ ಶತ್ರುಮಾತ್ಮನಃ ।
ಮಾಯಾಶತಮಿದಂ ತ್ವಂ ಚ ಮಾಯಾಭಿರ್ಮೋಹನಾದಿಭಿಃ ॥ ೧೪

ಪರಿಶೋಚತಿ ತೇ ಮಾತಾ ಕುರರೀವ ಗತಪ್ರಜಾ ।
ಪುತ್ರಸ್ನೇಹಾಕುಲಾ ದೀನಾ ವಿವತ್ಸಾ ಗೌರಿವಾತುರಾ ॥ ೧೫

ಪ್ರಭಾಷ್ಯೈವಂ ದದೌ ವಿದ್ಯಾಂ ಪ್ರದ್ಯುಮ್ನಾಯ ಮಹಾತ್ಮನೇ ।
ಮಾಯಾವತೀ ಮಹಾಮಾಯಾಂ ಸರ್ವಮಾಯಾವಿನಾಶಿನೀಮ್ ॥

ಆಗ ಭಗವಾನ್ ಪ್ರದ್ಯುಮ್ನನು ''ಓ ಮಾತೆ, ನಿನ್ನ ಬುದ್ಧಿ ಪಲ್ಲಟಿಸಿದೆ. ಮಾತೃಭಾವವನ್ನು ತೊರೆದು ಕಾಮಿನಿಯಂತೆ ವರ್ತಿಸುವೆಯಲ್ಲ'' ಎಂದನು. ಅದಕ್ಕೆ ರತಿಯು ''ಹೇ ಪ್ರಭು, ನೀನು ಶ್ರೀಕೃಷ್ಣನ ಮಗ. ಶಂಬರನು ನಿನ್ನನ್ನು ಮನೆಯಿಂದ ಅಪಹರಿಸಿ ತಂದಿದ್ದಾನೆ. ನೀನು ವಾಸ್ತವವಾಗಿ ಕಾಮದೇವ. ನಾನು ನಿನಗೆ ಶಾಸ್ತ್ರೋಕ್ತ ಪತ್ನಿಯಾದ ರತಿ (೧೧-೧೨). ನೀನು ಜನಿಸಿ ಹತ್ತು ದಿನಗಳಾಗುವುದರೊಳಗೆ ಈ ಶಂಬರಾಸುರನು ನಿನ್ನನ್ನು ಸಮುದ್ರದಲ್ಲಿ ಎಸೆದನು. ನಿನ್ನನ್ನು ಒಂದು ಮೀನು ನುಂಗಲಾಗಿ, ಓ ಸ್ವಾಮಿ, ಅದರ ಹೊಟ್ಟೆಯಿಂದ ನೀನು ಇಲ್ಲಿಗೆ ಬಂದು ಸೇರಿದೆ (೧೩). ದುರ್ಧರ್ಷನೂ ದುರ್ಜಯನೂ ಆದ ಶಂಬರಾಸುರನು ನಿನ್ನ ಶತ್ರು. ಇವನು ನೂರಾರು ಮಾಯೆಗಳನ್ನು ಬಲ್ಲನು. ಅಂತೆಯೇ ಮೋಹನಾದಿ ಮಾಯೆಗಳಿಂದ ಈತನನ್ನು ಸಂಹರಿಸು (೧೪). ನಿನ್ನ ತಾಯಿ ಮಗುವನ್ನು ಕಳೆದುಕೊಂಡು ಕುರರೀಪಕ್ಷಿಯಂತೆ ಶೋಕಿಸುತ್ತಿದ್ದಾಳೆ. ಪುತ್ರಸ್ನೇಹದಿಂದ ಕಂಗೆಟ್ಟು ದೀನಳಾಗಿ, ಕರುವನ್ನು ಕಳೆದುಕೊಂಡ ಹಸುವಿನಂತೆ, ನಿನ್ನನ್ನು ಕಾಣುವ ತವಕದಿಂದ ದುಃಖಿಸುತ್ತಿದ್ದಾಳೆ'' ಎಂದಳು (೧೫).

ಸ ಚ ಶಂಬರಮಭ್ಯೇತ್ಯ ಸಂಯುಗಾಯ ಸಮಾಹ್ವಯತ್ ।
ಅವಿಷಹ್ಯೈಸ್ತಮಾಕ್ಷೇಪೈಃ ಕ್ಷಿಪನ್ ಸಂಜನಯನ್ ಕಲಿಮ್ ॥ ೧೭

ಸೋಽಧಿಕ್ಷಿಪ್ತೋ ದುರ್ವಚೋಭಿಃ ಪಾದಾಹತ ಇವೋರಗಃ ।
ನಿಶ್ಚಕ್ರಾಮ ಗದಾಪಾಣಿರಮರ್ಷಾತ್ತಾಮ್ರಲೋಚನಃ ॥ ೧೮

ಗದಾಮಾವಿಧ್ಯ ತರಸಾ ಪ್ರದ್ಯುಮ್ನಾಯ ಮಹಾತ್ಮನೇ ।
ಪ್ರಕ್ಷಿಪ್ಯ ವ್ಯನದನ್ನಾದಂ ವಜ್ರನಿಷ್ಪೇಷನಿಷ್ಠುರಮ್ ॥ ೧೯

ತಾಮಾಪತಂತೀಂ ಭಗವಾನ್ ಪ್ರದ್ಯುಮ್ನೋ ಗದಯಾ ಗದಾಮ್ ।
ಅಪಾಸ್ಯ ಶತ್ರವೇ ಕ್ರುದ್ಧಃ ಪ್ರಾಹಿಣೋತ್ ಸ್ವಗದಾಂ ನೃಪ ॥ ೨೦

ಸ ಚ ಮಾಯಾಂ ಸಮಾಶ್ರಿತ್ಯ ದೈತೇಯೀಂ ಮಯದರ್ಶಿತಾಮ್ ।
ಮುಮುಚೇಽಸ್ತ್ರಮಯಂ ವರ್ಷಂ ಕಾರ್ಷ್ಣೌ ವೈಹಾಯಸೋಽಸುರಃ ॥

ಬಾಧ್ಯಮಾನೋಽಸ್ತ್ರವರ್ಷೇಣ ರೌಕ್ಮಿಣೇಯೋ ಮಹಾರಥಃ ।
ಸತ್ತ್ವಾತ್ಮಿಕಾಂ ಮಹಾವಿದ್ಯಾಂ ಸರ್ವಮಾಯೋಪಮರ್ದಿನೀಮ್ ॥ ೨೨

ಮಾಯಾವತಿಯಾದ ರತಿಯು ಹೀಗೆ ನುಡಿದು ಸರ್ವಮಾಯೆಗಳನ್ನೂ ನಾಶಗೊಳಿಸಬಲ್ಲ ಮಹಾ ಮಾಯೆಯೆಂಬ ವಿದ್ಯೆಯನ್ನು ಮಹಾತ್ಮನಾದ ಪ್ರದ್ಯುಮ್ನನಿಗೆ ಉಪದೇಶಿಸಿದಳು (೧೬). ಅನಂತರ ಪ್ರದ್ಯುಮ್ನನು ಶಂಬರನ ಬಳಿಗೆ ಹೋಗಿ ಸಹಿಸಲಾರದ ನಿಂದಾವಾಕ್ಯಗಳಿಂದ ಕಲಹ ಭಾವನೆಯನ್ನು ಕೆರಳಿಸಿ ಅವನನ್ನು ಯುದ್ಧಕ್ಕೆ ಆಹ್ವಾನಿಸಿದನು (೧೭). ದುರ್ವಚನಗಳಿಂದ ಆಕ್ಷಿಪ್ತನಾದ ಶಂಬರನು ಕಾಲಿಂದ ತುಳಿದ ಸರ್ಪದಂತೆ ಕೆರಳಿದನು. ಸಿಟ್ಟಿನಿಂದ ಕೆಂಗಣ್ಣನಾಗಿ ಗದೆಯನ್ನು ಹಿಡಿದು ಹೊರಟನು. ರಭಸದಿಂದ ಗದೆಯನ್ನು ತಿರುಗಿಸಿ ಧೀರನಾದ ಪ್ರದ್ಯುಮ್ನನಮೇಲೆ ಬೀಸಿ, ಸಿಡಿಲಿನಂತೆ ಕಠೋರವಾಗಿ ಗರ್ಜಿಸಿದನು (೧೮-೧೯). ಪರೀಕ್ಷಿತರಾಜ, ಹಾಗೆ ಎರಗಿಬಂದ ಗದೆಯನ್ನು ಭಗವಾನ್ ಪ್ರದ್ಯುಮ್ನನು ತನ್ನ ಗದೆಯಿಂದ ತಳ್ಳಿ, ಕ್ರುದ್ಧನಾಗಿ ಶತ್ರುವಿನ ಮೇಲೆ ತನ್ನ ಗದೆಯನ್ನು ಪ್ರಯೋಗಿಸಿದನು (೨೦). ಆಗ ಶಂಬರಾಸುರನು ಮಯನಿಂದ ಬೋಧಿತವಾದ ದೈತ್ಯ ಮಾಯೆಯನ್ನಾಶ್ರಯಿಸಿ ಗಗನವನ್ನಡರಿ ಪ್ರದ್ಯುಮ್ನನ ಮೇಲೆ ಶರವೃಷ್ಟಿಯನ್ನು ಸುರಿಸಿದನು. ಮಹಾಶೂರನಾದ ರುಕ್ಮಿಣೀ ಪುತ್ರನು ಆ ಶರವೃಷ್ಟಿಯಿಂದ ಪೀಡಿತನಾಗಿ ಸಕಲ ಮಾಯಾ ವಿಧ್ವಂಸಕವೂ ಸತ್ತ್ವಮಯವೂ ಆದ ಮಹಾಮಾಯಾವಿದ್ಯೆಯನ್ನು ಬಳಸಿದನು (೨೧-೨೨).

ತತೋ ಗೌಹ್ಯಕಗಾಂಧರ್ವಪೈಶಾಚೌರಗರಾಕ್ಷಸೀಃ।
ಪ್ರಾಯುಂಕ್ತ ಶತಶೋ ದೈತ್ಯಃ ಕಾರ್ಷ್ಣಿರ್ವ್ಯಧಮಯತ್ ಸ ತಾಃ ॥

ನಿಶಾತಮಸಿಮುದ್ಯಮ್ಯ ಸಕಿರೀಟಂ ಸಕುಂಡಲಮ್ ।
ಶಂಬರಸ್ಯ ಶಿರಃ ಕಾಯಾತ್ ತಾಮ್ರಶ್ಮಶ್ರ್ವೋಜಸಾಹರತ್ ॥ ೨೪

ಆಕೀರ್ಯಮಾಣೋ ದಿವಿಜೈಃ ಸ್ತುವದ್ಭಿಃ ಕುಸುಮೋತ್ಕರೈಃ ।
ಭಾರ್ಯಯಾಂಬರಚಾರಿಣ್ಯಾ ಪುರಂ ನೀತೋ ವಿಹಾಯಸಾ ॥ ೨೫

ಅಂತಃಪುರವರಂ ರಾಜನ್ ಲಲನಾಶತಸಂಕುಲಮ್ ।
ವಿವೇಶ ಪತ್ನ್ಯಾ ಗಗನಾದ್ ವಿದ್ಯುತೇವ ಬಲಾಹಕಃ ॥ ೨೬

ತಂ ದೃಷ್ಟ್ವಾ ಜಲದಶ್ಯಾಮಂ ಪೀತಕೌಶೇಯವಾಸಸಮ್ ।
ಪ್ರಲಂಬಬಾಹುಂ ತಾಮ್ರಾಕ್ಷಂ ಸುಸ್ಮಿತಂ ರುಚಿರಾನನಮ್ ॥ ೨೭

ಸ್ವಲಂಕೃತಮುಖಾಂಭೋಜಂ ನೀಲವಕ್ರಾಲಕಾಲಿಭಿಃ ।
ಕೃಷ್ಣಂ ಮತ್ವಾ ಸ್ತ್ರಿಯೋ ಹ್ರೀತಾ ನಿಲಿಲ್ಯುಸ್ತತ್ರ ತತ್ರ ಹ ॥ ೨೮

ಆಗ ದೈತ್ಯನು ಗುಹ್ಯಕ, ಗಂಧರ್ವ, ಪಿಶಾಚ, ಉರಗ, ರಾಕ್ಷಸಸಂಬಂಧಿಗಳಾದ ನೂರಾರು ಮಾಯಾಶಕ್ತಿಗಳನ್ನು ಉಪಯೋಗಿಸಿದನು. ಅವೆಲ್ಲವನ್ನೂ ಪ್ರದ್ಯುಮ್ನನು ಧ್ವಂಸಮಾಡಿದನು (೨೩). ಅಲ್ಲದೆ ಹರಿತವಾದ ಖಡ್ಗವನ್ನು ಹಿರಿದು ಕಿರೀಟ ಕುಂಡಲಗಳಿಂದಲೂ ಕೆಮ್ಮೀಸೆಯಿಂದಲೂ ಕೂಡಿದ ಶಂಬರನ ಶಿರಸ್ಸನ್ನು ಪರಾಕ್ರಮದಿಂದ ತರಿದು ದೇಹದಿಂದ ಬೇರ್ಪಡಿಸಿದನು (೨೪). ದೇವತೆಗಳು ಪ್ರದ್ಯುಮ್ನನನ್ನು ಹೊಗಳುತ್ತ ಹೂಮಳೆಯನ್ನು ಸುರಿಸಿದರು. ಪತ್ನಿಯಾದ ರತಿಯು ಅಂಬರತಳವನ್ನಡರಿ ಪ್ರದ್ಯುಮ್ನನನ್ನು ಗಗನಮಾರ್ಗದಿಂದ ದ್ವಾರಕಾನಗರಿಗೆ ಕರೆದೊಯ್ದಳು (೨೫). ರಾಜ, ಪತ್ನೀಸಹಿತನಾದ ಪ್ರದ್ಯುಮ್ನನು, ಮಿಂಚಿನೊಂದೊಡಗೂಡಿದ ಮೇಘದಂತೆ ಆಕಾಶಮಾರ್ಗದಲ್ಲಿ ಬಂದು, ಅನೇಕ ಸ್ತ್ರೀಯರಿಂದ ಕೂಡಿದ ಅಂತಃಪುರವನ್ನು ಪ್ರವೇಶಿಸಿದನು (೨೬). ಮೇಘದಂತೆ ಶ್ಯಾಮಲಾಂಗನೂ ಪೀತಾಂಬರಧಾರಿಯೂ ಅಜಾನುಬಾಹುವೂ ರಕ್ತನೇತ್ರನೂ ಮುಗುಳ್ನಗೆ ಸೂಸುವ ಸುಂದರಾನನನೂ ಕಪ್ಪಾದ ಗುಂಗುರು ಕೂದಲುಗಳಿಂದ ಅಲಂಕೃತವಾದ ವದನಾರವಿಂದವುಳ್ಳವನೂ ಆದ ಪ್ರದ್ಯುಮ್ನನನ್ನು ನೋಡಿ ರಾಣೀ

ಅವಧಾರ್ಯ ಶನೈರೀಷದ್ವೈಲಕ್ಷಣ್ಯೇನ ಯೋಷಿತಃ।
ಉಪಜಗ್ಮುಃ ಪ್ರಮುದಿತಾಃ ಸಸ್ತ್ರೀರತ್ನಂ ಸುವಿಸ್ಮಿತಾಃ ॥ ೨೯

ಅಥ ತತ್ರಾಸಿತಾಪಾಂಗೀ ವೈದರ್ಭೀ ವಲ್ಗುಭಾಷಿಣೀ ।
ಅಸ್ಮರತ್ ಸ್ವಸುತಂ ನಷ್ಟಂ ಸ್ನೇಹಸ್ನುತಪಯೋಧರಾ ॥ ೩೦

ಕೋನ್ವಯಂ ನರವೈದೂರ್ಯಃ ಕಸ್ಯ ವಾ ಕಮಲೇಕ್ಷಣಃ।
ಧೃತಃ ಕಯಾ ವಾ ಜಠರೇ ಕೇಯಂ ಲಬ್ಧಾ ತ್ವನೇನ ವಾ ॥ ೩೧

ಮಮ ಚಾಪ್ಯಾತ್ಮಜೋ ನಷ್ಟೋ ನೀತೋ ಯಃ ಸೂತಿಕಾಗೃಹಾತ್ ।
ಏತತ್ತುಲ್ಯವಯೋರೂಪೋ ಯದಿ ಜೀವತಿ ಕುತ್ರಚಿತ್ ॥ ೩೨

ಕಥಂ ತ್ವನೇನ ಸಂಪ್ರಾಪ್ತಂ ಸಾರೂಪ್ಯಂ ಶಾರ್ಙ್ಗಧನ್ವನಃ।
ಆಕೃತ್ಯಾವಯವೈರ್ಗತ್ಯಾ ಸ್ವರಹಾಸಾವಲೋಕನೈಃ॥ ೩೩

ವಾಸದ ಸ್ತ್ರೀಯರು ಶ್ರೀಕೃಷ್ಣನೆಂದು ಭಾವಿಸಿ ನಾಚಿಕೆಯಿಂದ ಅಲ್ಲಲ್ಲಿ ಮರೆಯಾದರು (೨೭-೨೮). ಆಮೇಲೆ ಶ್ರೀಕೃಷ್ಣನಿಗಿಂತ ಸ್ವಲ್ಪ ವ್ಯತ್ಯಾಸವಿರುವುದನ್ನು ಗಮನಿಸಿ ಅಚ್ಚರಿಗೊಂಡು, ಸ್ತ್ರೀರತ್ನವಾದ ರತಿಯೊಡನೆ ಇರುವ ಪ್ರದ್ಯುಮ್ನನ ಬಳಿಗೆ ಆ ಸ್ತ್ರೀಯರು ಸಂತೋಷದಿಂದ ಮೆಲ್ಲಮೆಲ್ಲನೆ ಬಂದರು (೨೯). ಆಮೇಲೆ ಅಲ್ಲಿದ್ದ ಕಪ್ಪು ಕಡೆಗಣ್ಣು ನೋಟದ ಮಂಜುಭಾಷಿಣಿಯಾದ ರುಕ್ಮಿಣಿಯು ಅವನನ್ನು ನೋಡಿ ಹಿಂದೆ ಕಳೆದುಹೋಗಿದ್ದ ತನ್ನ ಮಗನನ್ನು ನೆನೆಸಿಕೊಂಡಳು. ವಾತ್ಸಲ್ಯದಿಂದ ಅವಳಿಗೆ ಎದೆಹಾಲು ಒಸರಿತು (೩೦). "ಈ ಪುರುಷೋತ್ತಮನು ಯಾರಾಗಿರಬಹುದು? ಈ ಕಮಲನೇತ್ರನು ಯಾರ ಮಗ ? ಯಾವಳು ಇವನನ್ನು ಗರ್ಭದಲ್ಲಿ ಧರಿಸಿದ್ದಿರಬಹುದು ? ಇವನು ಕರೆತಂದಿರುವ ಈ ತರುಣಿಯಾದರೂ ಯಾರು ? (೩೧). ನನ್ನ ಮಗನು ಕಳೆದುಹೋಗಿದ್ದಾನೆ. ಬಾಣಂತಿಯ ಮನೆಯಿಂದಲೇ ಯಾರೋ ಅಪಹರಿಸಿದರು. ಅವನು ಎಲ್ಲಾದರೂ ಬದುಕಿದ್ದರೆ, ಇಷ್ಟೇ ವಯಸ್ಸು ಇದೇ ರೂಪ ಇದ್ದಿರಬೇಕು (೩೨). ಈತನು ಶ್ರೀಕೃಷ್ಣನ ಹೋಲಿಕೆಯನ್ನು ಪಡೆದಿದ್ದಾನಲ್ಲ! ಇದು ಹೇಗೆ ? ಆಕೃತಿ, ಅವಯವ, ನಡಿಗೆ,

ಸ ಏವ ವಾ ಭವೇನ್ನೂನಂ ಯೋ ಮೇ ಗರ್ಭೇ ಧೃತೋಽರ್ಭಕಃ।
ಅಮುಷ್ಮಿನ್ ಪ್ರೀತಿರಧಿಕಾ ವಾಮಃ ಸ್ಫುರತಿ ಮೇ ಭುಜಃ॥ ೩೪

ಏವಂ ಮೀಮಾಂಸಮಾನಾಯಾಂ ವೈದರ್ಭ್ಯಾಂ ದೇವಕೀಸುತಃ।
ದೇವಕ್ಯಾನಕದುಂದುಭ್ಯಾಮುತ್ತಮಶ್ಲೋಕ ಆಗಮತ್॥ ೩೫

ವಿಜ್ಞಾತಾರ್ಥೋಽಪಿ ಭಗವಾಂಸ್ತೂಷ್ಣೀಮಾಸ ಜನಾರ್ದನಃ।
ನಾರದೋಽಕಥಯತ್ ಸರ್ವಂ ಶಂಬರಾಹರಣಾದಿಕಮ್॥ ೩೬

ತಚ್ಛ್ರುತ್ವಾ ಮಹದಾಶ್ಚರ್ಯಂ ಕೃಷ್ಣಾಂತಃಪುರಯೋಷಿತಃ।
ಅಭ್ಯನಂದನ್ ಬಹೂನಬ್ದಾನ್ ನಷ್ಟಂ ಮೃತಮಿವಾಗತಮ್॥ ೩೭

ದೇವಕೀ ವಸುದೇವಶ್ಚ ಕೃಷ್ಣರಾಮೌ ತಥಾ ಸ್ತ್ರಿಯಃ।
ದಂಪತೀ ತೌ ಪರಿಷ್ವಜ್ಯ ರುಕ್ಮಿಣೀ ಚ ಯಯುರ್ಮುದಮ್॥ ೩೮

ನಷ್ಟಂ ಪ್ರದ್ಯುಮ್ನ ಮಾಯಾತಮಾಕರ್ಣ್ಯ ದ್ವಾರಕೌಕಸಃ।
ಅಹೋ ಮೃತ ಇವಾಯಾತೋ ಬಾಲೋ ದಿಷ್ಟ್ಯೇತಿ ಹಾಬ್ರುವನ್॥ ೩೯

ಧ್ವನಿ, ನಗು, ನೋಟ-ಎಲ್ಲದರಲ್ಲಿಯೂ ನನ್ನ ಪತಿಯ ಹೋಲಿಕೆಯೇ ಇದೆ (೩೩). ನಿಶ್ಚಯವಾಗಿಯೂ ನಾನು ಗರ್ಭದಲ್ಲಿ ಧರಿಸಿದ ಬಾಲಕನೇ ಇವನಾಗಿರಬೇಕು. ಇವನಲ್ಲಿ ಅಧಿಕವಾದ ಪ್ರೀತಿ ಹುಟ್ಟುತ್ತಿದೆ. ಎಡದೋಳು ಹಾರುತ್ತಿದೆ'' ಎಂದು ವೈದರ್ಭಿಯು ವಿಚಾರಮಾಡುತ್ತಿರವಾಗ ಕೀರ್ತಿಶಾಲಿಯಾದ ಶ್ರೀಕೃಷ್ಣನು ವಸುದೇವ ದೇವಕಿಯರೊಡನೆ ಅಲ್ಲಿಗೆ ಬಂದನು (೩೪-೩೫). ಭಗವಂತನಿಗೆ ವಸ್ತುಸ್ಥಿತಿಯು ಗೊತ್ತಿದ್ದರೂ ಸುಮ್ಮನಿದ್ದನು. ಅಷ್ಟರಲ್ಲಿ ನಾರದರು ಬಂದು ಮಗುವನ್ನು ಶಂಬರಾಸುರನು ಅಪಹರಿಸಿಕೊಂಡು ಹೋದುದನ್ನು ಮೊದಲ್ಗೊಂಡು ಎಲ್ಲ ವೃತ್ತಾಂತವನ್ನೂ ಹೇಳಿದರು (೩೬). ಅತ್ಯಾಶ್ಚರ್ಯಕರವಾದ ಆ ವೃತ್ತಾಂತವನ್ನು ಕೇಳಿ ಶ್ರೀಕೃಷ್ಣನ ಅಂತಃಪುರಸ್ತ್ರೀಯರು, ಸತ್ತವನು ಬದುಕಿಬಂದನೋ ಎಂಬಂತೆ ಬಹುವರ್ಷಗಳವರೆಗೆ ನಷ್ಟವಾಗಿ ಮರಳಿಬಂದ ಪ್ರದ್ಯುಮ್ನನನ್ನು ಕಂಡು ಆನಂದಿಸಿದರು (೩೭). ದೇವಕಿ, ವಸುದೇವ, ಶ್ರೀಕೃಷ್ಣ ಬಲರಾಮ, ರುಕ್ಮಿಣಿ, ಅಂತಃಪುರ ಸ್ತ್ರೀಯರು ಆ ದಂಪತಿಗಳನ್ನು ಆಲಂಗಿಸಿಕೊಂಡು ನಲಿದರು (೩೮). ಕಳೆದುಹೋಗಿದ್ದ ಪ್ರದ್ಯುಮ್ನನು ಮರಳಿ ಬಂದನೆಂಬುದನ್ನು

ಯಂ ವೈ ಮುಹುಃ ಪಿತೃಸರೂಪನಿಜೇಶಭಾವಾ-
ಸ್ತನ್ಮಾತರೋ ಯದಭಜನ್ ರಹರೂಢಭಾವಾಃ।
ಚಿತ್ರಂ ನ ತತ್ ಖಲು ರಮಾಸ್ಪದಬಿಂಬಬಿಂಬೇ
ಕಾಮೇ ಸ್ಮರೇಽಕ್ಷವಿಷಯೇ ಕಿಮುತಾನ್ಯನಾರ್ಯಃ॥ ೪೦

ಇತಿ ಶ್ರೀ ಮದ್ಭಾಗವತೇ ದಶಮಸ್ಕಂಧೇ
ಪಂಚಪಂಚಾಶತ್ತಮಾಧ್ಯಾಯಃ

ಷಟ್‌ಪಂಚಾಶತ್ತಮಾಧ್ಯಾಯಃ

ಶ್ರೀಶುಕ ಉವಾಚ-
ಸತ್ರಾಜಿತಃ ಸ್ವತನಯಾಂ ಕೃಷ್ಣಾಯಾ ಕೃತಕಿಲ್ಬಿಷಃ।
ಸ್ಯಮಂತಕೇನ ಮಣಿನಾ ಸ್ವಯಮುದ್ಯಮ್ಯ ದತ್ತವಾನ್॥ ೧

ಕೇಳಿ ದ್ವಾರಕಾಪುರವಾಸಿಗಳು "ಆಹಾ! ಮೃತನಾದ ಬಾಲಕನು ಬದುಕಿ ಬಂದಂತಾಯಿತು! ಭಲಾ! ಸಂತೋಷ" ಎಂದುಕೊಂಡರು (೩೯). ತಂದೆಯಾದ ಶ್ರೀಕೃಷ್ಣನಿಗೆ ಸಮಾನರೂಪನಾದ ಪ್ರದ್ಯುಮ್ನನನ್ನು ಕಂಡು ಕೃಷ್ಣ ಸ್ತ್ರೀಯರು ತಮ್ಮಪತಿಯೆಂದು ಭ್ರಾಂತರಾಗುತ್ತಿದ್ದರು. ಹೀಗಿರುವಾಗ ಲಕ್ಷ್ಮೀದೇವಿಗೆ ಆಶ್ರಯನಾದ ಶ್ರೀಕೃಷ್ಣನ ಪಡಿನೆಳಲೂ ಸ್ಮರಣಮಾತ್ರದಿಂದ ಚಿತ್ತಕ್ಷೋಭಕನೂ ಆದ ಕಾಮದೇವನು ಕಣ್ಣೆದುರಿಗೆ ಕಾಣಿಸುತ್ತಿರಲು, ಅನ್ಯಸ್ತ್ರೀಯರು ಅವನಲ್ಲಿ ಅನುರಾಗವನ್ನಿಟ್ಟು ಏಕಾಂತದಲ್ಲಿ ಸೇವಿಸಿದರೆಂಬುದೇನಚ್ಚರಿ? (೪೦).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಐವತ್ತೈದನೆಯ ಅಧ್ಯಾಯ

ಅಧ್ಯಾಯ ೫೬

ಸ್ಯಮಂತಕೋಪಾಖ್ಯಾನ. ಜಾಂಬವತೀಪರಿಣಯ. ಸತ್ಯಭಾಮಾಪಾಣಿಗ್ರಹಣ.

ಶ್ರೀಶುಕಮುನಿಗಳು ಹೇಳಿದರು-"ಶ್ರೀಕೃಷ್ಣನಿಗೆ ಅಪರಾಧವನ್ನು ಮಾಡಿದ ಸತ್ರಾಜಿತನು ಅದರ ಪರಿಹಾರಕ್ಕಾಗಿ ಪ್ರಯತ್ನಿಸಿ, ಸ್ಯಮಂತಕಮಣಿಯೊಡನೆ ತನ್ನ

ರಾಜೋವಾಚ-
ಸತ್ರಾಜಿತಃ ಕಿಮಕರೋದ್ ಬ್ರಹ್ಮನ್ ಕೃಷ್ಣಸ್ಯ ಕಿಲ್ಬಿಷಮ್ ।
ಸ್ಯಮಂತಕಃ ಕುತಸ್ತಸ್ಯ ಕಸ್ಮಾದ್ ದತ್ತಾ ಸುತಾ ಹರೇಃ ॥ ೨

ಶ್ರೀಶುಕ ಉವಾಚ-
ಆಸೀತ್ ಸತ್ರಾಜಿತಃ ಸೂರ್ಯೋ ಭಕ್ತಸ್ಯ ಪರಮಃ ಸಖಾ ।
ಪ್ರೀತಸ್ತಸ್ಮೈ ಮಣಿಂ ಪ್ರಾದಾತ್ ಸೂರ್ಯಸ್ತುಷ್ಟಃ ಸ್ಯಮಂತಕಮ್ ॥ ೩

ಸ ತಂ ಬಿಭ್ರನ್ಮಣಿಂ ಕಂಠೇ ಭ್ರಾಜಮಾನೋ ಯಥಾ ರವಿಃ ।
ಪ್ರವಿಷ್ಟೋ ದ್ವಾರಕಾಂ ರಾಜಂಸ್ತೇಜಸಾ ನೋಪಲಕ್ಷಿತಃ ॥ ೪

ತಂ ವಿಲೋಕ್ಯ ಜನಾ ದೂರಾತ್ತೇಜಸಾ ಮುಷ್ಟದೃಷ್ಟಯಃ ।
ದೀವ್ಯತೇಽಕ್ಷೈರ್ಭಗವತೇ ಶಶಂಸುಃ ಸೂರ್ಯಶಂಕಿತಾಃ ॥ ೫

ನಾರಾಯಣ ನಮಸ್ತೇಽಸ್ತು ಶಂಖಚಕ್ರಗದಾಧರ ।
ದಾಮೋದರಾರವಿಂದಾಕ್ಷ ಗೋವಿಂದ ಯದುನಂದನ ॥ ೬

ಮಗಳಾದ ಸತ್ಯಭಾಮೆಯನ್ನೂ ಶ್ರೀಕೃಷ್ಣನಿಗೆ ಅರ್ಪಿಸಿದನು'' (೧). ಆಗ ಪರೀಕ್ಷಿತರಾಜನು ''ಮಹರ್ಷಿಗಳೆ, ಸತ್ರಾಜಿತನು ಶ್ರೀಕೃಷ್ಣನಿಗೆ ಯಾವ ಅಪರಾಧವನ್ನೆಸಗಿದನು ? ಅವನಿಗೆ ಸ್ಯಮಂತಕಮಣಿ ಹೇಗೆ ದೊರೆಯಿತು ? ತನ್ನ ಮಗಳನ್ನು ಶ್ರೀಹರಿಗೆ ಕೊಟ್ಟದ್ದೇಕೆ ? ಎಂದು ಬೆಸಗೊಂಡನು (೨). ಶುಕಮಹರ್ಷಿಗಳು ಹೇಳಿದರು : ಸತ್ರಾಜಿತನೆಂಬುವನು ಸೂರ್ಯನ ಭಕ್ತ. ಸೂರ್ಯನು ಆ ಭಕ್ತನ ವಿಷಯದಲ್ಲಿ ಪರಮ ಸ್ನೇಹಿತನಾಗಿ ನಡೆದುಕೊಳ್ಳುತ್ತಿದ್ದನು. ಒಂದು ಸಲ ಸಂತುಷ್ಟನಾದ ಸೂರ್ಯನು ಸತ್ರಾಜಿತನಿಗೆ ಸ್ಯಮಂತಕವೆಂಬ ಮಣಿಯನ್ನು ಕೊಟ್ಟನು (೩). ಅವನು ಆ ಮಣಿಯನ್ನು ಕಂಠದಲ್ಲಿ ಧರಿಸಿ ಸೂರ್ಯನಂತೆ ಬೆಳಗುತ್ತ ದ್ವಾರಕಾನಗರಕ್ಕೆ ಬಂದನು. ಮಣಿಯ ತೇಜಸ್ಸಿನಿಂದ ಅವನು ಸತ್ರಾಜಿತನೆಂದು ಜನರಿಗೆ ಗುರುತಿಸಲಾಗಲಿಲ್ಲ (೪). ದೂರದಿಂದ ಅವನನ್ನು ನೋಡಿದ ಜನರ ಕಣ್ಣುಗಳು ಮಣಿಪ್ರಭೆಯಿಂದ ಕೋರೈಸಿಹೋದವು. ಸತ್ರಾಜಿನು ಸೂರ್ಯನೆಂಬ ಶಂಕೆಯಿಂದ ಅವರು ಹೋಗಿ, ಪಗಡೆಯಾಡುತ್ತಿದ್ದ ಶ್ರೀಕೃಷ್ಣನಿಗೆ ಹೇಳಿದರು (೫). ''ನಾರಾಯಣ ನಮಸ್ತೇಽಸ್ತು, ಶಂಖಚಕ್ರಗದಾಧರ, ದಾಮೋದರ, ಅರವಿಂದಾಕ್ಷ, ಗೋವಿಂದ, ಯದುನಂದನ, ಜಗದೊಡೆಯ, ಇದೋ ಸೂರ್ಯನು ನಿನ್ನನ್ನು ಕಾಣಲು ಬರುತ್ತಿದ್ದಾನೆ ! ಆ ಖರಕಿರಣನು ತನ್ನ

ಏಷ ಆಯಾತಿ ಸವಿತಾ ತ್ವಾಂ ದಿದೃಕ್ಷುರ್ಜಗತ್ಪತೇ ।
ಮುಷ್ಣನ್ ಗಭಸ್ತಿಚಕ್ರೇಣ ನೃಣಾಂ ಚಕ್ಷೂಂಷಿ ತಿಗ್ಮಗುಃ ॥ ೭

ನನ್ವನ್ವಿಚ್ಛಂತಿ ತೇ ಮಾರ್ಗಂ ತ್ರಿಲೋಕ್ಯಾಂ ವಿಬುಧರ್ಷಭಾಃ ।
ಜ್ಞಾತ್ವಾದ್ಯ ಗೂಢಂ ಯದುಷು ದ್ರಷ್ಟುಂ ತ್ವಾಂ ಯಾತ್ಯಜಃ ಪ್ರಭೋ ॥ ೮

ಶ್ರೀ ಶುಕ ಉವಾಚ-

ನಿಶಮ್ಯ ಬಾಲವಚನಂ ಪ್ರಹಸ್ಯಾಂಬುಜಲೋಚನಃ ।
ಪ್ರಾಹ ನಾಸೌ ರವಿರ್ದೇವಃ ಸತ್ರಾಜಿನ್ಮಣಿನಾ ಜ್ವಲನ್ ॥ ೯

ಸತ್ರಾಜಿತ್ ಸ್ವಗೃಹಂ ಶ್ರೀಮತ್ ಕೃತಕೌತುಕಮಂಗಲಮ್ ।
ಪ್ರವಿಶ್ಯ ದೇವಸದನೇ ಮಣಿಂ ವಿಪ್ರೈರ್ನ್ಯವೇಶಯತ್ ॥ ೧೦

ದಿನೇ ದಿನೇ ಸ್ವರ್ಣಭಾರಾನಷ್ಟೌ ಸ ಸೃಜತಿ ಪ್ರಭೋ ।
ದುರ್ಭಿಕ್ಷಮಾರ್ಯರಿಷ್ಟಾನಿ ಸರ್ಪಾಧಿವ್ಯಾಧಯೋಽಶುಭಾಃ ।
ನ ಸಂತಿ ಮಾಯಿನಸ್ತತ್ರ ಯತ್ರಾಸ್ತೇಽಭ್ಯರ್ಚಿತೋ ಮಣಿಃ ॥ ೧೧

ಕಿರಣಮಾಲೆಯಿಂದ ಮಾನವರ ಕಣ್ಣುಗಳ ದೃಷ್ಟಿಶಕ್ತಿಯನ್ನು ಅಪಹರಿಸುತ್ತಿದ್ದಾನೆ (೬-೭). ಮೂರು ಲೋಕಗಳಲ್ಲಿಯೂ ದೇವೋತ್ತಮರು ನಿನ್ನ ಮಾರ್ಗವನ್ನು ಅನುಸರಿಸಿ ಬರುತ್ತಾರಲ್ಲವೆ? ಈಗ ಯಾದವರ ನಡುವೆ ಗೂಢನಾಗಿರುವ ನಿನ್ನನ್ನು ನೋಡಲು, ಓ ಸ್ವಾಮಿ, ಸೂರ್ಯನು ಬರುತ್ತಿದ್ದಾನೆ!'' ಎಂದು ನುಡಿದರು (೮). ಅಜ್ಞರಾದ ಅವರ ನುಡಿಯನ್ನು ಕೇಳಿ ಅರವಿಂದನೇತ್ರನು ನಕ್ಕು ''ಅವನು ಸೂರ್ಯದೇವನಲ್ಲ. ಸತ್ರಾಜಿತನು ಮಣಿಯ ಪ್ರಭೆಯಿಂದ ಹಾಗೆ ಬೆಳಗುತ್ತಿದ್ದಾನೆ!'' ಎಂದನು (೯). ಇತ್ತ ಸತ್ರಾಜಿತನು ಸಂಪದ್ಯುಕ್ತವೂ ಮಂಗಳೋತ್ಸವ ಸಹಿತವೂ ಆದ ತನ್ನ ಮನೆಯನ್ನು ಪ್ರವೇಶಿಸಿ, ದೇವರಮನೆಯಲ್ಲಿ ಆ ಮಣಿಯನ್ನು ವಿಪ್ರರ ಮೂಲಕ ಇರಿಸಿದನು (೧೦). ಮಹಾರಾಜ, ಆ ಸ್ಯಮಂತಕಮಣಿಯು ಪ್ರತಿದಿನವೂ ಎಂಟು ಭಾರಗಳ[1] ತೂಕದ ಚಿನ್ನವನ್ನು ಕೊಡುತ್ತಿತ್ತು. ಆ ಮಣಿಯು ಎಲ್ಲಿ ಪೂಜಿಸಲ್ಪಡುತ್ತಿರುವುದೋ ಆ ಸ್ಥಳದಲ್ಲಿ

---

೧ ಒಂದು ಭಾರ = ಸುಮಾರು ಹನ್ನೆರಡು ಮಣ.

ಸ ಯಾಚಿತೋ ಮಣಿಂ ಕ್ವಾಪಿ ಯದುರಾಜಾಯ ಶೌರಿಣಾ ।
ನೈವಾರ್ಥಕಾಮುಕಃ ಪ್ರಾದಾದ್ ಯಾಜ್ಞಾಭಂಗಮತರ್ಕಯನ್ ॥ ೧೨

ತಮೇಕದಾ ಮಣಿಂ ಕಂಠೇ ಪ್ರತಿಮುಚ್ಯ ಮಹಾಪ್ರಭಮ್ ।
ಪ್ರಸೇನೋ ಹಯಮಾರುಹ್ಯ ಮೃಗಯಾಂ ವ್ಯಚರದ್ ವನೇ ॥ ೧೩

ಪ್ರಸೇನಂ ಸಹಯಂ ಹತ್ವಾ ಮಣಿಮಾಚ್ಛಿದ್ಯ ಕೇಸರೀ ।
ಗಿರಿಂ ವಿಶನ್ ಜಾಂಬವತಾ ನಿಹತೋ ಮಣಿಮಿಚ್ಛತಾ ॥ ೧೪

ಸೋಽಪಿ ಚಕ್ರೇ ಕುಮಾರಸ್ಯ ಮಣಿಂ ಕ್ರೀಡನಕಂ ಬಿಲೇ ।
ಅಪಶ್ಯನ್ ಭ್ರಾತರಂ ಭ್ರಾತಾ ಸತ್ರಾಜಿತ್ ಪರ್ಯತಪ್ಯತ ॥ ೧೫

ಪ್ರಾಯಃ ಕೃಷ್ಣೇನ ನಿಹತೋ ಮಣಿಗ್ರೀವೋ ವನಂ ಗತಃ ।
ಭ್ರಾತಾ ಮಮೇತಿ ತಚ್ಛ್ರುತ್ವಾ ಕರ್ಣೇ ಕರ್ಣೇಽಜಪನ್ ಜನಾಃ ॥ ೧೬

ದುರ್ಭಿಕ್ಷ, ಮಾರಿಕಾ, ಅರಿಷ್ಟ, ಸರ್ಪಬಾಧೆ, ಮನೋರೋಗ, ವ್ಯಾಧಿ ಮುಂತಾದ ದುಃಖ ಕಾರಣಗಳೂ ಮೋಸಗಾರರೂ ಇರುವುದಿಲ್ಲ (೧೧). ಒಂದು ಸಲ ಶ್ರೀಕೃಷ್ಣನು ಆ ಮಣಿಯನ್ನು ಯದುರಾಜನಾದ ಉಗ್ರಸೇನನಿಗೆ ಕೊಡಬೇಕೆಂದು ಪ್ರಾರ್ಥಿಸಿದನು. ಆದರೆ ಧನಲೋಭಿಯಾದ ಸತ್ರಾಜಿತನು, ಭಗವಂತನ ಯಾಚನೆಗೆ ಭಂಗವಾಗುವುದೆಂಬುದನ್ನೂ ಆಲೋಚಿಸದೆ ಅದನ್ನು ಕೊಡಲಿಲ್ಲ (೧೨). ಹೀಗಿರಲು ಒಮ್ಮೆ ಸತ್ರಾಜಿತನ ತಮ್ಮನಾದ ಪ್ರಸೇನನು ಮಹಾಪ್ರಭೆಯುಳ್ಳ ಆ ಮಣಿಯನ್ನು ಕೊರಳಲ್ಲಿ ಧರಿಸಿ ಕುದುರೆಯನ್ನೇರಿ ಅರಣ್ಯದಲ್ಲಿ ಬೇಟೆಯಾಡುತ್ತಿದ್ದನು. ಒಂದು ಸಿಂಹವು ಆ ಕುದುರೆಯನ್ನೂ ಪ್ರಸೇನನನ್ನೂ ಕೊಂದು ಮಣಿಯನ್ನು ಕಿತ್ತುಕೊಂಡು ಬೆಟ್ಟದ ಗುಹೆಯೊಳಗೆ ಹೋಗುತ್ತಿತ್ತು. ಆ ಮಣಿಯನ್ನು ಬಯಸಿ ಜಾಂಬವಂತನು ಸಿಂಹವನ್ನು ಸಂಹರಿಸಿದನು (೧೩-೧೪). ಜಾಂಬವಂತನು ಗುಹೆಯಲ್ಲಿದ್ದ ತನ್ನ ಕುಮಾರನಿಗೆ ಸ್ಯಮಂತಕಮಣಿಯನ್ನು ಆಟವಾಡಲು ಕೊಟ್ಟನು. ಇತ್ತ ಸತ್ರಾಜಿತನು ಸೋದರನಾದ ಪ್ರಸೇನನನ್ನು ಕಾಣದೆ ಶೋಕಾಕುಲನಾದನು (೧೫). "ನನ್ನ ತಮ್ಮ ಸ್ಯಮಂತಕಮಣಿಯನ್ನು ಕೊರಳಲ್ಲಿ ಧರಿಸಿ ಅರಣ್ಯಕ್ಕೆ ಹೋಗಿದ್ದನು. ಅವನನ್ನು ಬಹುಶಃ ಕೃಷ್ಣನು ಕೊಂದಿರಬೇಕು!"

ಭಗವಾಂಸ್ತದುಪಶ್ರುತ್ಯ ದುರ್ಯಶೋ ಲಿಪ್ತಮಾತ್ಮನಿ ।
ಮಾರ್ಷ್ಟುಂ ಪ್ರಸೇನಪದವೀಮನ್ವಪದ್ಯತ ನಾಗರೈಃ ॥ ೧೭

ಹತಂ ಪ್ರಸೇನಮಶ್ವಂ ಚ ವೀಕ್ಷ್ಯ ಕೇಸರಿಣಾ ವನೇ ।
ತಂ ಚಾದ್ರಿಪೃಷ್ಠೇ ನಿಹತಮೃಕ್ಷೇಣ ದದೃಶುರ್ಜನಾಃ ॥ ೧೮

ಋಕ್ಷರಾಜಬಿಲಂ ಭೀಮಮಂಧೇನ ತಮಸಾಽಽವೃತಮ್ ।
ಏಕೋ ವಿವೇಶ ಭಗವಾನವಸ್ಥಾಪ್ಯ ಬಹಿಃ ಪ್ರಜಾಃ ॥ ೧೯

ತತ್ರ ದೃಷ್ಟ್ವಾ ಮಣಿಶ್ರೇಷ್ಠಂ ಬಾಲಕ್ರೀಡನಕಂ ಕೃತಮ್ ।
ಹರ್ತುಂ ಕೃತಮತಿಸ್ತಸ್ಮಿನ್ನವತಸ್ಥೇಽರ್ಭಕಾಂತಿಕೇ ॥ ೨೦

ತಮಪೂರ್ವಂ ನರಂ ದೃಷ್ಟ್ವಾ ಧಾತ್ರೀ ಚುಕ್ರೋಶ ಭೀತವತ್ ।
ತಚ್ಛ್ರುತ್ವಾಭ್ಯದ್ರವತ್ ಕ್ರುದ್ಧೋ ಜಾಂಬವಾನ್ ಬಲಿನಾಂ ವರಃ ॥ ೨೧

ಸ ವೈ ಭಗವತಾ ತೇನ ಯುಯುಧೇ ಸ್ವಾಮಿನಾಽಽತ್ಮನಃ ।
ಪುರುಷಂ ಪ್ರಾಕೃತಂ ಮತ್ವಾ ಕುಪಿತೋ ನಾನುಭಾವವಿತ್ ॥ ೨೨

ಎಂದು ಆತನು ಹೇಳತೊಡಗಿದನು. ಜನರು ಕಿವಿಯಿಂದ ಕಿವಿಗೆ ಹೇಳಿ ಈ ಸುದ್ದಿಯನ್ನು ಹಬ್ಬಿಸಿದರು (೧೬). ಭಗವಂತನು ಅದನ್ನು ಕೇಳಿ ತನಗೆ ಅಂಟಿದ ಅಪಕೀರ್ತಿಯನ್ನು ತೊಡೆದು ಹಾಕುವುದಕ್ಕಾಗಿ ಪಟ್ಟಣಿಗರನ್ನು ಕರೆದುಕೊಂಡು ಪ್ರಸೇನನನ್ನು ಅರಸುತ್ತ ಹೊರಟನು (೧೭). ಅರಣ್ಯದಲ್ಲಿ ಪ್ರಸೇನನನ್ನು ಅವನ ಕುದುರೆಯನ್ನು ಸಿಂಹವು ಕೊಂದುಹಾಕಿರುವುದನ್ನೂ ಬೆಟ್ಟದ ಬಳಿ ಕರಡಿಯು ಸಿಂಹವನ್ನು ಸಂಹರಿಸಿರುವುದನ್ನೂ ಜನರು ಗುರುತಿಸಿದರು (೧೮). ಆ ಕರಡಿಯ ಬಿಲವು ದಟ್ಟವಾದ ಕತ್ತಲೆಯಿಂದ ಕವಿದು ಭೀಕರವಾಗಿತ್ತು. ಶ್ರೀಕೃಷ್ಣನು ಪಟ್ಟಣಿಗರನ್ನು ಹೊರಗೆ ನಿಲ್ಲಿಸಿ ತಾನೊಬ್ಬನೇ ಒಳಗೆ ಪ್ರವೇಶಿಸಿಬಿಟ್ಟನು. ಅಲ್ಲಿ ಜಾಂಬವಂತನ ಕುಮಾರನಿಗೆ ಆ ಶ್ರೇಷ್ಠ ಮಣಿಯು ಆಟದ ಸಾಮಗ್ರಿಯಾಗಿತ್ತು. ಶ್ರೀಕೃಷ್ಣನು ಅದನ್ನು ಕಂಡು, ಮಣಿಯನ್ನು ಒಯ್ಯಬೇಕೆಂದು ಆ ಬಾಲಕನ ಬಳಿಗೆ ಹೋಗಿ ನಿಂತುಕೊಂಡನು (೧೯-೨೦). ಮಗುವನ್ನಾಡಿಸುತ್ತಿದ್ದ ದಾದಿಯು ಎಂದೂ ಕಾಣದಿದ್ದ ಅಪೂರ್ವ ಮಾನವನನ್ನು ಕಂಡು ಹೆದರಿ ಕಿರಿಚಿಕೊಂಡಳು. ಅದನ್ನು ಕೇಳಿ ಬಲಾಢ್ಯನಾದ ಜಾಂಬವಂತನು ಕ್ರುದ್ಧನಾಗಿ ಧಾವಿಸುತ್ತ ಬಂದನು (೨೧). ಜಾಂಬವಂತನು ತನ್ನ ಸ್ವಾಮಿಯಾದ ಭಗವಂತನೊಡನೆ

ದ್ವಂದ್ವಯುದ್ಧಂ ಸುತುಮುಲಮುಭಯೋರ್ವಿಜಿಗೀಷತೋಃ।
ಆಯುಧಾಶ್ಮದ್ರುಮೈರ್ದೋರ್ಭಿಃ ಕ್ರವ್ಯಾರ್ಥೇ ಶ್ಯೇನಯೋರಿವ॥ ೨೩

ಆಸೀತ್ತದಷ್ಟಾವಿಂಶಾಹಮಿತರೇತರಮುಷ್ಟಿಭಿಃ।
ವಜ್ರನಿಷ್ಪೇಷಪರುಷೈರವಿಶ್ರಮಮಹರ್ನಿಶಮ್॥ ೨೪

ಕೃಷ್ಣಮುಷ್ಟಿವಿನಿಷ್ಪಾತನಿಷ್ಪಿಷ್ಟಾಂಗೋರುಬಂಧನಃ।
ಕ್ಷೀಣಸತ್ತ್ವಃ ಸ್ವಿನ್ನಗಾತ್ರಸ್ತಮಾಹಾತೀವ ವಿಸ್ಮಿತಃ॥ ೨೫

ಜಾನೇ ತ್ವಾಂ ಸರ್ವಭೂತಾನಾಂ ಪ್ರಾಣ ಓಜಃ ಸಹೋ ಬಲಮ್।
ವಿಷ್ಣುಂ ಪುರಾಣಪುರುಷಂ ಪ್ರಭವಿಷ್ಣುಮಧೀಶ್ವರಮ್॥ ೨೬

ತ್ವಂ ಹಿ ವಿಶ್ವಸೃಜಾಂ ಸ್ರಷ್ಟಾ ಸೃಜ್ಯಾನಾಮಪಿ ಯಚ್ಚ ಸತ್।
ಕಾಲಃ ಕಲಯತಾಮೀಶಃ ಪರ ಆತ್ಮಾ ತಥಾಽಽತ್ಮನಾಮ್॥ ೨೭

ಹೋರಾಟವನ್ನಾರಂಭಿಸಿದನು. ಆತನ ಮಹಿಮೆಯನ್ನರಿಯದೆ ಅವನೊಬ್ಬ ಸಾಮಾನ್ಯ ಮನುಷ್ಯನೆಂದು ತಿಳಿದು ಕೋಪದಿಂದ ಹೋರಾಡಿದನು (೨೨). ಒಬ್ಬರನ್ನೊಬ್ಬರು ಜಯಿಸಬೇಕೆಂದಿದ್ದ ಅವರಿಬ್ಬರಿಗೂ ಆಯುಧ, ಕಲ್ಲು, ಮರಗಳಿಂದಲೂ ಭುಜಗಳಿಂದಲೂ ಘೋರವಾದ ದ್ವಂದ್ವಯುದ್ಧ ನಡೆಯಿತು. ಮಾಂಸದ ನಿಮಿತ್ತವಾಗಿ ಎರಡು ಗಿಡಗಪಕ್ಷಿಗಳಿಗೆ ನಡೆದ ಯುದ್ಧದಂತೆ ಅದು ಕಾಣಿಸಿತು (೨೩). ಸಿಡಿಲಿನಂತೆ ಎರಗುವ ಕಠೋರವಾದ ಮುಷ್ಟಿಗಳಿಂದ ಗುದ್ದುತ್ತ ಸಾಗಿದ ಹೋರಾಟವು ಹಗಲು ರಾತ್ರಿಗಳೆನ್ನದೆ ನಿರಂತರವಾಗಿ ಇಪ್ಪತ್ತೆಂಟು ದಿನಗಳವರೆಗೆ ನಡೆಯಿತು (೨೪). ಶ್ರೀಕೃಷ್ಣನ ಮುಷ್ಟಿಘಾತಗಳಿಂದ ಜಾಂಬವಂತನ ಅಂಗಗಳೂ ತೊಡೆಗಳೂ ಸಂದುಗಳೂ ಜರ್ಜರಿತವಾದವು. ಬಲ ಉಡುಗಿತು. ಬೆವರು ಹರಿಯಿತು. ಅಚ್ಚರಿಗೊಂಡ ಜಾಂಬವಂತನು ಹೀಗೆಂದನು (೨೫). "ಹೇ ಪ್ರಭು, ಸರ್ವಭೂತಗಳಲ್ಲಿಯೂ ಇರುವ ಪ್ರಾಣ, ಓಜಸ್ಸು, ಸಹನಶಕ್ತಿ ಬಲ-ಇವೆಲ್ಲವೂ ನೀನೇ. ಸರ್ವಶಕ್ತನೂ ಜಗದೀಶ್ವರನೂ ಪುರಾಣಪುರುಷನೂ ಆದ ವಿಷ್ಣುವೇ ನೀನೆಂದು ತಿಳಿಯುತ್ತೇನೆ (೨೬). ಸೃಷ್ಟಿಕರ್ತರಾದ ಬ್ರಹ್ಮಾದಿಗಳನ್ನು ಸೃಜಿಸಿದವನು ನೀನು. ಸೃಜ್ಯಗಳಾದ ಮಹಾದಾದಿತತ್ತ್ವಗಳಿಗೆ ಸತ್ತಾಪ್ರದನು ನೀನು. ಸರ್ವವನ್ನೂ ಕಬಳಿಸತಕ್ಕವರಲ್ಲಿ ಕಾಲನೂ ಪರೇಶನೂ ಜೀವಾತ್ಮರಿಗೆ ಆತ್ಮನೂ ಆಗಿರುವೆ (೨೭).

ಯಸ್ಯೇಷದುತ್ಕಲಿತರೋಷಕಟಾಕ್ಷಮೋಕ್ಷೈ
ರ್ವರ್ತ್ಮಾದಿಶತ್ ಕ್ಷುಭಿತನಕ್ರತಿಮಿಂಗಿಲೋಽಬ್ಧಿಃ।
ಸೇತುಃ ಕೃತಃ ಸ್ವಯಶ ಉಜ್ಜ್ವಲಿತಾ ಚ ಲಂಕಾ
ರಕ್ಷಃ ಶಿರಾಂಸಿ ಭುವಿ ಪೇತುರಿಷುಕ್ಷತಾನಿ ॥ ೨೮

ಇತಿ ವಿಜ್ಞಾತವಿಜ್ಞಾನಮೃಕ್ಷರಾಜಾನಮಚ್ಯುತಃ।
ವ್ಯಾಜಹಾರ ಮಹಾರಾಜ ಭಗವಾನ್ ದೇವಕೀಸುತಃ ॥ ೨೯

ಅಭಿಮೃಶ್ಯಾರವಿಂದಾಕ್ಷಃ ಪಾಣಿನಾ ಶಂಕರೇಣ ತಮ್ ।
ಕೃಪಯಾ ಪರಯಾ ಭಕ್ತಂ ಪ್ರೇಮಗಂಭೀರಯಾ ಗಿರಾ ॥ ೩೦

ಮಣಿಹೇತೋರಿಹ ಪ್ರಾಪ್ತಾ ವಯಮೃಕ್ಷಪತೇ ಬಿಲಮ್ ।
ಮಿಥ್ಯಾಭಿಶಾಪಂ ಪ್ರಮೃಜನ್ನಾತ್ಮನೋ ಮಣಿನಾಮುನಾ ॥ ೩೧

ಇತ್ಯುಕ್ತಃ ಸ್ವಾಂ ದುಹಿತರಂ ಕನ್ಯಾಂ ಜಾಂಬವತೀಂ ಮುದಾ ।
ಅರ್ಹಣಾರ್ಥಂ ಸ ಮಣಿನಾ ಕೃಷ್ಣಾಯೋಪಜಹಾರ ಹ ॥ ೩೨

ಯಾವಾತನು ನಸುಮುಳಿದು ಕಡೆಗಣ್ಣುಗಳಿಂದ ನೋಡಿದ ಮಾತ್ರದಿಂದಲೇ ಮಹಾಸಮುದ್ರವು ತಡಬಡಿಸಿದ ಮೊಸಳೆ ತಿಮಿಂಗಿಲಗಳುಳ್ಳದ್ದಾಗಿ ದಾರಿಯನ್ನು ಬಿಟ್ಟುಕೊಟ್ಟಿತ್ತೋ, ತನ್ನ ಕೀರ್ತಿಯು ನಿಲ್ಲಲೆಂದು ಮಾತ್ರವೇ ಯಾವಾತನು ಸೇತುವೆಯನ್ನು ನಿರ್ಮಿಸಿದನೋ, ಲಂಕೆಯನ್ನು ಸುಟ್ಟು ಉರುಭಿದನೋ, ಯಾವಾತನ ಶರಜಾಲಗಳಿಂದ ರಾಕ್ಷಸರ ತಲೆಗಳು ತರಿತರಿದು ನೆಲದಮೇಲುರುಳಿದವೋ ಆ ಶ್ರೀರಾಮಚಂದ್ರಮೂರ್ತಿಯೇ ನೀನು!'' ಎಂದನು (೨೮). ಈ ಪ್ರಕಾರವಾಗಿ ವಿವೇಚನೆಯಿಂದ ಜ್ಞಾನವನ್ನು ಪಡೆದು ಸ್ತುತಿಸಿದ ಭಲ್ಲೂಕ ರಾಜನಾದ ಜಾಂಬವಂತನನ್ನು ಕುರಿತು, ಪರೀಕ್ಷಿತರಾಜ, ಅಚ್ಯುತನಾದ ಭಗವಾನ್ ದೇವಕೀಸುತನು ಮಾತಾಡಿದನು (೨೯). ಆ ಕಮಲನೇತ್ರನು ಶುಭಕರವಾದ ತನ್ನ ಕೈಯಿಂದ ಭಕ್ತನಾದ ಜಾಂಬವಂತನನ್ನು ಪರಮಕಾರುಣ್ಯದಿಂದ ನೇವರಿಸಿ ಪ್ರೇಮಗಂಭೀರವಾದ ನುಡಿಯಿಂದ ''ಜಾಂಬವಂತ, ಈ ಮಣಿಗಾಗಿ ನಾವು ಗುಹೆಯೊಳಗೆ ಬಂದೆವು. ಈ ಮಣಿಯಿಂದ ಉಂಟಾದ ಒಂದು ಸುಳ್ಳು ಅಪವಾದವನ್ನು ತೊಡೆದು ಹಾಕುವುದು ನಮ್ಮ ಉದ್ದೇಶ'' ಎಂದನು (೩೦-೩೧). ಹೀಗೆ ನುಡಿಯಲಾಗಿ

ಅದೃಷ್ಟ್ವಾ ನಿರ್ಗಮಂ ಶೌರೇಃ ಪ್ರವಿಷ್ಟಸ್ಯ ಬಿಲಂ ಜನಾಃ ।
ಪ್ರತೀಕ್ಷ್ಯ ದ್ವಾದಶಾಹಾನಿ ದುಃಖಿತಾಃ ಸ್ವಪುರಂ ಯಯುಃ ॥ ೩೩

ನಿಶಮ್ಯ ದೇವಕೀ ದೇವೀ ರುಕ್ಮಿಣ್ಯಾನಕದುಂದುಭಿಃ ।
ಸುಹೃದೋ ಜ್ಞಾತಯೋಽಶೋಚನ್ ಬಿಲಾತ್ ಕೃಷ್ಣಮನಿರ್ಗತಮ್ ॥ ೩೪

ಸತ್ರಾಜಿತಂ ಶಪಂತಸ್ತೇ ದುಃಖಿತಾ ದ್ವಾರಕೌಕಸಃ ।
ಉಪತಸ್ಥುರ್ಮಹಾಮಾಯಾಂ ದುರ್ಗಾಂ ಕೃಷ್ಣೋಪಲಬ್ಧಯೇ ॥ ೩೫

ತೇಷಾಂ ತು ದೇವ್ಯುಪಸ್ಥಾನಾತ್ ಪ್ರತ್ಯಾದಿಷ್ಟಾಶಿಷಾ ಸ ಚ ।
ಪ್ರಾದುರ್ಬಭೂವ ಸಿದ್ಧಾರ್ಥಃ ಸದಾರೋ ಹರ್ಷಯನ್ ಹರಿಃ ॥ ೩೬

ಉಪಲಭ್ಯ ಹೃಷೀಕೇಶಂ ಮೃತಂ ಪುನರಿವಾಗತಮ್ ।
ಸಹ ಪತ್ನ್ಯಾ ಮಣಿಗ್ರೀವಂ ಸರ್ವೇ ಜಾತಮಹೋತ್ಸವಾಃ ॥ ೩೭

ಸತ್ರಾಜಿತಂ ಸಮಾಹೂಯ ಸಭಾಯಾಂ ರಾಜಸಂನಿಧೌ ।
ಪ್ರಾಪ್ತಿಂ ಚಾಖ್ಯಾಯ ಭಗವಾನ್ ಮಣಿಂ ತಸ್ಮೈ ನ್ಯವೇದಯತ್ ॥ ೩೮

ಜಾಂಬವಂತನು ಶ್ರೀಕೃಷ್ಣನನ್ನು ಸತ್ಕರಿಸುವುದಕೋಸ್ಕರ ತನ್ನ ಮಗಳಾದ ಜಾಂಬವತಿಯೆಂಬ ಕನ್ಯೆಯನ್ನು ಸ್ಯಮಂತಕಮಣಿಯೊಂದಿಗೆ ಸಂತೋಷದಿಂದ ಅರ್ಪಿಸಿದನು (೩೨). ಇತ್ತ ಬಿಲದೊಳಗೆ ಹೋದ ಶ್ರೀಕೃಷ್ಣನು ಹೊರಗೆ ಬಾರದಿರುವುದನ್ನು ಕಂಡ ಜನರು ಹನ್ನೆರಡು ದಿನಗಳವರೆಗೆ ಕಾದಿದ್ದು ಖಿನ್ನರಾಗಿ ತಮ್ಮ ನಗರಕ್ಕೆ ಹಿಂದಿರುಗಿದರು (೩೩). ಗುಹೆಯಿಂದ ಶ್ರೀಕೃಷ್ಣನು ಹೊರಗೆ ಬರಲಿಲ್ಲವೆಂಬುದನ್ನು ಕೇಳಿ ದೇವಕೀದೇವಿ, ರುಕ್ಮಿಣಿ, ವಸುದೇವ ಮತ್ತು ಮಿತ್ರಬಾಂಧವರು ಶೋಕಿಸತೊಡಗಿದರು. ಇದಕ್ಕೆಲ್ಲ ಸತ್ರಾಜಿತನು ಕಾರಣವೆಂದು ದ್ವಾರಕಾವಾಸಿಗಳು ಅವನನ್ನು ಬಯ್ಯುತ್ತ ಶ್ರೀಕೃಷ್ಣನು ದೊರಕಲೆಂದು ಮಹಾ ಮಾಯೆಯಾದ ದುರ್ಗೆಯನ್ನು ಭಜಿಸಿದರು (೩೪-೩೫). ಅವರ ಸ್ತುತಿಗೆ ಮೆಚ್ಚಿ ದುರ್ಗಾದೇವಿಯು ಆಶೀರ್ವದಿಸಲಾಗಿ ಶ್ರೀಕೃಷ್ಣನು ಮಣಿಯನ್ನು ಪಡೆದು ಕೃತ ಕೃತ್ಯನಾಗಿ ಜಾಂಬವತಿಯೆಂಬ ಪತ್ನಿಯೊಡನೆ ಎಲ್ಲರಿಗೂ ಆನಂದವನ್ನುಂಟು ಮಾಡುತ್ತ ಉಪಸ್ಥಿತನಾದನು (೩೬). ಕೊರಳಲ್ಲಿ ಸ್ಯಮಂತಕಮಣಿಯನ್ನು ಧರಿಸಿ ಪತ್ನಿಯೊಡನೆ ಬಂದ ಗೋವಿಂದನನ್ನು ಕಂಡು, ಮೃತನಾದವನು ಮರಳಿ ಬದುಕಿಬಂದನೋ ಎಂಬಂತೆ ಎಲ್ಲರೂ ಆನಂದತುಂದಿಲರಾದರು (೩೭).

ಸ ಚಾತಿವ್ರೀಡಿತೋ ರತ್ನಂ ಗೃಹೀತ್ವಾವಾಙ್ಮುಖಸ್ತತಃ ।
ಅನುತಪ್ಯಮಾನೋ ಭವನಮಗಮತ್ ಸ್ವೇನ ಪಾಪ್ಮನಾ ॥ ೩೯

ಸೋಽನುಧ್ಯಾಯಂಸ್ತದೇವಾಘಂ ಬಲವದ್ವಿಗ್ರಹಾಕುಲಃ ।
ಕಥಂ ಮೃಜಾಮ್ಯಾತ್ಮರಜಃ ಪ್ರಸೀದೇದ್ ವಾಚ್ಯುತಃ ಕಥಮ್ ॥ ೪೦

ಕಿಂ ಕೃತ್ವಾಸಾಧು ಮಹ್ಯಂ ಸ್ಯಾನ್ನ ಶಪೇದ್ ವಾ ಜನೋ ಯಥಾ ।
ಅದೀರ್ಘದರ್ಶನಂ ಕ್ಷುದ್ರಂ ಮೂಢಂ ದ್ರವಿಣಲೋಲುಪಮ್ ॥ ೪೧

ದಾಸ್ಯೇ ದುಹಿತರಂ ತಸ್ಮೈ ಸ್ತ್ರೀರತ್ನಂ ರತ್ನಮೇವ ಚ ।
ಉಪಾಯೋಽಯಂ ಸಮೀಚೀನಸ್ತಸ್ಯ ಶಾಂತಿರ್ನ ಚಾನ್ಯಥಾ ॥ ೪೨

ಏವಂ ವ್ಯವಸಿತೋ ಬುದ್ಧ್ಯಾ ಸತ್ರಾಜಿತ್ ಸ್ವಸುತಾಂ ಶುಭಾಮ್ ।
ಮಣಿಂ ಚ ಸ್ವಯಮುದ್ಯಮ್ಯ ಕೃಷ್ಣಾಯೋಪಜಹಾರ ಹ ॥ ೪೩

ಭಗವಂತನು ಸತ್ರಾಜಿತನನ್ನು ರಾಜಸಭೆಗೆ ಕರೆಯಿಸಿ, ರಾಜನಾದ ಉಗ್ರಸೇನನ ಎದುರಿಗೆ ಸ್ಯಮಂತಕಮಣಿಯು ದೊರಕಿದ ಬಗೆಯನ್ನು ವಿವರಿಸಿ, ಆ ಮಣಿಯನ್ನು ಸತ್ರಾಜಿತನಿಗೆ ಒಪ್ಪಿಸಿದನು (೩೮). ಸತ್ರಾಜಿತನಿಗೆ ಬಹಳ ನಾಚಿಕೆಯಾಯಿತು. ಅವನು ತಲೆತಗ್ಗಿಸಿ ಆ ರತ್ನವನ್ನು ತೆಗೆದುಕೊಂಡು ತನ್ನ ತಪ್ಪಿಗಾಗಿ ಪಶ್ಚಾತ್ತಾಪ ಪಡುತ್ತ ಮನೆಗೆ ಹೋದರು. "ಬಲಶಾಲಿಗಳೊಡನೆ ವಿರೋಧವನ್ನು ಕಟ್ಟಿಕೊಂಡೆನು" ಎಂದು ಕೊರಗುತ್ತ ತನ್ನ ತಪ್ಪನ್ನೇ ಅವನು ಸದಾ ಚಿಂತಿಸತೊಡಗಿದನು. "ನನ್ನ ತಪ್ಪನ್ನು ಹೇಗೆ ತೊಳೆದುಕೊಂಡೇನು? ಹೇಗೆ ಮಾಡಿದರೆ ಅಚ್ಯುತನು ಪ್ರಸನ್ನನಾದಾನು? (೩೯-೪೦). ಏನು ಮಾಡಿದರೆ ನನಗೆ ಒಳ್ಳೆಯದಾದೀತು ? ದೂರದರ್ಶಿಯಲ್ಲವೆಂದೂ ಸಣ್ಣಮನುಷ್ಯನೆಂದೂ ಮೂಢನೆಂದೂ ಧನಲೋಭಿಯೆಂದೂ ಜನರು ನನ್ನನ್ನು ಬಯ್ಯದಿದ್ದಾರು? (೪೧). ಸ್ತ್ರೀರತ್ನವಾದ ನನ್ನ ಮಗಳನ್ನೂ ಈ ಸ್ಯಮಂತಕ ರತ್ನವನ್ನೂ ಶ್ರೀಕೃಷ್ಣನಿಗೆ ಕೊಟ್ಟುಬಿಡುವೆನು! ಇದೇ ಸರಿಯಾದ ಉಪಾಯ. ಇದೇ ನನ್ನ ತಪ್ಪಿಗೆ ಶಾಂತಿ" (೪೨). ಎಂದು ಮನಸ್ಸಿನಲ್ಲಾಲೋಚಿಸಿ ನಿಶ್ಚಯಮಾಡಿ, ಶುಭಾಂಗಿಯಾದ ತನ್ನ ಮಗಳನ್ನೂ ಸ್ಯಮಂತಕಮಣಿಯನ್ನೂ ಪ್ರಯತ್ನಪೂರ್ವಕವಾಗಿ ಶ್ರೀಕೃಷ್ಣನಿಗೆ ಅರ್ಪಿಸಿದನು.

ತಾಂ ಸತ್ಯಭಾಮಾಂ ಭಗವಾನುಪಯೇಮೇ ಯಥಾವಿಧಿ।
ಬಹುಭಿರ್ಯಾಚಿತಾಂ ಶೀಲರೂಪೌದಾರ್ಯಗುಣಾನ್ವಿತಾಮ್ ॥ ೪೪

ಭಗವಾನಾಹ ನ ಮಣಿಂ ಪ್ರತೀಚ್ಛಾಮೋ ವಯಂ ನೃಪ।
ತವಾಸ್ತಾಂ ದೇವಭಕ್ತಸ್ಯ ವಯಂ ಚ ಫಲಭಾಗಿನಃ॥ ೪೫

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ಷಟ್ ಪಂಚಾಶತ್ತಮಾಧ್ಯಾಯಃ

ಸಪ್ತಪಂಚಾಶತ್ತಮಾಧ್ಯಾಯಃ

ಶ್ರೀಶುಕ ಉವಾಚ

ವಿಜ್ಞಾತಾರ್ಥೋಽಪಿ ಗೋವಿಂದೋ ದಗ್ಧಾನಾಕರ್ಣ್ಯ ಪಾಂಡವಾನ್।
ಕುಂತೀಂ ಚ ಕುಲ್ಯಕರಣೇ ಸಹರಾಮೋ ಯಯೌ ಕುರೂನ್॥ ೧

ಶೀಲ-ರೂಪ-ಔದಾರ್ಯಾದಿಗುಣಗಳಿಂದ ಕೂಡಿದ ಯಾವ ಕನ್ಯೆಯನ್ನು ಮದುವೆಯಾಗಲು (ಕೃತವರ್ಮಾದಿ) ಬಹುಜನರು ಸತ್ರಾಜಿತನಲ್ಲಿ ಪ್ರಾರ್ಥನೆಯನ್ನುಸಲ್ಲಿಸಿದ್ದರೋ ಆ ಸತ್ಯಭಾಮೆಯನ್ನು ಭಗವಂತನು ವಿಧಿವತ್ತಾಗಿ ಮದುವೆಯಾದನು (೪೩-೪೪). ಅನಂತರ ಶ್ರೀಕೃಷ್ಣನು ಸತ್ರಾಜಿತನನ್ನು ಕುರಿತು ''ರಾಜ, ಈ ಸ್ಯಮಂತಕಮಣಿಯನ್ನು ಮಾತ್ರ ನಾವು ಸ್ವೀಕರಿಸುವುದಿಲ್ಲ. ಅದು ಸೂರ್ಯ ಭಕ್ತನಾದ ನಿನ್ನಲ್ಲಿ ಇರಲಿ. ನಿನ್ನ ಬಳಿ ಇದ್ದರೆ ನಮಗೆ ಫಲವು ದೊರಕಿದಂತೆಯೇ'' ಎಂದು ಹೇಳಿದನು (೪೫).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಐವತ್ತಾರನೆಯ ಅಧ್ಯಾಯ

ಅಧ್ಯಾಯ ೫೭

ಶತಧನ್ವನು ಸತ್ರಾಜಿತನನ್ನು ಕೊಂದು ಸ್ಯಮಂತಕಮಣಿಯನ್ನು ಅಪಹರಿಸುವುದು. ಶ್ರೀಕೃಷ್ಣನಿಂದ ಶತಧನ್ವನ ಸಂಹಾರ. ಮಣಿಯನ್ನು ಅಕ್ರೂರನಿಗೆ ಹಿಂದಿರುಗಿಸುವುದು.

ಹೀಗಿರಲು ಪಾಂಡವರೂ ಕುಂತಿಯೂ (ಅರಗಿನ ಅರಮನೆಯಲ್ಲಿ) ಸುಟ್ಟು ಹೋದರೆಂಬ ಸುದ್ದಿಯನ್ನು ಶ್ರೀಕೃಷ್ಣನು ಕೇಳಿದನು. ಯಥಾರ್ಥವೇನೆಂಬುದು

ಭೀಷ್ಮಂ ಕೃಪಂ ಸವಿದುರಂ ಗಾಂಧಾರೀಂ ದ್ರೋಣಮೇವ ಚ।
ತುಲ್ಯದುಃಖೌ ಚ ಸಂಗಮ್ಯ ಹಾ ಕಷ್ಟಮಿತಿ ಹೋಚತುಃ॥ ೨

ಲಬ್ಧ್ವೈತದಂತರಂ ರಾಜನ್ ಶತಧನ್ವಾನಮೂಚತುಃ।
ಅಕ್ರೂರಕೃತವರ್ಮಾಣೌ ಮಣಿಃ ಕಸ್ಮಾನ್ನ ಗೃಹ್ಯತೇ॥ ೩

ಯೋಽಸ್ಮಭ್ಯಂ ಸಂಪ್ರತಿಶ್ರುತ್ಯ ಕನ್ಯಾರತ್ನಂ ವಿಗರ್ಹ್ಯ ನಃ।
ಕೃಷ್ಣಾಯಾದಾನ್ನ ಸತ್ರಾಜಿತ್ ಕಸ್ಮಾದ್ ಭ್ರಾತರಮನ್ವಿಯಾತ್॥ ೪

ಏವಂ ಭಿನ್ನಮತಿಸ್ತಾಭ್ಯಾಂ ಸತ್ರಾಜಿತಮಸತ್ತಮಃ।
ಶಯಾನಮವಧೀಲ್ಲೋಭಾತ್ ಸ ಪಾಪಃ ಕ್ಷೀಣಜೀವಿತಃ॥ ೫

ಸ್ತ್ರೀಣಾಂ ವಿಕ್ರೋಶಮಾನಾನಾಂ ಕ್ರಂದಂತೀನಾಮನಾಥವತ್।
ಹತ್ವಾ ಪಶುಂ ಸೌನಿಕವನ್ಮಣಿಮಾದಾಯ ಜಗ್ಮಿವಾನ್॥ ೬

ತಿಳಿದಿದ್ದರೂ ಆತನು ಕುಲೋಚಿತವಾದ ಲೋಕವ್ಯವಹಾರವನ್ನು ನಡೆಸುವುದಕ್ಕಾಗಿ ಬಲರಾಮನೊಡನೆ ಕುರುದೇಶಕ್ಕೆ ಪ್ರಯಾಣ ಮಾಡಿದನು (೧). ಅಲ್ಲಿಭೀಷ್ಮ, ಕೃಪ, ವಿದುರ, ಗಾಂಧಾರಿ, ದ್ರೋಣರನ್ನು ಅವರು ಸಂದರ್ಶಿಸಿ, ಅವರಂತೆಯೇ ದುಃಖಿತರಾಗಿ 'ಅಯ್ಯೋ ಕಷ್ಟವೆ!' ಎಂದು ಮಾತಾಡಿದರು (೨). ಪರೀಕ್ಷಿತರಾಜ, ಇದೇ ಸಮಯವೆಂದರಿತು ಅಕ್ರೂರ ಮತ್ತು ಕೃತವರ್ಮ ಇವರಿಬ್ಬರು ಶತಧನ್ವನನ್ನು ಕುರಿತು ''ಅಯ್ಯಾ, ಸ್ಯಮಂತಕಮಣಿಯನ್ನೇಕೆ ಕಿತ್ತುಕೊಳ್ಳಬಾರದು ? ಸತ್ರಾಜಿತನು ತನ್ನ ಕನ್ಯಾರತ್ನವನ್ನು ಕೊಡುವೆನೆಂದು ಮಾತುಕೊಟ್ಟು ಆಮೇಲೆ ನಮ್ಮನ್ನೇ ನಿಂದಿಸಿ, ಅವಳನ್ನು ಕೃಷ್ಣನಿಗೆ ಕೊಟ್ಟು ಬಿಟ್ಟನಲ್ಲ! ಅವನು ತನ್ನ ತಮ್ಮನಾದ ಪ್ರಸೇನನ ದಾರಿಯನ್ನೇಕೆ ಹಿಡಿಯಬಾರದು ?'' ಎಂದರು (೩-೪). ಅವರಿಬ್ಬರ ಚಾಡಿಮಾತಿನಿಂದ ದುರುಳನಾದ ಶತಧನ್ವನು ಬುದ್ಧಿಗೆಟ್ಟನು. ಅಲ್ಪಜೀವಿತನಾದ ಆ ಪಾಪಿಯು ನಿದ್ರಿಸುತ್ತಿದ್ದ ಸತ್ರಾಜಿತನನ್ನು ಧನಲೋಭದಿಂದ ಕೊಂದುಬಿಟ್ಟನು (೫). ಸ್ತ್ರೀಯರು ಅನಾಥರಂತೆ ಅಳುತ್ತ ಗೋಳಾಡುತ್ತಿರಲು, ಕಟುಕನು ಪಶುವನ್ನು ಕೊಲ್ಲುವಂತೆ ಶತಧನ್ವನುಸತ್ರಾಜಿತನನ್ನು ವಧಿಸಿ, ಸ್ಯಮಂತಕ ಮಣಿಯನ್ನು ತೆಗೆದುಕೊಂಡು ಹೊರಟು ಹೋದನು (೬). ತಂದೆಯು ಹತನಾದುದನ್ನು

ಸತ್ಯಭಾಮಾ ಚ ಪಿತರಂ ಹತಂ ವೀಕ್ಷ್ಯ ಶುಚಾರ್ಪಿತಾ ।
ವ್ಯಲಪತ್ತಾತ ತಾತೇತಿ ಹಾ ಹತಾಸ್ಮೀತಿ ಮುಹ್ಯತೀ ॥ ೭

ತೈಲದ್ರೋಣ್ಯಾಂ ಮೃತಂ ಪ್ರಾಸ್ಯ ಜಗಾಮ ಗಜಸಾಹ್ವಯಮ್ ।
ಕೃಷ್ಣಾಯ ವಿದಿತಾರ್ಥಾಯಾ ತಪ್ತಾಽಽಚಖ್ಯೌ ಪಿತುರ್ವಧಮ್ ॥ ೮

ತದಾಕರ್ಣ್ಯೇಶ್ವರೌ ರಾಜನ್ನನುಸೃತ್ಯ ನೃಲೋಕತಾಮ್ ।
ಅಹೋ ನಃ ಪರಮಂ ಕಷ್ಟಮಿತ್ಯಸ್ರಾಕ್ಷೌ ವಿಲೇಪತುಃ ॥ ೯

ಆಗತ್ಯ ಭಗವಾಂಸ್ತಸ್ಮಾತ್ ಸಭಾರ್ಯಃ ಸಾಗ್ರಜಃ ಪುರಮ್ ।
ಶತಧನ್ವಾನಮಾರೇಭೇ ಹಂತುಂ ಹರ್ತುಂ ಮಣಿಂ ತತಃ ॥ ೧೦

ಸೋಽಪಿ ಕೃಷ್ಣೋದ್ಯಮಂ ಜ್ಞಾತ್ವಾ ಭೀತಃ ಪ್ರಾಣಪರೀಪ್ಸಯಾ ।
ಸಾಹಾಯ್ಯೇ ಕೃತವರ್ಮಾಣಮಯಾಚತ ಸ ಚಾಬ್ರವೀತ್ ॥ ೧೧

ನಾಹಮೀಶ್ವರಯೋಃ ಕುರ್ಯಾಂ ಹೇಲನಂ ರಾಮಕೃಷ್ಣಯೋಃ ।
ಕೋ ನು ಕ್ಷೇಮಾಯ ಕಲ್ಪೇತ ತಯೋರ್ವೃಜಿನಮಾಚರನ್ ॥ ೧೨

ನೋಡಿ ಸತ್ಯಭಾಮೆಯು ಶೋಕಸಂತಪ್ತಳಾಗಿ ''ಅಪ್ಪ, ಅಪ್ಪ, ಅಯ್ಯೋ ಕೆಟ್ಟೆನು!'' ಎಂದು ಎಚ್ಚರದಪ್ಪಿ ಅತ್ತಳು. ತರುವಾಯ ಮೃತನಾದ ತಂದೆಯ ಕಳೇಬರವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿ ಇಡಿಸಿ ಹಸ್ತಿನಾವತಿಗೆ ಧಾವಿಸಿದಳು. ಅಲ್ಲಿ ಎಲ್ಲವನ್ನೂ ತಿಳಿದಿದ್ದ ಶ್ರೀಕೃಷ್ಣನಿಗೆ ತನ್ನ ತಂದೆಯ ವಧೆಯ ವೃತ್ತಾಂತವನ್ನು ಶೋಕಾಕುಲಳಾಗಿ ಹೇಳಿದಳು (೭-೮). ಪರೀಕ್ಷಿತರಾಜ, ಸಮರ್ಥರಾದ ಬಲರಾಮಕೃಷ್ಣರು ಅದನ್ನು ಕೇಳಿ ಮನುಷ್ಯ ರೀತಿಯನ್ನನುಸರಿಸಿ ''ಅಯ್ಯೋ, ನಮಗೆ ಎಂತಹ ಕಷ್ಟ ಒದಗಿತು ! '' ಎಂದು ಕಂಬನಿದುಂಬಿ ದುಃಖಿಸಿದರು (೯). ಭಗವಂತನು ಪತ್ನಿಯಾದ ಸತ್ಯಭಾಮೆ ಮತ್ತು ಅಣ್ಣನಾದ ಬಲರಾಮನೊಡನೆ ದ್ವಾರಕಾಪುರಕ್ಕೆ ಬಂದು, ಶತಧನ್ವನನ್ನು ಕೊಲ್ಲಬೇಕೆಂದೂ ಸ್ಯಮಂತಕಮಣಿಯನ್ನು ಕಿತ್ತುಕೊಳ್ಳಬೇಕೆಂದೂ ಉದ್ಯುಕ್ತನಾದನು (೧೦). ಶತಧನ್ವನು ಶ್ರೀಕೃಷ್ಣನ ಉದ್ದೇಶವನ್ನರಿತು ಹೆದರಿದನು. ಪ್ರಾಣವನ್ನುಳಿಸಿಕೊಳ್ಳಲು ಸಹಾಯ ಮಾಡಬೇಕೆಂದು ಕೃತವರ್ಮನನ್ನು ಕೇಳಿಕೊಂಡನು. ಅದಕ್ಕೆ ಕೃತವರ್ಮನು ಹೀಗೆಂದನು (೧೧). ''ನಾನು ಶೂರರಾದ ಬಲರಾಮಕೃಷ್ಣರಿಗೆ ಪ್ರತಿಕೂಲವಾಗಿ

ಕಂಸಃ ಸಹಾನುಗೋಽಪೀತೋ ಯದ್ದ್ವೇಷಾತ್ತ್ಯಾಜಿತಃ ಶ್ರಿಯಾ ।
ಜರಾಸಂಧಃ ಸಪ್ತದಶ ಸಂಯುಗಾನ್ ವಿರಥೋ ಗತಃ ॥ ೧೩

ಪ್ರತ್ಯಾಖ್ಯಾತಃ ಸ ಚಾಕ್ರೂರಂ ಪಾರ್ಷ್ಣಿಗ್ರಾಹಮಯಾಚತ ।
ಸೋಽಪ್ಯಾಹ ಕೋ ವಿರುಧ್ಯೇತ ವಿದ್ವಾನೀಶ್ವರಯೋರ್ಬಲಮ್ ॥ ೧೪

ಯ ಇದಂ ಲೀಲಯಾ ವಿಶ್ವಂ ಸೃಜತ್ಯವತಿ ಹಂತಿ ಚ ।
ಚೇಷ್ಟಾಂ ವಿಶ್ವಸೃಜೋ ಯಸ್ಯ ನ ವಿದುರ್ಮೋಹಿತಾಜಯಾ ॥ ೧೫

ಯಃ ಸಪ್ತಹಾಯನಃ ಶೈಲಮುತ್ಪಾಟ್ಯೈಕೇನ ಪಾಣಿನಾ ।
ದಧಾರ ಲೀಲಯಾ ಬಾಲ ಉಚ್ಛಿಲೀಂಧ್ರಮಿವಾರ್ಭಕಃ ॥ ೧೬

ನಮಸ್ತಸ್ಮೈ ಭಗವತೇ ಕೃಷ್ಣಾಯಾದ್ಭುತಕರ್ಮಣೇ ।
ಅನಂತಾಯಾದಿಭೂತಾಯ ಕೂಟಸ್ಥಾಯಾತ್ಮನೇ ನಮಃ ॥ ೧೭

ನಿಲ್ಲಲಾರೆ. ಅವರಿಗೆ ವಿರೋಧವನ್ನು ಮಾಡಿ ಯಾವನು ತಾನೆ ಕ್ಷೇಮವಾಗಿ ಉಳಿದಾನು ? ಅವರನ್ನು ದ್ವೇಷಿಸಿದ್ದರಿಂದ ಕಂಸನಂಥವನೇ ಐಶ್ವರ್ಯವನ್ನು ಕಳೆದುಕೊಂಡು ಪರಿವಾರಸಹಿತವಾಗಿ ಸತ್ತುಹೋದನು. ಜರಾಸಂಧನು ಹದಿನೇಳು ಬಾರಿ ಯುದ್ಧ ಮಾಡಿ ಸೋತು ಹಿಂದಿರುಗಿದನು'' ಎಂದನು (೧೨-೧೩). ಹೀಗೆ ತಿರಸ್ಕೃತನಾದ ಶತಧನ್ವನು ತನಗೆ ನೆರವಾಗಬೇಕೆಂದು ಅಕ್ರೂರನಲ್ಲಿ ಪ್ರಾರ್ಥಿಸಿಕೊಂಡನು. ಅದಕ್ಕೆ ಅಕ್ರೂರನು ''ಈಶ್ವರರಾದ ಬಲರಾಮಕೃಷ್ಣರ ಬಲವನ್ನರಿತ ಯಾವನು ತಾನೇ ಅವರನ್ನು ಎದುರುಹಾಕಿಕೊಂಡಾನು ? (೧೪). ಯಾವಾತನು ಈ ವಿಶ್ವವನ್ನು ಸೃಜಿಸಿ ಪಾಲಿಸಿ ಸಂಹರಿಸುವನೋ, ಯಾವನ ಮಾಯೆಯಿಂದ ಮೋಹಿತರಾದ ಜನರು ಆ ಸೃಷ್ಟಿಕರ್ತನ ಕೃತಿಯನ್ನರಿಯರೋ, ಯಾವಾತನು ಏಳುವರ್ಷದ ಹುಡುಗನಾಗಿದ್ದಾಗ ಬೆಟ್ಟವನ್ನು ಕಿತ್ತು ಒಂದು ಕೈಯಿಂದ ಎತ್ತಿಹಿಡಿದನೋ ಒಬ್ಬ ಬಾಲಕನು ನಾಯಿಕೊಡೆಯನ್ನು ಹಿಡಿದುಕೊಳ್ಳುವಂತೆ ಆ ಗೋವರ್ಧನ ಗಿರಿಯನ್ನು ಎತ್ತಿಹಿಡಿದನೋ (೧೫-೧೬), ಆ ಭಗವಂತನಿಗೆ ನಮಸ್ಕಾರ! ಅದ್ಭುತ ಕರ್ಮನಾದ ಕೃಷ್ಣನಿಗೆ ನಮಸ್ಕಾರ ! ಅನಂತನೂ ಜಗದಾದಿಯೂ ಕೂಟಸ್ಥನೂ ಪರಮಾತ್ಮನೂ ಆದ ಕೃಷ್ಣನಿಗೆ ನಮಸ್ಕಾರ ! ಎಂದು ಬಿಟ್ಟನು (೧೭). ಹೀಗೆ

ಪ್ರತ್ಯಾಖ್ಯಾತಃ ಸ ತೇನಾಪಿ ಶತಧನ್ವಾ ಮಹಾಮಣಿಮ್ ।
ತಸ್ಮಿನ್ ನ್ಯಸ್ಯಾಶ್ವಮಾರುಹ್ಯ ಶತಯೋಜನಗಂ ಯಯೌ ॥ ೧೮

ಗರುಡಧ್ವಜಮಾರುಹ್ಯ ರಥಂ ರಾಮಜನಾರ್ದನೌ ।
ಅನ್ವಯಾತಾಂ ಮಹಾವೇಗೈರಶ್ವೈ ರಾಜನ್ ಗುರುದ್ರುಹಮ್ ॥ ೧೯

ಮಿಥಿಲಾಯಾಮುಪವನೇ ವಿಸೃಜ್ಯ ಪತಿತಂ ಹಯಮ್ ।
ಪದ್ಭ್ಯಾಮಧಾವತ್ ಸಂತ್ರಸ್ತಃ ಕೃಷ್ಣೋಽಪ್ಯನ್ವದ್ರವದ್ ರುಷಾ ॥ ೨೦

ಪದಾತೇರ್ಭಗವಾಂಸ್ತಸ್ಯ ಪದಾತಿಸ್ತಿಗ್ಮನೇಮಿನಾ ।
ಚಕ್ರೇಣ ಶಿರ ಉತ್ಕೃತ್ಯ ವಾಸಸೋರ್ವ್ಯಚಿನೋನ್ಮಣಿಮ್ ॥ ೨೧

ಅಲಬ್ಧಮಣಿರಾಗತ್ಯ ಕೃಷ್ಣ ಆಹಾಗ್ರಜಾಂತಿಕಮ್ ।
ವೃಥಾ ಹತಃ ಶತಧನುರ್ಮಣಿಸ್ತತ್ರ ನ ವಿದ್ಯತೇ ॥ ೨೨

ತತ ಆಹ ಬಲೋ ನೂನಂ ಸ ಮಣಿಃ ಶತಧನ್ವನಾ ।
ಕಸ್ಮಿಂಶ್ಚಿತ್ ಪುರುಷೇ ನ್ಯಸ್ತಸ್ತಮನ್ವೇಷ ಪುರಂ ವ್ರಜ ॥ ೨೩

ಅವನಿಂದಲೂ ನಿರಾಕೃತನಾದ ಶತಧನ್ವನು ಆ ಮಹಾರತ್ನವನ್ನು ಅಕ್ರೂರನಲ್ಲಿಯೇ ಬಿಟ್ಟು, ನೂರಾರು ಗಾವುದಗಳವರೆಗೆ ಓಡಬಲ್ಲ ಕುದುರೆಯನ್ನೇರಿ ಪಲಾಯನಮಾಡಿದನು (೧೮). ಪರೀಕ್ಷಿತರಾಜ, ಬಲರಾಮಕೃಷ್ಣರು ಮಹಾವೇಗಶಾಲಿಗಳಾದ ಅಶ್ವಗಳನ್ನು ಹೂಡಿದ ಗರುಡ ಚಿಹ್ನಾಂಕಿತವಾದ ರಥವನ್ನೇರಿ ಗುರುದ್ರೋಹಿಯಾದ ಶತಧನ್ವನನ್ನು ಬೆನ್ನಟ್ಟಿಹೋದರು (೧೯). ಮಿಥಿಲಾನಗರದ ಬಳಿಯಿರುವ ಉಪವನದಲ್ಲಿ ಶತಧನ್ವನ ಕುದುರೆಯು (ಆಯಾಸದಿಂದ) ಉರುಳಿಬಿದ್ದಿತು. ಅವನು ಅದನ್ನು ತ್ಯಜಿಸಿ ಭೀತನಾಗಿ ಬರಿಗಾಲುಗಳಿಂದ ಓಡಲಾರಂಭಿಸಿದನು. ಶ್ರೀಕೃಷ್ಣನು ಕ್ರೋಧದಿಂದ ಬೆನ್ನಟ್ಟಿದನು (೨೦). ಕಾಲ್ನಡಿಗೆಯಿಂದ ಓಡುತ್ತಿದ್ದ ಶತಧನ್ವನನ್ನು ಶ್ರೀಕೃಷ್ಣನೂ ಕಾಲ್ನಡಿಗೆಯಿಂದಲೇ ಓಡುತ್ತ ಹೋಗಿ ಹಿಡಿದು ಹರಿತವಾದ ಚಕ್ರದಿಂದ ಅವನ ತಲೆಯನ್ನು ಕತ್ತರಿಸಿದನು. ಮಣಿಗಾಗಿ ಅವನ ಬಟ್ಟೆಗಳನ್ನು ಶೋಧಿಸಿದನು (೨೧). ಮಣಿಯು ದೊರೆಯಲಿಲ್ಲ. ತರುವಾಯ ಶ್ರೀಕೃಷ್ಣನು ಅಣ್ಣನಬಳಿಗೆ ಬಂದು ''ಅಣ್ಣ, ಶತ್ರುವಾದ ಶತಧನ್ವನನ್ನು ಕೊಂದದ್ದು ವ್ಯರ್ಥವಾಯಿತು. ಸ್ಯಮಂತಕಮಣಿ ಅವನ ಹತ್ತಿರ ಇಲ್ಲ'' ಎಂದನು (೨೨). ಬಲರಾಮನು ''ಹಾಗಾದರೆ ಅದನ್ನು ಬೇರೆ

ಅಹಂ ವಿದೇಹಮಿಚ್ಛಾಮಿ ದ್ರಷ್ಟುಂ ಪ್ರಿಯತಮಂ ಮಮ ।
ಇತ್ಯುಕ್ತ್ವಾ ಮಿಥಿಲಾಂ ರಾಜನ್ ವಿವೇಶ ಯದುನಂದನಃ ॥ ೨೪

ತಂ ದೃಷ್ಟ್ವಾ ಸಹಸೋತ್ಥಾಯ ಮೈಥಿಲಃ ಪ್ರೀತಮಾನಸಃ ।
ಅರ್ಹಯಾಮಾಸ ವಿಧಿವದರ್ಹಣೀಯಂ ಸಮರ್ಹಣೈಃ ॥ ೨೫

ಉವಾಸ ತಸ್ಯಾಂ ಕತಿಚಿನ್ಮಿಥಿಲಾಯಾಂ ಸಮಾ ವಿಭುಃ ।
ಮಾನಿತಃ ಪ್ರೀತಿಯುಕ್ತೇನ ಜನಕೇನ ಮಹಾತ್ಮನಾ ।
ತತೋಽಶಿಕ್ಷದ್ ಗದಾಂ ಕಾಲೇ ಧಾರ್ತರಾಷ್ಟ್ರಃ ಸುಯೋಧನಃ ॥ ೨೬

ಕೇಶವೋ ದ್ವಾರಕಾಮೇತ್ಯ ನಿಧನಂ ಶತಧನ್ವನಃ ।
ಅಪ್ರಾಪ್ತಿಂ ಚ ಮಣೇಃ ಪ್ರಾಹ ಪ್ರಿಯಾಯಾಃ ಪ್ರಿಯಕೃದ್ ವಿಭುಃ ॥

ತತಃ ಸ ಕಾರಯಾಮಾಸ ಕ್ರಿಯಾ ಬಂಧೋರ್ಹತಸ್ಯ ವೈ ।
ಸಾಕಂ ಸುಹೃದ್ಭಿರ್ಭಗವಾನ್ ಯಾ ಯಾಃ ಸ್ಯುಃ ಸಾಂಪರಾಯಿಕಾಃ ॥

ಯಾರೋ ಒಬ್ಬನ ವಶದಲ್ಲಿ ಇಟ್ಟಿರಬೇಕು. ಅದನ್ನು ಪತ್ತೆ ಮಾಡು. ನಗರಕ್ಕೆ ಹಿಂದಿರುಗು. ನಾನು ಪ್ರಿಯಮಿತ್ರನಾದ ವಿದೇಹ ರಾಜನನ್ನು ನೋಡಲಿಚ್ಚಿಸುವೆನು'' ಎಂದು ಹೇಳಿ ಮಿಥಿಲಾನಗರಕ್ಕೆ ಹೋದನು (೨೩-೨೪). ಮಿಥಿಲಾಧಿಪತಿಯಾದ ಜನಕರಾಜನು ಬಲರಾಮನನ್ನು ಕಂಡೊಡನೆ ಥಟ್ಟನೆ ಸಿಂಹಾಸನದಿಂದ ಎದ್ದು ಬಂದು ಸಂತುಷ್ಟನಾಗಿ ಅರ್ಘ್ಯಪಾದ್ಯಾದ್ಯುಪಚಾರಗಳಿಂದ ಅವನನ್ನು ಸತ್ಕರಿಸಿದನು (೨೫). ಮಹಾತ್ಮನಾದ ಜನಕನು ಸಂಪ್ರೀತನಾಗಿ ಆದರಿಸುತ್ತಿರಲಾಗಿ, ಸಮರ್ಥನಾದ ಬಲರಾಮನು ಮಿಥಿಲೆಯಲ್ಲಿ ಕೆಲವು ವರ್ಷಗಳವರೆಗೆ ವಾಸವಾಗಿದ್ದನು. ಆ ಸಮಯದಲ್ಲಿ ಧೃತರಾಷ್ಟ್ರಪುತ್ರನಾದ ಸುಯೋಧನನು ಬಂದು ಬಲರಾಮನಿಂದ ಗದಾಯುದ್ಧವನ್ನು ಕಲಿತನು (೨೬). ಇತ್ತ ದ್ವಾರಕೆಗೆ ಬಂದು ಶತಧನ್ವನ ಮರಣ ವೃತ್ತಾಂತವನ್ನು, ಆದರೆ ಸ್ಯಮಂತಕ ಮಣಿಯು ದೊರಕಲಿಲ್ಲವೆಂಬುದನ್ನು, ಪ್ರಿಯಂಕರನಾದ ಕೇಶವನು ತನ್ನ ಪ್ರಿಯೆಗೆ ತಿಳಿಸಿದನು (೨೭). ಅನಂತರ ಭಗವಂತನು ಹತನಾದ ಮಾವನಿಗೆ ಮಾಡಬೇಕಾದ

ಅಕ್ರೋರಃ ಕೃತವರ್ಮಾ ಚ ಶ್ರುತ್ವಾ ಶತಧನೋರ್ವಧಮ್ ।
ವ್ಯೂಷತುರ್ಭಯವಿತ್ರಸ್ತೌ ದ್ವಾರಕಾಯಾಃ ಪ್ರಯೋಜಕೌ ॥ ೨೯

ಅಕ್ರೂರೇ ಪ್ರೋಷಿತೇಽರಿಷ್ಟಾನ್ಯಾಸನ್ ವೈ ದ್ವಾರಕೌಕಸಾಮ್ ।
ಶಾರೀರಾ ಮಾನಸಾಸ್ತಾಪಾ ಮುಹುರ್ದೈವಿಕಭೌತಿಕಾಃ ॥ ೩೦

ಇತ್ಯಂಗೋಪದಿಶಂತ್ಯೇಕೇ ವಿಸ್ಮೃತ್ಯ ಪ್ರಾಗುದಾಹೃತಮ್ ।
ಮುನಿವಾಸನಿವಾಸೇ ಕಿಂ ಘಟೇತಾರಿಷ್ಟದರ್ಶನಮ್ ॥ ೩೧

ದೇವೇಽವರ್ಷತಿ ಕಾಶೀಶಃ ಶ್ವಫಲ್ಕಾಯಾಗತಾಯ ವೈ ।
ಸ್ವಸುತಾಂ ಗಾಂದಿನೀಂ ಪ್ರಾದಾತ್ ತತೋಽವರ್ಷತ್ ಸ್ಮ ಕಾಶಿಷು ॥ ೩೨

ತತ್ಸುತಸ್ತತ್ಪ್ರಭಾವೋಽಸಾವಕ್ರೂರೋ ಯತ್ರ ಯತ್ರ ಹ ।
ದೇವೋಽಭಿವರ್ಷತೇ ತತ್ರ ನೋಪತಾಪಾ ನ ಮಾರಿಕಾಃ ॥ ೩೩

ಎಲ್ಲಬಗೆಯ ಉತ್ತರ ಕ್ರಿಯೆಗಳನ್ನೂ ಮಿತ್ರರೊಡಗೂಡಿ ನೆರವೇರಿಸಿದನು (೨೮). ಶತಧನ್ವನಿಗೆ ಪ್ರಚೋದನೆ ಮಾಡಿದ್ದ ಅಕ್ರೂರ ಮತ್ತು ಕೃತವರ್ಮರು ಆತನ ವಧೆಯಾಯಿತೆಂಬುದನ್ನು ಕೇಳಿ ಭಯದಿಂದ ಕಂಗೆಟ್ಟು ದ್ವಾರಕೆಯನ್ನು ಬಿಟ್ಟು ಓಡಿಹೋದರು (೨೯). ಅಕ್ರೂರನು ಹೊರಟು ಹೋಗಲು ದ್ವಾರಕಾ ನಿವಾಸಿಗಳಿಗೆ ದೈಹಿಕವಾದ ರೋಗಗಳೂ ಮಾನಸಿಕವಾದ ಯಾತನೆಗಳೂ ದೈವಿಕಭೌತಿಕಗಳಾದ ಉಪದ್ರವಗಳೂ ತಲೆದೋರಿದವು (೩೦). ಅದನ್ನು ಕಂಡು, ಪರೀಕ್ಷಿತ, ಅಕ್ರೂರನು ಹೋದ್ದರಿಂದ ಹೀಗಾಯಿತೆಂದು ಕೆಲವರು ಆಡಿಕೊಳ್ಳತೊಡಗಿದರು. ಹಿಂದೆ ಹೇಳಿದ ಶ್ರೀಕೃಷ್ಣನ ಮಹಿಮೆಯನ್ನು ಅವರು ಮರೆತಿದ್ದರು. ಮುನಿಹೃದಯನಿವಾಸಿಯಾದ ಭಗುವಂತನು ನೆಲೆಸಿರುವಲ್ಲಿ ಅಕ್ರೂರನು ಹೋದಮಾತ್ರದಿಂದ ಈ ಬಗೆಯ ಅರಿಷ್ಟವು ಆದೀತೆ ? (೩೧). ಕೆಲವು ಹಿರಿಯರು ''ಹಿಂದೆ ಕಾಶೀದೇಶದಲ್ಲಿ ಮಳೆಯಾಗಲಿಲ್ಲವಂತೆ. ಆಗ ಅಲ್ಲಿಗೆ ಬಂದ ಶ್ವಫಲ್ಕನಿಗೆ ಕಾಶೀರಾಜನು ತನ್ನ ಮಗಳಾದ ಗಾಂದಿನಿಯನ್ನು ಕೊಟ್ಟು ಮದುವೆಮಾಡಿದನು. ಆಮೇಲೆ ಕಾಶೀರಾಜ್ಯದಲ್ಲಿ ಮಳೆಯಾಯಿತಂತೆ (೩೨). ಶ್ವಫಲ್ಕನ ಮಗನಾದ ಅಕ್ರೂರನು ತಂದೆಯಷ್ಟೇ ಮಹಿಮೆಯುಳ್ಳವನು. ಆ ಅಕ್ರೂರನು ಎಲ್ಲೆಲ್ಲಿ ವಾಸವಾಗಿರುವನೋ ಅಲ್ಲಿಲ್ಲಿ ಇಂದ್ರನು ಮಳೆಸುರಿಸುತ್ತಾನೆ.

ಇತಿ ವೃದ್ಧವಚಃ ಶ್ರುತ್ವಾ ನೈತಾವದಿಹ ಕಾರಣಮ್ ।
ಇತಿ ಮತ್ವಾ ಸಮಾನಾಯ್ಯ ಪ್ರಾಹಾಕ್ರೂರಂ ಜನಾರ್ದನಃ ॥ ೩೪

ಪೂಜಯಿತ್ವಾಭಿಭಾಷ್ಯೈನಂ ಕಥಯಿತ್ವಾ ಪ್ರಿಯಾಃ ಕಥಾಃ ।
ವಿಜ್ಞಾತಾಖಿಲಚಿತ್ತಜ್ಞಃ ಸ್ಮಯಮಾನ ಉವಾಚ ಹ ॥ ೩೫

ನನು ದಾನಪತೇ ನ್ಯಸ್ತಸ್ತ್ವಯ್ಯಾಸ್ತೇ ಶತಧನ್ವನಾ ।
ಸ್ಯಮಂತಕೋ ಮಣಿಃ ಶ್ರೀಮಾನ್ ವಿದಿತಃ ಪೂರ್ವಮೇವ ನಃ ॥ ೩೬

ಸತ್ರಾಜಿತೋಽನಪತ್ಯತ್ವಾದ್ ಗೃಹ್ಣೀಯುರ್ದುಹಿತುಃ ಸುತಾಃ ।
ದಾಯಂ ನಿನೀಯಾಪಃ ಪಿಂಡಾನ್ ವಿಮುಚ್ಯರ್ಣಂ ಚ ಶೇಷಿತಮ್ ॥ ೩೭

ತಥಾಪಿ ದುರ್ಧರಸ್ತ್ವನ್ಯೈಸ್ತ್ವಯ್ಯಾಸ್ತಾಂ ಸುವ್ರತೇ ಮಣಿಃ ।
ಕಿಂತು ಮಾಮಗ್ರಜಃ ಸಮ್ಯಙ್ ನ ಪ್ರತ್ಯೇತಿ ಮಣಿಂ ಪ್ರತಿ ॥ ೩೮

ದರ್ಶಯಸ್ವ ಮಹಾಭಾಗ ಬಂಧೂನಾಂ ಶಾಂತಿಮಾವಹ ।
ಅವ್ಯುಚ್ಛಿನ್ನಾ ಮಖಾಸ್ತೇಽದ್ಯ ವರ್ತಂತೇ ರುಕ್ಮವೇದಯಃ ॥ ೩೯

ಯಾವ ಉಪದ್ರವಗಳೂ ಮಾರಿಕಾದಿ ರೋಗಗಳೂ ಆ ಸ್ಥಳದಲ್ಲಿ ಇರುವುದಿಲ್ಲ'' ಎಂದು ಮಾತಾಡಿಕೊಳ್ಳುತ್ತಿದ್ದರು (೩೩). ''ಇಷ್ಟೇ ಅಲ್ಲ (ಸ್ಯಮಂತಕಮಣಿಯು ಇಲ್ಲದಿರುವುದೂ ಕಾರಣ'' ಎಂದು ಆಡಿಕೊಳ್ಳುತ್ತಿದ್ದ ಹಿರಿಯರ ಮಾತನ್ನು ಕೇಳಿ ಶ್ರೀಕೃಷ್ಣನು ಅಕ್ರೂರನನ್ನು ದ್ವಾರಕೆಗೆ ಕರೆಸಿದನು (೩೪). ಸಕಲರ ಹೃದಯವನ್ನು ಬಲ್ಲ ಭಗವಂತನು ಆತನನ್ನು ಆದರಿಸಿ ಕುಶಲಪ್ರಶ್ನೆಯನ್ನು ಕೇಳಿ ಪ್ರಿಯ ವೃತ್ತಾಂತಗಳನ್ನು ತಿಳಿಸಿ ನಗುತ್ತಾ ಹೀಗೆಂದನು : ''ಹೇ ದಾನಪತಿ ಅಕ್ರೂರ, ತೇಜೋಮಯವಾದ ಸ್ಯಮಂತಕಮಣಿಯನ್ನು ಶತಧನ್ವನು ನಿನ್ನಲ್ಲಿ ನ್ಯಾಸವಾಗಿಟ್ಟಿದ್ದನಲ್ಲವೆ ? ಇದು ನಮಗೆ ಮೊದಲೇ ಗೊತ್ತಿತ್ತು ! (೩೫-೩೬). ಸತ್ರಾಜಿತನಿಗೆ ಗಂಡುಮಕ್ಕಳಿಲ್ಲದಿರುವುದರಿಂದ ಅವನ ಮಗಳಾದ ಸತ್ಯಭಾಮೆಯ ಮಕ್ಕಳು ಆತನಿಗೆ ತರ್ಪಣವನ್ನೂ ಪಿಂಡಗಳನ್ನೂ ವಿಧಿವತ್ತಾಗಿ ಕೊಟ್ಟು ಸಾಲವನ್ನು ತೀರಿಸಿ ಮಿಕ್ಕಭಾಗವನ್ನು ಪಡೆಯಲು ಅರ್ಹರಾಗುತ್ತಾರೆ (೩೭). ಆದರೂ ಆ ಸ್ಯಮಂತಕಮಣಿಯನ್ನು ಧರಿಸಲು ಅನ್ಯರಿಗೆ ಶಕ್ಯವಲ್ಲ. ಆದ್ದರಿಂದ ಸದಾಚಾರ ಸಂಪನ್ನನಾದ ನಿನ್ನಲ್ಲಿಯೇ ಅದು ಇರಲಿ. ಆದರೆ ನನ್ನ ಅಣ್ಣನು ಮಣಿಯ

ಏವಂ ಸಾಮಭಿರಾಲಬ್ಧಃ ಶ್ವಫಲ್ಕತನಯೋ ಮಣಿಮ್ ।
ಆದಾಯ ವಾಸಸಾಚ್ಛನ್ನಂ ದದೌ ಸೂರ್ಯಸಮಪ್ರಭಮ್ ॥ ೪೦

ಸ್ಯಮಂತಕಂ ದರ್ಶಯಿತ್ವಾ ಜ್ಞಾತಿಭ್ಯೋ ರಜ ಆತ್ಮನಃ ।
ವಿಮೃಜ್ಯ ಮಣಿನಾ ಭೂಯಸ್ತಸ್ಮೈ ಪ್ರತ್ಯರ್ಪಯತ್ ಪ್ರಭುಃ ॥ ೪೧

ಯಸ್ತ್ವೇತದ್ ಭಗವತ ಈಶ್ವರಸ್ಯ ವಿಷ್ಣೋ-
ರ್ವೀರ್ಯಾಢ್ಯಂ ವೃಜಿನಹರಂ ಸುಮಂಗಲಂ ಚ ।
ಆಖ್ಯಾನಂ ಪಠತಿ ಶೃಣೋತ್ಯನುಸ್ಮರೇದ್ ವಾ
ದುಷ್ಕೀರ್ತಿದುರಿತಮಪೋಹ್ಯ ಯಾತಿ ಶಾಂತಿಮ್ ॥ ೪೨

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ಸಪ್ತಪಂಚಾಶತ್ತಮಾಧ್ಯಾಯಃ

ವಿಷಯವಾಗಿ ನನ್ನಲ್ಲಿ ಪೂರ್ಣ ವಿಶ್ವಾಸವನ್ನಿಡದೆ ಶಂಕಿಸುತ್ತಿದ್ದಾನೆ (೩೮). ಆದ್ದರಿಂದ ಮಹಾಭಾಗನೆ, ಆ ಮಣಿಯನ್ನು ತೋರಿಸಿ ಬಂಧುಗಳಾದ ನಮಗೆ ಶಾಂತಿಯನ್ನುಂಟುಮಾಡು. ಈಗ ಚಿನ್ನದ ವೇದಿಕೆಯ ಮೇಲೆ ನಡೆಸುವ ನಿನ್ನ ಯಾಗಗಳು ನಿರಂತರವಾಗಿ ಸಾಗುತ್ತಲೇ ಇವೆ!'' ಎಂದನು (೩೯). ಶ್ವಫಲ್ಕ ತನಯವಾದ ಅಕ್ರೂರನು ಈ ಪ್ರಕಾರವಾದ ಸಾಮವಚನಗಳಿಗೆ, ವಶನಾಗಿ, ತನ್ನ ವಸ್ತ್ರದಲ್ಲಿ ಕಟ್ಟಿ ಮುಚ್ಚಿಕೊಂಡಿದ್ದ ಸೂರ್ಯಸಮಾನ ಪ್ರಭೆಯುಳ್ಳ ಆ ಮಣಿಯನ್ನು ತೆಗೆದು ಶ್ರೀಕೃಷ್ಣನಿಗೆ ಕೊಟ್ಟನು (೪೦). ಪ್ರಭುವಾದ ಶ್ರೀಕೃಷ್ಣನು ಸ್ಯಮಂತಕ ಮಣಿಯನ್ನು ಬಂಧುಗಳೆಲ್ಲರಿಗೂ ತೋರಿಸಿ, ತನಗೆ ಬಂದಿದ್ದ ಕಳಂಕವನ್ನು ಅದರಿಂದ ತೊಳೆದುಕೊಂಡು ಅದನ್ನು ಮತ್ತೆ ಅಕ್ರೂರನಿಗೆ ಹಿಂದಿರುಗಿಸಿದನು (೪೧). ಭಗವಂತನೂ ಲೋಕೇಶ್ವರನೂ ಆದ ವಿಷ್ಣುವಿನ ಪರಾಕ್ರಮಪೂರ್ಣವೂ, ಪಾಪಹಾರಿಯೂ, ಮಂಗಳಕರವೂ ಆದ ಈ ಆಖ್ಯಾನವನ್ನು ಯಾವಾತನು ಓದುತ್ತಾನೋ ಅಥವಾ ಸ್ಮರಿಸಿಕೊಳ್ಳುತ್ತಾನೋ ಆತನು ತನಗೆ ಬಂದ ಅಪಕೀರ್ತಿಯನ್ನು, ಪಾಪವನ್ನು ನೀಗಿ ಶಾಂತಿಯನ್ನೈದುವನು (೪೨).

ಅಷ್ಟಪಂಚಾಶತ್ತಮಾಧ್ಯಾಯಃ

ಶ್ರೀಶುಕ ಉವಾಚ-

ಏಕದಾ ಪಾಂಡವಾನ್ ದ್ರಷ್ಟುಂ ಪ್ರತೀತಾನ್ ಪುರುಷೋತ್ತಮಃ ।
ಇಂದ್ರಪ್ರಸ್ಥಂ ಗತಃ ಶ್ರೀಮಾನ್ ಯುಯುಧಾನಾದಿಭಿರ್ವೃತಃ ॥ ೧

ದೃಷ್ಟ್ವಾ ತಮಾಗತಂ ಪಾರ್ಥಾ ಮುಕುಂದಮಖಿಲೇಶ್ವರಮ್ ।
ಉತ್ತಸ್ಥುರ್ಯುಗಪದ್ ವೀರಾಃ ಪ್ರಾಣಾ ಮುಖ್ಯಮಿವಾಗತಮ್ ॥ ೨

ಪರಿಷ್ವಜ್ಯಾಚ್ಯುತಂ ವೀರಾ ಅಂಗಸಂಗಹತೈನಸಃ ।
ಸಾನುರಾಗಸ್ಮಿತಂ ವಕ್ತ್ರಂ ವೀಕ್ಷ್ಯ ತಸ್ಯ ಮುದಂ ಯಯುಃ ॥ ೩

ಯುಧಿಷ್ಠಿರಸ್ಯ ಭೀಮಸ್ಯ ಕೃತ್ವಾ ಪಾದಾಭಿವಂದನಮ್ ।
ಫಾಲ್ಗುನಂ ಪರಿರಭ್ಯಾಥ ಯಮಾಭ್ಯಾಂ ಚಾಭಿವಂದಿತಃ ॥ ೪

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಐವತ್ತೇಳನೆಯ ಅಧ್ಯಾಯ

ಅಧ್ಯಾಯ ೫೮

ಶ್ರೀಕೃಷ್ಣನು ಕಾಳಿಂದಿ, ಮಿತ್ರವಿಂದೆ, ಭದ್ರೆ- ಮೊದಲಾದವರನ್ನು ವಿವಾಹವಾಗುವುದು.

ಶುಕಮುನಿಗಳು ಹೇಳಿದರು: ಒಂದು ಸಲ ಪುರುಷೋತ್ತಮನಾದ ಶ್ರೀಕೃಷ್ಣನು, (ಅರಗಿನ ಮನೆಯಲ್ಲಿ ನಷ್ಟರಾದರೂ ಪುನಃ ಕಾಣಿಸಿಕೊಂಡು) ವಿಖ್ಯಾತರಾದ ಪಾಂಡವರನ್ನು ನೋಡುವುದಕ್ಕಾಗಿ ಸಾತ್ಯಕಿಯೇ ಮೊದಲಾದವರಿಂದ ಪರಿವೃತನಾಗಿ ಇಂದ್ರಪ್ರಸ್ಥಕ್ಕೆ ಹೋದನು (೧). ಅಖಿಲೇಶ್ವರನಾದ ಮುಕುಂದನು ಬಂದುದನ್ನು ಕಂಡು ವೀರರಾದ ಪಾಂಡವರು, ಸಕಲೇಂದ್ರಿಯಗಳೂ ಮುಖ್ಯವಾದ ಪ್ರಾಣವನ್ನು ಪಡೆದು ಚೇತರಿಸಿಕೊಳ್ಳುವಂತೆ ಸ್ವಾಗತಿಸಿ ಒಟ್ಟಿಗೆ ಎದ್ದುನಿಂತರು (೨). ಆ ವೀರರು ಅಚ್ಯುತನನ್ನು ಆಲಂಗಿಸಿಕೊಂಡು ಅವನ ದೇಹಸಂಗದಿಂದ ಪಾಪವನ್ನು ಕಳೆದುಕೊಂಡು ಪವಿತ್ರರಾಗಿ, ಪ್ರೇಮದಿಂದ ಮುಗುಳ್ನಗೆ ಬೀರುತ್ತಿದ್ದ ಆತನ ಮುಖವನ್ನೀಕ್ಷಿಸಿ ಆನಂದಿಸಿದರು (೩). ಶ್ರೀಕೃಷ್ಣನು ಯುಧಿಷ್ಠಿರನಿಗೂ ಭೀಮನಿಗೂ ಕಾಲು ಮುಟ್ಟಿ ನಮಸ್ಕರಿಸಿ ಅರ್ಜುನನನ್ನು

ಪರಮಾಸನ ಆಸೀನಂ ಕೃಷ್ಣಾ ಕೃಷ್ಣಮನಿಂದಿತಾ ।
ನವೋಢಾ ವ್ರೀಡಿತಾ ಕಿಂಚಿಚ್ಛನೈರೇತ್ಯಾಭ್ಯವಂದತ ॥ ೫

ತಥೈವ ಸಾತ್ಯಕಿಃ ಪಾರ್ಥೈಃ ಪೂಜಿತಶ್ಚಾಭಿವಂದಿತಃ ।
ನಿಷಸಾದಾಸನೇಽನ್ಯೇ ಚ ಪೂಜಿತಾಃ ಪರ್ಯುಪಾಸತ ॥ ೬

ಪೃಥಾಂ ಸಮಾಗತ್ಯ ಕೃತಾಭಿವಾದನ-
ಸ್ತಯಾತಿಹಾರ್ದಾರ್ದ್ರದೃಶಾಭಿರಂಭಿತಃ ।
ಆಪೃಷ್ಟವಾಂಸ್ತಾಂ ಕುಶಲಂ ಸಹಸ್ನುಷಾಂ
ಪಿತೃಷ್ವಸಾರಂ ಪರಿಪೃಷ್ಟಬಾಂಧವಃ ॥ ೭

ತಮಾಹ ಪ್ರೇಮವೈಕ್ಲವ್ಯರುದ್ಧಕಂಠಾಶ್ರುಲೋಚನಾ ।
ಸ್ಮರಂತೀ ತಾನ್ ಬಹೂನ್ ಕ್ಲೇಶಾನ್ ಕ್ಲೇಶಾಪಾಯಾತ್ಮದರ್ಶನಮ್ ॥ ೮

ತದೈವ ಕುಶಲಂ ನೋಽಭೂತ್ ಸನಾಥಾಸ್ತೇ ಕೃತಾ ವಯಮ್ ।
ಜ್ಞಾತೀನ್ ನಃ ಸ್ಮರತಾ ಕೃಷ್ಣ ಭ್ರಾತಾ ಮೇ ಪ್ರೇಷಿತಸ್ತ್ವಯಾ ॥ ೯

ಅಪ್ಪಿಕೊಂಡನು. ನಕುಲ ಸಹದೇವರು ಅವನಿಗೆ ನಮಸ್ಕರಿಸಿದರು (೪). ಅನಂತರ ಉತ್ತಮ ಪೀಠದಲ್ಲಿ ಮಂಡಿಸಿದ ಶ್ರೀಕೃಷ್ಣನ ಬಳಿಗೆ ಪರಿಶುದ್ಧಳೂ ನವೋಢೆಯು ಆದ ದ್ರೌಪದಿಯು ನಾಚುತ್ತ ಮೆಲ್ಲಗೆ ಬಂದು ವಂದಿಸಿದಳು (೫). ಹಾಗೆಯೇ ಸಾತ್ಯಕಿಯೂ ಪಾಂಡವರಿಂದ ಸತ್ಕೃತನಾಗಿ ವಂದಿಸಲ್ಪಟ್ಟು ಪೀಠದಲ್ಲಿ ಕುಳಿತನು. ಇತರ ಯಾದವರು ಯಥೋಚಿತವಾಗಿ ಗೌರವಿಸಲ್ಪಟ್ಟು ಕುಳಿತುಕೊಂಡರು (೬). ಆಮೇಲೆ ಅಚ್ಯುತನು ಸೋದರತ್ತೆಯಾದ ಪೃಥೆಯ ಬಳಿಗೆ ಹೋಗಿ ಅವಳಿಗೆ ಅಭಿವಾದನೆಮಾಡಿದನು. ಅವಳು ಸ್ನೇಹಾತಿರೇಕದಿಂದ ಕಂಬನಿ-ದುಂಬಿ ಆಲಂಗಿಸಿಕೊಂಡು ದ್ವಾರಕೆಯಲ್ಲಿದ್ದ ಬಾಂಧವರ ಯೋಗಕ್ಷೇಮಗಳನ್ನು ಕೇಳಿದಳು. ಅಚ್ಯುತನು ಕುಂತಿಯ ಮತ್ತು ಅವಳ ಸೊಸೆಯ ಕುಶಲವನ್ನು ವಿಚಾರಿಸಿದನು (೭). ಆಗ ಪೃಥೆಯು ಪ್ರೇಮಾತಿಶಯದಿಂದ ಗದ್ಗದಿಸುತ್ತ ಕಳೆದುಹೋದ ನಾನಾ ಕಷ್ಟಗಳನ್ನು ಸ್ಮರಿಸಿಕೊಂಡು ಕಂಬನಿದುಂಬಿ, ಕಷ್ಟಗಳು ನೀಗಿದ ಮೇಲೆ ಕಾಣಿಸಿಕೊಂಡ ಶ್ರೀಕೃಷ್ಣನನ್ನು ಕುರಿತು ಹೀಗೆಂದಳು (೮).

''ಕೃಷ್ಣ ಬಂಧುಗಳಾದ ನಮ್ಮನ್ನು ಸ್ಮರಿಸಿಕೊಂಡು (ನಮ್ಮ ಕುಶಲವನ್ನು

ನ ತೇಽಸ್ತಿ ಸ್ವಪರಭ್ರಾಂತಿರ್ವಿಶ್ವಸ್ಯ ಸುಹೃದಾತ್ಮನಃ ।
ತಥಾಪಿ ಸ್ಮರತಾಂ ಶಶ್ವತ್ ಕ್ಲೇಶಾನ್ ಹಂಸಿ ಹೃದಿ ಸ್ಥಿತಃ ॥ ೧೦

ಯುಧಿಷ್ಠಿರ ಉವಾಚ-

ಕಿಂ ನ ಆಚರಿತಂ ಶ್ರೇಯೋ ನ ವೇದಾಹಮಧೀಶ್ವರ ।
ಯೋಗೇಶ್ವರಾಣಾಂ ದುರ್ದರ್ಶೋ ಯನ್ನೋ ದೃಷ್ಟಃ ಕುಮೇಧಸಾಮ್ ॥೧೧

ಇತಿ ವೈ ವಾರ್ಷಿಕಾನ್ ಮಾಸಾನ್ ರಾಜ್ಞಾ ಸೋಽಭ್ಯರ್ಥಿತಃ ಸುಖಮ್ ।
ಜನಯನ್ ನಯನಾನಂದಮಿಂದ್ರಪ್ರಸ್ಥೌಕಸಾಂ ವಿಭುಃ ॥ ೧೨

ಏಕದಾ ರಥಮಾರುಹ್ಯ ವಿಜಯೋ ವಾನರಧ್ವಜಮ್ ।
ಗಾಂಡೀವಂ ಧನುರಾದಾಯ ತೂಣೌ ಚಾಕ್ಷಯಸಾಯಕೌ ॥ ೧೩

ವಿಚಾರಿಸುವುದಕ್ಕಾಗಿ) ನನ್ನ ಸೋದರನಾದ ಅಕ್ರೂರನನ್ನು ನೀನು ಕಳಿಸಿದೆಯಲ್ಲ, ಆಗಲೇ ನಾವು ಕುಶಲಿಗಳಾದೆವು; ಸನಾಥರಾದೆವು (೯). ಸಕಲವಿಶ್ವಕ್ಕೆ ಮಿತ್ರನೂ ಆತ್ಮನೂ ಆಗಿರುವ ನಿನಗೆ ಸ್ವಕೀಯರು-ಪರಕೀಯರೆಂಬ ಭೇದಭ್ರಾಂತಿ ಇಲ್ಲ. ಆದರೂ ಯಾರು ನಿನ್ನನ್ನು ಸದಾ ಸ್ಮರಿಸುತ್ತಿರುವರೋ ಅವರ ಹೃದಯದಲ್ಲಿ ನೆಲೆಸಿ ಅವರ ಕಷ್ಟಗಳನ್ನು ನೀಗಿಸುತ್ತೀಯೆ'' ಎಂದಳು (೧೦). ಯುಧಿಷ್ಠಿರನು ''ಹೇ ಸ್ವಾಮಿ, ನಾವು ಯಾವ ಪುಣ್ಯವನ್ನಾಚರಿಸಿದ್ದೇವೆಯೋ ನಾನರಿಯೆನು. ಯೋಗೇಶ್ವರರಿಗೂ ಅದೃಶ್ಯನಾದ ನೀನು ಅಲ್ಪಬುದ್ಧಿಯವರಾದ ನಮಗೆ ಕಾಣಿಸಿಕೊಂಡಿದ್ದೀಯೆ'' ಎಂದನು (೧೧). ಮಳೆಗಾಲದ ನಾಲ್ಕು ತಿಂಗಳೂ ಅಲ್ಲಿಯೇ ಇರಬೇಕೆಂದು ಧರ್ಮರಾಜನು ಪ್ರಾರ್ಥಿಸಲಾಗಿ, ಹಾಗೆಯೇ ಸ್ವಾಮಿಯು ಇಂದ್ರಪ್ರಸ್ಥವಾಸಿಗಳಿಗೆ ನಯನಾನಂದವನ್ನುಂಟುಮಾಡುತ್ತ ಅಲ್ಲಿದ್ದನು (೧೨). ಒಂದು ಸಲ ಶತ್ರುಘಾತಿಯಾದ ಅರ್ಜುನನು ಕವಚವನ್ನು ತೊಟ್ಟು ಅಕ್ಷಯ ಬಾಣಗಳಿರುವ ಎರಡು ಬತ್ತಳಿಕೆಗಳನ್ನು ಬಿಗಿದುಕಟ್ಟಿ ಗಾಂಡೀವ ಧನುಸ್ಸನ್ನು ಹಿಡಿದು ಕಪಿಧ್ವಜಾಂಕಿತವಾದ ರಥವನ್ನೇರಿ ಕ್ರೂರಮೃಗಗಳಿಂದ ತುಂಬಿದ ದಟ್ಟವಾದ ಅರಣ್ಯಕ್ಕೆ ಮೃಗಯಾ ವಿನೋದಕ್ಕಾಗಿ ಶ್ರೀಕೃಷ್ಣನೊಡನೆ ಹೋದನು

ಸಾಕಂ ಕೃಷ್ಣೇನ ಸಂನದ್ಧೋ ವಿಹರ್ತುಂ ವಿಪಿನಂ ವನಮ್ ।
ಬಹುವ್ಯಾಲಮೃಗಾಕೀರ್ಣಂ ಪ್ರಾವಿಶತ್ ಪರವೀರಹಾ ॥ ೧೪

ತತ್ರಾವಿಧ್ಯಚ್ಛರೈರ್ವ್ಯಾಘ್ರಾನ್ ಸೂಕರಾನ್ ಮಹಿಷಾನ್ ರುರೂನ್ ।
ಶರಭಾನ್ ಗವಯಾನ್ ಖಡ್ಗಾನ್ ಹರಿಣಾನ್ ಶಶಶಲ್ಲಕಾನ್ ॥ ೧೫

ತಾನ್ ನಿನ್ಯುಃ ಕಿಂಕರಾ ರಾಜ್ಞೇ ಮೇಧ್ಯಾನ್ ಪರ್ವಣ್ಯುಪಾಗತೇ ।
ತೃಟ್ಪರೀತಃ ಪರಿಶ್ರಾಂತೋ ಬೀಭತ್ಸುರ್ಯಮುನಾಮಗಾತ್ ॥ ೧೬

ತತ್ರೋಪಸ್ಪೃಶ್ಯ ವಿಶದಂ ಪೀತ್ವಾ ವಾರಿ ಮಹಾರಥೌ ।
ಕೃಷ್ಣೌ ದದೃಶತುಃ ಕನ್ಯಾಂ ಚರಂತೀಂ ಚಾರುದರ್ಶನಾಮ್ ॥ ೧೭

ತಾಮಾಸಾದ್ಯ ವರಾರೋಹಾಂ ಸುದ್ವಿಜಾಂ ರುಚಿರಾನನಾಮ್ ।
ಪಪ್ರಚ್ಛ ಪ್ರೇಷಿತಃ ಸಖ್ಯಾ ಫಾಲ್ಗುನಃ ಪ್ರಮದೋತ್ತಮಾಮ್ ॥ ೧೮

ಕಾ ತ್ವಂ ಕಸ್ಯಾಸಿ ಸುಶ್ರೋಣಿ ಕುತೋಽಸಿ ಕಿಂ ಚಿಕೀರ್ಷಸಿ ।
ಮನ್ಯೇ ತ್ವಾಂ ಪತಿಮಿಚ್ಛಂತೀಂ ಸರ್ವಂ ಕಥಯ ಶೋಭನೇ ॥ ೧೯

(೧೩-೧೪). ಅಲ್ಲಿ ಹುಲಿ, ಹಂದಿ, ಕಾಡುಕೋಣ, ಜಿಂಕೆ, ಶರಭ, ಗವಯ, ಖಡ್ಗಮೃಗ, ಚಿಗರೆ, ಮೊಲ, ಮುಳ್ಳುಹಂದಿಗಳನ್ನು ಬಾಣಗಳಿಂದ ಹೊಡೆದುಕೊಂದನು. ಪರ್ವದಿನವು ಪ್ರಾಪ್ತವಾದ್ದರಿಂದ ಆಹಾರಕ್ಕೆ ಶುದ್ಧವಾದ ಅವುಗಳನ್ನು ಸೇವಕರು ಧರ್ಮರಾಜನ ಬಳಿಗೆ ತೆಗೆದುಕೊಂಡು ಹೋದರು. ಬಳಲಿ ಬಾಯಾರಿದ ಅರ್ಜುನನು ಯಮುನಾ ನದಿಯ ಬಳಿಗೆ ಹೋದನು (೧೫-೧೬). ಅಲ್ಲಿ ಶ್ರೀಕೃಷ್ಣಾರ್ಜುನರು ಕೈಕಾಲು ತೊಳೆದು ಆಚಮನಮಾಡಿ ಸ್ವಚ್ಛವಾದ ನೀರನ್ನು ಕುಡಿದರು. ಆಗ ಅಲ್ಲಿ ತಿರುಗಾಡುತ್ತಿರುವ ಸುಂದರಿಯಾದ ಒಬ್ಬ ಕನ್ಯೆಯನ್ನು ಅವರು ಕಂಡರು (೧೭). ಅರ್ಜುನನು ಮಿತ್ರನಾದ ಶ್ರೀಕೃಷ್ಣನಿಂದ ಪ್ರೇಷಿತನಾಗಿ, ಉತ್ತಮ ನಿತಂಬಗಳಿಂದಲೂ ಸುಂದರ ದಂತಪಂಕ್ತಿಯಿಂದಲೂ ಮನೋಹರಮುಖದಿಂದಲೂ ಶೋಭಿಸುತ್ತಿದ್ದ ಆ ನಾರೀಮಣಿಯ ಬಳಿಗೆಹೋಗಿ ''ಎಲೌ ಸುಂದರಿ, ನೀನು ಯಾರು ? ಯಾರ ಮಗಳು ? ಎಲ್ಲಿಂದ ಬಂದಿರುವೆ ? ಏನು ಮಾಡಲು ಉದ್ದೇಶಿಸಿದ್ದೀಯೆ ? ಶೋಭನೆ, ನೀನು ಯೋಗ್ಯನಾದ ಪತಿಯನ್ನು ಬಯಸುತ್ತಿರುವಂತೆ ನನಗೆ ತೋರುತ್ತದೆ! ಎಲ್ಲವನ್ನೂ ಹೇಳು'' ಎಂದು ಕೇಳಿದನು (೧೮-೧೯).

ಕಾಲಿಂದ್ಯುವಾಚ-

ಅಹಂ ದೇವಸ್ಯ ಸವಿತುರ್ದುಹಿತಾ ಪತಿಮಿಚ್ಛತೀ ।
ವಿಷ್ಣುಂ ವರೇಣ್ಯಂ ವರದಂ ತಪಃ ಪರಮಮಾಸ್ಥಿತಾ ॥ ೨೦

ನಾನ್ಯಂ ಪತಿಂ ವೃಣೇ ವೀರ ತಮೃತೇ ಶ್ರೀನಿಕೇತನಮ್ ।
ತುಷ್ಯತಾಂ ಮೇ ಸ ಭಗವಾನ್ ಮುಕುಂದೋಽನಾಥಸಂಶ್ರಯಃ ॥ ೨೧

ಕಾಲಿಂದೀತಿ ಸಮಾಖ್ಯಾತಾ ವಸಾಮಿ ಯಮುನಾಜಲೇ ।
ನಿರ್ಮಿತೇ ಭವನೇ ಪಿತ್ರಾ ಯಾವದಚ್ಯುತದರ್ಶನಮ್ ॥ ೨೨

ತಥಾವದದ್ಗುಡಾಕೇಶೋ ವಾಸುದೇವಾಯ ಸೋಽಪಿ ತಾಮ್ ।
ರಥಮಾರೋಪ್ಯ ತದ್ ವಿದ್ವಾನ್ ಧರ್ಮರಾಜಮುಪಾಗಮತ್ ॥ ೨೩

ಯದೈವ ಕೃಷ್ಣಃ ಸಂದಿಷ್ಟಃ ಪಾರ್ಥಾನಾಂ ಪರಮಾದ್ಭುತಮ್ ।
ಕಾರಯಾಮಾಸ ನಗರಂ ವಿಚಿತ್ರಂ ವಿಶ್ವಕರ್ಮಣಾ ॥ ೨೪

ಕನ್ಯೆಯು ಹೇಳಿದಳು : ''ನಾನು ಸೂರ್ಯದೇವನ ಪುತ್ರಿ. ವರೇಣ್ಯನೂ ವರದನೂ ಆದ ವಿಷ್ಣುವು ಪತಿಯಾಗಬೇಕೆಂದು ಬಯಸಿ ಉಗ್ರ ತಪಸ್ಸಿನಲ್ಲಿ ನಿರತಳಾಗಿದ್ದೇನೆ (೨೦). ಎಲೈ ವೀರನೆ, ಲಕ್ಷ್ಮೀನಿಲಯನಾದ ವಿಷ್ಣುವನ್ನು ಬಿಟ್ಟು ಇನ್ನೊಬ್ಬನನ್ನು ನಾನು ವರಿಸತಕ್ಕವಳಲ್ಲ. ಅನಾಥ ರಕ್ಷಕನಾದ ಭಗವಾನ್ ಮುಕುಂದನು ನನ್ನ ವಿಷಯದಲ್ಲಿ ಸಂಪ್ರೀತನಾಗಲಿ (೨೧). ನಾನು ಕಾಳಿಂದಿ ಎಂಬ ಹೆಸರಿನಿಂದ ಖ್ಯಾತಳಾಗಿದ್ದೇನೆ. ಯಮುನಾ ಜಲದಲ್ಲಿ ನನ್ನ ತಂದೆಯು ನಿರ್ಮಿಸಿರುವ ಭವನದಲ್ಲಿ ವಾಸವಾಗಿದ್ದೇನೆ. ಅಚ್ಯುತನ ದರ್ಶನವಾಗುವವರೆಗೆ ಇಲ್ಲಿರುವೆನು'' ಎಂದಳು (೨೨). ಆ ವೃತ್ತಾಂತವೆಲ್ಲವನ್ನೂ ಅರ್ಜುನನು ವಾಸುದೇವನಿಗೆ ತಿಳಿಸಲಾಗಿ ಅದೆಲ್ಲವನ್ನೂ ತಿಳಿದಿದ್ದ ಆತನು ಕಾಳಿಂದಿಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಧರ್ಮರಾಜನ ಬಳಿಗೆ ಹಿಂದಿರುಗಿದನು (೨೩). ಹಿಂದೆ ಪಾಂಡವರಿಂದ ವಿಜ್ಞಾಪಿತನಾದ ಭಗವಂತನು (ದೇವಶಿಲ್ಪಿಯಾದ) ವಿಶ್ವಕರ್ಮನಿಂದ ಅವರಿಗೆ ಪರಮಾಶ್ಚರ್ಯಕರವೂ ವಿಚಿತ್ರವೂ ಆದ ನಗರವನ್ನು ನಿರ್ಮಿಸಿಕೊಟ್ಟಿದ್ದನು. ತನ್ನವರಿಗೆ ಪ್ರಿಯವಾಗಲೆಂದು ಅಲ್ಲಿ ವಾಸ ಮಾಡುತ್ತಿರುವಾಗ

ಭಗವಾಂಸ್ತತ್ರ ನಿವಸನ್ ಸ್ವಾನಾಂ ಪ್ರಿಯಚಿಕೀರ್ಷಯಾ ।
ಅಗ್ನಯೇ ಖಾಂಡವಂ ದಾತುಮರ್ಜುನಸ್ಯಾಸ ಸಾರಥಿಃ ॥ ೨೫

ಸೋಽಗ್ನಿಸ್ತುಷ್ಟೋ ಧನುರದಾದ್ಧಯಾನ್ ಶ್ವೇತಾನ್ ರಥಂ ನೃಪ ।
ಅರ್ಜುನಾಯಾಕ್ಷಯೌ ತೂಣೌ ವರ್ಮ ಚಾಭೇದ್ಯಮಸ್ತ್ರಿಭಿಃ ॥ ೨೬

ಮಯಶ್ಚ ಮೋಚಿತೋ ವಹ್ನೇಃ ಸಭಾಂ ಸಖ್ಯ ಉಪಾಹರತ್ ।
ಯಸ್ಮಿನ್ ದುರ್ಯೋಧನಸ್ಯಾಸೀಜ್ಜಲಸ್ಥಲದೃಶಿಭ್ರಮಃ ॥ ೨೭

ಸ ತೇನ ಸಮನುಜ್ಞಾತಃ ಸುಹೃದ್ಭಿಶ್ಚಾನುಮೋದಿತಃ ।
ಆಯಯೌ ದ್ವಾರಕಾಂ ಭೂಯಃ ಸಾತ್ಯಕಿಪ್ರಮುಖೈರ್ವೃತಃ ॥ ೨೮

ಅಥೋಪಯೇಮೇ ಕಾಲಿಂದೀಂ ಸುಪುಣ್ಯರ್ತ್ವೃಕ್ಷ ಊರ್ಜಿತೇ ।
ವಿತನ್ವನ್ ಪರಮಾನಂದಂ ಸ್ವಾನಾಂ ಪರಮಮಂಗಲಮ್ ॥ ೨೯

ವಿಂದಾನುವಿಂದಾವಾವಂತ್ಯೌ ದುರ್ಯೋಧನವಶಾನುಗೌ ।
ಸ್ವಯಂವರೇ ಸ್ವಭಗಿನೀಂ ಕೃಷ್ಣೇ ಸಕ್ತಾಂ ನ್ಯಷೇಧತಾಮ್ ॥ ೩೦

ಶ್ರೀಕೃಷ್ಣನು ಅಗ್ನಿಗೆ ಖಾಂಡವವನವನ್ನು ಅರ್ಪಿಸುವುದಕ್ಕಾಗಿ ಅರ್ಜುನನಿಗೆ ಸಾರಥಿಯಾಗಿದ್ದನು (೨೪-೨೫). ಪರೀಕ್ಷಿತರಾಜ, ಆಗ ಸಂತುಷ್ಟನಾದ ಅಗ್ನಿಯು ಅರ್ಜುನನಿಗೆ ಗಾಂಡಿವಧನಸ್ಸನ್ನೂ ರಥವನ್ನೂ (ನಾಲ್ಕು) ಶ್ವೇತಾಶ್ವಗಳನ್ನೂ ಎರಡು ಅಕ್ಷಯ ಬತ್ತಳಿಕೆಗಳನ್ನೂ ಬಿಲ್ಲಾಳುಗಳಿಂದ ಅಭೇದ್ಯವಾದ ಕವಚವನ್ನು ಕೊಟ್ಟನು (೨೬). ಅಲ್ಲದೆ ಖಾಂಡವಾಗ್ನಿಯಿಂದ ಉಳಿಸಲ್ಪಟ್ಟ ಮಯನು ಮಿತ್ರನಾದ ಅರ್ಜುನನಿಗೆ ಒಂದು ರಾಜಸಭೆಯನ್ನು ನಿರ್ಮಿಸಿಕೊಟ್ಟಿದ್ದನು. ದುರ್ಯೋಧನನು ಜಲವನ್ನು ನೆಲವೆಂದೂ ನೆಲವನ್ನು ಜಲವೆಂದೂ ಭ್ರಾಂತಿಗೊಂಡದ್ದು ಆ ಸಭೆಯಲ್ಲಿಯೇ (೨೭). ಆಮೇಲೆ ಧರ್ಮರಾಜನಿಂದಲೂ ಅರ್ಜುನಾದಿ ಮಿತ್ರರಿಂದಲೂ ಸಂಮತಿಯನ್ನು ಪಡೆದು ಶ್ರೀಕೃಷ್ಣನು ಸಾತ್ಯಕಿ ಮೊದಲಾದವರಿಂದ ಪರಿವೃತನಾಗಿ ದ್ವಾರಕೆಗೆ ಮತ್ತೆ ಬಂದನು (೨೮). ಬಳಿಕ ಮಂಗಳಕರವಾದ ಪುಣ್ಯ ಋತು ನಕ್ಷತ್ರದಲ್ಲಿ ತನ್ನವರಿಗೆ ಪರಮಾನಂದವನ್ನೂ ಶುಭವನ್ನೂ ಉಂಟುಮಾಡುತ್ತ ಕಾಳಿಂದಿಯನ್ನು ಮದುವೆಯಾದನು (೨೯). ಅವಂತೀದೇಶದ ಅರಸರಾದ ವಿಂದ ಅನುವಿಂದ ಎಂಬ ಸೋದರರು ದುರ್ಯೋಧನ

ರಾಜಾಧಿದೇವ್ಯಾಸ್ತನಯಾಂ ಮಿತ್ರವಿಂದಾಂ ಪಿತೃಷ್ವಸುಃ ।
ಪ್ರಸಹ್ಯ ಹೃತವಾನ್ ಕೃಷ್ಣೋ ರಾಜನ್ ರಾಜ್ಞಾಂ ಪ್ರಪಶ್ಯತಾಮ್ ॥

ನಗ್ನಜಿನ್ನಾಮ ಕೌಸಲ್ಯ ಆಸೀದ್ ರಾಜಾತಿಧಾರ್ಮಿಕಃ ।
ತಸ್ಯ ಸತ್ಯಾಭವತ್ ಕನ್ಯಾ ದೇವೀ ನಾಗ್ನಜಿತೀ ನೃಪ ॥ ೩೨

ನ ತಾಂ ಶೇಕುರ್ನೃಪಾ ವೋಢುಮಜಿತ್ವಾ ಸಪ್ತ ಗೋವೃಷಾನ್ ।
ತೀಕ್ಷ್ಣಶೃಂಗಾನ್ ಸುದುರ್ಧರ್ಷಾನ್ ವೀರಗಂಧಾಸಹಾನ್
ಖಲಾನ್ ॥ ೩೩

ತಾಂ ಶ್ರುತ್ವಾ ವೃಷಜಿಲ್ಲಭ್ಯಾಂ ಭಗವಾನ್ ಸಾತ್ವತಾಂ ಪತಿಃ ।
ಜಗಾಮ ಕೌಸಲ್ಯಪುರಂ ಸೈನ್ಯೇನ ಮಹಾತಾ ವೃತಃ ॥ ೩೪

ಸ ಕೋಸಲಪತಿಃ ಪ್ರೀತಃ ಪ್ರತ್ಯುತ್ಥಾನಾಸನಾದಿಭಿಃ ।
ಅರ್ಹಣೇನಾಪಿ ಗುರುಣಾ ಪೂಜಯನ್ ಪ್ರತಿನಂದಿತಃ ॥ ೩೫

ಪಕ್ಷಪಾತಿಗಳಾಗಿದ್ದರು. ಅವರ ತಂಗಿಯಾದ ಮಿತ್ರವಿಂದೆಯು ಶ್ರೀಕೃಷ್ಣನಲ್ಲಿ ಅನುರಕ್ತಳಾಗಿದ್ದಳು. ಸ್ವಯಂವರದಲ್ಲಿ ಶ್ರೀಕೃಷ್ಣನನ್ನು ಮದುವೆಯಾಗದಂತೆ ಅವಳನ್ನು ಅವರು ತಡೆದರು. ಆಗ, ಪರೀಕ್ಷಿತ, ಶ್ರೀಕೃಷ್ಣನು ಸೋದರತ್ತೆಯಾದ ರಾಜಾಧಿದೇವಿಯ ಮಗಳಾದ ಆಕೆಯನ್ನು, ಸಕಲರಾಜರೂ ನೋಡುತ್ತಿರುವಾಗಲೇ ಬಲಾತ್ಕಾರದಿಂದ ಅಪಹರಿಸಿದನು (೩೦). ಅತ್ಯಂತ ಧಾರ್ಮಿಕನೂ ಕೋಸಲಾಧಿಪತಿಯೂ ಆದ ನಗ್ನಜಿತ್ ಎಂಬ ರಾಜನಿದ್ದನು. ಆತನಿಗೆ ಸತ್ಯಾ ಎಂದೂ ನಾಗ್ನಜಿತೀ ಎಂದೂ ಹೆಸರುಳ್ಳ ಸುಂದರಿಯಾದ ಕುಮಾರಿ ಇದ್ದಳು (೩೧). ಆ ರಾಜನ ಬಳಿ ಹರಿತವಾದ ಕೊಂಬುಗಳುಳ್ಳವೂ ದುರ್ಧರ್ಷಗಳೂ ವೀರವಾಸನೆಯನ್ನು ಸಹಿಸದವೂ ಆದ ಏಳು ಪುಂಡಹೋರಿಗಳಿದ್ದುವು. ಅವುಗಳನ್ನು ಜಯಿಸಲಾಗದೆ ಯಾವ ರಾಜರೂ ಸತ್ಯೆಯನ್ನು ವಿವಾಹವಾಗಲು ಸಮರ್ಥರಾಗಲಿಲ್ಲ(೩೨-೩೩). ಆ ಹೋರಿಗಳನ್ನು ಗೆದ್ದವನಿಗೆ ಮಾತ್ರ ಸತ್ಯಾದೇವಿಯು ದೊರಕುವಳೆಂಬ ವಾರ್ತೆಯನ್ನು ಕೇಳಿ, ಯದುಪತಿಯಾದ ಶ್ರೀಕೃಷ್ಣನು ದೊಡ್ಡ ಸೇನೆಯೊಡನೆ ಕೋಸಲನಗರಕ್ಕೆ ಹೋದನು (೩೪). ಕೋಸಲೇಶ್ವರನು ಸಂತುಷ್ಟನಾಗಿ ಎದ್ದುಬಂದು ಸ್ವಾಗತಿಸಿ ವಿಶಿಷ್ಟವಾದ ಆಸನಾದ್ಯುಪಚಾರಗಳಿಂದ ಶ್ರೀಕೃಷ್ಣನನ್ನು ಸತ್ಕರಿಸಿದನು. ಆತನೂ ಕೋಸಲೇಶ್ವರನ ಕುಶಲ ವಾರ್ತೆಯನ್ನು ಕೇಳಿ ಗೌರವಿಸಿದನು (೩೫).

ವರಂ ವಿಲೋಕ್ಯಾಭಿಮತಂ ಸಮಾಗತಂ
ನರೇಂದ್ರಕನ್ಯಾ ಚಕಮೇ ರಮಾಪತಿಮ್ ।
ಭೂಯಾದಯಂ ಮೇ ಪತಿರಾಶಿಷೋಽಮಲಾಃ
ಕರೋತು ಸತ್ಯಾ ಯದಿ ಮೇ ಧೃತೋ ವ್ರತಃ ॥ ೩೬

ಯತ್ಪಾದಪಂಕಜರಜಃ ಶಿರಸಾ ಬಿಭರ್ತಿ
ಶ್ರೀರಬ್ಜಜಃ ಸಗಿರಿಶಃ ಸಹಲೋಕಪಾಲೈಃ ।
ಲೀಲಾತನೂಃ ಸ್ವಕೃತಸೇತುಪರೀಪ್ಸಯೇಶಃ
ಕಾಲೇ ದಧತ್ ಸ ಭಗವಾನ್ ಮಮ ಕೇನ ತುಷ್ಯೇತ್ ॥ ೩೭

ಅರ್ಚಿತಂ ಪುನರಿತ್ಯಾಹ ನಾರಾಯಣ ಜಗತ್ಪತೇ ।
ಆತ್ಮಾನಂದೇನ ಪೂರ್ಣಸ್ಯ ಕರವಾಣಿ ಕಿಮಲ್ಪಕಃ ॥ ೩೮

ಶ್ರೀಶುಕ ಉವಾಚ-

ತಮಾಹ ಭಗವಾನ್ ಹೃಷ್ಟಃ ಕೃತಾಸನಪರಿಗ್ರಹಃ ।
ಮೇಘಗಂಭೀರಯಾ ವಾಚಾ ಸಸ್ಮಿತಂ ಕುರುನಂದನ ॥ ೩೯

ರಮಾವಲ್ಲಭನು ಕನ್ಯಾರ್ಥಿಯಾಗಿ ಬಂದಿರುವುದನ್ನು ಕಂಡು ರಾಜಕುಮಾರಿಯು ಈತನೇ ನನಗೆ ಇಷ್ಟನಾದ ವರನೆಂದು ಕಾಮಿಸಿದಳು. 'ನಾನು ವ್ರತವನ್ನು ಪಾಲಿಸಿರುವುದು ದಿಟವಾದರೆ ಈತನೇ ನನ್ನ ಪತಿಯಾಗಲಿ. ಪರಿಶುದ್ಧವಾದ ನನ್ನ ಕೋರಿಕೆಗಳು ಸತ್ಯವಾಗಿ ಈಡೇರಲಿ' ಎಂದು ಹರಸಿಕೊಂಡಳು (೩೬). ಕೋಸಲರಾಜನು ಉಪಚಾರಗಳಿಂದ ಸತ್ಕೃತನಾದ ಭಗವಂತನನ್ನು ಕುರಿತು ''ಯಾವಾತನ ಪಾದಕಮಲಪರಾಗವನ್ನು ಲಕ್ಷ್ಮಿಯೂ ಬ್ರಹ್ಮನೂ ರುದ್ರನೂ ಲೋಕಪಾಲರೂ ತಮ್ಮ ಶಿರಸ್ಸಿನಲ್ಲಿ ಧರಿಸುವರೋ, ಯಾವ ಲೋಕೇಶ್ವರನು ತಾನು ಮಾಡಿದ ಧರ್ಮಸೇತುವನ್ನು ರಕ್ಷಿಸುವುದಕ್ಕಾಗಿ ಉಚಿತ ಕಾಲದಲ್ಲಿ ಲೀಲಾಶರೀರಗಳನ್ನು ಧರಿಸುವನೋ ಆ ಭಗವಂತನು ಏನುಮಾಡಿದರೆ ನನ್ನಲ್ಲಿ ಸಂಪ್ರೀತನಾದನು ? (೩೭). ಹೇ ನಾರಾಯಣ, ಜಗದೊಡೆಯ, ಆತ್ಮಾನಂದ ಪರಿಪೂರ್ಣನಾದ ನಿನಗೆ ಅಲ್ಪನಾದ ನಾನು ಏನು ಮಾಡಿಯೇನು ?'' ಎಂದನು (೩೮). ಪರೀಕ್ಷಿತರಾಜ, ಸಂಪ್ರೀತನಾದ ಭಗವಂತನು ಪೀಠದಲ್ಲಿ ಕುಳಿತು

ಶ್ರೀ ಭಗವಾನುವಾಚ-

ನರೇಂದ್ರ ಯಾಚ್ಞಾ ಕವಿಭಿರ್ವಿಗರ್ಹಿತಾ
ರಾಜನ್ಯಬಂಧೋರ್ನಿಜಧರ್ಮವರ್ತಿನಃ।
ತಥಾಪಿ ಯಾಚೇ ತವ ಸೌಹೃದೇಚ್ಛಯಾ
ಕನ್ಯಾಂ ತ್ವದೀಯಾಂ ನ ಹಿ ಶುಲ್ಕದಾ ವಯಮ್ ॥ ೪೦

ರಾಜೋವಾಚ-

ಕೋಽನ್ಯಸ್ತೇಽಭ್ಯಧಿಕೋ ನಾಥ ಕನ್ಯಾವರ ಇಹೇಪ್ಸಿತಃ।
ಗುಣೈಕಧಾಮ್ನೋ ಯಸ್ಯಾಂಗೇ ಶ್ರೀರ್ವಸತ್ಯನಪಾಯಿನೀ ॥ ೪೧

ಕಿಂ ತ್ವಸ್ಮಾಭಿಃ ಕೃತಃ ಪೂರ್ವಂ ಸಮಯಃ ಸಾತ್ವತರ್ಷಭ।
ಪುಂಸಾಂ ವೀರ್ಯಪರೀಕ್ಷಾರ್ಥಂ ಕನ್ಯಾವರಪರೀಪ್ಸಯಾ ॥ ೪೨

ಸಪ್ತೈತೇ ಗೋವೃಷಾ ವೀರ ದುರ್ದಾಂತಾ ದುರವಗ್ರಹಾಃ।
ಏತೈರ್ಭಗ್ನಾಃ ಸುಬಹವೋ ಭಿನ್ನಗಾತ್ರಾ ನೃಪಾತ್ಮಜಾಃ ॥ ೪೩

ಮುಗುಳ್ನಗೆ ಬೀರುತ್ತ ಮೇಘಗಂಭೀರ ಧ್ವನಿಯಿಂದ ''ನರೇಂದ್ರ, ತನ್ನ ಧರ್ಮದಲ್ಲಿರುವ ಕ್ಷತ್ರಿಯನಿಗೆ ಯಾಚನೆಯು ತರವಲ್ಲವೆಂದು ವಿದ್ವಾಂಸರು ನಿಂದಿಸಿದ್ದಾರೆ. ಆದರೂ ನಿನ್ನೊಡನೆ ಸ್ನೇಹವನ್ನು ಬೆಳಸಬೇಕೆಂಬ ಬಯಕೆಯಿಂದ ನಿನ್ನ ಮಗಳನ್ನು ಯಾಚಿಸುತ್ತೇನೆ. ನಾವು ಕನ್ಯಾಶುಲ್ಕವನ್ನು ಕೊಡತಕ್ಕವರಲ್ಲ!'' ಎಂದನು (೩೯-೪೦). ಅದಕ್ಕೆ ನಗ್ನಜಿತನು ''ಜಗನ್ನಾಥ, ಯಾರ ವಕ್ಷಸ್ಥಳದಲ್ಲಿ ಲಕ್ಷ್ಮೀದೇವಿಯು ನಿರಂತರವಾಗಿ ನೆಲೆಸಿರುವಳೋ ಅಂತಹ ಗುಣನಿಧಿಯಾದ ನಿನಗಿಂತಲೂ ಅಧಿಕನಾದ ಯಾವ ವರನು ನನ್ನ ಮಗಳಿಗೆ ದೊರಕಿಯಾನು ? (೪೧). ಆದರೆ, ಯದುಕುಲೋತ್ತಮ, ಹಿಂದೆಯೇ ನಾವು ಒಂದು ಪ್ರತಿಜ್ಞೆಯನ್ನು ಮಾಡಿಕೊಂಡಿದ್ದೇವೆ. ಪುರುಷರ ಪರಾಕ್ರಮವನ್ನು ಪರೀಕ್ಷಿಸಿ ಕನ್ಯೆಗೆ ತಕ್ಕ ವರನನ್ನು ಗೊತ್ತುಮಾಡುವುದಕ್ಕಾಗಿ ಹೀಗೆ ಮಾಡಿದ್ದೇವೆ ಏನೆಂದರೆ, ನನ್ನ ಬಳಿ ದುರ್ಧಷಗಳೂ ಬಗ್ಗಿಸಲೂ ಅಸಾಧ್ಯಗಳೂ ಆದ ಏಳು ಹೋರಿಗಳಿವೆ. (ಇವನ್ನು ಪಳಗಿಸಲಾರದೆ) ಬಹುಮಂದಿ ರಾಜಪುತ್ರರು ಇವುಗಳಿಂದ ಕೈಕಾಲುಗಳನ್ನು ಮುರಿಸುಕೊಂಡು ಭಗ್ನಾಶರಾಗಿದ್ದಾರೆ(೪೨-೪೩). ಯದುನಂದನ, ಲಕ್ಷ್ಮೀ ಪತಿ, ಒಂದು ವೇಳೆ ನೀನೇ ಈ ಹೋರಿಗಳನ್ನು ನಿಗ್ರಹಿಸಿದರೆ ನೀನೇ ನನ್ನ ಮಗಳಿಗೆ ಅನುರೂಪನಾದ ವರನಾಗುವೆ'' ಎಂದನು (೪೪). ಈ ಪ್ರತಿಜ್ಞೆಯನ್ನು ಕೇಳಿ

ಯದಿಮೇ ನಿಗೃಹೀತಾಃ ಸ್ಯುಸ್ತ್ವಯ್ಯೈವ ಯದುನಂದನ ।
ವರೋ ಭವಾನಭಿಮತೋ ದುಹಿತುರ್ಮೇ ಶ್ರಿಯಃ ಪತೇ ॥ ೪೪

ಏವಂ ಸಮಯಮಾಕರ್ಣ್ಯ ಬದ್ಧ್ವಾ ಪರಿಕರಂ ಪ್ರಭುಃ ।
ಆತ್ಮಾನಂ ಸಪ್ತಧಾ ಕೃತ್ವಾ ನ್ಯಗೃಹ್ಣಾಲ್ಲೀಲಯೈವ ತಾನ್ ॥ ೪೫

ಬದ್ಧ್ವಾ ತಾನ್ ದಾಮಭಿಃ ಶೌರಿರ್ಭಗ್ನದರ್ಪಾನ್ ಹತೌಜಸಃ ।
ವ್ಯಕರ್ಷಲ್ಲೀಲಯಾ ಬದ್ಧಾನ್ ಬಾಲೋ ದಾರುಮಯಾನ್ ಯಥಾ ॥ ೪೬

ತತಃ ಪ್ರೀತಃ ಸುತಾಂ ರಾಜಾ ದದೌ ಕೃಷ್ಣಾಯ ವಿಸ್ಮಿತಃ ।
ತಾಂ ಪ್ರತ್ಯಗೃಹ್ಣಾದ್ ಭಗವಾನ್ ವಿಧಿವತ್ ಸದೃಶೀಂ ಪ್ರಭುಃ ॥ ೪೭

ರಾಜಪತ್ನ್ಯಶ್ಚ ದುಹಿತುಃ ಕೃಷ್ಣಂ ಲಬ್ಧ್ವಾ ಪ್ರಿಯಂ ಪತಿಮ್ ।
ಲೇಭಿರೇ ಪರಮಾನಂದಂ ಜಾತಶ್ಚ ಪರಮೋತ್ಸವಃ ॥ ೪೮

ಶಂಖಭೇರ್ಯಾನಕಾ ನೇದುರ್ಗೀತವಾದ್ಯದ್ವಿಜಾತಿಷಃ ।
ನರಾ ನಾರ್ಯಃ ಪ್ರಮುದಿತಾಃಸುವಾಸಃ ಸ್ರಗಲಂಕೃತಾಃ ॥ ೪೯

ಸ್ವಾಮಿಯು ನಡುಕಟ್ಟನ್ನು ಬಿಗಿದು ತನ್ನನ್ನು ಏಳುಮಂದಿ ಶ್ರೀಕೃಷ್ಣರನ್ನಾಗಿ ಕಲ್ಪಿಸಿಕೊಂಡು ಲೀಲೆಯಿಂದಲೇ ಆ ಹೋರಿಗಳನ್ನು ನಿಗ್ರಹಿಸಿದನು (೪೫). ಅವುಗಳ ದರ್ಪವನ್ನಡಗಿಸಿ ಶೌರ್ಯವನ್ನುಡಗಿಸಿ ಹಗ್ಗಗಳಿಂದ ಬಿಗಿದುಕಟ್ಟಿ ಬಾಲಕನು ಮರದಿಂದ ಮಾಡಿದ ಆಟದ ಎತ್ತುಗಳನ್ನು ಎಳತರುವಂತೆ ಲೀಲೆಯಿಂದ ಎಳೆದುತಂದನು (೪೬). ಅಚ್ಚರಿಗೊಂಡ ನಗ್ನಜಿದ್ರಾಜನು ಸಂತುಷ್ಟನಾಗಿ ತನ್ನ ಮಗಳಾದ ಸತ್ಯೆಯನ್ನು ಶ್ರೀಕೃಷ್ಣನಿಗಿತ್ತನು. ಭಗವಂತನು ಅನುರೂಪಳಾದ ಆ ಕನ್ಯೆಯನ್ನು ವಿಧಿವತ್ತಾಗಿ ಪಾಣಿಗ್ರಹಣ ಮಾಡಿದನು (೪೭). ಶ್ರೀಕೃಷ್ಣನು ಅನುರೂಪನಾದ ಪ್ರಿಯಪತಿಯಾಗಿ ಮಗಳಿಗೆ ದೊರಕಿದುದರಿಂದ ರಾಜಪತ್ನಿಯರು ಪರಮಾನಂದಭರಿತರಾದರು. ದೊಡ್ಡ ಉತ್ಸವ ನಡೆಯಿತು (೪೮). ಶಂಖ ಭೇರೀ ಮೃದಂಗಗಳು ಮೊಳಗಿದವು. ಸಂಗೀತ ವಾದ್ಯಗೋಷ್ಠಿಗಳು ನಡೆದವು. ಬ್ರಾಹ್ಮಣರು ಆಶೀರ್ವದಿಸಿದರು. ಗಂಡಸರು ಹೆಂಗಸರೆಲ್ಲರೂ ಉತ್ತಮ ವಸ್ತ್ರಮಾಲ್ಯಗಳಿಂದ ಭೂಷಿತರಾಗಿ ಆನಂದಿಸಿದರು (೪೯). ಕೋಸಲರಾಜನು ಹತ್ತು ಸಾವಿರ ಹಸುಗಳನ್ನೂ ಚಿನ್ನದ

ದಶಧೇನುಸಹಸ್ರಾಣಿ ಪಾರಿಬರ್ಹಮದಾದ್ ವಿಭುಃ ।
ಯುವತೀನಾಂ ತ್ರಿಸಾಹಸ್ರಂ ನಿಷ್ಕಗ್ರೀವಸುವಾಸಸಾಮ್ ॥ ೫೦

ನವನಾಗಸಹಸ್ರಾಣಿ ನಾಗಾಚ್ಛತಗುಣಾನ್ ರಥಾನ್ ।
ರಥಾಚ್ಛತಗುಣಾನಶ್ವಾನಶ್ವಾಚ್ಛತಗುಣಾನ್ ನರಾನ್ ॥ ೫೧

ದಂಪತೀ ರಥಮಾರೋಪ್ಯ ಮಹತ್ಯಾ ಸೇನಯಾ ವೃತೌ ।
ಸ್ನೇಹಪ್ರಕ್ಲಿನ್ನಹೃದಯೋ ಯಾಪಯಾಮಾಸ ಕೋಸಲಃ ॥ ೫೨

ಶ್ರುತ್ವೈತದ್ ರುರುಧುರ್ಭೂಪಾ ನಯಂತಂ ಪಥಿ ಕನ್ಯಕಾಮ್ ।
ಭಗ್ನವೀರ್ಯಾಃ ಸುದುರ್ಮರ್ಷಾ ಯದುಭಿರ್ಗೋವೃಷೈಃ ಪುರಾ ॥ ೫೩

ತಾನಸ್ಯತಃ ಶರವ್ರಾತಾನ್ ಬಂಧುಪ್ರಿಯಕೃದರ್ಜುನಃ ।
ಗಾಂಡೀವೀ ಕಾಲಯಾಮಾಸ ಸಿಂಹಃ ಕ್ಷುದ್ರಮೃಗಾನಿವ ॥ ೫೪

ಪಾರಿಬರ್ಹಮುಪಾಗೃಹ್ಯ ದ್ವಾರಕಾಮೇತ್ಯ ಸತ್ಯಯಾ ।
ರೇಮೇ ಯದೂನಾಮೃಷಭೋ ಭಗವಾನ್ ದೇವಕೀಸುತಃ ॥ ೫೫

ಕಂಠಾಭರಣಗಳಿಂದಲೂ ದಿವ್ಯವಸ್ತ್ರಗಳಿಂದಲೂ ಭೂಷಿತರಾದ ಮೂರುಸಾವಿರ ದಾಸಿಯರನ್ನೂ ಬಳುವಳಿಯಾಗಿ ಕೊಟ್ಟನು. ಅಲ್ಲದೆ ಒಂಬತ್ತುಸಾವಿರ ಆನೆಗಳನ್ನೂ ಅವುಗಳಿಗೆ ನೂರರಷ್ಟು (ಒಂಬತ್ತು ಲಕ್ಷ) ರಥಗಳನ್ನೂ ರಥಗಳಿಗೆ ನೂರರಷ್ಟು (ಒಂಬತ್ತು ಕೋಟಿ) ಕುದುರೆಗಳನ್ನೂ ಅವುಗಳಿಗೆ ನೂರರಷ್ಟು (ಒಂಬತ್ತು ಪದ್ಮ) ಯೋಧರನ್ನೂ ಶ್ರೀಕೃಷ್ಣನಿಗೆ ಅರ್ಪಿಸಿದನು (೫೦-೫೧). ಆಮೇಲೆ ಕೋಸಲರಾಜನು ದಂಪತಿಗಳನ್ನು ರಥದಲ್ಲಿ ಕುಳ್ಳಿರಿಸಿ ದೊಡ್ಡ ಸೇನೆಯ ಕಾವಲಿನೊಡನೆ ಸ್ನೇಹಾರ್ದ್ರ ಹೃದಯನಾಗಿ ಕಳಿಸಿಕೊಟ್ಟನು (೫೨). ಹಿಂದೆ ಯಾದವರಿಂದಲೂ ನಗ್ನಜಿತನ ಗೂಳಿಗಳಿಂದಲೂ ಭಗ್ನರಾಗಿದ್ದ ಕೆಲವು ರಾಜರು ಈ ವೃತ್ತಾಂತವನ್ನು ಕೇಳಿ ಅಸೂಯಾಪರರಾಗಿ, ಕನ್ಯೆಯನ್ನು ಕರೆದೊಯ್ಯುತ್ತಿದ್ದ ಶ್ರೀಕೃಷ್ಣನನ್ನು ದಾರಿಯಲ್ಲಿ ತಡೆದರು (೫೩). ಶರವೃಷ್ಟಿಯನ್ನು ಸುರಿಸುತ್ತ ಬಂದ ಅವರನ್ನು ನೋಡಿ ಬಂಧುವಿಗೆ ಪ್ರಿಯಂಕರನಾದ ಅರ್ಜುನನು ಗಾಂಡೀವ ಧನಸ್ಸನ್ನೆತ್ತಿ ಹಿಡಿದು, ಸಿಂಹವು ಕ್ಷುಲ್ಲಕ ಮೃಗಗಳನ್ನು ಚದುರಿಸುವಂತೆ, ಆ ರಾಜರನ್ನು

ಶ್ರುತಕೀರ್ತೇಃ ಸುತಾಂ ಭದ್ರಾ ಮುಪಯೇಮೇ ಪಿತೃಷ್ವಸುಃ ।
ಕೈಕೇಯೀಂ ಭ್ರಾತೃಭಿರ್ದತ್ತಾಂ ಕೃಷ್ಣಃ ಸಂತರ್ದನಾದಿಭಿಃ ॥ ೫೬

ಸುತಾಂ ಚ ಮದ್ರಾಧಿಪತೇರ್ಲಕ್ಷ್ಮಣಾಂ ಲಕ್ಷಣೈರ್ಯುತಾಮ್ ।
ಸ್ವಯಂವರೇ ಜಹಾರೈಕಃ ಸ ಸುಪರ್ಣ ಸುಧಾಮಿವ ॥ ೫೭

ಅನ್ಯಾಶ್ಚೈವಂವಿಧಾ ಭಾರ್ಯಾಃ ಕೃಷ್ಣಸ್ಯಾಸನ್ ಸಹಸ್ರಶಃ ।
ಭೌಮಂ ಹತ್ವಾ ತನ್ನಿರೋಧಾದಾಹೃತಾಶ್ಚಾರುದರ್ಶನಾಃ ॥ ೫೮

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ಅಷ್ಟಪಂಚಾಶತ್ತಮಾಧ್ಯಾಯಃ

ಸೋಲಿಸಿ ಓಡಿಸಿದನು (೫೪). ಯದುಶ್ರೇಷ್ಠನೂ ದೇವಕೀಸುತನೂ ಆದ ಭಗವಂತನು ಕೋಸಲರಾಜನಿತ್ತ ಬಳುವಳಿಯನ್ನು ತೆಗೆದುಕೊಂಡು ದ್ವಾರಕೆಯನ್ನು ಸೇರಿ ಪತ್ನಿಯಾದ ಸತ್ಯೆಯೊಡನೆ ವಿಹರಿಸಿದನು (೫೫). ಅಲ್ಲದೆ ಸೋದರತ್ತೆಯಾದ ಶ್ರುತಕೀರ್ತಿಯ ಮಗಳೂ ಕೇಕಯ ರಾಜ ಪುತ್ರಿಯೂ ಆದ ಭದ್ರೆಯನ್ನು, ಅವಳ ಸೋದರರಾದ ಪ್ರತರ್ದನಾದಿಗಳು ಮದುವೆಮಾಡಿ ಕೊಡಲಾಗಿ, ಶ್ರೀಕೃಷ್ಣನು ಪರಿಗ್ರಹಿಸಿದನು (೫೬). ಮತ್ತು ಮದ್ರರಾಜನ ಪುತ್ರಿಯೂ ಲಕ್ಷಣಾನ್ವಿತಳೂ ಆದ ಲಕ್ಷ್ಮಣಾ ಎಂಬ ಕನ್ಯೆಯನ್ನು ಸ್ವಯಂವರಸಮಯದಲ್ಲಿ, ಗರುಡನು ಅಮೃತವನ್ನು ತಂದಂತೆ, ಏಕಾಕಿಯಾಗಿ ಹೋಗಿ ತಂದುಕೊಂಡನು* (೫೭). ಅಲ್ಲದೆ ಭೂಮಿಪುತ್ರನಾದ ನರಕಾಸುರನನ್ನು ಸಂಹರಿಸಿ ಅವನ ಸೆರೆಯಿಂದ ಬಿಡಿಸಿ ತಂದ ಸುಂದರಿಯರಾದ ಈ ಬಗೆಯ ಸಾವಿರಾರು ಪತ್ನಿಯರು ಶ್ರೀಕೃಷ್ಣನಿಗಿದ್ದರು (೫೮).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಐವತ್ತೆಂಟನೆಯ ಅಧ್ಯಾಯ

---

*ರುಕ್ಮಿಣಿ, ಜಾಂಬವತಿ, ಸತ್ಯಭಾಮೆ, ಕಾಳಿಂದಿ, ಮಿತ್ರವಿಂದೆ, ಸತ್ಯೆ, ಭದ್ರೆ, ಲಕ್ಷ್ಮಣೆ (ಲಕ್ಷಣೆ)-ಇವರು ಶ್ರೀಕೃಷ್ಣನ ಅಷ್ಟಮಹಿಷಿಯರು.

ಏಕೋನಷಷ್ಟಿತಮೋಽಧ್ಯಾಯಃ

ರಾಜೋವಾಚ-

ಯಥಾ ಹತೋ ಭಗವತಾ ಭೌಮೋ ಯೇನ ಚ ತಾಃ ಸ್ತ್ರಿಯಃ ।
ನಿರುದ್ಧಾ ಏತದಾಚಕ್ಷ್ವ ವಿಕ್ರಮಂ ಶಾರ್ಙ್ಗಧನ್ವನಃ ॥ ೧

ಶ್ರೀಶುಕ ಉವಾಚ-

ಇಂದ್ರೇಣ ಹೃತಛತ್ರೇಣ ಹೃತಕುಂಡಲಬಂಧುನಾ ।
ಹೃತಾಮರಾದ್ರಿಸ್ಥಾನೇನ ಜ್ಞಾಪಿತೋ ಭೌಮಚೇಷ್ಟಿತಮ್ ।
ಸಭಾರ್ಯೋ ಗರುಡಾರೂಢಃ ಪ್ರಾಗ್ಜ್ಯೋತಿಷಪುರಂ ಯಯೌ ॥ ೨

ಗಿರಿದುರ್ಗೈಃ ಶಸ್ತ್ರದುರ್ಗೈರ್ಜಲಾಗ್ನ್ಯನಿಲದುರ್ಗಮಮ್ ।
ಮುರಪಾಶಾಯುತೈರ್ಘೋರೈರ್ದೃಢೈಃ ಸರ್ವತ ಆವೃತಮ್ ॥ ೩

ಅಧ್ಯಾಯ ೫೯

ನರಕಾಸುರನ ಸಂಹಾರ; ಪಾರಿಜಾತಾಪಹರಣ

ಆಗ ಪರೀಕ್ಷಿತರಾಜನು ''ಮಹರ್ಷಿಗಳೆ, ಶ್ರೀಕೃಷ್ಣನು ನರಕಾಸುರನನ್ನು ಸಂಹರಿಸಿದ ಬಗೆ ಏನು ? ನರಕಾಸುರನು ಆ ಸ್ತ್ರೀಯರನ್ನು ಸೆರೆಯಲ್ಲಿಟ್ಟದ್ದನಷ್ಟೆ. ಇದಕ್ಕೆ ಸಂಬಂಧಿಸಿದಂತೆ ಭಗವಂತನ ಪರಾಕ್ರಮ ವೃತ್ತಾಂತವನ್ನು ಹೇಳಿರಿ'' ಎಂದು ಕೇಳಿದನು (೧). ಶುಕಮಹರ್ಷಿಗಳು ಹೇಳಿದರು : ಒಂದು ಸಲ ದೇವೇಂದ್ರನು ಶ್ರೀಕೃಷ್ಣನ ಬಳಿಗೆ ಹೋಗಿ (ವರುಣನ) ಛತ್ರವನ್ನೂ ತನ್ನ ತಾಯಿಯಾದ ಅದಿತಿಯ ಓಲೆಗಳನ್ನೂ ಅಮರಾದ್ರಿಯಲ್ಲಿದ್ದ ಮಣಿಪರ್ವತವನ್ನೂ ನರಕಾಸುರನು ಅಪಹರಿಸಿಕೊಂಡು ಹೋದನೆಂದು ಅವನ ಕ್ರೂರಚೇಷ್ಟೆಗಳನ್ನು ತಿಳಿಸಿದನು. ಆಗ ಭಗವಂತನು ಪತ್ನಿಯಾದ ಸತ್ಯಭಾಮೆಯೊಡನೆ ಗರುಡಾರೂಢನಾಗಿ (ನರಕಾಸುರನ ರಾಜಧಾನಿಯಾದ) ಪ್ರಾಗ್ ಜ್ಯೋತಿಪುರಕ್ಕೆ ಪ್ರಯಾಣಮಾಡಿದನು (೨). ಆ ನಗರವು ಗಿರಿದುರ್ಗಶಸ್ತ್ರದುರ್ಗಗಳಿಂದಲೂ ಜಲಾಗ್ನಿವಾಯು ದುರ್ಗಗಳಿಂದಲೂ ಪ್ರವೇಶಿಸಲು ಅಶಕ್ಯವಾಗಿತ್ತು. ಮುರಾಸುರನಿಂದ ನಿರ್ಮಿತವಾದ ದೃಢವೂ ಘೋರವೂ ಆದ ಹತ್ತುಸಾವಿರ ಸರಪಳಿಗಳಿಂದ ಸುತ್ತಲೂ ಆವೃತವಾಗಿತ್ತು (೩). ಭಗವಂತನು ತನ್ನ ಗದೆಯಿಂದ ಗಿರಿದುರ್ಗಗಳನ್ನೂ

ಗದಯಾ ನಿರ್ಬಿಭೇದಾದ್ರೀನ್ ಶಸ್ತ್ರದುರ್ಗಾಣಿ ಸಾಯಕೈಃ ।
ಚಕ್ರೇಣಾಗ್ನಿಂ ಜಲಂ ವಾಯುಂ ಮುರಪಾಶಾಂಸ್ತಥಾಸಿನಾ ॥ ೪
ಶಂಖನಾದೇನ ಯಂತ್ರಾಣಿ ಹೃದಯಾನಿ ಮನಸ್ವಿನಾಮ್ ।
ಪ್ರಾಕಾರಂ ಗದಯಾ ಗುರ್ವ್ಯಾ ನಿರ್ಬಿಭೇದ ಗದಾಧರಃ ॥ ೫
ಪಾಂಚಜನ್ಯಧ್ವನಿಂ ಶ್ರುತ್ವಾ ಯುಗಾಂತಾಶನಿಭೀಷಣಮ್ ।
ಮುರಃ ಶಯಾನ ಉತ್ತಸ್ಥೌ ದೈತ್ಯಃ ಪಂಚಶಿರಾ ಜಲಾತ್ ॥ ೬

ತ್ರಿಶೂಲಮುದ್ಯಮ್ಯ ಸುದುರ್ನಿರೀಕ್ಷಣೋ
ಯುಗಾಂತಸೂರ್ಯಾನಲರೋಚಿರುಲ್ಬಣಃ ।
ಗ್ರಸಂಸ್ತ್ರಿಲೋಕೀಮಿವ ಪಂಚಭಿರ್ಮುಖೈ-
ರಭ್ಯದ್ರವತ್ತಾರ್ಕ್ಷ್ಯಸುತಂ ಯಥೋರಗಃ ॥ ೭
ಆವಿಧ್ಯ ಶೂಲಂ ತರಸಾ ಗರುತ್ಮತೇ
ನಿರಸ್ಯ ವಕ್ತ್ರೈರ್ವ್ಯನದತ್ ಸ ಪಂಚಭಿಃ ।
ಸ ರೋದಸೀ ಸರ್ವದಿಶೋಽಂತರಂ ಮಹಾ-
ನಾಪೂರಯನ್ನಂಡಕಟಾಹಮಾವೃಣೋತ್ ॥ ೮

ಶರಗಳಿಂದ ಶಸ್ತ್ರದುರ್ಗಗಳನ್ನೂ ಚಕ್ರದಿಂದ ಅಗ್ನಿಜಲವಾಯುದುರ್ಗಗಳನ್ನೂ ಭೇದಿಸಿ ಖಡ್ಗದಿಂದ ಮುರಾಸುರನ ಸರಪಳಿಗಳನ್ನು ಕತ್ತರಿಸಿದನು (೪). ಶಂಖನಾದದಿಂದ ರಕ್ಷಣಾಯಂತ್ರಗಳನ್ನೂ ವೀರರ ಹೃದಯಗಳನ್ನೂ ಭೇದಿಸಿದನು. ಬಲವಾದ ಗದೆಯಿಂದ ಬಡಿದು ಕೋಟೆಯನ್ನು ಒಡೆದನು (೫). ಪ್ರಳಯಕಾಲದ ಸಿಡಿಲಿನಂತೆ ಭೀಷಣವಾದ ಪಾಂಚಜನ್ಯ ಧ್ವನಿಯನ್ನು ಕೇಳಿ (ಪರಿಖೆಯ ನೀರಲ್ಲಿ) ಮಲಗಿದ್ದ ಪಂಚಶಿರನಾದ ಮುರಾಸುರನು ನೀರಿಂದ ಎದ್ದನು. ಯುಗಾಂತಕಾಲದ ಸೂರ್ಯನೋ ಅಗ್ನಿಯೋ ಎಂಬಂತೆ ಪ್ರಜ್ವಲಿಸುತ್ತ ಘೋರಾಕಾರನೂ ಕಣ್ಣೆತ್ತಿ ನೋಡಲು ಅಶಕ್ಯನೂ ಆದ ಆ ದೈತ್ಯನೂ ಒಡನೆಯೇ ತ್ರಿಶೂಲವನ್ನೆತ್ತಿ ಹಿಡಿದನು. ತನ್ನ ಐದು ಬಾಯಿಗಳಿಂದ ಮೂರುಲೋಕಗಳನ್ನು ನುಂಗುವನೋ ಎಂಬಂತೆ, ಗರುಡನ ಬಳಿಗೆ ಕಾಳೋರಗವು ಧಾವಿಸುವಂತೆ, ಶ್ರೀಕೃಷ್ಣನನ್ನೆದುರಿಸಿ ಬಂದನು (೬-೭). ರಭಸದಿಂದ ಶೂಲವನ್ನು ತೂಗಿ ಗರುಡನ ಮೇಲೆ ಬೀಸಿ ಐದು ಮುಖಗಳಿಂದಲೂ ಗರ್ಜಿಸಿದನು. ಆ ಮಹಾಗರ್ಜನೆಯು ಭೂಮ್ಯಾಕಾಶಗಳನ್ನೂ ದಿಗಂತರಾಳವನ್ನೂ ತುಂಬಿ ಬ್ರಹ್ಮಾಂಡ ಕಟಾಹವನ್ನು ವ್ಯಾಪಿಸಿತು (೮):

ತದಾಪತದ್ ವೈ ತ್ರಿಶಿಖಂ ಗುರತ್ಮತೇ
ಹರಿಃ ಶರಾಭ್ಯಾಮಭಿನತ್ತ್ರಿಧೌಜಸಾ ।
ಮುಖೇಷು ತಂ ಚಾಪಿ ಶರೈರತಾಡಯತ್
ತಸ್ಮೈಗದಾಂ ಸೋಽಪಿ ರುಷಾ ವ್ಯಮುಂಚತ ॥ ೯

ತಾಮಾಪತಂತೀಂ ಗದಯಾ ಗದಾಂ ಮೃಧೇ
ಗದಾಗ್ರಜೋ ನಿರ್ಬಿಭಿದೇ ಸಹಸ್ರಧಾ ।
ಉದ್ಯಮ್ಯ ಬಾಹೂನಭಿಧಾವತೋಽಜಿತಃ
ಶಿರಾಂಸಿ ಚಕ್ರೇಣ ಜಹಾರ ಲೀಲಯಾ ॥ ೧೦

ವ್ಯಸುಃ ಪಪಾತಾಂಭಸಿ ಕೃತ್ತಶೀರ್ಷೋ
ನಿಕೃತ್ತಶೃಂಗೋಽದ್ರಿರಿವೇಂದ್ರ ತೇಜಸಾ ।
ತಸ್ಯಾತ್ಮಜಾಃ ಸಪ್ತ ಪಿತುರ್ವಧಾತುರಾಃ
ಪ್ರತಿಕ್ರಿಯಾಮರ್ಷಜುಷಃ ಸಮುದ್ಯತಾಃ ॥ ೧೧

ತಾಮ್ರೋಽಂತರಿಕ್ಷಃ ಶ್ರವಣೋ ವಿಭಾವಸು
ರ್ವಸುರ್ನಭಸ್ವಾನರುಣಶ್ಚ ಸಪ್ತಮಃ ।
ಪೀಠಂ ಪುರಸ್ಕೃತ್ಯ ಚಮೂಪತಿಂ ಮೃಧೇ
ಭೌಮಪ್ರಯುಕ್ತಾ ನಿರಗನ್ ಧೃತಾಯುಧಾಃ । ೧೨

ಗರುಡನ ಮೇಲೆ ಎರಗಿದ ಆ ತ್ರಿಶೂಲವನ್ನು ಶ್ರೀಹರಿಯು ಎರಡು ಬಾಣಗಳನ್ನು ಬಲವಾಗಿ ಪ್ರಯೋಗಿಸಿ ಮೂರು ಚೂರುಗಳಾಗಿ ತುಂಡರಿಸಿದನು. ಅಲ್ಲದೆ ಮುರಾಸುರನ ಐದು ಮುಖಗಳಿಗೂ ಶರಗಳಿಂದ ಬಿಗಿದನು. ಅಸುರನು ಗದೆಯನ್ನು ಶ್ರೀಕೃಷ್ಣನ ಮೇಲೆ ಬೀಸಿದನು (೯). ಯುದ್ಧರಂಗದಲ್ಲಿ ರಭಸದಿಂದ ಬರುತ್ತಿದ್ದ ಆ ಗದೆಯನ್ನು ಗದಾಗ್ರಜನಾದ ಹರಿಯು ತನ್ನ ಗದೆಯಿಂದ ಬಡಿದು ಸಾವಿರ ಚೂರುಗಳಾಗಿ ಒಡೆದು ಹಾಕಿದನು. ಆಗ ದೈತ್ಯನು ಕೈಗಳನ್ನೆತ್ತಿಕೊಂಡು ನುಗ್ಗಿ ಬರಲಾಗಿ, ಶ್ರೀಕೃಷ್ಣನು ಚಕ್ರಾಯುಧದಿಂದ ಮುರನ ಶಿರಸ್ಸುಗಳನ್ನು ಲೀಲೆಯಿಂದಲೇ ಕತ್ತರಿಸಿದನು (೧೦). ತಲೆಗಳು ಕತ್ತರಿಸಿಹೋಗಲಾಗಿ ಆ ದೈತ್ಯನು, ಇಂದ್ರನ ಪರಾಕ್ರಮದಿಂದ ಕತ್ತರಿಸಲ್ಪಟ್ಟ ಶಿಖರವುಳ್ಳ ಪರ್ವತದಂತೆ, ನೀರಿನಲ್ಲಿ ಸತ್ತುಬಿದ್ದನು (೧೧). ತಂದೆಯ ಮರಣದಿಂದ ಖಿನ್ನರಾದ ಅವನ ಏಳು

ಪ್ರಾಯುಂಜತಾಸಾದ್ಯ ಶರಾನಸೀನ್ ಗದಾಃ
ಶಕ್ತ್ಯೃಷ್ಟಿಶೂಲಾನ್ಯಜಿತೇ ರುಷೋಲ್ಬಣಾಃ ।
ತಚ್ಛಸ್ತ್ರಕೂಟಂ ಭಗವಾನ್ ಸ್ವಮಾರ್ಗಣೈ-
ರಮೋಘವೀರ್ಯಸ್ತಿಲಶಶ್ಚಕರ್ತ ಹ ॥ ೧೩

ತಾನ್ ಪೀಠಮುಖ್ಯಾನನಯದ್ ಯಮಕ್ಷಯಂ
ನಿಕೃತ್ತಶೀರ್ಷೋರುಭುಜಾಂಘ್ರಿವರ್ಮಣಃ ।
ಸ್ವಾನೀಕಪಾನಚ್ಯುತಚಕ್ರಸಾಯಕೈ-
ಸ್ತಥಾ ನಿರಸ್ತಾನ್ ನರಕೋ ಧರಾಸುತಃ ॥ ೧೪

ಜನ ಮಕ್ಕಳು ಸೇಡುತೀರಿಸಿಕೊಳ್ಳಬೇಕೆಂದು ಕ್ರೋಧೋದ್ರಿಕ್ತರಾಗಿ ಯುದ್ಧಕ್ಕೆ ಸಂನದ್ಧರಾದರು. ತಾಮ್ರ, ಅಂತರಿಕ್ಷ, ಶ್ರವಣ, ವಿಭಾವಸು, ವಸು, ನಭಸ್ವಾನ್, ಅರುಣ– ಎಂಬ ಆ ಏಳು ಜನರು ನರಕಾಸುರನಿಂದ ಪ್ರೇರಿತರಾಗಿ ಪೀಠ ಎಂಬುವನನ್ನು ಸೇನಾಧಿಪತಿಯಾಗಿ ಮಾಡಿಕೊಂಡು, ಆಯುಧಗಳನ್ನು ಧರಿಸಿ ರಣಭೂಮಿಗೆ ಬಂದರು (೧೨). ಅವರು ಶ್ರೀಕೃಷ್ಣನನ್ನೆದುರಿಸಿ ಬಾಣ, ಕತ್ತಿ, ಗದೆ, ಶಕ್ತಿ, ಭರ್ಜಿ, ಶೂಲ-ಮುಂತಾದ ಆಯುಧಗಳನ್ನು ಕ್ರೋಧಾವಿಷ್ಟರಾಗಿ ಪ್ರಯೋಗಿಸಿದರು. ಅಮೋಘ ಪರಾಕ್ರಮಿಯಾದ ಭಗವಂತನು ಆ ಶಸ್ತ್ರಸಮುದಾಯಗಳನ್ನು ತನ್ನ ಶರಗಳಿಂದ ಚೂರುಚೂರಾಗಿ ಕತ್ತರಿಸಿದನು (೧೩). ಅಲ್ಲದೆ ಪೀಠನೇ ಮೊದಲಾದ ಎಲ್ಲರ ತಲೆ, ತೊಡೆ, ತೋಳು, ಕಾಲು, ಕವಚಗಳನ್ನು ತುಂಡರಿಸಿ ಅವರನ್ನು ಯಮಲೋಕಕ್ಕೆ ಅಟ್ಟಿದನು. ಹೀಗೆ ಅಚ್ಯುತನ ಚಕ್ರದಿಂದಲೂ ಶರಗಳಿಂದಲೂ ತನ್ನ ಸೇನಾಪತಿಗಳು ಹತರಾದುದನ್ನು ಕಂಡು ಭೂಮಿಪುತ್ರನಾದ ನರಕಾಸುರನು ಸಹಿಸಲಾರದೆ ಮದೋದಕವನ್ನು ಸುರಿಸುವ ಸಮುದ್ರಜಾತಗಳಾದ ಆನೆಗಳೊಡನೆ ಯುದ್ಧಕ್ಕೆ ಹೊರಟನು. ಸೂರ್ಯನ ಮೇಲ್ಭಾಗದಲ್ಲಿ ಮಿಂಚಿನೊಡನಿರುವ ಮೇಘದಂತೆ, ಗರುಡನ ಮೇಲೆ ಸತ್ಯಭಾಮಾಸಹಿತನಾಗಿ ಕುಳಿತಿದ್ದ ಶ್ರೀಕೃಷ್ಣನನ್ನು ನೋಡಿ ನರಕಾಸುರನು ಆತನ ಮೇಲೆ ಶತಘ್ನಿಯೆಂಬ ಆಯುಧವನ್ನು ಪ್ರಯೋಗಿಸಿದನು. ಅವನ ಭಟರೂ

ನಿರೀಕ್ಷ್ಯ ದುರ್ಮರ್ಷಣ ಆಸ್ರವನ್ಮದೈ-
ರ್ಗಜೈಃ ಪಯೋಧಿಪ್ರಭವೈರ್ನಿರಾಕ್ರಮತ್ ।
ದೃಷ್ಟ್ವಾ ಸಭಾರ್ಯಂ ಗರುಡೋಪರಿ ಸ್ಥಿತಂ
ಸೂರ್ಯೋಪರಿಷ್ಟಾತ್ ಸತಡಿದ್ಘನಂ ಯಥಾ ।
ಕೃಷ್ಣಂ ಸ ತಸ್ಮೈ ವ್ಯಸೃಜಚ್ಛತಘ್ನೀಂ
ಯೋಧಾಶ್ಚ ಸರ್ವೇ ಯುಗಪತ್ ಸ್ಮ ವಿವ್ಯಧುಃ ॥ ೧೫

ತದ್ ಭೌಮಸೈನ್ಯಂ ಭಗವಾನ್ ಗದಾಗ್ರಜೋ
ವಿಚಿತ್ರವಾಜೈರ್ನಿಶಿತೈಃ ಶಿಲೀಮುಖೈಃ ।
ನಿಕೃತ್ತಬಾಹೂರುಶಿರೋಧ್ರವಿಗ್ರಹಂ
ಚಕಾರ ತರ್ಹ್ಯೇವ ಹತಾಶ್ವಕುಂಜರಮ್ ॥ ೧೬

ಯಾನಿ ಯೋಧೈಃ ಪ್ರಯುಕ್ತಾನಿ ಶಸ್ತ್ರಾಸ್ತ್ರಾಣಿ ಕುರೂದ್ವಹ ।
ಹರಿಸ್ತಾನ್ಯಚ್ಛಿನತ್ತೀಕ್ಷ್ಣೈಃ ಶರೈರೇಕೈಕಶಸ್ತ್ರಿಭಿಃ ॥ ೧೭

ಉಹ್ಯಮಾನಃ ಸುಪರ್ಣೇನ ಪಕ್ಷಾಭ್ಯಾಂ ನಿಘ್ನತಾ ಗಜಾನ್ ।
ಗರುತ್ಮತಾ ಹನ್ಯಮಾನಾಸ್ತುಂಡಪಕ್ಷನಖೈರ್ಗಜಾಃ ॥ ೧೮

ಪುರಮೇವಾವಿಶನ್ನಾರ್ತಾ ನರಕೋ ಯುಧ್ಯಯುಧ್ಯತ ।
ದೃಷ್ಟ್ವಾ ವಿದ್ರಾವಿತಂ ಸೈನ್ಯಂ ಗರುಡೇನಾರ್ದಿತಂ ಸ್ವಕಮ್ ॥ ೧೯

ಒಮ್ಮೆಯೇ ಬಾಣಗಳ ಮಳೆಗರೆದರು (೧೪-೧೫). ಶ್ರೀಕೃಷ್ಣನು ಬಣ್ಣ ಬಣ್ಣದ ಪುಂಖಗಳಿಂದ ಕೂಡಿದ ನಿಶಿತಾಸ್ತ್ರಗಳಿಂದ ರಾಕ್ಷಸರ ಸೇನೆಯನ್ನೂ ಅಶ್ವಕುಂಜರಗಳನ್ನೂ ಹೊಡೆದು ತೋಳು, ತೊಡೆ, ಕತ್ತು, ದೇಹಗಳನ್ನು ಕತ್ತರಿಸಿ ಕೊಂದುಹಾಕಿದನು (೧೬). ಪರೀಕ್ಷಿತರಾಜ, ಗರುಡನ ಮೇಲೆ ಕುಳಿತಿದ್ದ ಶ್ರೀಹರಿಯು ಯೋಧರಿಂದ ಪ್ರಯೋಗಿಸಲ್ಪಟ್ಟ ಶಸ್ತ್ರಾಸ್ತ್ರಗಳನ್ನು ಮೂರು ಮೂರು ನಿಶಿತಾಸ್ತ್ರಗಳಿಂದ ಕೊಚ್ಚಿಹಾಕಿದನು (೧೭). ಗರುಡನೂ ಸಹ ಆನೆಗಳನ್ನೂ ತನ್ನ ರೆಕ್ಕೆಗಳಿಂದ ಬಡಿದು ಕೊಕ್ಕಿನಿಂದ ಕುಕ್ಕಿ ಉಗುರುಗಳಿಂದ ಪರಚಿ ಧ್ವಂಸ ಮಾಡುತ್ತಿರಲು, ಪೀಡೆಗೊಳಗಾದ ಆನೆಗಳು ಹಿಂದಿರುಗಿ ನಗರದೊಳಗೆ ಹೋದವು! ಹೀಗೆ ಗರುಡನಿಂದ ಸೈನ್ಯವು ಪಲಾಯನ ಮಾಡಲಾಗಿ ನರಕಾಸುರನು

ತಂ ಭೌಮಃ ಪ್ರಾಹರಚ್ಛಕ್ತ್ಯಾ ವಜ್ರಃ ಪ್ರತಿಹತೋ ಯತಃ ।
ನಾಕಂಪತ ತಯಾ ವಿದ್ಧೋ ಮಾಲಾಹತ ಇವ ದ್ವಿಪಃ ॥ ೨೦

ಶೂಲಂ ಭೌಮೋಽಚ್ಯುತಂ ಹಂತುಮಾದದೇ ವಿತಥೋದ್ಯಮಃ ।
ತದ್ವಿಸರ್ಗಾತ್ ಪೂರ್ವಮೇವ ನರಕಸ್ಯ ಶಿರೋ ಹರಿಃ ।
ಅಪಾಹರದ್ ಗಜಸ್ಥಸ್ಯ ಚಕ್ರೇಣ ಕ್ಷುರನೇಮಿನಾ ॥ ೨೧

ಸಕುಂಡಲಂ ಚಾರುಕಿರೀಟಭೂಷಣಂ
ಬಭೌ ಪೃಥಿವ್ಯಾಂ ಪತಿತಂ ಸಮುಜ್ಜ್ವಲತ್ ।
ಹಾಹೇತಿ ಸಾಧ್ವಿತ್ಯೃಷಯಃ ಸುರೇಶ್ವರಾ
ಮಾಲ್ಯೈರ್ಮುಕುಂದಂ ವಿಕಿರಂತ ಈಡಿರೇ ॥ ೨೨

ತತಶ್ಚ ಭೂಃ ಕೃಷ್ಣಮುಪೇತ್ಯ ಕುಂಡಲೇ
ಪ್ರತಪ್ತಜಾಂಬೂನದರತ್ನಭಾಸ್ವರೇ ।
ಸವೈಜಯಂತ್ಯಾ ವನಮಾಲಯಾರ್ಪಯತ್
ಪ್ರಾಚೇತಸಂ ಛತ್ರಮಥೋ ಮಹಾಮಣಿಮ್ ॥ ೨೩

ಯುದ್ಧಕ್ಕೆ ಬಂದನು (೧೮-೧೯). ಯಾವುದರಿಂದ ಇಂದ್ರನ ವಜ್ರಾಯುಧವೂ ಪ್ರತಿಹತವಾಗಿತ್ತೋ ಅಂತಹ ಶಕ್ತ್ಯಾಯುಧದಿಂದ ನರಕಾಸುರನು ಗರುಡನನ್ನು ಅಪ್ಪಳಿಸಿದನು. ಹಾಗೆ ಅಪ್ಪಳಿಸಿದರೂ ಹೂಮಾಲೆಯಿಂದ ಆನೆಗೆ ಹೊಡೆದಂತಾಗಿ ಗರುಡನು ಅಲ್ಲಾಡಲಿಲ್ಲ! (೨೦). ತನ್ನ ಪ್ರಯತ್ನವು ವ್ಯರ್ಥವಾಗಲು ನರಕಾಸುರನು ಅಚ್ಯುತನನ್ನು ಕೊಲ್ಲಬೇಕೆಂದು ಶೂಲವನ್ನೆತ್ತಿದನು. ಅದನ್ನು ಪ್ರಯೋಗಿಸುವುದಕ್ಕೆ ಮೊದಲೇ ಶ್ರೀಕೃಷ್ಣನು ಆನೆಯ ಮೇಲೆ ಕುಳಿತಿದ್ದ ನಕರಾಸುರನ ಶಿರಸ್ಸನ್ನು ತೀಕ್ಷ್ಣ ಧಾರೆಯುಳ್ಳ ಚಕ್ರದಿಂದ ತರಿದನು (೨೧). ಕುಂಡಲಾಲಂಕೃತವೂ ಸುಂದರಕಿರೀಟ ಭೂಷಿತವೂ ತೇಜೋವಿಶಿಷ್ಟವೂ ಆದ ಶಿರಸ್ಸು ನೆಲದಮೇಲುರುಳಿತು. 'ಹಾ ಹಾ ! ಭಲಾ ! 'ಎಂದು ಋಷಿಗಳೂ ದೇವತೆಗಳೂ ಉದ್ಗರಿಸಿ ಮುಕುಂದನ ಮೇಲೆ ಹೂಮಳೆಗರೆಯುತ್ತ ಕೊಂಡಾಡಿದರು (೨೨). ಅನಂತರ ಭೂದೇವಿಯು ಶ್ರೀಕೃಷ್ಣನ ಸಮೀಪಕ್ಕೆ ಬಂದು ಬಂಗಾರದಿಂದಲೂ ರತ್ನಗಳಿಂದಲೂ ಉಜ್ಜ್ವಲವಾದ (ಅದಿತಿಯ) ಕುಂಡಲಗಳನ್ನೂ ವರುಣನ ಛತ್ರವನ್ನೂ ಮಣಿಪರ್ವತವನ್ನೂ ವೈಜಯಂತಿಯೆಂಬ ವನಮಾಲೆಯೊಡನೆ ಆತನಿಗೆ ಅರ್ಪಿಸಿದಳು (೨೩).

ಅಸ್ತೌಷೀದಥ ವಿಶ್ವೇಶಂ ದೇವೀ ದೇವವರಾರ್ಚಿತಮ್ ।
ಪ್ರಾಂಜಲಿಃ ಪ್ರಣತಾ ರಾಜನ್ ಭಕ್ತಿಪ್ರವಣಯಾ ಧಿಯಾ ॥ ೨೪

ಭೂಮಿರುವಾಚ-

ನಮಸ್ತೇ ದೇವದೇವೇಶ ಶಂಖಚಕ್ರಗಧಾಧರ ।
ಭಕ್ತೇಚ್ಛೋಪಾತ್ತರೂಪಾಯ ಪರಮಾತ್ಮನ್ ನಮೋಽಸ್ತು ತೇ ॥ ೨೫

ನಮಃ ಪಂಕಜನಾಭಾಯ ನಮಃ ಪಂಕಜಮಾಲಿನೇ ।
ನಮಃ ಪಂಕಜನೇತ್ರಾಯ ನಮಸ್ತೇ ಪಂಕಜಾಂಘ್ರಯೇ ॥ ೨೬

ನಮೋ ಭಗವತೇ ತುಭ್ಯಂ ವಾಸುದೇವಾಯ ವಿಷ್ಣವೇ ।
ಪುರುಷಾಯಾದಿಬೀಜಾಯ ಪೂರ್ಣಬೋಧಾಯ ತೇ ನಮಃ ॥ ೨೭

ಅಜಾಯ ಜನಯಿತ್ರೇಽಸ್ಯ ಬ್ರಹ್ಮಣೇಽನಂತಶಕ್ತಯೇ ।
ಪರಾವರಾತ್ಮನ್ ಭೂತಾತ್ಮನ್ ಪರಮಾತ್ಮನ್ ನಮೋಽಸ್ತು ತೇ ॥ ೨೮

ತ್ವಂ ವೈ ಸಿಸೃಕ್ಷೂ ರಜ ಉತ್ಕಟಂ ಪ್ರಭೋ
ತಮೋ ನಿರೋಧಾಯ ಬಿಭರ್ಷ್ಯಸಂವೃತಃ ।
ಸ್ಥಾನಾಯ ಸತ್ತ್ವಂ ಜಗತೋ ಜಗತ್ಪತೇ
ಕಾಲಃ ಪ್ರಧಾನಂ ಪುರುಷೋ ಭವಾನ್ ಪರಃ ॥ ೨೯

ಪರೀಕ್ಷಿತರಾಜ, ಅನಂತರ ಭೂದೇವಿಯು ದೇವಪೂಜಿತನೂ ವಿಶ್ವೇಶನೂ ಆದ ಶ್ರೀಕೃಷ್ಣನಿಗೆ ನಮಸ್ಕರಿಸಿ ಭಕ್ತಿ ಪೂರ್ವಕವಾದ ಮನಸ್ಸಿನಿಂದ ಕೈಮುಗಿದುಕೊಂಡು ಸ್ತೋತ್ರಮಾಡಿದಳು (೨೪). ''ದೇವದೇವೇಶ, ಶಂಕಚಕ್ರಗದಾಧರ, ನಿನಗೆ ನಮಸ್ಕಾರ. ಭಕ್ತರ ಬಯಕೆಯಂತೆ ರೂಪವನ್ನು ಧರಿಸಿ ಅವತರಿಸುವ ಪರಮಾತ್ಮನೆ, ನಿನಗೆ ನಮಸ್ಕಾರವಿರಲಿ (೨೫). ನಮಃ ಪಂಕಜನಾಭಾಯ ನಮಃ ಪಂಕಜಮಾಲಿನೇ. ನಮಃ ಪಂಕಜನೇತ್ರಾಯ ನಮಸ್ತೇ ಪಂಕಜಾಂಘ್ರಯೇ (೨೬). ನಮೋ ಭಗವತೇ ತುಭ್ಯಂ ವಾಸುದೇವಾಯ ವಿಷ್ಣವೇ. ಜಗತ್ಕಾರಣಕ್ಕೆ ಕಾರಣನೂ ಸರ್ವಜ್ಞನೂ ಪರಮಪುರುಷನೂ ಆದ ನಿನಗೆ ನಮಸ್ಕಾರ (೨೭). ಜನ್ಮರಹಿತನೂ ಜಗತ್ತಿಗೆ ಜನ್ಮದಾತನೂ ಅನಂತಶಕ್ತಿಯೂ ಆದ ಬ್ರಹ್ಮವಸ್ತುವಿಗೆ ನಮಸ್ಕಾರ. ಪೂರ್ವಪರವಸ್ತುಗಳೆಲ್ಲದರ ಆತ್ಮಸ್ವರೂಪನೆ, ಪರಮಾತ್ಮನೆ ನಿನಗೆ ನಮಸ್ಕಾರ (೨೮). ಸ್ವಾಮಿ, ಪ್ರಪಂಚವನ್ನು ಸೃಜಿಸುವುದಕ್ಕಾಗಿ

ಅಹಂ ಪಯೋಜ್ಯೋತಿರಥಾನಿಲೋ ನಭೋ
ಮಾತ್ರಾಣಿ ದೇವಾ ಮನ ಇಂದ್ರಿಯಾಣಿ ।
ಕರ್ತಾ ಮಹಾನಿತ್ಯಖಿಲಂ ಚರಾಚರಂ
ತ್ವಯ್ಯದ್ವಿತೀಯೇ ಭಗವನ್ನಯಂ ಭ್ರಮಃ ॥ ೩೦
ತಸ್ಯಾತ್ಮಜೋಽಯಂ ತವ ಪಾದಪಂಕಜಂ
ಭೀತಃ ಪ್ರಪನ್ನಾರ್ತಿಹರೋಪಸಾದಿತಃ ।
ತತ್ ಪಾಲಯೈನಂ ಕುರು ಹಸ್ತಪಂಕಜಂ
ಶಿರಸ್ಯಮುಷ್ಯಾಖಿಲಕಲ್ಮಷಾಪಹಮ್ ॥ ೩೧

ಶ್ರೀ ಶುಕ ಉವಾಚ-

ಇತಿ ಭೂಮ್ಯಾರ್ಥಿತೋ ವಾಗ್ಭಿರ್ಭಗವಾನ್ ಭಕ್ತಿನಮ್ರಯಾ ।
ದತ್ತ್ವಾಭಯಂ ಭೌಮಗೃಹಂ ಪ್ರಾವಿಶತ್ ಸಕಲರ್ದ್ಧಿಮತ್ ॥ ೩೨

ಕೆರಳಿದ ರಜೋಗುಣವನ್ನೂ ಅದರ ಲಯಕ್ಕಾಗಿ ಉತ್ಕಟವಾದ ತಮೋಗುಣವನ್ನೂ ರಕ್ಷಣೆಗಾಗಿ ಅಧಿಕವಾದ ಸತ್ತ್ವಗುಣವನ್ನೂ ಧರಿಸುತ್ತೀಯೆ. ಆದರೆ ಆ ಗುಣಗಳಿಂದ ನೀನು ಆಚ್ಛಾದಿತನಾಗಿರುವುದಿಲ್ಲ. ಹೇ ಜಗತ್ಪತಿ, ಕಾಲ, ಪ್ರಕೃತಿ, ಪುರುಷ-ಇವುಗಳೂ ನೀನೇ, ಅವುಗಳಿಂದ ವ್ಯತಿರಿಕ್ತನಾದ ಪರಮಪುರುಷನೂ ನೀನೇ (೨೯). ಹೇ ಭಗವನ್, ನಾನು (ಭೂಮಿ), ಜಲ, ತೇಜಸ್ಸು, ವಾಯು, ಆಕಾಶಗಳೆಂಬ ಮಹಾಭೂತಗಳು ಶಬ್ದಾದಿ ಪಂಚತನ್ಮಾತ್ರೆಗಳೂ (ಇಂದ್ರಿಯಾಭಿಮಾನಿ) ದೇವತೆಗಳೂ ಮನಸ್ಸೂ ಇಂದ್ರಿಯಗಳೂ ಕರ್ತನೆನಿಸಿದ ಜೀವನೂ ಮಹತ್ತತ್ತ್ವವೂ ಸೇರಿ ಸಮಸ್ತ ಚರಾಚರ ಪ್ರಪಂಚವೂ ಅದ್ವಿತೀಯನಾದ ನಿನ್ನಲ್ಲಿ ಕಲ್ಪಿತವಾದ್ದರಿಂದ ಭ್ರಮೆ-ಮಿಥ್ಯೆ (೩೦). ಶರಣಾಗತರ ಕಷ್ಟವನ್ನು ಪರಿಹರಿಸ ತಕ್ಕವನೆ, ಈತನು ಆ ನರಕನ ಮಗ-ಭಗದತ್ತ, ಇವನು ಭೀತನಾದ್ದರಿಂದ ನಿನ್ನ ಪಾದಕಮಲದ ಬಳಿಗೆ ಕರೆದುಕೊಂಡು ಬಂದಿದ್ದೇನೆ. ಇವನನ್ನು ಪಾಲಿಸು. ಸಕಲ ಪಾಪಪರಿಹಾರಕವಾದ ನಿನ್ನ ಪಾಣಿ ಪದ್ಮವನ್ನು ಈತನ ತಲೆಯ ಮೇಲಿಡು'' ಎಂದು ಪ್ರಾರ್ಥಿಸಿದಳು (೩೧). ಈ ಪ್ರಕಾರವಾದ ನುಡಿಗಳಿಂದ ಭಕ್ತಿನಮ್ರಳಾದ ಭೂದೇವಿಯು ಪ್ರಾರ್ಥಿಸಲಾಗಿ

ತತ್ರ ರಾಜನ್ಯಕನ್ಯಾನಾಂ ಷಟ್ಸಹಸ್ರಾಧಿಕಾಯುತಮ್ ।
ಭೌಮಾಹೃತಾನಾಂ ವಿಕ್ರಮ್ಯ ರಾಜಭ್ಯೋ ದದೃಶೇ ಹರಿಃ ॥ ೩೩

ತಂ ಪ್ರವಿಷ್ಟಂ ಸ್ತ್ರಿಯೋ ವೀಕ್ಷ್ಯ ನರವೀರಂ ವಿಮೋಹಿತಾಃ ।
ಮನಸಾ ವವ್ರಿರೇಽಭೀಷ್ಟಂ ಪತಿಂ ದೈವೋಪಸಾದಿತಮ್ ॥ ೩೪

ಭೂಯಾತ್ ಪತಿರಯಂ ಮಹ್ಯಂ ಧಾತಾ ತದನುಮೋದತಾಮ್ ।
ಇತಿ ಸರ್ವಾಃ ಪೃಥಕ್ ಕೃಷ್ಣೇ ಭಾವೇನ ಹೃದಯಂ ದಧುಃ ॥ ೩೫

ತಾಃ ಪ್ರಾಹಿಣೋದ್ ದ್ವಾರವತೀಂ ಸುಮೃಷ್ಟವಿರಜೋಽಂಬರಾಃ ।
ನರಯಾನೈರ್ಮಹಾಕೋಶಾನ್ ರಥಾಶ್ವಾನ್ ದ್ರವಿಣಂ ಮಹತ್ ॥ ೩೬

ಐರಾವತಕುಲೇಭಾಂಶ್ಚ ಚತುರ್ದಂತಾಂಸ್ತರಸ್ವಿನಃ ।
ಪಾಂಡುರಾಂಶ್ಚ ಚತುಃಷಷ್ಟಿಂ ಪ್ರೇಷಯಾಮಾಸ ಕೇಶವಃ ॥ ೩೭

ಗತ್ವಾಸುರೇಂದ್ರಭವನಂ ದತ್ವಾದಿತ್ಯೈ ಚ ಕುಂಡಲೇ ।
ಪೂಜಿತಸ್ತ್ರಿದಶೇಂದ್ರೇಣ ಸಹೇಂದ್ರಾಣ್ಯಾ ಚ ಸಪ್ರಿಯಃ ॥ ೩೮

ಭಗವಂತನು ಅಭಯವನ್ನಿತ್ತು ಸಕಲಸಂಪತ್ ಸಮೃದ್ಧವಾದ ನರಕಾಸುರನ ಅರಮನೆಯನ್ನು ಪ್ರವೇಶಿಸಿದನು (೩೨). ರಾಜರನ್ನು ಗೆದ್ದು ನರಕಾಸುರನು ಅಪಹರಿಸಿ ತಂದಿದ್ದ ಹದಿನಾರುಸಾವಿರ ರಾಜಕುಮಾರಿಯರನ್ನು ಶ್ರೀಕೃಷ್ಣನು ಅಲ್ಲಿ ಕಂಡನು. ಅರಮನೆಯೊಳಗೆ ಬಂದ ಆ ಪುರುಷೋತ್ತಮನನ್ನು ನೋಡಿ ಆ ಕುಮಾರಿಯರು ಮೋಹಿಸಿದರು. ದೈವವೇ ಅಭೀಷ್ಟನಾದ ವರನನ್ನು ಕರೆತಂದಿತೆಂದು ಆತನನ್ನು ಮನಸ್ಸಿನಲ್ಲಿ ವರಿಸಿದರು (೩೩-೩೪). 'ಈತನೇ ನನಗೆ ಪತಿಯಾಗಲಿ, ಬ್ರಹ್ಮನು ಇದಕ್ಕೆ ಸಂಮತಿಸಲಿ' ಎಂದು ಎಲ್ಲ ರಾಜಕುಮಾರಿಯರೂ ತಮ್ಮ ತಮ್ಮ ಹೃದಯದಲ್ಲಿ ಶ್ರೀಕೃಷ್ಣನ ವಿಷಯವಾಗಿ ಪತಿಭಾವವನ್ನು ತುಂಬಿಕೊಂಡರು (೩೫). ಆಮೇಲೆ ಕೇಶವನು ಶುಭ್ರವಸ್ತ್ರಭೂಷಿತರಾದ ಆ ಕನ್ಯೆಯರನ್ನು ಪಲ್ಲಕ್ಕಿಗಳಲ್ಲಿ ಕುಳ್ಳಿರಿಸಿ ಸೇವಕರಿಂದ ಹೊರಿಸಿ ದ್ವಾರಕೆಗೆ ಕಳಿಸಿಕೊಟ್ಟನು. ಅಲ್ಲದೆ ಜೊತೆಗೆ ರಥಾಶ್ವಗಳನ್ನೂ ಬಹಳ ಧನವನ್ನೂ ಐರಾವತಕುಲದಲ್ಲಿ ಜನಿಸಿದವೂ ನಾಲ್ಕು ದಂತಗಳಿರತಕ್ಕವೂ ವೇಗಶಾಲಿಗಳೂ ಬಿಳಿಯಬಣ್ಣದವೂ ಆದ ಅರುವತ್ತುನಾಲ್ಕು ಆನೆಗಳನ್ನೂ ಕಳಿಸಿದನು (೩೬-೩೭).

ಚೋದಿತೋ ಭಾರ್ಯಯೋತ್ಪಾಟ್ಯ ಪಾರಿಜಾತಂ ಗರುತ್ಮತಿ ।
ಆರೋಪ್ಯ ಸೇಂದ್ರಾನ್ ವಿಬುಧಾನ್ ನಿರ್ಜಿತ್ಯೋಪಾನಯತ್
ಪುರಮ್ ॥ ೩೯

ಸ್ಥಾಪಿತಃ ಸತ್ಯಭಾಮಾಯಾ ಗೃಹೋದ್ಯಾನೋಪಶೋಭನಃ ।
ಅನ್ವಗುರ್ಭ್ರಮರಾಃ ಸ್ವರ್ಗಾತ್ ತದ್ಗಂಧಾಸವಲಂಪಟಾಃ ॥ ೪೦

ಯಯಾಚ ಆನಮ್ಯ ಕಿರೀಟಕೋಟಿಭಿಃ
ಪಾದೌ ಸ್ಪೃಶನ್ನಚ್ಯುತಮರ್ಥಸಾಧನಮ್ ।
ಸಿದ್ಧಾರ್ಥ ಏತೇನ ವಿಗೃಹ್ಯತೇ ಮಹಾ-
ನಹೋ ಸುರಾಣಾಂ ಚ ತಮೋ ಧಿಗಾಢ್ಯತಾಮ್ ॥ ೪೧

ಅಥೋ ಮುಹೂರ್ತ ಏಕಸ್ಮಿನ್ ನಾನಾಗಾರೇಷು ತಾಃ ಸ್ತ್ರಿಯಃ ।
ಯಥೋಪಯೇಮೇ ಭಗವಾಂಸ್ತಾವದ್ರೂಪಧರೋಽವ್ಯಯಃ ॥ ೪೨

ಅನಂತರ ಸತ್ಯಭಾಮಾ ಸಹಿತನಾಗಿ ಸ್ವರ್ಗಲೋಕಕ್ಕೆ ಹೋಗಿ ಅದಿತಿಗೆ ಅವಳ ಕುಂಡಲಗಳನ್ನು ಕೊಟ್ಟನು. ದೇವೇಂದ್ರನಿಂದಲೂ ಶಚೀದೇವಿಯಿಂದಲೂ ಪೂಜಿತನಾದನು. ಅಲ್ಲದೆ ಸತ್ಯಭಾಮೆಯ ಪ್ರೇರಣೆಯಂತೆ ಪಾರಿಜಾತ ವೃಕ್ಷವನ್ನು ಕಿತ್ತು ಗರುಡನ ಮೇಲೆ ಇರಿಸಿದನು. ಆಗ ಅಡ್ಡಿ ಪಡಿಸಿದ ಇಂದ್ರನನ್ನೂ ದೇವತೆಗಳನ್ನೂ ಯುದ್ಧದಲ್ಲಿ ಸೋಲಿಸಿ ಪಾರಿಜಾತವೃಕ್ಷವನ್ನು ದ್ವಾರಕಾಪುರಿಗೆ ಒಯ್ದನು (೩೮-೩೯). ಆ ವೃಕ್ಷವನ್ನು ಸತ್ಯಭಾಮೆಯ ಗೃಹೋದ್ಯಾನದಲ್ಲಿ ಅದಕ್ಕೆ ಶೋಭಾವಹವಾಗುವಂತೆ ನೆಡಿಸಿದನು. ಪಾರಿಜಾತಪುಷ್ಪಗಳ ಸುಗಂಧಪೂರ್ಣ ಮಕರಂದಕ್ಕೆ ಮರುಳಾಗಿ ದುಂಬಿಗಳು ಸ್ವರ್ಗಲೋಕದಿಂದ ಬರುತ್ತಿದ್ದವು! (೪೦). ಪರೀಕ್ಷಿತ, ನೋಡು ; ದೇವೇಂದ್ರನು ತನ್ನ ಕಾರ್ಯಸಾಧನೆಗೋಸ್ಕರ ಶ್ರೀಕೃಷ್ಣನಿಗೆ ತಲೆಬಾಗಿ ತನ್ನ ಕಿರೀಟಾಗ್ರಗಳಿಂದ ಆತನ ಪಾದಗಳನ್ನು ಮುಟ್ಟಿ ಬೇಡಿಕೊಂಡಿದ್ದನು. ತನ್ನ ಕಾರ್ಯವು ಸಿದ್ಧಿಸಿದ ಮೇಲೆ ದೊಡ್ಡವನಾದರೂ ಶ್ರೀಕೃಷ್ಣನೊಡನೆಯೇ ಯುದ್ಧಕ್ಕೆ ನಿಂತನು ! ದೇವತೆಗಳಿಗೂ ಏನು ತಮೋಗುಣ ! ಈ ಶ್ರೀಮಂತಿಕೆಗೆ ಧಿಕ್ಕಾರ ! (೪೧). ಅನಂತರ ಅವ್ಯಯನಾದ ಭಗವಂತನು ಬೇರೆ ಬೇರೆ ಮನೆಗಳಲ್ಲಿದ್ದ

ಗೃಹೇಷು ತಾಸಾಮನಪಾಯ್ಯತರ್ಕ್ಯಕೃ-
ನ್ನಿರಸ್ತಸಾಮ್ಯಾತಿಶಯೇಷ್ವವಸ್ಥಿತಃ।
ರೇಮೇ ಸಮಾಭಿರ್ನಿಜಕಾಮಸಂಪ್ಲುತೋ
ಯಥೇತರೋ ಗಾರ್ಹಕಮೇಧಿಕಾಂಶ್ಚರನ್॥ ೪೩

ಇತ್ಥಂ ರಮಾಪತಿಮವಾಪ್ಯ ಪತಿಂ ಸ್ತ್ರಿಯಸ್ತಾ
ಬ್ರಹ್ಮಾದಯೋಽಪಿ ನ ವಿದುಃ ಪದವೀಂ ಯದೀಯಾಮ್
ಭೇಜುರ್ಮುದಾ ವಿರತಮೇಧಿತಯಾನುರಾಗ-
ಹಾಸಾವಲೋಕನವಸಂಗಮಜಲ್ಪಲಜ್ಜಾಃ। ೪೪

ಪ್ರತ್ಯುದ್ಗಮಾಸನವರಾರ್ಹಣಪಾದಶೌಚ-
ತಾಂಬೂಲವಿಶ್ರಮಣವೀಜನಗಂಧಮಾಲ್ಯೈಃ।

ಆ ಹದಿನಾರು ಸಾವಿರ ಕನ್ಯೆಯರನ್ನು ಸ್ವತಃ ನಾನಾ ರೂಪಗಳನ್ನು ಧರಿಸಿ ಒಂದೇ ಮುಹೂರ್ತದಲ್ಲಿಮದುವೆಯಾದನು (೪೨). ನಾಶರಹಿತನೂ ಊಹಾತೀತವಾದ ಕಾರ್ಯವನ್ನು ನಡೆಸಬಲ್ಲವನೂ ಆದ ಶ್ರೀಕೃಷ್ಣನು ಹೆಚ್ಚುಕಡಿಮೆಯಿಲ್ಲದೆ ಸಮಾನ ಸಂಪತ್ತುಗಳಿಂದ ಕೂಡಿದ ಭವನಗಳಲ್ಲಿ ವಾಸಿಸುತ್ತಿದ್ದ ಮತ್ತು ಲಕ್ಷ್ಮೀದೇವಿಯ ಅಂಶಸಂಭೂತರಾದ ಹದಿನಾರುಸಾವಿರ ರಾಜಪುತ್ರಿಯರೊಡನೆ ಅನೇಕ ಶ್ರೀಕೃಷ್ಣರೂಪಗಳನ್ನು ಧರಿಸಿ, ಸ್ವಯಂ ನಿಜಾನಂದ ಪರಿಪೂರ್ಣನಾಗಿದ್ದರೂ ಒಬ್ಬ ಸಾಮಾನ್ಯ ಮನುಷ್ಯನಂತೆ ಗೃಹಸ್ಥಧರ್ಮವನ್ನು ಪಾಲಿಸುತ್ತ ವಿಹರಿಸಿದನು (೪೩). ಬ್ರಹ್ಮಾದಿಗಳೂ ಸಹ ಯಾವ ಭಗವಂತನ ಮಾರ್ಗವನ್ನರಿಯರೋ ಅಂತಹ ಲಕ್ಷ್ಮೀಪತಿಯನ್ನು ಪತಿಯನ್ನಾಗಿ ಪಡೆದ ಆ ಸ್ತ್ರೀಯರು ನಿರಂತರವಾಗಿ ವರ್ಧಿಸುವ ಆನಂದದಿಂದ ಕೂಡಿ ಅಕ್ಕರೆಯ ನಗೆನೋಟಗಳಿಂದಲೂ ನವಸಂಗಮದ ನುಡಿಯಲ್ಲಿನಾಚಿಕೆಯಿಂದಲೂ ಆತನೊಡನೆ ವಿಹರಿಸಿದರು (೪೪). ನೂರಾರು ದಾಸಿಯರಿದ್ದರೂ ಸಹ ಆ ರಾಜಕುಮಾರಿಯರು ಶ್ರೀಕೃಷ್ಣನು ಬಂದಾಗ ತಾವೇ ಎದ್ದು ಹೋಗಿ ಸ್ವಾಗತಿಸುವುದು, (ಆದರದಿಂದಲೂ ಭಯದಿಂದಲೂ) ಪೀಠವನ್ನಿತ್ತು ಕಾಲುತೊಳೆಯುವುದು, ತಾಂಬೂಲವನ್ನೀಯುವುದು, ವಿಶ್ರಮಿಸಲು ಸೌಕರ್ಯಮಾಡುವುದು, ಗಾಳಿಬೀಸುವುದು, ಗಂಧಮಾಲ್ಯಗಳನ್ನರ್ಪಿಸುವುದು,

ಕೇಶಪ್ರಸಾರಶಯನಸ್ನಪನೋಪಹಾರ್ಯೈ-
ರ್ದಾಸೀಶತಾ ಅಪಿ ವಿಭೋರ್ವಿದಧುಃ ಸ್ಮ ದಾಸ್ಯಮ್ ॥ ೪೫

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ಏಕೋನಷಷ್ಟಿತಮಾಧ್ಯಾಯಃ

ಷಷ್ಟಿತಮಾಧ್ಯಾಯಃ

ಶ್ರೀಶುಕ ಉವಾಚ-

ಕರ್ಹಿಚಿತ್ ಸುಖಮಾಸೀನಂ ಸ್ವತಲ್ಪಸ್ಥಂ ಜಗದ್ಗುರುಮ್ ।
ಪತಿಂ ಪರ್ಯಚರದ್ ಭೈಷ್ಮೀ ವ್ಯಜನೇನ ಸಖೀಜನೈಃ ॥ ೧

ಯಸ್ತ್ವೇತಲ್ಲೀಲಯಾ ವಿಶ್ವಂ ಸೃಜತ್ಯತ್ತ್ಯವತೀಶ್ವರಃ ।
ಸ ಹಿ ಜಾತಃ ಸ್ವಸೇತೂನಾಂ ಗೋಪೀನಾಥಾಯ ಯದುಷ್ವಜಃ ॥ ೨

ಕೇಶಾಲಂಕಾರಗೈಯ್ಯುವುದು, ಹಾಸಿಗೆ ಹಾಸುವುದು, ಸ್ನಾನಮಾಡಿಸುವುದು, ಆಹಾರಾದಿಗಳನ್ನೀಯುವುದು-ಇತ್ಯಾದಿ ಕಾರ್ಯಗಳಿಂದ ಪ್ರಭುವಿನ ಸೇವೆಗೈಯ್ಯುತ್ತಿದ್ದರು (೪೫).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಐವತ್ತೊಂಬತ್ತನೆಯ ಅಧ್ಯಾಯ

ಅಧ್ಯಾಯ ೬೦

ಶ್ರೀಕೃಷ್ಣ-ರುಕ್ಮಿಣಿಯರ ಪ್ರಣಯ ಕಲಹ

ಶ್ರೀಶುಕಮಹರ್ಷಿಗಳು ಹೇಳಿದರು : ಒಂದು ದಿನ ತನ್ನ ಮಂಚದಲ್ಲಿ ಸುಖವಾಗಿ ಕುಳಿತಿದ್ದ ಜಗದ್ಗುರುವಾದ ಪತಿಗೆ ರುಕ್ಮಿಣಿಯು ಬೀಸಣಿಗೆಯಿಂದ ಗಾಳಿಹಾಕುತ್ತಸಖಿಯರೊಡನೆ ಆತನನ್ನು ಉಪಚರಿಸುತ್ತಿದ್ದಳು (೧). ಯಾವ ಪ್ರಭು ಈ ವಿಶ್ವವನ್ನು ಲೀಲೆಯಿಂದ ಸೃಜಿಸಿ, ರಕ್ಷಿಸಿ, ನಾಶಮಾಡುವನೋ ಅಂತಹ ಜನ್ಮರಹಿತನಾದವನು ತಾನು ನಿರ್ಮಿಸಿದ ಧರ್ಮದ ಕಟ್ಟಳೆಗಳನ್ನು ರಕ್ಷಿಸುವುದಕ್ಕಾಗಿ ಯದುವಂಶದಲ್ಲಿ ಜನ್ಮವೆತ್ತಿದ್ದನಷ್ಟೆ. ಆತನಿದ್ದ ಅಂತಃಪುರವು ಮುತ್ತಿನ ಸರಗಳನ್ನು

ತಸ್ಮಿನ್ನಂತರ್ಗೃಹೇ ಭ್ರಾಜನ್ಮುಕ್ತಾದಾಮವಿಲಂಬಿನಾ ।
ವಿರಾಜಿತೇ ವಿತಾನೇನ ದೀಪೈರ್ಮಣಿಮಯೈರಪಿ ॥ ೩

ಮಲ್ಲಿಕಾದಾಮಭಿಃ ಪುಷ್ಪೈರ್ದ್ವಿರೇಫಕುಲನಾದಿತೈಃ ।
ಜಾಲರಂಧ್ರಪ್ರವಿಷ್ಟೈಶ್ಚ ಗೋಭಿಶ್ಚಂದ್ರಮಸೋಽಮಲೈಃ ॥ ೪

ಪಾರಿಜಾತವನಾಮೋದವಾಯುನೋದ್ಯಾನಶಾಲಿನಾ ।
ಧೂಪೈರಗುರುಜೈ ರಾಜನ್ ಜಾಲರಂಧ್ರವಿನಿರ್ಗತೈಃ ॥ ೫

ಪಯಃಫೇನನಿಭೇ ಶುಭ್ರೇ ಪರ್ಯಂಕೇ ಕಶಿಪೂತ್ತಮೇ ।
ಉಪತಸ್ಥೇ ಸುಖಾಸೀನಂ ಜಗತಾಮೀಶ್ವರಂ ಪತಿಮ್ ॥ ೬

ಬಾಲವ್ಯಜನಮಾದಾಯ ರತ್ನದಂಡಂ ಸಖೀಕರಾತ್ ।
ತೇನ ವೀಜಯತೀ ದೇವೀ ಉಪಾಸಾಂಚಕ್ರ ಈಶ್ವರಮ್ ॥ ೭

ಸೋಪಾಚ್ಯುತಂ ಕ್ವಣಯತೀ ಮಣಿನೂಪುರಾಭ್ಯಾಂ
ರೇಜೇಽಂಗುಲೀಯವಲಯವ್ಯಜನಾಗ್ರಹಸ್ತಾ ।
ವಸ್ತ್ರಾಂತಗೂಢಕುಚಕುಂಕುಮಶೋಣಹಾರ-
ಭಾಸಾ ನಿತಂಬಧೃತಯಾ ಚ ಪರಾರ್ಧ್ಯಕಾಂಚ್ಯಾ ॥ ೮

ತೂಗುಹಾಕಿದ ಮೇಲ್ಕಟ್ಟಿನಿಂದಲೂ ಮಣಿಮಯದೀಪಗಳಿಂದಲೂ ವಿರಾಜಿಸುತ್ತಿದ್ದಿತು (೨-೩). ಮಲ್ಲಿಗೆಯ ಸರಗಳಿಂದಲೂ ಬಿಡಿಹೂಗಳಿಂದಲೂ ವಿರಾಜಿತವಾದ ಅಂತಃಪುರದಲ್ಲಿ ದುಂಬಿಗಳು ಝೇಂಕರಿಸುತ್ತಿದ್ದವು. ಚಂದ್ರನ ಶುಭ್ರಕಿರಣಗಳು ಕಿಟಕಿಗಳ ರಂಧ್ರಗಳಿಂದ ಹಾದು ಒಳಗೆ ಹರಡಿದ್ದವು. ಗೃಹೋದ್ಯಾನದ ಪಾರಿಜಾತವೃಕ್ಷಗಳ ಮೇಲೆ ಬೀಸುತ್ತ ಬರುವ ಸುಗಂಧಿಯಾದ ಗಾಳಿಯೊಂದು ಕಡೆಯಾದರೆ, ಕಿಟಕಿಗಳ ರಂಧ್ರಗಳಿಂದ ಒಳಹೋಗುವ ಅಗರು ಧೂಪಗಳ ವಾಸನೆಯಿನ್ನೊಂದೆಡೆ (೪-೫). ಇಂತಹ ಅಂತಃಪುರದೊಳಗೆ ಮಂಚದಲ್ಲಿ ಹಾಲಿನನೊರೆಯಂತೆ ಶುಭ್ರವಾದ ಹಂಸತೂಲಿಕಾತಲ್ಪದಲ್ಲಿ ಮಂಡಿಸಿದ್ದ ಜಗದೀಶ್ವರನಾದ ತನ್ನ ಪತಿಯನ್ನು ರುಕ್ಮಿಣಿಯು ಸೇವಿಸುತ್ತಿದ್ದಳು. ರತ್ನಖಚಿತವಾದ ಹಿಡಿಯುಳ್ಳ ಬೀಸಣಿಗೆಯನ್ನು ತನ್ನ ಗೆಳತಿಯ ಕೈಯಿಂದ ತೆಗೆದುಕೊಂಡು ಗಾಳಿಹಾಕುತ್ತ ಆ ದೇವಿಯು ಸ್ವಾಮಿಯನ್ನು ಉಪಚರಿಸಿದಳು (೬-೭). ಮಣಿಮಯವಾದ ಕಾಲಂದುಗೆಗಳು ಗಲ್ ಗಲ್ ಎನ್ನುತ್ತಿರಲು,

ತಾಂ ರೂಪಿಣೀಂ ಶ್ರಿಯಮನನ್ಯಗತಿಂ ನಿರೀಕ್ಷ್ಯ
ಯಾ ಲೀಲಯಾ ಧೃತತನೋರನುರೂಪರೂಪಾ ।
ಪ್ರೀತಃ ಸ್ಮಯನ್ನಲಕಕುಂಡಲನಿಷ್ಕಕಂಠ-
ವಕ್ತ್ರೋಲ್ಲಸತ್ಸ್ಮಿತಸುಧಾಂ ಹರಿರಾಬಭಾಷೇ ॥ ೯

ಶ್ರೀ ಭಗವಾನುವಾಚ-
ರಾಜಪುತ್ರೀಪ್ಸಿತಾ ಭೂಪೈರ್ಲೋಕಪಾಲವಿಭೂತಿಭಿಃ ।
ಮಹಾನುಭಾವೈಃ ಶ್ರೀಮದ್ಭೀ ರೂಪೌದಾರ್ಯಬಲೋರ್ಜಿತೈಃ ॥ ೧೦

ತಾನ್ ಪ್ರಾಪ್ತಾನರ್ಥಿನೋ ಹಿತ್ವಾ ಚೈದ್ಯಾದೀನ್ ಸ್ಮರ ದುರ್ಮದಾನ್ ।
ದತ್ತಾ ಭ್ರಾತ್ರಾ ಸ್ವಪಿತ್ರಾ ಚ ಕಸ್ಮಾನ್ನೋ ವವೃಷೇಽಸಮಾನ್ ॥ ೧೧

ರಾಜಭ್ಯೋ ಬಿಭ್ಯತಃ ಸುಭ್ರೂಃ ಸಮುದ್ರಂ ಶರಣಂ ಗತಾನ್ ।
ಬಲವದ್ಭಿಃ ಕೃತದ್ವೇಷಾನ್ ಪ್ರಾಯಸ್ತ್ಯಕ್ತನೃಪಾಸನಾನ್ ॥ ೧೨

ಸೆರಗಿನಿಂದ ಮುಚ್ಚಿದ ಕುಚಗಳ ಕುಂಕುಮದಿಂದ ಕೆಂಪಾದ ಹಾರದ ಕಾಂತಿ ಹೊಮ್ಮುತ್ತಿರಲು, ಅನರ್ಘ್ಯವಾದ ಕಾಂಚಿಯು ನಿತಂಬದ ಮೇಲೆ ಚಲಿಸುತ್ತಿರಲು, ರುಕ್ಮಿಣೀದೇವಿಯು ಉಂಗುರಗಳಿಂದಲೂ ಕೈಬಳೆಗಳಿಂದಲೂ ಶೋಭಿಸುವ ಕೈಯಲ್ಲಿ ಬೀಸಣಿಗೆಯನ್ನು ಹಿಡಿದು ಅಚ್ಯುತನ ಬಳಿ ನಿಂತು ಗಾಳಿ ಬೀಸಿದಳು (೮). ಲೀಲಾರ್ಥವಾಗಿ ದೇಹವನ್ನು ಧರಿಸಿ ಬಂದ ತನಗೆ ಅತ್ಯಂತ ಅನುರೂಪಳೂ ತನ್ನನ್ನೇ ನಂಬಿ ಬಂದಿರುವ ರೂಪಧಾರಿಣಿಯಾದ ಸಾಕ್ಷಾಲಕ್ಷ್ಮಿಯೂ ಆಗಿ ಮುಂಗುರುಳು ಕುಂಡಲಗಳಿಂದಲೂ ಪದಕಾಲಂಕೃತವಾದ ಕಂಠದಿಂದಲೂ ವಿರಾಜಿಸುವ ಮುಖದಲ್ಲಿ ಅಮೃತದಂತಹ ಮುಗುಳ್ನಗೆಯನ್ನು ಬೀರುತ್ತಿದ್ದ ರುಕ್ಮಿಣಿಯನ್ನು ನೋಡಿ ಸಂತುಷ್ಟನಾದ ಹರಿಯು ಮಂದಹಾಸವನ್ನು ಸೂಸುತ್ತ ಹೀಗೆಂದನು (೯). "ರುಕ್ಮಿಣಿ, ನೀನು ರಾಜಪುತ್ರಿ, ದಿಕ್ಪಾಲರಂತೆ ಮಹಿಮಾನ್ವಿತರೂ ಮಹಾನುಭಾವರೂ ಶ್ರೀಮಂತರೂ ರೂಪ, ಔದಾರ್ಯ ಬಲಗಳಿಂದ ಊರ್ಜಿತರೂ ಆದ ಭೂಪಾಲರು ನಿನ್ನನ್ನು ಬಯಸಿದ್ದರು. ಕಾಮಾತಿರೇಕದಿಂದ ತಾವಾಗಿ ಬಯಸಿ ಬಂದ ಅಂತಹ ಶಿಶುಪಾಲಾದಿಗಳನ್ನು ತೊರೆದುಬಿಟ್ಟೆಯಲ್ಲ! ನಿನ್ನ ತಂದೆಯೂ ಅಣ್ಣನೂ ನಿನ್ನನ್ನು ಅವರಿಗೆ ಕೊಡಬೇಕೆಂದು ಸಂಕಲ್ಪಿಸಿಕೊಂಡಿದ್ದರು. ಅವರನ್ನು ತ್ಯಜಿಸಿ ನೀನು ಅವರಿಗೆ ಹೋಲಿಕೆಯೇ ಇಲ್ಲದ ನಮ್ಮನ್ನು ಏಕೆ ವರಿಸಿಬಿಟ್ಟೆ! (೧೦-೧೧). ಹೇ ಸುಭ್ರು, ಜರಾಸಂಧನೇ ಮೊದಲಾದ

ಅಸ್ಪಷ್ಟವರ್ತ್ಮನಾಂ ಪುಂಸಾಮಲೋಕಪಥಮೀಯುಷಾಮ್ ।
ಆಸ್ಥಿತಾಃ ಪದವೀಂ ಸುಭ್ರೂಃ ಪ್ರಾಯಃ ಸೀದಂತಿ ಯೋಷಿತಃ ॥ ೧೩

ನಿಷ್ಕಿಂಚನಾ ವಯಂ ಶಶ್ವನ್ನಿಷ್ಕಿಂಚನಜನಪ್ರಿಯಾಃ ।
ತಸ್ಮಾತ್ ಪ್ರಾಯೇಣ ನ ಹ್ಯಾಢ್ಯಾ ಮಾಂ ಭಜಂತಿ ಸುಮಧ್ಯಮೇ ॥ ೧೪

ಯಯೋರಾತ್ಮಸಮಂ ವಿತ್ತಂ ಜನ್ಮೈಶ್ವರ್ಯಾಕೃತಿರ್ಭವಃ ।
ತಯೋರ್ವಿವಾಹೋ ಮೈತ್ರೀ ಚ ನೋತ್ತಮಾಧಮಯೋಃ ಕ್ವಚಿತ್ ॥

ವೈದರ್ಭ್ಯೇತದವಿಜ್ಞಾಯ ತ್ವಯಾ ದೀರ್ಘಸಮೀಕ್ಷಯಾ ।
ವೃತಾ ವಯಂ ಗುಣೈರ್ಹೀನಾ ಭಿಕ್ಷುಭಿಃ ಶ್ಲಾಘಿತಾ ಮುಧಾ ॥ ೧೬

ಅಥಾತ್ಮನೋಽನುರೂಪಂ ವೈ ಭಜಸ್ವ ಕ್ಷತ್ರಿಯರ್ಷಭಮ್ ।
ಯೇನ ತ್ವಮಾಶಿಷಃ ಸತ್ಯಾ ಇಹಾಮುತ್ರ ಚ ಲಪ್ಸ್ಯಸೇ ॥ ೧೭

ರಾಜರಿಗೆ ಹೆದರಿ ಸಮುದ್ರಕ್ಕೆ ಶರಣುಹೋದವರು ನಾವು ! ಬಲಶಾಲಿಗಳೊಡನೆ ವೈರವನ್ನು ಬೆಳಸಿಕೊಂಡು ಸಿಂಹಾಸನವು ದಕ್ಕುವುದಿಲ್ಲವೆಂದು ಅದರ ಆಸೆಯನ್ನು ತೊರೆದುಬಿಟ್ಟವರು ನಾವು ! (೧೨). ಸುಂದರಿ, ಯಾರ ದಾರಿಯು ಸ್ಪಷ್ಟವಾಗಿ ಗೊತ್ತಿಲ್ಲವೋ ಯಾರು ಲೋಕವಿಲಕ್ಷಣವಾದ ಮಾರ್ಗವನ್ನು ಹಿಡಿದಿರುವರೋ ಅಂತಹ ಗಂಡಸರನ್ನು ಹಿಂಬಾಲಿಸಿದ ಹೆಂಗಸರು ಕಷ್ಟಕ್ಕೆ ಒಳಗಾಗುತ್ತಾರೆ. ನಾವು ಮೊದಲೇ ನಿಷ್ಕಿಂಚನರು-ದರಿದ್ರರು ! ದರಿದ್ರಜನರೇ ನಮ್ಮನ್ನು ಪ್ರೀತಿಸುತ್ತಾರೆ. ಆದ್ದರಿಂದಲೇ, ಎಲೌ ಚೆಲುವೆ, ಶ್ರೀಮಂತರು ನನ್ನ ಬಳಿಯಲ್ಲಿ ಸುಳಿಯುವುದಿಲ್ಲ! (೧೩-೧೪). ಆಸ್ತಿ, ಕುಲ, ಐಶ್ವರ್ಯ, ರೂಪ, ಮುಂದಿನ ಭವಿಷ್ಯತ್ತು-ಇವು ಅನ್ಯೋನ್ಯವಾಗಿ ಯಾರಿಗೆ ಸಮವಾಗಿರುವುದೋ ಅವರಲ್ಲಿ ವಿವಾಹವೂ ಸ್ನೇಹವೂ ನಡೆಯಬೇಕಲ್ಲದೆ, ಉತ್ತಮರಿಗೂ ಅಧಮರಿಗೂ ನಡೆಯುವುದಿಲ್ಲ (೧೫). ವೈದರ್ಭಿ, ಇದನ್ನು ನೀನು ಅರಿಯದೆ ಹೋದೆ. ಸರಿಯಾಗಿ ವಿಚಾರಮಾಡದೆ, ನಮ್ಮನ್ನು ಮದುವೆಯಾಗಿಬಿಟ್ಟೆ! ನಾವು ಗುಣಹೀನರು. ಭಿಕ್ಷುಕರು ಮಾತ್ರ ವ್ಯರ್ಥವಾಗಿ ನಮ್ಮನ್ನು ಹೊಗಳುತ್ತಾರೆ (೧೬). ಈಗಲಾದರೂ ನೀನು ಯಾರಾದರೊಬ್ಬ ಕ್ಷತ್ರಿಯೋತ್ತಮನನ್ನು ವರಿಸು! ಆಗ ನಿನ್ನ ಮನಸ್ಸಿನ ಕೋರಿಕೆಗಳು

ಚೈದ್ಯಶಾಲ್ವಜರಾಸಂಧದಂತವಕ್ತ್ರಾದಯೋ ನೃಪಾಃ।
ಮಮ ದ್ವಿಷಂತಿ ವಾಮೋರು ರುಕ್ಮೀ ಚಾಪಿ ತವಾಗ್ರಜಃ॥ ೧೮

ತೇಷಾಂ ವೀರ್ಯಮದಾಂಧಾನಾಂ ದೃಪ್ತಾನಾಂ ಸ್ಮಯನುತ್ತಯೇ।
ಆನೀತಾಸಿ ಮಯಾ ಭದ್ರೇ ತೇಜೋಽಪಹರತಾ ಸತಾಮ್॥ ೧೯

ಉದಾಸೀನಾ ವಯಂ ನೂನಂ ನ ಸ್ತ್ರ್ಯಪತ್ಯಾರ್ಥಕಾಮುಕಾಃ।
ಆತ್ಮಲಬ್ಧ್ಯಾಽಽಸ್ಮಹೇ ಪೂರ್ಣಾ ಗೇಹಯೋರ್ಜ್ಯೋತಿರಕ್ರಿಯಾಃ॥ ೨೦

ಶ್ರೀಶುಕ ಉವಾಚ-

ಏತಾವದುಕ್ತ್ವಾ ಭಗವಾನಾತ್ಮಾನಂ ವಲ್ಲಭಾಮಿವ।
ಮನ್ಯಮಾನಾವಿಶ್ಲೇಷಾತ್ ತದ್ದರ್ಪಘ್ನ ಉಪಾರಮತ್॥ ೨೧

ಇತಿ ತ್ರಿಲೋಕೇಶಪತೇಸ್ತದಾಽಽತ್ಮನಃ
ಪ್ರಿಯಸ್ಯ ದೇವ್ಯಶ್ರುತಪೂರ್ವಮಪ್ರಿಯಮ್।
ಆಶ್ರುತ್ಯ ಭೀತಾ ಹೃದಿ ಜಾತವೇಪಥು-
ಶ್ಚಿಂತಾಂ ದುರಂತಾಂ ರುದತೀ ಜಗಾಮ ಹ॥ ೨೨

ಈಡೇರುತ್ತವೆ. ಆದರಿಂದ ಇಹಪರದಲ್ಲಿ ಸುಖ ಉಂಟು. ಶಿಶುಪಾಲ, ಸಾಲ್ವ, ಜರಾಸಂಧ, ದಂತವಕ್ತ್ರ ಮೊದಲಾದ ರಾಜರೂ ನಿನ್ನ ಅಣ್ಣನಾದ ರುಕ್ಮಿಯೂ ಈಗಲೂ ನನ್ನನ್ನು ದ್ವೇಷಿಸುತ್ತಿದ್ದಾರೆ (೧೭-೧೮). ಹೈ ಸೌಮ್ಯೆ, ವೀರ್ಯಮದಾಂಧರಾದ ಆ ಉದ್ಧತರ ಸೊಕ್ಕನ್ನು ಇಳಿಸಬೇಕೆಂದು ಬಯಸಿ, ಆ ದುಷ್ಟರ ತೇಜಸ್ಸನ್ನು ಭಗ್ನಗೊಳಿಸಿ ನಿನ್ನನ್ನು ಕರೆತಂದೆನು. ಅಷ್ಟೇ ಹೊರತು ಮಡದಿ ಮಕ್ಕಳು ಹಣ-ಇವನ್ನು ನಾವು ಬಯಸತಕ್ಕವರಲ್ಲ! ನಾವು ಉದಾಸೀನರು! ಆತ್ಮಲಾಭದಿಂದ ಪೂರ್ಣ ತೃಪ್ತರಾಗಿದ್ದೇವೆ. ಈ ಮನೆ, ದೇಹವೆಂಬ ಮನೆ-ಇವೆರಡರಲ್ಲಿಯೂ ದೀಪದಂತೆ ಸಾಕ್ಷಿಭೂತರಾಗಿ ಕೆಲಸವಿಲ್ಲದೆ ಕುಳಿತಿದ್ದೇವೆ!'' (೧೯-೨೦). ಯಾವಾಗಲೂ ಬಿಡದೆ ಬಳಿಯಲ್ಲಿರುವುದರಿಂದ ಶ್ರೀಕೃಷ್ಣನಿಗೆ ನಾನೇ ಪರಮಪ್ರಿಯಳು-ಎಂದು ತಿಳಿದಿದ್ದ ರುಕ್ಮಿಣಿಯ ಅಹಂಕಾರವನ್ನು ಅಡಗಿಸಬೇಕೆಂದು ಭಗವಂತನು ಇಷ್ಟು ಹೇಳಿ ಸುಮ್ಮನಾದನು! (೨೧). ತ್ರಿಲೋಕೇಶ್ವರನಾದ ತನ್ನ ಪ್ರಿಯನ ಇಂತಹ ನುಡಿಯನ್ನು ರುಕ್ಮಿಣಿ ಹಿಂದೆ

ಪದಾ ಸುಜಾತೇನ ನಖಾರುಣಶ್ರಿಯಾ
ಭುವಂ ಲಿಖಂತ್ಯಶ್ರುಭಿರಂಜನಾಸಿತೈಃ।
ಆಸಿಂಚತೀ ಕುಂಕುಮರೂಷಿತೌ ಸ್ತನೌ
ತಸ್ಥಾವಧೋಮುಖ್ಯತಿದುಃಖರುದ್ಧವಾಕ್ ॥ ೨೩

ತಸ್ಯಾಃ ಸುದುಃಖಭಯಶೋಕವಿನಷ್ಟಬುದ್ಧೇ-
ರ್ಹಸ್ತಾಚ್ಛ್ಲಥದ್ವಲಯತೋ ವ್ಯಜನಂ ಪಪಾತ।
ದೇಹಶ್ಚ ವಿಕ್ಲವಧಿಯಃ ಸಹಸೈವ ಮುಹ್ಯನ್
ರಂಭೇವ ವಾಯುವಿಹತಾ ಪ್ರವಿಕೀರ್ಯ ಕೇಶಾನ್ ॥ ೨೪

ತದ್ ದೃಷ್ಟ್ವಾ ಭಗವಾನ್ ಕೃಷ್ಣಃ ಪ್ರಿಯಾಯಾಃ ಪ್ರೇಮಬಂಧನಮ್।
ಹಾಸ್ಯಪ್ರೌಢಿಮಜಾನಂತ್ಯಾಃ ಕರುಣಃ ಸೋಽನ್ವಕಂಪತ ॥ ೨೫

ಪರ್ಯಂಕಾದವರುಹ್ಯಾಶು ತಾಮುತ್ಥಾಪ್ಯ ಚತುರ್ಭುಜಃ।
ಕೇಶಾನ್ ಸಮುಹ್ಯ ತದ್ವಕ್ತ್ರಂ ಪ್ರಾಮೃಜತ್ ಪದ್ಮಪಾಣಿನಾ ॥ ೨೬

ಕೇಳಿರಲಿಲ್ಲ. ಖೇದಕರವಾದ ಆ ನುಡಿಯನ್ನು ಕೇಳಿ ಅವಳು ಮನಸ್ಸಿನಲ್ಲಿ ಹೆದರಿದಳು. ಮೈಯಲ್ಲಿ ನಡುಕ ಹುಟ್ಟಿತು. ಅಳುತ್ತ ದುರಂತವಾದ ಚಿಂತೆಯಲ್ಲಿ ಮುಳುಗಿದಳು (೨೨). ಉಗುರಿನ ಕಾಂತಿಯಿಂದ ಕೆಂಪಾದ ಕೋಮಲ ಪಾದದಿಂದ ನೆಲವನ್ನು ಕೆರೆಯುತ್ತ, ಕಾಡಿಗೆಯಿಂದ ಕಪ್ಪಾದ ಕಣ್ಣೀರನ್ನು ಕುಂಕುಮ ಲಿಪ್ತವಾದ ಸ್ತನಗಳ ಮೇಲೆ ಹರಿಸುತ್ತ ತಲೆಬಗ್ಗಿಸಿದಳು. ಶೋಕಭಾರದಿಂದ ಮಾತು ಹೊರಡಲಿಲ್ಲ (೨೩). ದುಃಖ, ಭಯ, ಕಳವಳಗಳಿಂದ ರುಕ್ಮಿಣಿಯ ಬುದ್ಧಿಮಂಕಾಯಿತು. ಕೈಬಳೆಗಳು ಸಡಿಲಿದವು. ಬೀಸಣಿಗೆ ಕೈಯಿಂದ ಜಾರಿ ಕೆಳಗೆ ಬಿದ್ದಿತು. ದಿಕ್ಕುಗಾಣದೆ ಅವಳ ಬುದ್ಧಿ ಗಿರ್ರೆಂದಿತು. ತಲೆಗೂದಲು ಕೆದರಲಾಗಿ, ಬಿರುಗಾಳಿಗೆ ಸಿಕ್ಕಿದ ಬಾಳೆಯಗಿಡದಂತೆ ಅವಳ ದೇಹ ನೆಲದ ಮೇಲೆ ಕುಸಿಯಿತು (೨೪). ತನ್ನ ಕಾಂತೆಗೆ ತನ್ನಲ್ಲಿರುವ ಆ ಪ್ರೇಮಾತಿಶಯವನ್ನು ಕಂಡು ಭಗವಾನ್ ಶ್ರೀಕೃಷ್ಣನು ಗಂಭೀರಹಾಸ್ಯವನ್ನರಿಯದ ಅವಳ ಬಗೆಗೆ ಅನುತಾಪದಿಂದ ಮರುಕಗೊಂಡನು. ಕೂಡಲೇ ಆತನು ಮಂಚದಿಂದಿಳಿದು ರುಕ್ಮಿಣಿಯನ್ನು ಎತ್ತಿ ಅವಳ ತಲೆಗೂದಲನ್ನು ನೇವರಿಸಿ ತನ್ನ ಕರಕಮಲದಿಂದ (ಕಣ್ಣೀರು

ಪ್ರಮೃಜ್ಯಾಶ್ರುಕಲೇ ನೇತ್ರೇ ಸ್ತನೌ ಚೋಪಹತೌ ಶುಚಾ ।
ಆಶ್ಲಿಷ್ಯ ಬಾಹುನಾ ರಾಜನ್ನನನ್ಯವಿಷಯಾಂ ಸತೀಮ್ ॥ ೨೭

ಸಾಂತ್ವಯಾಮಾಸ ಸಾಂತ್ವಜ್ಞಃ ಕೃಪಯಾ ಕೃಪಣಾಂ ಪ್ರಭುಃ ।
ಹಾಸ್ಯಪ್ರೌಢಿಭ್ರಮಚ್ಚಿತ್ತಾಮತದರ್ಹಾಂ ಸತಾಂ ಗತಿಃ ॥ ೨೮

ಶ್ರೀ ಭಗವಾನುವಾಚ-

ಮಾ ಮಾ ವೈದರ್ಭ್ಯಸೂಯೇಥಾ ಜಾನೇ ತ್ವಾಂ ಮತ್ಪರಾಯಣಾಮ್ ।
ತ್ವದ್ವಚಃ ಶ್ರೋತುಕಾಮೇನ ಕ್ಷ್ವೇಲ್ಯಾಽಽಚರಿತಮಂಗನೇ ॥ ೨೯

ಮುಖಂ ಚ ಪ್ರೇಮಸಂರಂಭಸ್ಫುರಿತಾಧರಮೀಕ್ಷಿತುಮ್ ।
ಕಟಾಕ್ಷೇಪಾರುಣಾಪಾಂಗಂ ಸುಂದರಭ್ರುಕುಟೀತಟಮ್ ॥ ೩೦

ಅಯಂ ಹಿ ಪರಮೋ ಲಾಭೋ ಗೃಹೇಷು ಗೃಹಮೇಧಿನಾಮ್ ।
ಯನ್ನರ್ಮೈರೀಯತೇ ಯಾಮಃ ಪ್ರಿಯಯಾ ಭೀರು ಭಾಮಿನಿ ॥ ೩೧

ಹರಿಯುತ್ತಿದ್ದ) ಮುಖವನ್ನೊರಸಿದನು (೨೫-೨೬). ಪರೀಕ್ಷಿತರಾಜ, ಶ್ರೀಕೃಷ್ಣನು ಒಂದು ತೋಳಿನಿಂದ ರುಕ್ಮಿಣಿಯನ್ನು ಆಲಿಂಗಿಸಿಕೊಂಡು ಬಾಷ್ಪಪೂರ್ಣವಾದ ಅವಳ ನೇತ್ರಗಳನ್ನೂ ಬಾಷ್ಪದಿಂದ ಒದ್ದೆಯಾದ ಸ್ತನಗಳನ್ನೂ ಒರಸಿದನು. ತನ್ನನ್ನೇ ನಂಬಿದ ಸಾಧ್ವಿಯೂ ಹಾಸ್ಯಪ್ರೌಢಿಯನ್ನರಿಯದೆ ದಿಕ್ಕುಗೆಟ್ಟು ದೀನಳೂ ಆ ಬಗೆಯ ಹಾಸ್ಯಕ್ಕೆ ಪಾತ್ರಳಲ್ಲದವಳೂ ಆದ ರುಕ್ಮಿಣಿಯನ್ನು ಸಜ್ಜನರಿಗೆ ಗತಿಯಾದ ಆ ಪ್ರಭುವು ಕೃಪೆಯಿಂದ ಹೀಗೆ ಸಂತೈಸಿದನು (೨೭-೨೮). ಭಗವಂತನು ಹೀಗೆಂದನು : "ವೈದರ್ಭಿ, ಬೇಡ. ತಪ್ಪೆಣಿಸಬೇಡ. ನನ್ನಲ್ಲಿ ನಿನಗೆ ತೀವ್ರವಾದ ಅನುರಾಗವಿದೆಯೆಂಬುದನ್ನು ನಾನು ಬಲ್ಲೆ. ನಿನ್ನ ಮಾತನ್ನು ಕೇಳಬೇಕೆಂದು, ಸುಂದರಿ, ವಿನೋದಕ್ಕಾಗಿ ಹೀಗೆ ನುಡಿದೆನು (೨೯). ಪ್ರಣಯಕೋಪದಿಂದ ಅದುರುವ ತುಟಿ, ಕಟಾಕ್ಷಗಳನ್ನು ಬೀರಿದಾಗ ಕೆಂಪೇರಿದ ಅಪಾಂಗ, ಸುಂದರವಾದ ಗಂಟಿಕ್ಕಿದ ಹುಬ್ಬು-ಇವುಗಳಿಂದ ನಿನ್ನ ಮುಖ ಹೇಗೆ ಕಾಣಿಸುವುದೆಂದು ನೋಡಲು ಹಾಸ್ಯಮಾಡಿದೆನು! (೩೦). ಭೀರು, ಮಡದಿಯೊಡನೆ ವಿನೋದ ಮಾಡುತ್ತ ಕಾಲಕಳೆಯುವುದೇ ಸಂಸಾರಿಗಳಿಗೆ ಮನೆಯಲ್ಲಿ ದೊರೆಯುವ ಪರಮಲಾಭ!"

ಶ್ರೀ ಶುಕ ಉವಾಚ-

ಸೈವಂ ಭಗವತಾ ರಾಜನ್ ವೈದರ್ಭೀ ಪರಿಸಾಂತ್ವಿತಾ ।
ಜ್ಞಾತ್ವಾ ತತ್ಪರಿಹಾಸೋಕ್ತಿಂ ಪ್ರಿಯತ್ಯಾಗಭಯಂ ಜಹೌ ॥ ೩೨

ಬಭಾಷ ಋಷಭಂ ಪುಂಸಾಂ ವೀಕ್ಷಂತೀ ಭಗವನ್ಮುಖಮ್ ।
ಸವ್ರೀಡಹಾಸರುಚಿರಸ್ನಿಗ್ಧಾಪಾಂಗೇನ ಭಾರತ ॥ ೩೩

ರುಕ್ಮಿಣ್ಯುವಾಚ-

ನನ್ವೇವಮೇತದರವಿಂದವಿಲೋಚನಾಹ
ಯದ್ ವೈ ಭವಾನ್ ಭಗವತೋಽಸದೃಶೀ ವಿಭೂಮ್ನಃ ।
ಕ್ವ ಸ್ವೇ ಮಹಿಮ್ನ್ಯಭಿರತೋ ಭಗವಾಂಸ್ತ್ರ್ಯಧೀಶಃ
ಕ್ವಾಹಂ ಗುಣಪ್ರಕೃತಿರಜ್ಞ ಗೃಹೀತಪಾದಾ ॥ ೩೪

ಸತ್ಯಂ ಭಯಾದಿವ ಗುಣೇಭ್ಯ ಉರುಕ್ರಮಾಂತಃ
ಶೇತೇ ಸಮುದ್ರ ಉಪಲಂಭನಮಾತ್ರ ಆತ್ಮಾ ।
ನಿತ್ಯಂ ಕದಿಂದ್ರಿಯಗಣೈಃ ಕೃತವಿಗ್ರಹಸ್ತ್ವಂ
ತ್ವತ್ಸೇವಕೈರ್ನೃಪಪದಂ ವಿಧುತಂ ತಮೋಽಂಧಮ್ ॥ ೩೫

---

(೩೧). ಈ ರೀತಿಯಲ್ಲಿ ಭಗವಂತನು ಸಂತೈಸಲಾಗಿ, ಪರೀಕ್ಷಿತ, ಆ ವಿದರ್ಭರಾಜಕುಮಾರಿಯು ಶ್ರೀಕೃಷ್ಣನ ನುಡಿಯು ಹಾಸ್ಯೋಕ್ತಿಯೆಂದರಿತು, ಅವನು ತನ್ನನ್ನು ತ್ಯಜಿಸಿಬಿಟ್ಟಾನೆಂಬ ಭಯವನ್ನು ತೊರೆದಳು. ಅವಳು ನಾಚುತ್ತ ನಗುತ್ತ ಕುಡಿನೋಟವನ್ನು ಬೀರುತ್ತ ಶ್ರೀಕೃಷ್ಣನ ಮುಖವನ್ನು ನೋಡುತ್ತ ಹೀಗೆಂದಳು (೩೨-೩೩):★ ಅರವಿಂದಲೋಚನ, ಭಗವಂತನಾದ ನಿನಗೆ 'ನಾನು ಅನುರೂಪಳಲ್ಲ' ಎಂದು ಹೇಳಿದೆಯಲ್ಲ, ಅದು ದಿಟವೇ. ತ್ರಿಮೂರ್ತಿಗಳಿಗೆ ಒಡೆಯನೂ 'ಸ್ವೇ ಮಹಿಮ್ನಿ ಪ್ರತಿಷ್ಠಿತ'ನೂ ಷಡ್ಗುಣೈಶ್ವರ್ಯ ಸಂಪನ್ನನೂ ಆದ ನೀನೆಲ್ಲಿ? ತ್ರಿಗುಣಪ್ರಕೃತಿಯೂ ಅಜ್ಞರಾದ ಧನಲೋಲುಪರಿಂದ ಸೇವಿತಪಾದಳೂ

★ ಶ್ರೀಕೃಷ್ಣನು ಹಾಸ್ಯಕ್ಕಾಗಿ ತನ್ನಲ್ಲಿ ಯಾವ ಯಾವ ದೋಷಗಳನ್ನು ಹೇಳಿಕೊಂಡಿದ್ದನೋ ಅವು ದೋಷಗಳಲ್ಲ, ಸರ್ವೋತ್ಕೃಷ್ಟನಾದ ಗುಣಗಳೆಂದು ರುಕ್ಮಿಣಿಯು ತಿರುಗಿಸಿಹೇಳುತ್ತಾಳೆ. ಕಾಳಿದಾಸನ ಕುಮಾರಸಂಭವದ ೫ನೇಯ ಸರ್ಗದಲ್ಲಿ ವಟುವೇಷಧಾರಿಯಾದ ಪರಮೇಶ್ವರನ ಮಾತನ್ನೂ ಅದಕ್ಕೆ ಪಾರ್ವತಿಯು ಹೇಳುವ ಪ್ರತ್ಯುತ್ತರವನ್ನೂ ಹೋಲಿಸಿ.

ತ್ವತ್ಪಾದಪದ್ಮಮಕರಂದಜುಷಾಂ ಮುನೀನಾಂ
ವರ್ತ್ಮಾಸ್ಫುಟಂ ನೃಪಶುಭಿರ್ನನು ದುರ್ವಿಭಾವ್ಯಮ್ ।
ಯಸ್ಮಾದಲೌಕಿಕಮಿವೇಹಿತಮೀಶ್ವರಸ್ಯ
ಭೂಮಂಸ್ತವೇಹಿತಮಥೋ ಅನು ಯೇ ಭವಂತಮ್ ॥ ೩೬

ನಿಷ್ಕಿಂಚನೋ ನನು ಭವಾನ್ ನ ಯತೋಽಸ್ತಿ ಕಿಂಚಿದ್
ಯಸ್ಮೈ ಬಲಿಂ ಬಲಿಭುಜೋಽಪಿ ಹರಂತ್ಯಜಾದ್ಯಾಃ ।
ನ ತ್ವಾ ವಿದಂತ್ಯಸುತೃಪೋಽಂತಕಮಾಢ್ಯತಾಂಧಾಃ
ಪ್ರೇಷ್ಠೋ ಭವಾನ್ ಬಲಿಭುಜಾಮಪಿ ತೇಽಪಿ
ತುಭ್ಯಮ್ ॥ ೩೭

ಆದ ನಾನೆಲ್ಲಿ? (೩೪). ಹೇ ತ್ರಿವಿಕ್ರಮ, (ರಾಜರಿಗೆ ಹೆದರಿ ಸಮುದ್ರಕ್ಕೆ ಶರಣಾದೆನು-ಎಂದು ಹೇಳಿದೆ) ಅದು ಸತ್ಯವೇ ; ಗುಣಗಳೆಂಬ ರಾಜರಿಗೆ ಹೆದರಿದಂತೆ ನೀನು ಹೃದಯವೆಂಬ ಸಮುದ್ರದಲ್ಲಿ ಚೈತನ್ಯಘನನಾದ ಆತ್ಮನಾಗಿ ಪ್ರಕಾಶಿಸುತ್ತಿರುವೆ. (ಬಲಶಾಲಿಗಳೊಡನೆ ವೈರವನ್ನು ಬೆಳಸಿ ಕೊಂಡಿದ್ದೇನೆ-ಎಂದೆ) ದಿಟವೇ, ಕುತ್ಸಿತವಾದ ಇಂದ್ರಿಯಗಳೊಡನೆ ನಿನಗೆ ವೈರವಿದೆ. (ಸಿಂಹಾಸನದ ಆಸೆಯನ್ನು ತೊರೆದಿದ್ದೇನೆ-ಎನ್ನುತ್ತೀಯೆ) ಅದೂ ಸರಿ. ತಮೋಗುಣದಿಂದ ಕುರುಡಾದ ಸಿಂಹಾಸನವನ್ನು ನಿನ್ನ ಸೇವಕರಾದ ಋಷಿ ಜನರೇ ಧಿಕ್ಕರಿಸಿದ್ದಾರೆ (೩೫). (ನಿನ್ನ ದಾರಿ ಯಾರಿಗೂ ಸ್ಪಷ್ಟವಾಗಿಲ್ಲವೆಂದು ಹೇಳಿಕೊಂಡಿದ್ದೀಯೆ) ಅದೂ ಸತ್ಯವೇ ; ನಿನ್ನ ಪಾದಪದ್ಮದ ಮಕರಂದವನ್ನು ಸೇವಿಸುವ ಮುನಿಗಳಿಗೇ ನಿನ್ನ ದಾರಿ ಗೊತ್ತಿಲ್ಲ! ನರಪಶುಗಳಿಗೆ ಅದು ತಿಳಿದೀತೆ? ನಿನ್ನನ್ನು ಹಿಂಬಾಲಿಸುವ ನಿನ್ನ ಭಕ್ತರ ನಡತೆಯೇ ಲೋಕವಿಲಕ್ಷಣವಾಗಿರುವಾಗ, ಹೇ ಮಹಾತ್ಮ, ನಿನ್ನ ನಡೆ ಲೋಕವಿಲಕ್ಷಣವಾಗದೇ ಇದ್ದೀತೆ? (೩೬). ನೀನು ನಿಷ್ಕಿಂಚನ (ದರಿದ್ರ) ಅಲ್ಲವೆ? ನಿನ್ನನ್ನು ಬಿಟ್ಟು ಕಿಂಚನ-ಯಾವುದೂ, ನಿಸ್-ಇಲ್ಲ, ಆದ್ದರಿಂದ ನೀನು ನಿಷ್ಕಿಂಚನ! ಭಕ್ತರ ಪೂಜೆಗಳನ್ನು ಪರಿಗ್ರಹಿಸುವ ಬ್ರಹ್ಮಾದಿಗಳೂ ಸಹ ನಿನಗೆ ಪೂಜೆಯನ್ನರ್ಪಿಸುತ್ತಾರಲ್ಲ! (ಶ್ರೀಮಂತರು ನನ್ನ ಬಳಿ ಸುಳಿಯುವುದಿಲ್ಲ-ಎನ್ನುತ್ತೀಯಾ?) ತಮ್ಮ ಪ್ರಾಣ ಪೋಷಣೆಯಲ್ಲಿ ನಿರತರಾಗಿ ಧನಮದದಿಂದ

ತ್ವಂ ವೈ ಸಮಸ್ತಪುರುಷಾರ್ಥಮಯಃ ಫಲಾತ್ಮಾ
ಯದ್ವಾಂಛಯಾ ಸುಮತಯೋ ವಿಸೃಜಂತಿ ಕೃತ್ಸ್ನಮ್ ।
ತೇಷಾಂ ವಿಭೋ ಸಮುಚಿತೋ ಭವತಃ ಸಮಾಜಃ
ಪುಂಸಃ ಸ್ತ್ರಿಯಾಶ್ಚ ರತಯೋಃ ಸುಖದುಃಖಿನೋರ್ನ ॥ ೩೮

ತ್ವಂ ನ್ಯಸ್ತದಂಡಮುನಿಭಿರ್ಗದಿತಾನುಭಾವ
ಆತ್ಮಾಽಽತ್ಮದಶ್ಚ ಜಗತಾಮಿತಿ ಮೇ ವೃತೋಽಸಿ ।
ಹಿತ್ವಾ ಭವದ್ಭ್ರುವ ಉದೀರಿತಕಾಲವೇಗ-
ಧ್ವಸ್ತಾಶಿಷೋಽಬ್ಜಭವನಾಕಪತೀನ್ ಕುತೋಽನ್ಯೇ ॥ ೩೯

ಕುರುಡರಾದ ಅವರಿಗೆ ನೀನೇ ಅಂತಕನೆಂಬುದು ಗೊತ್ತಿಲ್ಲ! ಬ್ರಹ್ಮಾದಿಗಳಿಗಿಂತ ನೀನು ಶ್ರೇಷ್ಠನಾದವನು. ಅವರೇ ನಿನ್ನನ್ನು ಪೂಜಿಸುತ್ತಿದ್ದಾರೆ (೩೭). ನೀನು ಸಮಸ್ತ ಪುರುಷಾರ್ಥ ಸ್ವರೂಪನೂ ಅವುಗಳಿಗೆ ಫಲವಾದ ಪರಮಾನಂದ ಸ್ವರೂಪನೂ ಆಗಿದ್ದೀಯೆ, ನಿನ್ನನ್ನು ಪಡೆಯುವ ಇಚ್ಛೆಯಿಂದ ವಿವೇಕಿಗಳು ಸಮಸ್ತವಸ್ತುಗಳನ್ನೂ ತ್ಯಜಿಸುತ್ತಾರೆ. (ಆದ್ದರಿಂದ ದರಿದ್ರರು ನಿನ್ನನ್ನು ಪ್ರೀತಿಸುತ್ತಾರೆಂಬುದು ಸರಿ). ಹೇ ಪ್ರಭು, (ಧನ, ಗುಣ-ಮೊದಲಾದವು ಸಮಾನವಾಗಿದ್ದರೆ ಅವರಲ್ಲಿ ಸ್ನೇಹ, ವಿವಾಹ-ಎನ್ನುತ್ತೀಯೆ) ಆದರೆ ನಿನ್ನೊಡನೆ ನಮಗೆ ಸೇವ್ಯಸೇವಕ ಸಂಬಂಧ. (ನಾವು ಮಾಡುವುದು ಸೇವೆ) ನನ್ನಂತವರಿಗೆ ಈ ಸಂಬಂಧ ಉಚಿತವೇ ಸರಿ. ಸುಖದುಃಖಗಳಿಂದ ಅಕುಲರಾಗಿ ಕಾಮುಕರಾದ ಸ್ತ್ರೀಪುರುಷರ ಸಂಬಂಧವು ನಿನ್ನ ಬಳಿ ಸುಳಿಯದು (೩೮). ಸರ್ವಸಂಗಪರಿತ್ಯಾಗ ಮಾಡಿದ ಮುನಿಗಳು (ಭಿಕ್ಷುಕರು) ನಿನ್ನ ಮಹಿಮೆಯನ್ನು ಹೊಗಳುತ್ತಿದ್ದಾರೆಂದೂ ಜಗತ್ತಿಗೆ ಆತ್ಮನಾಗಿ ಜಗತ್ತಿಗೇ ಚೈತನ್ಯವನ್ನು ಕೊಡತಕ್ಕವನೂ ನೀನೆಂದೂ ತಿಳಿದು ನಾನು ನಿನ್ನನ್ನು ವರಿಸಿದ್ದೇನೆ! ನೀನು ಹುಬ್ಬು ಹಾರಿಸಿದರೆ ಸಾಕು, ಒಡನೆಯೇ ಸಿಡಿಯುವ ಕಾಲವೇಗದಿಂದ ಯಾರ ಸಮಸ್ತ ವೈಭವಗಳೂ ನುಚ್ಚುನೂರಾಗುತ್ತವೆಯೋ ಅಂತಹವರು ಬ್ರಹ್ಮ ದೇವೇಂದ್ರಾದಿಗಳು ಎಂದು ತಿಳಿದು ಅವರನ್ನು ತೊರೆದು

ಜಾಡ್ಯಂ ವಚಸ್ತವ ಗದಾಗ್ರಜ ಯಸ್ತು ಭೂಪಾನ್
ವಿದ್ರಾವ್ಯ ಶಾರ್ಙ್ಗನಿನದೇನ ಜಹರ್ಥ ಮಾಂ ತ್ವಮ್ ।
ಸಿಂಹೋ ಯಥಾ ಸ್ವಬಲಿಮೀಶ ಪಶೂನ್ ಸ್ವಭಾಗಂ
ತೇಭ್ಯೋ ಭಯಾದ್ ಯದುದಧಿಂ ಶರಣಂ ಪ್ರಪನ್ನಃ ॥ ೪೦

ಯದ್ವಾಂಛಯಾ ನೃಪಶಿಖಾಮಣಯೋಽಂಗವೈನ್ಯ-
ಜಾಯಂತನಾಹುಷಗಯಾದಯ ಐಕಪತ್ಯಮ್ ।
ರಾಜ್ಯಂ ವಿಸೃಜ್ಯ ವಿವಿಶುರ್ವನಮಂಬುಜಾಕ್ಷ
ಸೀದಂತಿ ತೇಽನುಪದವೀಂ ತ ಇಹಾಸ್ಥಿತಾಃ ಕಿಮ್ ॥ ೪೧

ಕಾನ್ಯಂ ಶ್ರಯೇತ ತವ ಪಾದಸರೋಜಗಂಧ-
ಮಾಘ್ರಾಯ ಸನ್ಮುಖರಿತಂ ಜನತಾಪವರ್ಗಮ್ ।
ಲಕ್ಷ್ಮ್ಯಾಲಯಂ ತ್ವವಿಗಣಯ್ಯ ಗುಣಾಲಯಸ್ಯ
ಮರ್ತ್ಯಾ ಸದೋರುಭಯಮರ್ಥವಿವಿಕ್ತದೃಷ್ಟಿಃ ॥ ೪೨

ಬಂದಿದ್ದೇನೆ! ಇನ್ನು ಶಿಶುಪಾಲಾದಿಗಳ ವಿಷಯ ದೂರ ಉಳಿಯಿತು! (ಸರಿಯಾಗಿ ವಿಚಾರಮಾಡದೆ ನಿನ್ನನ್ನು ವರಿಸಿದ್ದೇನೆಂದು ಹೇಳುತ್ತೀಯಾ!) (೩೯). ಹೇ ಗದಾಗ್ರಜ, ಸಿಂಹವು ಕ್ಷುದ್ರಮೃಗಗಳನ್ನು ಹೆದರಿಸಿ ತನ್ನ ಪಾಲನ್ನು ಎತ್ತಿಕೊಂಡು ಹೋಗುವಂತೆ, ನೀನು ಶಾರ್ಙ್ಗಧನುಸ್ಸಿನ ಝೇಂಕಾರದಿಂದ ಭೂಪಾಲರನ್ನು ಓಡಿಸಿ ನಿನ್ನ ಭಾಗವಾದ ನನ್ನನ್ನು ತಂದುಕೊಂಡಿದ್ದೀಯೆ. ಹೀಗಿರುವಾಗ ಆ ರಾಜರಿಗೆ ಹೆದರಿ ಸಮುದ್ರಕ್ಕೆ ಶರಣಾದೆನೆಂದು ಹೇಳುವೆಯಲ್ಲ, ಇದೇ ಮೌಢ್ಯ! (೪೦). ನಿನ್ನ ಪಾದವನ್ನು ಸೇರಿಸಿಕೊಳ್ಳಬೇಕೆಂಬ ಇಚ್ಛೆಯಿಂದ (ವೇನನ ತಂದೆಯಾದ) ಅಂಗರಾಜ, (ವೇನನ ಮಗ) ಪೃಥು, ಭರತ, ನಹುಷ, ಗಯ-ಮೊದಲಾದ ರಾಜಾಧಿರಾಜರು ತಮ್ಮ ಸಾಮ್ರಾಜ್ಯವನ್ನು ತೊರೆದು ವನಕ್ಕೆ ಹೋದರಲ್ಲವೆ ? ಅಂಬುಜಾಕ್ಷ, ನಿನ್ನನ್ನು ಹಿಂಬಾಲಿಸಿ ನಡೆದ ಅವರು ಕಷ್ಟಕ್ಕೆ ಸಿಕ್ಕಿದರೆ ? (೪೧). ಸಜ್ಜನರಿಂದ ವರ್ಣಿತವೂ ಜನತೆಗೆ ಮೋಕ್ಷಪ್ರದವೂ ಲಕ್ಷ್ಮೀನಿಲಯವೂ ಆಗಿರುವ ಗುಣಾಕರನಾದ ನಿನ್ನ ಪಾದಕಮಲದ ಗಂಧವನ್ನು ಆಘ್ರಾಣಿಸಿರುವ ಯಾವ

ತಂ ತ್ವಾನುರೂಪಮಭಜಂ ಜಗತಾಮಧೀಶ-
ಮಾತ್ಮಾನಮತ್ರ ಚ ಪರತ್ರ ಚ ಕಾಮಪೂರಮ್ ।
ಸ್ಯಾನ್ಮೇ ತವಾಂಘ್ರಿರರಣಂ ಸೃತಿಭಿರ್ಭ್ರಮಂತ್ಯಾ
ಯೋ ವೈ ಭಜಂತಮುಪಯಾತ್ಯನೃತಾಪವರ್ಗಃ ॥ ೪೩

ತಸ್ಯಾಃ ಸ್ಯುರಚ್ಯುತ ನೃಪಾ ಭವತೋಪದಿಷ್ಟಾಃ
ಸ್ತ್ರೀಣಾಂ ಗೃಹೇಷು ಖರಗೋಶ್ವಬಿಡಾಲಭೃತ್ಯಾಃ ।
ಯತ್ಕರ್ಣಮೂಲಮರಿಕರ್ಷಣ ನೋಪಯಾಯಾದ್
ಯುಷ್ಮತ್ಕಥಾ ಮೃಡವಿರಿಂಚಸಭಾಸು ಗೀತಾ ॥ ೪೪

ತ್ವಕ್‌ಶ್ಮಶ್ರುರೋಮನಖಕೇಶಪಿನದ್ಧಮಂತ-
ರ್ಮಾಂಸಾಸ್ಥಿರಕ್ತ ಕೃಮಿವಿಟ್ಕಫಪಿತ್ತವಾತಮ್ ।
ಜೀವಚ್ಛವಂ ಭಜತಿ ಕಾಂತಮತಿರ್ವಿಮೂಢಾ
ಯಾ ತೇ ಪದಾಬ್ಜ ಮಕರಂದಮಜಿಘ್ರತೀ ಸ್ತ್ರೀ ॥ ೪೫

ಮಾನವ ಸ್ತ್ರೀಯು ತಾನೇ, ವಸ್ತು ವಿವೇಚನಾಶಕ್ತಿಯುಳ್ಳವಳಾಗಿದ್ದರೆ, ಸದಾ ಭಯವನ್ನು ಕೊಡುವ ಇನ್ನೊಬ್ಬನನ್ನು ಆಶ್ರಯಿಸಿಯಾಳು? (೪೨). ಇಹಪರಗಳಲ್ಲಿ ನನ್ನ ಇಷ್ಟಾರ್ಥಗಳನ್ನು ಸಲ್ಲಿಸತಕ್ಕವನೂ ಜಗದೊಡೆಯನೂ ಪರಮಾತ್ಮನೂ ಆದ ನೀನೇ ಅನುರೂಪನೆಂದು ತಿಳಿದು ನಿನ್ನನ್ನು ವರಿಸಿದ್ದೇನೆ. ದೇವಮಾನವಾದಿ ಜನನಮಾರ್ಗಗಳಲ್ಲಿ ತೊಳಲುವ ನನಗೆ ನಿನ್ನ ಪಾದವೇ ಶರಣಾಗಿರಲಿ. ಮಿಥ್ಯಾರೂಪವಾದ ಸಂಸಾರವನ್ನು ನಾಶಗೊಳಿಸುವ ನಿನ್ನ ಪಾದವು ಭಕ್ತರನ್ನು ಅನುಸರಿಸಿ ರಕ್ಷಿಸುತ್ತದೆ (೪೩). ಅಚ್ಯುತ-ಶತ್ರುವಿಧ್ವಂಸಕ, ಶಿವಸಭೆ ಬ್ರಹ್ಮಸಭೆಗಳಲ್ಲಿಯೂ ಹಾಡಲ್ಪಡುವ ನಿನ್ನ ಪಾವನಕಥೆಯು ಯಾವಳ ಕಿವಿಯ ಬುಡವನ್ನೂ ಸೇರಿಲ್ಲವೋ ಆ ಹೆಂಗಸಿಗೆ ನೀನು ಹೇಳಿದ ಶಿಶುಪಾಲಾದಿರಾಜರು ಗಂಡಂದಿರಾಗಲಿ! ಆ ರಾಜರು ಕತ್ತೆಗಳಂತೆ, ಎತ್ತುಗಳಂತೆ, ಕುದುರೆಗಳಂತೆ, ಬೆಕ್ಕುಗಳಂತೆ ಮನೆಗಳಲ್ಲಿ ಹೆಂಗಸರ ಸೇವೆಮಾಡಿಕೊಂಡಿರುವ ಭೃತ್ಯರು! (೪೪). ನಿನ್ನ ಪಾದಕಮಲದ ಮಕರಂದವನ್ನು ಯಾವಳು ಆಘ್ರಾಣಿಸಿಲ್ಲವೋ ಅಂತಹ ಮೂಢಸ್ತ್ರೀಯು ಯಾವನನ್ನು ಕಾಂತನೆಂದು ವರಿಸುತ್ತಾಳೆಂದರೆ, ಆತನು ಒಂದು

ಅಸ್ತ್ವಂಬುಜಾಕ್ಷ ಮಮ ತೇ ಚರಣಾನುರಾಗ
ಆತ್ಮನ್ ರತಸ್ಯ ಮಯಿ ಚಾನತಿರಿಕ್ತದೃಷ್ಟೇಃ ।
ಯರ್ಹ್ಯಸ್ಯ ವೃದ್ಧಯ ಉಪಾತ್ತರಜೋಽತಿಮಾತ್ರೋ
ಮಾಮೀಕ್ಷಸೇ ತದು ಹ ನಃ ಪರಮಾನುಕಂಪಾ ॥ ೪೬

ನೈವಾಲೀಕಮಹಂ ಮನ್ಯೇ ವಚಸ್ತೇ ಮಧುಸೂದನ ।
ಅಂಬಾಯಾ ಇವ ಹಿ ಪ್ರಾಯಃ ಕನ್ಯಾಯಾಃ ಸ್ಯಾದ್ ರತಿಃ ಕ್ವಚಿತ್ ॥ ೪೭

ವ್ಯೂಢಾಯಾಶ್ಚಾಪಿ ಪುಂಶ್ಚಲ್ಯಾ ಮನೋಽಭ್ಯೇತಿ ನವಂ ನವಮ್ ।
ಬುಧೋಽಸತೀಂ ನ ಬಿಭೃಯಾತ್ ತಾಂ ಬಿಭ್ರದುಭಯಚ್ಯುತಃ ॥ ೪೮

ಶ್ರೀಭಗವಾನುವಾಚ-
ಸಾಧ್ವ್ಯೇತಚ್ಛ್ರೋತುಕಾಮೈಸ್ತ್ವಂ ರಾಜಪುತ್ರಿ ಪ್ರಲಂಭಿತಾ ।
ಮಯೋದಿತಂ ಯದನ್ವಾತ್ಥ ಸರ್ವಂ ತತ್ ಸತ್ಯಮೇವ ಹಿ ॥ ೪೯

ಉಸಿರಾಡುವ ಹೆಣ! ಚರ್ಮವೆಂಬ ಹೊದಿಕೆಯಿಂದ ಸುತ್ತಿ, ಗಡ್ಡಮೀಸೆ ಉಗುರು ಕೂದಲುಗಳನ್ನು ಹೊರಗೆ ಸಿಕ್ಕಿಸಿ, ಒಳಗಡೆ ಮಾಂಸ ಮೂಳೆ ರಕ್ತ ಕ್ರಿಮಿ ಮಲ ಕಫ ಪಿತ್ತವಾತಗಳನ್ನು ತುಂಬಿರುವ ಹೆಣ ! (೪೫). ಅರವಿಂದಾಕ್ಷ, (ನಾವು ಉದಾಸೀನರು-ಎಂದು ಹೇಳಿದ್ದೀಯೆ) ಆಗಲಿ, ನನಗೆ ನಿನ್ನ ಚರಣಗಳಲ್ಲಿ ಅನುರಾಗವು ಸದಾ ಇರಲಿ ; ಆತ್ಮಾರಾಮನಾದ ನಿನಗೆ ನಾನುಅನ್ಯಳಲ್ಲವೆಂಬ ದೃಷ್ಟಿಯಿದ್ದು, ನನ್ನಲ್ಲಿ ಪ್ರೀತಿ ಇರಲಿ. ಈ ಜಗತ್ತಿನ ಏಳಿಗೆಗಾಗಿ ರಜೋಗುಣವನ್ನವಲಂಬಿಸಿದ ನೀನು ನನ್ನನ್ನು ನೋಡುತ್ತಿದ್ದರೆ ಸಾಕು, ಆಹಾ ! ಅದೇ ನನಗೆ ಪರಮಾನುಗ್ರಹ ! (೪೬). ಒಳ್ಳೆಯದು, ಮಧುಸೂದನ, ನಿನ್ನ ಮಾತೇನೂ ಸುಳ್ಳೆಂದು ನಾನು ತಿಳಿಯುವುದಿಲ್ಲ. ಅಂಬೆಗೆ[1] ಆದಂತೆ ಲೋಕದಲ್ಲಿ ಕನ್ಯೆಯೊಬ್ಬಳಿಗೆ ಬೇರೊಬ್ಬನಲ್ಲಿ ಆಸಕ್ತಿಹುಟ್ಟಬಹುದು. ಮದುವೆಯಾಗಿದ್ದರೂ ವ್ಯಭಿಚಾರಿಣಿಗೆ ಹೊಸ ಹೊಸಬನಲ್ಲಿ ಮನಸ್ಸು ನೆಡಬಹುದು. ವಿದ್ವಾಂಸನು ಅಂತಹ ಜಾರಿಣಿಯನ್ನು ಎಂದಿಗೂ ಮನೆಯಲ್ಲಿಟ್ಟುಕೊಳ್ಳಬಾರದು. ಇಲ್ಲದಿದ್ದರೆ ಅವನು, ಇಹಪರಗಳಿಲ್ಲದೆ ಉಭಯಭ್ರಷ್ಟನಾಗುತ್ತಾನೆ'' ಎಂದಳು (೪೭-೪೮).

---

[1] ಕಾಶೀರಾಜನ ಪುತ್ರಿಯರಾದ ಅಂಬೆ, ಅಂಬಾಲಿಕೆ, ಅಂಬಿಕೆಯರಲ್ಲಿಅಂಬೆಯು ಸಾಲ್ವನನ್ನು ಪ್ರೀತಿಸುತ್ತಿದ್ದಳು. ಅವಳ ಕಥೆ ಇಲ್ಲಿ ಸೂಚಿತವಾಗಿದೆ.

ಯಾನ್ ಯಾನ್ ಕಾಮಯಸೇ ಕಾಮಾನ್ ಮಯ್ಯಕಾಮಾಯ
ಭಾಮಿನಿ ।
ಸಂತಿ ಹ್ಯೇಕಾಂತಭಕ್ತಾಯಾಸ್ತವ ಕಲ್ಯಾಣಿ ನಿತ್ಯದಾ ॥ ೫೦

ಉಪಲಬ್ಧಂ ಪತಿಪ್ರೇಮ ಪಾತಿವ್ರತ್ಯಂ ಚ ತೇಽನಘೇ ।
ಯದ್ವಾಕ್ಯೈಶ್ಚಾಲ್ಯಮಾನಾಯಾ ನ ಧೀರ್ಮಯ್ಯಪಕರ್ಷಿತಾ ॥ ೫೧

ಯೇ ಮಾಂ ಭಜಂತಿ ದಾಂಪತ್ಯೇ ತಪಸಾ ವ್ರತಚರ್ಯಯಾ ।
ಕಾಮಾತ್ಮಾನೋಽಪವರ್ಗೇಶಂ ಮೋಹಿತಾ ಮಮ ಮಾಯಯಾ ॥ ೫೨

ಮಾಂ ಪ್ರಾಪ್ಯ ಮಾನಿನ್ಯ ಪವರ್ಗಸಂಪದಂ
ವಾಂಛಂತಿ ಯೇ ಸಂಪದ ಏವ ತತ್ಪತಿಮ್ ।
ತೇ ಮಂದಭಾಗ್ಯಾ ನಿರಯೇಽಪಿ ಯೇ ನೃಣಾಂ
ಮಾತ್ರಾತ್ಮಕತ್ವಾನ್ನಿರಯಃ ಸುಸಂಗಮಃ ॥ ೫೩

ಆಗ ಶ್ರೀಕೃಷ್ಣನು ''ಸಾಧ್ವಿ-ರುಕ್ಮಿಣಿ, ಈ ಮಾತನ್ನು ಕೇಳ ಬೇಕೆಂದೇ ನಾನು ಹಾಸ್ಯಮಾಡಿದೆನು ! ನನ್ನ ಮಾತಿಗೆ ಪ್ರತಿಯಾಗಿ ನೀನು ಹೇಳುತ್ತಿರುವುದು, ರಾಜಪುತ್ರಿ, ಸತ್ಯವೇ ಸರಿ. ನನ್ನ ವಿಷಯದಲ್ಲಿ ನೀನು ಯಾವ ಯಾವ ಬಯಕೆಗಳನ್ನಿಟ್ಟುಕೊಂಡಿರುವೆಯೋ ಅವೆಲ್ಲವೂ, ಹೇ ಮಂಗಳಾಂಗಿ, ನನ್ನ ಏಕಾಂತಭಕ್ತಳಾದ ನಿನಗೆ ಕಾಮನಾನಿವೃತ್ತಿಯಾಗಿ ಮೋಕ್ಷಪರ್ಯವಸಾಯಿಗಳಾಗುತ್ತವೆ (೪೯-೫೦). ನಿನ್ನಪತಿಪ್ರೇಮವೂ ಪಾತಿವ್ರತ್ಯವೂ ಸ್ಫುಟವಾಯಿತು. ಮಾತುಗಳಿಂದ ನಿನ್ನನ್ನು ಅಲ್ಲಾಡಿಸಿದರೂ ನಿನ್ನ ಬುದ್ಧಿಯೂ ನನ್ನನ್ನು ಬಿಟ್ಟು ಚಲಿಸಲಿಲ್ಲ. ಕಾಮನಾವಶರಾದ ಯಾವ ಯುವಜನರು (ತುಚ್ಛವಾದ) ದಾಂಪತ್ಯ ಸುಖಕ್ಕಾಗಿ ತಪಸ್ಸಿನಿಂದಲೂ ವ್ರತನಿಷ್ಠೆಯಿಂದಲೂ ಮೋಕ್ಷಪ್ರದನಾದ ನನ್ನನ್ನು ಸೇವಿಸುತ್ತಾರೋ ಅವರು ನನ್ನ ಮಾಯೆಯಿಂದ ಮೂಢರಾದವರೇ ಸರಿ (೫೧-೫೨). ಮಾನಿನಿ, ಮೋಕ್ಷ ಭೋಗಸಂಪತ್ತು-ಇವೆರಡಕ್ಕೂ ಅಧಿಪತಿಯಾದ ನನ್ನ ಬಳಿಗೆ ಬಂದು ಯಾರು ವಿಷಯಭೋಗವನ್ನುಮಾತ್ರ ಬಯಸುತ್ತಾರೋ ಅವರು ಭಾಗ್ಯಹೀನರು.

ದಿಷ್ಟ್ಯಾ ಗೃಹೇಶ್ವರ್ಯಸಕೃನ್ಮಯಿ ತ್ವಯಾ
ಕೃತಾನುವೃತ್ತಿರ್ಭವಮೋಚನೀ ಖಲೈಃ।
ಸುದುಷ್ಕರಾಸೌ ಸುತರಾಂ ದುರಾಶಿಷೋ
ಹ್ಯಸುಂಭರಾಯಾ ನಿಕೃತಿಂಜುಷಃ ಸ್ತ್ರಿಯಾಃ॥ ೫೪

ನ ತ್ವಾದೃಶೀಂ ಪ್ರಣಯಿನೀಂ ಗೃಹಿಣೀಂ ಗೃಹೇಷು
ಪಶ್ಯಾಮಿ ಮಾನಿನಿ ಯಯಾ ಸ್ವವಿವಾಹಕಾಲೇ।
ಪ್ರಾಪ್ತಾನ್ ನೃಪಾನವಗಣಯ್ಯ ರಹೋಹರೋ ಮೇ
ಪ್ರಸ್ಥಾಪಿತೋ ದ್ವಿಜ ಉಪಶ್ರುತಸತ್ಕಥಸ್ಯ॥ ೫೫

ಭ್ರಾತುರ್ವಿರೂಪಕರಣಂ ಯುಧಿ ನಿರ್ಜಿತಸ್ಯ
ಪ್ರೋದ್ವಾಹಪರ್ವಣಿ ಚ ತದ್ವಧಮಕ್ಷಗೋಷ್ಠ್ಯಾಮ್।
ದುಃಖಂ ಸಮುತ್ಥಮಸಹೋऽಸ್ಮದಯೋಗಭೀತ್ಯಾ
ನೈವಾಬ್ರವೀಃ ಕಿಮಪಿ ತೇನ ವಯಂ ಜಿತಾಸ್ತೇ॥ ೫೬

(ನಿಕೃಷ್ಟವಾದ ಕ್ರಿಮಿಕೀಟಾದಿ ಜನ್ಮವೆಂಬ) ನರಕದಲ್ಲಿಯೂ ವಿಷಯಭೋಗ ಇದ್ದೇ ಇದೆ. ಅಂಥವರಿಗೆ ವಿಷಯಾತ್ಮಕವಾದ ಆ ನರಕವು ಸುಲಭವಾಗಿ ಪ್ರಾಪ್ತವಾಗುತ್ತದೆ! (೫೩). ಗೃಹೇಶ್ವರಿ, ನೀನಾದರೋ ನನ್ನ ವಿಷಯದಲ್ಲಿ ಸಂಸಾರಮೋಚಕವಾದ ನಿಷ್ಕಾಮಾನುವೃತ್ತಿಯನ್ನೇ ಸದಾ ನಡೆಸಿಕೊಂಡು ಬಂದಿದ್ದೀಯೆ. ಇದು ನಿನ್ನ ಭಾಗ್ಯ. ದುಷ್ಟಬುದ್ಧಿಯವರಿಗೆ ಇಂಥ ಅನುವೃತ್ತಿ ದುರ್ಲಭ. ಕೆಟ್ಟಕಾಮನೆಗಳನ್ನಿಟ್ಟುಕೊಂಡು ಹೊಟ್ಟೆಬುರುಕಳೂ ವಂಚನಾಪರಳೂ ಆದ ಸ್ತ್ರೀಗೆ ಈ ಚಿತ್ತಶುದ್ಧಿ ಎಂದಿಗೂ ಬರದು (೫೪). ಹೇ ಮಾನಿನಿ, ನಿನ್ನಂತಹ ಪತಿಪ್ರೇಮವುಳ್ಳ ಗೃಹಿಣಿಯನ್ನು ಯಾವ ಸಂಸಾರಿಗಳ ಮನೆಯಲ್ಲಿಯೂ ನಾನು ಕಾಣಲಿಲ್ಲ! ನಿನ್ನ ಮದುವೆಯ ಸಮಯದಲ್ಲಿ ಬಂದು ನೆರೆದಿದ್ದ ರಾಜರನ್ನು ನೀನು ಧಿಕ್ಕರಿಸಿ, ಪರೋಕ್ಷವಾಗಿ ನನ್ನ ಕಥೆಯನ್ನು ಕೇಳಿದ್ದರೂ ಸಹ, ಗುಪ್ತಸಂದೇಶವನ್ನು ಹೊತ್ತ ಬ್ರಾಹ್ಮಣನನ್ನು ನನ್ನ ಬಳಿಗೆ

ದೂತಸ್ತ್ವಯಾಽಽತ್ಮಲಭನೇ ಸುವಿವಿಕ್ತಮಂತ್ರಃ
ಪ್ರಸ್ಥಾಪಿತೋ ಮಯಿ ಚಿರಾಯತಿ ಶೂನ್ಯಮೇತತ್ ।
ಮತ್ವಾಜಿಹಾಸ ಇದಮಂಗಮನನ್ಯಯೋಗ್ಯಂ
ತಿಷ್ಠೇತ ತತ್ತ್ವಯಿ ವಯಂ ಪ್ರತಿನಂದಯಾಮಃ ॥ ೫೭

ಶ್ರೀಶುಕ ಉವಾಚ

ಏವಂ ಸೌರತಸಂಲಾಪೈರ್ಭಗವಾನ್ ಜಗದೀಶ್ವರಃ ।
ಸ್ವರತೋ ರಮಯಾ ರೇಮೇ ನರಲೋಕಂ ವಿಡಂಬಯನ್ ॥ ೫೮

ಕಳಿಸಿದ್ದೀಯೆ (೫೫). ಅನಂತರ ನಡೆದ ಯುದ್ಧದಲ್ಲಿ ಸೋತು ಹೋದ ನಿನ್ನ ಅಣ್ಣನನ್ನು ನಾನು ವಿರೂಪಗೊಳಿಸಿದರೂ, ಮುಂದೆ ಅನಿರುದ್ಧನ ವಿವಾಹ ಸಂದರ್ಭದ ದ್ಯೂತಸಭೆಯಲ್ಲಿ ನಿನ್ನ ಅಣ್ಣನನ್ನು (ಬಲರಾಮನು) ಕೊಂದು ಹಾಕಿದರೂ* ಅದನ್ನು ಕಣ್ಣಾರೆ ಕಂಡ ನೀನು ದುಃಖವನ್ನು ಸಹಿಸಿಕೊಂಡೆಯೇ ಹೊರತು ಒಂದು ಮಾತನ್ನು ನನಗೆ ಪ್ರತಿಯಾಗಿ ಹೇಳಲಿಲ್ಲ. ನನ್ನನ್ನು ಅಗಲಬೇಕಾದಿತೆಂಬ ಭಯದಿಂದ ಮಾತಾಡಲಿಲ್ಲ. ಭಾಮಿನಿ, ನಿಜವಾಗಿಯೂ ನಿನಗೆ ಸೋತವನು ನಾನೇ ! (೫೬). ಮನೋವಲ್ಲಭೆ, ನನ್ನನ್ನು ಪಡೆಯುವುದಕ್ಕಾಗಿ ಕಾರ್ಯಕುಶಲನಾದ ದೂತನನ್ನು ಕಳಿಸಿದ್ದೀಯೆ. ನಾನು ಬರುವುದು ತಡವಾಗಲು ಜಗತ್ತೇ ಶೂನ್ಯವೆಂದು ತಿಳಿದು, ಈ ದೇಹವು ಇನ್ನೊಬ್ಬರಿಗೆ ಯೋಗ್ಯವಲ್ಲವೆಂದು ಭಾವಿಸಿ, ದೇಹವನ್ನೇ ತೊರೆಯಲು ಬಯಸಿದವಳು ನೀನು. ಅಂತಹ ಸದ್ಭಾವನೆ ನಿನ್ನಲ್ಲಿ ಉಳಿಯಿತೇ ಹೊರತು ಅದಕ್ಕೆ ನನ್ನ ಪ್ರತ್ಯುಪಕಾರ ಯಾವುದು ? ಒಣಮಾತಿನಿಂದ ಸಂತೋಷಪಡಿಸುತ್ತಿದ್ದೇನೆ !'' ಎಂದನು (೫೭). ಪರೀಕ್ಷಿತ, ಆತ್ಮಾರಾಮನೂ ಜಗದೀಶ್ವರನೂ ಆದ ಭಗವಂತನು ಲೋಕವಿಡಂಬನೆಗಾಗಿ ಮಾನವನಂತೆ ನಟಿಸುತ್ತ, ಸರಸಸಲ್ಲಾಪಗಳಿಂದ

---

*ಈ ಸಂಭಾಷಣೆಯು ಮುಂದಿನ ಅಧ್ಯಾಯದಲ್ಲಿ ಹೇಳುವ ಅನಿರುದ್ಧವಿವಾಹಾನಂತರದಲ್ಲಿ ನಡೆಯಿತೆಂದು ಇದರಿಂದ ಗೊತ್ತಾಗುತ್ತದೆ.

ತಥಾನ್ಯಾಸಾಮಪಿ ವಿಭುರ್ಗೃಹೇಷು ಗೃಹವಾನಿವ ।
ಆಸ್ಥಿತೋ ಗೃಹಮೇಧೀಯಾನ್ ಧರ್ಮಾಂಲ್ಲೋಕಗುರುರ್ಹರಿಃ ॥ ೪೯

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ಷಷ್ಟಿತಮಾಧ್ಯಾಯಃ

ಏಕಷಷ್ಟಿತಮಾಧ್ಯಾಯಃ

ಶ್ರೀಶುಕ ಉವಾಚ-

ಏಕೈಕಶಸ್ತಾಃ ಕೃಷ್ಣಸ್ಯ ಪುತ್ರಾನ್ ದಶ ದಶಾಬಲಾಃ ।
ಅಜೀಜನನ್ನ ನವಮಾನ್ಪಿತುಃ ಸರ್ವಾತ್ಮ ಸಂಪದಾ ॥ ೧

ಗೃಹಾದನಪಗಂ ವೀಕ್ಷ್ಯ ರಾಜಪುತ್ರ್ಯೋಽಚ್ಯುತಂ ಸ್ಥಿತಮ್ ।
ಪ್ರೇಷ್ಠಂ ನ್ಯಮಂಸತ ಸ್ವಂ ಸ್ವಂ ನ ತತ್ತತ್ತ್ವವಿದಃ ಸ್ತ್ರಿಯಃ ॥ ೨

ಸಾಕ್ಷಾಲಕ್ಷ್ಮಿಯಾದ ರುಕ್ಮಿಣಿಯೊಡನೆ ಹೀಗೆ ವಿನೋದಿಸುತ್ತಿದ್ದನು (೪೮). ಹಾಗೆಯೇ ಲೋಕಗುರುವಾದ ಆ ಪ್ರಭು ಇತರ ಪತ್ನಿಯರ ಮನೆಗಳಲ್ಲಿಯೂ ಗೃಹಸ್ಥನಂತೆ ಸಂಸಾರದ ಗೃಹಧರ್ಮವನ್ನು ನಡೆಸುತ್ತಿದ್ದನು (೪೯).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಅರವತ್ತನೆಯ ಅಧ್ಯಾಯ

ಅಧ್ಯಾಯ ೬೧

ಶ್ರೀಕೃಷ್ಣನ ಸಂತತಿಯ ವರ್ಣನೆ, ಅನಿರುದ್ಧನ ವಿವಾಹ, ಬಲರಾಮನಿಂದ
ರುಕ್ಮಿಯ ವಧೆ.

ಪರೀಕ್ಷಿತರಾಜ, ಶ್ರೀಕೃಷ್ಣನ ಪ್ರತಿಯೊಬ್ಬ ಪತ್ನಿಯರೂ ಸಮಸ್ತ ಆತ್ಮಗುಣ ಸಂಪತ್ತಿನಿಂದ ತಂದೆಗೆ ಸದೃಶರಾದ ಹತ್ತು ಹತ್ತು ಮಕ್ಕಳನ್ನು ಪಡೆದರು. ಯಾವಾಗಲೂ ಹೊರಗೆ ಹೋಗದೆ ಮನೆಯಲ್ಲಿಯೇ ಇರುವ ಶ್ರೀಕೃಷ್ಣನನ್ನು ನೋಡಿ ಆ ರಾಜಪುತ್ರಿಯರು ತಾನೇ ಆತನಿಗೆ ಸರ್ವರಿಗಿಂತ ಪ್ರಿಯತಮೆಯೆಂದು ತಿಳಿದುಕೊಂಡಿದ್ದರು! ಆತನ ಯಥಾರ್ಥತೆಯನ್ನು ಅವರು ಅರಿಯರು! (೧-೨).

ಚಾರ್ವಬ್ಜಕೋಶವದನಾಯತಬಾಹುನೇತ್ರ-
ಸಪ್ರೇಮಹಾಸರಸವೀಕ್ಷಿತವಲ್ಗುಜಲ್ಪೈಃ।
ಸಮ್ಮೋಹಿತಾ ಭಗವತೋ ನ ಮನೋ ವಿಜೇತುಂ
ಸ್ವೈರ್ವಿಭ್ರಮೈಃ ಸಮಶಕನ್ ವನಿತಾ ವಿಭೂಮ್ನಃ॥ ೩

ಸ್ಮಾಯಾವಲೋಕಲವದರ್ಶಿತಭಾವಹಾರಿ-
ಭ್ರೂಮಂಡಲಪ್ರಹಿತಸೌರತಮಂತ್ರಶೌಂಡೈಃ।
ಪತ್ನ್ಯಸ್ತು ಷೋಡಶಸಹಸ್ರಮನಂಗಬಾಣೈ-
ರ್ಯಸ್ಯೇಂದ್ರಿಯಂ ವಿಮಥಿತುಂ ಕರಣೈರ್ನ ಶೇಕುಃ॥ ೪

ಇತ್ಥಂ ರಮಾಪತಿಮವಾಪ್ಯ ಪತಿಂ ಸ್ತ್ರಿಯಸ್ತಾ
ಬ್ರಹ್ಮಾದಯೋಽಪಿ ನ ವಿದುಃ ಪದವೀಂ ಯದೀ-
ಯಾಮ್।
ಭೇಜುರ್ಮುದಾವಿರತಮೇಧಿತಯಾನುರಾಗ-
ಹಾಸಾವಲೋಕನವಸಂಗಮಲಾಲಸಾದ್ಯಮ್॥ ೫

ಭಗವಂತನ ಕಮಲದಂತಹ ಸುಂದರಮುಖ, ನೀಳವಾದ ತೋಳುಗಳು, ಆಯತ ನೇತ್ರಗಳು, ಪ್ರೇಮಪೂರ್ಣವಾಗಿ ಹಾಸ್ಯರಸದಿಂದ ತುಳುಕುವ ನೋಟ ಮರಳ್ಗೊಳಿಸುವ ನರ್ಮವಚನ-ಇವುಗಳಿಂದ ಆ ಸ್ತ್ರೀಯರು ತಾವು ಮೋಹಿತರಾದರೇ ಹೊರತು, ತಮ್ಮ ಬೆಡಗು ಬಿನ್ನಾಣಗಳಿಂದ ಆ ವಿಭುವಿನ ಮನಸ್ಸನ್ನು ಅಪಹರಿಸಲು ಶಕ್ತರಾಗಲಿಲ್ಲ! (೩). ಮುಗುಳ್ನಗೆಯ ಕಡೆಗಣ್ಣೋಟದಿಂದ ಗೂಢಾಭಿಪ್ರಾಯವನ್ನು ಪ್ರಕಟಿಸುತ್ತ, ಮನೋಹರವಾದ ಹುಬ್ಬುಗಳಿಂದ ಹಾರಿಸಿದ ಸುರತಮಂತ್ರ ದಕ್ಷವಾದ ಮನ್ಮಥ ಬಾಣಗಳಿಂದಲೂ ಮತ್ತಿತರ ಬೆಡಗಿನ ಸಾಧನಗಳಿಂದಲೂ ಆ ಹದಿನಾರುಸಾವಿರ ಪತ್ನಿಯರೂ ಸಹ ಭಗವಂತನ ಮನಸ್ಸನ್ನು ವಿಕಾರಗೊಳಿಸಲು ಶಕ್ತರಾಗಲಿಲ್ಲ(೪). ಬ್ರಹ್ಮಾದಿಗಳೂ ಯಾರ ದಾರಿಯನ್ನರಿಯರೋ ಅಂತಹ ಲಕ್ಷ್ಮೀಪತಿಯನ್ನು ತಮ್ಮ ಪತಿಯನ್ನಾಗಿ ಪಡೆದ ಆ ವನಿತೆಯರು, ಎಡೆಬಿಡದೆ ವರ್ಧಿಸುವ ಆನಂದದಿಂದ, ಅನುರಾಗದ ಮುಗುಳ್ನಗೆಯ ನೋಟ, ನವಸಂಗಮ* ಲಾಲಸೆಗಳಿಂದ ಆತನನ್ನು ಸೇವಿಸಿದರು

* ಆ ಸ್ತ್ರೀಯರು ಪ್ರೌಢಭಾವದಲ್ಲಿದ್ದುದರಿಂದ ನವಸಂಗಮವಲ್ಲದಿದ್ದರೂ ಔತ್ಸುಕ್ಯ ಸಂತೋಷಗಳಿಂದ ನವಸಂಗಮದಂತೆ ತೋರುತ್ತಿದ್ದಿತೆಂದು ಅಭಿಪ್ರಾಯ.

ಪ್ರತ್ಯುದ್ಗಮಾಸನವರಾರ್ಹಣಪಾದ ಶೌಚ-
ತಾಂಬೂಲವಿಶ್ರಮಣವೀಜನಗಂಧಮಾಲ್ಯೈಃ।
ಕೇಶಪ್ರಸಾರಶಯನಸ್ನಪನೋಪಹಾರ್ಯೈ-
ರ್ದಾಸೀಶತಾ ಅಪಿ ವಿಭೋರ್ವಿದಧುಃ ಸ್ಮ ದಾಸ್ಯಮ್ ॥ ೬

ತಾಸಾಂ ಯಾ ದಶಪುತ್ರಾಣಾಂ ಕೃಷ್ಣಸ್ತ್ರೀಣಾಂ ಪುರೋದಿತಾಃ।
ಅಷ್ಟೌ ಮಹಿಷ್ಯಸ್ತತ್ಪುತ್ರಾನ್ ಪ್ರದ್ಯುಮ್ನಾದೀನ್ ಗೃಣಾಮಿ ತೇ ॥ ೭

ಚಾರುದೇಷ್ಣಃ ಸುದೇಷ್ಣಶ್ಚ ಚಾರುದೇಹಶ್ಚ ವೀರ್ಯವಾನ್।
ಸುಚಾರುಶ್ಚಾರುಗುಪ್ತಶ್ಚ ಭದ್ರಚಾರುಸ್ತಥಾಪರಃ ॥ ೮

ಚಾರುಚಂದ್ರೋ ವಿಚಾರುಶ್ಚ ಚಾರುಶ್ಚ ದಶಮೋ ಹರೇಃ।
ಪ್ರದ್ಯುಮ್ನಪ್ರಮುಖಾ ಜಾತಾ ರುಕ್ಮಿಣ್ಯಾಂ ನಾವಮಾಃ ಪಿತುಃ ॥ ೯

ಭಾನುಃ ಸುಭಾನುಃ ಸ್ವರ್ಭಾನುಃ ಪ್ರಭಾನುರ್ಭಾನುಮಾಂಸ್ತಥಾ।
ಚಂದ್ರಭಾನುರ್ಬೃಹದ್ಭಾನುರತಿಭಾನುಸ್ತಥಾಷ್ಟಮಃ ॥ ೧೦

---

(೫). ಅವರಿಗೆ ನೂರಾರು ಮಂದಿ ದಾಸಿಯರಿದ್ದರೂ ತಾವೇ ಮುಂದಾಗಿ ಶ್ರೀಕೃಷ್ಣನು ಬಂದಾಗ ಎದುರ್ಗೊಳ್ಳುವುದು, ಪೀಠವನ್ನಿತ್ತು ಚೆನ್ನಾಗಿ ಸತ್ಕರಿಸುವುದು, ಪಾದವನ್ನು ತೊಳೆಯುವುದು, ತಾಂಬೂಲವನ್ನು ಕೊಡುವುದು, ವಿಶ್ರಾಂತಿಗೆ ಸೌಕರ್ಯವನ್ನು ಮಾಡುವುದು, ಗಾಳಿಹಾಕುವುದು, ಗಂಧಮಾಲ್ಯಗಳಿಂದ ಅಲಂಕರಿಸುವುದು, ತಲೆಗೂದಲನ್ನು ತಿದ್ದುವುದು, ಹಾಸಿಗೆಹಾಸುವುದು, ಸ್ನಾನಮಾಡಿಸುವುದು, ಭೋಜನಕ್ಕೆ ಬಡಿಸುವುದು-ಮೊದಲಾದ ಕೆಲಸಗಳನ್ನು ಮಾಡಿ ಅವನನ್ನು ಸೇವಿಸುತ್ತಿದ್ದರು (೬). ಪರೀಕ್ಷಿತರಾಜ, ಹತ್ತು ಹತ್ತು ಮಂದಿ ಮಕ್ಕಳನ್ನು ಪಡೆದ ಶ್ರೀಕೃಷ್ಣನ ಪತ್ನಿಯರಲ್ಲಿ ಅಷ್ಟಮಹಿಷಿಯರ ವಿಷಯವನ್ನು ಹಿಂದೆ ಹೇಳಲಾಯಿತಷ್ಟೆ, ಅವರ ಮಕ್ಕಳಾದ ಪ್ರದ್ಯುಮ್ನ ಮೊದಲಾದವರ ಹೆಸರನ್ನು ನಿನಗೆ ತಿಳಿಸುತ್ತೇನೆ (೭). ರುಕ್ಮಿಣಿಯಲ್ಲಿ- ಪ್ರದ್ಯುಮ್ನ, ಚಾರುದೇಷ್ಣ ಸುದೇಷ್ಣ ಚಾರುದೇಹ, ಸುಚಾರು, ಚಾರುಗುಪ್ತ ಭದ್ರಚಾರು, ಚಾರು ಚಂದ್ರ, ವಿಚಾರು ಮತ್ತು ಚಾರು ಎಂಬ ದಶಪುತ್ರರು ತಂದೆಗೆ ಸಮಾನರಾಗಿ ಜನಿಸಿದನು (೮-೯). ಸತ್ಯಭಾಮೆಗೆ- ಭಾನು, ಸುಭಾನು, ಸ್ವರ್ಭಾನು, ಪ್ರಭಾನು, ಭಾನುಮಾನ್,

ಶ್ರೀಭಾನುಃ ಪ್ರತಿಭಾನುಶ್ಚ ಸತ್ಯಭಾಮಾತ್ಮಜಾ ದಶ ।
ಸಾಂಬಃ ಸುಮಿತ್ರಃ ಪುರುಜಿಚ್ಛತಜಿಚ್ಚ ಸಹಸ್ರಜಿತ್ ॥ ೧೧

ವಿಜಯಶ್ಚಿತ್ರಕೇತುಶ್ಚ ವಸುಮಾನ್ ದ್ರವಿಡಃ ಕ್ರತುಃ ।
ಜಾಂಬವತ್ಯಾಃ ಸುತಾ ಹ್ಯೇತೇ ಸಾಂಬಾದ್ಯಾಃ ಪಿತೃಸಂಮತಾಃ ॥ ೧೨

ವೀರಶ್ಚಂದ್ರೋಽಶ್ವಸೇನಶ್ಚ ಚಿತ್ರಗುರ್ವೇಗವಾನ್ ವೃಷಃ ।
ಆಮಃ ಶಂಕುರ್ವಸುಃ ಶ್ರೀಮಾನ್ ಕುಂತಿರ್ನಾಗ್ನಜಿತೇಃ ಸುತಾಃ ॥ ೧೩

ಶ್ರುತಃ ಕವಿರ್ವೃಷೋ ವೀರಃ ಸುಬಾಹುರ್ಭದ್ರ ಏಕಲಃ ।
ಶಾಂತಿರ್ದರ್ಶಃ ಪೂರ್ಣಮಾಸಃ ಕಾಲಿಂದ್ಯಾಃ ಸೋಮಕೋಽವರಃ ॥ ೧೪

ಪ್ರಘೋಷೋ ಗಾತ್ರವಾನ್ಸಿಂಹೋ ಬಲಃ ಪ್ರಬಲ ಊರ್ಧ್ವಗಃ ।
ಮಾದ್ರ್ಯಾಃ ಪುತ್ರಾ ಮಹಾಶಕ್ತಿಃ ಸಹ ಓಜೋಽಪರಾಜಿತಃ ॥ ೧೫

ವೃಕೋ ಹರ್ಷೋಽನಿಲೋ ಗೃಧ್ರೋ ವರ್ಧನೋಽನ್ನಾದ ಏವ ಚ ।
ಮಹಾಶಃ ಪಾವನೋ ವಹ್ನಿರ್ಮಿತ್ರವಿಂದಾತ್ಮಜಾಃ ಕ್ಷುಧಿಃ । ೧೬

ಚಂದ್ರಭಾನು, ಬೃಹದ್ಭಾನು, ಅತಿಭಾನು, ಶ್ರೀಭಾನು ಮತ್ತು ಪ್ರತಿಭಾನುಗಳೆಂಬ ಹತ್ತು ಮಕ್ಕಳು. ಜಾಂಬವತಿಯಲ್ಲಿ -ಸಾಂಬ, ಸುಮಿತ್ರ, ಪುರುಜಿತ್, ಶತಜಿತ್, ಸಹಸ್ರಜಿತ್, ವಿಜಯ, ಚಿತ್ರಕೇತು, ವಸುಮಾನ್, ದ್ರವಿಡ ಮತ್ತು ಕ್ರತು ಎಂಬ ಹತ್ತು ಮಂದಿ ಪುತ್ರರು (೧೦-೧೨). ನಗ್ನಜಿತನ ಮಗಳಾದ ಸತ್ಯೆಯಲ್ಲಿ- ವೀರ, ಚಂದ್ರ, ಅಶ್ವಸೇನ, ಚಿತ್ರಗು, ವೇಗಾವಾನ್, ವೃಷ, ಆಮ, ಶಂಕು, ವಸು ಮತ್ತು ಕುಂತಿ ಎಂಬ ದಶ ಪುತ್ರರು ಜನಿಸಿದರು (೧೩). ಕಾಳಿಂದಿಯಲ್ಲಿ- ಶ್ರುತ, ಕವಿ, ವೃಷ, ವೀರ, ಸುಭಾಹು, ಭದ್ರ ಎಂಬವನೊಬ್ಬ, ಶಾಂತಿ, ದರ್ಶ, ಪೂರ್ಣಮಾಸ ಮತ್ತು ಎಲ್ಲರಿಗೂ ಕಿರಿಯನಾದ ಸೋಮಕ- ಎಂಬ ಹತ್ತು ಮಂದಿ ಮಕ್ಕಳು ಹುಟ್ಟಿದರು (೧೪). ಮದ್ರರಾಜನ ಪುತ್ರಿಯಾದ ಲಕ್ಷ್ಮಣೆಯಲ್ಲಿ- ಪ್ರಘೋಷ, ಗಾತ್ರವಾನ್, ಸಿಂಹ, ಬಲ, ಪ್ರಬಲ, ಊರ್ಧ್ವಗ, ಮಹಾಶಕ್ತಿ, ಸಹ, ಓಜ, ಮತ್ತು ಅಪರಾಜಿತ ಎಂಬುವರು ಉದಯಿಸಿದರು(೧೫). ಮಿತ್ರವಿಂದೆಗೆ- ವೃಕ, ಹರ್ಷ, ಅನಿಲ, ಗೃಧ್ರ, ವರ್ಧನ, ಅನ್ನಾದ, ಮಹಾಶ, ಪಾವನ, ವಹ್ನಿ ಮತ್ತು ಕ್ಷುಧಿ ಎಂಬುವರು

ಸಂಗ್ರಾಮಜಿದ್ ಬೃಹತ್ಸೇನಃ ಶೂರಃ ಪ್ರಹರಣೋऽರಿಜಿತ್ ।
ಜಯಃ ಸುಭದ್ರೋ ಭದ್ರಾಯಾ ವಾಮ ಆಯುಶ್ಚ ಸತ್ಯಕಃ ॥ ೧೭

ದೀಪ್ತಿಮಾಂಸ್ತಾಮ್ರತಪ್ತಾದ್ಯಾ ರೋಹಿಣ್ಯಾಸ್ತನಯಾ ಹರೇಃ ।
ಪ್ರದ್ಯುಮ್ನಾಚ್ಚಾನಿರುದ್ಧೋऽಭೂದ್ರುಕ್ಮವತ್ಯಾಂ ಮಹಾಬಲಃ ॥ ೧೮

ಪುತ್ರ್ಯಾಂ ತು ರುಕ್ಮಿಣೋ ರಾಜನ್ ನಾಮ್ನಾ ಭೋಜಕಟೇ ಪುರೇ ।
ಏತೇಷಾಂ ಪುತ್ರಪೌತ್ರಾಶ್ಚ ಬಭೂವುಃ ಕೋಟಿಶೋ ನೃಪ ।
ಮಾತರಃ ಕೃಷ್ಣಜಾತಾನಾಂ ಸಹಸ್ರಾಣಿ ಚ ಷೋಡಶ ॥ ೧೯

ರಾಜೋವಾಚ-

ಕಥಂ ರುಕ್ಮ್ಯರಿಪುತ್ರಾಯ ಪ್ರಾದಾದ್ ದುಹಿತರಂ ಯುಧಿ ।
ಕೃಷ್ಣೇನ ಪರಿಭೂತಸ್ತಂ ಹಂತುಂ ರಂಧ್ರಂ ಪ್ರತೀಕ್ಷತೇ ।
ಏತದಾಖ್ಯಾಹಿ ಮೇ ವಿದ್ವನ್ ದ್ವಿಷೋರ್ವೈವಾಹಿಕಂ ಮಿಥಃ ॥ ೨೦

ಹುಟ್ಟಿದರು (೧೬). ಭದ್ರೆಯಲ್ಲಿ-ಸಂಗ್ರಾಮಜಿತ್, ಬೃಹತ್ಸೇನ, ಶೂರ, ಪ್ರಹರಣ, ಅರಿಜಿತ್, ಜಯ, ಸುಭದ್ರ, ವಾಮ, ಆಯು ಮತ್ತು ಸತ್ಯಕ ಎಂಬುವರು ಉದಿಸಿದರು[1] (೧೭). ರೋಹಿಣಿಯಲ್ಲಿ-ದೀಪ್ತಿಮಾನ್ ತಾಮ್ರತಪ್ತ ಮೊದಲಾದವರು ಶ್ರೀಕೃಷ್ಣನ ಮಕ್ಕಳಾಗಿ ಜನಿಸಿದರು. ರುಕ್ಮಿಣೀಪುತ್ರನಾದ ಪ್ರದ್ಯುಮ್ನನಿಂದ ರುಕ್ಮವತಿಯಲ್ಲಿ ಬಲಾಢ್ಯನಾದ ಅನಿರುದ್ಧನು ಹುಟ್ಟಿದನು (೧೮). ರುಕ್ಮವತಿಯು ರುಕ್ಮಿಯ ಮಗಳು. ಭೋಜಕಟಪುರದಲ್ಲಿ ಅನಿರುದ್ಧನನ್ನು ಅವಳು ಪ್ರಸವಿಸಿದಳು. ಪರೀಕ್ಷಿತರಾಜ, ಹೀಗೆಯೇ ಇವರಿಗೆ ಪುತ್ರರೂ ಪೌತ್ರರೂ ಕೋಟಿಗಟ್ಟಲೆ ಹುಟ್ಟಿದರು. ಒಟ್ಟು ಶ್ರೀಕೃಷ್ಣನ ಮಕ್ಕಳಿಗೆ ಹದಿನಾರುಸಾವಿರ ತಾಯಂದಿರು-ಎಂದು ಶುಕಮುನಿಗಳು ಹೇಳಿದರು (೧೯). ಆಗ ಪರೀಕ್ಷಿತರಾಜನು ''ಮಹರ್ಷಿಗಳೆ, ರುಕ್ಮಿಯು ವೈರಿಯ ಪುತ್ರನಾದ ಪ್ರದ್ಯುಮ್ನನಿಗೆ

---

[1]ರುಕ್ಮಿಣೀ ಮೊದಲಾದವರು ಶ್ರೀಕೃಷ್ಣನ ಅಷ್ಟಮಹಿಷಿಯರು. ಮುಂದೆ ರೋಹಿಣಿಯನ್ನು ಹೇಳಿದ್ದು ಉಳಿದ ಪತ್ನಿಯರಿಗೆ ಉಪಲಕ್ಷಣ.ಮೇಲ್ಕಂಡ ಪುತ್ರ ಹೆಸರು ಪಾಠಭೇದದಿಂದ ಕೆಲವೆಡೆ ಬೇರೆ ಬೇರೆ ಇದೆ.

ಅನಾಗತಮತೀತಂ ಚ ವರ್ತಮಾನಮತೀಂದ್ರಿಯಮ್ ।
ವಿಪ್ರಕೃಷ್ಟಂ ವ್ಯವಹಿತಂ ಸಮ್ಯಕ್ ಪಶ್ಯಂತಿ ಯೋಗಿನಃ ॥ ೨೧

ಶ್ರೀಶುಕ ಉವಾಚ-

ವೃತಃ ಸ್ವಯಂವರೇ ಸಾಕ್ಷಾದನಂಗೋಽಂಗಯುತಸ್ತಯಾ ।
ರಾಜ್ಞಃ ಸಮೇತಾನ್ ನಿರ್ಜಿತ್ಯ ಜಹಾರೈಕರಥೋ ಯುಧಿ ॥ ೨೨

ಯದ್ಯಪ್ಯನುಸ್ಮರನ್ ವೈರಂ ರುಕ್ಮೀ ಕೃಷ್ಣಾವಮಾನಿತಃ ।
ವ್ಯತರದ್ ಭಾಗಿನೇಯಾಯ ಸುತಾಂ ಕುರ್ವನ್ ಸ್ವಸುಃ ಪ್ರಿಯಮ್ ॥ ೨೩

ರುಕ್ಮಿಣ್ಯಾಸ್ತನಯಾಂ ರಾಜನ್ ಕೃತವರ್ಮಸುತೋ ಬಲೀ ।
ಉಪಯೇಮೇ ವಿಶಾಲಾಕ್ಷೀಂ ಕನ್ಯಾಂ ಚಾರುಮತೀಂ ಕಿಲ ॥ ೨೪

ತನ್ನ ಮಗಳನ್ನು ಕೊಟ್ಟು ಮದುವೆಮಾಡಿದ್ದು ಹೇಗೆ ? ಯುದ್ಧದಲ್ಲಿ ಶ್ರೀಕೃಷ್ಣನಿಂದ ಸೋತುಹೋದ ರುಕ್ಮಿಯು ಅವನನ್ನು ಕೊಲ್ಲುವ ಅವಕಾಶಕ್ಕಾಗಿ ಹವಣಿಸುತ್ತಿದ್ದನಲ್ಲವೆ ? ಇಂತಹ ವೈರಿಗಳ ನಡುವೆ ಮದುವೆಯ ವಿಧಿ ಹೇಗೆ ಜರುಗಿತು ? ಇದನ್ನು ಹೇಳೋಣವಾಗಲಿ (೨೦). ತಮ್ಮಂತಹ ಯೋಗಿಗಳಿಗೆ ಭೂತ ಭವಿಷ್ಯದ್ ವರ್ತಮಾನದ ವಿಷಯಗಳು, -ನಮ್ಮಂತಹವರ ಇಂದ್ರಿಯಗಳಿಗೆ ಗೋಚರವಲ್ಲದ್ದು, ದೂರದಲ್ಲಿರುವುದು, ಮರೆಯಾಗಿರುವುದು - ಎಲ್ಲವೂ ಚೆನ್ನಾಗಿ ತಿಳಿದುಬರುತ್ತವೆ'' ಎಂದನು (೨೧). ಶುಕಮುನಿಗಳು ಹೇಳಿದರು; ರಾಜ, ಸ್ವಯಂವರ ನಡೆಯಿತು. ಅದರಲ್ಲಿ ಸಾಕ್ಷಾತ್ ದೇಹವನ್ನು ಧರಿಸಿದ ಮನ್ಮಥನಾದ ಪ್ರದ್ಯುಮ್ನನನ್ನು ರುಕ್ಮವತಿಯು ವರಿಸಿದಳು. ಪ್ರದ್ಯುಮ್ನನು ಆಗ ತೊಡಗಿದ ಯುದ್ಧದಲ್ಲಿ ಏಕರಥನಾಗಿ ಹೋರಾಡಿ ಎಲ್ಲ ರಾಜರನ್ನೂ ಗೆದ್ದು ಅವಳನ್ನು ಒಯ್ದನು (೨೨). ಶ್ರೀಕೃಷ್ಣನಿಂದ ಅವಮಾನಿತನಾದ ರುಕ್ಮಿಗೆ ವೈರದ ಸ್ಮರಣೆಯಿದ್ದರೂ ಸಹ, ತಂಗಿಯಾದ ರುಕ್ಮಿಣಿಗೆ ಪ್ರಿಯವಾಗಲೆಂದು ಸೋದರಳಿಯನಿಗೆ ಮಗಳನ್ನು ಕೊಟ್ಟನು[1] (೨೩). ರುಕ್ಮಿಣಿಯ ಮಗಳೂ ಸುಂದರಿಯೂ ಆದ ಚಾರುಮತಿಯೆಂಬ ಕನ್ಯೆಯನ್ನು ಬಲಶಾಲಿಯಾದ

೧ಪ್ರದ್ಯುಮ್ನನು ಅಪಹರಿಸಿಕೊಂಡು ಹೋದರೂ ಒಪ್ಪಿಗೆಯನ್ನಿತ್ತು ಸುಮ್ಮನಾದನು- ಎಂದು ಅಭಿಪ್ರಾಯ.

ದೌಹಿತ್ರಾಯಾನಿರುದ್ಧಾಯ ಪೌತ್ರೀಂ ರುಕ್ಮ್ಯದದಾದ್ಧರೇಃ
ರೋಚನಾಂ ಬದ್ಧವೈರೋಽಪಿ ಸ್ವಸುಃ ಪ್ರಿಯಚಿಕೀರ್ಷಯಾ ।
ಜಾನನ್ನಧರ್ಮಂ ತದ್ ಯೌನಂ ಸ್ನೇಹಪಾಶಾನುಬಂಧನಃ ॥ ೨೫

ತಸ್ಮಿನ್ನಭ್ಯುದಯೇ ರಾಜನ್ ರುಕ್ಮಿಣೀ ರಾಮಕೇಶವೌ ।
ಪುರಂ ಭೋಜಕಟಂ ಜಗ್ಮುಃ ಸಾಂಬಪ್ರದ್ಯುಮ್ನಕಾದಯಃ ॥ ೨೬

ತಸ್ಮಿನ್ ನಿವೃತ್ತ ಉದ್ವಾಹೇ ಕಾಲಿಂಗಪ್ರಮುಖಾ ನೃಪಾಃ ।
ದೃಪ್ತಾಸ್ತೇ ರುಕ್ಮಿಣಂ ಪ್ರೋಚುರ್ಬಲಮಕ್ಷೈರ್ವಿನಿರ್ಜಯ ॥ ೨೭

ಕೃತವರ್ಮನ ಮಗನು ಮದುವೆಯಾದನು[೧] (೨೪). ಅಲ್ಲದೆ ರುಕ್ಮಿಯು ಶ್ರೀಕೃಷ್ಣನಿಗೆ ಬದ್ಧವೈರಿಯಾದರೂ ಮಗಳ ಮಗನಾದ ಅನಿರುದ್ಧನಿಗೆ ತನ್ನ ಪೌತ್ರಿಯಾದ ರೋಚನೆಯೆಂಬ ಕನ್ಯೆಯನ್ನಿತ್ತು ಮದುವೆಮಾಡಿದನು. ಈ ವಿವಾಹವು ಅಧರ್ಮವೆಂದು ರುಕ್ಮಿಯು ತಿಳಿದಿದ್ದರೂ , ತಂಗಿಯ ಮೇಲಿನ ಪ್ರೀತಿಯ ವ್ಯಾಮೋಹದಿಂದ ಸ್ನೇಹಪಾಶಕ್ಕೆ ಕಟ್ಟುಬಿದ್ದು ಹಾಗೆ ಮಾಡಿದನು (೨೫). ಪರೀಕ್ಷಿತರಾಜ, ಈ ಮಂಗಳ ಕಾರ್ಯದಲ್ಲಿ ಉಪಸ್ಥಿತರಾಗುವುದಕ್ಕಾಗಿ ರುಕ್ಮಿಣಿ, ಬಲರಾಮ, ಶ್ರೀಕೃಷ್ಣ, ಸಾಂಬ, ಪ್ರದ್ಯುಮ್ನ- ಮೊದಲಾದವರು ಭೋಜಕಟಪುರಕ್ಕೆ ಹೋಗಿದ್ದರು (೨೬). ಪರೀಕ್ಷಿತರಾಜ, [೨]ವಿವಾಹಕಾರ್ಯವು ನೆರವೇರಿದ ಮೇಲೆ, ಅಲ್ಲಿ ನೆರೆದಿದ್ದ ಉದ್ಧತರಾದ ಕಳಿಂಗರಾಜನೇ ಮೊದಲಾದವರೂ ರುಕ್ಮಿಯನ್ನು ಕುರಿತು " ಆ ಬಲರಾಮನನ್ನು ಪಗಡೆಯಾಟದಲ್ಲಿ ಸೋಲಿಸು ! ರುಕ್ಮಿರಾಜ, ಅವನಿಗೆ ದ್ಯೂತವಾಡಲು ಬರುವುದೇ ಇಲ್ಲ. ಆದರೂ ಆತನಿಗೆ ಪಗಡೆ ಯಾಟದಲ್ಲಿ ಬಹಳ ಚಟವಿದೆ! " ಎಂದರು. ಅವರ ಮಾತನ್ನು ಕೇಳಿಕೊಂಡು ರುಕ್ಮಿ ರಾಜನು ಬಲರಾಮನನ್ನು ದ್ಯೂತಕ್ಕೆ ಕರೆದು ಪಗಡೆಯಾಡಿದನು (೨೭-೨೮). ಬಲ ರಾಮನು ಜೂಜಿನಲ್ಲಿ ನೂರು- ಸಾವಿರ- ಹತ್ತುಸಾವಿರದಂತೆ ಪಣವನ್ನಿಡಲು, ರುಕ್ಮಿಯು

---

೧. ಶ್ರೀಕೃಷ್ಣನಿಗೆ ಎಲ್ಲ ಪತ್ನಿಯರಲ್ಲಿಯೂ ಒಬ್ಬೊಬ್ಬ ಹೆಣ್ಣುಮಗಳಿದ್ದಳು. ಅವರೆಲ್ಲರಿಗೂ ವಿವಾಹವಾಯಿತೆಂಬುದಕ್ಕೆ ಇದು ಸೂಚನೆ.

೨. ದ್ವಿಷದನ್ನಂ ನ ಭೋಕ್ತವ್ಯಂ ದ್ವಿಷಂತಂ ನೈವ ಭೋಜಯೇತ್' ಎಂದು ನೀತಿ ಶಾಸ್ತ್ರ 'ಅಸ್ವರ್ಗ್ಯಂ ಲೋಕವಿದ್ವಿಷ್ಟಂ ಧರ್ಮಮಪ್ಯಾಚರೇನ್ನ ತು ' ಎಂದು ಧರ್ಮಶಾಸ್ತ್ರ. ಇದಕ್ಕೆ ವಿರೋಧವಾಗಿ ರುಕ್ಮಿಯು ಆಚರಿಸಿದ್ದರಿಂದ ಯಾವ ಫಲವಾಯಿತೆಂಬುದನ್ನು ಮುಂದೆ ಹೇಳಲಾಗಿದೆ.

ಅನಕ್ಷಜ್ಞೋ ಹ್ಯಯಂ ರಾಜನ್ನಪಿ ತದ್ವ್ಯಸನಂ ಮಹತ್ ।
ಇತ್ಯುಕ್ತೋ ಬಲಮಾಹೂಯ ತೇನಾಕ್ಷೈ ರುಕ್ಮ್ಯದೀವ್ಯತ ॥ ೨೮

ಶತಂ ಸಹಸ್ರಮಯುತಂ ರಾಮಸ್ತತ್ರಾದದೇ ಪಣಮ್ ।
ತಂ ತು ರುಕ್ಮ್ಯಜಯತ್ತತ್ರ ಕಾಲಿಂಗಃ ಪ್ರಾಹಸದ್ ಬಲಮ್ ।
ದಂತಾನ್ ಸಂದರ್ಶಯನ್ನುಚ್ಚೈರ್ನಾಮೃಷ್ಯತ್ತದ್ಧಲಾಯುಧಃ ॥ ೨೯

ತತೋ ಲಕ್ಷಂ ರುಕ್ಮ್ಯಗೃಹ್ಣಾದ್ ಗ್ಲಹಂ ತತ್ರಾಜಯದ್ಬಲಃ ।
ಜಿತವಾನಹಮಿತ್ಯಾಹ ರುಕ್ಮೀ ಕೈತವಮಾಶ್ರಿತಃ ॥ ೩೦

ಮನ್ಯುನಾ ಕ್ಷುಭಿತಃ ಶ್ರೀಮಾನ್ ಸಮುದ್ರ ಇವ ಪರ್ವಣಿ ।
ಜಾತ್ಯಾರುಣಾಕ್ಷೋಽತಿರುಷಾ ನ್ಯರ್ಬುದಂ ಗ್ಲಹಮಾದದೇ ॥ ೩೧

ತಂ ಚಾಪಿ ಜಿತವಾನ್ ರಾಮೋ ಧರ್ಮೇಣ ಚ್ಛಲಮಾಶ್ರಿತಃ ।
ರುಕ್ಮೀ ಜಿತಂ ಮಯಾತ್ರೇಮೇ ವದಂತು ಪ್ರಾಶ್ನಿಕಾ ಇತಿ ॥ ೩೨

ತದಾಬ್ರವೀನ್ನಭೋವಾಣೀ ಬಲೇನೈವ ಜಿತೋ ಗ್ಲಹಃ ।
ಧರ್ಮತೋ ವಚನೇನೈವ ರುಕ್ಮೀ ವದತಿ ವೈ ಮೃಷಾ ॥ ೩೩

ಅದೆಲ್ಲವನ್ನೂ ಗೆದ್ದುಬಿಟ್ಟನು. ಅಲ್ಲಿ ಕುಳಿತಿದ್ದ ಕಳಿಂಗರಾಜನು ಹಲ್ಲುಕಿರಿದು ಗಟ್ಟಿಯಾಗಿ ನಗುತ್ತಿದ್ದನು. ಬಲರಾಮನಿಗೆ ಅದು ಸಹ್ಯವಾಗಲಿಲ್ಲ(೨೯). ಅನಂತರ ರುಕ್ಮಿರಾಜನು ಒಂದು ಲಕ್ಷ ಹಣವನ್ನು ಪಣವಾಗಿ ಒಡ್ಡಲು, ಆ ಆಟದಲ್ಲಿ ಗರವನ್ನು ಹಾಕಿ ಬಲರಾಮನು ಗೆದ್ದನು. ರುಕ್ಮಿಯು ಕಪಟದಿಂದ ಜಗಳವನ್ನು ತೆಗೆದು ತಾನೇ ಗೆದ್ದೆನೆಂದುವಾದಿಸಿದನು (೩೦). ಪರ್ವಕಾಲದಲ್ಲಿ ಸುಮದ್ರವು ಕ್ಷೋಭೆಗೊಳ್ಳುವಂತೆ ಬಲರಾಮನ ಸಿಟ್ಟಿನಿಂದ ಕ್ಷುಬ್ಧನಾದನು. ಸಹಜವಾಗಿ ಕೆಂಪಗಿರುವ ಬಲರಾಮನ ಕಣ್ಣುಗಳು ರೋಷದಿಂದ ಮತ್ತಷ್ಟು ಕೆಂಪೇರಿದವು. ಅವನು ಹತ್ತುಕೋಟಿ ನಾಣ್ಯಗಳನ್ನು ಪಣವಾಗಿಟ್ಟು ಮತ್ತೆ ಆಡಿದನು. ಆಗಲೂ ನ್ಯಾಯವಾಗಿ ಬಲರಾಮನೇ ಗೆದ್ದನು. ರುಕ್ಮಿಯು ಮಾತ್ರ ಕಪಟತನವನ್ನಾಶ್ರಯಿಸಿ, ''ಈಗಲೂ ನಾನೇ ಗೆದ್ದೆನು. ಮಧ್ಯಸ್ಥರೂ ತೀರ್ಪು ಹೇಳಲಿ'' ಎಂದು ಹಠಹಿಡಿದನು (೩೧-೩೨). ಆಗ ''ಬಲರಾಮನೇ ನ್ಯಾಯವಾಗಿ ಗೆದ್ದಿದ್ದಾನೆ. ರುಕ್ಮಿಯು ತಾನು ಗೆದ್ದಿರುವೆನೆನ್ನುವುದು ಬರಿಯ ಮಾತು. ಅದು ಸುಳ್ಳು'' ಎಂದು ಆಕಾಶವಾಣಿಯಾಯಿತು (೩೩). ವಿದರ್ಭರಾಜನಾದ ರುಕ್ಮಿಯು

ತಾಮನಾದೃತ್ಯ ವೈದರ್ಭೋ ದುಷ್ಟರಾಜನ್ಯಚೋದಿತಃ।
ಸಂಕರ್ಷಣಂ ಪರಿಹಸನ್ ಬಭಾಷೇ ಕಾಲಚೋದಿತಃ॥ ೩೪

ನೈವಾಕ್ಷಕೋವಿದಾ ಯೂಯಂ ಗೋಪಾಲಾ ವನಗೋಚರಾಃ।
ಅಕ್ಷೈರ್ದೀವ್ಯಂತಿ ರಾಜಾನೋ ಬಾಣೈಶ್ಚ ನ ಭವಾದೃಶಾಃ॥ ೩೫

ರುಕ್ಮಿಣೈವಮಧಿಕ್ಷಿಪ್ತೋ ರಾಜಭಿಶ್ಚೋಪಹಾಸಿತಃ।
ಕ್ರುದ್ಧಃ ಪರಿಘಮುದ್ಯಮ್ಯ ಜಘ್ನೇ ತಂ ನೃಮ್ಣಸಂಸದಿ॥ ೩೬

ಕಲಿಂಗರಾಜಂ ತರಸಾ ಗೃಹೀತ್ವಾ ದಶಮೇ ಪದೇ।
ದಂತಾನಪಾತಯತ್ ಕ್ರುದ್ಧೋ ಯೋಽಹಸದ್ ವಿವೃತೈರ್ದ್ವಿಜೈಃ॥

ಅನ್ಯೇ ನಿರ್ಭಿನ್ನಬಾಹೂರುಶಿರಸೋ ರುಧಿರೋಕ್ಷಿತಾಃ।
ರಾಜಾನೋ ದುದ್ರುವುರ್ಭೀತಾ ಬಲೇನ ಪರಿಘಾರ್ದಿತಾಃ। ೩೮

ಆಕಾಶವಾಣಿಯನ್ನೂ ಲೆಕ್ಕಿಸಲಿಲ್ಲ. ದುಷ್ಟರಾಜರಿಂದ ಪ್ರೇರಿತನಾಗಿ ಬಲರಾಮನನ್ನು ಗೇಲಿಮಾಡಿದನು. ಕಾಲಚೋದಿತನಾಗಿ ಬಲರಾಮಾದಿಗಳನ್ನು ಕುರಿತು ''ನೀವು ಪಗಡೆಯಾಟದಲ್ಲಿ ನುರಿತವರಲ್ಲ. ಕಾಡಿನಲ್ಲಿದ್ದು ದನಗಳನ್ನು ಕಾಯುವ ಗೊಲ್ಲರು ನೀವು ! ಕ್ಷತ್ರಿಯರಾದ ಭೂಪಾಲರು ಪಗಡೆಯದಾಳಗಳಿಂದಲೂ ಬಾಣಗಳಿಂದಲೂ ಸಮಸಮವಾಗಿ ಕ್ರೀಡಿಸಬಲ್ಲರು, ಹೋರಾಡಬಲ್ಲರು. ನಿಮ್ಮಂತಹವರಿಗೆ ಅದೇನು ಗೊತ್ತು ?'' ಎಂದು ಹೀಯಾಳಿಸಿದನು (೩೪-೩೫). ರುಕ್ಮಿಯ ಹೀಯಾಳಿಕೆಯ ಜೊತೆಗೆ ನೆರೆದಿದ್ದ ರಾಜರೂ ಬಲರಾಮನನ್ನು ಅಪಹಾಸ್ಯಮಾಡಿದರು. ಕ್ರುದ್ಧನಾದ ಬಲರಾಮನು ತನ್ನ ಪರಿಘಾಯುಧವನ್ನೆತ್ತಿ ವಿವಾಹದ ಮಂಗಳ ಸಭೆಯಲ್ಲಿಯೇ ರುಕ್ಮಿಯನ್ನು ಬಡಿದು ಕೊಂದುಹಾಕಿದನು (೩೬). ಕಳಿಂಗರಾಜನು ಓಡುತ್ತಿರಲು ವೇಗದಿಂದ ಹೋಗಿ ಹತ್ತು ಹೆಜ್ಜೆಗಳಲ್ಲಿ ಅವನನ್ನು ಹಿಡಿದು ಆತನ ಹಲ್ಲುಗಳನ್ನು ಉದುರಿಸಿದನು. ಹಲ್ಲುಕಿರಿದು ಅವನು ನಕ್ಕಿದ್ದನಲ್ಲವೆ ? ಬಲರಾಮನ ಪರಿಘದ ಬಡಿತಕ್ಕೆ ಸಿಕ್ಕಿದ ಉಳಿದ ರಾಜರು ತೋಳು, ಎದೆ, ತಲೆಗಳನ್ನು ಜಜ್ಜಿಸಿಕೊಂಡು ರಕ್ತಸಿಕ್ತರಾಗಿ ಹೆದರಿ ಓಡಿದರು (೩೭-೩೮). ಪರೀಕ್ಷಿತರಾಜ, ಭಾವ ಮೈದುನನಾದ ರುಕ್ಮಿಯು ಹತನಾಗಲಾಗಿ ಶ್ರೀಕೃಷ್ಣನು ಒಂದು ಮಾತನ್ನೂ ಆಡಲಿಲ್ಲ. ರುಕ್ಮಿಯನ್ನು ಕೊಂದದ್ದು

ನಿಹತೇ ರುಕ್ಮಿಣಿ ಶ್ಯಾಲೇ ನಾಬ್ರವೀತ್ ಸಾಧ್ವಸಾಧು ವಾ ।
ರುಕ್ಮಿಣೀಬಲಯೋ ರಾಜನ್ ಸ್ನೇಹಭಂಗಭಯಾದ್ಧರಿಃ ॥ ೩೯

ತತೋಽನಿರುದ್ಧಂ ಸಹ ಸೂರ್ಯಯಾ ವರಂ
ರಥಂ ಸಮಾರೋಪ್ಯ ಯಯುಃ ಕುಶಸ್ಥಲೀಮ್ ।
ರಾಮಾದಯೋ ಭೋಜಕಟಾದ್ ದಶಾರ್ಹಾಃ
ಸಿದ್ಧಾಖಿಲಾರ್ಥಾ ಮಧುಸೂದನಾಶ್ರಯಾಃ ॥ ೪೦

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ಏಕಷಷ್ಟಿತಮಾಧ್ಯಾಯಃ

ಸರಿಯೆಂದರೆ ರುಕ್ಮಿಣಿಗೆ ಅಸಮಾಧಾನವಾದೀತು, ತಪ್ಪೆಂದರೆ ಬಲರಾಮನಿಗೆ ಅಸಮಾಧಾನವಾದೀತು-ಎಂಬ ಭಯದಿಂದ ಸರಿಯೆ-ತಪ್ಪೇ ಎಂಬುದನ್ನು ಅವನು ಹೇಳಲಿಲ್ಲ (೩೯). ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಂಡ ಬಲರಾಮನೇ ಮೊದಲಾದ ಯಾದವರು, ಅನಂತರ ನವವಧುವಾದ ರೋಚನೆಯೊಡನೆ ಅನಿರುದ್ಧನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಭೋಜಕಟದಿಂದ ಹೊರಟು, ಶ್ರೀಕೃಷ್ಣನ ಆಶ್ರಯದಲ್ಲಿ ದ್ವಾರಕೆಗೆ ತೆರಳಿದರು (೪೦).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಅರುವತ್ತೊಂದನೆಯ ಅಧ್ಯಾಯ

ದ್ವಿಷಷ್ಟಿತಮಾಧ್ಯಾಯಃ

ರಾಜೋವಾಚ-

ಬಾಣಸ್ಯ ತನಯಾಮೂ[1]ಷಾಮುಪಯೇಮೇ ಯದೂತ್ತಮಃ ।
ತತ್ರ ಯುದ್ಧಮಭೂದ್ ಘೋರಂ ಹರಿಶಂಕರಯೋರ್ಮಹತ್ ।
ಏತತ್ ಸರ್ವಂ ಮಹಾಯೋಗಿನ್ ಸಮಾಖ್ಯಾತುಂ ತ್ವಮರ್ಹಸಿ ॥ ೧

ಶ್ರೀಶುಕ ಉವಾಚ-

ಬಾಣಃ ಪುತ್ರಶತಜ್ಯೇಷ್ಠೋ ಬಲೇರಾಸೀನ್ಮಹಾತ್ಮನಃ ।
ಯೇನ ವಾಮನರೂಪಾಯ ಹರಯೇಽದಾಯಿ ಮೇದಿನೀ ॥ ೨

ತಸ್ಯೌರಸಃ ಸುತೋ ಬಾಣಃ ಶಿವಭಕ್ತಿರತಃ ಸದಾ ।
ಮಾನ್ಯೋ ವದಾನ್ಯೋ ಧೀಮಾಂಶ್ಚ ಸತ್ಯಸಂಧೋ ದೃಢವ್ರತಃ ॥ ೩

ಅಧ್ಯಾಯ ೬೨

ಬಾಣಾಸುರನ ಮಗಳಾದ ಉಷೆ ಸ್ವಪ್ನದಲ್ಲಿ ಅನಿರುದ್ಧನನ್ನು ಕಾಣುವುದು.

ಚಿತ್ರಲೇಖೆ ಆತನನ್ನು ಕರೆತಂದು ಉಷೆಯೊಡನೆ ಸೇರಿಸುವುದು.

ಕ್ರುದ್ಧನಾದ ಬಾಣನಿಂದ ಅನಿರುದ್ಧನ ಬಂಧನ.

ಪರೀಕ್ಷಿತನು ''ಮಹರ್ಷಿಗಳೆ, ಯದುಶ್ರೇಷ್ಠನಾದ ಅನಿರುದ್ಧನು ಬಾಣನ ಮಗಳಾದ ಉಷೆಯನ್ನು ಮದುವೆಯಾದನೆಂದೂ ಆಗ ಶ್ರೀಕೃಷ್ಣನಿಗೂ ಶಿವನಿಗೂ ಘೋರಯುದ್ಧವಾಯಿತೆಂದೂ ಕೇಳಿದ್ದೇನೆ. ಈ ಎಲ್ಲ ವೃತ್ತಾಂತವನ್ನೂ ನನಗೆ ಹೇಳೋಣವಾಗಲಿ'' ಎಂದು ಪ್ರಾರ್ಥಿಸಿದನು (೧). ಆಗ ಶುಕಮುನಿಗಳು ಹೇಳಿದರು : ವಾಮನಾವತಾರವನ್ನು ತಾಳಿ ಬಂದಿದ್ದ ಶ್ರೀಹರಿಗೆ ಬಲಿಚಕ್ರವರ್ತಿಯು ಭೂಮಿಯನ್ನು ದಾನಮಾಡಿದನಷ್ಟೆ. ಮಹಾತ್ಮನಾದ ಆ ಬಲಿಯ ನೂರು ಮಕ್ಕಳಲ್ಲಿ ಬಾಣ ಎಂಬುವನು ಹಿರಿಯ ಬಲಿಯ ಔರಸಪುತ್ರನಾದ ಬಾಣಾಸುರನಾದರೋ ಮಹಾ ಶಿವಭಕ್ತ. ಆತನು ಮಹನೀಯನೂ ದಾನಶೂರನೂ ಬುದ್ಧಿಶಾಲಿಯೂ ಆಗಿದ್ದನು. ಅವನು ಸತ್ಯಸಂಧ, ದೃಢವ್ರತ (೨-೩).

---

೧. ಇಲ್ಲಿ ಊಷಾ ಎಂಬ ಹೆಸರು ಹರಿವಂಶ ವಿಷ್ಣುಪುರಾಣಗಳಲ್ಲಿ ಉಷಾ ಎಂದಿದೆ.

ಶೋಣಿತಾಖ್ಯೇ ಪುರೇ ರಮ್ಯೇ ಸ ರಾಜ್ಯಮಕರೋತ್ ಪುರಾ ।
ತಸ್ಯ ಶಂಭೋಃ ಪ್ರಸಾದೇನ ಕಿಂಕರಾ ಇವ ತೇಽಮರಾಃ ।
ಸಹಸ್ರಬಾಹುರ್ವಾದ್ಯೇನ ತಾಂಡವೇಽತೋಷಯನ್ಮೃಡಮ್ ॥ ೪

ಭಗವಾನ್ ಸರ್ವಭೂತೇಶಃ ಶರಣ್ಯೋ ಭಕ್ತವತ್ಸಲಃ ।
ವರೇಣ ಚ್ಛಂದಯಾಮಾಸ ಸ ತಂ ವವ್ರೇ ಪುರಾಧಿಪಮ್ ॥ ೫

ಸ ಏಕದಾಽಽಹ ಗಿರಿಶಂ ಪಾರ್ಶ್ವಸ್ಥಂ ವೀರ್ಯದುರ್ಮದಃ ।
ಕಿರೀಟೇನಾರ್ಕವರ್ಣೇನ ಸಂಸ್ಪೃಶಂಸ್ತತ್ಪದಾಂಬುಜಮ್ ॥ ೬

ನಮಸ್ಯೇ ತ್ವಾಂ ಮಹಾದೇವ ಲೋಕಾನಾಂ ಗುರುಮೀಶ್ವರಮ್ ।
ಪುಂಸಾಮಪೂರ್ಣಕಾಮಾನಾಂ ಕಾಮಪೂರಾಮರಾಂಘ್ರಿಪಮ್ ॥ ೭

ದೋಸ್ಸಹಸ್ರಂ ತ್ವಯಾ ದತ್ತಂ ಪರಂ ಭಾರಾಯ ಮೇಽಭವತ್ ।
ತ್ರಿಲೋಕ್ಯಾಂ ಪ್ರತಿಯೋದ್ಧಾರಂ ನ ಲಭೇ ತ್ವದೃತೇ ಸಮಮ್ ॥ ೮

ಸುಂದರವಾದ ಶೋಣಿತವೆಂಬ ನಗರದಲ್ಲಿ ಅವನು ರಾಜ್ಯಭಾರ ಮಾಡುತ್ತಿದ್ದನು. ಶಿವನ ಅನುಗ್ರಹದಿಂದ ಬಾಣಾಸುರನಿಗೆ ದೇವತೆಗಳು ಕಿಂಕರರೋ ಎಂಬಂತೆ ನಡೆದುಕೊಳ್ಳುತ್ತಿದ್ದರು. ಸಾವಿರತೋಳುಗಳಿದ್ದ ಆ ಬಾಣಾಸುರನು ಒಮ್ಮೆ ವಾದ್ಯವನ್ನು ನುಡಿಸಿ ತಾಂಡವನೃತ್ಯದ ಸಮಯದಲ್ಲಿ ಶಿವನನ್ನು ಸಂತೋಷಪಡಿಸಿದನು (೪). ಆಗ ಸಮಸ್ತ ಪ್ರಾಣಿಗಳಿಗೆ ಈಶ್ವರನೂ ಶರಣ್ಯನೂ ಭಕ್ತವತ್ಸಲನೂ ಆದ ಭಗವಾನ್ ಶಂಕರನು ವರವನ್ನು ಕೇಳಿಕೊಳ್ಳುವಂತೆ ಬಾಣನಿಗೆ ಹೇಳಿದನು. ಶಿವನು ತನ್ನ ನಗರದ ರಕ್ಷಕನಾಗಿರುವಂತೆ, ಬಾಣನು ವರವನ್ನು ಬೇಡಿಕೊಂಡನು. ಹೀಗಿರಲಾಗಿ ವೀರ್ಯಮದದಿಂದ ಕೊಬ್ಬಿದ ಬಾಣಾಸುರನು ಒಂದು ಸಲ ತನ್ನ ಬಳಿಯಲ್ಲಿದ್ದ ಶಿವನ ಪಾದಕಮಲಗಳಿಗೆ ಸೂರ್ಯಸದೃಶವಾದ ತನ್ನ ಕಿರೀಟವನ್ನು ಸೋಂಕಿಸಿ ನಮಸ್ಕರಿಸುತ್ತ ಹೀಗೆಂದನು (೫-೬). " ಹೇ ಮಹಾದೇವ, ಎಲ್ಲ ಇಷ್ಟಾರ್ಥಗಳನ್ನೂ ಪೂರ್ಣಮಾಡಿಕೊಳ್ಳದೇ ಇರುವ ಭಕ್ತಜನರಿಗೆ ಇಷ್ಟಾರ್ಥಗಳನ್ನು ಪೂರ್ಣಮಾಡುವ ಕಲ್ಪವೃಕ್ಷವಾಗಿದ್ದೀಯೆ, ಈಶ್ವರನೂ ಜಗದ್ಗುರುವೂ ಆದ ನಿನಗೆ ವಂದಿಸುತ್ತೇನೆ. ನೀನು ಅನುಗ್ರಹಿಸಿರುವ ಈ ಸಾವಿರ ಕೈಗಳು ಸುಮ್ಮನೆ ನನಗೆ ಭಾರವಾಗಿಬಿಟ್ಟವಲ್ಲ! ಏಕೆಂದರೆ, ನಿನ್ನೊಬ್ಬನನ್ನು

ಕಂಡೂತ್ಯಾ ನಿಭೃತೈರ್ದೋರ್ಭಿರ್ಯುಯುತ್ಸುರ್ದಿಗ್ಗಜಾನಹಮ್ ।
ಆದ್ಯಾಯಾಂ ಚೂರ್ಣಯನ್ನದ್ರೀನ್ ಭೀತಾಸ್ತೇಽಪಿ ಪ್ರದುದ್ರುವುಃ ॥

ತಚ್ಛ್ರುತ್ವಾ ಭಗವಾನ್ ಕ್ರುದ್ಧಃ ಕೇತುಸ್ತೇ ಭಜ್ಯತೇ ಯದಾ ।
ತ್ವದ್ದರ್ಪಘ್ನಂ ಭವೇನ್ಮೂಢ ಸಂಯುಗಂ ಮತ್ಸಮೇನ ತೇ ॥ ೧೦

ಇತ್ಯುಕ್ತಃ ಕುಮತಿರ್ಹೃಷ್ಟಃ ಸ್ವಗೃಹಂ ಪ್ರಾವಿಶನ್ನೃಪ ।
ಪ್ರತೀಕ್ಷನ್ ಗಿರಿಶಾದೇಶಂ ಸ್ವವೀರ್ಯನಶನಂ ಕುಧೀಃ ॥ ೧೧

ತಸ್ಯೋಷಾ ನಾಮ ದುಹಿತಾ ಸ್ವಪ್ನೇ ಪ್ರಾದ್ಯುಮ್ನಿನಾ ರತಿಮ್ ।
ಕನ್ಯಾಲಭತ ಕಾಂತೇನ ಪ್ರಾಗದೃಷ್ಟಶ್ರುತೇನ ಸಾ ॥ ೧೨

ಸಾ ತತ್ರ ಸಮಪಶ್ಯಂತೀ ಕ್ವಾಸಿ ಕಾಂತೇತಿ ವಾದಿನೀ ।
ಸಖೀನಾಂ ಮಧ್ಯ ಉತ್ತಸ್ಥೌ ವಿಹ್ವಲಾ ವ್ರೀಡಿತಾ ಭೃಶಮ್ ॥ ೧೩

ಬಿಟ್ಟರೆ ಮೂರು ಲೋಕಗಳಲ್ಲಿಯೂ ನನಗೆ ಸಮವಾಗಿ ಎದುರು ನಿಂತು ಹೋರಾಡಬಲ್ಲ ಇನ್ನೊಬ್ಬ ವೀರನು ದೊರಕುತ್ತಿಲ್ಲ! (೭-೮). ಹೇ ಆದ್ಯ-ಆದಿಪುರುಷ, ಈ ಬಾಹುಗಳಿಗೆ ಹೋರಾಡುವ ತೀಟೆ ತುಂಬಿದ್ದರಿಂದ ದಿಗ್ಗಜಗಳೊಡನೆ ಕುಸ್ತಿಯಾಡಬೇಕೆಂದು ನಾನು ಬೆಟ್ಟಗಳನ್ನು ಕುಟ್ಟಿಪುಡುಮಾಡುತ್ತ ನುಗ್ಗಿ ಹೋದೆನು. ದಿಗ್ಗಜಗಳು ಹೆದರಿ ಓಡಿಹೋದವು!''(೯). ಆ ಮಾತನ್ನು ಕೇಳಿ ಭಗವಾನ್ ಶಂಕರನಿಗೆ ಕ್ರೋಧ ಉಂಟಾಯಿತು. ಆತನು 'ಎಲೈ ಮೂಢ, ಯಾವಾಗ ನಿನ್ನ ರಥಧ್ವಜವು ಮುರಿದುಬೀಳುವುದೋ ಆಗ ನಿನ್ನ ಕೊಬ್ಬನ್ನಡಗಿಸುವ ಯುದ್ಧ ನನಗೆ ಸಮಾನನಾದ ಪುರುಷನೊಡನೆ ಘಟಿಸುವುದು'' ಎಂದು ಹೇಳಿದನು (೧೦). ಪರೀಕ್ಷಿತರಾಜ, ಈ ಮಾತನ್ನು, ಕೇಳಿ ದುರ್ಮತಿಯಾದ ಬಾಣಾಸುರನಿಗೆ ಸಂತೋಷವೇ ಆಯಿತು. ಮನಗೆ ತೆರಳಿ ಆ ದುರ್ಬುದ್ಧಿಯು ಹರನು ಹೇಳಿದಂತೆ, ಸ್ವಬಲನಾಶಕ್ಕೆ ಕಾರಣವಾದರೂ ಧ್ವಜಭಂಗವನ್ನು ಎದುರು ನೋಡುತ್ತಿದ್ದನು (೧೧-೧೨). ಬಾಣಾಸುರನಿಗೆ ಉಷೆಯೆಂಬ ಮಗಳಿದ್ದಳು. ಆ ಕನ್ಯೆ ಪ್ರದ್ಯುಮ್ನನ ಮಗನಾದ ಅನಿರುದ್ಧನೊಡನೆ ರತಿಸುಖವನ್ನನುಭವಿಸಿದಂತೆ ಸ್ವಪ್ನವನ್ನು ಕಂಡಳು. ಅವಳು ಅನಿರುದ್ಧನನ್ನು ಹಿಂದೆ ನೋಡಿಯೂ ಇರಲಿಲ್ಲ, ಕೇಳಿಯೂ ಇರಲಿಲ್ಲ. ಅನಂತರ ಅವನನ್ನು ಕಾಣದೆ ಆ ಹುಡುಗಿ ''ಓ ಕಾಂತ, ಎಲ್ಲಿರುವೆ ?'' ಎಂದು

ಬಾಣಸ್ಯ ಮಂತ್ರೀ ಕುಂಭಾಂಡಶ್ಚಿತ್ರಲೇಖಾ ಚ ತತ್ಸುತಾ ।
ಸಖ್ಯಪೃಚ್ಛತ್ ಸಖೀಮೂಷಾಂ ಕೌತೂಹಲಸಮನ್ವಿತಾ ॥ ೧೪

ಕಂ ತ್ವಂ ಮೃಗಯಸೇ ಸುಭ್ರೂಃ ಕೀದೃಶಸ್ತೇ ಮನೋರಥಃ ।
ಹಸ್ತಗ್ರಾಹಂ ನ ತೇಽದ್ಯಾಪಿ ರಾಜಪುತ್ರ್ಯುಪಲಕ್ಷಯೇ ॥ ೧೫

ಊಷೋವಾಚ-

ದೃಷ್ಟಃ ಕಶ್ಚಿನ್ನರಃ ಸ್ವಪ್ನೇ ಶ್ಯಾಮಃ ಕಮಲಲೋಚನಃ ।
ಪೀತವಾಸಾ ಬೃಹದ್ಬಾಹುರ್ಯೋಷಿತಾಂ ಹೃದಯಂಗಮಃ ॥ ೧೬

ತಮಹಂ ಮೃಗಯೇ ಕಾಂತಂ ಪಾಯಯಿತ್ವಾಧರಂ ಮಧು ।
ಕ್ವಾಪಿ ಯಾತಃ ಸ್ಪೃಹಯತೀಂ ಕ್ಷಿಪ್ತ್ವಾ ಮಾಂ ವೃಜಿನಾರ್ಣವೇ ॥ ೧೭

ಚಿತ್ರಲೇಖೋವಾಚ-

ವ್ಯಸನಂ ತೇಽಪಕರ್ಷಾಮಿ ತ್ರಿಲೋಕ್ಯಾಂ ಯದಿ ಭಾವ್ಯತೇ ।
ತಮಾನೇಷ್ಯೇ ನರಂ ಯಸ್ತೇ ಮನೋಹರ್ತಾ ತಮಾದಿಶ ॥ ೧೮

ಹಂಬಲಿಸುತ್ತ ಸಖಿಯರ ನಡುವೆ ಎದ್ದು ಕುಳಿತಳು. (ಎಚ್ಚರವಾದ ಮೇಲೆ) ಉಷೆಯು ಖಿನ್ನಳಾಗಿ ತುಂಬ ನಾಚಿದಳು (೧೩). ಚಿತ್ರಲೇಖ ಎಂಬುವಳು ಬಾಣನ ಮಂತ್ರಿಯಾದ ಕುಂಭಾಂಡನ ಮಗಳು, ಉಷೆಯ ಸಖಿ. ಅವಳು ಕುತೂಹಲದಿಂದ ಉಷೆಯನ್ನು ನೋಡಿ "ಸುಂದರಿ, ಯಾರನ್ನು ಹುಡುಕುತ್ತಿರುವೆ ? ನಿನ್ನ ಮನೋರಥವೇನು ? ರಾಜಪುತ್ರಿ, ಇನ್ನೂ ನೀನು ಕೈಹಿಡಿದ ಪತಿಯನ್ನು ಕಾಣೆನಲ್ಲ! " ಎಂದಳು (೧೪-೧೫). ಉಷೆಯು " ಗೆಳತಿ, ಕನಸಿನಲ್ಲಿ ನಾನು ಶ್ಯಾಮಲಾಂಗನೂ ಕಮಲನೇತ್ರನೂ ಆದ ಒಬ್ಬ ಪುರುಷನನ್ನು ಕಂಡೆನು. ಅವನು ಪೀತಾಂಬರಧಾರಿಯಾಗಿ ಆಜಾನುಬಾಹುವಾಗಿದ್ದನು. ತರುಣಿಯರಿಗೆ ಹೃದಯಂಗಮನವನು. ಆ ಕಾಂತನನ್ನು ಹುಡುಕುತ್ತಿದ್ದೇನೆ ! ನನಗೆ ಅಧರಮಧುವನ್ನು ಕುಡಿಸಿ, ಹಾತೊರೆಯುತ್ತಿದ್ದ ನನ್ನನ್ನು ಶೋಕಸಾಗರದಲ್ಲಿ ತಳ್ಳಿ ಎಲ್ಲಿಗೋ ಹೋಗಿಬಿಟ್ಟನು ! " ಎಂದಳು (೧೬-೧೭). ಆಗ ಚಿತ್ರಲೇಖೆಯು "ನಿನ್ನ ವ್ಯಥೆಯನ್ನು ಪರಿಹರಿಸುವೆನು. ಮೂರುಲೋಕಗಳಲ್ಲಿ ಎಲ್ಲಿದ್ದರೂ ಆ

ಇತ್ಯುಕ್ತ್ವಾ ದೇವಗಂಧರ್ವಸಿದ್ಧಚಾರಣಪನ್ನಗಾನ್ ।
ದೈತ್ಯವಿದ್ಯಾಧರಾನ್ ಯಕ್ಷಾನ್ ಮನುಜಾಂಶ್ಚ ಯಥಾಲಿಖತ್ ॥ ೧೯

ಮನುಜೇಷು ಚ ಸಾ ವೃಷ್ಣೀನ್ ಶೂರಮಾನಕದುಂದುಭಿಮ್ ।
ವ್ಯಲಿಖದ್ ರಾಮಕೃಷ್ಣೌ ಚ ಪ್ರದ್ಯುಮ್ನಂ ವೀಕ್ಷ್ಯ ಲಜ್ಜಿತಾ ॥ ೨೦

ಅನಿರುದ್ಧಂ ವಿಲಿಖಿತಂ ವೀಕ್ಷ್ಯೋಷಾವಾಙ್ಮುಖೀ ಹ್ರಿಯಾ ।
ಸೋಽಸಾವಸಾವಿತಿ ಪ್ರಾಹ ಸ್ಮಯಮಾನಾ ಮಹೀಪತೇ ॥ ೨೧

ಚಿತ್ರಲೇಖಾ ತಮಾಜ್ಞಾಯ ಪೌತ್ರಂ ಕೃಷ್ಣಸ್ಯ ಯೋಗಿನೀ ।
ಯಯೌ ವಿಹಾಯಸಾ ರಾಜನ್ ದ್ವಾರಕಾಂ ಕೃಷ್ಣಪಾಲಿತಾಮ್ ॥ ೨೨

ತತ್ರ ಸುಪ್ತಂ ಸುಪರ್ಯಂಕೇ ಪ್ರಾದ್ಯುಮ್ನಿಂ ಯೋಗಮಾಸ್ಥಿತಾ ।
ಗೃಹೀತ್ವಾ ಶೋಣಿತಪುರಂ ಸಖ್ಯೈ ಪ್ರಿಯಮದರ್ಶಯತ್ ॥ ೨೩

ಸಾ ಚ ತಂ ಸುಂದರವರಂ ವಿಲೋಕ್ಯ ಮುದಿತಾನನಾ ।
ದುಷ್ಪ್ರೇಕ್ಷ್ಯೇ ಸ್ವಗೃಹೇ ಪುಂಭೀ ರೇಮೇ ಪ್ರಾದ್ಯುಮ್ನಿನಾಸಮಮ್ ॥ ೨೪

ಪುರುಷನನ್ನು ಕರೆತರುವೆನು. ನಿನ್ನ ಮನಸ್ಸನ್ನಪಹರಿಸಿದ ಆತನು ಯಾರೆಂಬುದನ್ನು ತೋರಿಸು'' ಎಂದು ನುಡಿದು, ದೇವ, ಗಂಧರ್ವ, ಸಿದ್ಧ, ಚರಣ, ಪನ್ನಗ, ದೈತ್ಯ, ವಿದ್ಯಾಧರರನ್ನೂ, ಯಕ್ಷರನ್ನೂ ಹಾಗೆಯೇ ಮಾನವರನ್ನೂ ಚಿತ್ರಪಟದಲ್ಲಿ ಬರೆದಳು (೧೮-೧೯). ಮಾನವರಲ್ಲಿ ವೃಷ್ಣಿ ಕುಲೋದ್ಭವರಾದ ವಸುದೇವ, ಬಲರಾಮ, ಕೃಷ್ಣ-ಮೊದಲಾದವರನ್ನು ಬರೆದಳು. ಅವರಲ್ಲಿ ಪ್ರದ್ಯುಮ್ನನನ್ನು ಕಂಡು ಉಷೆ ನಾಚಿದಳು. ಆಮೇಲೆ ಚಿತ್ರದಲ್ಲಿ ಬರೆದಿದ್ದ ಅನಿರುದ್ಧನನ್ನು ನೋಡಿದಾಗ ಅವಳು ಲಜ್ಜೆಯಿಂದ ತಲೆತಗ್ಗಿಸಿ, ಮುಗುಳ್ನಗೆ ಸೂಸುತ್ತ 'ಅವನೇ, ಅವನೇ' ಎಂದಳು (೨೦-೨೧). ಆತನು ಶ್ರೀಕೃಷ್ಣನ ಪೌತ್ರನೆಂಬುದನ್ನರಿತು, ಯೋಗಶಕ್ತಿಯುಳ್ಳ ಚಿತ್ರಲೇಖೆಯು, ಪರೀಕ್ಷಿತರಾಜ, ಆಕಾಶಮಾರ್ಗದಿಂದ ಶ್ರೀಕೃಷ್ಣಪಾಲಿತವಾದ ದ್ವಾರಕೆಗೆ ತೆರಳಿದಳು. ಅಲ್ಲಿ (ಅರಮನೆಯೊಳಗೆ) ಪರ್ಯಂಕದಲ್ಲಿ ಮಲಗಿದ್ದ ಅನಿರುದ್ಧನನ್ನು ಎತ್ತಿಕೊಂಡು, ಆ ಯೋಗಿನಿಯು ಶೋಣಿತಪುರಕ್ಕೆ ತಂದು, ಗೆಳತಿಯಾದ ಉಷೆಗೆ ಅವಳ ಕಾಂತನನ್ನು ತೋರಿಸಿದಳು (೨೨-೨೩). ಇನ್ನೂ ಸುಂದರತರನಾಗಿ ಕಾಣಿಸಿದ ಅನಿರುದ್ಧನನ್ನು ನೋಡಿ ಉಷೆಯ ಮುಖ ಅರಳಿತು.

ಪರಾರ್ಧ್ಯವಾಸಃ ಸ್ರಗ್ಗಂಧಧೂಪದೀಪಾಸನಾದಿಭಿಃ ।
ಪಾನಭೋಜನಭಕ್ಷ್ಯೈಶ್ಚ ವಾಕ್ಯೈಃ ಶುಶ್ರೂಷಯಾರ್ಚಿತಃ ॥ ೨೫

ಗೂಢಃ ಕನ್ಯಾಪುರೇ ಶಶ್ವತ್ ಪ್ರವೃದ್ಧಸ್ನೇಹಯಾ ತಯಾ ।
ನಾಹರ್ಗಣಾನ್ ಸ ಬುಬುಧೇ ಊಷಯಾಪಹೃತೇಂದ್ರಿಯಃ ॥ ೨೬

ತಾಂ ತಥಾ ಯದುವೀರೇಣ ಭುಜ್ಯಮಾನಾಂ ಹತವ್ರತಾಮ್ ।
ಹೇತುಭಿರ್ಲಕ್ಷಯಾಂಚಕ್ರುರಾಪ್ರೀತಾಂ ದುರವಚ್ಛದೈಃ ॥ ೨೭

ಭಟಾ ಆವೇದಯಾಂಚಕ್ರೂ ರಾಜಂಸ್ತೇ ದುಹಿತುರ್ವಯಮ್ ।
ವಿಚೇಷ್ಟಿತಂ ಲಕ್ಷಯಾಮಃ ಕನ್ಯಾಯಾಃ ಕುಲದೂಷಣಮ್ ॥ ೨೮

ಅನಪಾಯಿಭಿರಸ್ಮಾಭಿರ್ಗುಪ್ತಾಯಾಶ್ಚ ಗೃಹೇ ಪ್ರಭೋ ।
ಕನ್ಯಾಯಾ ದೂಷಣಂ ಪುಂಭಿರ್ದುಷ್ಪ್ರೇಕ್ಷ್ಯಾಯಾ ನ ವಿದ್ಮಹೇ ॥ ೨೯

ಪುರುಷರಿಗೆ ನೋಡಲೂ ಅಶಕ್ಯವಾದ ತನ್ನ ಅಂತಃಪುರದಲ್ಲಿ ಅವಳು ಆ ಪ್ರದ್ಯುಮ್ನ ಪುತ್ರನೊಡನೆ ರಮಿಸತೊಡಗಿದಳು. ಶ್ರೇಷ್ಠವಾದ ವಸ್ತ್ರ ಮಾಲೆ, ಗಂಧ, ಧೂಪ, ದೀಪ, ಪೀಠೋಪಕರಣಗಳಿಂದಲೂ ಪಾನಭೋಜನಾಭಕ್ಷ್ಯಗಳಿಂದಲೂ ಅನಿರುದ್ಧನ ಶುಶ್ರೂಷೆ ನಡೆಯಿತು (೨೪-೨೫). ಹೀಗೆ ಕನ್ಯಾಂತಃಪುರದಲ್ಲಿ ಗುಪ್ತವಾಗಿ ನೆಲೆಸಿದ ಅನಿರುದ್ಧನು, ದಿನ ದಿನವೂ ಹೆಚ್ಚುತ್ತಿದ್ದ ಪ್ರೇಮವುಳ್ಳ ಉಷಾದೇವಿಗೆ ಮರುಳಾಗಿ, ಬಹುದಿನಗಳು ಕಳೆದು ಹೋದರೂ ಲೆಕ್ಕಿಸದಿದ್ದನು. ಇಂತು ಯದುವೀರನೊಡನೆ ಭೋಗಿಸುತ್ತ ಕನ್ಯಾವ್ರತವನ್ನು ಕಳೆದುಕೊಂಡಿದ್ದ ಉಷೆಯು ಅತ್ಯಂತ ಹೃಷ್ಟಳಾಗಿರುವುದನ್ನು ಕಾವಲುಗಾರರಾದ ಭಟರು ನೋಡಿದರು. ಮುಚ್ಚಲಾಗದ ಕೆಲವು ಕುರುಹುಗಳಿಂದ ಏನಾಗಿರಬಹುದೆಂಬುದನ್ನು ಅವರು ಗಮನಿಸಿದರು (೨೬-೨೭). ಆ ಭಟರು ಬಾಣನ ಬಳಿಗೆ ಹೋಗಿ ''ಮಹಾರಾಜ, ನಿನ್ನ ಮಗಳಲ್ಲಿ ಕನ್ಯೆಗೆ ಅನುಚಿತವಾದ ಕುಲಕಳಂಕವನ್ನು ತರುವ ನಡತೆ ಕಂಡು ಬಂದಿದೆ. ಪ್ರಭು, ನಾವು ಎಡೆಬಿಡದೆ ಎಚ್ಚರಿಕೆಯಿಂದ ಕಾವಲುಕಾಯುತ್ತಿದ್ದೇವೆ. ಅನ್ಯಪುರುಷರಿಗೆ ನೋಡಲು ಅಶಕ್ಯಳಾದ ಆ ಕನ್ಯೆಯಲ್ಲಿ ಈ ದೋಷವು ಹೇಗೆ ಸಂಭವಿಸಿತೆಂಬುದನ್ನು

ತತಃ ಪ್ರವ್ಯಥಿತೋ ಬಾಣೋ ದುಹಿತುಃ ಶ್ರುತದೂಷಣಃ ।
ತ್ವರಿತಃ ಕನ್ಯಕಾಗಾರಂ ಪ್ರಾಪ್ತೋಽದ್ರಾಕ್ಷೀದ್ ಯದೂದ್ವಹಮ್ ॥

ಕಾಮಾತ್ಮಜಂ ತಂ ಭುವನೈಕಸುಂದರಂ
ಶ್ಯಾಮಂ ಪಿಶಂಗಾಂಬರಮಂಬುಜೇಕ್ಷಣಮ್ ।
ಬೃಹದ್ಭುಜಂ ಕುಂಡಲಕುಂತಲತ್ವಿಷಾ
ಸ್ಮಿತಾವಲೋಕೇನ ಚ ಮಂಡಿತಾನನಮ್ ॥ ೩೧

ದೀವ್ಯಂತಮಕ್ಷೈಃ ಪ್ರಿಯಯಾಭಿನೃಮ್ಣಯಾ
ತದಂಗಸಂಗಸ್ತನ ಕುಂಕುಮಸ್ರಜಮ್ ।
ಬಾಹ್ವೋರ್ದಧಾನಂ ಮಧುಮಲ್ಲಿಕಾಶ್ರಿತಾಂ
ತಸ್ಯಾಗ್ರ ಆಸೀನಮವೇಕ್ಷ್ಯ ವಿಸ್ಮಿತಃ ॥ ೩೨

ಸ ತಂ ಪ್ರವಿಷ್ಟಂ ವೃತಮಾತತಾಯಿಭಿ-
ರ್ಭಟೈರನೀಕೈರವಲೋಕ್ಯ ಮಾಧವಃ ।
ಉದ್ಯಮ್ಯ ಮೌರ್ವಂ ಪರಿಘಂ ವ್ಯವಸ್ಥಿತೋ
ಯಥಾಂತಕೋ ದಂಡಧರೋ ಜಿಘಾಂಸಯಾ ॥ ೩೩

ತಿಳಿಯಲಾರದೆ ಹೋಗಿದ್ದೇವೆ'' ಎಂದು ನಿವೇದಿಸಿದರು (೨೮-೨೯). ಆಗ ಮಗಳ ಚಾರಿತ್ರದೋಷವನ್ನು ಕೇಳಿ ಬಾಣನಿಗೆ ಬಹಳ ವ್ಯಥೆಯಾಯಿತು. ಅವನು ತ್ವರೆಯಿಂದ ಕನ್ಯಾಕಾಂತಃಪುರಕ್ಕೆ ನುಗ್ಗಿ ಅಲ್ಲಿದ್ದ ಅನಿರುದ್ಧನನ್ನು ಕಂಡನು. ಪ್ರದ್ಯುಮ್ನಪುತ್ರನಾದ ಆತನು ಲೋಕೈಕಸುಂದರನೂ ಶ್ಯಾಮಲಾಂಗನೂ ಪೀತಾಂಬರಧಾರಿಯೂ ಆಗಿದ್ದನು. ನಳಿನನೇತ್ರನಾದ ಆ ತರುಣನು ಆಜಾನುಬಾಹು. ಕುಂಡಲಾಲಂಕೃತವಾದ ಮುಖವು ಹರಡಿದ ಮುಂಗುರುಳಿನಿಂದಲೂ ಮುಗುಳ್ನಗೆಯಿಂದಲೂ ಶೋಭಿಸುತ್ತಿತ್ತು (೩೦-೩೧). ಅನಿರುದ್ಧನು ಸರ್ವಮಂಗಳೆಯಾದ ಪ್ರಿಯೆಯೊಡನೆ ಪಗಡೆಯಾಡುತ್ತಿದ್ದನು. ತೋಳುಗಳ ನಡುವೆ ಅವನ ಕೊರಳಲ್ಲಿದ್ದ ವಸಂತಕಾಲದ ಮಲ್ಲಿಗೆಯ ಮಾಲೆಗೆ ಉಷೆಯ ಸ್ತನಗಳ ಕುಂಕುಮ ಅಂಟಿತ್ತು! ಉಷೆಯ ಎದುರಿಗೆ ಪಗಡೆಯಾಡುತ್ತ ಕುಳಿತಿದ್ದ ಆ ಅನಿರುದ್ಧನನ್ನು ನೋಡಿ ಬಾಣನು ಅಚ್ಚರಿಗೊಂಡನು (೩೨). ಅನಿರುದ್ಧನು ತನ್ನನ್ನು

ಜಿಘೃಕ್ಷಯಾ ತಾನ್ ಪರಿತಃ ಪ್ರಸರ್ಪತಃ
ಶುನೋ ಯಥಾ ಸೂಕರಯೂಥಪೋಽಹನತ್ ।
ತೇ ಹನ್ಯಮಾನಾ ಭವನಾದ್ ವಿನಿರ್ಗತಾ
ನಿರ್ಭಿನ್ನಮೂರ್ಧೋರುಭುಜಾಃ ಪ್ರದುದ್ರುವುಃ ॥ ೩೪

ತಂ ನಾಗಪಾಶೈರ್ಬಲಿನಂದನೋ ಬಲೀ
ಘ್ನಂತಂ ಸ್ವಸೈನ್ಯಂ ಕುಪಿತೋ ಬಬಂಧ ಹ ।
ಊಷಾ ಭೃಶಂ ಶೋಕವಿಷಾದವಿಹ್ವಲಾ
ಬದ್ಧಂ ನಿಶಮ್ಯಾಶ್ರುಕಲಾಕ್ಷ್ಯರೌದಿಷೀತ್ ॥ ೩೫

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ

ದ್ವಿಷಷ್ಟಿತಮಾಧ್ಯಾಯಃ

ಕೊಲ್ಲುವುದಕ್ಕೆ ಸಿದ್ಧಾರಾಗಿದ್ದ ಸೇನಾಭಟರೊಡನೆ ಪರಿವೃತನಾದ ಬಾಣಸುರನನ್ನು ಕಂಡೊಡನೆ, ಮುರು ಎಂಬ ಉಕ್ಕಿನಿಂದ ಮಾಡಿದ ಪರಿಘವನ್ನೆತ್ತಿಕೊಂಡು, ದಂಡಧರನಾದ ಯಮನಂತೆ ಆ ಸೈನಿಕರನ್ನು ವಧಿಸಲು ಉದ್ಯುಕ್ತನಾಗಿ ನಿಂತನು (೩೩). ಅನಿರುದ್ಧನನ್ನು ಹಿಡಿಯುವುದಕ್ಕಾಗಿ ಆ ಸೈನಿಕರೂ ಸುತ್ತಲೂ ಆಕ್ರಮಣ ಮಾಡಿದರು. ನಾಯಿಗಳಂತೆ ನುಗ್ಗಿ ಬಂದ ಅವರನ್ನು ದೊಡ್ಡ ಹಂದಿಯಂತೆ ಅನಿರುದ್ಧನು ಸದೆಬಡಿದನು. ಆತನ ಬಡಿತಕ್ಕೆ ಸಿಕ್ಕದ ಯೋಧರು ತಲೆ, ಎದೆ, ಕೈಗಳನ್ನು ಮುರಿಸಿಕೊಂಡು ಅಂತಃಪುರದಿಂದ ಓಡಿಹೋದರು (೩೪). ಬಲಿಪುತ್ರನೂ ಬಲಿಷ್ಠನೂ ಆದ ಬಾಣನು ತನ್ನ ಸೈನಿಕರನ್ನು ಬಡಿಯುತ್ತಿದ್ದ ಅನಿರುದ್ಧನನ್ನು ಕಂಡು ಕುಪಿತನಾಗಿ ನಾಗಪಾಶಗಳಿಂದ ಅವನನ್ನು ಸೆರೆಹಿಡಿದನು. ತನ್ನ ಪ್ರಿಯನು ಸರೆಸಿಕ್ಕಿದನೆಂಬುದನ್ನು ಕೇಳಿ ಉಷೆಯು ಶೋಕವಿಷಾದಗಳಿಂದ ದಿಕ್ಕುಗೆಟ್ಟು ಕಣ್ಣೀರು ಮಿಡಿಯುತ್ತ ರೋದಿಸಿದಳು (೩೫).

ತ್ರಿಷಷ್ಟಿತಮಾಧ್ಯಾಯಃ

ಶ್ರೀಶುಕ ಉವಾಚ-

ಅಪಶ್ಯತಾಂ ಚಾನಿರುದ್ಧಂ ತದ್ಬಂಧೂನಾಂ ಚ ಭಾರತ ।
ಚತ್ವಾರೋ ವಾರ್ಷಿಕಾ ಮಾಸಾ ವ್ಯತೀಯುರನುಶೋಚತಾಮ್ ॥ ೧

ನಾರದಾತ್ತದುಪಾಕರ್ಣ್ಯ ವಾರ್ತಾಂ ಬದ್ಧಸ್ಯ ಕರ್ಮ ಚ ।
ಪ್ರಯಯುಃ ಶೋಣಿತಪುರಂ ವೃಷ್ಣಯಃ ಕೃಷ್ಣದೇವತಾಃ ॥ ೨

ಪ್ರದ್ಯುಮ್ನೋ ಯುಯುಧಾನಶ್ಚ ಗದಃ ಸಾಂಬೋಽಥ ಸಾರಣಃ ।
ನಂದೋಪನಂದಭದ್ರಾದ್ಯಾ ರಾಮಕೃಷ್ಣಾನುವರ್ತಿನಃ ॥ ೩

ಅಕ್ಷೌಹಿಣೀಭಿರ್ದ್ವಾದಶಭಿಃ ಸಮೇತಾಃ ಸರ್ವತೋದಿಶಮ್ ।
ರುರುಧುರ್ಬಾಣನಗರಂ ಸಮಂತಾತ್ ಸಾತ್ವತರ್ಷಭಾಃ ॥ ೪

ಭಜ್ಯಮಾನಪುರೋದ್ಯಾನಪ್ರಾಕಾರಾಟ್ಟಾಲಗೋಪುರಮ್ ।
ಪ್ರೇಕ್ಷಮಾಣೋ ರುಷಾವಿಷ್ಟಸ್ತುಲ್ಯಸೈನ್ಯೋಽಭಿನಿರ್ಯಯೌ ॥ ೫

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಅರುವತ್ತೆರಡನೆಯ ಅಧ್ಯಾಯ

ಅಧ್ಯಾಯ ೬೩

ಶ್ರೀಕೃಷ್ಣನು ಬಾಣಾಸುರನನ್ನು ಯುದ್ಧದಲ್ಲಿ ಸೋಲಿಸುವುದು. ಅನಿರುದ್ಧನ ಬಿಡುಗಡೆ.

ಶುಕಮುನಿಗಳು ಹೇಳಿದರು : ಪರೀಕ್ಷಿತರಾಜ, ಇತ್ತಲಾಗಿ ದ್ವಾರಕೆಯಲ್ಲಿ ಅನಿರುದ್ಧನನ್ನು ಕಾಣದೆ ಆತನ ಬಂಧುಗಳಾದ ಪ್ರದ್ಯುಮ್ನನೇ ಮೊದಲಾದವರು ಶೋಕಿಸುತ್ತಿದ್ದರು. ಹೀಗೆಯೇ ಮಳೆಗಾಲದ ನಾಲ್ಕು ತಿಂಗಳು ಕಳೆದವು. ಅವನು ಶೋಣಿತಪುರದಲ್ಲಿರುವುದನ್ನೂ, ಯುದ್ಧಮಾಡಿ ಸೆರೆಸಿಕ್ಕಿರುವ ವಾರ್ತೆಯನ್ನೂ ನಾರದರು ಬಂದು ತಿಳಿಸಿದರು. ಆಗ ಶ್ರೀಕೃಷ್ಣನೇ ಮೊದಲಾದ ವೃಷ್ಣಿಪುಂಗವರು ಶೋಣಿತಪುರಕ್ಕೆ ಹೊರಟರು (೧-೨). ಪ್ರದ್ಯುಮ್ನ, ಸಾತ್ಯಕಿ, ಗದ, ಸಾಂಬ, ಸಾರಣ, ನಂದ, ಉಪನಂದ, ಭದ್ರ-ಮೊದಲಾದ ಯಾದವೋತ್ತಮರು ಬಲರಾಮ-ಕೃಷ್ಣರನ್ನು ಹಿಂಬಾಲಿಸಿ ಹನ್ನೆರಡು ಅಕ್ಷೌಹಿಣೀಸೇನೆಗಳೊಡನೆ ನಿರ್ಗಮಿಸಿ, ಬಾಣನಗರವನ್ನು ಸರ್ವದಿಕ್ಕುಗಳಿಂದಲೂ ಸುತ್ತಲೂ ಮುತ್ತಿಗೆ

ಬಾಣಾರ್ಥೇ ಭಗವಾನ್ ರುದ್ರಃ ಸಸುತೈಃ ಪ್ರಮಥೈರ್ವೃತಃ।
ಆರುಹ್ಯ ನಂದಿವೃಷಭಂ ಯುಯುಧೇ ರಾಮಕೃಷ್ಣಯೋಃ॥ ೬

ಆಸೀತ್ ಸುತುಮುಲಂ ಯುದ್ಧಮದ್ಭುತಂ ರೋಮಹರ್ಷಣಮ್।
ಕೃಷ್ಣಶಂಕರಯೋ ರಾಜನ್ ಪ್ರದ್ಯುಮ್ನಗುಹಯೋರಪಿ॥ ೭

ಕುಂಭಾಂಡಕೂಪಕರ್ಣಾಭ್ಯಾಂ ಬಲೇನ ಸಹ ಸಂಯುಗಃ।
ಸಾಂಬಸ್ಯ ಬಾಣಪುತ್ರೇಣ ಬಾಣೇನ ಸಹ ಸಾತ್ಯಕೇಃ॥ ೮

ಬ್ರಹ್ಮಾದಯಃ ಸುರಾಧೀಶಾ ಮುನಯಃ ಸಿದ್ಧಚಾರಣಾಃ।
ಗಂಧರ್ವಾಪ್ಸರಸೋ ಯಕ್ಷಾ ವಿಮಾನೈರ್ದ್ರಷ್ಟುಮಾಗಮನ್॥ ೯

ಶಂಕರಾನುಚರಾನ್ ಶೌರಿರ್ಭೂತಪ್ರಮಥಗುಹ್ಯಕಾನ್।
ಡಾಕಿನೀರ್ಯಾತುಧಾನಾಂಶ್ಚ ವೇತಾಲಾನ್ ಸವಿನಾಯಕಾನ್॥ ೧೦

ಪ್ರೇತಮಾತೃಪಿಶಾಚಾಂಶ್ಚ ಕೂಷ್ಮಾಂಡಾನ್ ಬ್ರಹ್ಮರಾಕ್ಷಸಾನ್।
ದ್ರಾವಯಾಮಾಸ ತೀಕ್ಷ್ಣಾಗ್ರೈಃ ಶರೈಃ ಶಾರ್ಙ್ಗಧನುಶ್ಚ್ಯುತೈಃ॥ ೧೧

ಹಾಕಿದರು (೩-೪). ನಗರೋದ್ಯಾನ, ಕೋಟೆ, ಕೊತ್ತಲು, ಪುರದ್ವಾರಗಳನು ಹೊಡೆದುರುಳಿಸಿ ನಾಶಮಾಡುವುದನ್ನು ಕಂಡು ಬಾಣಾಸುರನು ಕ್ರುದ್ಧನಾಗಿ ಶತ್ರುಸೈನ್ಯಕ್ಕೆ ಸಮವಾದ ಸೇನೆಯೊಡನೆ ಯುದ್ಧಕ್ಕೆ ಹೊರಟನು. ಭಗವಂತನಾದ ರುದ್ರನು ತನ್ನ ಪುತ್ರನಾದ ಕುಮಾರ ಮತ್ತು ಪ್ರಮಥಗಣಗಳಿಂದ ಸಹಿತನಾಗಿ ನಂದಿವೃಷಭವನ್ನೇರಿ ರಾಮ-ಕೃಷ್ಣರಿಗೆ ಅಭಿಮುಖನಾಗಿ ಯುದ್ಧಕ್ಕೆ ನಡೆದನು (೫-೬). ಶ್ರೀಕೃಷ್ಣನಿಗೂ ಶಂಕರನಿಗೂ, ಪ್ರದ್ಯುಮ್ನನಿಗೂ ಕುಮಾರನಿಗೂ ಅದ್ಭುತವೂ ರೋಮಾಂಚಕರವೂ ಆದ ಖಾಡಖಾಡಿ ಹೋರಾಟ ನಡೆಯಿತು. ಕುಂಭಾಂಡ, ಕೂಪಕರ್ಣರೆಂಬ ಮಂತ್ರಿಗಳೊಡನೆ ಬಲಭದ್ರನಿಗೂ, ಬಾಣಪುತ್ರನೊಡನೆ ಸಾಂಬನಿಗೂ ಬಾಣಾಸುರನೊಡನೆ ಸಾತ್ಯಕಿಗೂ ಕಾಳಗತೊಡಗಿತು (೭-೮). ಆಗ ಬ್ರಹ್ಮನೇ ಮೊದಲಾದ ದೇವಮುಖ್ಯರೂ ಮುನಿಗಳೂ ಸಿದ್ಧ ಚಾರಣರೂ ಗಂಧರ್ವರೂ ಅಪ್ಸರೆಯರೂ ಯಕ್ಷರೂ ಯುದ್ಧವನ್ನುನೋಡುವುದಕ್ಕಾಗಿ ವಿಮಾನಗಳಲ್ಲಿಆಗಮಿಸಿದರು (೯). ಶಂಕರನ ಅನುಚರರಾದ ಭೂತ, ಪ್ರಮಥ, ಗುಹ್ಯಕ, ಡಾಕಿನೀ, ಯಾತುಧಾನ, ಭೇತಾಳ, ವಿನಾಯಕ, ಪ್ರೇತ, ಸಪ್ತಮಾತೃಗಳು, ಪಿಶಾಚ, ಕೂಷ್ಮಾಂಡ, ಬ್ರಹ್ಮರಾಕ್ಷಸ-

ಪೃಥಗ್ವಿಧಾನಿ ಪ್ರಾಯುಂಕ್ತ ಪಿನಾಕ್ಯಸ್ತ್ರಾಣಿ ಶಾರ್ಙ್ಗಿಣೇ ।
ಪ್ರತ್ಯಸ್ತ್ರೈಃ ಶಮಯಾಮಾಸ ಶಾರ್ಙ್ಗಪಾಣಿರವಿಸ್ಮಿತಃ ॥ ೧೨

ಬ್ರಹ್ಮಾಸ್ತ್ರಸ್ಯ ಚ ಬ್ರಹ್ಮಾಸ್ತ್ರಂ ವಾಯವ್ಯಸ್ಯ ಚ ಪಾರ್ವತಮ್ ।
ಆಗ್ನೇಯಸ್ಯ ಚ ಪಾರ್ಜನ್ಯಂ ನೈಜಂ ಪಾಶುಪತಸ್ಯ ಚ ॥ ೧೩

ಮೋಹಯಿತ್ವಾ ತು ಗಿರಿಶಂ ಜೃಂಭಣಾಸ್ತ್ರೇಣ ಜೃಂಭಿತಮ್ ।
ಬಾಣಸ್ಯ ಪೃತನಾಂ ಶೌರಿರ್ಜಘಾನಾಸಿಗದೇಷುಭಿಃ ॥ ೧೪

ಸ್ಕಂದಃ ಪ್ರದ್ಯುಮ್ನಬಾಣೌಘೈರರ್ದ್ಯಮಾನಃ ಸಮಂತತಃ ।
ಅಸೃಗ್ ವಿಮುಂಚನ್ ಗಾತ್ರೇಭ್ಯಃ ಶಿಖಿನಾಪಾಕ್ರಮದ್ ರಣಾತ್ ॥ ೧೫

ಕುಂಭಾಂಡಃ ಕೂಪಕರ್ಣಶ್ಚ ಪೇತತುರ್ಮುಸಲಾರ್ದಿತೌ ।
ದುದ್ರುವುಸ್ತದನೀಕಾನಿ ಹತನಾಥಾನಿ ಸರ್ವತಃ ॥ ೧೬

ವಿಶೀರ್ಯಮಾಣಂ ಸ್ವಬಲಂ ದೃಷ್ಟ್ವಾ ಬಾಣೋಽತ್ಯಮರ್ಷಣಃ ।
ಕೃಷ್ಣಮಭ್ಯದ್ರವತ್ ಸಂಖ್ಯೇ ರಥೀ ಹಿತ್ವೈವ ಸಾತ್ಯಕಿಮ್ ॥ ೧೭

ಮೊದಲಾದವರನ್ನು ಶ್ರೀಕೃಷ್ಣನು ತನ್ನ ಶಾರ್ಙ್ಗಧನುಸ್ಸಿನಿಂದ ಚಿಮ್ಮಿದ ನಿಶಿತಶರಗಳಿಂದ ಹೊಡೆದೋಡಿಸಿದನು (೧೦-೧೧). ಶಂಕರನು ಪಿನಾಕಧನಸ್ಸನ್ನು ಹಿಡಿದು ನಾನಾ ವಿಧದ ಅಸ್ತ್ರಗಳನ್ನು ಶ್ರೀಕೃಷ್ಣನ ಮೇಲೆ ಪ್ರಯೋಗಿಸಿದನು. ಶೌರಿಯು ಅಚ್ಚರಿಗೊಳ್ಳದೆ ಶಾರ್ಙ್ಗಧನುಸ್ಸಿನಿಂದ ಪ್ರತ್ಯಸ್ತ್ರಗಳನ್ನು ಹೊಡೆದು ಅವೆಲ್ಲವನ್ನೂ ನಿವಾರಿಸಿದನು. ಬ್ರಹ್ಮಾಸ್ತ್ರಕ್ಕೆ ಬ್ರಹ್ಮಾಸ್ತ್ರ ವಾಯವ್ಯಸ್ತ್ರಕ್ಕೆ ಪರ್ವತಾಸ್ತ್ರ ಆಗ್ನೇಯಕ್ಕೆ ವರುಣಾಸ್ತ್ರ ಪಾಶುಪತಕ್ಕೆ ನಾರಾಯಣಾಸ್ತ್ರಗಳನ್ನು ಪ್ರಯೋಗಿಸಿದನು (೧೨-೧೩). ಅನಂತರ ಯುದ್ಧದಲ್ಲಿ ವಿಜೃಂಭಿಸಿದ ರುದ್ರನನ್ನು ಜೃಂಭಣಾಸ್ತ್ರದಿಂದ ಸ್ತಬ್ಧಗೊಳಿಸಿ, ಶ್ರೀಕೃಷ್ಣನು ಕತ್ತಿ, ಗದೆ, ಶರಗಳಿಂದ ಬಾಣಸೇನೆಯನ್ನು ಸಂಹರಿಸತೊಡಗಿದನು. ಪ್ರದ್ಯುಮ್ನನ ಬಾಣರಾಶಿಗಳಿಂದ ಗಾಸಿಗೊಂಡ ಕುಮಾರ ಸ್ವಾಮಿಯು ಅಂಗಗಳಿಂದ ರಕ್ತವನ್ನು ಸುರಿಸುತ್ತ ತನ್ನ ವಾಹನವಾದ ನವಿಲನ್ನೇರಿ ಪಲಾಯನಮಾಡಿದನು (೧೪-೧೫). ಬಲರಾಮನ ಮುಸಲದ ಹೊಡೆತದಿಂದ ಕುಂಭಾಂಡ, ಕೂಪಕರ್ಣರು ಮಡಿದರು. ಒಡೆಯರಿಲ್ಲದ ಅವರ ಸೇನೆಗಳು ದಿಕ್ಕು ದಿಕ್ಕಿಗೆ ಓಡಿಹೋದವು

ಧನೂಂಷ್ಯಾಕೃಷ್ಯ ಯುಗಪದ್ ಬಾಣಃ ಪಂಚಶತಾನಿ ವೈ ।
ಏಕೈಕಸ್ಮಿನ್ ಶರೌ ದ್ವೌದ್ವೌಸಂದಧೇ ರಣದುರ್ಮದಃ ॥ ೧೮
ತಾನಿ ಚಿಚ್ಛೇದ ಭಗವಾನ್ ಧನೂಂಷಿ ಯುಗಪದ್ಧರಿಃ ।
ಸಾರಥಿಂ ರಥಮಶ್ವಾಂಶ್ಚ ಹತ್ವಾ ಶಂಖಮಪೂರಯತ್ ॥ ೧೯
ತನ್ಮಾತಾ ಕೋಟರಾ ನಾಮ ನಗ್ನಾ ಮುಕ್ತಶಿರೋರುಹಾ ।
ಪುರೋಽವತಸ್ಥೇ ಕೃಷ್ಣಸ್ಯ ಪುತ್ರಪ್ರಾಣರಿರಕ್ಷಯಾ ॥ ೨೦
ತತಸ್ತಿರ್ಯಙ್ಮುಖೋ ನಗ್ನಾಮನಿರೀಕ್ಷನ್ ಗದಾಗ್ರಜಃ ।
ಬಾಣಶ್ಚ ತಾವದ್ ವಿರಥಶ್ಛಿನ್ನಧನ್ವಾವಿಶತ್ ಪುರಮ್ ॥ ೨೧
ವಿದ್ರಾವಿತೇ ಭೂತಗಣೇ ಜ್ವರಸ್ತು ತ್ರಿಶಿರಾಸ್ತ್ರಿಪಾತ್ ।
ಅಭ್ಯಧಾವತ ದಾಶಾರ್ಹಂ ದಹನ್ನಿವ ದಿಶೋ ದಶ॥ ೨೨

---

(೧೬). ಈ ಪ್ರಕಾರವಾಗಿ ತನ್ನ ಸೇನೆಯು ಚೆಲ್ಲಾಪಿಲ್ಲಿಯಾಗುತ್ತಿರುವುದನ್ನು ಕಂಡು ರೋಷಾವಿಷ್ಟನಾದ ಬಾಣಾಸುರನು ಸಾತ್ಯಕಿಯೊಡನೆ ಯುದ್ಧವನ್ನು ನಿಲ್ಲಿಸಿ, ರಥವೇರಿ ಶ್ರೀಕೃಷ್ಣನ ಕಡೆಗೆ ನುಗ್ಗಿ ಬಂದನು (೧೭). ರಣದುರ್ಮದನಾದ ಬಾಣಾಸುರನು ಐನೂರು ಧನಸ್ಸುಗಳನ್ನು (ಐನೂರುಬಾಹುಗಳಿಂದ ಒಂದೆಡೆ) ಹಿಡಿದು ಜಗ್ಗಿ ಒಂದೊಂದರಲ್ಲಿ ಎರಡೆರಡು ಶರಗಳನ್ನು ಹೂಡಿ ಶ್ರೀಕೃಷ್ಣನ ಮೇಲೆ ಪ್ರಯೋಗಿಸುತ್ತಿದ್ದನು. ಭಗವಾನ್ ಹರಿಯು ಆ ಎಲ್ಲ ಧನಸ್ಸುಗಳನ್ನೂ ಒಟ್ಟಿಗೆ ಕತ್ತರಿಸಿ ಚೆಲ್ಲಿ, ಬಾಣನ ರಥವನ್ನು ಮುರಿದು ಸಾರಥಿ, ಕುದುರೆಗಳನ್ನು ಕೊಂದು ತನ್ನ ಶಂಖವನ್ನು ಮೊಳಗಿಸಿದನು (೧೮-೧೯). ಆಗ ಬಾಣನ ತಾಯಿಯಾದ ಕೋಟರೆ ಎಂಬುವಳು ತನ್ನ ಮಗನ ಪ್ರಾಣವನ್ನು ಉಳಿಸುವ ಹಂಬಲದಿಂದ, ತಲೆಗೂದಲನ್ನು ಕೆದರಿಕೊಂಡು ಬೆತ್ತಲೆಯಾಗಿ ಶ್ರೀಕೃಷ್ಣನ ಎದುರಿಗೆ ಬಂದು ನಿಂತಳು ! ಶ್ರೀಕೃಷ್ಣನು ಆ ದಿಗಂಬರೆಯನ್ನು ನೋಡಲಾರದೆ ಮುಖವನ್ನು ಅಡ್ಡ ತಿರುಗಿಸಿದನು ! ಆ ಸಮಯದಲ್ಲಿ ರಥವನ್ನೂ ಧನಸ್ಸುಗಳನ್ನೂ ಕಳೆದುಕೊಂಡಿದ್ದ ಬಾಣನು ತನ್ನ ನಗರದೊಳಗೆ ಹೋದನು (೨೦-೨೧). ಇಂತು ಪ್ರಮಥಾದಿ ಭೂತಗಣಗಳು ಓಡಿಹೋಗಲಾಗಿ, ಮೂರು ತಲೆ ಮೂರು ಕಾಲುಗಳುಳ್ಳ ಮಾಹೇಶ್ವರ ಜ್ವರವು ದಶದಿಕ್ಕುಗಳನ್ನೂ ಉರುಬಿ ಹಾಕುವುದೋ ಎಂಬಂತೆ ಶ್ರೀಕೃಷ್ಣನನ್ನು ಅಟ್ಟಿಸಿಕೊಂಡು ಬಂದಿತು. ಆಗ ಶ್ರೀಮನ್ನಾರಾಯಣನು

ಅಥ ನಾರಾಯಣೋ ದೇವಸ್ತಂ ದೃಷ್ಟ್ವಾ ವ್ಯಸೃಜಜ್ಜ್ವರಮ್ ।
ಮಾಹೇಶ್ವರೋ ವೈಷ್ಣವಶ್ಚ ಯುಯುಧಾತೇ ಜ್ವರಾವುಭೌ ॥ ೨೩

ಮಾಹೇಶ್ವರಃ ಸಮಾಕ್ರಂದನ್ ವೈಷ್ಣವೇನ ಬಲಾರ್ದಿತಃ ।
ಅಲಬ್ಧ್ವಾಭಯಮನ್ಯತ್ರ ಭೀತೋ ಮಾಹೇಶ್ವರೋ ಜ್ವರಃ ।
ಶರಣಾರ್ಥೀ ಹೃಷೀಕೇಶಂ ತುಷ್ಟಾವ ಪ್ರಯತಾಂಜಲಿಃ ॥ ೨೪

ಜ್ವರ ಉವಾಚ-

ನಮಾಮಿ ತ್ವಾನಂತಶಕ್ತಿಂ ಪರೇಶಂ
ಸರ್ವಾತ್ಮಾನಂ ಕೇವಲಂ ಜ್ಞಪ್ತಿಮಾತ್ರಮ್ ।
ವಿಶ್ವೋತ್ಪತ್ತಿಸ್ಥಾನಸಂರೋಧಹೇತುಂ
ಯತ್ತದ್ ಬ್ರಹ್ಮ ಬ್ರಹ್ಮಲಿಂಗಂ ಪ್ರಶಾಂತಮ್ ॥ ೨೫

ಕಾಲೋ ದೈವಂ ಕರ್ಮ ಜೀವಃ ಸ್ವಭಾವೋ
ದ್ರವ್ಯಂ ಕ್ಷೇತ್ರಂ ಪ್ರಾಣ ಆತ್ಮಾ ವಿಕಾರಃ ।
ತತ್ಸಂಘಾತೋ ಬೀಜರೋಹಪ್ರವಾಹ-
ಸ್ತ್ವನ್ಮಾಯೈಷಾ ತನ್ನಿಷೇಧಂ ಪ್ರಪದ್ಯೇ ॥ ೨೬

ಅದನ್ನೆದುರಿಸುವಂತೆ ತನ್ನ ವೈಷ್ಣವಜ್ವರವನ್ನು ಕಳಿಸಿದನು. ಆಗ ಮಾಹೇಶ್ವರ ವೈಷ್ಣವಜ್ವರಗಳೆರಡೂ ಕಾದಾಡಿದವು (೨೨-೨೩). ಮಾಹೇಶ್ವರ ಜ್ವರವು ಆಕ್ರಮಣಮಾಡಿ ಹೋರಾಡುತ್ತಿರುವಾಗ, ವೈಷ್ಣವಜ್ವರದ ಬಲಕ್ಕೆ ಮಣಿದು ಹೆದರಿತು. ಅದು ಬೇರೆ ಅಭಯವನ್ನು ಕಾಣದೆ ಶರಣಾರ್ಥಿಯಾಗಿ ಕೈಮುಗಿದುಕೊಂಡು ಶ್ರೀಕೃಷ್ಣನನ್ನು ಸ್ತೋತ್ರಮಾಡಿತು (೨೪). ಅದು ಹೇಳಿದ್ದೇನೆಂದರೆ : ''ಹೇ ಸ್ವಾಮಿ, ಅನಂತಶಕ್ತಿಯೂ ಬ್ರಹ್ಮಾದಿಗಳಿಗೆ ನಿಯಾಮಕನೂ ಸರ್ವರ ಆತ್ಮಸ್ವರೂಪನೂ ಶುದ್ಧನೂ ಪ್ರಜ್ಞಾನ ಘನನೂ ಆದ ನಿನಗೆ ತಲೆಬಾಗುತ್ತೇನೆ. ವಿಶ್ವದ ಉತ್ಪತ್ತಿ ಸ್ಥಿತಿ ಲಯಗಳಿಗೆ ಕಾರಣವೂ ವೇದವೇದ್ಯವೂ ಪ್ರಶಾಂತವೂ ಆದ ಯಾವ ಪರಬ್ರಹ್ಮ ಉಂಟೋ ಅದೇ ನೀನು (೨೫). ಪ್ರಕೃತಿಯನ್ನು ಕ್ಷೋಭಿಸುವ ಕಾಲತತ್ತ್ವ, ಫಲಾಭಿವ್ಯಕ್ತಿಯೆಂಬ ಅದೃಷ್ಟ, ಕ್ಷೋಭರೂಪವಾದ ಕರ್ಮ, ಕರ್ಮಸಂಸ್ಕಾರವುಳ್ಳ ಜೀವ, ಸಂಸ್ಕಾರವೆಂಬ

ನಾನಾಭಾವೈರ್ಲೀಲಯೈವೋಪಪನ್ನೈ
ರ್ದೇವಾನ್ ಸಾಧೂನ್ ಲೋಕಸೇತೂನ್ ಬಿಭರ್ಷಿ।
ಹಂಸ್ಯುನ್ಮಾರ್ಗಾನ್ ಹಿಂಸಯಾ ವರ್ತಮಾನಾನ್
ಜನ್ಮೈತತ್ತೇ ಭಾರಹಾರಾಯ ಭೂಮೇಃ॥ ೨೭

ತಪ್ತೋಽಹಂ ತೇ ತೇಜಸಾ ದುಸ್ಸಹೇನ
ಶಾಂತೋಗ್ರೇಣಾತ್ಯುಲ್ಬಣೇನಜ್ವರೇಣ।
ತಾವತ್ತಾಪೋ ದೇಹಿನಾಂ ತೇಽಂಘ್ರಿಮೂಲಂ
ನೋ ಸೇವೇರನ್ ಯಾವದಾಶಾನುಬದ್ಧಾಃ॥ ೨೮

ಶ್ರೀಭಗವಾನುವಾಚ-

ತ್ರಿಶಿರಸ್ತೇ ಪ್ರಸನ್ನೋಽಸ್ಮಿ ವ್ಯೇತು ತೇ ಮಜ್ಜ್ವರಾದ್ ಭಯಮ್।
ಯೋ ನೌ ಸ್ಮರತಿ ಸಂವಾದಂ ತಸ್ಯ ತ್ವನ್ನ ಭವೇದ್ ಭಯಮ್॥ ೨೯

ಸ್ವಭಾವ, ಪಂಚ ಸೂಕ್ಷ್ಮಭೂತಗಳೆಂಬ ದ್ರವ್ಯ, ಶರೀರ, ಪ್ರಾಣವಾಯು, ಅಹಂಕಾರವೆಂಬ ಆತ್ಮ, ಏಕಾದಶ ಇಂದ್ರಿಯಗಳೆಂಬ ವಿಕಾರ, ಇವುಗಳ (ಏಕಾದಶೇಂದ್ರಿಯಗಳ ಮತ್ತು ಪಂಚಭೂತಗಳ) ಸಂಘಾತವೆಂಬ ಲಿಂಗಶರೀರ ಮತ್ತು ಕರ್ಮದಿಂದ ದೇಹ ದೇಹದಿಂದ ಕರ್ಮ ಎಂಬುದಾಗಿ ಬೀಜಾಂಕುರನ್ಯಾಯದಂತಿರುವ ಸಂಸಾರ ಪ್ರವಾಹ- ಇವೆಲ್ಲವೂ ನಿನ್ನ ಮಾಯೆಯೇ ಸರಿ. ಈ ಮಾಯೆಗೆ ದೂರನಾಗಿ ನಿಷೇಧಾವಧಿಯಾದ ನಿನಗೆ ಶರಣಾಗಿದ್ದೇನೆ (೨೬). ಹೇ ಪರಮಾತ್ಮ, ಲೀಲೆಯಿಂದಲೇ ಧರಿಸಿದ (ಮತ್ಸ್ಯಾದಿ) ನಾನಾ ರೂಪಗಳಿಂದ ದೇವತೆಗಳನ್ನೂ ಸಜ್ಜನರನ್ನೂ ಲೋಕರಕ್ಷಣದ ಕಟ್ಟೆಗಳಾದ ಧರ್ಮನಿಯಮಗಳನ್ನೂ ಸಂರಕ್ಷಿಸುತ್ತೀಯೆ. ಲೋಕವನ್ನು ಹಿಂಸೆ ಪಡಿಸುತ್ತಿರುವ ದುರ್ಮಾಗಿಗಳನ್ನು ಸಂಹರಿಸುತ್ತೀಯೆ. ಈ ಪ್ರಕಾರವಾದ ನಿನ್ನ ಈ ಅವತಾರವು ಭೂಮಿಯ ಭಾರವನ್ನು ಪರಿಹರಿಸುವುದಕ್ಕಾಗಿಯೇ ಇದೆ (೨೭). ನಿನ್ನ ತೇಜಸ್ಸಿನಿಂದ ಹುಟ್ಟಿದ ತಡೆಯಲಶಕ್ಯವೂ ಅತ್ಯುಲ್ಬಣವೂ ಶಾಂತೋಗ್ರವೂ ಆದ ವೈಷ್ಣವ ಶೀತಜ್ವರದಿಂದ ಬಳಲಿದ್ದೇನೆ. ಆಶಾಬದ್ಧರಾದ ಜನರು ಎಲ್ಲಿಯವರೆಗೆ ನಿನ್ನ ಪಾದ ಮೂಲವನ್ನು ಸೇವಿಸುವುದಿಲ್ಲವೋ ಅಲ್ಲಿಯವರೆಗೆ ಮಾತ್ರ ಈ ಬಗೆಯ

ಇತ್ಯುಕ್ತೋಽಚ್ಯುತಮಾನಮ್ಯ ಗತೋ ಮಾಹೇಶ್ವರೋ ಜ್ವರಃ।
ಬಾಣಸ್ತು ರಥಮಾರೂಢಃ ಪ್ರಾಗದ್ಯೋತ್ಸ್ಯನ್ ಜನಾರ್ದನಮ್ ॥

ತತೋ ಬಾಹುಸಹಸ್ರೇಣ ನಾನಾಯುಧಧರೋಽಸುರಃ।
ಮುಮೋಚ ಪರಮಕ್ರುದ್ಧೋ ಬಾಣಾಂಶ್ಚಕ್ರಾಯುಧೇ ನೃಪ ॥ ೩೧

ತಸ್ಯಾಸ್ಯತೋಽಸ್ತ್ರಾಣ್ಯಸಕೃಚ್ಚಕ್ರೇಣ ಕ್ಷುರನೇಮಿನಾ।
ಚಿಚ್ಛೇದ ಭಗವಾನ್ ಬಾಹೂನ್ ಶಾಖಾ ಇವ ವನಸ್ಪತೇಃ ॥ ೩೨

ಬಾಹುಷು ಛಿದ್ಯಮಾನೇಷು ಬಾಣಸ್ಯ ಭಗವಾನ್ ಭವಃ।
ಭಕ್ತಾನುಕಂಪ್ಯುಪವ್ರಜ್ಯ ಚಕ್ರಾಯುಧಮಭಾಷತ ॥ ೩೩

ಶ್ರೀರುದ್ರ ಉವಾಚ-

ತ್ವಂ ಹಿ ಬ್ರಹ್ಮ ಪರಂ ಜ್ಯೋತಿರ್ಗೂಢಂ ಬ್ರಹ್ಮಣಿ ವಾಙ್ಮಯೇ।
ಯಂ ಪಶ್ಯಂತ್ಯಮಲಾತ್ಮಾನ ಆಕಾಶಮಿವ ಕೇವಲಮ್ ॥ ೩೪

ತಾಪವಿರುತ್ತದೆಯಲ್ಲವೆ ?'' (೨೮). ಆಗ ಭಗವಂತನು ಹೇಳಿದನು : ''ಎಲೈ ಮೂರು ಶಿರಸ್ಸುಗಳಿರುವ ಜ್ವರವೆ, ನಿನ್ನ ವಿಷಯದಲ್ಲಿ ಪ್ರಸನ್ನನಾಗಿದ್ದೇನೆ. ನಿನಗೆ ನನ್ನ ಜ್ವರದಿಂದಾದ ಭಯವು ನೀಗಲಿ. ಅಲ್ಲದೆ ನಮ್ಮೀರ್ವರ ಸಂವಾದವನ್ನು ಯಾವನು ಸ್ಮರಿಸುವನೋ ಅವನಿಗೆ ನಿನ್ನಿಂದ ಭಯವಾಗದಿರಲಿ'' (೨೯). ಹೀಗೆ ಹೇಳಲಾಗಿ ಮಾಹೇಶ್ವರ ಜ್ವರವು ಅಚ್ಯುತನಿಗೆ ನಮಸ್ಕರಿಸಿ ಹೊರಟುಹೋಯಿತು. ಇತ್ತಲಾಗಿ ಬಾಣಾಸುರನು ಮತ್ತೊಂದು ರಥವನ್ನೇರಿ ಶ್ರೀಕೃಷ್ಣನೊಡನೆ ಯುದ್ಧ ಮಾಡಬೇಕೆಂದು ಬಂದನು (೩೦). ಪರೀಕ್ಷಿತರಾಜ, ಬಾಣಾಸುರನು ಸಾವಿರ ಕೈಗಳಲ್ಲಿ ಬಗೆಬಗೆಯ ಆಯುಧಗಳನ್ನು ಧರಿಸಿ ಪರಮ ಕ್ರುದ್ಧನಾಗಿ ಚಕ್ರಾಯುಧನ ಮೇಲೆ ಅವುಗಳನ್ನು ಪ್ರಯೋಗಿಸಿದನು. ಹೀಗೆ ಮೇಲಿಂದ ಮೇಲೆ ಅಸ್ತ್ರಗಳನ್ನು ಬಿಡುತ್ತಿರಲಾಗಿ, ಕ್ಷುರದಂತೆ ತೀಕ್ಷ್ಣಾಗ್ರವಾದ ಚಕ್ರಾಯುಧದಿಂದ ಭಗವಂತನು ಬಾಣಾಸುರನ ಸಹಸ್ರಬಾಹುಗಳನ್ನು ಮರದ ಕೊಂಬೆಗಳಂತೆ ಕತ್ತರಿಸಿ ಕೆಡಹಿದನು (೩೧-೩೨). ಹೀಗೆ ಬಾಣನ ತೋಳುಗಳು ಕತ್ತರಿಸಿ ಬೀಳುತ್ತಿರಲಾಗಿ, ಭಕ್ತನ ಮೇಲೆ ಅನುಕಂಪಗೊಂಡ ಭಗವಾನ್ ಶಿವನು ಚಕ್ರಾಯುಧನ ಬಳಿಗೆ ಬಂದು ಹೀಗೆಂದನು : ''ಹೇ ಅಚ್ಯುತ, ನೀನು ವೇದವಾಙ್ಮಯದಲ್ಲಿ ಗೂಢನಾಗಿ

ನಾಭಿರ್ನಭೋಽಗ್ನಿ ರ್ಮುಖಮಂಬು ರೇತೋ
ದ್ಯೌಃಶೀರ್ಷಮಾಶಾ ಶ್ರುತಿರಂಘ್ರಿರುರ್ವೀ।
ಚಂದ್ರೋ ಮನೋ ಯಸ್ಯ ದೃಗರ್ಕ ಆತ್ಮಾ
ಅಹಂ ಸಮುದ್ರೋ ಜಠರಂ ಭುಜೇಂದ್ರಃ॥ ೩೫

ರೋಮಾಣಿ ಯಸ್ಯೌಷಧಯೋಽಂಬುವಾಹಾಃ
ಕೇಶಾ ವಿರಿಂಚೋ ಧಿಷಣಾ ವಿಸರ್ಗಃ।
ಪ್ರಜಾಪತಿರ್ಹೃದಯಂ ಯಸ್ಯ ಧರ್ಮಃ
ಸ ವೈ ಭವಾನ್ ಪುರುಷೋ ಲೋಕಕಲ್ಪಃ॥ ೩೬

ತವಾವತಾರೋಽಯಮಕುಂಠಧಾಮನ್
ಧರ್ಮಸ್ಯ ಗುಪ್ತ್ಯೈ ಜಗತೋ ಭವಾಯ।
ವಯಂ ಚ ಸರ್ವೇ ಭವತಾನುಭಾವಿತಾ
ವಿಭಾವಯಾಮೋ ಭುವನಾನಿ ಸಪ್ತ॥ ೩೭

ತ್ವಮೇಕ ಆದ್ಯಃ ಪುರುಷೋಽದ್ವಿತೀಯ-
ಸ್ತುರ್ಯಃ ಸ್ವದೃಗ್ಘೇತುರಹೇತುರೀಶಃ।
ಪ್ರತೀಯಸೇಽಥಾಪಿ ಯಥಾವಿಕಾರಂ
ಸ್ವಮಾಯಯಾ ಸರ್ವಗುಣಪ್ರಸಿದ್ಧ್ಯೈ॥ ೩೮

ಪರಂಜ್ಯೋತಿಯಾಗಿರುವ ಬ್ರಹ್ಮವಾಗಿದ್ದೀಯೆ. ಆಕಾಶದಂತೆ ನಿರ್ಮಲನೂ ನಿಸ್ಸಂಗನೂ ಆದ ನಿನ್ನನ್ನು ಪರಿಶುದ್ಧಚಿತ್ತರಾದ ಜ್ಞಾನಿಗಳು ಮಾತ್ರ ಕಾಣಬಲ್ಲರು (೩೩-೩೪). ಆಕಾಶವು ನಿನ್ನನಾಭಿ, ಅಗ್ನಿ ನಿನ್ನ ಮುಖ, ಜಲವು ತೇಜಸ್ಸು, ಸ್ವರ್ಗವು ಶಿರಸ್ಸು, ದಿಕ್ಕುಗಳು ಕಿವಿ, ಭೂಮಿ ನಿನ್ನ ಪಾದ, ಚಂದ್ರನು ಮನಸ್ಸು, ಸೂರ್ಯನು ಕಣ್ಣು, ರುದ್ರನಾದ ನಾನು ನಿನ್ನ ಅಹಂಕಾರ, ಸಮುದ್ರವು ನಿನ್ನ ಹೊಟ್ಟೆ, ಇಂದ್ರನು ತೋಳು (೩೫). ಗಿಡಮರಗಳು ನಿನ್ನ ರೋಮಗಳು, ಮೋಡಗಳು ತಲೆಗೂದಲು, ಬ್ರಹ್ಮನು ಬುದ್ಧಿ, ಪ್ರಜಾಪತಿಯು ಶಿಶ್ನ, ಧರ್ಮವು ಹೃದಯ. ಈ ರೀತಿಯಲ್ಲಿ ನೀನು ಲೋಕವು ಕಲ್ಪಿಸಿಕೊಂಡಿರುವ ವಿರಾಟ್ ಪುರುಷನಾಗಿದ್ದೀಯೆ (೩೬). ಚ್ಯುತಿಯಿಲ್ಲದ ಸ್ವಸ್ವರೂಪವುಳ್ಳ ಮಹಾತ್ಮನೆ, ಈ ನಿನ್ನ ಕೃಷ್ಣಾವತಾರವು ಧರ್ಮರಕ್ಷಣೆಗಾಗಿಯೂ ಭಕ್ತರ ಹಿತಕ್ಕಾಗಿಯೂ ಆಗಿದೆ. ನಿನ್ನ

ಯಥೈವ ಸೂರ್ಯಃ ಪಿಹಿತಶ್ಛಾಯಯಾ ಸ್ವಯಾ
ಛಾಯಾಂ ಚ ರೂಪಾಣಿ ಚ ಸಂಚಕಾಸ್ತಿ।
ಏವಂ ಗುಣೇನಾಪಿಹಿತೋ ಗುಣಾಂಸ್ತ್ವ
ಮಾತ್ಮಪ್ರದೀಪೋ ಗುಣಿನಶ್ಚ ಭೂಮನ್ ॥ ೩೯

ಯನ್ಮಾಯಾಮೋಹಿತಾಧಿಯಃ ಪುತ್ರದಾರಗೃಹಾದಿಷು ।
ಉನ್ಮಜ್ಜಂತಿ ನಿಮಜ್ಜಂತಿ ಪ್ರಸಕ್ತಾ ವೃಜಿನಾರ್ಣವೇ ॥ ೪೦

ದೇವದತ್ತಮಿಮಂ ಲಬ್ಧ್ವಾ ನೃಲೋಕಮಜಿತೇಂದ್ರಿಯಃ।
ಯೋ ನಾದ್ರಿಯೇತ ತ್ವತ್ಪಾದೌ ಸ ಶೋಚ್ಯೋ ಹ್ಯಾತ್ಮವಂಚಕಃ ॥ ೪೧

ಯಸ್ತ್ವಾಂ ವಿಸೃಜತೇ ಮರ್ತ್ಯ ಆತ್ಮಾನಂ ಪ್ರಿಯಮೀಶ್ವರಮ್ ।
ವಿಪರ್ಯಯೇಂದ್ರಿಯಾರ್ಥಾರ್ಥಂ ವಿಷಮತ್ತ್ಯಮೃತಂ ತ್ಯಜನ್ ॥ ೪೨

ಮಹಿಮೆಯಿಂದಲೇ ಬಲವನ್ನು ಸಂಪಾದಿಸಿರುವ ನಾವು ಸಪ್ತ ಲೋಕಗಳನ್ನೂ ಪಾಲಿಸುತ್ತಿದ್ದೇವೆ (೩೭). ನೀನು ಸಜಾತೀಯ ವಸ್ತ್ವಂತರ ರಹಿತನಾದ ಏಕನು, ಆದಿಪುರುಷ, ವಿಜಾತಿಯ ವಸ್ತ್ವಂತರವೂ ಇಲ್ಲದ ಅದ್ವಿತೀಯ, ಅವಸ್ಥಾತ್ರಯಾತೀತನಾದ ತುರೀಯ, ಸ್ವಯಂಪ್ರಕಾಶ ಜ್ಞಾನರೂಪ, ಸರ್ವಜಗತ್ತಿಗೂ ಹೇತು, ಸ್ವಯಂ ಹೇತುರಹಿತ, ಅಂತರ್ಯಾಮಿ. ಆದರೂ ಸಹ ಸಮಸ್ತ ಪ್ರಾಕೃತ ವಿಷಯಗಳನ್ನು ಪ್ರಕಾಶಗೊಳಿಸುವುದಕ್ಕಾಗಿ ವಿಕಾರಗಳನ್ನತಿಕ್ರಮಿಸದೆ (ಶರೀರಗಳಲ್ಲಿ ಜೀವರೂಪನಾಗಿ) ಮಾಯೆಯಿಂದ ತೋರುತ್ತಿದ್ದೀಯೆ (೩೮). ಎಲೈ ಮಹಾತ್ಮನೆ, ಸೂರ್ಯನು ತನ್ನ ನೆರಳಿನ ರೂಪವಾದ ಮೋಡದಿಂದ ಆವೃತವಾದರೂ (ಆವೃತವಾದಂತೆ ಜನರಿಗೆ ಗೋಚರಿಸಿದರೂ) ತನ್ನನ್ನು ಆವರಿಸಿದ ನೆರಳಾದ ಮೋಡವನ್ನೂ ಮೋಡದಿಂದ ವ್ಯವಹಿತವಾದ ಘಟಪಟಾದಿಗಳನ್ನೂ ಪ್ರಕಾಶಪಡಿಸುತ್ತಾನೆ ಹಾಗೆಯೇ ಸ್ವಯಂ ಪ್ರಕಾಶನಾದ ನೀನು ನಿನ್ನ ಮಾಯೆಯಿಂದ ಆವೃತನಾದವನಂತೆ ಇದ್ದರೂ ಮಾಯಾರೂಪಗಳಾದ ತ್ರಿಗುಣಗಳನ್ನೂ ತ್ರಿಗುಣವಿಶಿಷ್ಟರಾದ ಜೀವರನ್ನೂ ಪ್ರಕಾಶಗೊಳಿಸುತ್ತಿದ್ದೀಯೆ (೩೯). ನಿನ್ನ ಮಾಯೆಯಿಂದ ಮೋಹಿತವಾದ ಬುದ್ಧಿಯುಳ್ಳ ಜನರು ಮಕ್ಕಳು, ಮಡದಿ, ಮನೆ ಮೊದಲಾದವುಗಳಲ್ಲಿ ಆಸಕ್ತರಾಗಿ ದುಃಖಸಾಗರದಲ್ಲಿ ತೇಲುತ್ತಾರೆ, ಮುಳುಗುತ್ತಾರೆ. ದೇವನಾದ ನೀನು ಕೊಟ್ಟಿರುವ ಈ ನರದೇಹವನ್ನು ಪಡೆದಿದ್ದರೂ ಸಹ, ಯಾವ ಮನುಷ್ಯನು ಇಂದ್ರಿಯಗಳನ್ನು

ಅಹಂ ಬ್ರಹ್ಮಾಥ ವಿಬುಧಾ ಮುನಯಶ್ಚಾಮಲಾಶಯಾಃ।
ಸರ್ವಾತ್ಮನಾ ಪ್ರಪನ್ನಾಸ್ತ್ವಾಮಾತ್ಮಾನಂ ಪ್ರೇಷ್ಠಮೀಶ್ವರಮ್ ॥ ೪೩

ತಂ ತ್ವಾ ಜಗತ್ಸ್ಥಿತ್ಯುದಯಾಂತಹೇತುಂ
ಸಮಂ ಪ್ರಶಾಂತಂ ಸುಹೃದಾತ್ಮದೈವಮ್ ।
ಅನನ್ಯಮೇಕಂ ಜಗದಾತ್ಮಕೇತಂ
ಭವಾಪವರ್ಗಾಯ ಭಜಾಮ ದೇವಮ್ ॥ ೪೪

ಅಯಂ ಮಮೇಷ್ಟೋ ದಯಿತೋಽನುವರ್ತೀ
ಮಯಾಭಯಂ ದತ್ತಮಮುಷ್ಯ ದೇವ ।
ಸಂಪಾದ್ಯತಾಂ ತದ್ ಭವತಃ ಪ್ರಸಾದೋ
ಯಥಾ ಹಿ ತೇ ದೈತ್ಯಪತೌ ಪ್ರಸಾದಃ ॥ ೪೫

ಶ್ರೀಭಗವಾನುವಾಚ-
ಯದಾತ್ಥ ಭಗವಂಸ್ತ್ವಂ ನಃ ಕರವಾಮ ಪ್ರಿಯಂ ತವ ।
ಭವತೋ ಯದ್ ವ್ಯವಸಿತಂ ತನ್ಮೇ ಸಾಧ್ವನುಮೋದಿತಮ್ ॥ ೪೬

ಜಯಿಸದೆ ಇರುವನೊ, ನಿನ್ನ ಪಾದಗಳನ್ನು ಭಜಿಸದೆ ಇರುವನೂ ಅವನು ಶೋಚನೀಯ ; ಆತ್ಮದ್ರೋಹಿ (೪೦-೪೧). ಯಾವ ಮನುಷ್ಯನೂ ಆತ್ಮನೂ ಪ್ರಿಯನೂ ಈಶ್ವರನೂ ಆದ ನಿನ್ನನ್ನು ಪರಿತ್ಯಜಿಸಿ, ವಿಪರೀತವಾಗಿ ಅನಾತ್ಮವೂ ಅಪ್ರಿಯವೂ, ಅಸ್ವತಂತ್ರವೂ ಆದ ಇಂದ್ರಿಯ ವಿಷಯ ವಸ್ತುವನ್ನು ಸೇವಿಸುತ್ತಾನೋ ಅವನು ಅಮೃತವನ್ನು ತ್ಯಜಿಸಿ ವಿಷವನ್ನು ತಿನ್ನತಕ್ಕವನೇ ಸರಿ (೪೨). ನಾನೂ ಬ್ರಹ್ಮನೂ ದೇವತೆಗಳೂ ಮುನಿಗಳೂ ಶುದ್ಧ ಚಿತ್ತರಾದ ಇತರರೂ ಸಹ, ಆತ್ಮನೂ ಪ್ರಿಯತಮನೂ ಈಶ್ವರನೂ ಆದ ನಿನಗೆ ಸರ್ವಭಾವದಿಂದಲೂ ಶರಣಾಗಿದ್ದೇವೆ. ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನೂ ಸರ್ವಸಮನೂ ಪ್ರಶಾಂತನೂ ಮಿತ್ರನೂ ಸರ್ವಾತ್ಮನೂ ಈಶನೂ (ಸಜಾತೀಯ ವಿಜಾತೀಯ ಭೇದ ರಹಿತನಾಗಿ) ಅನನ್ಯನೂ, (ಸ್ವಗತ ಭೇದರಹಿತನಾಗಿ) ಏಕನೂ ಜಗತ್ತಿಗೂ ಜೀವಾತ್ಮರಿಗೆ ಅಧಿಷ್ಠಾನವೂ ಆದ ನಿನ್ನನ್ನು ಸಂಸಾರದ ಬಿಡುಗಡೆಗಾಗಿ ಭಜಿಸುತ್ತೇವೆ (೪೩-೪೪). ಹೇ ದೇವ, ಈ ಬಾಣಾಸುರನು ನನಗೆ ಬೇಕಾದವನು. ನನ್ನ ದಯೆಗೆ ಪಾತ್ರನಾದ ಭಕ್ತ. ಈತನಿಗೆ ಅಭಯವನ್ನು ಕೊಟ್ಟಿದ್ದೇನೆ. ಆದ್ದರಿಂದ, ದೈತ್ಯ ಪತಿಯಾದ ಪ್ರಹ್ಲಾದನಲ್ಲಿ ನಿನಗೆ ಯಾವ ಅನುಗ್ರಹ ಬುದ್ಧಿ ಇದ್ದಿತೋ ಅದು ಈತನ

ಅವಧ್ಯೋಽಯಂ ಮಮಾಪ್ಯೇಷ ವೈರೋಚನಿಸುತೋಽಸುರಃ ।
ಪ್ರಹ್ಲಾದಾಯ ವರೋ ದತ್ತೋ ನ ವಧ್ಯೋ ಮೇ ತವಾನ್ವಯಃ ॥ ೪೭

ದರ್ಪೋಪಶಮನಾಯಾಸ್ಯ ಪ್ರವೃಕ್ಣಾ ಬಾಹವೋ ಮಯಾ ।
ಸೂದಿತಂ ಚ ಬಲಂ ಭೂರಿ ಯಚ್ಚ ಭಾರಾಯಿತಂ ಭುವಃ ॥ ೪೮

ಚತ್ವಾರೋಽಸ್ಯ ಭುಜಾಃ ಶಿಷ್ಟಾ ಭವಿಷ್ಯಂತ್ಯಜರಾಮರಾಃ ।
ಪಾರ್ಷದಮುಖ್ಯೋ ಭವತೋ ನ ಕುತಶ್ಚಿದ್ಭಯೋಽಸುರಃ ॥ ೪೯

ಇತಿ ಲಬ್ಧ್ವಾಽಭಯಂ ಕೃಷ್ಣಂ ಪ್ರಣಮ್ಯ ಶಿರಸಾಸುರಃ ।
ಪ್ರಾದ್ಯುಮ್ನಿಂ ರಥಮಾರೋಪ್ಯ ಸವಧ್ವಾ ಸಮುಪಾನಯತ್ ॥ ೫೦

ಅಕ್ಷೌಹಿಣ್ಯಾ ಪರಿವೃತಂ ಸುವಾಸಃಸಮಲಂಕೃತಮ್ ।
ಸಪತ್ನೀಕಂ ಪುರಸ್ಕೃತ್ಯ ಯಯೌ ರುದ್ರಾನುಮೋದಿತಃ ॥ ೫೧

ವಿಷಯದಲ್ಲಿಯೂ ದೊರಕಲಿ'' (೪೫). ಹೀಗೆ ರುದ್ರನು ಸ್ತುತಿಸಲಾಗಿ ಶ್ರೀಕೃಷ್ಣನು ಹೇಳಿದನು : ಹೇ ಭಗವನ್-ಶಿವ, ನೀನು ಹೇಳಿದಂತೆಯೇ ಆಗಲಿ. ನಿನಗೆ ಪ್ರಿಯವಾದ್ದನ್ನು ಮಾಡೋಣ. ನಿನ್ನ ಉದ್ದೇಶವನ್ನು ನಾನು ಪೂರ್ಣವಾಗಿ ಒಪ್ಪುತ್ತೇನೆ. ಬಲಿಯ ಮಗನಾದ ಈ ಅಸುರನು ನನಗೂ ವಧಾರ್ಹನಲ್ಲ. ಏಕೆಂದರೆ, ನಿನ್ನ ವಂಶಜರನ್ನು ಸಂಹರಿಸುವುದಿಲ್ಲವೆಂದು ನಾನು ಪ್ರಹ್ಲಾದನಿಗೆ ವರವನ್ನು ಕೊಟ್ಟಿದ್ದೇನೆ (೪೬-೪೭). ಇವನ ದರ್ಪವನ್ನಡಗಿಸುವುದಕ್ಕಾಗಿ ಈತನ ಬಾಹುಗಳನ್ನು ತುಂಡರಿಸಿ ಚೆಲ್ಲಿದ್ದೇನೆ. ಅಲ್ಲದೆ ಭೂಮಿಗೆ ಭಾರವಾಗಿದ್ದ ಈ ಬಹುದೊಡ್ಡ ಸೇನೆಯನ್ನು ಧ್ವಂಸಗೊಳಿಸಿದ್ದೇನೆ. ಈತನಿಗೆ ಉಳಿದಿರುವ ನಾಲ್ಕು ಕೈಗಳು ಶಾಶ್ವತವಾಗಿರಲಿ.[೧] ಈ ಬಾಣಾಸುರನು ನಿನ್ನ ಪಾರಿಷದರಲ್ಲಿ ಮುಖ್ಯನಾಗಿರುವುದರಿಂದ ಈತನಿಗೆ ಇನ್ನು ಯಾವ ಭಯವೂ ಇಲ್ಲದಿರಲಿ'' ಎಂದನು (೪೮-೪೯). ಹೀಗೆ ಅಭಯವನ್ನು ಪಡೆದ ಬಾಣಾಸುರನು ಶ್ರೀಕೃಷ್ಣನಿಗೆ ತಲೆಬಾಗಿ ವಂದಿಸಿದನು. ಅನಂತರ ಶ್ರೀ ರುದ್ರನಿಂದ ಅನುಮತಿಯನ್ನು ಪಡೆದು

೧ಮೂಲದಲ್ಲಿ 'ಭವಿಷ್ಯತ್ಯಜರಾಮರಃ' ಎಂದು ಪಾಠಾಂತರ ಉಂಟು. ಆ ಪಕ್ಷದಲ್ಲಿ 'ಬಾಣಸುರನು ಜರಾಮರಣವಿಲ್ಲದೆ ಇರುವನು' ಎಂದರ್ಥ.

ಸ್ವರಾಜಧಾನೀಂ ಸಮಲಂಕೃತಾಂ ಧ್ವಜೈಃ
ಸತೋರಣೈರುಕ್ಷಿತಮಾರ್ಗಚತ್ವರಾಮ್ ।
ವಿವೇಶ ಶಂಖಾನಕದುಂದುಭಿಸ್ವನೈ-
ರಭ್ಯುದ್ಯತಃ ಪೌರಸುಹೃದ್ದ್ವಿಜಾತಿಭಿಃ ॥ ೫೨

ಯ ಏವಂ ಕೃಷ್ಣ ವಿಜಯಂ ಶಂಕರೇಣ ಚ ಸಂಯುಗಮ್ ।
ಸಂಸ್ಮರೇತ್ ಪ್ರಾತರುತ್ಥಾಯ ನ ತಸ್ಯ ಸ್ಯಾತ್ ಪರಾಜಯಃ ॥ ೫೩

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ತ್ರಿಷಷ್ಟಿತಮಾಧ್ಯಾಯಃ

ಅನಿರುದ್ಧನನ್ನು ಉತ್ತಮ ವಸ್ತ್ರಗಳಿಂದ ಅಲಂಕರಿಸಿ, ಆತನ ಪತ್ನಿಯಾದ ಉಷೆಯೊಡನೆ ರಥದಲ್ಲಿ ಕುಳ್ಳಿರಿಸಿ, ಸೇನೆಯನ್ನು ಮುಂದೆ ಮಾಡಿಕೊಂಡು ಶ್ರೀಕೃಷ್ಣನ ಬಳಿಗೆ ಕರೆತಂದನು (೫೦-೫೧). ಅವನ ರಾಜಧಾನಿಯಾದ ಶೋಣಿತಪುರವನ್ನು ಧ್ವಜಗಳಿಂದಲೂ ತೋರಣಗಳಿಂದಲೂ ಅಲಂಕರಿಸಿ, ರಸ್ತೆಗಳನ್ನೂ ಚೌಕಗಳನ್ನೂ ನೀರಿನಿಂದ ಸಿಂಪಡಿಸಲಾಯಿತು. ಶಂಖ, ಮೃದಂಗ, ಭೇರಿಗಳು ಧ್ವನಿಗೈದವು. ಪೌರರೂ ದೇವತೆಗಳೂ ದ್ವಿಜರೂ ಸ್ವಾಗಸುತ್ತಿರಲು ಬಾಣಾಸುರನು ತನ್ನ ರಾಜಧಾನಿಯನ್ನು ಪ್ರವೇಶಿಸಿದನು (೫೨). ಈ ಪ್ರಕಾರವಾದ ಶ್ರೀಕೃಷ್ಣವಿಜಯವನ್ನೂ ಶಂಕರನೊಡನೆ ನಡೆದ ಯುದ್ಧ ಪ್ರಸಂಗವನ್ನೂ ಯಾವಾತನು ಪ್ರಾತಃಕಾಲದಲ್ಲಿ ಎದ್ದು ಸ್ಮರಿಸುವನೋ ಆತನಿಗೆ ಪರಾಜಯವಾಗದು (೫೩).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಅರುವತ್ತುಮೂರನೆಯ ಅಧ್ಯಾಯ

ಚತುಃಷಷ್ಟಿತಮಾಧ್ಯಾಯಃ

ಶ್ರೀಶುಕ ಉವಾಚ-

ಏಕದೋಪವನಂ ರಾಜನ್ ಜಗ್ಮುರ್ಯದುಕುಮಾರಕಾಃ।
ವಿಹರ್ತುಂ ಸಾಂಬಪ್ರದ್ಯುಮ್ನ ಚಾರುಭಾನುಗದಾದಯಃ॥ ೧

ಕ್ರೀಡಿತ್ವಾ ಸುಚಿರಂ ತತ್ರ ವಿಚಿನ್ವಂತಃ ಪಿಪಾಸಿತಾಃ।
ಜಲಂ ನಿರುದಕೇ ಕೂಪೇ ದದೃಶುಃ ಸತ್ತ್ವಮದ್ಭುತಮ್॥ ೨

ಕೃಕಲಾಸಂ ಗಿರಿನಿಭಂ ವೀಕ್ಷ್ಯ ವಿಸ್ಮಿತಮಾನಸಾಃ।
ತಸ್ಯ ಚೋದ್ಧರಣೇ ಯತ್ನಂ ಚಕ್ರುಸ್ತೇ ಕೃಪಯಾನ್ವಿತಾಃ॥ ೩

ಚರ್ಮಜೈಸ್ತಾಂತವೈಃ ಪಾಶೈರ್ಬದ್ಧ್ವಾ ಪತಿತಮರ್ಭಕಾಃ।
ನಾಶಕ್ನುವನ್ ಸಮುದ್ಧರ್ತುಂ ಕೃಷ್ಣಾಯಾಚಖ್ಯುರುತ್ಸುಕಾಃ॥ ೪

ಅಧ್ಯಾಯ ೬೪

ನೃಗೋಪಾಖ್ಯಾನ ಬ್ರಹ್ಮಸ್ವವನ್ನು ಅಪಹರಿಸುವುದು ಮಹಾಪಾಪ ಎಂದು ವಿವರಣೆ.

ಪರೀಕ್ಷಿತರಾಜ, ಒಂದು ದಿನ ಸಾಂಬ, ಪ್ರದ್ಯುಮ್ನ, ಚಾರುಭಾನು, ಗದ-ಮೊದಲಾದ ಯದುಕುಮಾರರು ವಿಹರಿಸುವುದಕ್ಕಾಗಿ ಉಪವನಕ್ಕೆ ಹೋದರು. ಅಲ್ಲಿ ಬಹಳ ಹೊತ್ತು ಕ್ರೀಡಿಸದ ಮೇಲೆ ಅವರಿಗೆ ಬಾಯಾರಿಕೆಯಾಯಿತು. ನೀರನ್ನು ಅರಸುತ್ತ ಹೋಗಿ ನೀರಿಲ್ಲದೆ ಒಂದು ಹಾಳು ಭಾವಿಯಲ್ಲಿ ಅದ್ಭುತವಾದ ಪ್ರಾಣಿಯೊಂದನ್ನು ಕಂಡರು (೧-೨). ಅದೊಂದು ಪರ್ವತದಂತೆ ಬಹು ದೊಡ್ಡದಾದ ಓತಿಕೇತ (ಹಂಟೆಗೊದ್ದ) ವಾಗಿತ್ತು. ಅದನ್ನು ಕಂಡು ಅಚ್ಚರಿಗೊಂಡ ಯದುಕುಮಾರರು ಮರುಕದಿಂದ ಅದನ್ನು ಮೇಲಕ್ಕೆತ್ತಬೇಕೆಂದು ಪ್ರಯತ್ನಿಸಿದರು. ಚರ್ಮದ ಬಾರು ಪಟ್ಟಿಗಳಿಂದಲೂ ನೂಲಿನ ಹಗ್ಗಗಳಿಂದಲೂ ಕಟ್ಟಿ ಆ ಹುಡುಗರು ಒಳಗೆ ಬಿದ್ದಿದ್ದ ಓತಿಕೇತವನ್ನು ಎತ್ತಲು ಶ್ರಮಿಸಿದರು ಎತ್ತಲಾಗಲಿಲ್ಲ. ಅವರು ಕುತುಹಲದಿಂದ ಈ ವಿಷಯವನ್ನು ಶ್ರೀಕೃಷ್ಣನಿಗೆ ತಿಳಿಸಿದರು (೩-೪).

ತತ್ರಾಗತ್ಯಾರವಿಂದಾಕ್ಷೋ ಭಗವಾನ್ ವಿಶ್ವಭಾವನಃ ।
ವೀಕ್ಷ್ಯಾಽಽಜ್ಜಹಾರ ವಾಮೇನ ತಂ ಕರೇಣ ಸ ಲೀಲಯಾ ॥ ೫

ಸ ಉತ್ತಮಶ್ಲೋಕಕರಾಭಿಮೃಷ್ಟೋ
ವಿಹಾಯ ಸದ್ಯಃ ಕೃಕಲಾಸರೂಪಮ್ ।
ಸಂತಪ್ತಚಾಮೀಕರಚಾರುವರ್ಣಃ
ಸ್ವರ್ಗ್ಯದ್ಭುತಾಲಂಕರಣಾಂಬರಸ್ರಕ್ ॥ ೬

ಪಪ್ರಚ್ಛ ವಿದ್ವಾನಪಿ ತನ್ನಿದಾನಂ
ಜನೇಷು ವಿಖ್ಯಾಪಯಿತುಂ ಮುಕುಂದಃ ।
ಕಸ್ತ್ವಂ ಮಹಾಭಾಗ ವರೇಣ್ಯರೂಪೋ
ದೇವೋತ್ತಮಂ ತ್ವಾಂ ಗಣಯಾಮಿ ನೂನಮ್ ॥ ೭

ದಶಾಮಿಮಾಂ ವಾ ಕತಮೇನ ಕರ್ಮಣಾ
ಸಂಪ್ರಾಪಿತೋಽಸ್ಯತದರ್ಹಃ ಸುಭದ್ರಃ ।
ಆತ್ಮಾನಮಾಖ್ಯಾಹಿ ವಿವಿತ್ಸತಾಂ ನೋ
ಯನ್ಮನ್ಯಸೇ ನಃ ಕ್ಷಮಮತ್ರ ವಕ್ತುಮ್ ॥ ೮

ಆಗ ವಿಶ್ವವನ್ನು ಉದ್ಧರಿಸುವ ಭಗವಾನ್ ಅರವಿಂದಾಕ್ಷನು ಅಲ್ಲಿಗೆ ಬಂದು ಆ ಓತಿಕೇತವನ್ನು ಎಡಗೈಯಿಂದ ಬಹು ಸುಲಭವಾಗಿ ಮೇಲೆತ್ತಿದನು. ಉತ್ತಮ ಶ್ಲೋಕನ (ಕೀರ್ತಿಶಾಲಿಯಾದ ಭಗವಂತನ) ಹಸ್ತಸ್ಪರ್ಶವಾದೊಡನೆ ಓತಿಕೇತದ ರೂಪವೇ ಬದಲಾಯಿಸಿತು. ಕಾಯಿಸಿದ ಚಿನ್ನದಂತೆ ಹೊಳೆಯುವ ಮೈಬಣ್ಣವುಳ್ಳ, ಅದ್ಭುತವಾದ ಆಭರಣ ವಸ್ತ್ರಮಾಲೆಗಳಿಂದ ರಾರಾಜಿಸುವ, ದಿವ್ಯ ಪುರುಷಾಕೃತಿಯನ್ನು ತಳೆಯಿತು (೫-೬). ಅದಕ್ಕೆ ಕಾರಣವೇನೆಂಬುದನ್ನು ಬಲ್ಲವನಾದರೂ ಜನರಿಗೆ ಗೊತ್ತಾಗಲೆಂದು ಮುಕುಂದನು ಹೀಗೆ ಪ್ರಶ್ನೆ ಮಾಡಿದನು: "ಎಲೈ ಮಹಾಶಯ, ದಿವ್ಯರೂಪವುಳ್ಳ ನೀನು ಯಾರು? ನೀನೊಬ್ಬ ದೇವಶ್ರೇಷ್ಠನೆಂದು ನಾನು ಭಾವಿಸುತ್ತೇನೆ. ಯಾವ ಕರ್ಮದಿಂದ ನಿನಗೆ ಈ ಅವಸ್ಥೆಯುಂಟಾಯಿತು ? ಸೌಮ್ಯ, ಈ ದುರವಸ್ಥೆಯು ನಿನಗೆ ಅರ್ಹವಾದ್ದಲ್ಲ. ಈ ವಿಚಾರವನ್ನು ತಿಳಿಯಲು ಬಯಸುವ ನಮಗೆ, ಹೇಳಬಹುದಾಗಿದ್ದರೆ ನೀನು

ಶ್ರೀಶುಕ ಉವಾಚ-

ಇತಿ ಸ್ಮ ರಾಜಾ ಸಂಪೃಷ್ಟಃ ಕೃಷ್ಣೇನಾನಂತಮೂರ್ತಿನಾ ।
ಮಾಧವಂ ಪ್ರಣಿಪತ್ಯಾಹ ಕಿರೀಟೇನಾರ್ಕವರ್ಚಸಾ ॥ ೯

ನೃಗ ಉವಾಚ-

ನೃಗೋ ನಾಮ ನರೇಂದ್ರೋಽಹಮಿಕ್ಷ್ವಾಕುತನಯಃ ಪ್ರಭೋ ।
ದಾನಿಷ್ವಾಖ್ಯಾಯಮಾನೇಷು ಯದಿ ತೇ ಕರ್ಣಮಸ್ಪೃಶಮ್ ॥ ೧೦

ಕಿಂ ನು ತೇಽವಿದಿತಂ ನಾಥ ಸರ್ವಭೂತಾತ್ಮಸಾಕ್ಷಿಣಃ ।
ಕಾಲೇನಾವ್ಯಹತದೃಶೋ ವಕ್ಷ್ಯೇಽಥಾಪಿ ತವಾಜ್ಞಯಾ ॥ ೧೧

ಯಾವತ್ಯಃ ಸಿಕತಾ ಭೂಮೇರ್ಯಾವತ್ಯೋ ದಿವಿ ತಾರಕಾಃ ।
ಯಾವತ್ಯೋ ವರ್ಷಧಾರಾಶ್ಚ ತಾವತೀರದದಾಂ ಸ್ಮಗಾಃ ॥ ೧೨

ಪಯಸ್ವಿನೀಸ್ತರುಣೀಃ ಶೀಲರೂಪ-
ಗುಣೋಪಪನ್ನಾಃ ಕಪಿಲಾ ಹೇಮಶೃಂಗೀಃ ।
ನ್ಯಾಯಾರ್ಜಿತಾ ರೂಪ್ಯಖುರಾಃ ಸವತ್ಸಾ
ದುಕೂಲಮಾಲಾಭರಣಾ ದದಾವಹಮ್ ॥ ೧೩

ಯಾರೆಂಬುದನ್ನು ತಿಳಿಸು'' (೭-೮). ಈ ರೀತಿಯಲ್ಲಿ ಶ್ರೀಕೃಷ್ಣನು ಕೇಳಲಾಗಿ ಆ ಪುರುಷನು ಸೂರ್ಯನಂತೆ ಮಿನುಗುತ್ತಿದ್ದ ತನ್ನ ಕಿರೀಟವನ್ನು ಬಾಗಿಸಿ ಮಾಧವನಿಗೆ ನಮಸ್ಕರಿಸಿ ಇಂತೆಂದನು : ''ಹೇ ಪ್ರಭು, ನಾನು ಇಕ್ಷ್ವಾಕು ವಂಶದಲ್ಲಿ ಹುಟ್ಟಿದ ನೃಗನೆಂಬ ರಾಜ. ಪ್ರಖ್ಯಾತರಾದ ದಾನಿಗಳಲ್ಲಿ ನಾನೊಬ್ಬನೆಂದು ನೀನು ಕೇಳಿರಬಹುದು (೯-೧೦). ಸ್ವಾಮಿ, ಸರ್ವಭೂತಗಳಲ್ಲಿ ಅಂತಃಸಾಕ್ಷಿಯಾಗಿರುವ ನಿನಗೆ ಗೊತ್ತಿಲ್ಲದ್ದಾದರೂ ಯಾವುದಿದ್ದೀತು ? ನಿನ್ನ ಜ್ಞಾನಕ್ಕೆ ಕಾಲದ ತಡೆ ಇಲ್ಲ. ಆದರೂ ನಿನ್ನ ಆಜ್ಞೆಯೆಂದು ನನ್ನ ವೃತ್ತಾಂತವನ್ನು ಹೇಳುವೆನು: ಈ ಭೂಮಿಯಲ್ಲಿ ಎಷ್ಟು ಕಲ್ಲು ಹರಳುಗಳಿವೆಯೋ ಗಗನದಲ್ಲಿ ಎಷ್ಟು ಚುಕ್ಕೆಗಳಿವೆಯೋ ಮಳೆಯ ಧಾರೆಗಳು ಎಷ್ಟು ಬೀಳಬಹುದೋ, ಅಷ್ಟು ಗೋದಾನಗಳನ್ನು ನಾನು ಮಾಡಿದ್ದೇನೆ! ಆ ಗೋವುಗಳು ಸಾಮಾನ್ಯವಾದವುಗಳಲ್ಲ, ಚೆನ್ನಾಗಿ ಹಾಲು

ಸ್ವಲಂಕೃತೇಭ್ಯೋ ಗುಣಶೀಲವದ್ಭ್ಯಃ
ಸೀದತ್ಕುಟುಂಬೇಭ್ಯ ಋತವ್ರತೇಭ್ಯಃ।
ತಪಃಶ್ರುತಬ್ರಹ್ಮವದಾನ್ಯಸದ್ಭ್ಯಃ
ಪ್ರಾದಾಂ ಯುವಭ್ಯೋ ದ್ವಿಜಪುಂಗವೇಭ್ಯಃ॥ ೧೪

ಗೋಭೂಹಿರಣ್ಯಾಯತನಾಶ್ವಹಸ್ತಿನಃ
ಕನ್ಯಾಃ ಸದಾಸೀಸ್ತಿಲರೂಪ್ಯಶಯ್ಯಾಃ।
ವಾಸಾಂಸಿ ರತ್ನಾನಿ ಪರಿಚ್ಛದಾನ್ ರಥಾ-
ನಿಷ್ಟಂ ಚತ ಯಜ್ಞೈಶ್ಚರಿತಂ ಚ ಪೂರ್ತಮ್॥ ೧೫

ಕಸ್ಯಚಿದ್ ದ್ವಿಜಮುಖ್ಯಸ್ಯ ಭ್ರಷ್ಟಾ ಗೌರ್ಮಮ ಗೋಧನೇ।
ಸಂಪೃಕ್ತಾವಿದುಷಾ ಸಾ ಚ ಮಯಾ ದತ್ತಾ ದ್ವಿಜಾತಯೇ॥ ೧೬

ಕೊಡತಕ್ಕ ಒಳ್ಳೆಪ್ರಾಯದ ಹಸುಗಳು. ಶೀಲ ರೂಪ ಗುಣಯುಕ್ತವಾದವು. ಕೊಂಬುಗಳಿಗೆ ಚಿನ್ನದಿಂದ ಅಲಂಕರಿಸಿದ ಕಪಿಲವರ್ಣದವು. ನ್ಯಾಯಮಾರ್ಗದಲ್ಲಿ ನನ್ನಿಂದ ಸಂಪಾದಿಸಲ್ಪಟ್ಟವು. ಗೊರಸುಗಳನ್ನು ಬೆಳ್ಳಿಯ ತಗಡುಗಳಿಂದ ಅಲಂಕರಿಸಿ, ರೇಷ್ಮೆಯ ವಸ್ತ್ರಗಳನ್ನು ಹೊದಿಸಿ, ಹೂಮಾಲೆಗಳನ್ನು ಹಾಕಿ, ಆಭರಣಗಳನ್ನು ತೊಡಿಸಿ, ಕರುಗಳ ಸಹಿತವಾದ ಗೋವುಗಳನ್ನು ನಾನು ದಾನಮಾಡಿದ್ದೇನೆ (೧೧-೧೩). ಆ ಗೋವುಗಳನ್ನಾದರೋ, ಗುಣಶಾಲಿಗಳೂ ಶೀಲವಂತರೂ ಬಡವರೂ ಋಜುಮಾರ್ಗಿಗಳೂ ತಪಸ್ವಿಗಳೂ ವೇದಾಧ್ಯಯನ ಸಂಪನ್ನರೂ ಉದಾರಿಗಳೂ ಸಜ್ಜನರೂ ಯುವಕರೂ ಆದ ಬ್ರಾಹ್ಮಣೋತ್ತಮರಿಗೆ, ಅವರನ್ನು ಚೆನ್ನಾಗಿ ಅಲಂಕರಿಸಿ, ದಾನಮಾಡಿದ್ದೇನೆ (೧೪). ಗೋದಾನವಲ್ಲದೆ ಭೂದಾನ, ಸುವರ್ಣದಾನ, ಗೃಹದಾನ, ಅಶ್ವದಾನ, ಹಸ್ತಿದಾನಗಳನ್ನು ಮಾಡಿದೆನು. ದಾಸೀಸಮೇತರಾದ ಕನ್ಯೆಯರನ್ನು ದಾನಮಾಡಿದ್ದೇನೆ. ಎಳ್ಳು, ಬೆಳ್ಳಿ, ಶಯ್ಯೆಗಳನ್ನು ಕೊಟ್ಟಿದ್ದೇನೆ. ವಸ್ತ್ರಗಳನ್ನೂ ರತ್ನಗಳನ್ನೂ ಗೃಹಪರಿಕರಗಳನ್ನೂ ರಥಗಳನ್ನೂ ದಾನಮಾಡಿದ್ದೇನೆ. ಹಲವಾರು ಯಜ್ಞಗಳನ್ನಾಚರಿಸಿದೆನು. ವಾಪೀ ಕೂಪ ತಟಾಕಾದಿಗಳನ್ನು ನಿರ್ಮಿಸಿದೆನು (೧೫). ಹೀಗಿರಲು ಒಬ್ಬ ಬ್ರಾಹ್ಮಣೋತ್ತಮನಿಗೆ ದಾನಮಾಡಿದ ಗೋವು ನನ್ನ ಹಸುಗಳ ಮಂದೆಯನ್ನು ಸೇರಿಕೊಂಡಿತು. ನಾನು ಅದನ್ನರಿಯದೆ ಆ ಹಸುವನ್ನು

ತಾಂ ನೀಯಮಾನಾಂ ತತ್ಸ್ವಾಮೀ ದೃಷ್ಟ್ವೋವಾಚ ಮಮೇತಿ ತಮ್ ।
ಮಮೇತಿ ಪ್ರತಿಗ್ರಾಹ್ಯಾಹ ನೃಗೋ ಮೇ ದತ್ತವಾನಿತಿ ॥ ೧೭

ವಿಪ್ರೌ ವಿವದಮಾನೌ ಮಾಮೂಚತುಃ ಸ್ವಾರ್ಥಸಾಧಕೌ ।
ಭವಾನ್ ದಾತಾಪಹರ್ತೇತಿ ತಚ್ಛ್ರುತ್ವಾ ಮೇಽಭವದ್ಭ್ರಮಃ ॥ ೧೮

ಅನುನೀತಾವುಭೌ ವಿಪ್ರೌ ಧರ್ಮಕೃಚ್ಛ್ರಗತೇನ ವೈ ।
ಗವಾಂ ಲಕ್ಷಂ ಪ್ರಕೃಷ್ಟಾನಾಂ ದಾಸ್ಯಾಮ್ಯೇಷಾ ಪ್ರದೀಯತಾಮ್ ॥ ೧೯

ಭವಂತಾವನುಗೃಹ್ಣೀತಾಂ ಕಿಂಕರಸ್ಯಾವಿಜಾನತಃ ।
ಸಮುದ್ಧರತ ಮಾಂ ಕೃಚ್ಛ್ರಾತ್ ಪತಂತಂ ನಿರಯೇಽಶುಚೌ ॥ ೨೦

ನಾಹಂ ಪ್ರತೀಚ್ಛೇ ವೈ ರಾಜನ್ನಿತ್ಯುಕ್ತ್ವಾ ಸ್ವಾಮ್ಯಪಾಕ್ರಮತ್ ।
ನಾನ್ಯದ್ ಗವಾಮಪ್ಯಯುತಮಿಚ್ಛಾಮೀತ್ಯಪರೋ ಯಯೌ ॥ ೨೧

ಯಜ್ಞಗಳನ್ನಾಚರಿಸಿದೆನು. ವಾಪೀ ಕೂಪ ತಟಾಕಾದಿಗಳನ್ನು ನಿರ್ಮಿಸಿದೆನು (೧೫). ಹೀಗಿರಲು ಒಬ್ಬ ಬ್ರಾಹ್ಮಣೋತ್ತಮನಿಗೆ ದಾನಮಾಡಿದ ಗೋವು ನನ್ನ ಹಸುಗಳ ಮಂದೆಯನ್ನು ಸೇರಿಕೊಂಡಿತು. ನಾನು ಅದನ್ನರಿಯದೆ ಆ ಹಸುವನ್ನು ಇನ್ನೊಬ್ಬ ಬ್ರಾಹ್ಮಣನಿಗೆ ದಾನಮಾಡಿದೆನು. ಆತನು ಅದನ್ನು ಮನೆಗೆ ಒಯ್ಯುತ್ತಿರುವಾಗ ಮೊದಲಿನ ಗೋಸ್ವಾಮಿಯಾದ ದ್ವಿಜನು 'ಈ ಹಸು ನನ್ನದು' ಎಂದನು. ದಾನವನ್ನು ತೆಗೆದುಕೊಂಡಿದ್ದ ಈ ದ್ವಿಜನು 'ಇದು ನನ್ನದು. ನೃಗರಾಜನು ನನಗೆ ದಾನ ಕೊಟ್ಟಿದ್ದಾನೆ' ಎಂದನು (೧೬-೧೭). ಹೀಗೆ ಅವರಿಬ್ಬರೂ ವಾದಮಾಡುತ್ತ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವುದಕ್ಕಾಗಿ ನನ್ನ ಹತ್ತಿರ ಬಂದು ''ರಾಜನೆ, ಈ ಗೋವನ್ನು ನನಗೆ ದಾನಮಾಡಿದ್ದೀಯೆ, ಅಲ್ಲವೆ ?'' ಎಂದು ಒಬ್ಬನೂ ''ರಾಜ, ಇದನ್ನು ನನ್ನಿಂದ ಅಪಹರಿಸಿದ್ದೀಯೆ'' ಎಂದು ಇನ್ನೊಬ್ಬನೂ ಹೇಳ ತೊಡಗಿದರು. ನನಗೆ ದಿಕ್ಕುಗಾಣದೆ ಹೋಯಿತು (೧೮). ಧರ್ಮಸಂಕಟದಲ್ಲಿ ಸಿಕ್ಕಿದ ನಾನು ಆ ಬ್ರಾಹ್ಮಣರನ್ನು ಸಂತೈಸುತ್ತ ''ನಿಮಗೆ ಶ್ರೇಷ್ಠವಾದ ಒಂದು ಲಕ್ಷ ಹಸುಗಳನ್ನು ಕೊಡುತ್ತೇನೆ. ಈ ಗೋವನ್ನು ಬಿಟ್ಟುಕೊಡಿರಿ'' ತಿಳಿಯದೆ ತಪ್ಪು ಮಾಡಿದ ಈ ಸೇವಕನನ್ನು ಅನುಗ್ರಹಿಸಿರಿ. ಪಾಪಕೃತ್ಯದಿಂದ ಅಶುಚಿಯಾದ ನರಕದಲ್ಲಿ ಬೀಳುವ ನನ್ನನ್ನು ಉದ್ಧರಿಸಿರಿ'' ಎಂದು ಪ್ರಾರ್ಥಿಸಿಕೊಂಡೆನು (೧೯-೨೦). ಅದಕ್ಕೆ ಮೊದಲನೆಯ

ಏತಸ್ಮಿನ್ನಂತರೇ ಯಾಮ್ಯೈರ್ದೂತೈರ್ನೀತೋ ಯಮಕ್ಷಯಮ್ ।
ಯಮೇನ ಪೃಷ್ಟಸ್ತತ್ರಾಹಂ ದೇವದೇವ ಜಗತ್ಪತೇ ॥ ೨೨

ಪೂರ್ವಂ ತ್ವಮಶುಭಂ ಭುಂಕ್ಷೇ ಉತಾಹೋ ನೃಪತೇ ಶುಭಮ್ ।
ನಾಂತಂ ದಾನಸ್ಯ ಧರ್ಮಸ್ಯ ಪಶ್ಯೇ ಲೋಕಸ್ಯ ಭಾಸ್ವತಃ ॥ ೨೩

ಪೂರ್ವಂ ದೇವಾಶುಭಂ ಭುಂಜ ಇತಿ ಪ್ರಾಹ ಪತೇತಿ ಸಃ ।
ತಾವದದ್ರಾಕ್ಷಮಾತ್ಮಾನಂ ಕೃಕಲಾಸಂ ಪತನ್ ಪ್ರಭೋ ॥ ೨೪

ಬ್ರಹ್ಮಣ್ಯಸ್ಯ ವದಾನ್ಯಸ್ಯ ತವ ದಾಸಸ್ಯ ಕೇಶವ ।
ಸ್ಮೃತಿರ್ನಾದ್ಯಾಪಿ ವಿಧ್ವಸ್ತಾ ಭವತ್ಸಂದರ್ಶನಾರ್ಥಿನಃ ॥ ೨೫

ಸ ತ್ವಂ ಕಥಂ ಮಮ ವಿಭೋಽಕ್ಷಿಪಥಃ ಪರಾತ್ಮಾ
ಯೋಗೇಶ್ವರೈಃ ಶ್ರುತಿದೃಶಾಮಲಹೃದ್ವಿಭಾವ್ಯಃ ।
ಸಾಕ್ಷಾದಧೋಕ್ಷಜ ಉರುವ್ಯಸನಾಂಧಬುದ್ಧೇಃ
ಸ್ಯಾನ್ಮೇಽನುದೃಶ್ಯ ಇಹ ಯಸ್ಯ ಭವಾಪವರ್ಗಃ ॥ ೨೬

ಗೋಸ್ವಾಮಿಯು "ರಾಜ, ನೀನೇನು ಕೊಟ್ಟರೂ ನಾನು ಸ್ವೀಕರಿಸುವುದಿಲ್ಲ" ಎಂದು ಹೇಳಿ ಹೊರಟುಹೋದನು. ಇನ್ನೊಬ್ಬನು "ಈ ಗೋವನ್ನು ಬಿಟ್ಟು ಬೇರೆ ಹತ್ತು ಸಾವಿರ ಗೋವುಗಳನ್ನಿತ್ತರೂ ಒಲ್ಲೆನು" ಎನ್ನುತ್ತ ತೆರಳಿದನು (೨೧). ಈ ರೀತಿ ನಡೆದಮೇಲೆ ಯಮದೂತರು ನನ್ನನ್ನು ಯಮನ ಬಳಿಗೆ ಒಯ್ದರು. ಹೇ ದೇವದೇವ, ಜಗತ್ಪತೇ, ಅಲ್ಲಿ ಯಮನು ನನ್ನನ್ನು ಕುರಿತು "ರಾಜ, ಮೊದಲು ಪಾಪದ ಫಲವನ್ನು ಅನುಭವಿಸುವೆಯೊ, ಪುಣ್ಯದ ಫಲವನ್ನೊ? ನೀನು ಮಾಡಿದ ದಾನಧರ್ಮಗಳಿಗೆ ದೊರಕುವ ಶುಭಲೋಕದ ಫಲಕ್ಕೆ ಅಂತವನ್ನೇ ಕಾಣೆ" ಎಂದನು (೨೨-೨೩). ಆಗ ನಾನು "ಯಮದೇವ, ಮೊದಲು ಪಾಪದ ಫಲವನ್ನು ಉಣ್ಣುವೆನು" ಎಂದೆನು. "ಬೀಳು!" ಎಂದು ಅವನು ನುಡಿದನು. ಹೇ ಪ್ರಭು, ಒಡನೆಯೇ ಬೀಳುತ್ತ ನಾನು ಓತಿಕೇತವಾಗಿರುವುದನ್ನು ಕಂಡೆನು! (೨೪). ಹೇ ಕೇಶವ, ಬ್ರಾಹ್ಮಣಪ್ರಿಯನೂ ದಾನತತ್ಪರನೂ ನಿನ್ನ ದಾಸನೂ ನಿನ್ನ ದರ್ಶನಾಕಾಂಕ್ಷಿಯೂ ಆಗಿದ್ದ ನನಗೆ ಇದುವರೆಗೂ ನಿನ್ನ ನಾಮಸ್ಮರಣೆ ತಪ್ಪಲಿಲ್ಲ (೨೫). ಓ ಮಹಾತ್ಮ, ಪರಮಾತ್ಮನಾದ ನೀನು ನನ್ನ ಕಣ್ಣಿಗೆ ಗೋಚರಿಸಿಬಿಟ್ಟೆಯಲ್ಲ! ಯೋಗೇಶ್ವರರು ವೇದವೆಂಬ ಕಣ್ಣಿಂದ ತಮ್ಮ ನಿರ್ಮಲ ಹೃದಯದಲ್ಲಿ ಯಾರನ್ನೊ ಭಾವಿಸಿ ನೋಡಬಲ್ಲರೋ, ಸಂಸಾರ ಬಂಧನದಿಂದ ಬಿಡುಗಡೆಯಾದವರಿಗೆ

ದೇವದೇವ ಜಗನ್ನಾಥ ಗೋವಿಂದ ಪುರುಷೋತ್ತಮ ।
ನಾರಾಯಣ ಹೃಷೀಕೇಶ ಪುಣ್ಯಶ್ಲೋಕಾಚ್ಯುತಾವ್ಯಯ ॥ ೨೭

ಅನುಜಾನೀಹಿ ಮಾಂ ಕೃಷ್ಣ ಯಾಂತಂ ದೇವಗತಿಂ ಪ್ರಭೋ ।
ಯತ್ರ ಕ್ವಾಪಿ ಸತಶ್ಚೇತೋ ಭೂಯಾನ್ಮೇ ತ್ವತ್ಪದಾಸ್ಪದಮ್ ॥ ೨೮

ನಮಸ್ತೇ ಸರ್ವಭಾವಾಯ ಬ್ರಹ್ಮಣೇಽನಂತಶಕ್ತಯೇ ।
ಕೃಷ್ಣಾಯ ವಾಸುದೇವಾಯ ಯೋಗಾನಾಂ ಪತಯೇ ನಮಃ ॥ ೨೯

ಇತ್ಯುಕ್ತ್ವಾ ತಂ ಪರಿಕ್ರಮ್ಯ ಪಾದೌ ಸ್ಪೃಷ್ಟ್ವಾ ಸ್ವಮೌಲಿನಾ ।
ಅನುಜ್ಞಾತೋ ವಿಮಾನಾಗ್ರ್ಯ ಮಾರುಹತ್ ಪಶ್ಯತಾಂ ನೃಣಾಮ್ ॥ ೩೦

ಕೃಷ್ಣಃ ಪರಿಜನಂ ಪ್ರಾಹ ಭಗವಾನ್ ದೇವಕೀಸುತಃ ।
ಬ್ರಹ್ಮಣ್ಯದೇವೋ ಧರ್ಮಾತ್ಮಾ ರಾಜನ್ಯಾನನುಶಿಕ್ಷಯನ್ ॥ ೩೧

ದುರ್ಜರಂ ಬತ ಬ್ರಹ್ಮಸ್ವಂ ಭುಕ್ತಮಗ್ನೇರ್ಮನಾಗಪಿ ।
ತೇಜೀಯಸೋಽಪಿ ಕಿಮುತ ರಾಜ್ಞಾಮೀಶ್ವರಮಾನಿನಾಮ್ ॥ ೩೨

ಮಾತ್ರ ಯಾರ ದರ್ಶನವಾದೀತೋ ಅಂತಹ ನೀನು, ಅಧೋಕ್ಷಜ, ಓತಿಕೇತ ಜನ್ಮದ ಮಹಾದುಃಖದಿಂದ ಕುರುಡನಾದ ನನಗೆ ದರ್ಶನವನ್ನಿತ್ತೆಯಲ್ಲ! (೨೬).

ಹೇ ದೇವದೇವ, ಜಗದೊಡೆಯ, ಗೋವಿಂದ, ಪುರುಷೋತ್ತಮ, ನಾರಾಯಣ, ಹೃಷೀಕೇಶ, ಪುಣ್ಯಕೀರ್ತಿ, ಅಚ್ಯುತ, ಅವ್ಯಯ, ಶ್ರೀಕೃಷ್ಣ ಸ್ವಾಮಿ, ದೇವ ಲೋಕವನ್ನೈದಲು ನನಗೆ ಅನುಮತಿಯನ್ನು ಕೊಡು. ನಾನು ಎಲ್ಲಿದ್ದರೂ ನನ್ನ ಮನಸ್ಸು ನಿನ್ನ ಪಾದವನ್ನೇ ಸ್ಮರಿಸುತ್ತಿರಲಿ (೨೭-೨೮). ಅನಂತ ಶಕ್ತಿಯುಳ್ಳದ್ದೂ ವಿಶ್ವೋತ್ಪತ್ತಿಕಾರಣವೂ ಆದ ಬ್ರಹ್ಮವಸ್ತುವಾಗಿರುವ ನಿನಗೆ ನಮಸ್ಕಾರ. ಶ್ರೀಕೃಷ್ಣನಿಗೆ, ವಾಸುದೇವನಿಗೆ, ಯೋಗೇಶ್ವರನಿಗೆ ನಮಸ್ಕಾರ'' ಎಂದು ಹೇಳಿ ನೃಗರಾಜನು ಅಚ್ಯುತನಿಗೆ ಪ್ರದಕ್ಷಿಣೆ ಮಾಡಿ ಆತನ ಪಾದಗಳನ್ನು ತನ್ನ ಶಿರಸ್ಸಿನಿಂದ ಸ್ಪರ್ಶಿಸಿ ಅನುಮತಿಯನ್ನು ಪಡೆದು, ಜನರೆಲ್ಲರೂ ನೋಡುತ್ತಿರುವಾಗಲೇ ಉಪಸ್ಥಿತವಾದ ದಿವ್ಯವಿಮಾನವನ್ನು ಏರಿದನು (೨೯-೩೦). ಅನಂತರ ಬ್ರಾಹ್ಮಣಪ್ರಿಯನೂ ಧರ್ಮಾತ್ಮನೂ ಆದ ಭಗವಾನ್ ದೇವಕೀಸುತನು ರಾಜರಿಗೆ ಬುದ್ಧಿಕಲಿಸುವುದಕ್ಕಾಗಿ ಸುತ್ತಲೂ ಇದ್ದ ಪರಿಜನರನ್ನು ಉದ್ದೇಶಿಸಿ ಹೀಗೆಂದನು :

ನಾಹಂ ಹಾಲಾಹಲಂ ಮನ್ಯೇ ವಿಷಂ ಯಸ್ಯ ಪ್ರತಿಕ್ರಿಯಾ ।
ಬ್ರಹ್ಮಸ್ವಂ ಹಿ ವಿಷಂ ಪ್ರೋಕ್ತಂ ನಾಸ್ಯ ಪ್ರತಿವಿಧಿರ್ಭುವಿ ॥ ೩೩

ಹಿನಸ್ತಿ ವಿಷಮತ್ತಾರಂ ವಹ್ನಿರದ್ಭಿಃ ಪ್ರಶಾಮ್ಯತಿ ।
ಕುಲಂ ಸಮೂಲಂ ದಹತಿ ಬ್ರಹ್ಮಸ್ವಾರಣಿಪಾವಕಃ ॥ ೩೪

ಬ್ರಹ್ಮಸ್ವಂ ದುರನುಜ್ಞಾತಂ ಭುಕ್ತಂ ಹಂತಿ ತ್ರಿಪೂರುಷಮ್ ।
ಪ್ರಸಹ್ಯ ತು ಬಲಾದ್ ಭುಕ್ತಂ ದಶ ಪೂರ್ವಾನ್ ದಶಾಪರಾನ್ ॥ ೩೫

ರಾಜಾನೋ ರಾಜಲಕ್ಷ್ಮ್ಯಾಂಧಾ ನಾತ್ಮ ಪಾತಂ ವಿಚಕ್ಷತೇ ।
ನಿರಯಂ ಯೇಽಭಿಮನ್ಯಂತೇ ಬ್ರಹ್ಮಸ್ವಂ ಸಾಧು ಬಾಲಿಶಾಃ ॥ ೩೬

ಗೃಹ್ಣಂತಿ ಯಾವತಃ ಪಾಂಸೂನ್ ಕ್ರಂದತಾಮಶ್ರುಬಿಂದವಃ ।
ವಿಪ್ರಾಣಾಂ ಹೃತವೃತ್ತೀನಾಂ ವಾದಾನ್ಯಾನಾಂ ಕುಟುಂಬಿನಾಮ್ ॥ ೩೭

''ಬ್ರಹ್ಮಸ್ವವು (ಬ್ರಾಹ್ಮಣಧನ) ಜೀರ್ಣವಾಗತಕ್ಕದ್ದಲ್ಲ. ಅದನ್ನು ಸ್ವಲ್ಪ ತಿಂದರೂ ಅಗ್ನಿಯಾಗಲಿ, ಇನ್ನೊಬ್ಬ ತೇಜಸ್ವಿಯಾಗಲಿ ಅರಗಿಸಿಕೊಳ್ಳಲಾರ. ಹೀಗಿರಲು, 'ನಾವು ಲೋಕೇಶ್ವರ'ರೆಂದು ವೃಥಾ ಬೀಗುವ ರಾಜರು ಜೀರ್ಣಿಸಿಕೊಂಡಾರೆ? (೩೧-೩೨). ಹಾಲಾಹಲವನ್ನೂ ನಾನು ಅಂತಹ ವಿಷವೆನ್ನಲಾರೆ. ಏಕೆಂದರೆ, ಅದಕ್ಕೂ ಚಿಕಿತ್ಸೆಯುಂಟು. ಬ್ರಹ್ಮಸ್ವವೇ ನಿಜವಾದ ವಿಷ. ಅದಕ್ಕೆ ಈ ಜಗತ್ತಿನಲ್ಲಿ ಚಿಕಿತ್ಸೆ ಇಲ್ಲ. ವಿಷವು ತಿಂದವನನ್ನು ಕೊಲ್ಲುತ್ತದೆ. ಬೆಂಕಿ ನೀರಿನಿಂದ ಉಪಶಮನಗೊಳ್ಳುತ್ತದೆ. ಬ್ರಹ್ಮಸ್ವವೆಂಬ ಅರಣಿಯಲ್ಲಿ ಹುಟ್ಟಿದ ಬೆಂಕಿಯಾದರೋ ಅಪಹರಿಸಿದವನ ಕುಲವನ್ನೇ ನಿರ್ಮೂಲವಾಗಿ ಸುಡುವುದು (೩೩-೩೪). ಕ್ರಮವಾಗಿ ಅನುಜ್ಞೆಯನ್ನು ಪಡೆಯದೆ ಅನುಭವಿಸಿದ ಬ್ರಹ್ಮಸ್ವವು ಮೂರು ತಲೆಮಾರಿನವರೆಗೆ ಹಿಂಸೆಯನ್ನು ಕೊಡುವುದು. ಬಲಾತ್ಕಾರದಿಂದ ಕಿತ್ತುಕೊಂಡ ಬ್ರಹ್ಮಸ್ವವಾದರೋ ಅಪಹರಿಸಿದವನ ಹಿಂದಿನ ಹತ್ತು ತಲೆಗಳನ್ನೂ ಮುಂದಿನ ಹತ್ತು ತಲೆಗಳನ್ನೂ ದಹಿಸುವುದು! (೩೫). ರಾಜಲಕ್ಷ್ಮಿಯಿಂದ ಕುರುಡಾದ ರಾಜರಿಗೆ ತಮಗಾಗುವ ಕೇಡು ಕಾಣಿಸುವುದಿಲ್ಲ. ಬ್ರಹ್ಮಸ್ವಕ್ಕೆ ಆಸೆಪಡುವ ಮೂಢರು ನರಕವನ್ನೇ ಬಯಸುತ್ತಿದ್ದಾರೆಂದು ತಿಳಿಯಬೇಕು (೩೬). ಉದಾರಿಗಳೂ ಕುಟುಂಬಿಗಳೂ ಆದ ವಿಪ್ರರು ತಮ್ಮ ಆಸ್ತಿಯನ್ನು ಕಳೆದುಕೊಂಡು ಕಣ್ಣೀರಿಡುವಾಗ ಅವರ ಕಂಬನಿಗಳು ಎಷ್ಟು ಧೂಳಿನ ಕಣಗಳನ್ನು

ರಾಜಾನೋ ರಾಜಕುಲ್ಯಾಶ್ಚ ತಾವತೋಽಬ್ದಾನ್ನಿರಂಕುಶಾಃ।
ಕುಂಭೀಪಾಕೇಷು ಪಚ್ಯಂತೇ ಬ್ರಹ್ಮದಾಯಾಪಹಾರಿಣಃ॥ ೩೮

ಸ್ವದತ್ತಾಂ ಪರದತ್ತಾಂ ವಾ ಬ್ರಹ್ಮವೃತ್ತಿಂ ಹರೇಚ್ಚ ಯಃ।
ಷಷ್ಟಿವರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ ಕೃಮಿಃ॥ ೩೯

ನ ಮೇ ಬ್ರಹ್ಮಧನಂ ಭೂಯಾದ್
ಯದ್‌ಗೃದ್ಧ್ವಾಲ್ಪಾಯುಷೋ ನೃಪಾಃ।
ಪರಾಜಿತಾಶ್ಚ್ಯುತಾ ರಾಜ್ಯಾದ್
ಭವಂತ್ಯುದ್ವೇಜಿನೋಽಹಯಃ॥ ೪೦

ವಿಪ್ರಂ ಕೃತಾಗಸಮಪಿ ನೈವ ದ್ರುಹ್ಯತ ಮಾಮಕಾಃ।
ಘ್ನಂತಂ ಬಹು ಶಪಂತಂ ವಾ ನಮಸ್ಕುರುತ ನಿತ್ಯಶಃ॥ ೪೧

ಯಥಾಹಂ ಪ್ರಣಮೇ ವಿಪ್ರಾನನುಕಾಲಂ ಸಮಾಹಿತಃ।
ತಥಾ ನಮತ ಯೂಯಂ ಚ ಯೋಽನ್ಯಥಾ ಮೇ ಸ ದಂಡಭಾಕ್॥ ೪೨

ಬ್ರಾಹ್ಮಣಾರ್ಥೋ ಹ್ಯಪಹೃತೋ ಹರ್ತಾರಂ ಪಾತಯತ್ಯಧಃ।
ಅಜಾನಂತಮಪಿ ಹ್ಯೇನಂ ನೃಗಂ ಬ್ರಾಹ್ಮಣಗೌರಿವ॥ ೪೩

ಒದ್ದೆಮಾಡುತ್ತವೆಯೋ ಅಷ್ಟು ವರ್ಷಗಳವರೆಗೆ ಬ್ರಹ್ಮಸ್ವವನ್ನಪಹರಿಸಿದ ರಾಜರೂ ಅವರ ವಂಶದವರೂ ಕುಂಭೀಪಾಕ ನರಕಗಳಲ್ಲಿ ಅಡೆತಡೆಯಿಲ್ಲದೆ ಬೆಂದು ಹೋಗುತ್ತಾರೆ (೩೭-೩೮). ತಾನು ಕೊಟ್ಟಿದ್ದನ್ನಾಗಲಿ ಪರರು ಕೊಟ್ಟಿದ್ದನ್ನಾಗಲಿ ಬ್ರಹ್ಮಸ್ವವನ್ನು ಯಾವನು ಅಪಹರಿಸುವನೋ ಅವನು ಅರುವತ್ತು ಸಾವಿರ ವರ್ಷಗಳವರೆಗೆ ಅಮೇಧ್ಯದಲ್ಲಿ ಹುಳುವಾಗಿ ಹುಟ್ಟುವನು. ಯಾವುದನ್ನು ಆಶಿಸಿದರೆ ರಾಜರು ಅಲ್ಪಾಯುಷ್ಕರಾಗುವರೋ, ಸೋಲನ್ನನುಭವಿಸಿ ರಾಜ್ಯ ಭ್ರಷ್ಟರಾಗುವರೋ, ಉದ್ವೇಗವನ್ನುಂಟುಮಾಡುವ ಹಾವುಗಳಾಗಿ ಹುಟ್ಟುವರೋ, ಅಂತಹ ಬ್ರಹ್ಮಸ್ವವು ನನಗೆ ಎಂದಿಗೂ ಬೇಡ! (೩೯-೪೦). ಎಲೈ ನನ್ನ ಪರಿಜನರೆ, ವಿಪ್ರನು ಒಂದು ವೇಳೆ ತಪ್ಪು ಮಾಡಿದರೂ ಹೊಡೆದರೂ ಬೈದರೂ ಅವನಿಗೆ ದ್ರೋಹವನ್ನು ಮಾಡಬೇಡಿರಿ. ಅವನನ್ನು ಗೌರವದಿಂದ ಕಾಣಿರಿ. ನಾನು ಹೇಗೆ ಶಾಂತಚಿತ್ತನಾಗಿ ಕಾಲಕಾಲಕ್ಕೆ ಬ್ರಾಹ್ಮಣರನ್ನು ನಮಸ್ಕರಿಸುವೆನೋ ಹಾಗೆ ನೀವು ಸಹ

ಏವಂ ವಿಶ್ರಾವ್ಯ ಭಗವಾನ್ ಮುಕುಂದೋ ದ್ವಾರಕೌಕಸಃ।
ಪಾವನಃ ಸರ್ವಲೋಕಾನಾಂ ವಿವೇಶ ನಿಜಮಂದಿರಮ್ ॥ ೪೪

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ಚತುಃಷಷ್ಟಿತಮಾಧ್ಯಾಯಃ

ಪಂಚಷಷ್ಟಿತಮಾಧ್ಯಾಯಃ

ಶ್ರೀ ಶುಕ ಉವಾಚ-
ಬಲಭದ್ರಃ ಕುರುಶ್ರೇಷ್ಠ ಭಗವಾನ್ ರಥಮಾಸ್ಥಿತಃ।
ಸುಹೃದ್ದಿ ದೃಕ್ಷುರುತ್ಕಂಠಃ ಪ್ರಯಯೌ ನಂದಗೋಕುಲಮ್ ॥ ೧

ನಮಸ್ಕರಿಸುತ್ತಿರಿ. ಹಾಗೆ ಮಾಡದವನನ್ನು ನಾನು ದಂಡಿಸುವೆನು (೪೧-೪೨). ಬ್ರಹ್ಮಸ್ವವು ಅಪಹರಿಸಿದವನನ್ನು ದುರ್ಗತಿಗೆ ತಳ್ಳುವುದು. ಏನೂ ಅರಿಯದ ನೃಗರಾಜನನ್ನು ಸಹ ಬ್ರಾಹ್ಮಣನ ಗೋವು ಈ ದುರ್ಗತಿಗೆ ತಂದಿತಲ್ಲವೆ ?'' ಈ ರೀತಿಯಾಗಿ ಲೋಕಪಾವನನಾದ ಮುಕುಂದನು ದ್ವಾರಕಾವಾಸಿಗಳಿಗೆ ಬುದ್ಧಿ ಹೇಳಿ ತನ್ನ ಗೃಹಕ್ಕೆ ತೆರಳಿದನು[1] (೪೩-೪೪).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಅರುವತ್ತುನಾಲ್ಕನೆಯ ಅಧ್ಯಾಯ

ಅಧ್ಯಾಯ ೬೫

ಬಲರಾಮನು ನಂದಗೋಕುಲಕ್ಕೆ ಹೋಗುವುದು. ಗೋಪಿಯರೊಡನೆ ವಿಹಾರ. ಯಮುನಾಕರ್ಷಣೆ.

ಪರೀಕ್ಷಿತರಾಜ, ಒಮ್ಮೆ ಬಲಭದ್ರನಿಗೆ ವ್ರಜವಾಸಿಗಳಾದ ತನ್ನ ಮಿತ್ರರನ್ನು ನೋಡಬೇಕೆಂಬ ಬಯಕೆ ತೀವ್ರವಾಯಿತು. ಅವನು ರಥವನ್ನೇರಿ ನಂದ ಗೋಕುಲಕ್ಕೆ ಹೋದನು. ಅಲ್ಲಿ ಬಹುಕಾಲದಿಂದ ನೋಡಬೇಕೆಂದು

---

೧ ಈ ನೃಗೋಪಾಖ್ಯಾನವು ವಾಲ್ಮೀಕಿರಾಮಾಯಣದ ಉತ್ತರಕಾಂಡದ ೫೩ನೆಯ ಸರ್ಗದಲ್ಲಿ ಬಂದಿದೆ. ವಾದಮಾಡುತ್ತ ಅರಮನೆಗೆ ಬಂದ ಆ ವಿಪ್ರರಿಗೆ ನೃಗರಾಜನ ಭೇಟಿಯಾಗಲಿಲ್ಲ ವೆಂದೂ ಆದ್ದರಿಂದ ಅವರು ಕೋಪಗೊಂಡು ಓತಿಕೇತವಾಗುವಂತೆ ನೃಗನನ್ನು ಶಪಿಸಿದರೆಂದೂ ಇದೆ.

ಪರಿಷ್ವಕ್ತಶ್ಚಿರೋತ್ಕಂಠೈರ್ಗೋಪೈರ್ಗೋಪೀಭಿರೇವ ಚ ।
ರಾಮೋಽಭಿವಾದ್ಯ ಪಿತರಾವಾಶೀರ್ಭಿರಭಿನಂದಿತಃ ॥ ೨

ಚಿರಂ ನಃ ಪಾಹಿ ದಾಶಾರ್ಹ ಸಾನುಜೋ ಜಗದೀಶ್ವರಃ ।
ಇತ್ಯಾರೋಪ್ಯಾಂಕಮಾಲಿಂಗ್ಯ ನೇತ್ರೈಃ ಸಿಷಿಚತುರ್ಜಲೈಃ ॥ ೩

ಗೋಪವೃದ್ಧಾಂಶ್ಚ ವಿಧಿವದ್ ಯವಿಷ್ಠೈರಭಿವಂದಿತಃ ।
ಯಥಾವಯೋ ಯಥಾಸಖ್ಯಂ ಯಥಾಸಂಬಂಧಮಾತ್ಮನಃ ॥ ೪

ಸಮುಪೇತ್ಯಾಥ ಗೋಪಾಲಾನ್ ಹಾಸ್ಯ ಹಸ್ತಗ್ರಹಾದಿಭಿಃ ।
ವಿಶ್ರಾಂತಂ ಸುಖಮಾಸೀನಂ ಪಪ್ರಚ್ಛುಃ ಪರ್ಯುಪಾಗತಾಃ ॥ ೫

ಪೃಷ್ಟಾಶ್ಚಾನಾಮಯಂ ಸ್ವೇಷು ಪ್ರೇಮಗದ್ಗದಯಾ ಗಿರಾ ।
ಕೃಷ್ಣೇ ಕಮಲಪತ್ರಾಕ್ಷೇ ಸಂನ್ಯಸ್ತಾಖಿಲರಾಧಸಃ ॥ ೬

ಕಚ್ಚಿನ್ನೋ ಬಾಂಧವಾ ರಾಮ ಸರ್ವೇ ಕುಶಲಮಾಸತೇ ।
ಕಚ್ಚಿತ್ ಸ್ಮರಥ ನೋ ರಾಮ ಯೂಯಂ ದಾರಸುತಾನ್ವಿತಾಃ ॥ ೭

ತವಕಗೊಂಡಿದ್ದ ಗೋಪಗೋಪಿಯರಿಂದ ಆಲಿಂಗಿತನಾಗಿ, ತಾಯಿತಂದೆಗಳಾದ ಯಶೋದಾನಂದರನ್ನು ವಂದಿಸಿ, ಅವರ ಆಶೀರ್ವಾದಗಳನ್ನು ಪಡೆದು ಆನಂದಗೊಂಡನು (೧-೨). ಯಶೋದಾನಂದರು ಬಲರಾಮನನ್ನು ತಮ್ಮ ತೊಡೆಯ ಮೇಲೆ ಕುಳ್ಳಿರಿಸಿ ಅಪ್ಪಿಕೊಂಡು ''ಜಗದೀಶ್ವರ, ದಾಶಾರ್ಹಕುಲದಲ್ಲಿ ಜನಿಸಿದ ರಾಮ, ನಿನ್ನ ತಮ್ಮನಿಂದ ಸಹಿತನಾಗಿ ನಮ್ಮನ್ನು ಚಿರಕಾಲ ಪಾಲಿಸುತ್ತಿರು'' ಎನ್ನುತ್ತ ಆನಂದಬಾಷ್ಪಗಳಿಂದ ಅವನನ್ನು ತೋಯಿಸಿದರು (೩). ಬಲರಾಮನು ವ್ರಜದಲ್ಲಿದ್ದ ಹಿರಿಯ ಗೋಪರಿಗೆ ನಮಸ್ಕರಿಸಿದನು. ಕಿರಿಯರು ಅವನಿಗೆ ನಮಸ್ಕರಿಸಿದರು. ಅನಂತರ ವಯಸ್ಸು, ಸ್ನೇಹ, ಸಂಬಂಧಗಳಿಗೆ ಅನುಗುಣವಾಗಿ ಗೋಪಾಲರೊಡನೆ ಹಾಸ್ಯಮಾಡುತ್ತ ಕೈಹಿಡಿಯುತ್ತ ವಿನೋದದಿಂದ ಸುಖವಾಗಿ ಕುಳಿತಿದ್ದ ಬಲರಾಮನ ಸುತ್ತಲೂ ಗೋಪಾಲರು ಬಂದು ಸೇರಿದರು (೪-೫). ಅವರೆಲ್ಲರೂ ಬಲರಾಮನ ಕ್ಷೇಮವನ್ನು ವಿಚಾರಿಸಿದರು. ಅಂತೆಯೇ ಗೋಪಾಲರ ಆರೋಗ್ಯವನ್ನು ಆತನು ಕೇಳಿದನು. ಕಮಲನೇತ್ರನಾದ ಕೃಷ್ಣನಿಗೆ ಸರ್ವಸ್ವವನ್ನೂ ಅರ್ಪಿಸಿಕೊಂಡಿದ್ದ ಗೊಲ್ಲರು ಪ್ರೇಮದಿಂದ ಗದ್ಗದಿಸುತ್ತ ಆತನ ಕುಶಲವನ್ನು ವಿಚಾರಿಸಿ ''ರಾಮ, ನಮ್ಮ ಬಂಧುಗಳೆಲ್ಲರೂ ಕುಶವಾಗಿದ್ದಾರೆಯೇ? ನಿಮಗೀಗ

ದಿಷ್ಟ್ಯಾ ಕಂಸೋ ಹತಃ ಪಾಪೋದಿಷ್ಟ್ಯಾ ಮುಕ್ತಾಃ ಸುಹೃಜ್ಜನಾಃ ।
ನಿಹತ್ಯ ನಿರ್ಜಿತ್ಯ ರಿಪೂನ್ ದಿಷ್ಟ್ಯಾ ದುರ್ಗಂ ಸಮಾಶ್ರಿತಾಃ ॥ ೮

ಗೋಪ್ಯೋ ಹಸಂತ್ಯಃ ಪಪ್ರಚ್ಛೂ ರಾಮಸಂದರ್ಶನಾದೃತಾಃ ।
ಕಚ್ಚಿದಾಸ್ತೇ ಸುಖಂ ಕೃಷ್ಣಃ ಪುರಸ್ತ್ರೀಜನವಲ್ಲಭಃ ॥ ೯

ಕಚ್ಚಿತ್ ಸ್ಮರತಿ ವಾ ಬಂಧೂನ್ ಪಿತರಂ ಮಾತರಂ ಚ ಸಃ ।
ಅಪ್ಯಸೌ ಮಾತರಂ ದ್ರಷ್ಟುಂ ಸಕೃದಪ್ಯಾಗಮಿಷ್ಯತಿ ।
ಅಪಿ ವಾ ಸ್ಮರತೇಽಸ್ಮಾಕಮನುಸೇವಾಂ ಮಹಾಭುಜಃ ॥ ೧೦

ಮಾತರಂ ಪಿತರಂ ಭ್ರಾತೄನ್ ಪತೀನ್ ಪುತ್ರಾನ್ ಸ್ವಸೄರಪಿ ।
ಯದರ್ಥೇ ಜಹಿಮ ದಾಶಾರ್ಹ ದುಸ್ತ್ಯಜಾನ್ ಸ್ವಜನಾನ್ ಪ್ರಭೋ ॥

ತಾ ನಃ ಸದ್ಯಃ ಪರಿತ್ಯಜ್ಯ ಗತಃ ಸಂಛಿನ್ನಸೌಹೃದಃ ।
ಕಥಂ ನು ತಾದೃಶಂ ಸ್ತ್ರೀಭಿರ್ನ ಶ್ರದ್ಧೀಯೇತ ಭಾಷಿತಮ್ ॥ ೧೨

ಮಡದಿ ಮಕ್ಕಳಿದ್ದಾರೆ. ನಮ್ಮ ನೆನಪಾಗುವುದೋ ಹೇಗೆ? (೬-೭). ಪಾಪಿಯಾದ ಕಂಸನನ್ನು ಕೊಂದದ್ದು ಒಳ್ಳೆಯದಾಯಿತು. ಆಪ್ತಜನರ ಸೆರೆಯನ್ನು ಬಿಡಿಸಿದ್ದು ಉತ್ತಮವಾಯಿತು. ವೈರಿಗಳನ್ನು ಗೆದ್ದು ಮರ್ದಿಸಿ ದುರ್ಗಮವಾದ ದ್ವಾರಕೆಯನ್ನು ಸೇರಿಕೊಂಡದ್ದು ಭಾಗ್ಯವೇ ಸರಿ" ಎಂದರು (೮). ಬಲರಾಮನ ದರ್ಶನದಲ್ಲಿ ಆಸಕ್ತರಾದ ಗೋಪಿಯರು ನಗುತ್ತ "ರಾಮ, ಕೃಷ್ಣನು ಸುಖವಾಗಿರುವನೆ? ನಗರ ಸ್ತ್ರೀಯರಿಗೆ ತುಂಬ ಪ್ರಿಯನಾಗಿರಬಹುದು! ಅವನಿಗೆ ಬಂಧುಗಳ ನೆನಪಿದೆಯೆ? ತಾಯಿತಂದೆಗಳನ್ನಾದರೂ ಸ್ಮರಿಸಿಕೊಳ್ಳುವನೊ? ತಾಯಿ ಯಶೋದೆಯನ್ನು ನೋಡಲು ಒಮ್ಮೆ ಬರಬಹುದೆ? ಆ ದೀರ್ಘಬಾಹುವು ನಾವು ಮಾಡಿದ ಶುಶ್ರೂಷೆಯನ್ನೇನಾದರೂ ನೆನೆಸಿಕೊಳ್ಳುವನೊ? (೯-೧೦). ಹೇ ದಾಶಾರ್ಹ, ಯಾರಿಗಾಗಿ ನಾವು ತಾಯಿತಂದೆಗಳನ್ನೂ ಸೋದರರನ್ನೂ ಗಂಡಂದಿರನ್ನೂ ಮಕ್ಕಳನ್ನೂ ಅಕ್ಕತಂಗಿಯರನ್ನೂ-ತ್ಯಜಿಸಲು ಶಕ್ಯರಲ್ಲದ ಆತ್ಮೀಯರನ್ನೂ ಸಹ ತ್ಯಜಿಸಿದ್ದೆವೋ, ಅಂತಹ ನಮ್ಮನ್ನು ತೊರೆದು ಸ್ನೇಹವನ್ನು ಕಡೆಗಣಿಸಿ ಆತನು

ಕಥಂ ನು ಗೃಹ್ಣಂತ್ಯನವಸ್ಥಿತಾತ್ಮನೋ
ವಚಃ ಕೃತಘ್ನಸ್ಯ ಬುಧಾಃ ಪುರಸ್ತ್ರಿಯಃ ।
ಗೃಹ್ಣಂತಿ ವೈ ಚಿತ್ರಕಥಸ್ಯ ಸುಂದರ-
ಸ್ಮಿತಾವಲೋಕೋಚ್ಛ್ವಸಿತಸ್ಮರಾತುರಾಃ ॥ ೧೩

ಕಿಂ ನಸ್ತತ್ಕಥಯಾ ಗೋಪ್ಯಃ ಕಥಾಃ ಕಥಯತಾಪರಾಃ ।
ಯಾತ್ಯಸ್ಮಾಭಿರ್ವಿನಾ ಕಾಲೋ ಯದಿ ತಸ್ಯ ತಥೈವ ನಃ ॥ ೧೪

ಇತಿ ಪ್ರಹಸಿತಂ ಶೌರೇರ್ಜಲ್ಪಿತಂ ಚಾರುವೀಕ್ಷಿತಮ್ ।
ಗತಿಂ ಪ್ರೇಮಪರಿಷ್ವಂಗಂ ಸ್ಮರಂತ್ಯೋ ರುರುದುಃ ಸ್ತ್ರಿಯಃ ॥ ೧೫

ಸಂಕರ್ಷಣಸ್ತಾಃ ಕೃಷ್ಣಸ್ಯ ಸಂದೇಶೈರ್ಹೃದಯಂಗಮೈಃ ।
ಸಾಂತ್ವಯಾಮಾಸ ಭಗವಾನ್ ನಾನಾನುನಯಕೋವಿದಃ ॥ ೧೬

ಹೇಗೆ ನಂಬದೆ ಇರಲಾದೀತು ? ನಂಬಿಕೊಂಡೆವು'' ಎಂದರು (೧೧-೧೨). ಕೆಲವು ಗೋಪಿಯರು ''ಚಂಚಲಹೃದಯನಾದ ಆ ಕೃತಘ್ನನ ಮಾತನ್ನು ಚತುರೆಯರಾದ ನಗರಯುವತಿಯರು ಹೇಗೆ ನಂಬುತ್ತಾರೆ ? '' ಎಂದರು. ಕೆಲವರು ''ಮೋಹಕವಾದ ಮುಗುಳ್ನಗೆಯ ನೋಟವನ್ನು ಬೀರಿದಾಗ ಕಾಮಾತುರರಾದ ನಗರಯುವತಿಯರೂ ಸಹ ರಂಗು ರಂಗಿನ ಕೃಷ್ಣನ ಮಾತಿಗೆ ಮರುಳಾಗಿ ನಂಬಿಬಿಡುತ್ತಾರೆ !'' ಎಂದು ಹೇಳಿದರು (೧೩). ಮತ್ತೆ ಕೆಲವು ಗೋಪಾಂಗನೆಯರು ''ಎಲೌ ಗೋಪಿಯರೆ, ಕೃಷ್ಣನ ವಿಷಯವೇಕೆ ? ಬೇರೆ ಏನಾದರೂ ಮಾತಾಡಿರಿ. ಅವನಿಗೊಂದು ರೀತಿ ಕಾಲ ಕಳೆಯುತ್ತದೆ, ನಮಗೆ ಇನ್ನೊಂದು ರೀತಿ (ಅವನಿಗೆ ಸುಖದಿಂದ, ನಮಗೆ ದುಃಖದಿಂದ) '' ಎಂದು ನುಡಿದರು (೧೪). ಹೀಗೆ ನುಡಿದ ಆ ಗೋಪಾಂಗನೆಯರು ಶ್ರೀಕೃಷ್ಣನ ಆ ನಗು, ಸವಿನುಡಿ, ಬೆಡಗಿನ ನೋಟ, ನಡಿಗೆ, ಪ್ರೇಮಾಲಿಂಗನಗಳನ್ನು ಸ್ಮರಿಸಿಕೊಂಡು ಅತ್ತರು. ಆಗ ಸಂತೈಸುವುದರಲ್ಲಿ ನಿಪುಣನಾದ ಬಲಭದ್ರನು ಕೃಷ್ಣನ ಹೃದಯಂಗಮಗಳಾದ ಸಂದೇಶಗಳನ್ನು ಹೇಳುತ್ತ ಅವರನ್ನು ಸಂತೈಸಿದನು (೧೫-೧೬). ಭಗವಾನ್ ಬಲಭದ್ರನು ಆ ವಸಂತರಾತ್ರಿಗಳಲ್ಲಿ

ದ್ವೌ ಮಾಸೌ ತತ್ರ ಚಾವಾತ್ಸೀನ್ಮಧುಂ ಮಾಧವಮೇವ ಚ ।
ರಾಮಃ ಕ್ಷಪಾಸು ಭಗವಾನ್ ಗೋಪೀನಾಂ ರತಿಮಾವಹನ್ ॥ ೧೭

ಪೂರ್ಣಚಂದ್ರಕಲಾಮೃಷ್ಟೇ ಕೌಮುದೀಗಂಧವಾಯುನಾ ।
ಯಮುನೋಪವನೇ ರೇಮೇ ಸೇವಿತೇ ಸ್ತ್ರೀಗಣೈರ್ವೃತಃ ॥ ೧೮

ವರುಣಪ್ರೇಷಿತಾ ದೇವೀ ವಾರುಣೀ ವೃಕ್ಷಕೋಟರಾತ್ ।
ಪತಂತೀ ತದ್ ವನಂ ಸರ್ವಂ ಸ್ವಗಂಧೇನಾಧ್ಯವಾಸಯತ್ ॥ ೧೯

ತಂ ಗಂಧಂ ಮಧುಧಾರಾಯಾ ವಾಯುನೋಪಹೃತಂ ಬಲಃ ।
ಆಘ್ರಾಯೋಪಗತಸ್ತತ್ರ ಲಲನಾಭಿಃ ಸಮಂ ಪಪೌ ॥ ೨೦

ಉಪಗೀಯಮಾನಚರಿತೋ ವನಿತಾಭಿರ್ಹಲಾಯುಧಃ ।
ವನೇಷು ವ್ಯಚರತ್ ಕ್ಷೀಬೋ ಮದವಿಹ್ವಲಲೋಚನಃ ॥ ೨೧

ಸ್ರಗ್ವ್ಯೇಕಕುಂಡಲೋ ಮತ್ತೋ ವೈಜಯಂತ್ಯಾ ಚ ಮಾಲಯಾ ।
ಬಿಭ್ರತ್ ಸ್ಮಿತಮುಖಾಂಭೋಜಂ ಸ್ವೇದಪ್ರಾಲೇಯಭೂಷಿತಮ್ ॥ ೨೨

ಗೋಪಿಯರನ್ನು[೧] ಸಂತೋಷಪಡಿಸುತ್ತ ಚೈತ್ರ, ವೈಶಾಖ ಈ ಎರಡು ತಿಂಗಳು ಗೋಕುಲದಲ್ಲಿದ್ದನು. ಪೂರ್ಣಚಂದ್ರನ ಬೆಳದಿಂಗಳಲ್ಲಿ ನೈದಿಲೆಗಳ ಸುವಾಸನೆಯನ್ನು ಹೊತ್ತುತಂಗಾಳಿ ಬೀಸುವ ಯಮುನೋಪವನದಲ್ಲಿ ಸ್ತ್ರೀಯರ ಗುಂಪಿನೊಡನೆ ವಿಹರಿಸಿದನು (೧೭-೧೮). ವರುಣಪ್ರೇಷಿತವಾದ ವಾರುಣೀಮದ್ಯವು ಮರದ ಪೊಟರೆಗಳಿಂದ ಸುರಿಯತ್ತ ಉಪವನವೆಲ್ಲವನ್ನೂ ತನ್ನ ಗಂಧದಿಂದ ತುಂಬಿತು. ಗಾಳಿಯು ಬೀಸುತ್ತ ತಂದ ಮದ್ಯಧಾರೆಯ ಗಂಧವನ್ನಾಘ್ರಾಣಿಸಿದ ಬಲರಾಮನು ಲಲನೆಯರೊಡನೆ ಹೋಗಿ ಆ ಮದ್ಯವನ್ನು ಕುಡಿದನು (೧೯-೨೦). ಆ ವನಿತೆಯರು ಹಾಡುಕಟ್ಟಿ ಬಲರಾಮನ ಚರಿತ್ರೆಯನ್ನು ಹಾಡುತ್ತಿದ್ದರು. ಹಲಾಯುಧನು ಮದ್ಯಪಾನದಿಂದ ಮದಿಸಿ ಮದಘೂರ್ಣಿತ ನೇತ್ರನಾಗಿ ಸ್ತ್ರೀಯರೊಡನೆ ಉಪವನಗಳಲ್ಲಿ ತಿರುಗಾಡುತ್ತಿದ್ದನು (೨೧). ಆತನು

---

೧ ಶ್ರೀಕೃಷ್ಣನಿಂದ ಸಮಯದಲ್ಲಿ ಇನ್ನೂ ಬಾಲಿಕೆಯರಾಗಿದ್ದು ಅವನೊಡನೆ ವಿಹರಿಸದೆ ಇದ್ದ ಗೋಪಿಯರನ್ನು- ಎಂದು ತಿಳಿಯಬೇಕು.

ಸ ಆಜುಹಾವ ಯಮುನಾಂ ಜಲಕ್ರೀಡಾರ್ಥಮೀಶ್ವರಃ ।
ನಿಜಂ ವಾಕ್ಯಮನಾದೃತ್ಯ ಮತ್ತ ಇತ್ಯಾಪಗಾಂ ಬಲಃ ।
ಅನಾಗತಾಂ ಹಲಾಗ್ರೇಣ ಕುಪಿತೋ ವಿಚಕರ್ಷ ಹ ॥ ೨೩

ಪಾಪೇ ತ್ವಂ ಮಾಮವಜ್ಞಾಯ ಯನ್ನಾಯಾಸಿ ಮಯಾಽಽಹುತಾ ।
ನೇಷ್ಯೇ ತ್ವಾಲಾಂಗಲಾಗ್ರೇಣ ಶತಧಾ ಕಾಮಚಾರಿಣೀಮ್ ॥ ೨೪

ಏವಂ ನಿರ್ಭರ್ತ್ಸಿತಾ ಭೀತಾ ಯಮುನಾ ಯದುನಂದನಮ್ ।
ಉವಾಚ ಚಕಿತಾ ವಾಚಂ ಪತಿತಾ ಪಾದಯೋರ್ನೃಪ ॥ ೨೫

ರಾಮ ರಾಮ ಮಹಾಬಾಹೋ ನ ಜಾನೇ ತವ ವಿಕ್ರಮಮ್ ।
ಯಸ್ಯೈಕಾಂಶೇನ ವಿಧೃತಾ ಜಗತೀ ಜಗತಃ ಪತೇ ॥ ೨೬

ಹಾರವನ್ನು ಹಾಕಿಕೊಂಡು ಉತ್ತಮವಾದ ಕುಂಡಲಗಳನ್ನು[೧] ಧರಿಸಿ ವೈಜಯಂತಿಮಾಲೆಯಿಂದ ಭೂಷಿತನಾಗಿ ಸುರಾಪಾನದಿಂದ ಮತ್ತನಾಗಿದ್ದನು. ಬೆವರುಹನಿಗಳೆಂಬ ಹಿಮಬಿಂದುಗಳಿಂದ ಅಲಂಕೃತವಾಗಿ ಮುಗುಳ್ನಗೆಯನ್ನು ಬೀರುವ ಮುಖಕಮಲದಿಂದ ಶೋಭಿಸುತ್ತಿದ್ದ ಸರ್ವ ಶಕ್ತನಾದ ಬಲಭದ್ರನು ಜಲಕ್ರೀಡೆಗಾಗಿ ಯಮುನೆಯನ್ನು ತನ್ನ ಬಳಿಗೆ ಕರೆದನು! ಆತನು ಮದ್ಯಪಾನದಿಂದ ಮತ್ತನಾಗಿದ್ದಾನೆಂದು ತಿಳಿದು ಅವನ ಮಾತನ್ನು ಅನಾದರಿಸಿ ಯಮುನಾನದಿಯು ಬಳಿಗೆ ಬರಲಿಲ್ಲ! ಕುಪಿತನಾದ ಬಲರಾಮನು ತನ್ನ ಹಲಾಯುಧದ ತುದಿಯಿಂದ ಆ ನದಿಯನ್ನು ಸೆಳೆದನು! (೨೨-೨೩). ''ಪಾಪಿಷ್ಠೆ! ನನ್ನನ್ನು ಅಲಕ್ಷಿಸುತ್ತೀಯಾ? ನಾನು ಕರೆದರೂ ಬರುವುದಿಲ್ಲವೆ ? ಮನಬಂದಂತೆ ನಡೆಯುವ ನಿನ್ನನ್ನು ಹಲಾಯುಧದಿಂದ ನೂರು ಚೂರಾಗಿ ಸೀಳಿಬಿಡುತ್ತೇನೆ'' ಎಂದು ಅಬ್ಬರಿಸಿದನು (೨೪). ಪರೀಕ್ಷಿತರಾಜ, ಯದುನಂದನನು ಹೀಗೆ ಗದರಿಸಲಾಗಿ ಯಮುನೆಯು ಹೆದರಿ ನಡುಗುತ್ತ ಬಂದು ಅವನ ಪಾದಗಳಿಗೆ ವಂದಿಸಿ ''ರಾಮ, ರಾಮ, ಮಹಾಬಾಹು, ಜಗದೀಶ್ವರ, ನಿನ್ನ ಒಂದಂಶವಾದ ಆದಿಶೇಷನು

೧ಮೂಲದಲ್ಲಿ 'ಏಕಕುಂಡಲ' ಎಂದಿದೆ. ಏಕ = ಮುಖ್ಯವಾದ ಎಂದು ವ್ಯಾಖ್ಯಾನಕಾರರು ಹೇಳುತ್ತಾರೆ. ಶ್ರೀಧರೀಯಲ್ಲಿ ಅರ್ಥ ಹೇಳಿಲ್ಲ. ಮದ್ಯಮತ್ತನಾದ ಬಲರಾಮನಿಗೆ ಆಗ ಒಂದೇ ಕುಂಡಲವಿತ್ತು. ಇನ್ನೊಂದು ಬಿದ್ದುಹೋಗಿತ್ತು-ಎಂದು ಅರ್ಥಮಾಡುವುದು ಸೂಕ್ತವೆನಿಸುತ್ತದೆ.

ಪರಂ ಭಾವಂ ಭಗವತೋ ಭಗವನ್ ಮಾಮಜಾನತೀಮ್ ।
ಮೋಕ್ತುಮರ್ಹಸಿ ವಿಶ್ವಾತ್ಮನ್ ಪ್ರಪನ್ನಾಂ ಭಕ್ತವತ್ಸಲ ॥ ೨೭

ತತೋ ವ್ಯಮುಂಚದ್ ಯಮುನಾಂ ಯಾಚಿತೋ ಭಗವಾನ್ ಬಲಃ ।
ವಿಜಗಾಹ ಜಲಂ ಸ್ತ್ರೀಭಿಃ ಕರೇಣುಭಿರಿವೇಭರಾಟ್ ॥ ೨೮

ಕಾಮಂ ವಿಹೃತ್ಯ ಸಲಿಲಾದುತ್ತೀರ್ಣಾಯಾಸಿತಾಂಬರೇ ।
ಭೂಷಣಾನಿ ಮಹಾರ್ಹಾಣಿ ದದೌ ಕಾಂತಿಃ ಶುಭಾಂ ಸ್ರಜಮ್ ॥ ೨೯

ವಸಿತ್ವಾ ವಾಸಸೀ ನೀಲೇ ಮಾಲಾಮಾಮುಚ್ಯ ಕಾಂಚನೀಮ್ ।
ರೇಜೇ ಸ್ವಲಂಕೃತೋ ಲಿಪ್ತೋ ಮಾಹೇಂದ್ರ ಇವ ವಾರಣಃ ॥ ೩೦

ಅದ್ಯಾಪಿ ದೃಶ್ಯತೇ ರಾಜನ್ ಯಮುನಾಽಽಕೃಷ್ಟವರ್ತ್ಮನಾ ।
ಬಲಸ್ಯಾನಂತವೀರ್ಯಸ್ಯ ವೀರ್ಯಂ ಸೂಚಯತೀವ ಹಿ ॥ ೩೧

ಭೂಮಂಡಲವನ್ನು ಹೊತ್ತಿದ್ದಾನೆ. ನಿನ್ನ ಸಾಮರ್ಥ್ಯವನ್ನು ನಾನರಿಯೆ (೨೫-೨೬). ಹೇ ಭಗವನ್, ವಿಶ್ವಾತ್ಮ, ನಿನ್ನ ಪರಮೋತ್ಕರ್ಷವನ್ನು ತಿಳಿಯದವಳೂ ನಿನಗೆ ಶರಣಾಗತಳೂ ಆದ ನನ್ನನ್ನು ಭಕ್ತವತ್ಸಲ, ಬಿಟ್ಟುಬಿಡು'' ಎಂದು ಬೇಡಿಕೊಂಡಳು. ಹೀಗೆ ಯಮುನೆಯಿಂದ ಪ್ರಾರ್ಥಿತನಾದ ಭಗವಾನ್ ಬಲಭದ್ರನು ಅವಳನ್ನು ಬಿಟ್ಟು ಕಳಿಸಿ, ಆ ಗೋಪಿಕಾಸ್ತ್ರೀಯರೊಡನೆ, ಹೆಣ್ಣಾನೆಗಳೊಡನೆ ಸಲಗವು ಹೇಗೋ ಹಾಗೆ ನದೀಜಲದಲ್ಲಿ ಹೊಕ್ಕನು (೨೭-೨೮). ಬಳಿಕ ಯತೇಚ್ಛವಾಗಿ ಜಲಕ್ರೀಡೆಯನ್ನಾಡಿ ಮೇಲಕ್ಕೆ ಬರಲು, (ವರುಣ ಪ್ರೇಷಿತಳಾದ) ಲಕ್ಷ್ಮಿಯು [1] ಎರಡು ನೀಲಾಂಬರಗಳನ್ನೂ ಬೆಲೆಬಾಳುವ ಭೂಷಣಗಳನ್ನೂ ಉತ್ತಮವಾದ ಹಾರವನ್ನೂ ಬಲರಾಮನಿಗೆ ತಂದು ಒಪ್ಪಿಸಿದಳು (೨೯). ಬಲರಾಮನು ಆ ನೀಲವಸ್ತ್ರಗಳನ್ನು ಧರಿಸಿ, ಚಿನ್ನದ ಹಾರವನ್ನು ಕೊರಳಿಗೆ ಹಾಕಿಕೊಂಡು, ಭೂಷಣಗಳಿಂದ ಅಲಂಕೃತನಾಗಿ, ಚಂದನವನ್ನು ಬಳಿದುಕೊಂಡು ಮಹೇಂದ್ರನ ಐರಾವತಗಜದಂತೆ ಶೋಭಿಸಿದನು. ಪರೀಕ್ಷಿತರಾಜ, ಬಲರಾಮನು (ಹಲಾಯುಧದಿಂದ) ಸೆಳೆದು ಗುರುತಾದ ದಾರಿಯ ಮೂಲಕ ಯಮುನೆಯು

---

೧ ವಿಷ್ಣುಪುರಾಣ, ಹರಿವಂಶಗಳ ಆಧಾರದಿಂದ ಕಾಂತಿಯೆಂದರೆ ವರುಣಪ್ರೇಷಿತಳಾದ ಲಕ್ಷ್ಮಿ ಎಂದು ಅರ್ಥಮಾಡಿದೆ.

ಏವಂ ಸರ್ವಾ ನಿಶಾ ಯಾತಾ ಏಕೇವ ರಮತೋ ವ್ರಜೇ ।
ರಾಮಸ್ಯಾಕ್ಷಿಪ್ತಚಿತ್ತಸ್ಯ ಮಾಧುರ್ಯೈರ್ವ್ರಜಯೋಷಿತಾಮ್ ॥ ೩೨

ಇತಿ ಶ್ರೀ ಮದ್ಭಾಗವತೇ ದಶಮಸ್ಕಂಧೇ
ಪಂಚಷಷ್ಟಿತಮಾಧ್ಯಾಯಃ

ಷಟ್‌ಷಷ್ಟಿತಮಾಧ್ಯಾಯಃ

ಶ್ರೀಶುಕ ಉವಾಚ-
ನಂದವ್ರಜಂ ಗತೇ ರಾಮೇ ಕರೂಷಾಧಿಪತಿರ್ನೃಪ ।
ವಾಸುದೇವೋಽಹಮಿತ್ಯಜ್ಞೋ ದೂತಂ ಕೃಷ್ಣಾಯ ಪ್ರಾಹಿಣೋತ್ ॥೧

ತ್ವಂ ವಾಸುದೇವೋ ಭಗವಾನವತೀರ್ಣೋ ಜಗತ್ಪತಿಃ ।
ಇತಿ ಪ್ರಸ್ತೋಭಿತೋ ಬಾಲೈರ್ಮೇನ ಆತ್ಮಾನಮಚ್ಯುತಮ್ ॥ ೨

ಅನಂತವೀರ್ಯನಾದ ಬಲಭದ್ರನ ಪರಾಕ್ರಮವನ್ನು ಸೂಚಿಸುತ್ತಿರುವಂತೆ ಇಂದಿಗೂ ಕಂಡುಬರುತ್ತಿದೆ (೩೦-೩೧). ಹೀಗೆ ವ್ರಜಸ್ತ್ರೀಯರ ವಿಲಾಸಗಳಿಂದ ಅಪಹೃತಚಿತ್ತನಾಗಿ ಗೋಕುಲದಲ್ಲಿ ವಿಹರಿಸುತ್ತಿರುವಾಗ, ಬಲರಾಮನಿಗೆ ಎಲ್ಲರಾತ್ರಿಗಳೂ ಒಂದೇ ರಾತ್ರಿಯಂತೆ ಕಳೆದು ಹೋದವು (೩೨).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಅರುವತ್ತೈದನೆಯ ಅಧ್ಯಾಯ

ಅಧ್ಯಾಯ ೬೬

ಶ್ರೀಕೃಷ್ಣನಿಂದ ಪೌಂಡ್ರಕ, ಕಾಶೀರಾಜರ ವಧೆ. ಅಭಿಚಾರಾಗ್ನಿಯಿಂದ ಸುದರ್ಶನನ ವಿನಾಶ.

ಪರೀಕ್ಷಿತರಾಜ, ಬಲರಾಮನು ನಂದಗೋಕುಲಕ್ಕೆ ಹೋಗಿದ್ದಾಗ, ಇತ್ತ ಒಂದು ಪ್ರಸಂಗ ನಡೆಯಿತು. ಕರೂಷಪ್ರದೇಶದಲ್ಲಿ ಪೌಂಡ್ರಕನೆಂಬ ಒಬ್ಬ ರಾಜನಿದ್ದನು. ಆ ಮೂಢನು ತಾನೇ ವಾಸುದೇವನೆಂದು ತಿಳಿದುಕೊಂಡು ಶ್ರೀಕೃಷ್ಣನ ಬಳಿಗೆ ಒಬ್ಬ ದೂತನನ್ನು ಕಳಿಸಿದನು (೧). ಏಕೆಂದರೆ, ಕೆಲವು ಮೂರ್ಖರು ಪೌಂಡ್ರಕನಿಗೆ ''ನೀನೇ ಭಗವಾನ್ ವಾಸುದೇವ, ಜಗದೀಶ್ವರ, ಭೂಮಿಯಲ್ಲಿ (ಮನುಷ್ಯರೂಪದಿಂದ) ಅವತರಿಸಿದ್ದೀಯೆ'' ಎಂದು ಹೊಗಳಿ ಅವನ ತಲೆ

ದೂತಂ ಚ ಪ್ರಾಹಿಣೋನ್ಮಂದಃ ಕೃಷ್ಣಾಯಾವ್ಯಕ್ತವರ್ತ್ಮನೇ ।
ದ್ವಾರಕಾಯಾಂ ಯಥಾ ಬಾಲೋ ನೃಪೋ ಬಾಲಕೃತೋಽಬುಧಃ ॥ ೩

ದೂತಸ್ತು ದ್ವಾರಕಾಮೇತ್ಯ ಸಭಾಯಾಮಾಸ್ಥಿತಂ ಪ್ರಭುಮ್ ।
ಕೃಷ್ಣಂ ಕಮಲಪತ್ರಾಕ್ಷಂ ರಾಜಸಂದೇಶಮಬ್ರವೀತ್ ॥ ೪

ವಾಸುದೇವೋಽವತೀರ್ಣೋಽಹಮೇಕ ಏವ ನ ಚಾಪರಃ ।
ಭೂತಾನಾಮನುಕಂಪಾರ್ಥಂ ತ್ವಂ ತು ಮಿಥ್ಯಾಭಿಧಾಂ ತ್ಯಜ ॥ ೫

ಯಾನಿ ತ್ವಮಸ್ಮಚ್ಚಿಹ್ನಾನಿ ಮೌಢ್ಯಾದ್ ಬಿಭರ್ಷಿ ಸಾತ್ವತ ।
ತ್ಯಕ್ತ್ವೈಹಿಮಾಂ ತ್ವಂ ಶರಣಂ ನೋ ಚೇದ್ ದೇಹಿ ಮಮಾಹವಮ್ ॥

ತಿರುಗಿಸಿದ್ದರು. ಆತನು ಅದನ್ನು ನಂಬಿ ತಾನೇ ಅಚ್ಯುತನೆಂದು ಭಾವಿಸಿದನು ![1] (೨). ಆಟವಾಡುವಾಗ ಹುಡುಗರು ಒಬ್ಬನನ್ನು ರಾಜನನ್ನಾಗಿ ಮಾಡಿಕೊಳ್ಳುವಂತೆ, ಮೂರ್ಖಜನರು ಪೌಂಡ್ರಕನನ್ನು ಭಗವಾನ್ ವಾಸುದೇವನನ್ನಾಗಿ ಮಾಡಿಬಿಟ್ಟಿದ್ದರು ! ಅಂತೆಯೇ ಅವಿವೇಕಿಯಾದ ಆ ರಾಜನು ದ್ವಾರಕೆಯಲ್ಲಿದ್ದ ಅವ್ಯಕ್ತಮಹಿಮನಾದ ಶ್ರೀಕೃಷ್ಣನ ಬಳಿಗೆ ದೂತನನ್ನು ಕಳಿಸಿದನು (೩). ಆ ದೂತನು ದ್ವಾರಕೆಗೆ ಬಂದು ಸಭೆಯಲ್ಲಿ ಕುಳಿತ್ತಿದ್ದ ಕಮಲಪತ್ರಾಕ್ಷನಾದ ಶ್ರೀ ಕೃಷ್ಣನಿಗೆ ತನ್ನ ದೊರೆಯ ಸಂದೇಶವನ್ನು ಈ ಪ್ರಕಾರ ತಿಳಿಸಿದನು: ''ಎಲೈ ಶ್ರೀಕೃಷ್ಣ ಜೀವಿಗಳ ಮೇಲಿನ ಅನುಕಂಪೆಯಿಂದ ಅವರನ್ನು ಅನುಗ್ರಹಿಸುವುದಕ್ಕಾಗಿ ಅವತರಿಸಿದ ವಾಸುದೇವನೆಂದರೆ ನಾನೊಬ್ಬನೇ. ಇನ್ನೊಬ್ಬನಿಲ್ಲ. ವಾಸುದೇವನೆಂಬ ನಿನ್ನ ಸುಳ್ಳು ಹೆಸರನ್ನು ತ್ಯಜಿಸತಕ್ಕದ್ದು (೪-೫). ಎಲೈ ಯಾದವ, ನಮ್ಮ ಚಿಹ್ನೆಗಳಾದ ಶಂಖ, ಚಕ್ರಾದಿಗಳನ್ನು ಮೌಢ್ಯದಿಂದ ನೀನು ಧರಿಸಿದ್ದೀಯಲ್ಲವೆ ? ಅವುಗಳನ್ನು ತ್ಯಜಿಸಿ

---

[1] ಪೌಂಡ್ರಕ ಎಂಬುದು ಒಂದು ವಂಶ. ಈ ರಾಜನಿಗೆ ವಾಸುದೇವ ಎಂದು ಅಂಕಿತನಾಮವಿತ್ತು (ವಿಷ್ಣುಪುರಾಣ ೫-೩೪-೪). ಭಾಗವತದ ಒಂದು ಪ್ರಕ್ಷಿಪ್ತ ಪಾಠದಲ್ಲಿ ''ಕಾಶೀರಾಜನು ಸುತನು ಎಂಬ ತನ್ನ ಮಗಳನ್ನು ವಸುದೇವನಿಗೆ ಕೊಟ್ಟು ಮದುವೆಮಾಡಿದ್ದನೆಂದೂ ಪೌಂಡ್ರಕನು ವಸುದೇವನ ಮಗನೆಂದೂ, ಅವನಿಗೆ ರಾಜ್ಯವನ್ನೊಪ್ಪಿಸಿ ವಸುದೇವನು ಕಂಸನಗರಿಗೆ ಹೋಗಿ ದೇವಕಿಯನ್ನು ಮದುವೆಯಾದನೆಂದೂ '' ಹೇಳಿದೆ. ಅದರ ಪ್ರಕಾರ ಪೌಂಡ್ರಕನು ವಸುದೇವನ ಮಗನಾದ್ದರಿಂದ ವಾಸುದೇವ, ತಾಯಿಯ ಸವತಿಯ ಮಗನಾದ್ದರಿಂದ ಪೌಂಡ್ರಕನಿಗೆ ಶ್ರೀಕೃಷ್ಣನಲ್ಲಿ ದ್ವೇಷ.

ಶ್ರೀ ಶುಕ ಉವಾಚ-

ಕತ್ಥನಂ ತದುಪಾಕರ್ಣ್ಯ ಪೌಂಡ್ರಕಸ್ಯಾಲ್ಪಮೇಧಸಃ ।
ಉಗ್ರಸೇನಾದಯಃ ಸಭ್ಯಾ ಉಚ್ಚಕ್ಕೈರ್ಜಹಸುಸ್ತದಾ ॥ ೭

ಉವಾಚ ದೂತಂ ಭಗವಾನ್ ಪರಿಹಾಸಕಥಾಮನು ।
ಉತ್ಸ್ರಕ್ಷ್ಯೇ ಮೂಢ ಚಿಹ್ನಾನಿ ಯೈಸ್ತ್ವಮೇವಂ ವಿಕತ್ಥಸೇ ॥ ೮

ಮುಖಂ ತದಪಿಧಾಯಾಜ್ಞ ಕಂಕಗೃಧ್ರವಟೈರ್ವೃತಃ ।
ಶಯಿಷ್ಯಸೇ ಹತಸ್ತತ್ರ ಭವಿತಾ ಶರಣಂ ಶುನಾಮ್ ॥ ೯

ಇತಿ ದೂತಸ್ತದಾಕ್ಷೇಪಂ ಸ್ವಾಮಿನೇ ಸರ್ವಮಾಹರತ್ ।
ಕೃಷ್ಣೋಽಪಿ ರಥಮಾಸ್ಥಾಯ ಕಾಶೀಮುಪಜಗಾಮ ಹ ॥ ೧೦

ಕೂಡಲೇ ನನಗೆ ಶರಣಾಗು. ಇಲ್ಲವೆ, ನನಗೆ ಯುದ್ಧವನ್ನು ನೀಡು '' ಎಂಬ ಸಂದೇಶವನ್ನರುಹಿದನು (೬). ಬುದ್ಧಿಗೇಡಿಯಾದ ಪೌಂಡ್ರಕನ ಈ ಆತ್ಮ ಪ್ರಶಂಸೆಯನ್ನು ಕೇಳಿ ಸಭೆಯಲ್ಲಿದ್ದ ಉಗ್ರಸೇನಾದಿಗಳು ಗಟ್ಟಿಯಾಗಿ ನಕ್ಕರು. ಭಗವಾನ್ ಶ್ರೀಕೃಷ್ಣನು ಈ ಪರಿಹಾಸ ಕಥೆ ನಡೆದ ಮೇಲೆ ''ಎಲೈ ದೂತ, ನಿಮ್ಮ ದೊರೆಗೆ ತಿಳಿಸು- ಮೂಢ, ಕೃತ್ರಿಮವಾದ ಯಾವ ಶಂಖ ಚಕ್ರಾದಿಗಳನ್ನು ಹಿಡಿದು ನಿನ್ನನ್ನು ಹೊಗಳಿಕೊಳ್ಳುತ್ತಿದ್ದೀಯೋ ಆ ಚಿಹ್ನೆಗಳನ್ನು ನೀನೇ ತ್ಯಜಿಸುವಂತೆ ಮಾಡುವೆನು (೭-೮). ಯುದ್ಧದಲ್ಲಿ ನನ್ನಿಂದ ಹತನಾಗಿ, ಆತ್ಮಪ್ರಶಂಸೆ ಮಾಡಿಕೊಳ್ಳುವ ಆ ಬಾಯಿಯನ್ನು ಮುಚ್ಚಿಕೊಂಡು, ಕಂಕ- ಗೃಧ್ರ- [೨]ವಟಗಳಿಂದ ಪರಿವೃತನಾಗಿ ನಾಯಿಗಳಿಗೆ ಶರಣಾಗಿ ರಣರಂಗದಲ್ಲಿ ಮಲಗುವೆ- ಈ ಮಾತನ್ನು ಪೌಂಡ್ರಕನಿಗೆ ಹೇಳು'' ಎಂದನು (೯). ಬಳಿಕ ಆ ದೂತನು ಹಿಂದಿರುಗಿ ಎಲ್ಲವನ್ನೂ ತನ್ನ ಒಡೆಯನಿಗೆ ಅರಿಕೆ ಮಾಡಿದನು. ಶ್ರೀಕೃಷ್ಣನೂ ರಥವನ್ನೇರಿ ಕಾಶೀನಗರದ[೧] ಕಡೆಗೆ ತೆರಳಿದನು. ಶ್ರೀಕೃಷ್ಣನ ಸಮರೋದ್ಯೋಗವನ್ನರಿತು ಮಹಾರಥನಾದ ಪೌಂಡ್ರಕನು ಎರಡು ಅಕ್ಷೌಹಿಣೀಸೇನೆಗಳಿಂದ ಪರಿವೃತನಾಗಿ

---

೧ ಆ ಸಮಯದಲ್ಲಿ ಪೌಂಡ್ರಕನು ತನ್ನ ಮಿತ್ರನಾದ ಕಾಶೀರಾಜನ ಜೊತೆಯಲ್ಲಿದ್ದನು.

೨ ಕಂಕ=ಕೆಂಪು ಪುಚ್ಛವಿರುವ ಹದ್ದು, ಗೃಧ್ರ=ಹದ್ದು, ವಟ=ಮಾಂಸಾಹಾರಿಯಾದ ಒಂದು ಪಕ್ಷಿ.

ಪೌಂಡ್ರಕೋಽಪಿ ತದುದ್ಯೋಗಮುಪಲಭ್ಯ ಮಹಾರಥಃ ।
ಅಕ್ಷೌಹಿಣೀಭ್ಯಾಂ ಸಂಯುಕ್ತೋ ನಿಶ್ಚಕ್ರಾಮ ಪುರಾದ್ ದ್ರುತಮ್ ॥ ೧೧

ತಸ್ಯ ಕಾಶಿ ಪತಿರ್ಮಿತ್ರಂ ಪಾರ್ಷ್ಣಿಗ್ರಾಹೋಽನ್ವಯಾನ್ನೃಪ ।
ಅಕ್ಷೌಹಿಣೀಭಿಸ್ತಿಸೃಭಿರಪಶ್ಯತ್ ಪೌಂಡ್ರಕಂ ಹರಿಃ ॥ ೧೨

ಶಂಖಾರ್ಯಸಿಗದಾಶಾರ್ಙ್ಗ ಶ್ರೀವತ್ಸಾದ್ಯುಪಲಕ್ಷಿತಮ್ ।
ಬಿಭ್ರಾಣಂ ಕೌಸ್ತುಭಮಣಿಂ ವನಮಾಲಾವಿಭೂಷಿತಮ್ ॥ ೧೩

ಕೌಶೇಯವಾಸಸೀ ಪೀತೇ ವಸಾನಂ ಗರುಡಧ್ವಜಮ್ ।
ಅಮುಲ್ಯಮೌಲ್ಯಾಭರಣಂ ಸ್ಫುರನ್ಮಕರಕುಂಡಲಮ್ ॥ ೧೪
ದೃಷ್ಟ್ವಾತಮಾತ್ಮನಸ್ತುಲ್ಯವೇಷಂ ಕೃತ್ರಿಮಮಾಸ್ಥಿತಮ್ ।
ಯಥಾ ನಟಂ ರಂಗಗತಂ ವಿಜಹಾಸ ಭೃಶಂ ಹರಿಃ ॥ ೧೫

ಶೂಲೈರ್ಗದಾಭಿಃ ಪರಿಘೈಃ ಶಕ್ತ್ಯೃಷ್ಟಿಪ್ರಾಸತೋಮರೈಃ ।
ಅಸಿಭಿಃ ಪಟ್ಟಿಶೈರ್ಬಾಣೈಃ ಪ್ರಾಹರನ್ನರಯೋ ಹರಿಮ್ ॥ ೧೬

ಒಡನೆಯೇ ನಗರದಿಂದ ಹೊರಬಂದನು (೧೦-೧೧). ಅವನ ಮಿತ್ರನಾದ ಕಾಶೀರಾಜನು ಪೌಂಡ್ರಕನಿಗೆ ಹಿಂದುಗಡೆ ರಕ್ಷಕನಾಗಿ ಮೂರು ಅಕ್ಷೌಹಿಣೀ ಸೇನೆಗಳೊಡನೆ ಬಂದನು. ಶ್ರೀಕೃಷ್ಣನು ಪೌಂಡ್ರಕನನ್ನು ಕಂಡನು. ಪೌಂಡ್ರಕನಾದರೋ ಶಂಖ, ಚಕ್ರ, ಖಡ್ಗ, ಗದೆ, ಶಾರ್ಙ್ಗಧನುಸ್ಸು ಶ್ರೀವತ್ಸಾದಿಗಳಿಂದ ಸಹಿತನಾಗಿ (ವಕ್ಷಸ್ಥಳದಲ್ಲಿ) ಕೌಸ್ತುಭಮಣಿಯನ್ನು ಧರಿಸಿ, ವನಮಾಲಾ ವಿಭೂಷಿತನಾಗಿದ್ದನು! (೧೨-೧೩). ಪೀತಾಂಬರಗಳನ್ನು ಧರಿಸಿದ್ದನಲ್ಲದೆ ಅವನ ರಥದ ಮೇಲೆ ಗರುಡಧ್ವಜವಿತ್ತು. ಆತನು ಶಿರಸ್ಸಿನಲ್ಲಿ ಅಮೂಲ್ಯವಾದ ಕಿರೀಟವನ್ನಿಟ್ಟುಕೊಂಡಿದ್ದನು. ಕಿವಿಗಳಲ್ಲಿ ಮಕರಕುಂಡಲಗಳು ಬೆಳಗುತ್ತಿದ್ದವು. ತನ್ನಂತೆಯೇ ಕಾಣಬೇಕೆಂದು ಕೃತ್ರಿಮ ವೇಷವನ್ನು ಧರಿಸಿ, ರಂಗಸ್ಥಳಕ್ಕೆ ಬಂದ ನಟನಂತೆ ಕಾಣುತ್ತಿದ್ದ ಪೌಂಡ್ರಕನನ್ನು ನೋಡಿ ಶ್ರೀಕೃಷ್ಣನು ಗಹಗಹಿಸಿ ನಕ್ಕನು (೧೪-೧೫). ಆಗ ಶತ್ರುಗಳು ಶೂಲ, ಗದೆ, ಪರಿಘ, ಶಕ್ತಿ ಋಷ್ಟಿ, ಪ್ರಾಸ, ತೋಮರ, ಖಡ್ಗ, ಪಟ್ಟಿಶ, ಬಾಣಗಳಿಂದ ಶ್ರೀಹರಿಯನ್ನು ಪ್ರಹರಿಸತೊಡಗಿದರು. ಶ್ರೀಹರಿಯಾದರೋ, ಆನೆ, ತೇರು, ಕುದುರೆ, ಕಾಲಾಳುಗಳೆಂಬ ಚತುರಂಗಬಲದಿಂದ ಕೂಡಿದ ಪೌಂಡ್ರಕ-ಕಾಶಿರಾಜರ

ಕೃಷ್ಣಸ್ತು ತತ್ಪೌಂಡ್ರಕಕಾಶಿರಾಜಯೋ-
ರ್ಬಲಂ ಗಜಸ್ಯಂದನವಾಜಿಪತ್ತಿಮತ್ ।
ಗದಾಸಿಚಕ್ರೇಷುಭಿರಾರ್ದಯದ್ ಭೃಶಂ
ಯಥಾ ಯುಗಾಂತೇ ಹುತಭುಕ್ ಪೃಥಕ್ ಪ್ರಜಾಃ ॥ ೧೭

ಆಯೋಧನಂ ತದ್ರಥವಾಜಿಕುಂಜರ-
ದ್ವಿಪತ್ಖರೋಷ್ಟ್ರೈರರಿಣಾವಖಂಡಿತೈಃ ।
ಬಭೌ ಚಿತಂ ಮೋದವಹಂ ಮನಸ್ವಿನಾ-
ಮಾಕ್ರೀಡನಂ ಭೂತಪತೇರಿವೋಲ್ಬಣಮ್ ॥ ೧೮

ಅಥಾಹ ಪೌಂಡ್ರಕಂ ಶೌರಿರ್ಭೋ ಭೋಃ ಪೌಂಡ್ರಕ ಯದ್ ಭವಾನ್ ।
ದೂತವಾಕ್ಯೇನ ಮಾಮಾಹ ತಾನ್ಯಸ್ತ್ರಾಣ್ಯುತ್ಸೃಜಾಮಿ ತೇ ॥ ೧೯

ತ್ಯಾಜಯಿಷ್ಯೇಽಭಿಧಾನಂ ಮೇ ಯತ್ತ್ವಯಾಜ್ಞ ಮೃಷಾ ಧೃತಮ್ ।
ವ್ರಜಾಮಿ ಶರಣಂ ತೇಽದ್ಯ ಯದಿ ನೇಚ್ಛಾಮಿ ಸಂಯುಗಮ್ ॥ ೨೦

ಇತಿ ಕ್ಷಿಪ್ತ್ವಾ ಶಿತೈರ್ಬಾಣೈರ್ವಿರಥೀಕೃತ್ಯ ಪೌಂಡ್ರಕಮ್ ।
ಶಿರೋಽವೃಶ್ಚದ್ ರಥಾಂಗೇನ ವಜ್ರೇಣೇಂದ್ರೋ ಯಥಾ ಗಿರೇಃ ॥ ೨೧

ಸೇನೆಯನ್ನು ಗದೆ, ಖಡ್ಗ, ಚಕ್ರ, ಬಾಣಗಳಿಂದ, ಪ್ರಳಯಕಾಲದ ಕಾಲಾಗ್ನಿಯು ಜನಸ್ತೋಮವನ್ನು ದಹಿಸುವಂತೆ, ಧ್ವಂಸಮಾಡಿದನು. ಶ್ರೀಕೃಷ್ಣನ ಚಕ್ರಾಯುಧದಿಂದ ತುಂಡರಿಸಲ್ಪಟ್ಟ ರಥಾಶ್ವಗಜಪದಾತಿಗಳಿಂದಲೂ ಹೇಸರಗತ್ತೆ ಒಂಟೆಗಳಿಂದಲೂ ನಿಬಿಡವಾದ ರಣಾಂಗಣವು ಕಲ್ಪಾಂತರುದ್ರನ ಭೀಕರವಾದ ಕ್ರೀಡಾಸ್ಥಾನದಂತೆ ಶೂರರಿಗೆ ತೋರಿತು (೧೬-೧೮). ಬಳಿಕ ಶ್ರೀಕೃಷ್ಣನು ಪೌಂಡ್ರಕನನ್ನು ಕುರಿತು "ಎಲೈ ಪೌಂಡ್ರಕ, ನೀನು ದೂತನ ಮೂಲಕ ಹೇಳಿಕಳಿಸಿದಂತೆ ನನ್ನ ಚಕ್ರಾದ್ಯಾಯುಧಗಳನ್ನು ತ್ಯಜಿಸುತ್ತೇನೆ-ನಿನ್ನ ಮೇಲೆ ಬಿಡುತ್ತೇನೆ ! ವಾಸುದೇವನೆಂಬ ನನ್ನ ಹೆಸರನ್ನು ಸುಳ್ಳುಸುಳ್ಳಾಗಿ ನೀನು ತೊಟ್ಟಿರುವೆಯಲ್ಲ ಅದನ್ನು ರೇಮೂಢ, ತ್ಯಜಿಸುವಂತೆ ಮಾಡುತ್ತೇನೆ. ಯುದ್ಧಮಾಡಲು ಕೈಲಾಗದಿದ್ದರೆ ನಿನಗೆ ಶರಣು ಹೋಗುವೆನು" ಎಂದು ಹಂಗಿಸಿದನು (೧೯-೨೦). ಹೀಗೆ ನುಡಿಯುತ್ತಲೇ ನಿಶಿತ ಶರಗಳಿಂದ ಪೌಂಡ್ರಕನ ರಥವನ್ನು ಸೀಳಿ ಅವನನ್ನು ಕೆಳಗೆ ತಳ್ಳಿ, ದೇವೇಂದ್ರನು ವಜ್ರಾಯುಧದಿಂದ

ತಥಾ ಕಾಶಿಪತೇಃ ಕಾಯಾಚ್ಛಿರ ಉತ್ಕೃತ್ಯ ಪತ್ರಿಭಿಃ ।
ನ್ಯಪಾತಯತ್ ಕಾಶಿಪುರ್ಯಾಂ ಪದ್ಮಕೋಶಮಿವಾನಿಲಃ ॥ ೨೨

ಏವಂ ಮತ್ಸರಿಣಂ ಹತ್ವಾ ಪೌಂಡ್ರಕಂ ಸಸಖಂ ಹರಿಃ ।
ದ್ವಾರಕಾಮಾವಿಶತ್ ಸಿದ್ಧೈರ್ಗೀಯಮಾನಕಥಾಮೃತಃ ॥ ೨೩

ಸ ನಿತ್ಯಂ ಭಗವದ್ಧ್ಯಾನಪ್ರಧ್ವಸ್ತಾಖಿಲಬಂಧನಃ ।
ಬಿಭ್ರಾಣಶ್ಚ ಹರೇ ರಾಜನ್ ಸ್ವರೂಪಂ ತನ್ಮಯೋಽಭವತ್ ॥ ೨೪

ಶಿರಃ ಪತಿತಮಾಲೋಕ್ಯ ರಾಜದ್ವಾರೇ ಸಕುಂಡಲಮ್ ।
ಕಿಮಿದಂ ಕಸ್ಯ ವಾ ವಕ್ತ್ರಮಿತಿ ಸಂಶಿಶ್ಯಿರೇ ಜನಾಃ॥ ೨೫

ರಾಜ್ಞಃ ಕಾಶಿಪತೇರ್ಜ್ಞಾತ್ವಾ ಮಹಿಷ್ಯಃ ಪುತ್ರಬಾಂಧವಾಃ ।
ಪೌರಾಶ್ಚ ಹಾ ಹತಾ ರಾಜನ್ ನಾಥ ನಾಥೇತಿ ಪ್ರಾರುದನ್ ॥ ೨೬

ಪರ್ವತದ ಶಿಖರವನ್ನು ಕತ್ತರಿಸುವಂತೆ, ಸುದರ್ಶನಚಕ್ರದಿಂದ ಪೌಂಡ್ರಕನ ಶಿರಸ್ಸನ್ನು ತರಿದುರುಳಿಸಿದನು. ಹಾಗೆಯೇ ಶರಗಳಿಂದ ಕಾಶೀರಾಜನ ತಲೆಯನ್ನು ದೇಹದಿಂದ ತರಿದು, ಬಿರುಗಾಳಿಯು ತಾವರೆಯ ಮೊಗ್ಗನ್ನು ಹಾರಿಸುವಂತೆ ಹಾರಿಸಿ ಕಾಶೀನಗರದ ನಡುವೆ ಬೀಳಿಸಿದನು (೨೧-೨೨). ಅಸೂಯೆ ಪಡುತ್ತಿದ್ದ ಪೌಂಡ್ರಕನನ್ನೂ ಅವನ ಮಿತ್ರನಾದ ಕಾಶೀರಾಜನನ್ನೂ ಈ ಪ್ರಕಾರವಾಗಿ ಸಂಹರಿಸಿ, ಶ್ರೀಕೃಷ್ಣನು ದ್ವಾರಕೆಗೆ ಬಂದು ಸೇರಿದನು. ಸಿದ್ಧರು ಆತನ ಕಥಾಮೃತವನ್ನು ಹಾಡಿ ಹೊಗಳಿದರು (೨೩). ಪರೀಕ್ಷಿತರಾಜ, ಆ ಪೌಂಡ್ರಕನು (ಶ್ರೀಕೃಷ್ಣದ್ವೇಷಿಯಾಗಿದ್ದರೂ) ಭಗವಂತನ ವೇಷವನ್ನು ಧರಿಸಿ ನಿರಂತರವಾಗಿ ಆತನ ಸ್ಮರಣೆಯಲ್ಲಿಯೇ ಇದ್ದುದರಿಂದ ನಿಖಿಲಕರ್ಮಬಂಧನಗಳನ್ನೂ ಕಡಿದು ಕೊಂಡವನಾಗಿ ಭಗವಂತನಲ್ಲಿ ಲೀನನಾದನು (೨೪). ಇತ್ತಲಾಗಿ ಕುಂಡಲ ಸಹಿತವಾದ ಕಾಶೀರಾಜನ ಶಿರಸ್ಸು ಅರಮನೆಯ ಬಾಗಿಲಲ್ಲಿ ಬಿದ್ದಿತು. ಅದನ್ನು ನೋಡಿದ ಜನರು 'ಇದೇನು ? ಓಹೋ ಶಿರಸ್ಸು ! ಇದು ಯಾರದಿರ ಬಹುದು ?' ಎಂದು ಸಂಶಯಗ್ರಸ್ತರಾದರು. ಅದು ಕಾಶೀರಾಜನ ಶಿರಸ್ಸೆಂಬುದು ನಿಶ್ಚಯವಾಗಲು, ಆತನ ರಾಣಿಯರೂ ಪುತ್ರರೂ ಬಂಧವರೂ ಪೌರರೂ ನೆರೆದು "ಅಯ್ಯೋ ಕೆಟ್ಟೆವು! ಹಾ ನಾಥ, ಒಡೆಯ!" ಎಂದು ರೋದಿಸಿದರು (೨೫-೨೬).

ಸುದಕ್ಷಿಣಸ್ತಸ್ಯ ಸುತಃ ಕೃತ್ವಾ ಸಂಸ್ಥಾವಿಧಿಂ ಪಿತುಃ ।
ನಿಹತ್ಯ ಪಿತೃಹಂತಾರಂ ಯಾಸ್ಯಾಮ್ಯಪಚಿತಿಂ ಪಿತುಃ ॥ ೨೭

ಇತ್ಯಾತ್ಮನಾಭಿಸಂಧಾಯ ಸೋಪಾಧ್ಯಾಯೋ ಮಹೇಶ್ವರಮ್ ।
ಸುದಕ್ಷಿಣೋಽರ್ಚಯಾಮಾಸ ಪರಮೇಣ ಸಮಾಧಿನಾ ॥ ೨೮

ಪ್ರೀತೋಽವಿಮುಕ್ತೇ ಭಗವಾಂಸ್ತಸ್ಮೈ ವರಮದಾದ್ ಭವಃ ।
ಪಿತೃಹಂತೃವಧೋಪಾಯಂ ಸ ವವ್ರೇ ವರಮೀಪ್ಸಿತಮ್ ॥ ೨೯

ದಕ್ಷಿಣಾಗ್ನಿಂ ಪರಿಚರ ಬ್ರಾಹ್ಮಣೈಃ ಸಮಮೃತ್ವಿಜಮ್ ।
ಅಭಿಚಾರವಿಧಾನೇನ ಸ ಚಾಗ್ನಿಃ ಪ್ರಮಥೈರ್ವೃತಃ ॥ ೩೦

ಸಾಧಯಿಷ್ಯತಿ ಸಂಕಲ್ಪಮಬ್ರಹ್ಮಣ್ಯೇ ಪ್ರಯೋಜಿತಃ ।
ಇತ್ಯಾದಿಷ್ಟಸ್ತಥಾ ಚಕ್ರೇ ಕೃಷ್ಣಾಯಾಭಿಚರನ್ ವ್ರತೀ ॥ ೩೧

ಬಳಿಕ ರಾಜನ ಮಗನಾದ ಸುದಕ್ಷಿಣ ಎಂಬವನು ತನ್ನ ತಂದೆಯ ಪ್ರೇತಕೃತ್ಯವನ್ನು ಮಾಡಿದನು. ಆಮೇಲೆ ''ನನ್ನ ಪಿತೃಘಾತುಕನನ್ನು ಕೊಂದೇತೀರುವೆನು. ಅವನನ್ನು ಕೊಂದು ಪಿತೃಋಣದಿಂದ ಮುಕ್ತನಾಗುವೆನು'' ಎಂದು ಸುದಕ್ಷಿಣನು ನಿಶ್ಚಯಿಸಿ, ತನ್ನ ಪುರೋಹಿತನೊಡಗೂಡಿ ಸ್ಥಿರಚಿತ್ತದಿಂದ ಪರಮೇಶ್ವರನನ್ನು ಆರಾಧಿಸಿದನು (೨೭-೨೮). ಹೀಗೆ ಅವಿಮುಕ್ತ ಕ್ಷೇತ್ರದಲ್ಲಿ ಆರಾಧಿತನಾದ ಭಗವಂತನು ಸಂತುಷ್ಟನಾಗಿ ಸುದಕ್ಷಿಣನನ್ನು ಕುರಿತು ''ವರವನ್ನು ಕೇಳಿಕೋ'' ಎಂದನು. ಅದಕ್ಕೆ ಸುದಕ್ಷಿಣನು ''ನನ್ನ ತಂದೆಯನ್ನು ಕೊಂದ ಘಾತುಕನನ್ನು ಕೊಲ್ಲುವ ಉಪಾಯವೇ ನನಗೆ ಇಷ್ಟವಾದ ವರ. ಆ ಉಪಾಯವನ್ನು ತಿಳಿಸು'' ಎಂದು ಕೇಳಿಕೊಂಡನು (೨೯). ಆಗ ಮಹೇಶ್ವರನು ''ಸುದಕ್ಷಿಣ, ಇಷ್ಟಾರ್ಥವನ್ನು ಸಲ್ಲಿಸುವ ಋತ್ವಿಜನಂತಿರುವ ದಕ್ಷಿಣಾಗ್ನಿಯನ್ನು ಬ್ರಾಹ್ಮಣರೊಡನೆ ಅಭಿಚಾರ ವಿಧಿಯಿಂದ ಆರಾಧಿಸು. ಆ ಅಗ್ನಿಯು ಪ್ರಮಥಗಣಗಳಿಂದ ಪರಿವೃತನಾಗಿ ನಿನ್ನ ಉದ್ದೇಶವನ್ನು ಈಡೇರಿಸುವುದು. ಆದರೆ ಬ್ರಹ್ಮದ್ವೇಷಿಯನ್ನು ಮಾತ್ರ ಅದು ಕೊಲ್ಲುವುದು'' ಎಂದು ತಿಳಿಸಿದನು. ಅದರಂತೆ ಸುದಕ್ಷಿಣನು ವ್ರತನಿಷ್ಠನಾಗಿ ಶ್ರೀಕೃಷ್ಣನನ್ನು ಕೊಲ್ಲುವ ಸಂಕಲ್ಪದಿಂದ ಅಭಿಚಾರಯಾಗಮಾಡಿದನು (೩೦-೩೧).

ತತೋಽಗ್ನಿರುತ್ಥಿತಃ ಕುಂಡಾನ್ಮೂರ್ತಿಮಾನತಿಭೀಷಣಃ।
ತಪ್ತತಾಮ್ರಶಿಖಾಶ್ಮಶ್ರುರಂಗಾರೋದ್ಗಾರಿಲೋಚನಃ॥ ೩೨

ದಂಷ್ಟ್ರೋಗ್ರಭ್ರುಕುಟೀದಂಡಕಠೋರಾಸ್ಯಃ ಸ್ವಜಿಹ್ವಯಾ।
ಆಲಿಹನ್ ಸೃಕ್ವಿಣೀ ನಗ್ನೋ ವಿಧುನ್ವಂಸ್ತ್ರಿಶಿಖಂ ಜ್ವಲನ್॥ ೩೩

ಪದ್ಭ್ಯಾಂ ತಾಲಪ್ರಮಾಣಾಭ್ಯಾಂ ಕಂಪಯನ್ನವನೀತಲಮ್।
ಸೋಽಭ್ಯಧಾವದ್ ವೃತೋ ಭೂತೈರ್ದ್ವಾರಕಾಂ ಪ್ರದಹನ್ ದಿಶಃ॥

ತಮಾಭಿಚಾರದಹನಮಾಯಾಂತಂ ದ್ವಾರಕೌಕಸಃ।
ವಿಲೋಕ್ಯ ತತ್ರಸುಃ ಸರ್ವೇ ವನದಾಹೇ ಮೃಗಾ ಯಥಾ॥ ೩೪

ಅಕ್ಷೈಃ ಸಭಾಯಾಂ ಕ್ರೀಡಂತಂ ಭಗವಂತಂ ಭಯಾತುರಾಃ।
ತ್ರಾಹಿ ತ್ರಾಹಿ ತ್ರಿಲೋಕೇಶ ವಹ್ನೇಃ ಪ್ರದಹತಃ ಪುರಮ್॥ ೩೬

ಶ್ರುತ್ವಾ ತಜ್ಜನವೈಕ್ಲವ್ಯಂ ದೃಷ್ಟ್ವಾ ಸ್ವಾನಾಂ ಚ ಸಾಧ್ವಸಮ್।
ಶರಣ್ಯಃ ಸಂಪ್ರಹಸ್ಯಾಹ ಮಾ ಭೈಷ್ಟೇತ್ಯವಿತಾಸ್ಮ್ಯಹಮ್॥ ೩೭

ಅನಂತರ ಯಜ್ಞಕುಂಡದಿಂದ ಅಗ್ನಿಯು ಅತಿಭೀಕರವಾದ ರೂಪವನ್ನು ತಾಳಿಮೇಲೇದ್ದಿತು. ಮೇಲೆದ್ದ ಅಭಿಚಾರಪುರುಷನಿಗೆ ಕಾಯಿಸಿದ ತಾಮ್ರದಂತೆ ಕೆಂಪಾದ ಜಟೆಯೂ ಗಡ್ಡ ಮೀಸೆಗಳೂ ಇದ್ದವು. ಬೆಂಕಿಯ ಕೆಂಡದಂತೆ ಕಿಡಿಯುಗುಳುವ ಕಣ್ಣುಗಳು (೩೨). ಕೋರೆದಾಡೆಗಳಿಂದಲೂ ಉಗ್ರವಾದ ಗಡಾರಿಯಂತಹ ಹುಬ್ಬುಗಳಿಂದಲೂ ಮುಖವು ಭೀಷಣವಾಗಿತ್ತು. ದಿಗಂಬರನಾಗಿದ್ದ ಆ ಪುರುಷನು ನಾಲಿಗೆಯಿಂದ ಕಟವಾಯಿಯನ್ನು ಸವರುತ್ತ ಪ್ರಜ್ವಲಿಸುವ ತ್ರಿಶೂಲವನ್ನು ಬೀಸುತ್ತ, ತಾಳೆಯಮರಗಳಂತಿದ್ದ ಕಾಲುಗಳಿಂದ ನೆಲವನ್ನು ಅದುರಿಸುತ್ತ, ಭೂತಗಳಿಂದ ಪರಿವೃತನಾಗಿ ದಶದಿಕ್ಕುಗಳನ್ನು ಸುಡುತ್ತ ದ್ವಾರಕೆಯ ಕಡೆಗೆ ಧಾವಿಸಿದನು (೩೩-೩೪). ಈ ಪ್ರಕಾರವಾಗಿ ಧಾವಿಸಿಬರುತ್ತಿದ್ದ ಅಭಿಚಾರ ಪುರುಷನನ್ನು ನೋಡಿ ದ್ವಾರಕಾವಾಸಿಗಳು ಹೆದರಿದರು. ಕಾಳ್ಗಿಚ್ಚಿನಲ್ಲಿ ಸಿಕ್ಕಿದ ಮೃಗಗಳಂತೆ ತತ್ತರಿಸಿದರು. ಒಡನೆಯೇ ಅವರು ಶ್ರೀಕೃಷ್ಣನ ಬಳಿಗೆ ಓಡಿದರು. ಆತನು ಸಭೆಯಲ್ಲಿ ಕುಳಿತು ಪಗಡೆಯಾಡುತ್ತಿದ್ದನು. ''ಕಾಪಾಡು, ಕಾಪಾಡು ! ತ್ರಿಲೋಕೇಶ್ವರ, ಅಗ್ನಿಯು ನಗರವನ್ನು ಸುಡುತ್ತಿದೆ'' ಎಂದು

ಸರ್ವಸ್ಯಾಂತರ್ಬಹಿಃಸಾಕ್ಷೀ ಕೃತ್ಯಾಂ ಮಾಹೇಶ್ವರೀಂ ವಿಭುಃ ।
ವಿಜ್ಞಾಯ ತದ್ವಿಘಾತಾರ್ಥಂ ಪಾರ್ಶ್ವಸ್ಥಂ ಚಕ್ರಮಾದಿಶತ್ ॥ ೨೮

ತತ್ ಸೂರ್ಯಕೋಟಿಪ್ರತಿಮಂ ಸುದರ್ಶನಂ
ಜಾಜ್ವಲ್ಯಮಾನಂ ಪ್ರಲಯಾನಲಪ್ರಭಮ್ ।
ಸ್ವತೇಜಸಾ ಖಂ ಕಕುಭೋಽಥ ರೋದಸೀ
ಚಕ್ರಂ ಮುಕುಂದಾಸ್ತ್ರಮಥಾಗ್ನಿಮಾರ್ದಯತ್ ॥ ೨೯

ಕೃತ್ಯಾನಲಃ ಪ್ರತಿಹತಃ ಸ ರಥಾಂಗಪಾಣೇ-
ರಸ್ತ್ರೌಜಸಾ ಸ ನೃಪ ಭಗ್ನಮುಖೋ ನಿವೃತ್ತಃ ।
ವಾರಾಣಸೀಂ ಪರಿಸಮೇತ್ಯ ಸುದಕ್ಷಿಣಂ ತಂ
ಸರ್ತ್ವಿಗ್ಜನಂ ಸಮದಹತ್ ಸ್ವಕೃತೋಽಭಿಚಾರಃ ॥ ೪೦

ಚಕ್ರಂ ಚ ವಿಷ್ಣೋಸ್ತದನುಪ್ರವಿಷ್ಟಂ
ವಾರಾಣಸೀಂ ಸಾಟ್ಟಸಭಾಲಯಾಪಣಾಮ್ ।
ಸಗೋಪುರಾಟ್ಟಾಲಕಕೋಷ್ಠಸಂಕುಲಾಂ
ಸಕೋಶಹಸ್ತ್ಯಶ್ವರಥಾನ್ನಶಾಲಾಮ್ ॥ ೪೧

ಆ ಪೌರರು ಕೂಗಿಕೊಂಡರು (೩೫-೩೬). ನಗರವಾಸಿಗಳ ಕಳವಳವನ್ನೂ ತನ್ನವರ ಭಯವನ್ನೂ ಕಂಡು, ಶರಣಾಗತರಕ್ಷಕನಾದ ಭಗವಂತನು ನಕ್ಕು ''ಹೆದರಬೇಡಿರಿ. ನಾನು ಕಾಪಾಡುವೆನು'' ಎಂದನು. ಸರ್ವರ ಒಳಗೂ ಹೊರಗೂ ಸಾಕ್ಷಿಯಾಗಿರುವ ಆ ಸ್ವಾಮಿಗೆ ಅದು ಮಹೇಶ್ವರ ಸಂಬಂಧಿಯಾದ ಕೃತ್ಯದೇವತೆಯೆಂದು ತಿಳಿಯಿತು. ಅದರ ವಿನಾಶಕ್ಕಾಗಿ ತನ್ನ ಬಳಿಯಲ್ಲಿದ್ದ ಚಕ್ರಕ್ಕೆ ಆಜ್ಞೆಯನ್ನಿತ್ತನು (೩೭-೩೮). ಆಗ ಮುಕುಂದನ ಅಸ್ತ್ರವಾದ ಸುದರ್ಶನಚಕ್ರವು ಕೋಟಿಸೂರ್ಯರಂತೆ ಪ್ರಜ್ವಲಿಸುತ್ತ, ಪ್ರಳಯಕಾಲಾಗ್ನಿಯಂತೆ ಬೆಳಗುತ್ತ ತನ್ನ ತೇಜಸ್ಸಿನಿಂದ ಆಕಾಶವನ್ನೂ ದಿಕ್ಕುಗಳನ್ನೂ ಭೂಮ್ಯಂತರಿಕ್ಷಗಳನ್ನೂ ವ್ಯಾಪಿಸಿ, ಅಭಿಚಾರ ಜನ್ಯವಾದ ಅಗ್ನಿಯನ್ನು ಆಕ್ರಮಿಸಿತು (೩೯). ಶ್ರೀಕೃಷ್ಣನ ಚಕ್ರದ ತೇಜಸ್ಸಿನಿಂದ ಪರಾಜಿತವಾದ ಕೃತ್ಯಾಗ್ನಿಯು ಮುಖ ತಿರುಗಿಸಿ ಹಿಂದಿರುಗಿತು. ಅದು ನೇರವಾಗಿ ಕಾಶಿಗೆ ಬಂದು ಋತ್ವಿಗ್‌ಜನ ಸಹಿತವಾಗಿ ಸುದಕ್ಷಿಣನನ್ನೇ ಸುಟ್ಟು

ದಗ್ಧ್ವಾ ವಾರಾಣಸೀಂ ಸರ್ವಾಂ ವಿಷ್ಣೋಶ್ಚಕ್ರಂ ಸುದರ್ಶನಮ್ ।
ಭೂಯಃ ಪಾರ್ಶ್ವಮುಪಾತಿಷ್ಠತ್ ಕೃಷ್ಣಸ್ಯಾಕ್ಲಿಷ್ಟಕರ್ಮಣಃ ॥ ೪೨

ಯ ಏತಚ್ಛ್ರಾವಯೇನ್ಮರ್ತ್ಯ ಉತ್ತಮಶ್ಲೋಕವಿಕ್ರಮಮ್ ।
ಸಮಾಹಿತೋ ವಾ ಶೃಣುಯಾತ್ ಸರ್ವಪಾಪೈಃ ಪ್ರಮುಚ್ಯತೇ ॥ ೪೩

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ಷಟ್‌ಷಷ್ಟಿತಮಾಧ್ಯಾಯಃ

ಸಪ್ತಷಷ್ಟಿತಮಾಧ್ಯಾಯಃ

ರಾಜೋವಾಚ-

ಭೂಯೋऽಹಂ ಶ್ರೋತುಮಿಚ್ಛಾಮಿ ರಾಮಸ್ಯಾದ್ಭುತಕರ್ಮಣಃ ।
ಅನಂತಸ್ಯಾಪ್ರಮೇಯಸ್ಯ ಯದನ್ಯತ್ ಕೃತವಾನ್ ಪ್ರಭುಃ ॥ ೧

ಬೂದಿಮಾಡಿತು ! (೪೦). ಹೀಗೆ ತಾನು ಮಾಡಿದ ಅಭಿಚಾರಕ್ಕೆ ಸುದಕ್ಷಿಣನೇ ಆಹುತಿಯಾದನು. ಅಲ್ಲದೆ ಸುದರ್ಶನಚಕ್ರವು ಕಾಶಿಗೆ ಹೋಗಿ ಮಂಚ, ಸಭಾಮಂದಿರ, ಅಂಗಡಿ, ಗೋಪುರ, ಉಪ್ಪರಿಗೆ, ಕೊಟ್ಟಿಗೆ, ಭಂಡಾರ, ಗಜಶಾಲೆ, ಅಶ್ವಶಾಲೆ, ರಥಶಾಲೆ, ಅನ್ನಶಾಲೆಗಳಿಂದ ತುಂಬಿದ ವಾರಣಸೀನಗರವನ್ನು ಪೂರ್ಣವಾಗಿ ಸುಟ್ಟು ಶುಭಕರ್ಮನಾದ ಶ್ರೀಕೃಷ್ಣನ ಬಳಿಗೆಬಂದು ನಿಂತಿತು (೪೧-೪೨). ಯಾವ ಮನುಷ್ಯನು ಉತ್ತಮಶ್ಲೋಕನ ಈ ಪರಾಕ್ರಮಚರಿತೆಯನ್ನು ಶ್ರವಣ ಮಾಡಿಸುವನೋ ಅಥವಾ ಸಾವಧಾನವಾಗಿ ಕೇಳುವನೋ ಆತನು ಸರ್ವಪಾಪಗಳಿಂದಲೂ ವಿಮುಕ್ತನಾಗುತ್ತಾನೆ (೪೩).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಅರುವತ್ತಾರನೆಯ ಅಧ್ಯಾಯ

ಅಧ್ಯಾಯ ೬೭

ಬಲರಾಮನಿಂದ ನರಕಾಸುರನ ಮಿತ್ರನಾದ ದ್ವಿವಿದನ ಸಂಹಾರ

ಪರೀಕ್ಷಿತರಾಜನು ಹೇಳಿದನು. "ಮುನಿಗಳೆ, ಅದ್ಭುತಕರ್ಮನಾದ ಬಲಭದ್ರನ

ಶ್ರೀಶುಕ ಉವಾಚ-

ನರಕಸ್ಯ ಸಖಾ ಕಶ್ಚಿದ್ ದ್ವಿವಿದೋ ನಾಮ ವಾನರಃ।
ಸುಗ್ರೀವಸಚಿವಃ ಸೋಽಥ ಭ್ರಾತಾ ಮೈಂದಸ್ಯ ವೀರ್ಯವಾನ್॥ ೨

ಸಖ್ಯುಃ ಸೋಽಪಚಿತಿಂ ಕುರ್ವನ್ ವಾನರೋ ರಾಷ್ಟ್ರವಿಪ್ಲವಮ್।
ಪುರಗ್ರಾಮಾಕರಾನ್ ಘೋಷಾನದಹದ್ ವಹ್ನಿಮುತ್ಸೃಜನ್॥ ೩

ಕ್ವಚಿತ್ ಸ ಶೈಲಾನುತ್ಪಾಟ್ಯ ತೈರ್ದೇಶಾನ್ ಸಮಚೂರ್ಣಯತ್।
ಆನರ್ತಾನ್ ಸುತರಾಮೇವ ಯತ್ರಾಸ್ತೇ ಮಿತ್ರಹಾ ಹರಿಃ॥ ೪

ಕ್ವಚಿತ್ ಸಮುದ್ರಮಧ್ಯಸ್ಥೋ ದೋರ್ಭ್ಯಾಮುತ್ಕ್ಷಿಪ್ಯ ತಜ್ಜಲಮ್।
ದೇಶಾನ್ ನಾಗಾಯುತಪ್ರಾಣೋ ವೇಲಾಕೂಲಾನಮಜ್ಜಯತ್॥ ೫

ಆಶ್ರಮಾನೃಷಿಮುಖ್ಯಾನಾಂ ಕೃತ್ವಾ ಭಗ್ನವನಸ್ಪತೀನ್।
ಅದೂಷಯಚ್ಛಕೃನ್ಮೂತ್ರೈರಗ್ನೀನ್ ವೈತಾನಿಕಾನ್ ಖಲಃ॥ ೬

ವಿಷಯವಾಗಿ ಇನ್ನೂ ಹೆಚ್ಚಿನ ಸಂಗತಿಯನ್ನು ಕೇಳಲಿಚ್ಛಿಸುತ್ತೇನೆ. ಅನಂತನೂ ಅಪ್ರಮೇಯನೂ ಆದ ಸ್ವಾಮಿಯು ಇನ್ನೇನನ್ನು ಮಾಡಿದನು ? '' (೧). ಶುಕಮುನಿಗಳು ಹೇಳಿದರು: ದ್ವಿವಿದನೆಂಬ ಒಬ್ಬ ವಾನರನು ನರಕಾಸುರನ ಮಿತ್ರನಾಗಿದ್ದನು. ಆ ವೀರನು ಹಿಂದೆ ಸುಗ್ರೀವನಿಗೆ ಸಚಿವನಾಗಿದ್ದನು. ಅವನು ಮೈಂದನ ಸಹೋದರ (೨). ಮಿತ್ರನಾದ ನರಕಾಸುರನ ಋಣವನ್ನು ತೀರಿಸುವುದಕ್ಕಾಗಿ ಆ ದ್ವಿವಿದನು ರಾಷ್ಟ್ರನಾಶಕಾರ್ಯದಲ್ಲಿ ತೊಡಗಿದ್ದನು. ನಗರಗಳನ್ನೂ ಗ್ರಾಮಗಳನ್ನೂ ಗೋಕುಲಗಳನ್ನೂ ಬೆಂಕಿಯಿಟ್ಟು ಸುಡುತ್ತಿದ್ದನು. ಕೆಲವು ಸಲ ಬೆಟ್ಟಗಳನ್ನು ಕಿತ್ತೆಸೆದು ಜನವಸತಿಯಿರುವ ದೇಶಗಳನ್ನು ಧ್ವಂಸಮಾಡುತ್ತಿದ್ದನು. ಅವನ ಮಿತ್ರನಾದ ನರಕಾಸುರನನ್ನು ಸಂಹರಿಸಿದ ಶ್ರೀಕೃಷ್ಣನು ವಾಸವಾಗಿದ್ದ ಆನರ್ತದೇಶದಲ್ಲಿಯೇ ದ್ವಿವಿದನ ಹಾವಳಿ ಅತಿಯಾಗಿತ್ತು(೩-೪). ಹತ್ತುಸಾವಿರ ಆನೆಗಳ ಬಲವಿದ್ದ ಆ ದ್ವಿವಿದನು ಒಮ್ಮೊಮ್ಮೆ ಸಮುದ್ರ ಮಧ್ಯದಲ್ಲಿ ನಿಂತು ನೀರೆರಚಿ ಸಮುದ್ರತೀರ ಪ್ರದೇಶಗಳನ್ನು ಮುಳುಗಿಸಿಬಿಡುತ್ತಿದ್ದನು. ಆ ದುಷ್ಟನು ಮುನಿಶ್ರೇಷ್ಠರ ಆಶ್ರಮಗಳಲ್ಲಿರುವ

ಪುರುಷಾನ್ ಯೋಷಿತೋ ದೃಪ್ತಃ ಕ್ಷ್ಮಾಭೃದ್ದ್ರೋಣೀಗುಹಾಸು ಸಃ ।
ನಿಕ್ಷಿಪ್ಯ ಚಾಪ್ಯಧಾಚ್ಛೈಲೈಃ ಪೇಶಸ್ಕಾರೀವ ಕೀಟಕಮ್ ॥ ೭

ಏವಂ ದೇಶಾನ್ ವಿಪ್ರಕುರ್ವನ್ ದೂಷಯಂಶ್ಚ ಕುಲಸ್ತ್ರಿಯಃ ।
ಶ್ರುತ್ವಾ ಸುಲಲಿತಂ ಗೀತಂ ಗಿರಿಂ ರೈವತಕಂ ಯಯೌ ॥ ೮

ತತ್ರಾಪಶ್ಯದ್ ಯದುಪತಿಂ ರಾಮಂ ಪುಷ್ಕರಮಾಲಿನಮ್ ।
ಸುದರ್ಶನೀಯಸರ್ವಾಂಗಂ ಲಲನಾಯೂಥಮಧ್ಯಗಮ್ ॥ ೯

ಗಾಯಂತಂ ವಾರುಣೀಂ ಪೀತ್ವಾ ಮದವಿಹ್ವಲಲೋಚನಮ್ ।
ವಿಭ್ರಾಜಮಾನಂ ವಪುಷಾ ಪ್ರಭಿನ್ನಮಿವ ವಾರಣಮ್ ॥ ೧೦

ದುಷ್ಟಃ ಶಾಖಾಮೃಗಃ ಶಾಖಾಮಾರೂಢಃ ಕಂಪಯನ್ ದ್ರುಮಾನ್ ।
ಚಕ್ರೇ ಕಿಲಕಿಲಾಶಬ್ದಮಾತ್ಮಾನಂ ಸಂಪ್ರದರ್ಶಯನ್ ॥ ೧೧

ತಸ್ಯ ಧಾರ್ಷ್ಟ್ಯಂ ಕಪೇರ್ವೀಕ್ಷ್ಯ ತರುಣ್ಯೋ ಜಾತಿಚಾಪಲಾಃ ।
ಹಾಸ್ಯಪ್ರಿಯಾ ವಿಜಹಸುರ್ಬಲದೇವಪರಿಗ್ರಹಾಃ ॥ ೧೨

ಮರಗಳನ್ನು ಮುರಿದು, ಯಜ್ಞ ಕುಂಡಗಳಿಗೆ ಮಲಮೂತ್ರಗಳನ್ನು ಸುರಿದು ಶ್ರೌತಾಗ್ನಿಗಳನ್ನು ಅಪವಿತ್ರಗೊಳಿಸುತ್ತಿದ್ದನು (೫-೬). ಅಹಂಕಾರದಿಂದ ಕೊಬ್ಬಿದ ಆ ದುರುಳನು ಕೈಗೆ ಸಿಕ್ಕಿದ ಸ್ತ್ರೀ ಪುರುಷರನ್ನು ಬೆಟ್ಟದ ಕಂದಕದಲ್ಲಿರುವ ಗವಿಗಳಿಗೆ, ಕಣಜದ ಹುಳುವು ಕೀಟಗಳನ್ನು ಗೂಡುಗಳಿಗೆ ತುರುಕುವಂತೆ ತಳ್ಳಿ, ದೊಡ್ಡ ಬಂಡೆಗಳಿಂದ ಮುಚ್ಚುತ್ತಿದ್ದನು (೭). ಹೀಗೆ ದೇಶದ್ರೋಹದ ಕಾರ್ಯವನ್ನೆಸಗುತ್ತ ಕುಲಸ್ತ್ರೀಯರನ್ನು ಕೆಡಿಸುತ್ತ ಇದ್ದ ದ್ವಿವಿದನು ಒಮ್ಮೆ ರೈವತಕಗಿರಿಯಲ್ಲಿ ಮಧುರವಾದ ಸಂಗೀತ ನಡೆಯುತ್ತಿರುವುದನ್ನು ಕೇಳಿ ಅಲ್ಲಿಗೆ ಹೋದನು (೮). ಅಲ್ಲಿ ಅತ್ಯಂತ ಸುಂದರಾಂಗನೂ ಯದುಪತಿಯೂ ಆದ ಬಲರಾಮನು ಕಮಲ ಮಾಲೆಯನ್ನು ಧರಿಸಿ ಯುವತಿಯರ ನಡುವೆ ಕುಳಿತಿರುವುದು ಕಾಣಿಸಿತು. ಬಲರಾಮನು ಮದ್ಯವನ್ನು ಕುಡಿದು ಮದವೇರಿದ ಕಣ್ಣುಗಳನ್ನು ಹೊರಳಿಸುತ್ತ ಹಾಡುತ್ತಿದ್ದನು. ಬಲಿಷ್ಠವಾದ ದೇಹದಿಂದ ಮದಗಜದಂತೆ ಶೋಭಿಸುತ್ತಿದ್ದನು (೯-೧೦). ತುಂಟನಾದ ಈ ವಾನರನು ಮರದಕೊಂಬೆಯನ್ನೇರಿ ಮರಗಳನ್ನಲ್ಲಾಡಿಸುತ್ತ ಕಿಸಕಿಸನೆ ಶಬ್ದ ಮಾಡಿ ತನ್ನನ್ನು ತೋರಿಸಿಕೊಂಡನು! ಬಲರಾಮನ ಕಾಂತೆಯರೂ

ತಾ ಹೇಲಯಾಮಾಸ ಕಪಿರ್ಭ್ರೂಕ್ಷೇಪೈಃ ಸಮ್ಮುಖಾದಿಭಿಃ ।
ದರ್ಶಯನ್ ಸ್ವಗುದಂ ತಾಸಾಂ ರಾಮಸ್ಯ ಚ ನಿರೀಕ್ಷತಃ ॥ ೧೩

ತಂ ಗ್ರಾವ್ಣಾ ಪ್ರಾಹರತ್ ಕ್ರುದ್ಧೋ ಬಲಃ ಪ್ರಹರತಾಂ ವರಃ ।
ಸ ವಂಚಯಿತ್ವಾ ಗ್ರಾವಾಣಂ ಮದಿರಾಕಲಶಂ ಕಪಿಃ ॥ ೧೪

ಗೃಹೀತ್ವಾ ಹೇಲಯಾಮಾಸ ಧೂರ್ತಸ್ತಂ ಕೋಪಯನ್ ಹಸನ್ ।
ನಿರ್ಭಿದ್ಯ ಕಲಶಂ ದುಷ್ಟೋ ವಾಸಾಂಸ್ಯಾಸ್ಫಾಲಯದ್ ಬಲಮ್ ॥ ೧೫

ಕದರ್ಥೀಕೃತ್ಯ ಬಲವಾನ್ ವಿಪ್ರಚಕ್ರೇ ಮದೋದ್ಧತಃ ।
ತಂ ತಸ್ಯಾವಿನಯಂ ದೃಷ್ಟ್ವಾ ದೇಶಾಂಶ್ಚ ತದುಪದ್ರುತಾನ್ ॥ ೧೬

ಕ್ರುದ್ಧೋ ಮುಸಲಮಾದತ್ತ ಹಲಂ ಚಾರಿಜಿಘಾಂಸಯಾ ।
ದ್ವಿವಿದೋಽಪಿ ಮಹಾವೀರ್ಯಃ ಶಾಲಮುದ್ಯಮ್ಯ ಪಾಣಿನಾ ॥ ೧೭

ಅಭ್ಯೇತ್ಯ ತರಸಾ ತೇನ ಬಲಂ ಮೂರ್ಧನ್ಯತಾಡಯತ್ ।
ತಂ ತು ಸಂಕರ್ಷಣೋ ಮೂರ್ಧ್ನಿ ಪತಂತಮಚಲೋ ಯಥಾ ॥ ೧೮

ಸಹಜವಾಗಿ ಚಪಲೆಯರೂ ಹಾಸ್ಯಪ್ರಿಯರೂ ಆದ ಆ ತರುಣಿಯರು ಆ ಕಪಿಚೇಷ್ಟೆಯನ್ನು ನೋಡಿ ನಗತೊಡಗಿದರು (೧೧-೧೨). ಕಪಿಯು ಹುಬ್ಬುಹಾರಿಸುತ್ತ ಹಲ್ಲು ಕಿರಿಯುತ್ತ ಅವರನ್ನು ಅಣಕಿಸಿತು. ಅಷ್ಟೇ ಅಲ್ಲ, ಬಲರಾಮನು ನೋಡುತ್ತಿರುವಾಗಲೇ, ಆ ಸ್ತ್ರೀಯರಿಗೆ ತನ್ನ ಗುದದ್ವಾರವನ್ನು ತೋರಿಸಿ ಹಂಗಿಸಿತು (೧೩). ಆಗ ಬಲರಾಮನು ಸಿಟ್ಟಿನಿಂದ ಒಂದು ಕಲ್ಲನ್ನು ಕಪಿಯ ಕಡೆಗೆ ಎಸೆದನು. ವಾನರನು ಕಲ್ಲಿನ ಹೊಡೆತವನ್ನು ತಪ್ಪಿಸಿಕೊಂಡು ಇವರ ಮದ್ಯಕಲಶವನ್ನು ಎತ್ತಿಕೊಂಡು ಹೋಯಿತು. ತುಂಟನಾದ ಆ ಕಪಿಯು ಬಲರಾಮನನ್ನು ಅಣಕಿಸಿ ರೇಗಿಸುತ್ತ ಮದ್ಯಕಲಶವನ್ನೊಡೆದು ಅವನ ಬಟ್ಟೆಯನ್ನು ಸೆಳೆದು ಹಾರಾಡಿತು (೧೪-೧೫). ಬಲಶಾಲಿಯೂ ಮದೋದ್ಧತವೂ ಆದ್ದರಿಂದ ಬಲರಾಮನಿಗೆ ಬಹಳ ತೊಂದರೆಯನ್ನಿತ್ತಿತ್ತು. ಅದರ ದುಶ್ಚೇಷ್ಟೆಯನ್ನೂ ಆ ಪ್ರದೇಶದಲ್ಲಿ ಮಾಡಿದ ಹಾವಳಿಯನ್ನೂ ಕಂಡು ಬಲರಾಮನು ಕ್ರುದ್ಧನಾದನು. ಆ ಕಪಿಯನ್ನು ಕೊಂದು ಬಿಡಬೇಕೆಂದು ನಿಶ್ಚಯಿಸಿ ತನ್ನ ಮುಸಲವನ್ನೂ ಹಲಾಯುಧವನ್ನೂ ಕೈಗೆತ್ತಿಕೊಂಡನು. ಮಹಾವೀರನಾದ ದ್ವಿವಿದನೂ ಒಂದು

ಪ್ರತಿಜಗ್ರಾಹ ಬಲವಾನ್ ಸುನಂದೇನಾಹನಚ್ಚ ತಮ್ ।
ಮುಸಲಾಹತಮಸ್ತಿಷ್ಕೋ ವಿರೇಜೇ ರಕ್ತಧಾರಯಾ ॥ ೧೯

ಗಿರಿರ್ಯಥಾ ಗೈರಿಕಯಾ ಪ್ರಹಾರಂ ನಾನುಚಿಂತಯನ್ ।
ಪುನರನ್ಯಂ ಸಮುತ್ಕ್ಷಿಪ್ಯ ಕೃತ್ವಾನಿಷ್ಪತ್ರಮೋಜಸಾ ॥ ೨೦

ತೇನಾಹನತ್ ಸುಸಂಕ್ರುದ್ಧಸ್ತಂ ಬಲಃ ಶತಧಾಚ್ಛಿನತ್ ।
ತತೋಽನ್ಯೇನ ರುಷಾ ಜಘ್ನೇ ತಂ ಚಾಪಿ ಶತಧಾಚ್ಛಿನತ್ ॥ ೨೧

ಏವಂ ಯುಧ್ಯನ್ ಭಗವತಾ ಭಗ್ನೇ ಭಗ್ನೇ ಪುನಃ ಪುನಃ ।
ಆಕೃಷ್ಯ ಸರ್ವತೋ ವೃಕ್ಷಾನ್ ನಿರ್ವೃಕ್ಷಮಕರೋದ್‌ವನಮ್ ॥ ೨೨

ತತೋಽಮುಂಚಚ್ಛಿಲಾವರ್ಷಂ ಬಲಸ್ಯೋಪರ್ಯಮರ್ಷಿತಃ ।
ತತ್ ಸರ್ವಂ ಚೂರ್ಣಯಾಮಾಸ ಲೀಲಯಾ ಮುಸಲಾಯುಧಃ ॥ ೨೩

ಸ ಬಾಹೂ ತಾಲಸಂಕಾಶೌ ಮುಷ್ಟೀಕೃತ್ಯ ಕಪೀಶ್ವರಃ ।
ಆಸಾದ್ಯ ರೋಹಿಣೀಪುತ್ರಂ ತಾಭ್ಯಾಂ ವಕ್ಷಸ್ಯರೂರುಜತ್ ॥ ೨೪

ಸಾಲವೃಕ್ಷವನ್ನು ಕೈಯಿಂದ ಮುರಿದು ಎತ್ತಿಹಿಡಿದನು (೧೬-೧೭). ಒಡನೆಯೇ 'ರಭಸದಿಂದ ಬಂದು ಬಲಭದ್ರನ ತಲೆಯಮೇಲೆ ಕುಕ್ಕಲು, ಬಲಭದ್ರನು ಪರ್ವತದಂತೆ ಅಲ್ಲಾಡದೆ ಆ ವೃಕ್ಷಪಾತವನ್ನು ಸಹಿಸಿಕೊಂಡು,ಸುನಂದವೆಂಬ ಮುಸಲಾಯುಧದಿಂದ ದ್ವಿವಿದನ ಶಿರಸ್ಸನ್ನಪ್ಪಳಿಸಿದನು. ತಲೆಯೊಡೆದು ಹರಿದ ರಕ್ತಧಾರೆಯಿಂದ ದ್ವಿವಿದನು. ಗೈರಿಕಧಾತುವಿನ ತೊರೆಯಿಂದ ಪರ್ವತದಂತೆ ಕಂಗೊಳಿಸಿದನು (೧೮-೧೯). ಆತನು ಮುಸಲಪ್ರಹಾರವನ್ನು ಲೆಕ್ಕಿಸದೆ ಮತ್ತೊಂದು ಮರವನ್ನು ಕಿತ್ತು, ಬಲದಿಂದ ಕೊಡಹಿ ಎಲೆಗಳನ್ನುದುರಿಸಿ, ಸಂಕ್ರುದ್ಧನಾಗಿ ಬಲರಾಮನನ್ನು ಬಡಿದನು. ಬಲರಾಮನು ಅದನ್ನು ನೂರು ತುಂಡಾಗಿ ಕತ್ತರಿಸಿದನು. ದ್ವಿವಿದನು ಇನ್ನೊಂದು ವೃಕ್ಷವನ್ನೆತ್ತಿ ಹೊಡೆಯಲಾಗಿ ಅದನ್ನೂ ತುಂಡು ತುಂಡು ಮಾಡಿದನು (೨೦-೨೧). ಹೀಗೆ ಕಾದುತ್ತ ಬೀಸಿ ಬಡಿದ ಮರಗಳನ್ನು ಬಲಭದ್ರನು ಕಡಿದು ಈಡಾಡುತ್ತಿರಲು, ದ್ವಿವಿದನು ಮತ್ತೆ ಮತ್ತೆ ಮರಗಳನ್ನು ಕಿತ್ತು ಕಾಡನ್ನು ಬರಿದು ಮಾಡಿದನು. ಅನಂತರ ಸಿಟ್ಟಿನಿಂದ ಕಲ್ಲುಬಂಡೆಗಳನ್ನು ಕಿತ್ತು ಸುರಿಯತೊಡಗಲು, ಬಲರಾಮನು ಮುಸಲಾಯುಧವನ್ನು ಹಿಡಿದು ಅವೆಲ್ಲವನ್ನೂ ಲೀಲೆಯಿಂದ ಪುಡಿ ಪುಡಿ

ಯಾದವೇಂದ್ರೋಽಪಿ ತಂ ದೋರ್ಭ್ಯಾಂ ತ್ಯಕ್ತ್ವಾ ಮುಸಲಲಾಂಗಲೇ ।
ಜತ್ರಾವಭ್ಯರ್ದಯತ್ಕ್ರುದ್ಧಃ ಸೋಽಪತದ್ ರುಧಿರಂ ವಮನ್ ॥ ೨೫

ಚಕಂಪೇ ತೇನ ಪತತಾ ಸಟಂಕಃ ಸವನಸ್ಪತಿಃ ।
ಪರ್ವತಃ ಕುರುಶಾರ್ದೂಲ ವಾಯುನಾ ನೌರಿವಾಂಭಸಿ ॥ ೨೬

ಜಯಶಬ್ದೋ ನಮಃಶಬ್ದಃ ಸಾಧು ಸಾಧ್ವಿತಿ ಚಾಂಬರೇ ।
ಸುರಸಿದ್ಧ ಮುನೀಂದ್ರಾಣಾಮಾಸೀತ್ ಕುಸುಮವರ್ಷಿಣಾಮ್ ॥ ೨೭

ಏವಂ ನಿಹತ್ಯ ದ್ವಿವಿದಂ ಜಗದ್ವ್ಯತಿಕರಾವಹಮ್ ।
ಸಂಸ್ತೂಯಮಾನೋ ಭಗವಾನ್ ಜನೈಃ ಸ್ವಪುರಮಾವಿಶತ್ ॥ ೨೮

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ಸಪ್ತಷಷ್ಟಿತಮಾಧ್ಯಾಯಃ

ಮಾಡಿದನು (೨೨-೨೩). ಬಳಿಕ ಆ ಕಪೀಶ್ವರನು ಶಾಳೆಯ ಮರದಂತೆ ನೀಳವಾದ ತೋಳುಗಳಿಂದ ಮುಷ್ಟಿಕಟ್ಟಿ ನುಗ್ಗಿ ಬಂದು ರೋಹಿಣೀಪುತ್ರನ ಎದೆಯಮೇಲೆ ರಪರಪನೆ ಗುದ್ದಿದನು. ಯಾದವೇಂದ್ರನು ಹಲಾಯುಧ ಮುಸಲಾಯುಧಗಳನ್ನೆಸೆದು ರೋಷಾವಿಷ್ಟನಾಗಿ ದ್ವಿವಿದನ ಹೆಗಲಿನ ದಡವನ್ನು ಕೈಗಳಿಂದ ಅಪ್ಪಳಿಸಿದನು. ಆಗ ವಾನರನು ರಕ್ತವನ್ನು ಕಕ್ಕುತ್ತ (ಸತ್ತು) ಉರುಳಿದನು (೨೪-೨೫). ದ್ವಿವಿದನು ಉರುಳಿಬೀಳಲಾಗಿ, ಪರೀಕ್ಷಿತರಾಜ, ಆ ರಭಸಕ್ಕೆ ಜಲಮಯಕಂದರಗಳಿಂದಲೂ ವೃಕ್ಷಗಳಿಂದಲೂ ಸಹಿತವಾದ ರೈವತಕಗಿರಿಯು, ಸಮುದ್ರಜಲದಲ್ಲಿ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿದ ಹಡಗಿನಂತೆ ನಡುಗಿತು! ಅಂಬರತಳದಲ್ಲಿ ಅಮರಸಿದ್ಧಮುನೀಂದ್ರರು ಹೂಮಳೆ ಸುರಿಸುತ್ತ "ಜಯ ಜಯ, ನಮೋ ನಮಃ, ಭಾಪು ಭಾಪು!" ಎಂಬ ಮೆಚ್ಚಿನ ಮಾತುಗಳನ್ನು ಉಗ್ಗಡಿಸಿದರು (೨೬-೨೭). ಈ ರೀತಿಯಲ್ಲಿ ರಾಷ್ಟ್ರವಿಪ್ಲವಕಾರಿಯಾದ ದ್ವಿವಿದನನ್ನು ಸಂಹರಿಸಿ ಭಗವಾನ್ ಬಲಭದ್ರನು ಜನರಿಂದ ಸ್ತುತಿಸಲ್ಪಡುತ್ತ ಮೆಲ್ಲನೆ ತನ್ನ ಪುರವನ್ನು ಪ್ರವೇಶಿಸಿದನು (೨೮).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಅರುವತ್ತೇಳನೆಯ ಅಧ್ಯಾಯ

ಅಷ್ಟಷಷ್ಟಿತಮೋಧ್ಯಾಯಃ

ಶ್ರೀಶುಕ ಉವಾಚ-

ದುರ್ಯೋಧನಸುತಾಂ ರಾಜನ್ ಲಕ್ಷ್ಮಣಾಂ ಸಮಿತಿಂಜಯಃ |
ಸ್ವಯಂವರಸ್ಥಾಮಹರತ್ ಸಾಂಬೋ ಜಾಂಬವತೀಸುತಃ || ೧

ಕೌರವಾಃ ಕುಪಿತಾ ಊಚುರ್ದುರ್ವಿನೀತೋಽಯಮರ್ಭಕಃ |
ಕದರ್ಥೀಕೃತ್ಯ ನಃ ಕನ್ಯಾಮಕಾಮಾಮಹರದ್ ಬಲಾತ್ || ೨

ಬಧ್ನೀತೇಮಂ ದುರ್ವಿನೀತಂ ಕಿಂ ಕರಿಷ್ಯಂತಿ ವೃಷ್ಣಯಃ |
ಯೋಽಸ್ಮತ್ಪ್ರಸಾದೋಪಚಿತಾಂ ದತ್ತಾಂ ನೋ ಭುಂಜತೇ ಮಹೀಮ್ ೩

ನಿಗೃಹೀತಂ ಸುತಂ ಶ್ರುತ್ವಾ ಯದ್ಯೇಷ್ಯಂತೀಹ ವೃಷ್ಣಯಃ |
ಭಗ್ನದರ್ಪಾಃ ಶಮಂ ಯಾಂತಿ ಪ್ರಾಣಾ ಇವ ಸುಸಂಯುತಾಃ || ೪

ಇತಿ ಕರ್ಣಃ ಶಲೋ ಭೂರಿರ್ಯಜ್ಞಕೇತುಃ ಸುಯೋಧನಃ |
ಸಾಂಬಮಾರೇಭಿರೇ ಬದ್ಧುಂ ಕುರುವೃದ್ಧಾನುಮೋದಿತಾಃ || ೫

ಅಧ್ಯಾಯ ೬೮

ಜಾಂಬವತೀ ಪುತ್ರನಾದ ಸಾಂಬನನ್ನು ಕೌರವರು ಸೆರೆಹಿಡಿಯುವುದು. ಕ್ರುದ್ಧನಾದ ಬಲರಾಮನು ಹಲಾಯುಧದಿಂದ ಹಸ್ತಿನಾವತಿಯನ್ನು ಸೆಳೆಯುವುದು.

ಪರೀಕ್ಷಿತ ರಾಜ, ದುರ್ಯೋಧನನ ಮಗಳಾದ ಲಕ್ಷ್ಮಣೆ[೧] ಎಂಬ ಕನ್ಯೆಯ ಸ್ವಯಂವರದ ಏರ್ಪಾಡು ನಡೆದಿತ್ತು. ಜಾಂಬವತೀಸುತನೂ ಸಂಗ್ರಾಮವೀರನೂ ಆದ ಸಾಂಬನು ಸ್ವಯಂವರ ಮಂಟಪದಲ್ಲಿದ್ದ ಲಕ್ಷ್ಮಣೆಯನ್ನು ಅಪಹರಿಸಿದನು (೧). ಆಗ ಕೌರವರು ಕುಪಿತರಾಗಿ ''ಎಲಾ! ಈ ಹುಡುಗನು ದುರುಳ. ನಮ್ಮನ್ನು ಲೆಕ್ಕಿಸದೆ ತನ್ನನ್ನು ವರಿಸದಿರುವ ಕನ್ಯೆಯನ್ನು ಅಪಹರಿಸಿದ್ದಾನೆ. ಈ ದುರ್ವಿನೀತನನ್ನು ಸೆರೆಹಿಡಿಯಿರಿ. ಯಾದವರು ಏನು ಮಾಡಿಯಾರು ? ನಾವು ಅನುಗ್ರಹದಿಂದ ಕೊಟ್ಟಿರುವ ನಮ್ಮ ನೆಲವನ್ನು ಅವರು ಆಳಿಕೊಂಡಿದ್ದಾರಷ್ಟೆ! (೨-೩). ಮಗನ ಬಂದಿಯಾಗಿರುವುದನ್ನು ತಿಳಿದು ಅವರು ಇಲ್ಲಿಗೆ ಬಂದರೆ ಅವರ

---

೧. ಲಕ್ಷಣೆ ಎಂದೂ ಪಾಠಾಂತರವಿದೆ.

ದೃಷ್ಟ್ವಾನುಧಾವತಃ ಸಾಂಬೋ ಧಾರ್ತರಾಷ್ಟ್ರಾನ್ ಮಹಾರಥಃ ।
ಪ್ರಗೃಹ್ಯ ರುಚಿರಂ ಚಾಪಂ ತಸ್ಥೌ ಸಿಂಹ ಇವೈಕಲಃ ॥ ೬

ತಂ ತೇ ಜಿಘೃಕ್ಷವಃ ಕ್ರುದ್ಧಾಸ್ತಿಷ್ಠ ತಿಷ್ಠೇತಿ ಭಾಷಿಣಃ ।
ಆಸಾದ್ಯ ಧನ್ವಿನೌ ಬಾಣೈಃ ಕರ್ಣಾಗ್ರಣ್ಯಃ ಸಮಾಕಿರನ್ ॥ ೭

ಸೋಽಪವಿದ್ಧಃ ಕುರುಶ್ರೇಷ್ಠ ಕುರುಭಿರ್ಯದುನಂದನಃ ।
ನಾಮೃಷ್ಯತ್ತದಚಿಂತ್ಯಾರ್ಭಃ ಸಿಂಹಃ ಕ್ಷುದ್ರಮೃಗೈರಿವ ॥ ೮

ವಿಸ್ಫೂರ್ಜ್ಯ ರುಚಿರಂ ಚಾಪಂ ಸರ್ವಾನ್ ವಿವ್ಯಾಧ ಸಾಯಕೈಃ ।
ಕರ್ಣಾದೀನ್ ಷಡ್ರಥಾನ್ ವೀರಾಂಸ್ತಾವದ್ಭಿರ್ಯುಗಪತ್ ಪೃಥಕ್ ॥

ದರ್ಪವನ್ನಿಳಿಸುತ್ತೇವೆ. ಪ್ರಾಣಾಯಾಮಾದಿಗಳಿಂದ ನಿಗ್ರಹಿಸಲ್ಪಟ್ಟ ಇಂದ್ರಿಯಗಳಂತೆ ಆಗ ತೆಪ್ಪನಾಗುತ್ತಾರೆ '' ಎಂದು ಕರ್ಣ, ಶಲ, [೧]ಭೂರಿ, ಯಜ್ಞಕೇತು, ದುರ್ಯೋಧನರು ಕುರುವೃದ್ಧನಾದ [೨] ಭೀಷ್ಮನ ಅನುಮತಿಯಂತೆ ಸಾಂಬನನ್ನು ಬಂಧಿಸಲು ಉದ್ಯುಕ್ತರಾದರು (೪-೫). ಕೌರವರು ತನ್ನನ್ನು ಅಟ್ಟಿಸಿಕೊಂಡು ಬರುತ್ತಿರುವುದನ್ನು ನೋಡಿ, ಮಹಾರಥನಾದ ಸಾಂಬನು ತೇಜಸ್ವಿಯಾದ ಧನಸ್ಸನ್ನು ಹಿಡಿದು, ಸಿಂಹದಂತೆ ಏಕಾಕಿಯಾಗಿಯೇ ಪ್ರತಿಭಟಿಸಿ ನಿಂತನು (೬). ಕರ್ಣನೇ ಅಗ್ರಣಿಯಾಗಿದ್ದ ಕೌರವರು ಧನುರ್ಧಾರಿಗಳಾಗಿ ಸಾಂಬನನ್ನು ತರುವುದಕ್ಕಾಗಿ ಧಾವಿಸುತ್ತ 'ನಿಲ್ಲು ನಿಲ್ಲು' ಎಂದು ಕೂಗುತ್ತ ಅವನನ್ನು ಸಮೀಪಿಸಿ ಬಾಣಗಳ ಮಳೆಗರದರು (೭). ಪರೀಕ್ಷಿತರಾಜ, ಆ ಸಾಂಬನು ಅಚಿಂತ್ಯಮಹಿಮನಾದ ಶ್ರೀಕೃಷ್ಣನ ಪುತ್ರನು. ಸಿಂಹವು ಕ್ಷುದ್ರಮೃಗಗಳನ್ನು ಲೆಕ್ಕಿಸುವುದೆ? ಬಾಣಗಳ ಹೊಡೆತಕ್ಕೆ ಒಳಗಾದ ಸಾಂಬನು ಅದನ್ನು ಸೈರಿಸದೆ, ತನ್ನ ತೇಜೋಮಯವಾದ ಚಾಪವನ್ನು ಝೇಂಕರಿಸಿ, ಕರ್ಣನೇ ಮೊದಲಾದ ಆರು

---

೧. ಶಲ, ಭೂರಿ-ಎಂಬಿಬ್ಬರು ಸೋಮದತ್ತನ ಮಕ್ಕಳು. ಭೂರಿಶ್ರವನ ಸೋದರರು. ಇವರು ಭಾರತ ಯುದ್ಧದಲ್ಲಿ ಕೌರವರ ಪಕ್ಷವನ್ನು ವಹಿಸಿದ್ದರು. ಅಲ್ಲದೆ ದುರ್ಯೋಧನನ ತಮ್ಮಂದಿರಲ್ಲಿ ಶಲ ಎಂಬ ಹೆಸರಿನವನೊಬ್ಬನಿದ್ದನು. ಯಜ್ಞಕೇತುವೆಂದರೆ ಯಾರೋ ತಿಳಿಯದು.

೨. ಭೀಷ್ಮನೂ ಸೇರಿ ಆರು ಜನರು ಸಾಂಬನನ್ನು ಹಿಡಿಯಲು ಹೋದರೆಂದು ಶ್ರೀಧರಿಯ ವ್ಯಾಖ್ಯಾನದಲ್ಲಿದೆ. 'ಯಜ್ಞಕೇತುಃ' ಎಂಬಲ್ಲಿ 'ಯಜ್ಞಃ ಕೇತುಃ' ಎಂಬ ಪಾಠವನ್ನೊಪ್ಪಿ ಯಜ್ಞ, ಕೇತು ಎಂಬಿಬ್ಬರನ್ನು ಸೇರಿಸಿ ಆರು ಜನರೆಂದು ಕೆಲವರ ಅಭಿಪ್ರಾಯ.

ಚತುರ್ಭಿಶ್ಚತುರೋ ವಾಹಾನೇಕೈಕೇನ ನ ಸಾರಥೀನ್ ।
ರಥಿನಶ್ಚ ಮಹೇಷ್ವಾಸಾಂಸ್ತಸ್ಯ ತತ್ತೇಽಭ್ಯಪೂಜಯನ್ ॥ ೧೦

ತಂ ತು ತೇ ವಿರಥಂ ಚಕ್ರುಶ್ಚತ್ವಾರಶ್ಚತುರೋ ಹಯಾನ್ ।
ಏಕಸ್ತು ಸಾರಥಿಂ ಜಘ್ನೇ ಚಿಚ್ಛೇದಾನ್ಯಃ ಶರಾಸನಮ್ ॥ ೧೧

ತಂ ಬದ್ಧ್ವಾ ವಿರಥೀಕೃತ್ಯ ಕೃಚ್ಛ್ರೇಣ ಕುರವೋ ಯುಧಿ ।
ಕುಮಾರಂ ಸ್ವಸ್ಯ ಕನ್ಯಾಂ ಚ ಸ್ವಪುರಂ ಜಯಿನೋಽವಿಶನ್ ॥ ೧೨

ತಚ್ಛ್ರುತ್ವಾ ನಾರದೋಕ್ತೇನ ರಾಜನ್ ಸಂಜಾತಮನ್ಯವಃ ।
ಕುರೂನ್ ಪ್ರತ್ಯುದ್ಯಮಂ ಚಕ್ರುರುಗ್ರಸೇನಪ್ರಚೋದಿತಾಃ ॥ ೧೩

ಸಾಂತ್ವಯಿತ್ವಾ ತು ತಾನ್ ರಾಮಃ ಸಂನದ್ಧಾನ್ ವೃಷ್ಣಿಪುಂಗವಾನ್ ।
ನೈಚ್ಛತ್ ಕುರೂಣಾಂ ವೃಷ್ಣೀನಾಂ ಕಲಿಂ ಕಲಿಮಲಾಪಹಃ ॥ ೧೪

ಮಂದಿ ಶೂರರ ಮೇಲೆ ಏಕಕಾಲದಲ್ಲಿ ಬಾಣಗಳನ್ನು ಪ್ರಯೋಗಿಸಿ ಒಬ್ಬೊಬ್ಬರನ್ನೂ ಥಳಿಸಿದನು (೮-೯). ನಾಲ್ಕು ಬಾಣಗಳಿಂದ ನಾಲ್ಕು ಕುದುರೆಗಳನ್ನೂ ಒಂದೊಂದರಿಂದ ಸಾರಥಿಗಳನ್ನೂ ರಥಿಕರನ್ನೂ ಹೊಡೆದು ನೋಯಿಸಿದನು. ಮಹಾವೀರರಾದ ಆ ರಥಿಕರು ಸಾಂಬನ ಪರಾಕ್ರಮವನ್ನು ಕೊಂಡಾಡಿದರು. ಅನಂತರ ಅವರಲ್ಲಿ ನಾಲ್ವರು ಸೇರಿ ಸಾಂಬನ ನಾಲ್ಕು ಅಶ್ವಗಳನ್ನು ಕೊಂದು ವಿರಥನನ್ನಾಗಿ ಮಾಡಲು, ಒಬ್ಬನು ಅವನ ಸಾರಥಿಯನ್ನು ಕೊಂದನು. ಇನ್ನೊಬ್ಬನು ಸಾಂಬನ ಧನುಸ್ಸನ್ನು ಕತ್ತರಿಸಿದನು (೧೦-೧೧). ಹೀಗೆ ಬಹುಶ್ರಮದಿಂದ ಕೌರವರು ಆತನನ್ನು ಯುದ್ಧದಲ್ಲಿ ವಿರಥನನ್ನಾಗಿ ಮಾಡಿ ಜಯಶಾಲಿಗಳಾಗಿ, ಆ ಕುಮಾರನನ್ನು ಬಂಧಿಸಿ ತಮ್ಮ ಕನ್ಯೆಯನ್ನು ಕರೆದುಕೊಂಡು ಹಸ್ತಿನಾವತಿಗೆ ಬಂದರು (೧೨). ಈ ವೃತ್ತಾಂತವನ್ನು ನಾರದಮುನಿಗಳಿಂದ ಕೇಳಿ ಯಾದವರು ಕ್ರುದ್ಧರಾದರಲ್ಲದೆ, ಉಗ್ರಸೇನನಿಂದ ಪ್ರೇರಿತರಾಗಿ ಕೌರವರ ಮೇಲೆ ದಂಡೆತ್ತಿಹೋಗಲು ಸಂನಾಹ ಮಾಡಿದರು (೧೩). ಹೀಗೆ ಸಂನದ್ಧರಾದ ಯದುನಾಯಕರನ್ನು ಬಲರಾಮನು ಕಲಹದಿಂದಾಗುವ ಕಲ್ಮಷವನ್ನು ತಡೆಯುವುದಕ್ಕಾಗಿ ಸಂತೈಸಿದನು. ಯಾದವರಿಗೂ ಕೌರವರಿಗೂ ಕಲಹ ನಡೆಯುವುದನ್ನೂ ಆತನು ಒಪ್ಪಲಿಲ್ಲ. ಗ್ರಹಗಳಿಂದ ಪರಿವೃತನಾದ ಚಂದ್ರನಂತೆ, ಬಲರಾಮನು ಬ್ರಾಹ್ಮಣರಿಂದಲೂ ಕುಲವೃದ್ಧರಿಂದಲೂ ಸಹಿತನಾಗಿ,

ಜಗಾಮ ಹಾಸ್ತಿನಪುರಂ ರಥೇನಾದಿತ್ಯವರ್ಚಸಾ ।
ಬ್ರಾಹ್ಮಣೈಃ ಕುಲವೃದ್ಧೈಶ್ಚ ವೃತಶ್ಚಂದ್ರ ಇವ ಗ್ರಹೈಃ ॥ ೧೫

ಗತ್ವಾ ಗಜಾಹ್ವಯಂ ರಾಮೋ ಬಾಹ್ಯೋಪವನಮಾಸ್ಥಿತಃ ।
ಉದ್ಧವಂ ಪ್ರೇಷಯಾಮಾಸ ಧೃತರಾಷ್ಟ್ರಂ ಬುಭುತ್ಸಯಾ ॥ ೧೬

ಸೋಽಭಿವಂದ್ಯಾಂಬಿಕಾಪುತ್ರಂ ಭೀಷ್ಮಂ ದ್ರೋಣಂ ಚ ಬಾಹ್ಲಿಕಮ್ ।
ದುರ್ಯೋಧನಂ ಚ ವಿಧಿವದ್ ರಾಮಮಾಗತಮಬ್ರವೀತ್ ॥ ೧೭

ತೇಽತಿಪ್ರೀತಾಸ್ತಮಾಕರ್ಣ್ಯ ಪ್ರಾಪ್ತಂ ರಾಮಂ ಸುಹೃತ್ತಮಮ್ ।
ತಮರ್ಚಯಿತ್ವಾಭಿಯಯುಃ ಸರ್ವೇ ಮಂಗಲಪಾಣಯಃ ॥ ೧೮

ತಂ ಸಂಗಮ್ಯ ಯಥಾನ್ಯಾಯಂ ಗಾಮರ್ಘ್ಯಂ ಚ ನ್ಯವೇದಯನ್ ।
ತೇಷಾಂ ಯೇ ತತ್ಪ್ರಭಾವಜ್ಞಾಃ ಪ್ರಣೇಮುಃ ಶಿರಸಾ ಬಲಮ್ ॥ ೧೯

ಬಂಧೂನ್ ಕುಶಲಿನಃ ಶ್ರುತ್ವಾ ಪೃಷ್ಟ್ವಾ ಶಿವಮನಾಮಯಮ್ ।
ಪರಸ್ಪರಮಥೋ ರಾಮೋ ಬಭಾಷೇಽವಿಕ್ಲವಂ ವಚಃ ॥ ೨೦

ಸೂರ್ಯಸಂಕಾಶವಾದ ರಥವನ್ನೇರಿ ಹಾಸ್ತಿನಪುರಕ್ಕೆ ಪ್ರಯಾಣಮಾಡಿದನು (೧೪-೧೫). ಆತನು ಹಸ್ತಿನಾಪುರದ ಹೊರವಲಯದಲ್ಲಿದ್ದ ಉಪವನದಲ್ಲಿ ಇಳಿದುಕೊಂಡು, ಕೌರವರ ಅಭಿಪ್ರಾಯವನ್ನು ತಿಳಿದುಬರುವುದಕ್ಕಾಗಿ ಉದ್ಧವನನ್ನು ಧೃತರಾಷ್ಟ್ರನ ಬಳಿಗೆ ಕಳಿಸಿದನು. ಅದರಂತೆ ಉದ್ಧವನು ನಗರದೊಳಗೆ ಹೋಗಿ ಧೃತಾರಾಷ್ಟ್ರನನ್ನೂ ಭೀಷ್ಮದ್ರೋಣರನ್ನೂ ಬಾಹ್ಲಿಕ[೧] ದುರ್ಯೋಧನರನ್ನೂ ವಿಧಿವತ್ತಾಗಿ ಕಂಡು ನಮಸ್ಕರಿಸಿ, ಬಲರಾಮನು ಬಂದಿರುವ ಸಂಗತಿಯನ್ನು ತಿಳಿಸಿದನು (೧೬-೧೭). ತಮಗೆ ಅತ್ಯಂತ ಆಪ್ತನಾದ ಬಲರಾಮನು ಬಂದಿರುವುದನ್ನು ಕೇಳಿ ಧೃತರಾಷ್ಟ್ರಾದಿಗಳು ಬಹಳ ಸಂತೋಷದಿಂದ ಮಂಗಳದ್ರವ್ಯವನ್ನು ಕೈಯಲ್ಲಿ ಹಿಡಿದು ಅವನನ್ನು ಎದುರುಗೊಳ್ಳುವುದಕ್ಕೆ ಹೋದರು. ಅವನ ಬಳಿಗೆ ಹೋಗಿ ಶಾಸ್ತ್ರೋಕ್ತ ವಿಧಾನದಿಂದ ಗೋವು, ಅರ್ಘ್ಯಾದಿಗಳನ್ನಿತ್ತು ಸತ್ಕರಿಸಿದರು. ಅವರಲ್ಲಿ ಬಲರಾಮನ ಮಹಿಮೆಯನ್ನರಿತವರು ಆತನಿಗೆ ತಲೆಬಾಗಿ ವಂದಿಸಿದರು (೧೮-೧೯). ಅನಂತರ ಬಂಧುಗಳೆಲ್ಲರ ಕುಶಲವನ್ನೂ ಆರೋಗ್ಯವನ್ನೂ

---

೧ ಬಾಹ್ಲಿಕ (ಬಾಹ್ಲೀಕ) ಈತನು ಕುರುವಂಶದ ಒಬ್ಬ ರಾಜನೆಂದೂ ಶಂತನುವಿಗೆ ತಮ್ಮನೆಂದೂ ತಿಳಿದುಬರುತ್ತದೆ. ಭೀಮಸೇನನಿಂದ ಈತನ ವಧೆಯಾಗುತ್ತದೆ.

ಉಗ್ರಸೇನಃ ಕ್ಷಿತೀಶೇಶೋ ಯದ್ ವ ಆಜ್ಞಾಪಯತ್ ಪ್ರಭುಃ।
ತದವ್ಯಗ್ರಧಿಯಃ ಶ್ರುತ್ವಾ ಕುರುಧ್ವಂ ಮಾವಿಲಂಬಿತಮ್ ॥ ೨೧

ಯದ್ ಯೂಯಂ ಬಹವಸ್ತ್ವೇಕಂ ಜಿತ್ವಾಧರ್ಮೇಣ ಧಾರ್ಮಿಕಮ್
ಅಬಧ್ನೀತಾಥ ತನ್ಮೃಷ್ಯೇ ಬಂಧೂನಾಮೈಕ್ಯಕಾಮ್ಯಯಾ ॥ ೨೨

ವೀರ್ಯಶೌರ್ಯಬಲೋನ್ನದ್ಧಮಾತ್ಮಶಕ್ತಿಸಮಂ ವಚಃ।
ಕುರವೋ ಬಲದೇವಸ್ಯ ನಿಶಮ್ಯೋಚುಃ ಪ್ರಕೋಪಿತಾಃ ॥ ೨೩

ಅಹೋ ಮಹಚ್ಚಿತ್ರಮಿದಂ ಕಾಲಗತ್ಯಾ ದುರತ್ಯಯಾ।
ಆರುರುಕ್ಷತ್ಯುಪಾನದ್ ವೈ ಶಿರೋ ಮುಕುಟಸೇವಿತಮ್ ॥ ೨೪

ಏತೇ ಯೌನೇನ ಸಂಬದ್ಧಾಃ ಸಹಶಯ್ಯಾಸನಾಶನಾಃ।
ವೃಷ್ಣಯಸ್ತುಲ್ಯತಾಂ ನೀತಾ ಅಸ್ಮದ್ದತ್ತನೃಪಾಸನಾಃ ॥ ೨೫

ಚಾಮರವ್ಯಜನೇ ಶಂಖಮಾತಪತ್ರಂ ಚ ಪಾಂಡುರಾಮ್।
ಕಿರೀಟಮಾಸನಂ ಶಯ್ಯಾಂ ಭುಂಜಂತ್ಯಸ್ಮದುಪೇಕ್ಷಯಾ ॥ ೨೬

ಪರಸ್ಪರವಾಗಿ ವಿಚಾರಿಸಿ ಎಲ್ಲರೂ ಕ್ಷೇಮದಲ್ಲಿದ್ದಾರೆಂದು ತಿಳಿದಮೇಲೆ ಬಲಭದ್ರನು ಗಂಭೀರವಾದ ಈ ನುಡಿಯನ್ನಾಡಿದನು (೨೦). "ಕೌರವರೆ, ಪ್ರಭುವಾದ ಉಗ್ರಸೇನ ಮಹಾರಾಜನು ಆಜ್ಞಾಪಿಸಿರುವುದನ್ನು ಕೇಳಿರಿ. ಶಾಂತಮನಸ್ಕರಾಗಿ ಅದನ್ನು ಆಲಿಸಿ, ತಡಮಾಡದೆ ಅದರಂತೆ ನಡೆದುಕೊಳ್ಳಿರಿ. ಏನೆಂದರೆ, "ಧಾರ್ಮಿಕನೂ ಏಕಾಕಿಯೂ ಆಗಿದ್ದ ಸಾಂಬನನ್ನು ನೀವು ಬಹುಮಂದಿ ಸೇರಿ ಅಧರ್ಮಮಾರ್ಗದಿಂದ ಗೆದ್ದು ಸೆರೆಹಿಡಿದಿದ್ದೀರಷ್ಟೆ ಬಂಧುಗಳಾದ ನಮ್ಮಲ್ಲಿ ಒಗ್ಗಟ್ಟಿರಲೆಂದು ನಿಮ್ಮನ್ನು ಮನ್ನಿಸಿದ್ದೇನೆ" (ಕೂಡಲೆ ಸಾಂಬನನ್ನು ಕರೆತಂದು ಒಪ್ಪಿಸಿರಿ) (೨೧-೨೨). ತನ್ನ ಸಾಮರ್ಥ್ಯಕ್ಕೆ ಒಪ್ಪುವಂತೆ ವೀರ್ಯಶೌರ್ಯ ಪರಾಕ್ರಮಯುಕ್ತವಾದ ಬಲದೇವನ ನುಡಿಯನ್ನು ಕೇಳಿ ಕೆರಳಿದ ಕೌರವರು ಉಗ್ಗಡಿಸಿದರು: "ಓಹೋ! ಏನಚ್ಚರಿ ಇದು! ಕಾಲಗತಿ ಅಲಂಘ್ಯವೇ ಸರಿ! ಕಾಲಲ್ಲಿರುವ ಚಪ್ಪಲಿ ಕಿರೀಟಧಾರಿಯಾದ ಶಿರಸ್ಸನ್ನೇರಲು ಹವಣಿಸುತ್ತಿದೆ! (೨೩-೨೪). ಈ ಯಾದವರು ಹೆಣ್ಣುಕೊಟ್ಟ[೧] ಸಂಬಂಧಿಗಳೆಂದು ತಿಳಿದು

---

೧ ಕುಂತಿಯ ವಸುದೇವನ ತಂಗಿಯಾದ್ದರಿಂದ ಉಭಯರೂ ಬಂಧುಗಳೇ.

ಅಲಂ ಯದೂನಾಂ ನರದೇವಲಾಂಛನೈ-
ರ್ದಾತುಃ ಪ್ರತೀಪೈಃ ಫಣಿನಾಮಿವಾಮೃತಮ್ ।
ಯೇಽಸ್ಮತ್ಪ್ರಸಾದೋಪಚಿತಾ ಹಿ ಯಾದವಾ
ಆಜ್ಞಾಪಯಂತ್ಯದ್ಯ ಗತತ್ರಪಾ ಬತ ॥ ೨೭

ಕಥಮಿಂದ್ರೋಽಪಿ ಕುರುಭಿರ್ಭೀಷ್ಮದ್ರೋಣಾರ್ಜುನಾದಿಭಿಃ ।
ಅದತ್ತಮವರುಂಧೀತ ಸಿಂಹಗ್ರಸ್ತಮಿವೋರಣಃ ॥ ೨೮

ಶ್ರೀಶುಕ ಉವಾಚ-
ಜನ್ಮಬಂಧುಶ್ರಿಯೋನ್ನದ್ಧಮದಾಸ್ತೇ ಭರತರ್ಷಭ ।
ಆಶ್ರಾವ್ಯ ರಾಮಂ ದುರ್ವಾಚ್ಯಮಸಭ್ಯಾಃ ಪುರಮಾವಿಶನ್ ॥ ೨೯

ದೃಷ್ಟ್ವಾ ಕುರೂಣಾಂ ದೌಃಶೀಲ್ಯಂ ಶ್ರುತ್ವಾವಾಚ್ಯಾನಿ ಚಾಚ್ಯುತಃ ।
ಅವೋಚತ್ ಕೋಪಸಂರಬ್ಧೋ ದುಷ್ಪ್ರೇಕ್ಷ್ಯಃ ಪ್ರಹಸನ್ಮುಹುಃ ॥ ೩೦

ಮಲಗುವುದು, ಕುಳಿತುಕೊಳ್ಳುವುದು, ಊಟಮಾಡುವುದು- ಮೊದಲಾದ್ದನ್ನು ಜೊತೆಗೆ ಮಾಡಿ ಇವರನ್ನು ನಮ್ಮ ಮಟ್ಟಕ್ಕೆ ಏರಿಸಿದೆವು. ಇವರಿಗೆ ರಾಜ್ಯವನ್ನಿತ್ತು ಸಿಂಹಾಸನದಮೇಲೆ ಕುಳ್ಳಿರಿಸಿದೆವು ! ನಾವುಉದಾಸೀನರಾದ್ದರಿಂದ ಇವರು ಚಾಮರ, ವ್ಯಜನ, ಶಂಖ, ಶ್ವೇತಚ್ಛತ್ರ, ಕಿರೀಟ, ಸಿಂಹಾಸನ, ಶಯ್ಯೆ ಮೊದಲಾದ ರಾಜೋಪಚಾರಗಳನ್ನು ಅನುಭವಿಸುತ್ತಿದ್ದಾರೆ (೨೫-೨೬). ನಮಗೆ ವಿರುದ್ಧವಾದ ಈ ಯಾದವರಿಗೆ ಇನ್ನು ರಾಜಮರ್ಯಾದೆಗಳು ಬೇಡ. ಹಾವಿಗೆ ಹಾಲೆರೆದಂತಾಯಿತು ! ನಮ್ಮ ಅನುಗ್ರಹದಿಂದ ಮೇಲಕ್ಕೆ ಬಂದ ಯಾದವರು ನಾಚಿಕೆಗೆಟ್ಟು ಈಗ ನಮ್ಮ ಮೇಲೇಯೇ ಆಜ್ಞೆಯನ್ನೀಯಲು ಹೊರಟ್ಟಿದ್ದಾರೆ ! ಅಬ್ಬಾ ! ಭೀಷ್ಮ, ದ್ರೋಣ, ಅರ್ಜುನ ಮೊದಲಾದ ಕುರುವೀರರು ಕೊಡದಿರುವುದನ್ನು ದೇವೇಂದ್ರನೂ ಕಿತ್ತುಕೊಳ್ಳಲಾರ. ಸಿಂಹದ ವಶವಾದ್ದನ್ನು ಕುರಿಯು ಕಿತ್ತು ಕೊಂಡೀತೇ '' ಎಂದರು (೨೭-೨೮). ಭರತರ್ಷಭ-ಪರೀಕ್ಷಿತರಾಜ, ಹೀಗೆ ಕುಲಮದ ಮತ್ತು ಬಂಧುಗಳ ನೆರವು, ಐಶ್ವರ್ಯಗಳಿಂದಾದ ಮದ-ಇವುಗಳಿಂದ ಕೊಬ್ಬಿದ ಅಸಭ್ಯರಾದ ಕೌರವರು ಬಲರಾಮನೆದುರಿಗೆ ಆಡಬಾರದ ಮಾತನ್ನಾಡಿ ನಗರಕ್ಕೆ ಹಿಂದಿರುಗಿದರು (೨೯). ಕೌರವರ ಕೆಟ್ಟ ನಡತೆಯನ್ನು ಕಂಡು ಅವರಾಡಿದ ಅವಾಚ್ಯ ನುಡಿಗಳನ್ನು

ನೂನಂ ನಾನಾಮದೋನ್ನದ್ಧಾಃ ಶಾಂತಿಂ ನೇಚ್ಛಂತ್ಯಸಾಧವಃ।
ತೇಷಾಂ ಹಿ ಪ್ರಶಮೋ ದಂಡಃ ಪಶೂನಾಂ ಲಗುಡೋ ಯಥಾ॥ ೩೧

ಅಹೋ ಯದೂನ್ ಸುಸಂರಬ್ಧಾನ್ ಕೃಷ್ಣಂ ಚ ಕುಪಿತಂ ಶನೈಃ।
ಸಾಂತ್ವಯಿತ್ವಾಹಮೇತೇಷಾಂ ಶಮಮಿಚ್ಛನ್ನಿಹಾಗತಃ॥ ೩೨

ತ ಇಮೇ ಮಂದಮತಯಃ ಕಲಹಾಭಿರತಾಃ ಖಲಾಃ।
ತಂ ಮಾಮವಜ್ಞಾಯ ಮುಹುರ್ದುರ್ಭಾಷಾನ್ ಮಾನಿನೋಽಬ್ರುವನ್॥

ನೋಗ್ರಸೇನಃ ಕಿಲ ವಿಭುರ್ಭೋಜವೃಷ್ಣ್ಯಂಧಕೇಶ್ವರಃ।
ಶಕ್ರಾದಯೋ ಲೋಕಪಾಲಾ ಯಸ್ಯಾದೇಶಾನುವರ್ತಿನಃ॥ ೩೪

ಸುಧರ್ಮಾಽಽಕ್ರಮ್ಯತೇ ಯೇನ ಪಾರಿಜಾತೋಽಮರಾಂಘ್ರಿಪಃ।
ಆನೀಯ ಭುಜ್ಯತೇ ಸೋಽಸೌ ನ ಕಿಲಾಧ್ಯಾಸನಾರ್ಹಣಃ॥ ೩೫

ಕೇಳಿದಮೇಲೆ, ಅಚ್ಯುತನಾದ ಬಲರಾಮನು ರೋಷಾವಿಷ್ಟನಾದನು. ಅವನ ರೂಪ ರೌದ್ರವಾಯಿತು. ಅವನು ಕೆಕ್ಕರಿಸಿ ನಗುತ್ತ "ನಾನಾಬಗೆಯ ಮದಗಳಿಂದ ಸೊಕ್ಕಿರುವ ದುರುಳರು ಶಾಂತಿಯನ್ನು ಬಯಸುವುದಿಲ್ಲವೆಂಬುದು ದಿಟ. ಪಶುಗಳಿಗೆ ದೊಣ್ಣೆಯೇ ಮದ್ದು! ಹಾಗೆ ದಂಡೋಪಾಯವೇ ಇವರನ್ನು ಬಗ್ಗಿಸಬೇಕು (೩೦-೩೧). ಆಹಾ! ಕೆರಳಿದ ಯಾದವರನ್ನೂ ಕುಪಿತನಾದ ಕೃಷ್ಣನನ್ನೂ ನಾನು ಮೆಲ್ಲಗೆ ಸಂತೈಸಿ, ಈ ಕೌರವರಿಗೆ ಒಳ್ಳೆಯದಾಗಲೆಂಬ ಉದ್ದೇಶದಿಂದ ಶಾಂತಿಯನ್ನು ಬಯಸಿ ಇಲ್ಲಿಗೆ ಬಂದೆನು. ಇವರಾದರೋ ಕಲಹದಲ್ಲಿತೊಡಗತಕ್ಕ ಬುದ್ಧಿಗೇಡಿಗಳಾದ ಖಳಜನರು. ಸದುದ್ದೇಶದಿಂದ ಬಂದ ನನ್ನನ್ನು ಈ ದುರಹಂಕಾರಿಗಳು ಅಲಕ್ಷಿಸಿ ಮತ್ತೆ ಮತ್ತೆ ಕೆಟ್ಟಮಾತುಗಳನ್ನಾಡಿದರಲ್ಲವೆ? (೩೨-೩೩). ದೇವೇಂದ್ರಾದಿಲೋಕಪಾಲರು ಯಾರ ಆಜ್ಞೆಯನ್ನು ಪಾಲಿಸುತ್ತಾರೋ ಯಾರು ಭೋಜ, ವೃಷ್ಣಿ ಅಂಧಕವಂಶೀಯರಿಗೆ ಪ್ರಭುವೋ ಆ ಉಗ್ರಸೇನಮಹಾರಾಜನು ಇವರ ದೃಷ್ಟಿಯಲ್ಲಿ ರಾಜನೇ ಅಲ್ಲ! (೩೪). ಯಾವ ವೀರನು ಇಂದ್ರ ಸಭೆಯಾದ ಸುಧರ್ಮವನ್ನು ಆಕ್ರಮಿಸಿದನೋ, ಪಾರಿಜಾತವೆಂಬ ದೇವವೃಕ್ಷವನ್ನು ಕಿತ್ತು ತಂದು ಅನುಭವಿಸುತ್ತಿರುವನೋ ಅಂತಹ ಕೃಷ್ಣನು ಇವರ ಜೊತೆಗೆ ಕುಳಿತುಕೊಳ್ಳಲು ಅರ್ಹನಲ್ಲವಂತೆ! ಅಖಿಲೇಶ್ವರಿಯಾದ ಸಾಕ್ಷಾತ್

ಯಸ್ಯ ಪಾದಯುಗಂ ಸಾಕ್ಷಾತ್ ಶ್ರೀರುಪಾಸ್ತೇಽಖಿಲೇಶ್ವರಿ ।
ಸ ನಾರ್ಹತಿ ಕಿಲ ಶ್ರೀಶೋ ನರದೇವಪರಿಚ್ಛದಾನ್ ॥ ೩೬

ಯಸ್ಯಾಂಘ್ರಿಪಂಕಜರಜೋಽಖಿಲಲೋಕಪಾಲೈ-
ರ್ಮೌಲ್ಯುತ್ತಮೈರ್ಧೃತಮುಪಾಸಿತತೀರ್ಥತೀರ್ಥಮ್ ।
ಬ್ರಹ್ಮಾ ಭವೋಽಹಮಪಿ ಯಸ್ಯ ಕಲಾಃ ಕಲಾಯಾಃ
ಶ್ರೀಶ್ಚೋದ್ವಹೇಮ ಚಿರಮಸ್ಯ ನೃಪಾಸನಂ ಕ್ವ॥ ೩೭

ಭುಂಜತೇ ಕುರುಭಿರ್ದತ್ತಂ ಭೂಖಂಡಂ ವೃಷ್ಣಯಃ ಕಿಲ ।
ಉಪಾನಹಃ ಕಿಲ ವಯಂ ಸ್ವಯಂ ತು ಕುರವಃ ಶಿರಃ ॥ ೩೮

ಅಹೋ ಐಶ್ವರ್ಯಮತ್ತಾನಾಂ ಮತ್ತಾನಾಮಿವ ಮಾನಿನಾಮ್ ।
ಅಸಂಬದ್ಧಾ ಗಿರೋ ರೂಕ್ಷಾಃ ಕಃ ಸಹೇತಾನುಶಾಸಿತಾ ॥ ೩೯

ಅದ್ಯ ನಿಷ್ಕೌರವೀಂ ಪೃಥ್ವೀಂ ಕರಿಷ್ಯಾಮೀತ್ಯಮರ್ಷಿತಃ ।
ಗೃಹೀತ್ವಾ ಹಲಮುತ್ತಸ್ಥೌ ದಹನ್ನಿವ ಜಗತ್ತ್ರಯಮ್ ॥ ೪೦

ಲಕ್ಷ್ಮೀದೇವಿಯು ಯಾವಾತನ ಪಾದಯುಗಳನ್ನು ಸೇವಿಸುತ್ತಿರುವಳೋ ಅಂತಹ ಲಕ್ಷ್ಮೀಪತಿಗೆ ರಾಜಯೋಗ್ಯವಾದ ಚಿಹ್ನೆಗಳನ್ನು ಧರಿಸಲು ಅರ್ಹತೆ ಇಲ್ಲವಂತೆ ! (೩೫-೩೬). ಯಾವಾತನ ಪಾದಪದ್ಮದ ಧೂಳಿಯು ಸರ್ವಜನಸೇವ್ಯವಾದ ಗಂಗಾದಿತೀರ್ಥಗಳನ್ನೂ ಪಾವನಗೊಳಿಸುವ ತೀರ್ಥವಾಗಿದೆಯೋ, ಯಾವ ಧೂಳಿಯನ್ನು ಸಮಸ್ತಲೋಕಪಾಲರೂ ಶ್ರೇಷ್ಠವಾದ ತಮ್ಮ ಶಿರಸ್ಸುಗಳಲ್ಲಿ ಧರಿಸುತ್ತಾರೋ, ಯಾವಾತನ ಅಂಶದಲ್ಲಿ ಅಂಶಗಳಾದ ಬ್ರಹ್ಮರುದ್ರರೂ ನಾನೂ ಲಕ್ಷ್ಮೀದೇವಿಯೂ ಆ ಧೂಳಿಯನ್ನು ಶಿರಸ್ಸಿನಲ್ಲಿ ಸದಾ ಮುಡಿಯುತ್ತೇವೆಯೋ ಆ ಮಹಾತ್ಮನಿಗೆ ಸಿಂಹಾಸನವೆಲ್ಲಿಯದು ! (೩೭). ಕೌರವರು ದಾನಮಾಡಿದ ಭೂಮಿಯ ತುಣುಕನ್ನು ಯಾದವರು ಅನುಭವಿಸುತ್ತಿದ್ದಾರಲ್ಲವೆ ! ನಾವು ಚಪ್ಪಲಿಗಳು, ತಾವು ಕೌರವರು ಶಿರಸ್ಸು, ಅಲ್ಲವೆ ? ಅಬ್ಬಾ ! ಐಶ್ವರ್ಯ ಬಲದಿಂದ ಕೊಬ್ಬಿರುವ ದುರಹಂಕಾರಿಗಳಾದ ಆ ಕುರುವಂಶೀಯರ ಕಠೋರ ವಾಕ್ಯಗಳು ಹೆಂಡಕುಡುಕರ ಮಾತುಗಳಂತೆ ಅಸಂಬದ್ಧವಾಗಿವೆ. ದಂಡಧಾರಿಯಾದ ಯಾವಾತನು ಇವುಗಳನ್ನು ಸಹಿಸಿಕೊಂಡಾನು ?'' ಎಂದು ಗರ್ಜಿಸಿದನು (೩೮-೩೯). ''ಇಂದು ಈ ಪೃಥ್ವಿಯಲ್ಲಿ ಕುರುವಂಶವೇ ಇಲ್ಲದಂತೆ

ಲಾಂಗಲಾಗ್ರೇಣ ನಗರಮುದ್ವಿದಾರ್ಯ ಗಜಾಹ್ವಯಮ್ ।
ವಿಚಕರ್ಷ ಸ ಗಂಗಾಯಾಂ ಪ್ರಹರಿಷ್ಯನ್ನಮರ್ಷಿತಃ ॥ ೪೧

ಜಲಯಾನಮಿವಾಘೂರ್ಣಂ ಗಂಗಾಯಾಂ ನಗರಂ ಪತತ್ ।
ಆಕೃಷ್ಯಮಾಣಮಾಲೋಕ್ಯ ಕೌರವಾ ಜಾತಸಂಭ್ರಮಾಃ ॥ ೪೨

ತಮೇವ ಶರಣಂ ಜಗ್ಮುಃ ಸಕುಟುಂಬಾ ಜಿಜೀಷವಃ ।
ಸಲಕ್ಷ್ಮಣಂ ಪುರಸ್ಕೃತ್ಯ ಸಾಂಬಂ ಪ್ರಾಂಜಲಯಃ ಪ್ರಭುಮ್ ॥ ೪೩

ರಾಮ ರಾಮಾಖಿಲಾಧಾರ ಪ್ರಭಾವಂ ನ ವಿಧಾಮ ತೇ ।
ಮೂಢಾನಾಂ ನಃ ಕುಬುದ್ಧೀನಾಂ ಕ್ಷಂತುಮರ್ಹಸ್ಯತಿಕ್ರಮಮ್ ॥ ೪೪

ಸ್ಥಿತ್ಯುತ್ಪತ್ತ್ಯಪ್ಯಯಾನಂ ತ್ವಮೇಕೋ ಹೇತುರ್ನಿರಾಶ್ರಯಃ ।
ಲೋಕಾನ್ ಕ್ರೀಡನಕಾನೀಶ ಕ್ರೀಡತಸ್ತೇ ವದಂತಿ ಹಿ ॥ ೪೫

ತೊಡೆದುಹಾಕುವೆನು'' ಎನ್ನುತ್ತ ಮೂರು ಲೋಕಗಳನ್ನೂ ಸುಡುವನೋ ಎಂಬಂತೆ, ಹಲಾಯುಧವನ್ನು ಹಿಡಿದು ಎದ್ದುನಿಂತನು (೪೦). ಕ್ರೋಧೋದ್ದೀಪಿತನಾದ ಬಲಭದ್ರನು ಹಲಾಯುಧದಿಂದ ನೆಲವನ್ನು ಕುಕ್ಕಿ ಸಡಿಲಿಸಿ, ಸಂಪೂರ್ಣ ಹಸ್ತಿನಾವತಿಯನ್ನು ಗಂಗೆಯಲ್ಲಿ ಮಗುಚಿಬಿಡಬೇಕೆಂದು ಸೆಳೆದನು. ಸೆಳೆಯಲ್ಪಟ್ಟ ನಗರವು ಗಂಗಾನದಿಯ ಕಡೆಗೆ ಸರಿಯುತ್ತ ಸಮುದ್ರಜಲದಲ್ಲಿದ್ದ ಹಡಗಿನಂತೆ ಅಲ್ಲಾಡಿತು. ಅದನ್ನು ಕಂಡು ಕೌರವರು ಬೆದರಿ ಬಲರಾಮನಿಗೆ ಶರಣಾದರು. ಕುಟುಂಬ ಸಹಿತರಾಗಿ ಬದುಕಿದರೆ ಸಾಕೆಂದು ಲಕ್ಷ್ಮಣಾಸಹಿತನಾದ ಸಾಂಬನನ್ನು ಮುಂದಿಟ್ಟು ಕರೆತಂದು ಬದ್ಧಾಂಜಲಿಗಳಾಗಿ ಆ ಪ್ರಭುವನ್ನು ಈ ಪ್ರಕಾರದಲ್ಲಿ ಸ್ತುತಿಸಿದರು (೪೧-೪೩). ''ರಾಮ, ಬಲರಾಮ, ಸರ್ವಾಧಾರನೆ, ನಿನ್ನ ಮಹಿಮೆಯನ್ನು ನಾವರಿಯೆವು. ಮೂಢರೂ ದುರ್ಬುದ್ಧಿಗಳೂ ಆದ ನಮ್ಮ ತಪ್ಪನ್ನು ಮನ್ನಿಸು! ಜಗತ್ತಿನ ಸೃಷ್ಟಿ ಸ್ಥಿತಿ, ಲಯಗಳಿಗೆ ನೀನೇ ಕಾರಣ. ನಿನ್ನನ್ನು ಧರಿಸತಕ್ಕ ಇನ್ನೊಂದು ಆಧಾರವಿಲ್ಲ. ಹೇ ಈಶ, ಕ್ರೀಡೆಯಲ್ಲಿ ತೊಡಗುವ ನಿನಗೆ ಸಮಸ್ತ ಲೋಕಗಳೂ ಆಟದ ಸಾಮಗ್ರಿಗಳೆಂದು ಬಲ್ಲವರು ಹೇಳುತ್ತಾರಲ್ಲವೆ? (೪೪-೪೫).

ತ್ವಮೇವ ಮೂರ್ಧ್ನೀದಮನಂತ ಲೀಲಯಾ
ಭೂಮಂಡಲಂ ಬಿಭರ್ಷಿ ಸಹಸ್ರಮೂರ್ಧನ್ ।
ಅಂತೇ ಚ ಯಃ ಸ್ವಾತ್ಮನಿ ರುದ್ಧವಿಶ್ವಃ
ಶೇಷೇಽದ್ವಿತೀಯಃ ಪರಿಶಿಷ್ಯಮಾಣಃ ॥ ೪೬

ಕೋಪಸ್ತೇಽಖಿಲಶಿಕ್ಷಾರ್ಥಂ ನ ದ್ವೇಷಾನ್ನ ಚ ಮತ್ಸರಾತ್ ।
ಬಿಭ್ರತೋ ಭಗವನ್ ಸತ್ತ್ವಂ ಸ್ಥಿತಿಪಾಲನತತ್ಪರ ॥ ೪೭

ನಮಸ್ತೇ ಸರ್ವಭೂತಾತ್ಮನ್ ಸರ್ವಶಕ್ತಿಧರಾವ್ಯಯ ।
ವಿಶ್ವಕರ್ಮನ್ ನಮಸ್ತೇಽಸ್ತು ತ್ವಾಂ ವಯಂ ಶರಣಂ ಗತಾಃ ॥ ೪೮

ಶ್ರೀ ಶುಕ ಉವಾಚ-

ಏವಂ ಪ್ರಪನ್ನೈಃ ಸಂವಿಗ್ನೈರ್ವೇಪಮಾನಾಯನೈರ್ಬಲಃ ।
ಪ್ರಸಾದಿತಃ ಸುಪ್ರಸನ್ನೋ ಮಾ ಭೈಷ್ಟೇತ್ಯಭಯಂ ದದೌ ॥ ೪೯

ದುರ್ಯೋಧನಃ ಪಾರಿಬರ್ಹಂ ಕುಂಜರಾನ್ ಷಷ್ಟಿಹಾಯನಾನ್ ।
ದದೌ ಚ ದ್ವಾದಶಶತಾನ್ಯಯುತಾನಿ ತುರಂಗಮಾನ್ ॥ ೫೦

ಹೇ ಸಹಸ್ರಶೀರ್ಷ ಅನಂತ, ಈ ಭೂಮಂಡಲವನ್ನು ಲೀಲೆಯಿಂದ ಶಿರಸ್ಸಿನಲ್ಲಿ ಹೊತ್ತಿರುವೆ. ಮಹಾಪ್ರಳಯದಲ್ಲಿ ಈ ವಿಶ್ವವನ್ನು ನಿನ್ನಲ್ಲಿ ಅಡಗಿಸಿಕೊಂಡು ಅದ್ವಿತೀಯನಾಗಿ ಉಳಿದು ವಿಶ್ರಮಿಸುತ್ತೀಯೆ (೪೬). ನಿನಗೆ ಕೋಪಬರುವುದು ಎಲ್ಲ ಜನರ ಶಿಕ್ಷಣೆಗಾಗಿಯೇ ಹೊರತು, ದ್ವೇಷದಿಂದಲ್ಲ; ಮತ್ಸರದಿಂದಲ್ಲ. ಹೇ ಭಗವನ್, ಸಕಲಪ್ರಾಣಿಗಳನ್ನೂ ರಕ್ಷಿಸುವ ನಿನ್ನ ಕೋಪವು ಅವರ ಸ್ಥಿತಿಗಾಗಿ, ಪಾಲನೆಗಾಗಿ (೪೭). ಸರ್ವಭೂತಾತ್ಮನೆ, ಸರ್ವಶಕ್ತಿಧರನೆ, ಶಾಶ್ವತನೆ, ನಿನಗೆ ನಮಸ್ಕಾರ. ಹೇ ವಿಶ್ವಕರ್ತ, ನಿನಗೆ ನಮಸ್ಕಾರ. ನಿನಗೆ ನಾವು ಶರಣಾಗಿದ್ದೇವೆ' ಈ ಪ್ರಕಾರವಾಗಿ ಸ್ತುತಿಸುತ್ತ ಶರಣಾಗಿ ನಡುಗುತ್ತಿದ್ದ ಕೌರವರನ್ನು ಕಂಡು ಬಲಭದ್ರನ ಕೋಪ ಸರಿಯಿತು. ಅವನು ಪ್ರಸನ್ನನಾಗಿ 'ಹೆದರಬೇಡಿರಿ' ಎಂದು ಅಭಯವನ್ನಿತ್ತನು (೪೮-೪೯). ಅನಂತರ ದುರ್ಯೋಧನನು ಅರುವತ್ತು ವರ್ಷ ಪ್ರಾಯದ ಹನ್ನೆರಡುನೂರು ಆನೆಗಳನ್ನೂ ಹತ್ತುಸಾವಿರ ಕುದುರೆಗಳನ್ನೂ ಚಿನ್ನದ ತಗಡುಗಳನ್ನು ಹೊದಿಸಿದ್ದರಿಂದ ಸೂರ್ಯನಂತೆ ಬೆಳಗುತ್ತಿದ್ದ ಆರು ಸಾವಿರ

ರಥನಾಂ ಷಟ್ ಸಹಸ್ರಾಣಿ ರೌಕ್ಮಾಣಾಂ ಸೂರ್ಯವರ್ಚಸಾಮ್ ।
ದಾಸೀನಾಂ ನಿಷ್ಕಕಂಠೀನಾಂ ಸಹಸ್ರಂ ದುಹಿತೃವತ್ಸಲಃ ॥ ೫೧

ಪ್ರತಿಗೃಹ್ಯ ತು ತತ್ ಸರ್ವಂ ಭಗವಾನ್ ಸಾತ್ವತರ್ಷಭಃ ।
ಸಸುತಃ ಸಸ್ನುಷಃ ಪ್ರಾಗಾತ್ ಸುಹೃದ್ಭಿರಭಿನಂದಿತಃ ॥ ೫೨

ತತಃ ಪ್ರವಿಷ್ಟಃ ಸ್ವಪುರಂ ಹಲಾಯುಧಃ
ಸಮೇತ್ಯ ಬಂಧೂನನುರಕ್ತಚೇತಸಃ ।
ಶಶಂಸ ಸರ್ವಂ ಯದುಪುಂಗವಾನಾಂ
ಮಧ್ಯೇ ಸಭಾಯಾಂ ಕುರುಷು ಸ್ವಚೇಷ್ಟಿತಮ್ ॥ ೫೩

ಅದ್ಯಾಪಿ ಚ ಪುರಂ ಹ್ಯೇತತ್ ಸೂಚಯದ್ ರಾಮವಿಕ್ರಮಮ್ ।
ಸಮುನ್ನತಂ ದಕ್ಷಿಣತೋ ಗಂಗಾಯಾಮನುದೃಶ್ಯತೇ ॥ ೫೪

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ಅಷ್ಟಷಷ್ಟಿತಮಾಧ್ಯಾಯಃ

ರಥಗಳನ್ನೂ ಚಿನ್ನದ ಒಡವೆಗಳನ್ನೂ ಧರಿಸಿದ ಒಂದು ಸಾವಿರ ದಾದಿಯರನ್ನೂ ಮಗಳ ಮೇಲಿನ ವಾತ್ಸಲ್ಯದಿಂದ ಅವಳಿಗೆ ಬಳುವಳಿಯಾಗಿ ಕೊಟ್ಟನು (೫೦-೫೧). ಯಾದವೇಂದ್ರನಾದ ಬಲಭದ್ರನು ಅವೆಲ್ಲವನ್ನೂ ಸ್ವೀಕರಿಸಿ, ಮಿತ್ರರಿಂದ ಅಭಿನಂದಿತನಾಗಿ, ಮಗನನ್ನೂ ಸೊಸೆಯನ್ನೂ ಕರೆದುಕೊಂಡು ಪ್ರಯಾಣಮಾಡಿದನು. ಆಮೇಲೆ ಹಲಾಯುಧನು ತನ್ನ ನಗರವನ್ನು ಸೇರಿ, ಅನುರಕ್ತರಾದ ಬಂಧುಗಳೊಡನೆ ಬೆರತು, ತನಗೂ ಕೌರವರಿಗೂ ನಡೆದ ವೃತ್ತಾಂತವನ್ನು ಯದುಸಭೆಯಲ್ಲಿ ವಿವರಿಸಿದನು (೫೨-೫೩). ಈಗಲೂ ಸಹ ಹಸ್ತಿನಾಪುರವು ಬಲರಾಮನ ಪರಾಕ್ರಮದ ಕುರುಹನ್ನು ಸೂಚಿಸುತ್ತ ಗಂಗಾನದಿಯ ಬಳಿ ದಕ್ಷಿಣಕ್ಕೆ ಎತ್ತರವಾಗಿ ಕಾಣಿಸುತ್ತಿದೆ (೫೪).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಅರುವತ್ತೆಂಟನೆಯ ಅಧ್ಯಾಯ

ಏಕೋನಪ್ತತಿತಮಾಧ್ಯಾಯಃ

ಶ್ರೀ ಶುಕ ಉವಾಚ-

ನರಕಂ ನಿಹತಂ ಶ್ರುತ್ವಾತಥೋದ್ವಾಹಂ ಚ ಯೋಷಿತಾಮ್ ।
ಕೃಷ್ಣೇನೈಕೇನ ಬಹ್ವೀನಾಂ ತದ್ ದಿದೃಕ್ಷುಃ ಸ್ಮ ನಾರದಃ ॥ ೧

ಚಿತ್ರಂ ಬತೈತದೇಕೇನ ವಪುಷಾ ಯುಗಪತ್ ಪೃಥಕ್ ।
ಗೃಹೇಷು ದ್ವ್ಯಷ್ಟಸಾಹಸ್ರಂ ಸ್ತ್ರಿಯ ಏಕ ಉದಾವಹತ್ ॥ ೨

ಇತ್ಯುತ್ಸುಕೋ ದ್ವಾರವತೀಂ ದೇವರ್ಷಿರ್ದ್ರಷ್ಟುಮಾಗಮತ್ ।
ಪುಷ್ಪಿತೋಪವನಾರಾಮದ್ವಿಜಾಲಿಕುಲನಾದಿತಾಮ್ ॥ ೩

ಉತ್ಫುಲ್ಲೇಂದೀವರಾಂಭೋಜಕಹ್ಲಾರಕುಮುದೋತ್ಪಲೈಃ ।
ಛುರಿತೇಷು ಸರಸ್ಸೂಚ್ಚೈಃ ಕೂಜಿತಾಂ ಹಂಸಸಾರಸೈಃ ॥ ೪

ಅಧ್ಯಾಯ ೬೯

ಶ್ರೀಕೃಷ್ಣನು ತನ್ನ ಎಲ್ಲ ಪತ್ನಿಯರ ಮನೆಗಳಲ್ಲಿಯೂ ಏಕಕಾಲದಲ್ಲಿ ಬಹುರೂಪದಿಂದ ಸಂಸಾರ ನಡೆಸುವುದನ್ನು ಕಂಡು ನಾರದರ ವಿಸ್ಮಯ.

ಶುಕಮುನಿಗಳು ಹೇಳಿದರು : ಶ್ರೀಕೃಷ್ಣನು ನರಕಾಸುರನನ್ನು ಸಂಹರಿಸಿ ಬಂದಿಗಳಾಗಿದ್ದ ಬಹುಮಂದಿ ತರುಣಿಯರನ್ನು ಅವನೊಬ್ಬನೇ ಮದುವೆಯಾದನೆಂಬುದನ್ನು ಕೇಳಿ, ಅದನ್ನು ನೋಡಬೇಕೆಂದು ನಾರದ ಮುನಿಗಳಿಗೆ ಇಚ್ಛೆಯುಂಟಾಯಿತು (೧). "ಅಚ್ಚರಿ ಇದು ! ಇರುವ ಒಂದು ದೇಹದಿಂದ ವಿಭಿನ್ನ ಗೃಹಗಳಲ್ಲಿ ಹದಿನಾರುಸಾವಿರ ಸ್ತ್ರೀಯರನ್ನು ಏಕಕಾಲದಲ್ಲಿ ಬೇರೆಬೇರೆಯಾಗಿ ಮದುವೆಯಾದನಂತೆ ! " ಎಂದು ಕೌತುಕಪಡುತ್ತ ದೇವರ್ಷಿಗಳಾದ ನಾರದರು ದ್ವಾರಾವತಿಗೆ ಬಂದರು. ಆ ನಗರದ ಮನೆಮುಂದಿರುವ ತೋಟಗಳಲ್ಲಿಯೂ ಉದ್ಯಾನವನಗಳಲ್ಲಿಯೂ ಹೂಗಳು ಅರಳಿದ್ದವು. ಅಲ್ಲಿ ಮುಸುಕಿದ ಹಕ್ಕಿಗಳೂ ದುಂಬಿಗಳೂ ಧ್ವನಿಗೈಯುತ್ತಿದ್ದವು (೨-೩). ಕೊಳಗಳಲ್ಲಿ ಕಪ್ಪುನೈದಿಲೆ, ತಾವರೆ, ಬಿಳಿಯ ಜಲಪುಷ್ಪ (white water-lily), ಬಿಳಿಯ ನೈದಿಲೆ, ನೈದಿಲೆಗಳು ಅರಳಿ ತುಂಬಿರಲಾಗಿ ಹಂಸಗಳೂ

ಪ್ರಾಸಾದಲಕ್ಷೈರ್ನವಭಿರ್ಜುಷ್ಟಾಂ ಸ್ಫಾಟಿಕರಾಜತೈಃ।
ಮಹಾಮರಕತಪ್ರಖ್ಯೈಃ ಸ್ವರ್ಣರತ್ನಪರಿಚ್ಛದೈಃ॥ ೫

ವಿಭಕ್ತರಥ್ಯಾಪಥಚತ್ವರಾಪಣೈಃ
ಶಾಲಾಸಭಾಭೀ ರುಚಿರಾಂ ಸುರಾಲಯೈಃ।
ಸಂಸಿಕ್ತಮಾರ್ಗಾಂಗಣವೀಥಿದೇಹಲೀಂ
ಪತತ್ಪತಾಕಾಧ್ವಜವಾರಿತಾತಪಾಮ್ ॥ ೬

ತಸ್ಯಾಮಂತಃಪುರಂ ಶ್ರೀಮದರ್ಚಿತಂ ಸರ್ವಧಿಷ್ಣ್ಯಪೈಃ।
ಹರೇಃ ಸ್ವಕೌಶಲಂ ಯತ್ರ ತ್ವಷ್ಟ್ರಾ ಕಾರ್ತ್ಸ್ನ್ಯೇನ ದರ್ಶಿತಮ್ ॥ ೭

ತತ್ರ ಷೋಡಶಭಿಃ ಸದ್ಮಸಹಸ್ರೈಃ ಸಮಲಂಕೃತಮ್।
ವಿವೇಶೈಕತಮಂ ಶೌರೇಃ ಪತ್ನೀನಾಂ ಭವನಂ ಮಹತ್॥ ೮

ವಿಷ್ಟಬ್ಧಂ ವಿದ್ರುಮಸ್ತಂಭೈರ್ವೈದೂರ್ಯಫಲಕೋತ್ತಮೈಃ।
ಇಂದ್ರನೀಲಮಯೈಃ ಕುಡ್ಯೈರ್ಜಗತ್ಯಾ ಚಾಹತತ್ವಿಷಾ॥ ೯

ಸಾರಸಪಕ್ಷಿಗಳೂ ಗಟ್ಟಿಯಾಗಿ ಕಲಕಲನಾದಗೈಯುತ್ತಿದ್ದವು (೪). ಸ್ಫಟಿಕ, ಬೆಳ್ಳಿ, ಮಹಾಮರಕತಗಳಿಂದ ಅಲಂಕೃತವಾದ ಮತ್ತು ಚಿನ್ನ, ರತ್ನಗಳ ಗೃಹೋಪಕರಣಗಳಿಂದ ಕೂಡಿದ ಒಂಭತ್ತು ಲಕ್ಷ ಭವನಗಳು ಆ ನಗರದಲ್ಲಿ ಶೋಭಿಸುತ್ತಿದ್ದವು. ರಾಜಮಾರ್ಗ, ಬೀದಿ, ಚೌಕ, ಅಂಗಡಿಗಳು ವಿಶಾಲವಾಗಿ ವಿಂಗಡಿಸಲ್ಪಟ್ಟಿದ್ದವು. ಅಶ್ವಶಾಲೆ ಮೊದಲಾದ ಶಾಲೆಗಳಿಂದಲೂ ಸಭಾಮಂದಿರಗಳಿಂದಲೂ ದೇವಾಲಯಗಳಿಂದಲೂ ನಗರವು ವಿರಾಜಿಸುತ್ತಿತ್ತು. ರಾಜಮಾರ್ಗ, ಅಂಗಳ, ಬೀದಿ, ಹೊಸ್ತಿಲುಗಳನ್ನು ಚೊಕ್ಕಮಾಡಿ ನೀರನ್ನು ಸಿಂಪಡಿಸಲಾಗಿತ್ತು. ಧ್ವಜಸ್ತಂಭಗಳ ಮೇಲೆ ಹಾರಾಡುವ ಬಾವುಟಗಳು ಬಿಸಿಲು ಬೀಳದಂತೆ ತಡೆಯುತ್ತಿದ್ದವು (೫-೬). ಆ ದ್ವಾರಕೆಯಲ್ಲಿದ್ದ ಶ್ರೀಕೃಷ್ಣನ ಅಂತಃಪುರವು ಸರ್ವಲೋಕಪಾಲರಿಂದಲೂ ಅರ್ಚಿತವಾದದ್ದು. ಅದರ ನಿರ್ಮಾಣದಲ್ಲಿ ವಿಶ್ವಕರ್ಮನು ತನ್ನ ಎಲ್ಲ ಕಲಾಕೌಶಲವನ್ನು ಪೂರ್ಣವಾಗಿ ಮೆರೆಸಿದ್ದನು. ಆ ಅಂತಃಪುರವು ಹದಿನಾರುಸಾವಿರ ಗೃಹಗಳಿಂದ ಶೋಭಿಸುತ್ತಿತ್ತು. ವಾಸುದೇವನ ಪತ್ನಿಯರ ಗೃಹಗಳಲ್ಲಿ ಒಂದು ವಿಶಾಲವಾದ ಭವನವನ್ನು ನಾರದರು ಪ್ರವೇಶಿಸಿದರು! (೭-೮). ಅಲ್ಲಿ ಹವಳದ ಕುಂಭಗಳು ವೈಡೂರ್ಯದ ಹಲಗೆಗಳೊಡನೆ ಆಧಾರವಾಗಿ ನಿಂತಿದ್ದವು. ಇಂದ್ರನೀಲಮಯವಾದ

ವಿತಾನೈರ್ನಿರ್ಮಿತೈಸ್ತ್ವಷ್ಟ್ರಾ ಮುಕ್ತಾದಾಮವಿಲಂಬಿಭಿಃ।
ದಾಂತೈರಾಸನಪರ್ಯಂಕೈರ್ಮಣ್ಯುತ್ತಮಪರಿಷ್ಕೃತೈಃ॥ ೧೦

ದಾಸೀಭಿರ್ನಿಷ್ಕಕಂಠೀಭಿಃ ಸುವಾಸೋಭಿರಲಂಕೃತಮ್।
ಪುಂಭಿಃ ಸಕಂಚುಕೋಷ್ಣೀಷಸುವಸ್ತ್ರಮಣಿಕುಂಡಲೈಃ॥ ೧೧

ರತ್ನಪ್ರದೀಪನಿಕರದ್ಯುತಿಭಿರ್ನಿರಸ್ತ
ಧ್ವಾಂತಂ ವಿಚಿತ್ರವಲಭೀಷು ಶಿಖಂಡಿನೋಽಂಗ।
ನೃತ್ಯಂತಿ ಯತ್ರ ವಿಹಿತಾಗುರುಧೂಪಮಕ್ಷೈ-
ರ್ನಿರ್ಯಾಂತಮೀಕ್ಷ್ಯ ಘನಬುದ್ಧಯ ಉನ್ನದಂತಃ॥ ೧೨

ತಸ್ಮಿನ್ ಸಮಾನಗುಣರೂಪವಯಸ್ಸು ವೇಷ-
ದಾಸೀಸಹಸ್ರಯುತಯಾನುಸವಂ ಗೃಹಿಣ್ಯಾ।
ವಿಪ್ರೋ ದದರ್ಶ ಚಮರವ್ಯಜನೇನ ರುಕ್ಮ-
ದಂಡೇನ ಸಾತ್ವತಪತಿಂ ಪರಿವೀಜಯಂತ್ಯಾ॥ ೧೩

ಗೋಡೆಗಳು. ಮಿರುಮಿರುಗುವ ಇಂದ್ರನೀಲಮಯವಾದ ನೆಲ. ವಿಶ್ವಕರ್ಮನು ನಿರ್ಮಿಸಿದ ಹೊದಿಕೆಯ ಮೇಲ್ಕಟ್ಟುಗಳಲ್ಲಿ (canopy) ಮುತ್ತಿನ ಗೊಂಚಲುಗಳೂ ತೂಗಾಡುತ್ತಿದ್ದವು. ದಂತದಿಂದ ಮಾಡಲ್ಪಟ್ಟ ಪೀಠಗಳೂ, ಮಂಚಗಳೂ ಉತ್ತಮರತ್ನಗಳಿಂದ ಅಲಂಕೃತವಾಗಿದ್ದವು (೯-೧೦). ದುಕೂಲವನ್ನುಟ್ಟು ಕೊರಳಲ್ಲಿ ಚಿನ್ನದ ಪದಕವನ್ನು ಧರಿಸಿದ ದಾಸಿಯರು ಅಲ್ಲಿದ್ದರು. ಕವಚವನ್ನು ಧರಿಸಿ, ಮುಂಡಾಸನ್ನು ಹಾಕಿಕೊಂಡು, ಉತ್ತಮ ವಸ್ತ್ರವನ್ನುಟ್ಟು ಮಣಿಕುಂಡಲಗಳಿಂದ ಶೋಭಿಸುವ ಪುರುಷಸೇವಕರೂ ಅಲ್ಲಿದ್ದರು (೧೧). ರತ್ನ ದೀಪಗಳ ಪ್ರಭೆಯಿಂದಲೇ ಕತ್ತಲೆಯು ತೊಡೆದು ಹೋಗಿತ್ತು. (ಕಿಟಕಿಗಳಿಂದ) ಹೊರಹೊಮ್ಮುವ ಅಗರು, ಧೂಪಗಳ ಹೊಗೆಯನ್ನು ಕಣ್ಣಿಂದ ಕಂಡು ಮೋಡವೆಂದು ಭ್ರಮಿಸಿದ ನವಿಲುಗಳು ಕೇಕೇಹಾಕುತ್ತ ವಿಚಿತ್ರವಾದ ಮೇಲ್ಮಾಳಿಗೆಯ ಮೇಲೆ ಕುಣಿಯುತ್ತಿದ್ದವು. ಏನು ಹೇಳಲಿ! (೧೨). ಆ ಭವನದಲ್ಲಿ ತನಗೆ ಸಮಾನವಾದ ಗುಣರೂಪ ಯೋವೇಷಗಳುಳ್ಳ ಸಾವಿರಾರು ದಾದಿಯರಿಂದ ಪರಿವೃತಳಾದ ರುಕ್ಮಿಣಿಯು ಚಿನ್ನದ ಹಿಡಿಯುಳ್ಳ ಬೀಸಣಿಗೆಯಿಂದ ಶ್ರೀಕೃಷ್ಣನಿಗೆ ಗಾಳಿ ಬೀಸುತ್ತಿದ್ದಳು. ಹೀಗೆ ಸದಾ ಗಾಳಿಬೀಸುತ್ತಿದ್ದ ಮಡದಿಯೊಡನೆ ಕುಳಿತಿದ್ದ

ತಂ ಸಂನಿರೀಕ್ಷ್ಯ ಭಗವಾನ್ ಸಹಸೋತ್ಥಿತಃ ಶ್ರೀ-
ಪರ್ಯಂಕತಃ ಸಕಲಧರ್ಮಭೃತಾಂ ವರಿಷ್ಠಃ।
ಆನಮ್ಯ ಪಾದಯುಗಲಂ ಶಿರಸಾ ಕಿರೀಟ-
ಜುಷ್ಟೇನ ಸಾಂಜಲಿರವೀವಿಶದಾಸನೇ ಸ್ವೇ॥ ೧೪

ತಸ್ಯಾವನಿಜ್ಯ ಚರಣೌ ತದಪಃ ಸ್ವಮೂರ್ಧ್ನಾ
ಬಿಭ್ರಜ್ಜಗದ್ಗುರುತರೋಽಪಿ ಸತಾಂ ಪತಿರ್ಹಿ।
ಬ್ರಹ್ಮಣ್ಯದೇವ ಇತಿ ಯದ್ಗುಣನಾಮ ಯುಕ್ತಂ
ತಸ್ಯೈವ ಯಚ್ಚರಣಶೌಚಮಶೇಷತೀರ್ಥಮ್॥ ೧೫

ಸಂಪೂಜ್ಯ ದೇವಋಷಿವರ್ಯಮೃಷಿಃ ಪುರಾಣೋ
ನಾರಾಯಣೋ ನರಸಖೋ ವಿಧಿನೋದಿತೇನ।
ವಾಣ್ಯಾಭಿಭಾಷ್ಯ ಮಿತಯಾಮೃತಮಿಷ್ಟಯಾ ತಂ
ಪ್ರಾಹ ಪ್ರಭೋ ಭಗವತೇ ಕರವಾಮಹೇ ಕಿಮ್॥ ೧೬

ಶ್ರೀಕೃಷ್ಣನನ್ನು ನಾರದರು ನೋಡಿದರು (೧೩). ನಾರದರನ್ನು ಕಂಡೊಡನೆಯೇ ಧರ್ಮನಿಷ್ಠರಲ್ಲಿ ಅಗ್ರಗಣ್ಯನಾದ ಭಗವಂತನು ರುಕ್ಮಿಣಿಯ ಮಂಚದಿಂದೆದ್ದು ಬಂದು ಅಂಜಲಿಬದ್ಧನಾಗಿ, ಕಿರೀಟಭೂಷಿತವಾದ ಶಿರಸ್ಸಿನಿಂದ ಅವರ ಪಾದಯುಗಳಕ್ಕೆ ವಂದಿಸಿ ತನ್ನ ಪೀಠದಲ್ಲಿ ಮುನಿಗಳನ್ನು ಕುಳ್ಳಿರಿಸಿದನು (೧೪). ತಾನು ಸರ್ವೋತ್ತಮ ಜಗದ್ಗುರುವಾದರೂ ಧಾರ್ಮಿಕಮೂರ್ಧನ್ಯನಾದ ಆ ಸ್ವಾಮಿಯು ನಾರದರ ಪಾದಗಳನ್ನು ತೊಳೆದು ಆ ತೀರ್ಥವನ್ನು ತನ್ನ ತಲೆಯಮೇಲಿ ಧರಿಸಿದನು. ಯಾವಾತನ ಪಾದೋದಕವಾದ ಗಂಗೆಯು ಸಕಲವನ್ನೂ ಪಾವನಗೊಳಿಸುವ ತೀರ್ಥವಾಗಿದೆಯೋ ಆತನೇ ಹೀಗೆ ಮಾಡಿದನು! ಆದ್ದರಿಂದಲೇ ಭಗವಂತನಿಗೆ ಗುಣಕ್ಕೆ ತಕ್ಕಂತೆ ಬ್ರಹ್ಮಣ್ಯದೇವ[೧] ಎಂಬ ಅನ್ವರ್ಥನಾಮವು ಸಮಂಜಸವಾಗಿದೆ (೧೫). ಈ ರೀತಿಯಲ್ಲಿ ನರಸಖನೂ ಪುರಾಣಋಷಿಯೂ ಆದ ನಾರಾಯಣನು ದೇವರ್ಷಿವರ್ಯನನ್ನು ವಿಧಿಪೂರ್ವಕವಾಗಿ ಪೂಜಿಸಿ, ಅಮೃತದಂತೆ ಸವಿಯಾದ ಪರಿಮಿತವಾಕ್ಯದಿಂದ ಕುಶಲವನ್ನು ವಿಚಾರಿಸಿ "ಸ್ವಾಮಿ, ಭಗವತ್ ಸ್ವರೂಪರಾದ ತಮಗೆ ನಮ್ಮಿಂದ

೧ ಬ್ರಾಹ್ಮಣನೇ ಯಾರಿಗೆ ದೇವತೆಯೋ ಅವನು ಬ್ರಹ್ಮಣ್ಯದೇವ

ಶ್ರೀ ನಾರದ ಉವಾಚ-

ನೈವಾದ್ಭುತಂ ತ್ವಯಿ ವಿಭೋಽಖಿಲಲೋಕನಾಥೇ
ಮೈತ್ರೀ ಜನೇಷು ಸಕಲೇಷು ದಮಃ ಖಲಾನಾಮ್ ।
ನಿಃಶ್ರೇಯಸಾಯ ಹಿ ಜಗತ್ಸ್ಥಿತಿರಕ್ಷಣಾಭ್ಯಾಂ
ಸ್ವೈರಾವತಾರ ಉರುಗಾಯ ವಿದಾಮ ಸುಷ್ಠು ॥ ೧೭

ದೃಷ್ಟಂ ತವಾಂಘ್ರಿಯುಗಲಂ ಜನತಾಪವರ್ಗಂ
ಬ್ರಹ್ಮಾದಿಭಿರ್ಹೃದಿ ವಿಚಿಂತ್ಯಮಗಾಧಬೋಧೈಃ ।
ಸಂಸಾರಕೂಪಪತಿತೋತ್ತರಣಾವಲಂಬಂ
ಧ್ಯಾಯಂಶ್ಚರಾಮ್ಯನುಗೃಹಾಣ ಯಥಾ ಸ್ಮೃತಿಃ ಸ್ಯಾತ್ ॥ ೧೮

ತತೋಽನ್ಯದಾವಿಶದ್ ಗೇಹಂ ಕೃಷ್ಣಪತ್ನ್ಯಾಃ ಸ ನಾರದಃ ।
ಯೋಗೇಶ್ವರೇಶ್ವರಸ್ಯಾಂಗ ಯೋಗಮಾಯಾವಿವಿತ್ಸಯಾ ॥ ೧೯

ಏನಾಗಬೇಕು?'' ಎಂದು ಕೇಳಿದನು (೧೬). ಅದಕ್ಕೆ ನಾರದರು ''ಹೇ ಪ್ರಭೋ, ಸರ್ವಲೋಕೇಶ್ವರನಾದ ನಿನಗೆ ಸಕಲಪ್ರಾಣಿಗಳಲ್ಲಿ ಮೈತ್ರಿಯೂ ಖಳಜನರ ವಿಷಯದಲ್ಲಿ ದಂಡಪ್ರಯೋಗವೂ ಸಜವಾದ್ದರಿಂದ ಅದ್ಭುತವಲ್ಲ. ಧಾರಣಪಾಲನಗಳಿಂದ ಜಗತ್ತಿಗೆ ಮಂಗಳವನ್ನುಂಟುಮಾಡಲು ಸ್ವೇಚ್ಛೆಯಾಗಿ ಅವತರಿಸತಕ್ಕವನು ನೀನು. ಹೇ ಪುಣ್ಯಶ್ಲೋಕ, ಇದನ್ನು ನಾವು ಚೆನ್ನಾಗಿ ಬಲ್ಲೆವು (೧೭). ಜ್ಞಾನನಿಧಿಗಳಾದ ಬ್ರಹ್ಮಾದಿಗಳು ಹೃದಯದಲ್ಲಿ ಯಾವುದನ್ನು ಸಂತತವಾಗಿ ಚಿಂತಿಸುವರೋ ಯಾವುದು ಜನತೆಗೆ ಶ್ರೇಯಸ್ಸನ್ನು ಕೊಡುವುದೋ ಅಂತಹ ನಿನ್ನ ಪಾದಯುಗಳವನ್ನು ನೋಡಿದ್ದಾಯಿತು. ಸಂಸಾರವೆಂಬ ಭಾವಿಯಲ್ಲಿ ಬಿದ್ದಿರುವವರಿಗೆ ಮೇಲೆಬರಲು ಅವಲಂಬನವಾದ ಈ ಚರಣ ಯುಗವನ್ನು ಧ್ಯಾನಿಸುತ್ತ ತಿರುಗಾಡುತ್ತಿರುವೆನು. ಸದಾ ಅದರ ಸ್ಮೃತಿಯು ನನಗಿರುವಂತೆ ಅನುಗ್ರಹಿಸು'' ಎಂದು ನುಡಿದರು (೧೮). ಅನಂತರ ಆ ನಾರದರು ಶ್ರೀಕೃಷ್ಣ ಪತ್ನಿಯ ಇನ್ನೊಂದು ಮನೆಗೆ ಹೋದರು! ಯೋಗೇಶ್ವರೇಶ್ವರನ ಯೋಗ ಮಾಯಾಶಕ್ತಿಯನ್ನು ತಿಳಿಯುವುದು ಅವರ ಉದ್ದೇಶವಾಗಿತ್ತು! (೧೯).

ದೀವ್ಯಂತಮಕ್ಷೈಸ್ತತ್ರಾಪಿ ಪ್ರಿಯಯಾ ಚೋದ್ಧವೇನ ಚ।
ಪೂಜಿತಃ ಪರಯಾ ಭಕ್ತ್ಯಾ ಪ್ರತ್ಯುತ್ಥಾನಾಸನಾದಿಭಿಃ॥ ೨೦

ಪೃಷ್ಟಶ್ಚಾವಿದುಷೇವಾಸೌ ಕದಾಽಽಯಾತೋ ಭವಾನಿತಿ।
ಕ್ರಿಯತೇ ಕಿಂ ನು ಪೂರ್ಣಾನಾಮಪೂರ್ಣೈರಸ್ಮದಾದಿಭಿಃ॥ ೨೧

ಅಥಾಪಿ ಬ್ರೂಹಿ ನೋ ಬ್ರಹ್ಮನ್ ಜನ್ಮೈತಚ್ಛೋಭನಂ ಕುರು।
ಸ ತು ವಿಸ್ಮಿತ ಉತ್ಥಾಯ ತೂಷ್ಣೀಮನ್ಯದಗಾತ್ ಗೃಹಮ್ ॥ ೨೨

ತತ್ರಾಪ್ಯಚಷ್ಟ ಗೋವಿಂದಂ ಲಾಲಯಂತಂ ಸುತಾನ್ ಶಿಶೂನ್।
ತತೋಽನ್ಯಸ್ಮಿನ್ ಗೃಹೇಽಪಶ್ಯನ್ಮಜ್ಜನಾಯ ಕೃತೋದ್ಯಮಮ್॥ ೨೩

ಜುಹ್ವಂತಂ ಚ ವಿತಾನಾಗ್ನೀನ್ ಯಜಂತಂ ಪಂಚಭಿರ್ಮಖೈಃ।
ಭೋಜಯಂತಂ ದ್ವಿಜಾನ್ ಕ್ವಾಪಿ ಭುಂಜಾನಮವಶೇಷಿತಮ್॥ ೨೪

ಅಲ್ಲಿ ಶ್ರೀಕೃಷ್ಣನು ಇನ್ನೊಬ್ಬ ತನ್ನ ಕಾಂತೆಯೊಡನೆ ಪಗಡೆಯಾಡುತ್ತ ಉದ್ಧವನ ಜೊತೆಗೆ ಕುಳಿತಿದ್ದನು! ಒಡನೆಯೇ ವಾಸುದೇವನು ಮೇಲೆದ್ದು ಪೀಠಾದಿ ಸತ್ಕಾರ ಸಾಮಗ್ರಿಗಳನ್ನಿತ್ತು ಪರಮಭಕ್ತಿಯಿಂದ ನಾರದರನ್ನು ಪೂಜಿಸಿದನು (೨೦). ಆಮೇಲೆ ಏನನ್ನೂ ಅರಿಯದವನಂತೆ ''ನಾರದರೆ, ತಾವು ಯಾವಾಗ ಬಂದಿರಿ? ಪೂರ್ಣರಾದ ತಮಗೆ ಅಪೂರ್ಣರಾದ ನಮ್ಮಂಥವರಿಂದ ಆಗಬೇಕಾದ್ದಾದರೂ ಏನಿದೆ ? ಆದರೂ, ಬ್ರಾಹ್ಮಣೋತ್ತಮರೆ, ನೀವು ಅಪೇಕ್ಷಿಸುವ ಕಾರ್ಯವೇನು ? ಅದನ್ನು ಹೇಳಿ ನಮ್ಮ ಜನ್ಮವನ್ನು ಸಾರ್ಥಕಪಡಿಸಿರಿ ''ಎಂದು ಬೆಸಗೊಂಡನು. ನಾರದರು ಅಚ್ಚರಿಗೊಂಡು ಮರುಮಾತಾಡದೆ ಎದ್ದು ಮತ್ತೊಂದು ಮನೆಗೆ ತೆರಳಿದರು! (೨೧-೨೨). ಅಲ್ಲಿ ಚಿಕ್ಕಮಕ್ಕಳನ್ನು ಲಾಲಿಸುತ್ತಿದ್ದ ಗೋವಿಂದನನ್ನು ಕಂಡರು! ತರುವಾಯ ಇನ್ನೊಂದು ಭವನಕ್ಕೆ ಹೋಗಿ, ಅಲ್ಲಿ ಸ್ನಾನಕ್ಕೆ ಹೊರಟಿದ್ದ ಶ್ರೀಕೃಷ್ಣನನ್ನು ವೀಕ್ಷಿಸಿದರು! ಒಂದು ಗೃಹದಲ್ಲಿ ತ್ರೇತಾಗ್ನಿಗಳಲ್ಲಿ ಹವನಮಾಡುತ್ತ, ಇನ್ನೊಂದು ಗೃಹದಲ್ಲಿ ಪಂಚಯಜ್ಞಗಳನ್ನು ನಡೆಸುತ್ತ, ಮತ್ತೊಂದು ಗೃಹದಲ್ಲಿ ಬ್ರಾಹ್ಮಣರಿಗೆ ಭೋಜನಮಾಡಿಸುತ್ತ, ಬೇರೊಂದು ಗೃಹದಲ್ಲಿ ಭೋಜನ

ಕ್ವಾಪಿ ಸಂಧ್ಯಾಮುಪಾಸೀನಂ ಜಪಂತಂ ಬ್ರಹ್ಮ ವಾಗ್ಯತಮ್ ।
ಏಕತ್ರ ಚಾಸಿಚರ್ಮಭ್ಯಾಂ ಚರಂತಮಸಿವರ್ತ್ಮಸು ॥ ೨೫

ಅಶ್ವೈರ್ಗಜೈ ರಥೈಃ ಕ್ವಾಪಿ ವಿಚರಂತಂ ಗದಾಗ್ರಜಮ್ ।
ಕ್ವಚಿಚ್ಛಯಾನಂ ಪರ್ಯಂಕೇ ಸ್ತೂಯಮಾನಂ ಚ ವಂದಿಭಿಃ ॥ ೨೬

ಮಂತ್ರಯಂತಂ ಚ ಕಸ್ಮಿಂಶ್ಚಿನ್ಮಂತ್ರಿಭಿಶ್ಚೋದ್ಧವಾದಿಭಿಃ ।
ಜಲಕ್ರೀಡಾರತಂ ಕ್ವಾಪಿ ವಾರಮುಖ್ಯಾಬಲಾವೃತಮ್ ॥ ೨೭

ಕುತ್ರಚಿದ್ ದ್ವಿಜಮುಖ್ಯೇಭ್ಯೋ ದದತಂ ಗಾಃ ಸ್ವಲಂಕೃತಾಃ ।
ಇತಿಹಾಸಪುರಾಣಾನಿ ಶೃಣ್ವಂತಂ ಮಂಗಲಾನಿ ಚ ॥ ೨೮

ಹಸಂತಂ ಹಾಸ್ಯಕಥಯಾ ಕದಾಚಿತ್ ಪ್ರಿಯಯಾ ಗೃಹೇ ।
ಕ್ವಾಪಿ ಧರ್ಮಂ ಸೇವಮಾನಮರ್ಥಕಾಮೌ ಚ ಕುತ್ರಚಿತ್ ॥ ೨೯

ಮಾಡಿಸಿದ ಮೇಲೆ ಅವಶಿಷ್ಟವನ್ನು ಊಟಮಾಡುತ್ತ ಇದ್ದ ಶ್ರೀಕೃಷ್ಣನನ್ನು ಕಂಡರು (೨೩-೨೪). ಒಂದೆಡೆ ಸಂಧ್ಯಾವಂದನೆಯನ್ನು ಮಾಡುತ್ತ, ಇನ್ನೊಂದೆಡೆ ಮೌನವಾಗಿ ಗಾಯತ್ರೀಮಂತ್ರವನ್ನು ಜಪಿಸುತ್ತ, ಮತ್ತೊಂದೆಡೆ ಕತ್ತಿ, ಗುರಾಣಿಗಳನ್ನು ಹಿಡಿದು ಶಸ್ತ್ರಾಭ್ಯಾಸಕ್ರಮದಲ್ಲಿರುತ್ತ, ಬೇರೊಂದೆಡೆ ಅಶ್ವ, ಗಜ, ರಥಗಳನ್ನೇರಿ ಸಂಚರಿಸುತ್ತ ಇದ ಗದಾಗ್ರಜನನ್ನು ನೋಡಿದರು (೨೫-೨೬). ಒಂದು ಭವನದಲ್ಲಿ ಉದ್ಧವನೇ ಮೊದಲಾದ ಮಂತ್ರಿಗಳೊಡನೆ ಮಂತ್ರಾಲೋಚನೆ ಮಾಡುತ್ತ, ಇನ್ನೊಂದು ಭವನದ ಕೊಳದಲ್ಲಿ ವೇಶ್ಯಾಸ್ತ್ರೀಯ ರೊಡನೆ ಜಲಕ್ರೀಡೆಯಾಡುತ್ತ ಮತ್ತೊಂದು ಭವನದಲ್ಲಿ ಅಲಂಕೃತವಾದ ಗೋವುಗಳನ್ನು ದ್ವಿಜಶ್ರೇಷ್ಠರಿಗೆ ದಾನಮಾಡುತ್ತ, ಬೇರೊಂದು ಭವನದಲ್ಲಿ ಮಂಗಳಕರವಾದ ಇತಿಹಾಸಪುರಾಣಗಳನ್ನು ಶ್ರವಣಮಾಡುತ್ತ ಇದ್ದ ಭಗವಂತನನ್ನು ನಾರದರು ವೀಕ್ಷಿಸಿದರು (೨೭-೨೮). ಒಂದು ಮನೆಯಲ್ಲಿ ಕಾಂತೆಯೊಡನೆ ವಿನೋದ ಕಥೆಯಾಡಿ ನಗುತ್ತ ಇನ್ನೊಂದೆಡೆ ಧರ್ಮಕಾರ್ಯ ವನ್ನಾಚರಿಸುತ್ತ, ಮತ್ತೊಂದು ಸ್ಥಳದಲ್ಲಿ ಅರ್ಥಕಾಮಗಳಲ್ಲಿ ತೊಡಗಿರುತ್ತ, ಮಗದೊಂದು ಪ್ರದೇಶದಲ್ಲಿ ಏಕಾಕಿಯಾಗಿ ಕುಳಿತು ಪ್ರಕೃತಿಗೂ ಪರನಾದ ಪರುಮಪುರುಷನನ್ನು ಧ್ಯಾನಿಸುತ್ತ,

ಧ್ಯಾಯಂತಮೇಕಮಾಸೀನಂ ಪುರುಷಂ ಪ್ರಕೃತೇಃ ಪರಮ್ ।
ಶುಶ್ರೂಷಂತಂ ಗುರೂನ್ ಕ್ವಾಪಿ ಕಾಮ್ಯೈರ್ಭೋಗೈಃ ಸಪರ್ಯಯಾ॥ ೩೦

ಕುರ್ವಂತಂ ವಿಗ್ರಹಂ ಕೈಶ್ಚಿತ್ ಸಂಧಿಂ ಚಾನ್ಯತ್ರ ಕೇಶವಮ್ ।
ಕುತ್ರಾಪಿ ಸಹ ರಾಮೇಣ ಚಿಂತಯಂತಂ ಸತಾಂ ಶಿವಮ್ ॥ ೩೧

ಪುತ್ರಾಣಾಂ ದುಹಿತೄಣಾಂ ಚ ಕಾಲೇ ವಿಧ್ಯುಪಯಾಪನಮ್ ।
ದಾರೈರ್ವರೈಸ್ತತ್ಸದೃಶೈಃ ಕಲ್ಪಯಂತಂ ವಿಭೂತಿಭಿಃ॥ ೩೨

ಪ್ರಸ್ಥಾಪನೋಪಾನಯನೈರಪತ್ಯಾನಾಂ ಮಹೋತ್ಸವಾನ್ ।
ವೀಕ್ಷ್ಯ ಯೋಗೇಶ್ವರೇಶಸ್ಯ ಯೇಷಾಂ ಲೋಕಾ ವಿಸಿಸ್ಮಿರೇ ॥ ೩೩

ಯಜಂತಂ ಸಕಲಾನ್ ದೇವಾನ್ ಕ್ವಾಪಿ ಕ್ರತುಭಿರೂರ್ಜಿತೈಃ ।
ಪೂರ್ತಯಂತಂ ಕ್ವಚಿದ್ ಧರ್ಮಂ ಕೂಪಾರಾಮಮಠಾದಿಭಿಃ ॥ ೩೪

ಬೇರೊಂದು ಭವನದಲ್ಲಿ ಇಷ್ಟಾರ್ಥಗಳನ್ನೂ ಭೋಗಗಳನ್ನೂ ಒದಗಿಸಿ ಗುರುಶುಶ್ರೂಷೆ ಮಾಡುತ್ತ ಇದ್ದ ಅಚ್ಯುತನನ್ನು ದೇವಮುನಿಗಳು ಅಲೋಕಿಸಿದರು (೨೯-೩೦). ಹಾಗೆಯೇ ಒಂದು ಮಂತ್ರಶಾಲೆಯಲ್ಲಿ ವೈರಿಗಳೊಡನೆ ಯುದ್ಧವನ್ನು ಹೂಡಬೇಕೆಂದು ಆಲೋಚಿಸುತ್ತ, ಇನ್ನೊಂದರಲ್ಲಿ ಸಂಧಿಯನ್ನು ಸಮರ್ಥಿಸುತ್ತ ಮತ್ತೊಂದರಲ್ಲಿ ಸಜ್ಜನರ ಯೋಗಕ್ಷೇಮಗಳನ್ನು ಬಲರಾಮನೊಡನೆ ಪರ್ಯಾಲೋಚಿಸುತ್ತ, ಮತ್ತೊಂದು ಕಡೆಯಲ್ಲಿ ತನ್ನ ಗಂಡುಮಕ್ಕಳಿಗೆ ಯೋಗ್ಯರಾದ ಮಡದಿಯರನ್ನೂ ಹೆಣ್ಣು ಮಕ್ಕಳಿಗೆ ವರರನ್ನೂ ಗೊತ್ತುಮಾಡಿ ಮುಹೂರ್ತಕ್ಕೆ ಸರಿಯಾಗಿ ವಿವಾಹವಿಧಿಯನ್ನು ವೈಭವದಿಂದ ನಡೆಸುತ್ತಿದ್ದ ಕೇಶವನನ್ನು ನಾರದರು ಅವಲೋಕಿಸಿದರು (೩೧-೩೨). ಒಂದು ಕಡೆ ಹೆಣ್ಣು ಮಕ್ಕಳನ್ನೂ ಅಳಿಯಂದಿರನ್ನೂ ಕಳಿಸಿಕೊಡುತ್ತ ಮತ್ತೊಂದು ಕಡೆ ಗಂಡು ಮಕ್ಕಳನ್ನೂ ಸೊಸೆಯರನ್ನೂ ಬರಮಾಡಿಕೊಳ್ಳುತ್ತ ಲೋಕವಿಸ್ಮಯಕರವಾದ ಮಹೋತ್ಸವಗಳನ್ನಾಚರಿಸುತ್ತಿದ್ದ ಯೋಗೇಶ್ವರನನ್ನು ಈಕ್ಷಿಸಿದರು (೩೩). ಆತನು ಒಂದು ಕಡೆಯಲ್ಲಿ ದಕ್ಷಿಣಾದಿಗಳಿಂದ ಸಮೃದ್ಧವಾದ ಯಜ್ಞಗಳಿಂದ ಸಕಲದೇವತೆಗಳನ್ನೂ ಅರ್ಚಿಸುತ್ತಿದ್ದನು. ಮತ್ತೊಂದು ಕಡೆ ಭಾವಿ, ತೋಟ, ಧರ್ಮಶಾಲೆ ಮೊದಲಾದ ಧರ್ಮಕಾರ್ಯಗಳನ್ನು ನೆರವೇರಿಸುತ್ತಿದ್ದನು.

ಚರಂತಂ ಮೃಗಯಾಂ ಕ್ವಾಪಿ ಹಯಮಾರುಹ್ಯ ಸೈಂಧವಮ್ ।
ಘ್ನಂತಂ ತತಃ ಪಶೂನ್ ಮೇಧ್ಯಾನ್ ಪರೀತಂ ಯದುಪುಂಗವೈಃ ॥ ೩೫

ಅವ್ಯಕ್ತಲಿಂಗಂ ಪ್ರಕೃತಿಷ್ವಂತಃಪುರಗೃಹಾದಿಷು ।
ಕ್ವಚಿಚ್ಚರಂತಂ ಯೋಗೇಶಂ ತತ್ತದ್ಭಾವಬುಭುತ್ಸಯಾ ॥ ೩೬

ಅಥೋವಾಚ ಹೃಷೀಕೇಶಂ ನಾರದಃ ಪ್ರಹಸನ್ನಿವ ।
ಯೋಗಮಾಯೋದಯಂ ವೀಕ್ಷ್ಯ ಮಾನುಷೀಮೀಯುಷೋ ಗತಿಮ್॥

ವಿದಾಮ ಯೋಗಮಾಯಾಸ್ತೇ ದುರ್ದರ್ಶಾ ಅಪಿ ಮಾಯಿನಾಮ್ ।
ಯೋಗೇಶ್ವರಾತ್ಮನ್ ನಿರ್ಭಾತಾ ಭವತ್ಪಾದನಿಷೇವಯಾ ॥ ೩೮

ಅನುಜಾನೀಹಿ ಮಾಂ ದೇವ ಲೋಕಾಂಸ್ತೇ ಯಶಸಾಽಽಪ್ಲುತಾನ್ ।
ಪರ್ಯಟಾಮಿ ತವೋದ್ಗಾಯನ್ ಲೀಲಾಂ ಭುವನಪಾವನೀಮ್ ॥ ೩೯

ಸಿಂಧುದೇಶದ ಅಶ್ವವನ್ನೇರಿ ಯಾದವ ಪರಿವಾರದೊಡನೆ ಮತ್ತೊಂದೆಡೆ ಬೇಟೆಯಾಡುತ್ತ ಭಕ್ಷಣಾರ್ಹವಾದ ಮೃಗಗಳನ್ನು ಬೇಟೆಯಾಡುತ್ತಿದ್ದನು (೩೪-೩೫). ಆ ಯೋಗೇಶ್ವರನು ಈ ನಡುವೆ ಪ್ರಜೆಗಳ ಮಧ್ಯದಲ್ಲಿ ಅಂತಃಪುರದಲ್ಲಿ ಮತ್ತಿತರ ಸ್ಥಳಗಳಲ್ಲಿ ಅವರವರ ಅಭಿಪ್ರಾಯಗಳನ್ನು ತಿಳಿಯುವುದಕ್ಕಾಗಿ ವೇಷವನ್ನು ಮರೆಸಿ ಗೂಢಚರ್ಯೆಯಲ್ಲಿ ಸಂಚರಿಸುತ್ತಿದ್ದನು (೩೬). ಈ ಪ್ರಕಾರದಲ್ಲಿನಾರದರು ಮನುಷ್ಯ ಲೀಲೆಯನ್ನು ಧರಿಸಿದ ಭಗವಂತನ ಯೋಗಮಾಯೆಯನ್ನು ಸಾಕ್ಷಾತ್‌ಕರಿಸಿದಮೇಲೆ ಹೃಷೀಕೇಶನನ್ನು ಕುರಿತು ಮುಗುಳ್ನಗೆ ಬೀರುತ್ತ "ಹೇ ಯೋಗೇಶ್ವರ, ಮಾಯಾಧೀನರಿಗೆ ತಿಳಿಯಲಶಕ್ಯವೂ ಮನಸ್ಸಿನಲ್ಲಿ ಪ್ರಾತಿಭಾಸಿಕವಾಗಿ ತೋರತಕ್ಕದ್ದೂ ಆದ ನಿನ್ನ ಯೋಗಮಾಯಾಶಕ್ತಿಯನ್ನು ನಿನ್ನ ಪಾದಸೇವಾಬಲದಿಂದ ತಿಳಿಯಬಲ್ಲೆನು (ನಿನ್ನ ಪರಮಾರ್ಥವನ್ನು ತಿಳಿಯಲಾರೆ) (೩೭-೩೮). ಸ್ವಾಮಿ, ನನಗೆ ಅನುಜ್ಞೆಯನ್ನು ಕೊಡು. ನಿನ್ನ ಕೀರ್ತಿಯಲ್ಲಿ ಮುಳುಗಿದ ಸಮಸ್ತಲೋಕಗಳಲ್ಲಿಯೂ ಭುವನ ಪಾವನಕಾರವಾದ ನಿನ್ನ ಲೀಲೆಯನ್ನು ಹಾಡುತ್ತ ತಿರುಗಾಡುವೆನು" ಎಂದರು (೩೯). ಆಗ ಭಗವಂತನು "ಹೇ ದ್ವಿಜೋತ್ತಮ, ಧರ್ಮದ ಉಪದೇಶಕನೂ ಕರ್ತನೂ ಅನುಮೋದಕನೂ ನಾನೇ. ಆದ್ದರಿಂದ ಲೋಕಶಿಕ್ಷಣಕ್ಕಾಗಿ ನಾನು ಈ

ಶ್ರೀಭಗವಾನುವಾಚ-

ಬ್ರಹ್ಮನ್ ಧರ್ಮಸ್ಯ ವಕ್ತಾಹಂ ಕರ್ತಾ ತದನುಮೋದಿತಾ ।
ತಚ್ಛಿಕ್ಷಯನ್ ಲೋಕಮಿಮಮಾಸ್ಥಿತಃ ಪುತ್ರ ಮಾ ಖಿದಃ ॥ ೪೦

ಶ್ರೀ ಶುಕಉವಾಚ-

ಇತ್ಯಾಚರಂತಂ ಸದ್ಧರ್ಮಾನ್ ಪಾವನಾನ್ ಗೃಹಮೇಧಿನಾಮ್ ।
ತಮೇವ ಸರ್ವಗೇಹೇಷು ಸಂತಮೇಕಂ ದದರ್ಶ ಹ ॥ ೪೧

ಕೃಷ್ಣಸ್ಯಾನಂತವೀರ್ಯಸ್ಯ ಯೋಗಮಾಯಾಮಹೋದಯಮ್ ।
ಮುಹುರ್ದೃಷ್ಟ್ವಾ ಋಷಿರಭೂದ್ ವಿಸ್ಮಿತೋ ಜಾತಕೌತುಕಃ ॥ ೪೨

ಇತ್ಯರ್ಥಕಾಮಧರ್ಮೇಷು ಕೃಷ್ಣೇನ ಶ್ರದ್ಧಿತಾತ್ಮನಾ ।
ಸಮ್ಯಕ್ ಸಭಾಜಿತಃ ಪ್ರೀತಸ್ತಮೇವಾನುಸ್ಮರನ್ ಯಯೌ ॥ ೪೩

ಏವಂ ಮನುಷ್ಯಪದವೀಮನುವರ್ತಮಾನೋ
ನಾರಾಯಣೋಽಖಿಲಭವಾಯ ಗೃಹೀತಶಕ್ತಿಃ ।
ರೇಮೇಽಂಗ ಷೋಡಶಸಹಸ್ರವರಾಂಗನಾನಾಂ
ಸವ್ರೀಡಸೌಹೃದನಿರೀಕ್ಷಣಹಾಸಜುಷ್ಟಃ ॥ ೪೪

ಮಾರ್ಗಗಳನ್ನು ಅನುಸರಿಸಿದ್ದೇನೆ (ಪರಮಾರ್ಥದಿಂದಲ್ಲ). ವತ್ಸ ಇದಕ್ಕಾಗಿ ನೀನು ಮೋಹಗೊಳ್ಳಬೇಡ'' ಎಂದನು (೪೦). ಪರೀಕ್ಷಿತರಾಜ, ಈ ರೀತಿಯಲ್ಲಿ ಒಬ್ಬನೇ ಶ್ರೀಕೃಷ್ಣನು ಎಲ್ಲರ ಮನೆಗಳಲ್ಲಿಯೂ ಗೃಹಸ್ಥರು ಆಚರಿಸಬೇಕಾದ ಪಾವನಕರಗಳಾದ ಧರ್ಮವಿಧಾನಗಳನ್ನೂ ಆಚರಿಸುತ್ತ ಇದ್ದುದನ್ನು ನಾರದರು ನೋಡಿದರು. ಅನಂತವೀರ್ಯನಾದ ಅಚ್ಯುತನ ಯೋಗಮಾಯಾಶಕ್ತಿ ವಿಶೇಷಗಳನ್ನು ಕುತೂಹಲದಿಂದ ಮತ್ತೆ ಮತ್ತೆ ನೋಡಿ ನಾರದರು ವಿಸ್ಮಿತರಾದರು (೪೧-೪೨). ಹೀಗೆ ಧರ್ಮಾರ್ಥಕಾಮಗಳಲ್ಲಿ ಶ್ರದ್ಧೆಯಿಂದ ನಡೆಯುತ್ತಿದ್ದ ಶ್ರೀಕೃಷ್ಣನಿಂದ ಸಂಮಾನಿತರಾದ ನಾರದಮುನಿಗಳು ಸಂತುಷ್ಟರಾಗಿ ಆತನನ್ನೇ ಸ್ಮರಿಸುತ್ತ ಹೊರಟುಹೋದರು (೪೩). ಈ ಪ್ರಕಾರದಲ್ಲಿ ಸಕಲರ ಸೃಷ್ಟಿ ಸ್ಥಿತಿ ಲಯಗಳಿಗಾಗಿ ನಾನಾ ಬಗೆಯ ರೂಪಗಳನ್ನು ಪರಿಗ್ರಹಿಸುವ ಶ್ರೀಮನ್ನಾರಾಯಣನು

ಯಾನೀಹ ವಿಶ್ವವಿಲಯೋದ್ಭವವೃತ್ತಿ ಹೇತುಃ
ಕರ್ಮಾಣ್ಯನನ್ಯವಿಷಯಾಣಿ ಹರಿಶ್ಚಕಾರ।
ಯಸ್ತ್ವಂಗ ಗಾಯತಿ ಶೃಣೋತ್ಯನುಮೋದತೇ ವಾ
ಭಕ್ತಿರ್ಭವೇದ್ ಭಗವತಿ ಹ್ಯಪವರ್ಗಮಾರ್ಗೇ॥ ೪೫

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ಏಕೋನಸಪ್ತತಿತಮಾಧ್ಯಾಯಃ

ಸಪ್ತತಿತಮಾಧ್ಯಾಯಃ

ಶ್ರೀ ಶುಕಉವಾಚ-

ಅಥೋಷಸ್ಯುಪವೃತ್ತಾಯಾಂ ಕುಕ್ಕುಟಾನ್ ಕೂಜತೋಽಶಪನ್।
ಗೃಹೀತಕಂಠ್ಯಃ ಪತಿಭಿರ್ಮಾಧವ್ಯೋ ವಿರಹಾತುರಾಃ॥ ೧

ಮನುಷ್ಯವೇಷವನ್ನು ಧರಿಸಿ, ಹದಿನಾರುಸಾವಿರ ಸ್ತ್ರೀಯರ ನಾಚಿಕೆ, ಪ್ರೇಮ, ದೃಷ್ಟಿ ಹಾಸ್ಯಗಳಿಗೆ ವಿಷಯನಾಗಿ ಕ್ರೀಡಿಸಿದನು (೪೪). ಪರೀಕ್ಷಿತ, ವಿಶ್ವದ ಸೃಷ್ಟಿ ಸ್ಥಿತಿ, ಲಯಗಳಿಗೆ ಕಾರಣನಾದ ಶ್ರೀಹರಿಯು ಈ ಲೋಕದಲ್ಲಿ ಯಾವ ಯಾವ ಅಸಾಧಾರಣ ಲೀಲೆಗಳನ್ನಾಚರಿಸಿದನೋ ಅವುಗಳನ್ನು ಯಾವನು ಹಾಡುತ್ತಾನೋ ಕೇಳುತ್ತಾನೋ ಅಥವಾ ಒಪ್ಪುತ್ತಾನೋ ಆತನಿಗೆ ಮೋಕ್ಷ ಪ್ರದನಾದ ಭಗವಂತನಲ್ಲಿ ಭಕ್ತಿಯುಂಟಾಗುವುದು (೪೫).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಅರುವತ್ತೊಂಬತ್ತನೆಯ ಅಧ್ಯಾಯ

ಅಧ್ಯಾಯ ೭೦

ಶ್ರೀಕೃಷ್ಣನ ಆಹ್ನಿಕ. ಜರಾಸಂಧನಿಂದ ಸೆರೆಹಿಡಿಯಲ್ಪಟ್ಟ ರಾಜರ ಪರವಾಗಿ ದೂತನ ವಿಜ್ಞಾಪನೆ. ಧರ್ಮರಾಯನು ರಾಜಸೂಯಯಾಗದಲ್ಲಿ ಉದ್ಯುಕ್ತನಾಗಿದ್ದಾನೆಂದು ನಾರದರ ನಿವೇದನೆ. ಮುಂದಿನ ಕರ್ತವ್ಯದ ಪರ್ಯಾಲೋಚನೆ.

ಅನಂತರ (ರಾತ್ರಿ ಕಳೆದು) ಪ್ರಭಾತವು ಸಮೀಪಿಸುತ್ತಿರಲಾಗಿ ಕೋಳಿಗಳು ಕೂಗಲಾರಂಭಿಸಿದವು. ಆಗ (ತಮ್ಮ ತಮ್ಮ ಮನೆಗಳಲ್ಲಿ) ಪತಿರೂಪದಿಂದಿದ್ದ ಬೇರೆ ಬೇರೆ ಶ್ರೀಕೃಷ್ಣನಿಂದ ಕೊರಳಲ್ಲಿ ಆಲಿಂಗಿತರಾಗಿದ್ದ ಆತನ ಪತ್ನಿಯರು ಇನ್ನು

ವಯಾಂಸ್ಯರೂರುವನ್ ಕೃಷ್ಣಂ ಭೋಧಯಂತೀವ ವಂದಿನಃ।
ಗಾಯತ್ಸ್ವಲಿಷ್ವನಿದ್ರಾಣಿ ಮಂದಾರವನವಾಯುಭಿಃ॥ ೨

ಮುಹೂರ್ತಂ ತಂ ತು ವೈದರ್ಭೀ ನಾಮೃಷ್ಯದಶಿಶೋಭನಮ್।
ಪರಿರಂಭಣವಿಶ್ಲೇಷಾತ್ ಪ್ರಿಯಬಾಹ್ವಂತರಂ ಗತಾ॥ ೩

ಬ್ರಾಹ್ಮೇ ಮುಹೂರ್ತ ಉತ್ಥಾಯ ವಾರ್ಯುಪಸ್ಪೃಶ್ಯ ಮಾಧವಃ।
ದಧ್ಯೌ ಪ್ರಸನ್ನಕರಣ ಆತ್ಮಾನಂ ತಮಸಃ ಪರಮ್॥ ೪

ಏಕಂ ಸ್ವಯಂಜ್ಯೋತಿರನನ್ಯಮವ್ಯಯಂ
ಸ್ವಸಂಸ್ಥಯಾ ನಿತ್ಯನಿರಸ್ತಕಲ್ಮಷಮ್।
ಬ್ರಹ್ಮಾಖ್ಯಮಸ್ಯೋದ್ಭವನಾಶಹೇತುಭಿಃ
ಸ್ವಶಕ್ತಿಭಿರ್ಲಕ್ಷಿತಭಾವನಿರ್ವೃತಿಮ್॥ ೫

ಅಥಾಪ್ಲುತೋಽಂಭಸ್ಯಮಲೇ ಯಥಾವಿಧಿ
ಕ್ರಿಯಾಕಲಾಪಂ ಪರಿಧಾಯ ವಾಸಸೀ।
ಚಕಾರ ಸಂಧ್ಯೋಪಗಮಾದಿ ಸತ್ತಮೋ
ಹುತಾನಲೋ ಬ್ರಹ್ಮ ಜಜಾಪ ವಾಗ್ಯತಃ॥ ೬

ವಿರಹವಾಗುವುದೆಂಬ ಕಳವಳದಿಂದ ಕೋಳಿಗಳನ್ನು ಶಪಿಸಿದರು! (೧). ಮಂದಾರವನದ ಗಾಳಿ ಸುಳಿಯಲು ದುಂಬಿಗಳು ಝೇಂಕಾರದಿಂದ ಎಚ್ಚೆತ್ತು ಹಕ್ಕಿಗಳು ವಂದಿಮಾಗಧರ ಹಾಗೆ ಶ್ರೀಕೃಷ್ಣನನ್ನು ಎಬ್ಬಿಸಲೋ ಎಂಬಂತೆ ಕೂಗತೊಡಗಿದವು. ಪ್ರಿಯನ ತೋಳುತೆಕ್ಕೆಯಲ್ಲಿದ್ದ ರುಕ್ಮಿಣಿಯಾದರೋ ಆಲಿಂಗನವು ಸಡಿಲುವುದೆಂದು ಅತ್ಯಂತ ಮಂಗಳಕರವಾದರೂ ಸುಪ್ರಭಾತದ ಮೇಲೆ ಕೋಪಿಸಿಕೊಂಡಳು! (೨-೩). ಮಾಧವನು ಬ್ರಾಹ್ಮಿಮುಹೂರ್ತದಲ್ಲೆದ್ದು ಕೈಕಾಲು ಮುಖಗಳನ್ನು ತೊಳೆದುಕೊಂಡು ಪ್ರಸನ್ನ ಚಿತ್ತನಾಗಿ ಮಾಯಾತೀತವಾದ ಬ್ರಹ್ಮತತ್ತ್ವವನ್ನು ಧ್ಯಾನಿಸತೊಡಗಿದನು. ಆ ಪರಬ್ರಹ್ಮವಾದರೋ ಅಖಂಡವೂ ಸ್ವಯಂಜ್ಯೋತಿಯೂ ನಿರುಪಾಧಿಕವೂ ನಿತ್ಯವೂ ಸ್ವಸ್ವರೂಪದಿಂದ ಅವಿದ್ಯಾಲೇಶದ ಸಂಬಂಧವೂ ಇಲ್ಲದ್ದು. ಈ ವಿಶ್ವದ ಉತ್ಪತ್ತಿ ಲಯಗಳಿಗೆ ಕಾರಣಗಳಾದ ತನ್ನ ಶಕ್ತಿಗಳಿಂದ ಅದರ ಸತ್ತೆಯೂ ಆನಂದವೂ ಲಕ್ಷಿತವಾಗುವುದರಿಂದ ಸದಾನಂದ ಸ್ವರೂಪವಾದದ್ದು (೪-೫). ಆಮೇಲೆ

ಉಪಸ್ಥಾಯಾರ್ಕಮುದ್ಯಂತಂ ತರ್ಪಯಿತ್ವಾSSತ್ಮನಃ ಕಲಾಃ ।
ದೇವಾನೃಷೀನ್ ಪಿತೄನ್ ವೃದ್ಧಾನ್ ವಿಪ್ರಾನಭ್ಯರ್ಚ್ಯ ಚಾತ್ಮವಾನ್ ॥

ಧೇನೂನಾಂ ರುಕ್ಮಶೃಂಗೀಣಾಂ ಸಾಧ್ವೀನಾಂ ಮೌಕ್ತಿಕಸ್ರಜಾಮ್ ।
ಪಯಸ್ವಿನೀನಾಂ ಗೃಷ್ಟೀನಾಂ ಸವತ್ಸಾನಾಂ ಸುವಾಸಸಾಮ್ ॥ ೮

ದದೌ ರೂಪ್ಯಖುರಾಗ್ರಾಣಂ ಕ್ಷೌಮಾಜಿನತಿಲೈಃ ಸಹ ।
ಅಲಂಕೃತೇಭ್ಯೋ ವಿಪ್ರೇಭ್ಯೋ ಬದ್ವಂ ಬದ್ವಂ ದಿನೇ ದಿನೇ ॥ ೯

ಗೋವಿಪ್ರದೇವತಾವೃದ್ಧಗುರೂನ್ ಭೂತಾನಿ ಸರ್ವಶಃ ।
ನಮಸ್ಕೃತ್ಯಾತ್ಮಸಂಭೂತೀರ್ಮಂಗಲಾನಿ ಸಮಸ್ಪೃಶತ್ ॥ ೧೦

ಆ ಮಹಾತ್ಮನು ಸ್ವಚ್ಛವಾದ ಜಲದಲ್ಲಿ ಸ್ನಾನ ಮಾಡಿ ಎರಡು ವಸ್ತ್ರಗಳನ್ನು ಧರಿಸಿ ಸಂಧ್ಯೋಪಾಸನೆ ಮೊದಲಾದ ಕ್ರಿಯಾಕಲಾಪವನ್ನು ಯಥಾವಿಧಿಯಾಗಿ ನೆರವೇರಿಸಿದನು. (ಕಾಣ್ವಶಾಖೆಯವನಾದ್ದರಿಂದ ಸೂರ್ಯೋದಯಕ್ಕೆ ಮೊದಲೇ) ಅಗ್ನಿಹೋತ್ರವನ್ನಾಚರಿಸಿ ಮೌನವಾಗಿ ಗಾಯತ್ರೀ ಮಂತ್ರವನ್ನು ಜಪಿಸಿದನು (೬). ಆತ್ಮಜ್ಞಾನಿಯಾದ ಆ ಮಹಾತ್ಮನು ಉದಯಿಸುತ್ತಿದ್ದ ಸೂರ್ಯನಿಗೆ ಉಪಸ್ಥಾನವನ್ನು ಮಾಡಿ ತನ್ನ ಅಂಶಭೂತರಾದ ದೇವರ್ಷಿಪಿತೃಗಳಿಗೆ ತರ್ಪಣವನ್ನಿತ್ತು ಗುರುಹಿರಿಯರನ್ನೂ ವಿಪ್ರರನ್ನೂ ಪೂಜಿಸಿ ಸತ್ಕರಿಸಿದನು (೭). ತರುವಾಯ ವಿಪ್ರರನ್ನು ಅಲಂಕರಿಸಿ ಅವರಿಗೆ ವಸ್ತ್ರ ಅಜಿನ, ತಿಲಗಳೊಡನೆ ಪ್ರತಿದಿನದ ಪದ್ಧತಿಯಂತೆ ಗೋವುಗಳನ್ನು[೧] ದಾನಮಾಡಿದನು. ಆ ಧೇನುಗಳ ಕೊಂಬಿಗೆ ಚಿನ್ನದಿಂದ ಅಲಂಕರಿಸಿ ಮುತ್ತಿನ ಹಾರಗಳನ್ನು ಹಾಕಿ ಉತ್ತಮವಾದ ವಸ್ತ್ರಗಳನ್ನು ಹೊದಿಸಲಾಗಿತ್ತು. ಅವುಗಳ ಪಾದಗಳಿಗೆ ಬೆಳ್ಳಿಯ ಗೊರಸುಗಳನ್ನು ತೊಡಿಸಲಾಗಿತ್ತು. ಎಲ್ಲ ಹಸುಗಳೂ ಸಾಧುಸ್ವಭಾವದವೂ ಚೆನ್ನಾಗಿ ಹಾಲುಕೊಡತಕ್ಕವೂ ಚೊಚ್ಚಲು ಮಣಕಗಳೂ ಕರುಗಳಿಂದ ಸಹಿತವಾದವೂ ಆಗಿದ್ದವು (೮-೯). ಆಮೇಲೆ ತನ್ನ ವಿಭೂತಿ ಮೂರ್ತಿಗಳಾದ ಗೋವುಗಳನ್ನೂ ಬ್ರಾಹ್ಮಣರನ್ನೂ ದೇವತೆಗಳನ್ನೂ ಹಿರಿಯರನ್ನೂ ಸಕಲಭೂತಗಳನ್ನೂ ನಮಸ್ಕರಿಸಿ

---

೧ ಒಂಬತ್ತನೆಯ ಶ್ಲೋಕದಲ್ಲಿ 'ಬದ್ವಂ ಬದ್ವಂ ದಿನೇ ದಿನೇ' ಎಂದಿದೆ. ಬದ್ವವೆಂದರೆ ಪುರಾಣೋಕ್ತವಾದ ಒಂದು ದೊಡ್ಡ ಸಂಖ್ಯೆ. 'ದ್ವಂದ್ವಂ ದ್ವಂದ್ವಂ ದಿನೇ ದಿನೇ' ಎಂದು ಪಾಠಾಂತರ ಉಂಟು. ಆ ಪಕ್ಷದಲ್ಲಿ ಗೋವುಗಳ 'ಜೊತೆ' ಎಂದರ್ಥ.

ಆತ್ಮಾನಂ ಭೂಷಯಾಮಾಸ ನರಲೋಕವಿಭೂಷಣಮ್ ।
ವಾಸೋಭಿರ್ಭೂಷಣೈಃ ಸ್ವೀಯೈರ್ದಿವ್ಯಸ್ರಗನುಲೇಪನೈಃ ॥ ೧೧

ಅವೇಕ್ಷ್ಯಾಜ್ಯಂ ತಥಾಽಽದರ್ಶಂ ಗೋವೃಷದ್ವಿಜದೇವತಾಃ ।
ಕಾಮಾಂಶ್ಚ ಸರ್ವವರ್ಣಾನಾಂ ಪೌರಾಂತಃಪುರಚಾರಿಣಾಮ್ ।
ಪ್ರದಾಪ್ಯ ಪ್ರಕೃತೀಃ ಕಾಮೈಃ ಪ್ರತೋಷ್ಯ ಪ್ರತ್ಯನಂದತ ॥ ೧೨

ಸಂವಿಭಜ್ಯಾಗ್ರತೋ ವಿಪ್ರಾನ್ ಸ್ರಕ್ ತಾಂಬೂಲಾನುಲೇಪನೈಃ ।
ಸುಹೃದಃ ಪ್ರಕೃತೀರ್ದಾರಾನುಪಾಯುಂಕ್ತ ತತಃ ಸ್ವಯಮ್ ॥ ೧೩

ತಾವತ್ ಸೂತ ಉಪಾನೀಯ ಸ್ಯಂದನಂ ಪರಮಾದ್ಭುತಮ್ ।
ಸುಗ್ರೀವಾದ್ಯೈರ್ಹಯೈರ್ಯುಕ್ತಂ ಪ್ರಣಮ್ಯಾವಸ್ಥಿತೋಽಗ್ರತಃ ॥ ೧೪

ಗೃಹೀತ್ವಾ ಪಾಣಿನಾ ಪಾಣೀ ಸಾರಥೇಸ್ತಮಥಾರುಹತ್ ।
ಸಾತ್ಯಕ್ಯುದ್ಧವಸಂಯುಕ್ತಃ ಪೂರ್ವಾದ್ರಿಮಿವ ಭಾಸ್ಕರಃ ॥ ೧೫

ಮಂಗಳದ್ರವ್ಯಗಳನ್ನು ಸ್ಪರ್ಶಿಸಿದನು (೧೦). ಅನಂತರ ತನ್ನ ಪೀತಾಂಬರಾದಿ ವಸ್ತ್ರಭೂಷಣಗಳಿಂದಲೂ ದಿವ್ಯಮಾಲಾ ಗಂಧಗಳಿಂದಲೂ ಮನುಷ್ಯ ಲೋಕಕ್ಕೆ ಆಭರಣಪ್ರಾಯವಾದ ತನ್ನ ದೇಹವನ್ನು ಅಲಂಕರಿಸಿಕೊಂಡನು. ಬಳಿಕ ಘೃತದಲ್ಲಿಯೂ ಕನ್ನಡಿಯಲ್ಲಿಯೂ ಶ್ರೀಕೃಷ್ಣನು ತನ್ನ ಮುಖವನ್ನು ನೋಡಿಕೊಂಡು ಗೋವು, ವೃಷಭ, ಬ್ರಾಹ್ಮಣ ಮತ್ತು ದೇವತೆಗಳ ದರ್ಶನಮಾಡಿ, ಅಂತಃಪುರದಲ್ಲಿ ಮತ್ತು ಪಟ್ಟಣದಲ್ಲಿರುವ ಸಕಲಜಾತಿಯವರಿಗೂ ಅಧಿಕಾರಿಗಳಿಗೂ ಇಷ್ಟವಾದುದನ್ನು ಕೊಡಿಸಿ ಸಂತೋಷಪಡಿಸಿ ತಾನೂ ಸಂತೋಷಪಟ್ಟನು (೧೧-೧೨). ಅನಂತರ ಮಾಲ್ಯ ತಾಂಬೂಲ ಗಂಧಗಳನ್ನು ವಿಪ್ರರಿಗೂ ಸ್ನೇಹಿತರಿಗೂ ಪ್ರಜೆಗಳಿಗೂ ತನ್ನ ಮಡದಿಯರಿಗೂ ಕ್ರಮವಾಗಿ ಹಂಚಿಕೊಟ್ಟು ತಾನೂ ಅವುಗಳನ್ನು ಉಪಭೋಗಿಸಿದನು (೧೩). ಅಷ್ಟರಲ್ಲಿ ಸಾರಥಿಯಾದ ದಾರುಕನು ಸುಗ್ರೀವ ಮೊದಲಾದ[೧] ಅಶ್ವಗಳನ್ನು ಹೂಡಿದ ಪರಮಾದ್ಭುತವಾದ ರಥವನ್ನು ತಂದು ನಿಲ್ಲಿಸಿ ಕೈಮುಗಿದು ಎದುರಿಗೆ ನಿಂತುಕೊಂಡನು. ಆಗ ಶ್ರೀಕೃಷ್ಣನು ಸಾರಥಿಯ ಎರಡು ಕೈಗಳನ್ನು ಕೈಯಿಂದ ಹಿಡಿದುಕೊಂಡು ಉದ್ಧವ ಸಾತ್ಯಕಿಗಳೊಡನೆ, ಸೂರ್ಯನು ಉದಯಾಚಲವನ್ನೇರುವಂತೆ, ರಥವನ್ನು ಹತ್ತಿದನು (೧೪-೧೫).

---

೧ ಸುಗ್ರೀವ, ಶೈಬ್ಯ, ಮೇಘಪುಷ್ಪ ಬಲಾಹಕ-ಎಂಬ ನಾಲ್ಕು ಅಶ್ವಗಳು.

ಈಕ್ಷಿತೋಽಂತಃಪುರಸ್ತ್ರೀಣಾಂ ಸವ್ರೀಡಪ್ರೇಮವೀಕ್ಷಿತೈಃ ।
ಕೃಚ್ಛ್ರಾದ್ ವಿಸೃಷ್ಟೋ ನಿರಗಾಜ್ಜಾತಹಾಸೋ ಹರನ್ ಮನಃ ॥ ೧೬

ಸುಧರ್ಮಾಖ್ಯಾಂ ಸಭಾಂ ಸರ್ವೈರ್ವೃಷ್ಣಿಭಿಃ ಪರಿವಾರಿತಃ ।
ಪ್ರಾವಿಶದ್ ಯನ್ನಿವಿಷ್ಟಾನಾಂ ನ ಸಂತ್ಯಂಗ ಷಡೂರ್ಮಯಃ ॥ ೧೭

ತತ್ರೋಪವಿಷ್ಟಃ ಪರಮಾಸನೇ ವಿಭು-
ರ್ಬಭೌ ಸ್ವಭಾಸಾ ಕಕುಭೋಽವಭಾಸಯನ್ ।
ವೃತೋ ನೃಸಿಂಹೈರ್ಯದುಭಿರ್ಯದೂತ್ತಮೋ
ಯಥೋಡುರಾಜೋ ದಿವಿ ತಾರಕಾಗಣೈಃ ॥ ೧೮

ತತ್ರೋಪಮಂತ್ರಿಣೋ ರಾಜನ್ ನಾನಾಹಾಸ್ಯರಸೈರ್ವಿಭುಮ್ ।
ಉಪತಸ್ಥುರ್ನಟಾಚಾರ್ಯಾ ನರ್ತಕ್ಯಸ್ತಾಂಡವೈಃ ಪೃಥಕ್ ॥ ೧೯

ಅಂತಃಪುರಸ್ತ್ರೀಯರು ಲಜ್ಜೆಯಿಂದ ಪ್ರೇಮದ ನೋಟವನ್ನು ಬೀರುತ್ತ, ನಿರ್ವಾಹವಿಲ್ಲದೆ ನೋಟದಿಂದಲೇ ಬೀಳ್ಕೊಡಲು, ಶ್ರೀಕೃಷ್ಣನು ನಗುತ್ತ ಆ ಮಡದಿಯರ ಮನಸ್ಸನ್ನು ಸೆಳೆಯುತ್ತ ತೆರಳಿದನು (೧೬). ಎಲ್ಲ ಯಾದವರಿಂದಲೂ ಪರಿವೃತನಾಗಿ ಸುಧರ್ಮವೆಂಬ ಸಭಾಮಂದಿರವನ್ನು ಪ್ರವೇಶಿಸಿದನು. ಪರೀಕ್ಷಿತರಾಜ, ಸುಧರ್ಮ ಎಂಬ ಆ ಸಭಾಮಂದಿರದಲ್ಲಿರ ತಕ್ಕವರಿಗೆ ಆರು[1] ಊರ್ಮಿಗಳ ಬಾಧೆ ಇಲ್ಲ. ಅಲ್ಲಿ ಆ ಸ್ವಾಮಿಯು ಶ್ರೇಷ್ಠವಾದ ಪೀಠದಲ್ಲಿ ಕುಳಿತುಕೊಳ್ಳಲಾಗಿ ದಶದಿಕ್ಕುಗಳೂ ಬೆಳಗಿದವು. ಯಾದವರಿಂದ ಪರಿವೃತನಾದ ಆ ಯದುಪುಂಗವನು, ಗಗನದಲ್ಲಿ ನಕ್ಷತ್ರಗಳಿಂದ ಪರಿವೃತನಾದ ಚಂದ್ರಮನಂತೆ ಕಂಗೊಳಿಸಿದನು (೧೭-೧೮). ಪರೀಕ್ಷಿತರಾಜ, ಅಲ್ಲಿ ಹಾಸ್ಯಗಾರರು ನಾನಾ ಹಾಸ್ಯರಸಪ್ರಸಂಗಗಳಿಂದಲೂ ನಾಟ್ಯಾಚಾರ್ಯರೂ ನರ್ತಕಿಯರೂ ವಿಭಿನ್ನ ನೃತ್ಯಪ್ರಕಾರಗಳಿಂದಲೂ ಆ ಪ್ರಭುವನ್ನು ಸೇವಿಸಿದರು. ಮೃದಂಗ, ವೀಣೆ, ಮದ್ದಳೆ, ಕೊಳಲು, ತಾಳ, ಶಂಖ ಧ್ವನಿಗಳೊಡನೆ ನರ್ತಿಸಿದರು, ಹಾಡಿದರು. ಸೂತ, ಮಾಗಧ, ವಂದಿಗಳು ಸ್ತುತಿಸಿದರು (೧೯-೨೦). ಸಭೆಯಲ್ಲಿ

೧ಶೋಕ, ಮೋಹ, ಹಸಿವು ಬಾಯಾರಿಕೆ, ಮುಪ್ಪು ಮತ್ತು ಮರಣ-ಇವು ಆರು ಊರ್ಮಿಗಳು.

ಮೃದಂಗವೀಣಾಮುರಜವೇಣುತಾಲದರಸ್ವನೈಃ।
ನನೃತುರ್ಜಗುಸ್ತುಷ್ಟುವುಶ್ಚ ಸೂತಮಾಗಧವಂದಿನಃ॥ ೨೦

ತತ್ರಾಹುರ್ಬ್ರಾಹ್ಮಣಾಃ ಕೇಚಿದಾಸೀನಾ ಬ್ರಹ್ಮವಾದಿನಃ।
ಪೂರ್ವೇಷಾಂ ಪುಣ್ಯಯಶಸಾಂ ರಾಜ್ಞಾಂ ಚಾಕಥಯನ್ ಕಥಾಃ॥ ೨೧

ತತ್ರೈಕಃ ಪುರುಷೋ ರಾಜನ್ನಾಗತೋಽಪೂರ್ವದರ್ಶನಃ।
ವಿಜ್ಞಾಪಿತೋ ಭಗವತೇ ಪ್ರತೀಹಾರೈಃ ಪ್ರವೇಶಿತಃ॥ ೨೨

ಸ ನಮಸ್ಕೃತ್ಯ ಕೃಷ್ಣಾಯ ಪರೇಶಾಯ ಕೃತಾಂಜಲಿಃ।
ರಾಜ್ಞಾಮಾವೇದಯದ್ ದುಃಖಂ ಜರಾಸಂಧನಿರೋಧಜಮ್॥ ೨೩

ಯೇ ಚ ದಿಗ್ವಿಜಯೇ ತಸ್ಯ ಸಂನತಿಂ ನ ಯಯುರ್ನೃಪಾಃ।
ಪ್ರಸಹ್ಯ ರುದ್ಧಾಸ್ತೇನಾಸನ್ನಯುತೇ ದ್ವೇ ಗಿರಿವ್ರಜೇ॥ ೨೪

ಕೃಷ್ಣ ಕೃಷ್ಣಾಪ್ರಮೇಯಾತ್ಮನ್ ಪ್ರಪನ್ನಭಯಭಂಜನ।
ವಯಂ ತ್ವಾಂ ಶರಣಂ ಯಾಮೋ ಭವಭೀತಾಃ ಪೃಥಗ್ಧಿಯಃ॥ ೨೫

ಕುಳಿತಿದ್ದ ಕೆಲವು ಬ್ರಾಹ್ಮಣರು ವೇದಮಂತ್ರಗಳಿಗೆ ವ್ಯಾಖ್ಯಾನ ಹೇಳಿದರು. ಇನ್ನೂ ಕೆಲವು ವಾಗ್ಮಿಗಳು ಪುಣ್ಯ ಕೀರ್ತಿಗಳಾದ ಪ್ರಾಚೀನರಾಜರ ಕಥೆಗಳನ್ನು ತಿಳಿಸಿದರು. ಹೀಗಿರಲು, ಪರೀಕ್ಷಿತರಾಜ, ಒಬ್ಬ ಅಪರಿಚಿತನಾದ ಮನುಷ್ಯನು ಶ್ರೀಕೃಷ್ಣನ ದರ್ಶನವನ್ನಪೇಕ್ಷಿಸಿ ಅಲ್ಲಿಗೆ ಬಂದನು. ದ್ವಾರಪಾಲಕರು ಆ ವಿಷಯವನ್ನು ಭಗವಂತನಿಗೆ ಅರಿಕೆಮಾಡಿ ಅನುಮತಿಯನ್ನು ಪಡೆದು ಆ ಪುರುಷನನ್ನು ಒಳಕ್ಕೆ ಬಿಟ್ಟರು (೨೧-೨೨). ಆತನು ಪರಮೇಶ್ವರನಾದ ಶ್ರೀಕೃಷ್ಣನಿಗೆ ಕೈಮುಗಿದು, ಜರಾಸಂಧನ ಸೆರೆಯಲ್ಲಿ ವಿಭಿನ್ನ ರಾಜರು ಅನುಭವಿಸುತ್ತಿದ್ದ ದುಃಖವನ್ನು ನಿವೇದಿಸಿದನು : ''ಜರಾಸಂಧನು ದಿಗ್ವಿಜಯಕ್ಕೆ ಹೋದಾಗ ಯಾವ ರಾಜರು ಶರಣಾಗಲಿಲ್ಲವೋ ಅವರೆಲ್ಲರನ್ನೂ ಜರಾಸಂಧನು ಬಲಾತ್ಕಾರವಾಗಿ ಬಂಧಿಸಿ ಸೆರೆಮನೆಯಲ್ಲಿಟ್ಟಿದ್ದಾನೆ. ಅಂಥ ರಾಜರು ಗಿರಿವ್ರಜದಲ್ಲಿ ಇಪ್ಪತ್ತುಸಾವಿರ ಇದ್ದಾರೆ (೨೩-೨೪). ಅವರು ಬಿನ್ನವಿಸುವುದೇನೆಂದರೆ-ಶ್ರೀಕೃಷ್ಣ ಕೃಷ್ಣ ಅಪ್ರಮೇಯ ಸ್ವರೂಪನೆ, ಶರಣಾಗತರ ಭಯವನ್ನು ನೀಗಿಸತಕ್ಕವನು ನೀನು. ಭೇದಬುದ್ಧಿಯುಳ್ಳ ನಾವು ಸಂಸಾರಕ್ಕೆ ಹೆದರಿ ನಿನಗೆ ಶರಣಾಗಿದ್ದೇವೆ (೨೫).

ಲೋಕೋ ವಿಕರ್ಮನಿರತಃ ಕುಶಲೇ ಪ್ರಮತ್ತಃ
ಕರ್ಮಣ್ಯಯಂ ತ್ವದುದಿತೇ ಭವದರ್ಚನೇ ಸ್ವೇ।
ಯಸ್ತಾವದಸ್ಯ ಬಲವಾನಿಹ ಜೀವಿತಾಶಾಂ
ಸದ್ಯಶ್ಛಿನತ್ತ್ಯನಿಮಿಷಾಯ ನಮೋಽಸ್ತು ತಸ್ಮೈ॥ ೨೬

ಲೋಕೇ ಭವಾನ್ ಜಗದಿನಃ ಕಲಯಾವತೀರ್ಣಃ
ಸದ್ರಕ್ಷಣಾಯ ಖಲನಿಗ್ರಹಣಾಯ ಚಾನ್ಯಃ।
ಕಶ್ಚಿತ್ ತ್ವದೀಯಮತಿಯಾತಿ ನಿದೇಶಮೀಶ
ಕಿಂ ವಾ ಜನಃ ಸ್ವಕೃತಮೃಚ್ಛತಿ ತನ್ನ ವಿದ್ಮಃ॥ ೨೭

ಸ್ವಪ್ನಾಯಿತಂ ನೃಪಸುಖಂ ಪರತಂತ್ರಮೀಶ
ಶಶ್ವದ್ಭಯೇನ ಮೃತಕೇನ ಧುರಂ ವಹಾಮಃ।
ಹಿತ್ವಾ ತದಾತ್ಮನಿ ಸುಖಂ ತ್ವದನೀಹಲಭ್ಯಂ
ಕ್ಲಿಶ್ಯಾಮಹೇಽತಿ ಕೃಪಣಾಸ್ತವ ಮಾಯಯೇಹ॥ ೨೮

ಈ ಲೋಕವು ವಿಕರ್ಮದಲ್ಲಿ ಎಂದರೆ ನಿಷಿದ್ಧ ಮತ್ತು ಕಾಮ್ಯವಾದ ಕರ್ಮಗಳಲ್ಲಿ ನಿರತವಾಗಿ ತನ್ನ ಕುಶಲವನ್ನರಿಯದೆ ತಪ್ಪು ಮಾಡುತ್ತಿದೆ. ಕ್ಷೇಮಕರವಾದ ಸಾಮಾನ್ಯ ಧರ್ಮದಲ್ಲಿಯೂ ನೀನು ಉಪದೇಶಿಸಿದ ನಿನ್ನ ಅರ್ಚನಾವಿಧಿಯಲ್ಲಿಯೂ ಆಸಕ್ತವಾಗಿಲ್ಲ. ಬಲಾಢ್ಯನಾದ ಯಾವನು ಈ ಜನರ ಜೀವಿತಾಶೆಯನ್ನು ಒಡನೆಯೇ ತೊಡೆದು ಹಾಕುವನೋ ಅಂತಹ ಕಲಾತ್ಮಕ ದೇವನಾದ ನಿನಗೆ ನಮಸ್ಕಾರ (೨೬). ಜಗದೀಶ್ವರನಾದ ನೀನು ಸಜ್ಜನರನ್ನು ರಕ್ಷಿಸುವುದಕ್ಕಾಗಿಯೂ ದುರ್ಜನರನ್ನು ಶಿಕ್ಷಿಸುವುದಕ್ಕಾಗಿಯೂ ಏಕಾಂಶದಿಂದ ಈ ಲೋಕದಲ್ಲಿ ಅವತರಿಸಿದ್ದೀಯೆ. ಹೀಗಿರುವಾಗ ಜರಾಸಂಧನಂಥವನೊಬ್ಬನು ನಿನ್ನ ಆಜ್ಞೆಯನ್ನು ಉಲ್ಲಂಘಿಸುತ್ತಾನೆ. ಇನ್ನೊಬ್ಬನು ತನ್ನ ಕರ್ಮಫಲವಾದ ದುಃಖವನ್ನು ಅನುಭವಿಸುತ್ತಲೇ ಇರುತ್ತಾನೆ. ಇದೇಕೆ ಹೀಗೆ, ಹೇ ಸ್ವಾಮಿ, ನಾವರಿಯೆವು (೨೭). ಹೇ ಪ್ರಭು, ರಾಜಸುಖವೆಂಬುದು ಕನಸಿಗೆ ಸಮಾನ, ಎಷ್ಟಾದರೂ ಇದು ಪರಾಧೀನವಾದದ್ದೂ, ಸದಾ ಹೆದರುತ್ತಲೇ ಹೆಣದಂತಹ ಈ ದೇಹದಿಂದ ರಾಜ್ಯದ ಹೊರೆಯನ್ನು ಹೊರುತ್ತೇವೆ. ನಿನ್ನ ಕೃಪೆಯಿಂದ ಆಶಾರಹಿತರಿಗೆ

ತನ್ನೋ ಭವಾನ್ ಪ್ರಣತಶೋಕಹರಾಂಘ್ರಿಯುಗ್ಮೋ
ಬದ್ಧಾನ್ ವಿಯುಂಕ್ಷ್ವ ಮಗಧಾಹ್ವಯಕರ್ಮಪಾಶಾತ್ ।
ಯೋ ಭೂಭುಜೋಽಯುತಮತಂಗಜವೀರ್ಯಮೇಕೋ
ಬಿಭ್ರದ್ ರುರೋಧ ಭವನೇ ಮೃಗರಾಡಿವಾವೀಃ ॥ ೨೯

ಯೋ ವೈ ತ್ವಯಾ ದ್ವಿನವಕೃತ್ವ ಉದಾತ್ತಚಕ್ರ
ಭಗ್ನೋ ಮೃಧೇ ಖಲು ಭವಂತಮನಂತವೀರ್ಯಮ್ ।
ಜಿತ್ವಾನೃಲೋಕನಿರತಂ ಸಕೃದೂಢದರ್ಪೋ
ಯುಷ್ಮತ್ಪ್ರಜಾ ರುಜತಿ ನೋಽಜಿತ ತದ್ ವಿಧೇಹಿ ॥ ೩೦

ದೂತ ಉವಾಚ-

ಇತಿ ಮಾಗಧಸಂರುದ್ಧಾ ಭವದ್ದರ್ಶನಕಾಂಕ್ಷಿಣಃ ।
ಪ್ರಪನ್ನಾಃ ಪಾದಮೂಲಂ ತೇ ದೀನಾನಾಂ ಶಂ ವಿಧೀಯತಾಮ್ ॥

ಲಭ್ಯವಾಗುವ (ಸ್ವತಂತ್ರವಾದ) ಆತ್ಮ ಸುಖವನ್ನು ಕೈಬಿಟ್ಟದ್ದೇವೆ. ನಿನ್ನ ಮಾಯೆಯಿಂದ ಅತಿದೀನರಾಗಿ ಕ್ಲೇಶಪಡುತ್ತಿದ್ದೇವೆ (೨೮). ಶರಣಾದವರ ಶೋಕವನ್ನು ಪರಹರಿಸುವ ಚರಣಾರವಿಂದ ನಿನ್ನದು. (ನಿನ್ನದೇ ಮಾಯೆಯಾದ್ದರಿಂದ) ಈ ಜರಾಸಂಧನೆಂಬ ಕರ್ಮಪಾಶದಿಂದ ನಮ್ಮನ್ನು ಬಿಡುಗಡೆ ಮಾಡಿಸು. ಈ ಮಾಗಧನೊಬ್ಬನೇ ಹತ್ತುಸಾವಿರ ಆನೆಗಳ ಬಲವುಳ್ಳವನು. ಸಿಂಹವು ಹೆಣ್ಣು ಕುರಿಗಳನ್ನು ಹೇಗೋ ಹಾಗೆ ಈತನು ನಮ್ಮನ್ನು ಅಡ್ಡಗಟ್ಟಿ ತನ್ನ ಮನೆಯಲ್ಲಿ ಬಂಧಿಸಿದ್ದಾನೆ (೨೯). ನಿನಗೂ ಆತನಿಗೂ ನಡೆದ ಹದಿನೆಂಟು ಯುದ್ಧ ಪ್ರಸಂಗಗಳಲ್ಲಿ ಮಹಿಮಾನ್ವಿತವಾದ ಸುದರ್ಶನಚಕ್ರವನ್ನು ಧರಿಸಿದ ನೀನು ಹದಿನೇಳು ಸಲ ಮಾಗಧನನ್ನು ಸೋಲಿಸಿ ಓಡಿಸಿದ್ದೀಯೆ. ನೀನು ಅನಂತ ವೀರ್ಯನಾದರೂ ನರಶರೀರ ವಿನೋದಿಯಾದ್ದರಿಂದ ಒಂದೇ ಒಂದು ಸಲ ಜರಾಸಂಧನು ನಿನ್ನನ್ನು ಪರಾಜಯಗೊಳಿಸಿದನು. ಅಷ್ಟರಿಂದಲೇ ದರ್ಪಾಂಧನಾಗಿ ನಿನ್ನ ಪ್ರಜೆಗಳಾದ ನಮ್ಮನ್ನು ಪೀಡಿಸುತ್ತಿದ್ದಾನೆ. ಈಗ ಉಚಿತವಾದ್ದೇನೆಂಬುದನ್ನು, ಹೇ ಅಜಿತ, ನೀನು ಮಾಡಬೇಕು'' (೩೦). ಹೀಗೆ ರಾಜರ ವಿಜ್ಞಾಪನೆಯನ್ನು ತಿಳಿಸಿ ಆ ದೂತನು ''ಹೇ ಸ್ವಾಮಿ, ಹೀಗೆ ಜರಾಸಂಧನಿಂದ ಸೆರೆಹಿಡಿಯಲ್ಪಟ್ಟ ರಾಜರು ನಿನ್ನ ದರ್ಶನಕ್ಕಾಗಿ ತವಕಪಡುತ್ತ

ಶ್ರೀಶುಕ ಉವಾಚ-

ರಾಜದೂತೇ ಬ್ರುವತ್ಯೇವಂ ದೇವರ್ಷಿಃ ಪರಮದ್ಯುತಿಃ ।
ಬಿಭ್ರತ್ ಪಿಂಗಜಟಾಭಾರಂ ಪ್ರಾದುರಾಸೀದ್ ಯಥಾ ರವಿಃ ॥ ೩೨

ತಂ ದೃಷ್ಟ್ವಾ ಭಗವಾನ್ ಕೃಷ್ಣಃ ಸರ್ವಲೋಕೇಶ್ವರೇಶ್ವರಃ ।
ವವಂದ ಉತ್ಥಿತಃ ಶೀರ್ಷ್ಣಾ ಸಸಭ್ಯಃ ಸಾನುಗೋ ಮುದಾ ॥ ೩೩

ಸಭಾಜಯಿತ್ವಾ ವಿಧಿವತ್ ಕೃತಾಸನಪರಿಗ್ರಹಮ್ ।
ಬಭಾಷೇ ಸೂನೃತೈರ್ವಾಕ್ಯೈಃ ಶ್ರದ್ಧಯಾ ತರ್ಪಯನ್ ಮುನಿಮ್ ॥ ೩೪

ಅಪಿಸ್ವಿದದ್ಯ ಲೋಕಾನಾಂ ತ್ರಯಾಣಾಮಕುತೋಭಯಮ್ ।
ನನು ಭೂಯಾನ್ ಭಗವತೋ ಲೋಕಾನ್ ಪರ್ಯಟತೋ ಗುಣಃ ॥

ನ ಹಿ ತೇಽವಿದಿತಂ ಕಿಂಚಿಲ್ಲೋಕೇಷ್ವೀಶ್ವರಕರ್ತೃಷು ।
ಅಥ ಪೃಚ್ಛಾಮಹೇ ಯುಷ್ಮಾನ್ ಪಾಂಡವಾನಾಂ ಚಿಕೀರ್ಷಿತಮ್ ॥ ೩೬

ನಿನ್ನಪಾದಮೂಲಕ್ಕೆ ಶರಣಾಗಿದ್ದಾರೆ. ಆ ದೀನರಿಗೆ ಕ್ಷೇಮವನ್ನುಂಟುಮಾಡು'' ಎಂದನು (೩೧). ರಾಜದೂತನು ಈ ರೀತಿಯಲ್ಲಿ ಬಿನ್ನವಿಸುತ್ತಿರುವಾಗ, ಮಹಾ ತೇಜಸ್ವಿಗಳಾದ ನಾರದರು ಪಿಂಗಳ ವರ್ಣದ ಜಟಾಭಾರವನ್ನು ಹೊತ್ತು ಸೂರ್ಯನೋ ಎಂಬಂತೆ ಅಲ್ಲಿ ಉಪಸ್ಥಿತರಾದರು. ಆಗ ಸರ್ವಲೋಕೇಶ್ವರರಿಗೆ ಈಶ್ವರನಾದ ಭಗವಾನ್ ಶ್ರೀಕೃಷ್ಣನು ಪರಿವಾರಸಹಿತನಾಗಿ ಸಭಾಸದರೊಡನೆ ಎದ್ದು ನಿಂತು ತಲೆಬಾಗಿ ನಾರದರಿಗೆ ಸಂತೋಷದಿಂದ ವಂದಿಸಿದನು (೩೨-೩೩). ಅನಂತರ ನಾರದ ಮುನಿಗಳಿಗೆ ವಿಧಿವತ್ತಾಗಿ ಸತ್ಕಾರವನ್ನು ನೀಡಿದನಲ್ಲದೆ ಪೀಠದಲ್ಲಿ ಮಂಡಿಸಿದ ಅವರನ್ನು ಶ್ರದ್ಧೆಯಿಂದ ಸಂತೋಷಪಡಿಸುತ್ತ ಪ್ರಿಯವಾಕ್ಯಗಳಿಂದ ಹೀಗೆಂದನು : ''ಮುನಿಗಳೆ, ಈಗ ಮೂರು ಲೋಕಗಳಿಗೂ ಕುಶಲವಷ್ಟೇ ? ಎಲ್ಲ ಲೋಕಗಳನ್ನೂ ಸುತ್ತುವ ನಿಮ್ಮಿಂದ ಲೋಕವಾರ್ತೆಯು ನಮಗೆ ತಿಳಿದು ಬರುತ್ತಿರುವುದೊಂದು ದೊಡ್ಡ ಲಾಭ (೩೪-೩೫). ದೇವರು ಸೃಷ್ಟಿಸಿರುವ ಈ ಲೋಕಗಳಲ್ಲಿ ನಿಮಗೆ ಗೊತ್ತಿಲ್ಲದ ವಿಷಯವಾವುದೂ ಇಲ್ಲ! ಆದ್ದರಿಂದ ಈಗ ಪಾಂಡವರು ಏನು ಮಾಡುತ್ತಿದ್ದಾರೆಂದು ಕೇಳಲಪೇಕ್ಷಿಸುತ್ತೇವೆ.'' ಅದಕ್ಕೆ ನಾರದರು ಹೇಳಿದರು: ''ವಿಶ್ವಕರ್ತನಾದ ಬ್ರಹ್ಮನನ್ನು ಮರುಳುಗೊಳಿಸುವ ಮಾಯಾವಿಯಾದ

ಶ್ರೀ ನಾರದ ಉವಾಚ-

ದೃಷ್ಟಾ ಮಯಾ ತೇ ಬಹುಶೋ ದುರತ್ಯಯಾ
ಮಾಯಾ ವಿಭೋ ವಿಶ್ವಸೃಜಶ್ಚ ಮಾಯಿನಃ।
ಭೂತೇಷು ಭೂಮಂಶ್ಚರತಃ ಸ್ವಶಕ್ತಿಭಿ-
ರ್ವಹ್ನೇರಿವ ಛನ್ನರುಚೋ ನ ಮೇಽದ್ಭುತಮ್ ॥ ೩೭

ತವೇಹಿತಂ ಕೋಽರ್ಹತಿ ಸಾಧು ವೇದಿತುಂ
ಸ್ವಮಾಯಯೇದಂ ಸೃಜತೋ ನಿಯಚ್ಛತಃ।
ಯದ್ ವಿದ್ಯಮಾನಾತ್ಮತಯಾವಭಾಸತೇ
ತಸ್ಮೈ ನಮಸ್ತೇ ಸ್ವವಿಲಕ್ಷಣಾತ್ಮನೇ ॥ ೩೮

ಜೀವಸ್ಯ ಯಃ ಸಂಸರತೋ ವಿಮೋಕ್ಷಣಂ
ನ ಜಾನತೋಽನರ್ಥವಹಾಚ್ಛರೀರತಃ।
ಲೀಲಾವತಾರೈಃ ಸ್ವಯಶಃ ಪ್ರದೀಪಕಂ
ಪ್ರಾಜ್ವಾಲಯತ್ತ್ವಾತಮಹಂ ಪ್ರಪದ್ಯೇ ॥ ೩೯

ನಿನ್ನ ಮಾಯೆಯನ್ನು ಕಂಡೆನು ! ಎಲ್ಲೆಲ್ಲಿಯೂ ಹರಡಿರುವ ನಿನ್ನ ಮಾಯೆಯೆಂಬುದು ಮೀರಲಶಕ್ಯವಾದುದು. ಹೇ ವಿಭೋ ಭೂಮನ್, ಸಕಲಪ್ರಾಣಿಗಳಲ್ಲಿಯೂ ಅಡಗಿರುವ ಅಗ್ನಿ ತತ್ತ್ವದಂತೆ, ನಿನ್ನ ಶಕ್ತಿಗಳಿಂದಲೇ ಗೂಢನಾಗಿ ಎಲ್ಲೆಲ್ಲಿಯೂ ವ್ಯಾಪಿಸಿರುವ ನೀನು ಈ ಪ್ರಶ್ನೆಮಾಡಿದ್ದು ಅಚ್ಚರಿಯಲ್ಲ! (೩೬-೩೭). ಈ ಜಗತ್ತನ್ನು ನಿನ್ನ ಮಾಯೆಯಿಂದಲೇ ಸೃಜಿಸಿ ಅಳಿಸಿಹಾಕುತ್ತಿರುವ ನಿನ್ನ ಉದ್ದೇಶವನ್ನು ಯಾವನು ತಾನೇ ಸರಿಯಾಗಿ ತಿಳಿದುಕೊಂಡಾನು ? (ಇಲ್ಲದಿದ್ದರೂ ಈ ಜಗತ್ತು) ಯಾವ ನಿನ್ನ ಮಾಯೆಯಿಂದ ಇದ್ದಂತೆ ತೋರುವುದೋ ಅಂತಹ ಸರ್ವವಿಲಕ್ಷಣವಾದ ಸ್ವಸ್ವರೂಪವುಳ್ಳ ನಿನಗೆ ನಮಸ್ಕಾರ! (೩೮). ಅನರ್ಥಕಾರಿಯಾದ ಶರೀರದ ದೆಸೆಯಿಂದ ಸಂಸಾರದಲ್ಲಿ ತೊಳಲುತ್ತ ಬಿಡುಗಡೆಯ ಬೆಳಕನ್ನು ಕಾಣದಿರುವ ಜೀವರ ಉದ್ಧಾರಕ್ಕಾಗಿ ಮತ್ಸ್ಯಾದಿ ಲೀಲಾವತಾರಗಳ ಮೂಲಕ ನಿನ್ನ ಕೀರ್ತಿಯೆಂಬ ಪ್ರದೀಪವನ್ನು ಪ್ರಜ್ವಲಗೊಳಿಸಿದ ನಿನಗೆ ಸರ್ವಾತ್ಮನಾ ಶರಣಾಗಿದ್ದೇನೆ (೩೯).

ಅಥಾಪ್ಯಾಶ್ರಾವಯೇ ಬ್ರಹ್ಮ ನರಲೋಕವಿಡಂಬನಮ್ ।
ರಾಜ್ಞಃ ಪೈತೃಷ್ವಸೇಯಸ್ಯ ಭಕ್ತಸ್ಯ ಚ ಚಿಕೀರ್ಷಿತಮ್ ॥ ४೦
ಯಕ್ಷ್ಯತಿ ತ್ವಾಂ ಮಖೇಂದ್ರೇಣ ರಾಜಸೂಯೇನ ಪಾಂಡವಃ ।
ಪಾರಮೇಷ್ಠ್ಯಕಾಮೋ ನೃಪತಿಸ್ತದ್ ಭವಾನನುಮೋದತಾಮ್ ॥ ४೧
ತಸ್ಮಿನ್ ದೇವ ಕ್ರತುವರೇ ಭವಂತಂ ವೈ ಸುರಾದಯಃ ।
ದಿದೃಕ್ಷವಃ ಸಮೇಷ್ಯಂತಿ ರಾಜಾನಶ್ಚ ಯಶಸ್ವಿನಃ ॥ ४೨
ಶ್ರವಣಾತ್ ಕೀರ್ತನಾತ್ ಧ್ಯಾನಾತ್ ಪೂಯಂತೇಽಂತೇಽವಸಾಯಿನಃ ।
ತವ ಬ್ರಹ್ಮಮಯಸ್ಯೇಶ ಕಿಮುತೇಕ್ಷಾಭಿಮರ್ಶಿನಃ ॥ ४೩

ಯಸ್ಯಾಮಲಂ ದಿವಿ ಯಶಃ ಪ್ರಥಿತಂ ರಸಾಯಾಂ
ಭೂಮೌ ಚ ತೇ ಭುವನಮಂಗಲ ದಿಗ್ವಿತಾನಮ್ ।
ಮಂದಾಕಿನೀತಿ ದಿವಿ ಭೋಗವತೀತಿ ಚಾಧೋ

ಹೇ ಪರಮಾತ್ಮ, ಆದರೂ, ಮನುಷ್ಯಲೋಕದ ಲೀಲೆಯನ್ನನುಸರಿಸುತ್ತಿರುವ ನಿನಗೆ, ನಿನ್ನ ಭಕ್ತನೂ ಸೋದರತ್ತೆಯ ಮಗನೂ ಆದ ಧರ್ಮರಾಯನ ಉದ್ದೇಶವೇನಿದೆಯೆಂಬುದನ್ನು ತಿಳಿಸುತ್ತೇನೆ. ರಾಜಮಂಡಲಿಯಲ್ಲಿ ಪ್ರಾಶಸ್ತ್ಯವನ್ನು ಗಳಿಸಬೇಕೆಂದು ಆ ಪಾಂಡುಪುತ್ರನು ರಾಜಸೂಯವೆಂಬ ಶ್ರೇಷ್ಠವಾದ ಯಾಗದಿಂದ ನಿನ್ನನ್ನೇ ಪೂಜಿಸಲಿರುವನು. ಅದಕ್ಕೆ ನೀನು ಸಂಮತಿಸಬೇಕೆಂಬುದು ಅವನ ಉದ್ದೇಶ (४೦-४೧). ಸರ್ವೋತ್ತಮವಾದ ಆ ದೇವಯಾಗದ ಸಂದರ್ಭದಲ್ಲಿ ಸಕಲ ದೇವಾದಿಗಳೂ ವಿಖ್ಯಾತರಾದ ರಾಜರೂ ನಿನ್ನ ದರ್ಶನವನ್ನು ಬಯಸಿ ಆಗಮಿಸುವರು. ಹೇ ಪ್ರಭು, ವೇದಮೂರ್ತಿಯಾದ ನಿನ್ನ ನಾಮ ಶ್ರವಣದಿಂದ, ಕೀರ್ತನದಿಂದ, ಸ್ಮರಣದಿಂದ ಸಹ ಶ್ವಪಚರೂ ಪವಿತ್ರರಾಗುತ್ತಾರೆ. ಇನ್ನು ನಿನ್ನ ದರ್ಶನದಿಂದ, ಸ್ಪರ್ಶನದಿಂದ ಪವಿತ್ರರಾಗುತ್ತಾರೆಂದು ಹೇಳಬೇಕಾದ್ದೇನು ? (४೨-४೩). ಹೇ ತ್ರಿಭುವನಮಂಗಳ, ಸ್ವರ್ಗದಲ್ಲಿ-ಪಾತಾಳದಲ್ಲಿ-ಭೂಲೋಕದಲ್ಲಿ ಹರಡಿರುವ ನಿನ್ನ ಶುಭ್ರ ಕೀರ್ತಿಯು ದಿಗಂತಗಳವರೆಗೆ ಹೊದಿಸಿದ ಮೇಲ್ಕಟ್ಟಿನಂತೆ ವಿರಾಜಿಸುವುದು. ನಿನ್ನ

ಗಂಗೇತಿ ಚೇಹ ಚರಣಾಂಬು ಪುನಾತಿ ವಿಶ್ವಮ್ ॥ ೪೪

ಶ್ರೀ ಶುಕ ಉವಾಚ-

ತತ್ರ ತೇಷ್ವಾತ್ಮಪಕ್ಷೇಷ್ವಗೃಹ್ಣತ್ಸು ವಿಜಿಗೀಷಯಾ ।
ವಾಚಃ ಪೇಶೈಃ ಸ್ಮಯನ್ ಭೃತ್ಯಮುದ್ಧವಂ ಪ್ರಾಹ ಕೇಶವಃ ॥ ೪೫

ಶ್ರೀಭಗವಾನುವಾಚ-

ತ್ವಂ ಹಿ ನಃ ಪರಮಂ ಚಕ್ಷುಃ ಸುಹೃನ್ಮಂತ್ರಾರ್ಥತತ್ತ್ವವಿತ್ ।
ತಥಾತ್ರ ಬ್ರೂಹ್ಯನುಷ್ಠೇಯಂ ಶ್ರದ್ದಧ್ಮಃ ಕರವಾಮ ತತ್ ॥ ೪೬

ಇತ್ಯುಪಾಮಂತ್ರಿತೋ ಭರ್ತ್ರಾ ಸರ್ವಜ್ಞೇನಾಪಿ ಮುಗ್ಧವತ್ ।
ನಿದೇಶಂ ಶಿರಸಾಽಽಧಾಯ ಉದ್ಧವಃ ಪ್ರತ್ಯಭಾಷತ ॥ ೪೭

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಸಪ್ತತಿತಮಾಧ್ಯಾಯಃ

ಪಾದೋದಕವು ಸ್ವರ್ಗದಲ್ಲಿ ಮಂದಾಕಿನಿಯೆನಿಸಿ, ಪಾತಾಳದಲ್ಲಿ ಭೋಗವತಿಯೆನಿಸಿ, ಈ ಭೂಲೋಕದಲ್ಲಿ ಗಂಗೆಯೆನಿಸಿ ವಿಶ್ವವನ್ನು ಪಾವನಗೊಳಿಸುತ್ತಿದೆ'' ಎಂದರು (೪೪). ಆ ಸಂದರ್ಭದಲ್ಲಿ ಸ್ವಪಕ್ಷೀಯರಾದ ಯಾದವರು ಜರಾಸಂಧನನ್ನು ಗೆಲ್ಲಬೇಕೆಂಬ ವಿಜಯೇಚ್ಛೆಯುಳ್ಳವರಾಗಿ, ರಾಜಸೂಯಕ್ಕೆ ಹೋಗಲು ಒಪ್ಪಲಿಲ್ಲ. ಆಗ ಕೇಶವನು ಮಂತ್ರಿಯಾದ ಉದ್ಧವನನ್ನು ಕುರಿತು ಮೃದುವಾಕ್ಯಗಳಿಂದ ಹೀಗೆಂದನು (೪೫) : ''ಉದ್ಧವ, ನೀನು ನಮಗೆ ಸರಿಯಾಗಿ ನೋಡಬಲ್ಲ ಕಣ್ಣು, ಮಿತ್ರನೂ ಮಂತ್ರಾಲೋಚನೆಯಲ್ಲಿ ನಿಪುಣನೂ ಆಗಿದ್ದೀಯೆ. ಈಗ ಏನುಮಾಡಬೇಕೆಂಬುದನ್ನು ಹೇಳು. ನಿನ್ನ ಮಾತನ್ನುಶ್ರದ್ಧೆಯಿಂದ ಒಪ್ಪಿಕೊಂಡು ಅದರಂತೆ ನಡೆಯೋಣ'' ಎಂದನು(೪೬). ಸ್ವಯಂ ಸರ್ವಜ್ಞನಾಗಿದ್ದರೂ ಗೊತ್ತಿಲ್ಲದವನಂತೆ ತನ್ನ ಸ್ವಾಮಿಯು ಮಂತ್ರಾಲೋಚನೆಯನ್ನು ಕೇಳಲಾಗಿ, ಉದ್ಧವನು ಅವನ ಆಜ್ಞೆಯನ್ನು ಶಿರಸಾ ವಹಿಸಿ ಈ ಪ್ರಕಾರ ನುಡಿದನು (೪೭).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಪ್ಪತ್ತನೆಯ ಅಧ್ಯಾಯ

ಏಕಸಪ್ತತಿತಮಾಧ್ಯಾಯಃ

ಶ್ರೀಶುಕ ಉವಾಚ-

ಇತ್ಯುದೀರಿತಮಾಕರ್ಣ್ಯ ದೇವರ್ಷೇರುದ್ಧವೋऽಬ್ರವೀತ್ ।
ಸಭ್ಯಾನಾಂ ಮತಮಾಜ್ಞಾಯ ಕೃಷ್ಣಸ್ಯ ಚ ಮಹಾಮತಿಃ ॥ ೧

ಉದ್ಧವ ಉವಾಚ-

ಯದುಕ್ತಮೃಷಿಣಾ ದೇವ ಸಾಚಿವ್ಯಂ ಯಕ್ಷ್ಯ ತಸ್ತ್ವಯಾ ।
ಕಾರ್ಯಂ ಪೈತೃಷ್ವಸ್ರೇಯಸ್ಯ ರಕ್ಷಾ ಚ ಶರಣೈಷಿಣಾಮ್ ॥ ೨

ಯಷ್ಟವ್ಯಂ ರಾಜಸೂಯೇನ ದಿಕ್ಚಕ್ರಜಯಿನಾ ವಿಭೋ ।
ಅತೋ ಜರಾಸುತಜಯ ಉಭಯಾರ್ಥೋ ಮತೋ ಮಮ ॥ ೩

ಅಸ್ಮಾಕಂ ಚ ಮಹಾನರ್ಥೋ ಹ್ಯೇತೇನೈವ ಭವಿಷ್ಯತಿ ।
ಯಶಶ್ಚ ತವ ಗೋವಿಂದ ರಾಜ್ಞೋ ಬದ್ಧಾನ್ ವಿಮುಂಚತಃ ॥ ೪

ಅಧ್ಯಾಯ ೭೧

ಉದ್ಧವನ ಸಲಹೆಯಂತೆ ಶ್ರೀಕೃಷ್ಣನು ರಾಜಸೂಯಯಾಗಕ್ಕಾಗಿ
ಇಂದ್ರಪ್ರಸ್ಥಕ್ಕೆ ತೆರಳುವುದು.

ದೇವರ್ಷಿಗಳಾದ ನಾರದರು ಹೀಗೆ ಹೇಳಿದ್ದನ್ನು ಕೇಳಿ ಮಹಾಬುದ್ಧಿಶಾಲಿಯಾದ ಉದ್ಧವನು ಸಭಾಸದರಾದ ಯಾದವರ ಅಭಿಪ್ರಾಯವನ್ನರಿತು ಶ್ರೀಕೃಷ್ಣನ ಇಂಗಿತವನ್ನೂಹಿಸಿ ಹೀಗೆಂದನು : "ದೇವ, ಋಷಿಗಳು ಹೇಳಿದಂತೆ ರಾಜಸೂಯಯಾಗವನ್ನು ಮಾಡಲಿರುವ ನಿನ್ನ ಸೋದರತ್ತೆಯ ಮಗನಾದ ಧರ್ಮರಾಯನಿಗೆ ಸಹಾಯ ಮಾಡಬೇಕೆಂಬುದು ಯುಕ್ತವಾಗಿದೆ. ಹಾಗೆಯೇ ಶರಣಾರ್ಥಿಗಳಾದ ರಾಜರನ್ನು ರಕ್ಷಿಸಬೇಕೆಂಬುದೂ ಸರಿಯಾದದ್ದು (೧-೨). ರಾಜಸೂಯದಿಂದ ಯಾಗಮಾಡತಕ್ಕವನು ಸಕಲರಾಜರನ್ನೂ ಗೆದ್ದು ದಿಗ್ವಿಜಯವನ್ನು ಸಾಧಿಸಬೇಕಾಗಿದೆ. ಆದಕಾರಣ ಜರಾಸಂಧನನ್ನು ಜಯಿಸುವುದು ಉಭಯಪ್ರಯೋಜನವುಳ್ಳದೆಂದು ನನ್ನ ಅಭಿಪ್ರಾಯ. ಜರಾಸಂಧನನ್ನು

ಸ ವೈ ದುರ್ವಿಷಹೋ ರಾಜಾ ನಾಗಾಯುತಸಮೋ ಬಲೇ।
ಬಲಿನಾಮಪಿ ಚಾನ್ಯೇಷಾಂ ಭೀಮಂ ಸಮಬಲಂ ವಿನಾ ॥ ೫

ದ್ವೈರಥೇ ಸ ತು ಜೇತವ್ಯೋ ಮಾ ಶತಾಕ್ಷೌಹಿಣೀಯುತಃ।
ಬ್ರಹ್ಮಣ್ಯೋಽಭ್ಯರ್ಥಿತೋ ವಿಪ್ರೈರ್ನ ಪ್ರತ್ಯಾಖ್ಯಾತಿ ಕರ್ಹಿಚಿತ್ ॥ ೬

ಬ್ರಹ್ಮವೇಷಧರೋ ಗತ್ವಾ ತಂ ಭಿಕ್ಷೇತ ವೃಕೋದರಃ।
ಹನಿಷ್ಯತಿ ನ ಸಂದೇಹೋ ದ್ವೈರಥೇ ತವ ಸಂನಿಧೌ ॥ ೭

ನಿಮಿತ್ತಂ ಪರಮೀಶಸ್ಯ ವಿಶ್ವಸರ್ಗನಿರೋಧಯೋಃ।
ಹಿರಣ್ಯಗರ್ಭಃ ಶರ್ವಶ್ಚ ಕಾಲಸ್ಯಾರೂಪಿಣಸ್ತವ ॥ ೮

ಗಾಯಂತಿ ತೇ ವಿಶದಕರ್ಮ ಗೃಹೇಷು ದೇವ್ಯೋ
ರಾಜ್ಞಾಂ ಸ್ವಶತ್ರುವಧಮಾತ್ಮ ವಿಮೋಕ್ಷಣಂ ಚ।
ಗೋಪ್ಯಶ್ಚ ಕುಂಜರಪತೇರ್ಜನಕಾತ್ಮಜಾಯಾಃ
ಪಿತ್ರೋಶ್ಚ ಲಬ್ಧಶರಣಾ ಮುನಯೋ ವಯಂ ಚ ॥ ೯

ಪರಾಜಯಗೊಳಿಸುವುದರಿಂದಲೇ ನಮಗೆ ಮಹತ್ತರವಾದ ಲಾಭಉಂಟು. ಗೋವಿಂದ, ಬಂದಿಗಳಾಗಿರುವ ರಾಜರನ್ನು ಸೆರೆಯಿಂದ ಬಿಡಿಸಿದರೆ, ನಿನಗೆ ಒಳ್ಳೆಯ ಕೀರ್ತಿಯೂ ಬರುವುದು (೩-೪). ಸಾವಿರ ಆನೆಗಳ ಬಲವುಳ್ಳ ಆ ಮಗಧರಾಜನನ್ನು ಗೆಲ್ಲುವುದು ಕಠಿಣ. ಅವನಿಗೆ ಸಮಬಲನಾದ ಭೀಮಸೇನನೊಬ್ಬನನ್ನು ಬಿಟ್ಟು ಉಳಿದ ಎಲ್ಲ ಬಲಾಢ್ಯರಿಗೂ ಅವನು ದುರ್ಜಯನೇ ಸರಿ. ಆತನನ್ನು ದ್ವಂದ್ವಯುದ್ಧದಲ್ಲಿ ಗೆಲ್ಲಬೇಕೇಹೊರತು ನೂರಾರು ಅಕ್ಷೌಹಿಣೀ ಬಲಸಮೇತನಾದಾಗ ಗೆಲ್ಲಲಾಗುವುದಿಲ್ಲ. ಮಾಗಧನು ಬ್ರಾಹ್ಮಣಪ್ರಿಯನಾದ್ದರಿಂದ ಬ್ರಾಹ್ಮಣರು ಬೇಡಿಕೊಂಡರೆ ಎಂದಿಗೂ ಇಲ್ಲವೆನ್ನುವುದಿಲ್ಲ (೫-೬). ಭೀಮಸೇನನು ಬ್ರಾಹ್ಮಣವೇಷದಲ್ಲಿ ಹೋಗಿ ದ್ವಂದ್ವಯುದ್ಧವನ್ನು ಬೇಡಲಿ. ನಿನ್ನ ಸಂನಿಧಾನವಿರುವಾಗ ನಿಶ್ಚಯವಾಗಿಯೂ ಭೀಮನು ಜರಾಸಂಧನನ್ನು ಕೊಂದುಹಾಕುವನು. ಸರ್ವವನ್ನೂ ನಿಯಂತ್ರಿಸುವ ರೂಪರಹಿತಕಾಲಾತ್ಮನಾಗಿರುವ ನಿನಗೆ ವಿಶ್ವದ ಸೃಷ್ಟಿಪ್ರಳಯಗಳಲ್ಲಿ ಬ್ರಹ್ಮರುದ್ರರು ಬರಿಯ ನಿಮಿತ್ತಮಾತ್ರರಲ್ಲವೆ? (೭-೮). ಜರಾಸಂಧನು ಹತನಾದಮೇಲೆ ಆತನ

ಜರಾಸಂಧವಧಃ ಕೃಷ್ಣ ಭೂರ್ಯರ್ಥಾಯೋಪಕಲ್ಪತೇ ।
ಪ್ರಾಯಃ ಪಾಕವಿಪಾಕೇನ ತವ ಚಾಭಿಮತಃ ಕ್ರತುಃ ॥ ೧೦

ಶ್ರೀಶುಕ ಉವಾಚ-

ಇತ್ಯುದ್ಧವವಚೋ ರಾಜನ್ ಸರ್ವತೋ ಭದ್ರಮಚ್ಯುತಮ್ ।
ದೇವರ್ಷಿರ್ಯದುವೃದ್ಧಾಶ್ಚ ಕೃಷ್ಣಶ್ಚ ಪ್ರತ್ಯಪೂಜಯನ್ ॥ ೧೧

ಅಥಾದಿಶತ್ ಪ್ರಯಾಣಾಯ ಭಗವಾನ್ ದೇವಕೀಸುತಃ ।
ಭೃತ್ಯಾನ್ ದಾರುಕಜೈತ್ರಾದೀನನುಜ್ಞಾಪ್ಯ ಗುರೂನ್ ವಿಭುಃ ॥ ೧೨

ನಿರ್ಗಮಯ್ಯಾವರೋಧಾನ್ ಸ್ವಾನ್ ಸಸುತಾನ್ ಸಪರಿಚ್ಛದಾನ್ ।
ಸಂಕರ್ಷಣಮನುಜ್ಞಾಪ್ಯ ಯದುರಾಜಂ ಚ ಶತ್ರುಹನ್ ।
ಸೂತೋಪನೀತಂ ಸ್ವರಥಮಾರುಹದ್ ಗರುಡಧ್ವಜಮ್ ॥ ೧೩

ವಧೆಯನ್ನೂ ರಾಜರ ಬಿಡುಗಡೆಯನ್ನೂ ಕುರಿತು ಹಾಡುಕಟ್ಟಿ ಆ ರಾಜರ ಪತ್ನಿಯರು ತಮ್ಮ ಮನೆಗಳಲ್ಲಿ ನಿನ್ನ ಧವಳಕೀರ್ತಿಯನ್ನು ಹಾಡುವರು. ಶಂಖಚೂಡನ ಸಂಹಾರವಾದಮೇಲೆ ಅದನ್ನೂ ತಮ್ಮ ಬಿಡುಗಡೆಯನ್ನೂ ಕುರಿತು ಗೋಪಿಯರು ಹಾಡುತ್ತಿದ್ದಾರಲ್ಲವೆ ? ಗಜೇಂದ್ರನಿಗೆ ಮೊಸಳೆಯಿಂದಲೂ ಜಾನಕಿಗೆ ರಾವಣನಿಂದಲೂ ನಿನ್ನ ತಾಯಿತಂದೆಗಳಿಗೆ ಕಂಸನಿಂದಲೂ ವಿಮೋಚನೆಯಾದ್ದನ್ನು ಕುರಿತು ನಿನ್ನ ಭಕ್ತರಾದ ಮುನಿಗಳೂ ನಾವು ಹಾಡುತ್ತಿರುವ ಹಾಗೆ (೯). ಶ್ರೀಕೃಷ್ಣ ಜರಾಸಂಧವಧೆಯು ಈ ರೀತಿ ಬಹುಪ್ರಯೋಜನಗಳನ್ನೀಯುವುದು. ಪ್ರಾಯಶಃ ಆತನ ಪಾಪಕರ್ಮವು ಪಕ್ವವಾದ್ದರಿಂದ ನಿನಗೆ ರಾಜಸೂಯಯಾಗವು ಸಂಮತವಾಗಿದೆ. (ಯಾಗಕ್ಕೆ ನೀನು ಹೋದರೆ ಇದೆಲ್ಲವೂ ನಡೆಯುವುದು)'' ಎಂದನು (೧೦). ಪರೀಕ್ಷಿತರಾಜ, ಹೀಗೆ ಯುಕ್ತಿಯುಕ್ತವೂ ಸರ್ವತೋಭದ್ರವೂ ಆದ ಉದ್ಧವನ ನುಡಿಯನ್ನು ಕೇಳಿ ನಾರದರೂ ಯದುಕುಲದ ಹಿರಿಯರೂ ಶ್ರೀಕೃಷ್ಣನೂ ಸಂಮತಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು (೧೧). ಅನಂತರ ಭಗವಾನ್ ದೇವಕೀಸುತನು ಹಿರಿಯರಾದ ವಸುದೇವಾದಿಗಳ ಅನುಜ್ಞೆಯನ್ನು ಪಡೆದು ಭೃತ್ಯವರ್ಗದವರಾದ ದಾರುಕ, ಜೈತ್ರ ಮೊದಲಾದವರಿಗೆ

ತತೋ ರಥದ್ವಿಪಭಟಸಾದಿನಾಯಕೈಃ
ಕರಾಲಯಾ ಪರಿವೃತ ಆತ್ಮಸೇನಯಾ ।
ಮೃದಂಗಭೇರ್ಯಾನಕಶಂಖಗೋಮುಖೈಃ
ಪ್ರಘೋಷಘೋಷಿತಕಕುಭೋ ನಿರಾಕ್ರಮತ್ ॥ ೧೪

ನೃವಾಜಿಕಾಂಚನಶಿಬಿಕಾಭಿರಚ್ಯುತಂ
ಸಹಾತ್ಮಜಾಃ ಪತಿಮನುಸುವ್ರತಾ ಯಯುಃ ।
ವರಾಂಬರಾಭರಣವಿಲೇಪನಸ್ರಜಃ
ಸುಸಂವೃತಾ ನೃಭಿರಸಿಚರ್ಮಪಾಣಿಭಿಃ ॥ ೧೫

ನರೋಷ್ಟ್ರಗೋಮಹಿಷಖರಾಶ್ವತರ್ಯನಃ-
ಕರೇಣುಭಿಃ ಪರಿಜನವಾರಯೋಷಿತಃ ।
ಸ್ವಲಂಕೃತಾಃ ಕಟಕುಟಿಕಂಬಲಾಂಬರಾ-
ದ್ಯುಪಸ್ಕರಾ ಯಯುರಧಿಯುಜ್ಯ ಸರ್ವತಃ ॥ ೧೬

ಪ್ರಯಾಣಸಿದ್ಧತೆಗಾಗಿ ಆಜ್ಞಾಪಿಸಿದನು (೧೨). ಶತ್ರುಘಾತಿಯಾದ ಪರೀಕ್ಷಿತರಾಜ, ಬಲರಾಮನ ಮತ್ತು ಯದುರಾಜನಾದ ಉಗ್ರಸೇನನ ಒಪ್ಪಿಗೆಯನ್ನು ಪಡೆದು, ಪುತ್ರಪರಿವಾರಸಹಿತರಾದ ತನ್ನ ಅಂತಃಪುರಸ್ತ್ರೀಯರನ್ನು ಪ್ರಯಾಣಕ್ಕೆ ಹೊರಡಿಸಿ, ಸಾರಥಿಯು ತಂದು ನಿಲ್ಲಿಸಿದ ಗರುಢಧ್ವಜವಿರುವ ತನ್ನ ರಥವನ್ನೇರಿದನು (೧೩). ಒಡನೆಯೇ ರಥ, ಗಜ, ಕಾಲಾಳು, ಸವಾರ, ಸೇನಾಪತಿಗಳಿಂದ ಭೀಕರವಾದ ತನ್ನ ಸೇನೆಯಿಂದ ಪರಿವೃತನಾಗಿ, ಮೃದಂಗ, ಭೇರಿ, ತಮಟೆ, ಶಂಖ, ಕೊಂಬು ಮುಂತಾದ ವಾದ್ಯಗಳಿಂದ ದಿಕ್ಕುಗಳನ್ನು ಮೊಳಗಿಸುತ್ತ ನಗರದಿಂದ ಹೊರಟನು (೧೪). ಪತಿವ್ರತೆಯರಾದ ಶ್ರೀಕೃಷ್ಣನ ಮಡದಿಯರು ಉತ್ತಮ ವಸ್ತ್ರವನ್ನುಟ್ಟು, ಆಭರಣವನ್ನು ತೊಟ್ಟು, ಸುಗಂಧವನ್ನು ಪೂಸಿಕೊಂಡು, ಮಾಲೆಗಳನ್ನು ಮುಡಿದುಕೊಂಡು ತಮ್ಮ ಮಕ್ಕಳೊಡನೆ, ಮನುಷ್ಯರೆಳೆಯುವ ಗಾಡಿ, ಕುದುರೆ, ಚಿನ್ನದ ಪಲ್ಲಕ್ಕಿಗಳಲ್ಲಿ ಕುಳಿತು ತಮ್ಮ ಪತಿಯಾದ ಅಚ್ಯುತನ ಹಿಂದೆ ಹೋದರು (೧೫). ಹಾಗೆಯೇ ಪರಿಜನರ ಹೆಂಡತಿಯರೂ ವೇಶ್ಯೆಯರೂ ಸಹ ತಮ್ಮನ್ನು ಅಲಂಕರಿಸಿಕೊಂಡು ಚಾಪೆಯ ಡೇರೆ, ಕಂಬಳಿ, ಬಟ್ಟೆ ಮೊದಲಾದ ಉಪಸ್ಕರಗಳನ್ನು ಆಳುಗಳ ಮೇಲೂ ಒಂಟೆ, ಎತ್ತು, ಕೋಣ, ಕತ್ತೆ, ಹೇಸರಗತ್ತೆ, ಬಂಡಿ, ಹೆಣ್ಣಾನೆಗಳ ಮೇಲೆಯೂ ಹೇರಿಸಿಕೊಂಡು ಪ್ರಯಾಣ ಮಾಡಿದರು (೧೬).

ಬಲಂ ಬೃಹದ್ಧ್ವಜಪಟಛತ್ರಚಾಮರೈ-
ರ್ವರಾಯುಧಾಭರಣಕಿರೀಟವರ್ಮಭಿಃ ।
ದಿವಾಂಶುಭಿಸ್ತುಮುಲರವಂ ಬಭೌ ರವೇ -
ರ್ಯಥಾರ್ಣವಃ ಕ್ಷುಭಿತತಿಮಿಂಗಿಲೋರ್ಮಿಭಿಃ ॥ ೧೭

ಅಥೋ ಮುನಿರ್ಯದುಪತಿನಾ ಸಭಾಜಿತಃ
ಪ್ರಣಮ್ಯ ತಂ ಹೃದಿ ವಿದಧದ್ ವಿಹಾಯಸಾ ।
ನಿಶಮ್ಯ ತದ್ವ್ಯವಸಿತಮಾಹೃತಾರ್ಹಣೋ
ಮುಕುಂದಸಂದರ್ಶನನಿರ್ವೃತೇಂದ್ರಿಯಃ ॥ ೧೮

ರಾಜದೂತಮುವಾಚೇದಂ ಭಗವಾನ್ ಪ್ರೀಣಯನ್ ಗಿರಾ ।
ಮಾ ಭೈಷ್ಟ ದೂತ ಭದ್ರಂ ವೋ ಘಾತಯಿಷ್ಯಾಮಿ ಮಾಗಧಮ್ ॥ ೧೯

ಇತ್ಯುಕ್ತಃ ಪ್ರಸ್ಥಿತೋ ದೂತೋ ಯಥಾವದವದನ್ನೃಪಾನ್ ।
ತೇಽಪಿ ಸಂದರ್ಶನಂ ಶೌರೇಃ ಪ್ರತ್ಯೈಕ್ಷನ್ ಯನ್ಮುಮುಕ್ಷವಃ ॥ ೨೦

ಧ್ವಜಪಟಗಳಿಂದಲೂ ಛತ್ರಚಾಮರಗಳಿಂದಲೂ ಮಿರುಮಿರುಗುವ ಆಯುಧ ಆಭರಣ ಕಿರೀಟ ಕವಚಗಳಿಂದಲೂ ಬೆಳಗುತ್ತ ಕೋಲಾಹಲ ಧ್ವನಿಗೈಯುತ್ತಿದ್ದ ಆ ಬೃಹತ್ ಸೇನೆಯು, ಹಗಲುಹೊತ್ತು ಸೂರ್ಯಕಿರಣಗಳಿಂದ ಸಂಮಿಶ್ರವಾಗಿ ತಿಮಿಂಗಿಲಗಳಿಂದಲೂ ಅಲೆಗಳಿಂದಲೂ ಸಂಕ್ಷುಬ್ಧವಾಗಿ ಮೊರೆಯುತ್ತಿರುವ ಮಹಾಸಾಗರವನ್ನು ಹೋಲುತ್ತಿತ್ತು (೧೭). ಇತ್ತಲಾಗಿ ಯದುಪತಿಯಿಂದ ಸತ್ಕೃತರಾದ ನಾರದಮುನಿಗಳು ಆತನ ಉದ್ಯೋಗವನ್ನರಿತು ಹೃದಯದಲ್ಲಿಯೇ ಮುಕುಂದನಿಗೆ ಗೌರವವನ್ನರ್ಪಿಸಿ ನಮಸ್ಕಾರಮಾಡಿ, ಅವನ ದರ್ಶನದಿಂದ ಸಕಲೇಂದ್ರಿಯಗಳೂ ಸಂತೃಪ್ತಿಗೊಳ್ಳಲಾಗಿ ಶ್ರೀಕೃಷ್ಣನನ್ನು ಧ್ಯಾನಿಸುತ್ತ ಆಕಾಶ ಮಾರ್ಗದಲ್ಲಿ ಹೊರಟುಹೋದರು (೧೮). ಶ್ರೀಕೃಷ್ಣನು ರಾಜದೂತನನ್ನು ಸವಿನುಡಿಯಿಂದ ಸಂತೋಷಪಡಿಸುತ್ತ ''ಅಯ್ಯಾ-ದೂತ, ಹೆದರಬೇಡಿರಿ. ನಿಮಗೆ ಶುಭವಾಗಲಿ. ಜರಾಸಂಧನನ್ನು ಕೊಲ್ಲಿಸುವೆನು'' ಎಂದನು. ಹೀಗೆ ಹೇಳಲಾಗಿ ಆ ದೂತನು ಅಲ್ಲಿಂದ ತೆರಳಿ ರಾಜರಿಗೆ ಶ್ರೀಕೃಷ್ಣನು ಹೇಳಿದ್ದನ್ನು ತಿಳಿಸಿದನು. ಆ ಮಾತನ್ನು ಕೇಳಿ, ಮುಮುಕ್ಷುಗಳು ಸಂಸಾರಬಂಧನದಿಂದ ವಿಮೋಚನೆಯನ್ನು ಬಯಸುವಂತೆ, ಸೆರೆಯಿಂದ ತಮ್ಮ ಬಿಡುಗಡೆಯನ್ನು

ಆನರ್ತಸೌವೀರಮರೂಂಸ್ತೀರ್ತ್ವಾ ವಿನಶನಂ ಹರಿಃ।
ಗಿರೀನ್ ನದೀರತೀಯಾಯ ಪುರಗ್ರಾಮವ್ರಜಾಕರಾನ್॥ ೨೧

ತತೋ ದೃಷದ್ವತೀಂ ತೀರ್ತ್ವಾ ಮುಕುಂದೋಽಥ ಸರಸ್ವತೀಮ್।
ಪಂಚಾಲಾನಥ ಮತ್ಸ್ಯಾಂಶ್ಚ ಶಕ್ರಪ್ರಸ್ಥಮಥಾಗಮತ್॥ ೨೨

ತಮುಪಾಗತಮಾಕರ್ಣ್ಯ ಪ್ರೀತೋ ದುರ್ದರ್ಶನಂ ನೃಣಾಮ್।
ಅಜಾತಶತ್ರುರ್ನಿರಗಾತ್ ಸೋಪಾಧ್ಯಾಯಃ ಸುಹೃದ್ವೃತಃ॥ ೨೩

ಗೀತವಾದಿತ್ರಘೋಷೇಣ ಬ್ರಹ್ಮಘೋಷೇಣ ಭೂಯಸಾ।
ಅಭ್ಯಯಾತ್ ಸ ಹೃಷೀಕೇಶಂ ಪ್ರಾಣಾಃ ಪ್ರಾಣಮಿವಾದೃತಃ॥ ೨೪

ದೃಷ್ಟ್ವಾ ವಿಕ್ಲಿನ್ನಹೃದಯಃ ಕೃಷ್ಣಂ ಸ್ನೇಹೇನ ಪಾಂಡವಃ।
ಚಿರಾದ್ ದೃಷ್ಟಂ ಪ್ರಿಯತಮಂ ಸಸ್ವಜೇಽಥ ಪುನಃ ಪುನಃ॥ ೨೫

ಬಯಸುತ್ತ ಭಗವಂತನ ಆಗಮನವನ್ನು ನಿರೀಕ್ಷಿಸುತ್ತಿದ್ದರು (೧೯-೨೦). ತರುವಾಯ ಶ್ರೀಹರಿಯು ಅನರ್ತ, ಸೌವೀರ, ಕುರುದೇಶಗಳನ್ನೂ ಕುರುಕ್ಷೇತ್ರವನ್ನೂ ಲಂಘಿಸಿ ದಾರಿಯಲ್ಲಿದ್ದ ಬೆಟ್ಟ, ನದಿ, ಪಟ್ಟಣ, ಗ್ರಾಮ ಸಮೂಹಗಳನ್ನು ದಾಟಿಹೋದನು (೨೧). ಆಮೇಲೆ ಮುಕುಂದನು ದೃಷದ್ವತೀ ಮತ್ತು ಸರಸ್ವತೀ ನದಿಗಳನ್ನೂ ಪಾಂಚಾಲ ಮತ್ಸ್ಯದೇಶಗಳನ್ನೂ ಅತಿಕ್ರಮಿಸಿ ಇಂದ್ರಪ್ರಸ್ಥಕ್ಕೆ ಬಂದನು. ಜನರಿಗೆ ಯಾರ ದರ್ಶನವು ದುರ್ಲಭವೋ ಅಂತಹ ಶ್ರೀಕೃಷ್ಣನು ಆಗಮಿಸಿದನೆಂಬುದನ್ನು ಕೇಳಿ ಅಜಾತಶತ್ರುವೆನಿಸಿದ ಧರ್ಮರಾಜನು ಆನಂದಗೊಂಡು ಪುರೋಹಿತರು ಮತ್ತು ಮಿತ್ರರೊಡನೆ ಎದುರುಗೊಳ್ಳಲು ಹೊರಟನು (೨೨-೨೩). ಗೀತವಾದ್ಯ ಧ್ವನಿಗಳು ಭೋರ್ಗರೆಯುತ್ತಿರಲು, ವೇದಘೋಷವು ಮೊಳಗುತ್ತಿರಲು, ಯುಧಿಷ್ಠಿರನು ಪರಿವಾರಸಮೇತನಾಗಿ, ಇಂದ್ರಿಯಗಳು ಮರಳಿಬಂದ ಪ್ರಾಣವನ್ನು ಹೇಗೋ ಹಾಗೆ ಹೃಷೀಕೇಶನನ್ನು ಸ್ವಾಗತಿಸಿದನು (೨೪). ಬಹುಕಾಲದಮೇಲೆ ಗೋಚರಿಸಿದ ಪ್ರಿಯತಮನಾದ ಶ್ರೀಕೃಷ್ಣನನ್ನು ಕಂಡೊಡನೆ ಧರ್ಮರಾಜನ ಹೃದಯವು ಸ್ನೇಹದಿಂದ ಕರಗಿಹೋಯಿತು. ಮತ್ತೆ ಮತ್ತೆ ಅವನನ್ನು ಆಲಂಗಿಸಿಕೊಂಡನು (೨೫).

ದೋರ್ಭ್ಯಾಂ ಪರಿಷ್ವಜ್ಯ ರಮಾಮಲಾಲಯಂ
ಮುಕುಂದಗಾತ್ರಂ ನೃಪತಿರ್ಹತಾಶುಭಃ।
ಲೇಭೇ ಪರಾಂ ನಿರ್ವೃತಿಮಶ್ರುಲೋಚನೋ
ಹೃಷ್ಯತ್ತನುರ್ವಿಸ್ಮೃತಲೋಕವಿಭ್ರಮಃ॥ ೨೬

ತಂ ಮಾತುಲೇಯಂ ಪರಿರಭ್ಯ ನಿರ್ವೃತೋ
ಭೀಮಃ ಸ್ಮಯನ್ ಪ್ರೇಮಜವಾಕುಲೇಂದ್ರಿಯಃ।
ಯಮೌ ಕಿರೀಟೀ ಚ ಸುಹೃತ್ತಮಂ ಮುದಾ
ಪ್ರವೃದ್ಧಬಾಷ್ಪಾಃ ಪರಿರೇಭಿರೇಽಚ್ಯುತಮ್॥ ೨೭

ಅರ್ಜುನೇನ ಪರಿಷ್ವಕ್ತೋ ಯಮಾಭ್ಯಾಮಭಿವಾದಿತಃ।
ಬ್ರಾಹ್ಮಣೇಭ್ಯೋ ನಮಸ್ಕೃತ್ಯ ವೃದ್ಧೇಭ್ಯಶ್ಚ ಯಥಾರ್ಹತಃ॥ ೨೮

ಲಕ್ಷ್ಮೀದೇವಿಗೆ ನಿವಾಸಸ್ಥಾನವಾದ ಮುಕುಂದನ ಪರಿಶುದ್ಧ ದೇಹವನ್ನು ಎರಡು ಕೈಗಳಿಂದಲೂ ಅಪ್ಪಿಕೊಂಡ ಧರ್ಮರಾಯನ ಎಲ್ಲ ಅಶುಭಗಳೂ ನೀಗಿದವು. ಪರಮಾನಂದಗೊಂಡ ಧರ್ಮರಾಜನ ಕಣ್ಣುಗಳಿಂದ ಆನಂದಬಾಷ್ಪಗಳು ಹರಿದವು. ದೇಹವು ರೋಮಾಂಚಿತವಾಯಿತು. ಬಾಹ್ಯ ವೃತ್ತಾಂತವೆಲ್ಲ ಅವನಿಗೆ ಮರೆತು ಹೋಯಿತು (೨೬). ತರುವಾಯ ಭೀಮಸೇನನು ಪ್ರೇಮಾತಿಶಯದಿಂದ ಪರವಶನಾಗಿ ನಗುತ್ತ ಸೋದರಮಾವನ ಮಗನಾದ ಶ್ರೀಕೃಷ್ಣನನ್ನು ಆಲಂಗಿಸಿ ಆನಂದಿಸಿದನು. ಅರ್ಜುನನೂ ನಕುಲಸಹದೇವರೂ ತಮಗೆ ಅತ್ಯಂತ ಪ್ರಿಯನಾದ ಅಚ್ಯುತನನ್ನು ಪ್ರೀತಿಯಿಂದ ಅಪ್ಪಿಕೊಂಡು ಆನಂದಾಶ್ರುಗಳನ್ನು ಸುರಿಸಿದರು (೨೭). ಮತ್ತೆ ಅರ್ಜುನನು ಆಲಂಗಿಸಿದನು. ನಕುಲ ಸಹದೇವರು ಅಭಿವಾದನೆ ಮಾಡಿದರು. ಬಳಿಕ ಶ್ರೀಕೃಷ್ಣನು ಬ್ರಾಹ್ಮಣರಿಗೂ ಗುರುಹಿರಿಯರಿಗೂ ಯಥಾರ್ಹವಾಗಿ ವಂದಿಸಿ ಅವರಿಂದ ಸಂಮಾನಿತನಾಗಿ, ಕುರು, ಸೃಂಜಯ, ಕೇಕಯಾಧಿಪತಿಗಳಿಗೆ ಗೌರವವನ್ನರ್ಪಿಸಿದನು. ಅನಂತರ ಸೂತ, ಮಾಗಧ, ಸಂಗೀತಗಾರ, ವಂದಿ, ಪರಿಹಾಸಕರು ಮೃದಂಗ, ಶಂಖ, ಪಟಹ, ವೀಣೆ, ಪಣವ, ಗೋಮುಖಾದಿ ವಾದ್ಯಗಳನ್ನುನುಡಿಸುತ್ತ ಸ್ತೋತ್ರಮಾಡಿದರು, ಕುಣಿದರು, ಹಾಡಿದರು. ಬ್ರಾಹ್ಮಣರು ವೇದಮಂತ್ರಗಳಿಂದ ಆಶೀರ್ವದಿಸಿದರು (೨೮-೩೦).

ಮಾನಿತೋ ಮಾನಯಾಮಾಸ ಕುರುಸೃಂಜಯಕೈಕಯಾನ್ ।
ಸೂತಮಾಗಧಗಂಧರ್ವಾ ವಂದಿನಶ್ಚೋಪಮಂತ್ರಿಣಃ ॥ ೨೯

ಮೃದಂಗಶಂಖಪಟಹವೀಣಾಪಣವಗೋಮುಖೈಃ ।
ಬ್ರಾಹ್ಮಣಾಶ್ಚಾರವಿಂದಾಕ್ಷಂ ತುಷ್ಟುವುರ್ನನೃತುರ್ಜಗುಃ ॥ ೩೦

ಏವಂ ಸುಹೃದ್ಭಿಃ ಪರ್ಯಸ್ತಃ ಪುಣ್ಯಶ್ಲೋಕಶಿಖಾಮಣಿಃ ।
ಸಂಸ್ತೂಯಮಾನೋ ಭಗವಾನ್ ವಿವೇಶಾಲಂಕೃತಂ ಪುರಮ್ ॥ ೩೧

ಸಂಸಿಕ್ತವರ್ತ್ಮ ಕರಿಣಾಂ ಮದಗಂಧತೋಯೈ-
ಶ್ಚಿತ್ರಧ್ವಜೈಃ ಕನಕತೋರಣಪೂರ್ಣಕುಂಭೈಃ ।
ಮೃಷ್ಟಾತ್ಮಭಿರ್ನವದುಕೂಲವಿಭೂಷಣಸ್ರಗ್-
ಗಂಧೈರ್ನೃಭಿರ್ಯುವತಿಭಿಶ್ಚ ವಿರಾಜಮಾನಮ್ ॥ ೩೨

ಉದ್ದೀಪ್ತದೀಪಬಲಿಭಿಃ ಪ್ರತಿಸದ್ಮ ಜಾಲ-
ನಿರ್ಯಾತಧೂಪರುಚಿರಂ ವಿಲಸತ್ಪತಾಕಮ್ ।
ಮೂರ್ಧನ್ಯಹೇಮಕಲಶೈ ರಜತೋರುಶೃಂಗೈ-
ರ್ಜುಷ್ಟಂ ದದರ್ಶ ಭವನೈಃ ಕುರುರಾಜಧಾಮ ॥ ೩೩

ಈ ಪ್ರಕಾರವಾಗಿ ಪುಣ್ಯಶ್ಲೋಕಶಿಖಾಮಣಿಯಾದ ಭಗವಂತನು ಸ್ತುತಿಸಲ್ಪಡುತ್ತ ಆಪ್ತಮಿತ್ರರಿಂದ ಪರಿವೃತನಾಗಿ ಅಲಂಕೃತನಾದ ಇಂದ್ರಪ್ರಸ್ಥನಗರವನ್ನು ಪ್ರವೇಶಿಸಿದನು (೩೧). ಆ ನಗರದ ಬೀದಿಯು ಆನೆಗಳ ಮದೋದಕದಿಂದಲೇ ಸಿಂಪಡಿಸಿ ಸಾರಿಸಲ್ಪಟ್ಟಿತ್ತು! ಬಣ್ಣಬಣ್ಣದ ಬಾವುಟಗಳನ್ನು ಧ್ವಜಸ್ತಂಭಗಳಿಗೆ ಏರಿಸಲಾಗಿತ್ತು. ಚಿನ್ನದ ತೋರಣಗಳನ್ನು ಕಟ್ಟಿ ಮನೆಮನೆಯಲ್ಲಿಯೂ ಪೂರ್ಣಕುಂಭಗಳನ್ನು ದಾರಿಯುದ್ದಕ್ಕೆ ಇಡಲಾಗಿತ್ತು. ಪುರುಷರೂ ಸ್ತ್ರೀಯರೂ ಪರಿಶುದ್ಧರಾಗಿ ನವದುಕೂಲವನ್ನುಟ್ಟು ಆಭರಣಗಳನ್ನು ತೊಟ್ಟು ಹೂಮಾಲೆಗಳನ್ನು ಧರಿಸಿ ಅನುಲೇಪನಗಳನ್ನು ಹಚ್ಚಿಕೊಂಡಿದ್ದರು (೩೨). ಬೀದಿಯ ಇಕ್ಕೆಲದ ಮನೆಗಳಲ್ಲಿ ಹಗಲು ದೀವಟಿಗೆಗಳನ್ನು ಉರಿಸುತ್ತ ಪೂಜಾರ್ಥವಾದ ಹೂಗಳನ್ನು ಹರಡಿದ್ದರು. ಕಿಟಕಿಗಳಿಂದ ಹೊಮ್ಮುವ ಧೂಪದ ಪರಿಮಳವು ತುಂಬಿತ್ತು.

ಪ್ರಾಪ್ತಂ ನಿಶಮ್ಯ ನರಲೋಚನಪಾನಪಾತ್ರ-
ಮೌತ್ಸುಕ್ಯವಿಶ್ಲಥಿತಕೇಶದುಕೂಲಬಂಧಾಃ ।
ಸದ್ಯೋ ವಿಸೃಜ್ಯ ಗೃಹಕರ್ಮ ಪತೀಂಶ್ಚ ತಲ್ಪೇ
ದ್ರಷ್ಟುಂ ಯಯುರ್ಯುವತಯಃ ಸ್ಮ ನರೇಂದ್ರಮಾರ್ಗೇ ॥೩೪

ತಸ್ಮಿನ್ ಸುಸಂಕುಲ ಇಭಾಶ್ವರಥದ್ವಿಪದ್ಭಿಃ
ಕೃಷ್ಣಂ ಸಭಾರ್ಯಮುಪಲಭ್ಯ ಗೃಹಾಧಿರೂಢಾಃ ।
ನಾರ್ಯೋ ವಿಕೀರ್ಯ ಕುಸುಮೈರ್ಮನಸೋಪಗುಹ್ಯ
ಸುಸ್ವಾಗತಂ ವಿದಧುರತ್ಸ್ಮಯವೀಕ್ಷಿತೇನ ॥ ೩೫

ಊಚುಃ ಸ್ತ್ರಿಯಃ ಪಥಿ ನಿರೀಕ್ಷ್ಯ ಮುಕುಂದಪತ್ನೀ -
ಸ್ತಾರಾ ಯಥೋಡುಪಸಹಾಃ ಕಿಮಕಾರ್ಯಮೂಭಿಃ ।
ಯಚ್ಚಕ್ಷುಷಾಂ ಪುರುಷಮೌಲಿರುದಾರಹಾಸ-
ಲೀಲಾವಲೋಕಕಲಯೋತ್ಸವಮಾತನೋತಿ ॥ ೩೬

ಪತಾಕೆಗಳನ್ನು ಕಟ್ಟಿದ ಆ ಭವನಗಳಮೇಲೆ ಬೆಳ್ಳಿಯ ಬುರುಜುಗಳಲ್ಲಿ ಚಿನ್ನದ ಕಲಶಗಳು ಒಪ್ಪುತ್ತಿದ್ದವು. ಈ ಪ್ರಕಾರದಲ್ಲಿ ವೈಭವೋಪೇತವಾದ ಕುರುರಾಜನಾದ ಯುಧಿಷ್ಠಿರನ ನಗರವನ್ನು ಶ್ರೀಕೃಷ್ಣನು ವೀಕ್ಷಿಸಿದನು (೩೩). ಗಂಡಸರು ಕಣ್ಣಿಂದ ಕುಡಿದುಬಿಡುವಷ್ಟು ಸೌಂದರ್ಯಸಾರನಾದ ಮುಕುಂದನು ರಾಜಬೀದಿಯಲ್ಲಿ ಆಗಮಿಸಿದನೆಂಬ ಸುದ್ದಿಯನ್ನು ಕೇಳಿ ನಗರಯುವತಿಯರು ಮನೆಗೆಲಸವನ್ನು ಅಲ್ಲಿಗೇ ಬಿಟ್ಟರು ; ಗಂಡಂದಿರನ್ನು ಹಾಸಿಗೆಯಲ್ಲಿಯೇ ತೊರೆದರು ; ತಲೆಯ ಮುಡಿ ಹರಡಿದ್ದನ್ನೂ ಉಟ್ಟ ಸೀರೆ ಸಡಿಲಿದ್ದನ್ನೂ ಗಮನಿಸದೆ ಮುಕುಂದನನ್ನು ನೋಡಲು ಧಾವಿಸಿದರು (೩೪). ರಾಜಬೀದಿಯು ಗಜಾಶ್ವರಥಗಳಿಂದಲೂ ಕಾಲಾಳುಗಳಿಂದಲೂ ಕಿಕ್ಕಿರಿದು ತುಂಬಿಹೋದ್ದರಿಂದ ನಗರದ ನಾರಿಯರು ತಮ್ಮ ಗೃಹಗಳ ಮಹಡಿಗಳನ್ನು ಹತ್ತಿ ಅಲ್ಲಿಂದಲೇ ಪತ್ನೀಸಹಿತನಾದ ಶ್ರೀಕೃಷ್ಣನನ್ನು ಕಂಡು ಹೂಗಳನ್ನು ಬೀರಿದರು. ಮನಸ್ಸಿನಿಂದಲೇ ಆಲಿಂಗಿಸಿದರು. ಮುಗುಳ್ನಗೆಯ ನೋಟದಿಂದಲೇ ಸ್ವಾಗತವನ್ನು ಬಯಸಿದರು (೩೫). ಚಂದ್ರನ ಸುತ್ತಲೂ

ತತ್ರ ತತ್ರೋಪಸಂಗಮ್ಯ ಪೌರಾ ಮಂಗಲಪಾಣಯಃ।
ಚಕ್ರುಃ ಸಪರ್ಯಾಂ ಕೃಷ್ಣಾಯ ಶ್ರೇಣೀಮುಖ್ಯಾ ಹತೈನಸಃ॥ ೩೭

ಅಂತಃಪುರಜನೈಃ ಪ್ರೀತ್ಯಾ ಮುಕುಂದಃ ಫುಲ್ಲಲೋಚನೈಃ।
ಸಸಂಭ್ರಮೈರಭ್ಯುಪೇತಃ ಪ್ರಾವಿಶದ್ ರಾಜಮಂದಿರಮ್॥ ೩೮

ಪೃಥಾ ವಿಲೋಕ್ಯ ಭ್ರಾತ್ರೇಯಂ ಕೃಷ್ಣಂ ತ್ರಿಭುವನೇಶ್ವರಮ್।
ಪ್ರೀತಾತ್ಮೋತ್ಥಾಯ ಪರ್ಯಂಕಾತ್ ಸಸ್ನುಷಾ ಪರಿಷಸ್ವಜೇ॥ ೩೯

ಗೋವಿಂದಂ ಗೃಹಮಾನೀಯ ದೇವದೇವೇಶಮಾದೃತಃ।
ಪೂಜಾಯಾಂ ನಾವಿದತ್ ಕೃತ್ಯಂ ಪ್ರಮೋದೋಪಹತೋ ನೃಪಃ॥ ೪೦

ಪಿತೃಷ್ವಸುರ್ಗುರುಸ್ತ್ರೀಣಾಂ ಕೃಷ್ಣಶ್ಚಕ್ರೇಽಭಿವಾದನಮ್।
ಸ್ವಯಂ ಚ ಕೃಷ್ಣಯಾ ರಾಜನ್ ಭಗಿನ್ಯಾ ಚಾಭಿವಂದಿತಃ॥ ೪೧

ಮಿರುಗವ ತಾರೆಗಳಂತೆ, ಮುಕುಂದನ ಬಳಿ ಮೆರೆಯುತ್ತಿದ್ದ ಆತನ ಪತ್ನಿಯರು ರಾಜಬೀದಿಯಲ್ಲಿ ಬರುತ್ತಿರುವುದನ್ನು ನೋಡಿದ ನಗರಸ್ತ್ರೀಯರು ''ಆಹಾ ! ಈ ಹೆಂಗಸರು ಯಾವ ಪುಣ್ಯವನ್ನು ಮಾಡಿರಬಹುದು ! ಪುರುಷೋತ್ತಮನಾದ ಈ ಮುಕುಂದನು ಕಿರುನಗೆಯಿಂದಲೂ ಬೆಡಗು ನೋಟಗಳಿಂದಲೂ ಸದಾ ಇವರ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತಿರುವನಲ್ಲ! '' ಎಂದು ಕೊಂಡರು (೩೬). ಆ ಇಂದ್ರಪ್ರಸ್ಥದಲ್ಲಿ ಬೇರೆ ಬೇರೆ ಉದ್ಯಮಗಳ ಮುಖಂಡರು ಬೀದಿಯ ನಡುನಡುವೆ ಮಂಗಳ ದ್ರವ್ಯಗಳನ್ನು ಕೈಯಲ್ಲಿ ಹಿಡಿದು ಶ್ರೀಕೃಷ್ಣನನ್ನು ಅರ್ಚಿಸಿ ಪುಣ್ಯಭಾಜನರಾದರು (೩೭). ಅನಂತರ ಅರಮನೆಯ ಜನರು ಸಂಭ್ರಮದಿಂದ ಬಂದು ಪ್ರೀತಿಯಿಂದ ಕಣ್ಣರಳಿಸಿ ಆನಂದದಿಂದ ಸ್ವಾಗತಿಸಲಾಗಿ, ಶ್ರೀಕೃಷ್ಣನು ರಾಜಭವನವನ್ನು ಪ್ರವೇಶಿಸಿದನು. ತ್ರಿಭುವನೇಶ್ವರನಾದ ಸೋದರಳಿಯನು ಬಂದುದನ್ನು ಕಂಡು ಪೃಥೆಯು ಪೀಠದಿಂದೆದ್ದು ಸೊಸೆಯೊಡನೆ ಬಂದು ಆಲಂಗಿಸಿಕೊಂಡಳು (೩೮-೩೯). ದೇವ ದೇವೇಶನಾದ ಗೋವಿಂದನನ್ನು ತನ್ನ ಮನೆಗೆ ಕರೆದುಕೊಂಡು ಬಂದನೆಂಬ ಹೆಮ್ಮೆಯಿಂದ ಹಿರಿಹಿಗ್ಗುತ್ತಿದ್ದ ಧರ್ಮರಾಜನಿಗೆ ತನ್ನ ಆನಂದಭರದಲ್ಲಿ ಅವನನ್ನು ಹೇಗೆ ಸತ್ಕರಿಸಬೇಕೆಂಬುದೇ ಹೊಳೆಯಲಿಲ್ಲ! (೪೦). ಶ್ರೀಕೃಷ್ಣನು ಸೋದರತ್ತೆಯಾದ ಕುಂತಿಗೂ ಮತ್ತಿತರ ಹಿರಿಯ ಸ್ತ್ರೀಯರಿಗೂ ಅಭಿವಾದನೆ ಮಾಡಿದನು. ತಂಗಿಯಾದ ದ್ರೌಪದಿಯು

ಶ್ವಶ್ರ್ವಾ ಸಂಚೋದಿತಾ ಕೃಷ್ಣಾ ಕೃಷ್ಣ ಪತ್ನೀಶ್ಚ ಸರ್ವಶಃ ।
ಆನರ್ಚ ರುಕ್ಮಿಣೀಂ ಸತ್ಯಾಂ ಭದ್ರಾಂ ಜಾಂಬವತೀಂ ತಥಾ ॥ ೪೨

ಕಾಲಿಂದೀಂ ಮಿತ್ರವಿಂದಾಂ ಚ ಶೈಬ್ಯಾಂ ನಾಗ್ನಜಿತೀಂ ಸತೀಮ್ ।
ಅನ್ಯಾಶ್ಚಾಭ್ಯಾಗತಾ ಯಾಸ್ತು ವಾಸಃಸ್ರಙ್ಮಂಡನಾದಿಭಿಃ ॥ ೪೩

ಸುಖಂ ನಿವಾಸಯಾಮಾಸ ಧರ್ಮರಾಜೋ ಜನಾರ್ದನಮ್ ।
ಸಸೈನ್ಯಂ ಸಾನುಗಾಮಾತ್ಯಂ ಸಭಾರ್ಯಂ ಚ ನವಂ ನವಮ್ ॥ ೪೪

ತರ್ಪಯಿತ್ವಾ ಖಾಂಡವೇನ ವಹ್ನಿಂ ಫಾಲ್ಗುನಸಂಯುತಃ ।
ಮೋಚಯಿತ್ವಾ ಮಯಂ ಯೇನ ರಾಜ್ಞೇ ದಿವ್ಯಾ ಸಭಾ ಕೃತಾ ॥ ೪೫

ಉವಾಸ ಕತಿಚಿನ್ಮಾಸಾನ್ ರಾಜ್ಞಃ ಪ್ರಿಯಚಿಕೀರ್ಷಯಾ ।
ವಿಹರನ್ ರಥಮಾರುಹ್ಯ ಫಾಲ್ಗುನೇನ ಭಟೈರ್ವೃತಃ ॥ ೪೬

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಏಕಸಪ್ತತಿಮಾಧ್ಯಾಯಃ

ಬಂದು ಆತನಿಗೆ ನಮಸ್ಕಾರಮಾಡಿದಳು (೪೧). ಅತ್ತೆಯ ಪ್ರೇರಣೆಯಂತೆ ದ್ರೌಪದಿಯು ಶ್ರೀಕೃಷ್ಣನ ಪತ್ನಿಯರಾದ ರುಕ್ಮಿಣೀ, ಸತ್ಯಭಾಮೆ, ಭದ್ರೆ, ಜಾಂಬವತಿ, ಕಾಲಿಂದೀ, ಮಿತ್ರವಿಂದೆ, ಲಕ್ಷ್ಮಣೆ, ನಗ್ನಜಿತನ ಪುತ್ರಿಯಾದ ಸತ್ಯೆ-ಮೊದಲಾದವರಿಗೂ ಬಂದಿದ್ದ ಇತರ ಸುಮಂಗಳಿಯರಿಗೂ ವಸ್ತ್ರ ಮಾಲೆ ಅಲಂಕಾರ ದ್ರವ್ಯಾದಿಗಳನ್ನಿತ್ತು ಸತ್ಕರಿಸಿದಳು (೪೨-೪೩). ಧರ್ಮರಾಜನು ಜನಾರ್ದನನಿಗೂ ಅವನ ಪತ್ನಿಯರಿಗೂ ವಸತಿಸೌಕರ್ಯವನ್ನೇರ್ಪಡಿಸಿ, ಆತನ ಸೈನಿಕರು, ಪರಿವಾರದವರು, ಮಂತ್ರಿಗಳು- ಎಲ್ಲರಿಗೂ ಯೋಗ್ಯವಾದ ಬಿಡಾರವನ್ನು ಕಲ್ಪಿಸಿ, ಪ್ರತಿದಿನವೂ ಹೊಸ ಹೊಸ ಬಗೆಯ ಸತ್ಕಾರಗಳಿಂದ ಉಪಚರಿಸುತ್ತಿದ್ದನು (೪೪). ಶ್ರೀಕೃಷ್ಣನು ಅರ್ಜುನನೊಡನೆ ವಿಹರಿಸುತ್ತಾ ಖಾಂಡವವನದಿಂದ ಅಗ್ನಿಯನ್ನು ತೃಪ್ತಿಪಡಿಸಿದನಲ್ಲದೆ, ವಿಮೋಚಿತನಾದ ಮಯನೆಂಬ ಶಿಲ್ಪಿಯಿಂದ ಧರ್ಮರಾಜನಿಗಾಗಿ ದಿವ್ಯ ಸಭಾಮಂದಿರವನ್ನು ನಿರ್ಮಾಣ ಮಾಡಿಸಿದನು (೪೫). ಧರ್ಮರಾಜನ ಸಂತೋಷಕಕ್ಕಾಗಿ ಕೆಲವು ತಿಂಗಳು ಇದ್ದು, ವಿಶೇಷವಾಗಿ ಅರ್ಜುನನೊಡನೆ ರಥಾರೂಢನಾಗಿಯೂ ಸೇನಾಪರಿವೃತನಾಗಿಯೂ ವಿಹರಿಸುತ್ತಿದ್ದನು (೪೬).

ಇಲ್ಲಿಗೆ ಶ್ರೀಮದ್ ಭಾಗವತದ ದಶಮಸ್ಕಂಧದಲ್ಲಿ ಎಪ್ಪತ್ತೊಂದನೆಯ ಅಧ್ಯಾಯ

ದ್ವಿಸಪ್ತತಿತಮಾಧ್ಯಾಯಃ

ಶ್ರೀಶುಕ ಉವಾಚ
ಏಕದಾ ತು ಸಭಾಮಧ್ಯೇ ಆಸ್ಥಿತೋ ಮುನಿಭಿರ್ವೃತಃ ।
ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈರ್ಭ್ರಾತೃಭಿಶ್ಚ ಯುಧಿಷ್ಠಿರಃ ॥ ೧

ಆಚಾರ್ಯೈಃ ಕುಲವೃದ್ಧೈಶ್ಚ ಜ್ಞಾತಿಸಂಬಂಧಿಬಾಂಧವೈಃ ।
ಶೃಣ್ವತಾಮೇವ ಚೈತೇಷಾಮಾಭಾಷ್ಯೇದಮುವಾಚ ಹ ॥ ೨

ಯುಧಿಷ್ಠಿರ ಉವಾಚ-
ಕ್ರತುರಾಜೇನ ಗೋವಿಂದ ರಾಜಸೂಯೇನ ಪಾವನೀಃ ।
ಯಕ್ಷ್ಯೇ ವಿಭೂತೀರ್ಭವತಸ್ತತ್ ಸಂಪಾದಯ ನಃ ಪ್ರಭೋ ॥ ೩

ತ್ವತ್ಪಾದುಕೇ ಅವಿರತಂ ಪರಿ ಯೇ ಚರಂತಿ
ಧ್ಯಾಯಂತ್ಯ ಭದ್ರನಶನೇ ಶುಚಯೋ ಗೃಣಂತಿ ।
ವಿಂದಂತಿ ತೇ ಕಮಲನಾಭ ಭವಾಪವರ್ಗ-
ಮಾಶಾಸತೇ ಯದಿ ತ ಆಶಿಷ ಈಶ ನಾನ್ಯೇ ॥ ೪

ಅಧ್ಯಾಯ ೭೨

ಯುಧಿಷ್ಠಿರನಿಂದ ರಾಜಸೂಯಯಾಗದ ಪ್ರಸ್ತಾವ. ಶ್ರೀಕೃಷ್ಣನ ಸಂಮತಿ.
ಭೀಮಸೇನನಿಂದ ಜರಾಸಂಧನ ವಧೆ.

ಶುಕಮಹರ್ಷಿಗಳು ಹೇಳಿದರು : ಹೀಗಿರಲು ಒಂದು ದಿನ ಯುಧಿಷ್ಠಿರನು ಮುನಿಗಳಿಂದಲೂ ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಂದಲೂ ತನ್ನ ಸಹೋದರರಿಂದಲೂ ಪರಿವೃತನಾಗಿ ಸಭಾಮಧ್ಯದಲ್ಲಿ ಕುಳಿತಿದ್ದನು. ಆಚಾರ್ಯರೂ ಕುಲವೃದ್ಧರೂ ಬಂಧು ಬಾಂಧವರೂ ಅಲ್ಲಿದ್ದರು. ಅವರೆಲ್ಲರೂ ಕೇಳುತ್ತಿರುವಾಗ ಯುಧಿಷ್ಠಿರನು ಶ್ರೀಕೃಷ್ಣನನ್ನು ಸಂಬೋಧಿಸಿ ಹೀಗೆಂದನು (೧-೨). "ಗೋವಿಂದ, ಯಾಗಗಳಲ್ಲಿ ಶ್ರೇಷ್ಠವಾದ ರಾಜಸೂಯವನ್ನು ಮಾಡಬೇಕೆಂದು ಮನಸ್ಸಾಗಿದೆ. ಪಾವನಗಳಾದ ನಿನ್ನ ಅಂಶದ ದೇವತೆಗಳನ್ನು ಅದರಿಂದ ಅರ್ಚಿಸುವೆನು. ಸ್ವಾಮಿ, ಇದನ್ನು ನೆರವೇರಿಸಿಕೊಂಡು (೩). ಪಾಪಪರಿಹಾರಕಗಳಾದ ನಿನ್ನ ಪಾದುಕೆಗಳನ್ನು ನಿರಂತರವಾಗಿ ಯಾರು ದೇಹಶ್ರಮದಿಂದ ಸೇವಿಸುವರೋ ಮನಸ್ಸಿನಲ್ಲಿ

ತದ್ ದೇವದೇವ ಭವತಶ್ಚರಣಾರವಿಂದ-
ಸೇವಾನುಭಾವಮಿಹ ಪಶ್ಯತು ಲೋಕ ಏಷಃ ।
ಯೇ ತ್ವಾಂ ಭಜಂತಿ ನ ಭಜಂತ್ಯುತ ವೋಭಯೇಷಾಂ
ನಿಷ್ಠಾಂ ಪ್ರದರ್ಶಯ ವಿಭೋ ಕುರುಸೃಂಜಯಾನಾಮ್ ॥

ನ ಬ್ರಹ್ಮಣಃ ಸ್ವಪರಭೇದಮತಿಸ್ತವ ಸ್ಯಾತ್
ಸರ್ವಾತ್ಮನಃ ಸಮದೃಶಃ ಸ್ವಸುಖಾನುಭೂತೇಃ ।
ಸಂಸೇವತಾಂ ಸುರತರೋರಿವ ತೇ ಪ್ರಸಾದಃ
ಸೇವಾನುರೂಪಮುದಯೋ ನ ವಿಪರ್ಯಯೋಽತ್ರ ॥ ೬

ಶ್ರೀ ಭಗವಾನುವಾಚ-

ಸಮ್ಯಗ್ ವ್ಯವಸಿತಂ ರಾಜನ್ ಭವತಾ ಶತ್ರುಕರ್ಶನ ।
ಕಲ್ಯಾಣೀ ಯೇನ ತೇ ಕೀರ್ತಿರ್ಲೋಕಾನನು ಭವಿಷ್ಯತಿ ॥ ೭

ಧ್ಯಾನಿಸುವರೋ ಮಾತಿನಿಂದ ಸ್ತುತಿಸುವರೋ ಅವರು ಬುದ್ಧಿಶಾಲಿಗಳು. ಅವರು ಈ ಸಂಸಾರದಿಂದ ಬಿಡುಗಡೆಯನ್ನು ಪಡೆಯುವರು. ಕಮಲನಾಭ, ಬಯಸಿದರೆ ಐಹಿಕ ಪುರುಷಾರ್ಥಗಳೂ ಅವರಿಗೆ ಲಭಿಸುತ್ತವೆ. ಉಳಿದವರಿಗೆ ಎಂದಿಗೂ ಇಲ್ಲ (೪). ಆದ್ದರಿಂದ, ದೇವದೇವ, ಈ ಲೋಕವು ನಿನ್ನ ಪಾದಪದ್ಮಸೇವೆಯ ಫಲವನ್ನು ಪ್ರತ್ಯಕ್ಷವಾಗಿ ನೋಡಲಿ. ಕುರುವಂಶದವರಲ್ಲಿಯೂ ಯಾದವರಲ್ಲಿಯೂ ಕೆಲವರು ಭಗವದ್ಭಕ್ತಿಯನ್ನು ದೊಡ್ಡದೆಂದು ಗಣಿಸುತ್ತಾರೆ; ಕೆಲವರು ಗಣಿಸುತ್ತಿಲ್ಲ. ಈರ್ವರಿಗೂ ನಿನ್ನ ನೆಲೆಯೇನೆಂಬುದನ್ನು ತೋರಿಸು (೫). ಪರಬ್ರಹ್ಮನೂ ಸರ್ವರಿಗೆ ಆತ್ಮನೂ ಸ್ವರೂಪಾನಂದನುಭವರೂಪನೂ ಆದ ನಿನಗೆ ನನ್ನವರು ಪರರು ಎಂಬ ಭೇದವೇನೂ ಇಲ್ಲ. ಆದರೂ ಯಾರು ನಿನ್ನನ್ನು ಸೇವಿಸುತ್ತಾರೋ ಅವರಿಗೆ ನಿನ್ನ ಪ್ರಸಾದ ದೊರೆಯುವುದು, ಉಳಿದವರಿಗೆ ಇಲ್ಲ. ಹೇಗೆಂದರೆ, ನೀನು ಕಲ್ಪವೃಕ್ಷವಿದ್ದಂತೆ'' ಎಂದನು (೬). ಆಗ ಭಗವಂತನು ಹೇಳಿದ್ದೇನೆಂದರೆ, ''ಮಹಾರಾಜ, ನಿನ್ನ ಸಂಕಲ್ಪವು ಶ್ರೇಷ್ಠವಾದದ್ದು. ಶತ್ರುಕರ್ಶನ ರಾಜಸೂಯದಿಂದ ಮಂಗಳಕರವಾದ ನಿನ್ನ ಕೀರ್ತಿಯು ಸಕಲಲೋಕಗಳಲ್ಲಿಯೂ ಹರಡುವುದು. ಋಷಿಗಳಿಗೂ ಪಿತೃದೇವತೆಗಳಿಗೂ ನಮ್ಮ ಮಿತ್ರರಿಗೂ ಸಕಲ ಪ್ರಾಣಿ

ಋಷೀಣಾಂ ಪಿತೃದೇವಾನಾಂ ಸುಹೃದಾಮಪಿ ನಃ ಪ್ರಭೋ ।
ಸರ್ವೇಷಾಮಪಿ ಭೂತಾನಾಮೀಪ್ಸಿತಃ ಕ್ರತುರಾಡಯಮ್ ॥ ೮

ವಿಜಿತ್ಯ ನೃಪತೀನ್ ಸರ್ವಾನ್ ಕೃತ್ವಾ ಚ ಜಗತೀಂ ವಶೇ ।
ಸಂಭೃತ್ಯ ಸರ್ವಸಂಭಾರಾನಾಹರಸ್ವ ಮಹಾಕ್ರತುಮ್ ॥ ೯

ಏತೇ ತೇ ಭ್ರಾತರೋ ರಾಜನ್ ಲೋಕಪಾಲಾಂಶಸಂಭವಾಃ ।
ಜಿತೋಽಸ್ಮ್ಯಾತ್ಮವತಾ ತೇಽಹಂ ದುರ್ಜಯೋ ಯೋಽಕೃತಾತ್ಮಭಿಃ ॥೧೦

ನ ಕಶ್ಚಿನ್ಮತ್ಪರಂ ಲೋಕೇ ತೇಜಸಾ ಯಶಸಾ ಶ್ರಿಯಾ ।
ವಿಭೂತಿಭಿರ್ವಾಭಿಭವೇದ್ ದೇವೋಽಪಿ ಕಿಮು ಪಾರ್ಥಿವಃ ॥ ೧೧

ಶ್ರೀಶುಕ ಉವಾಚ-

ನಿಶಮ್ಯ ಭಗವದ್ಗೀತಂ ಪ್ರೀತಃ ಫುಲ್ಲಮುಖಾಂಬುಜಃ ।
ಭ್ರಾತೄನ್ ದಿಗ್ವಿಜಯೇಽಯುಂಕ್ತ ವಿಷ್ಣುತೇಜೋಪಬೃಂಹಿತಾನ್ ॥ ೧೨

ವರ್ಗಗಳಿಗೂ ರಾಜಸೂಯವು ಪ್ರಿಯವಾದ ಸರ್ವೋತ್ತಮ ಯಾಗ (೭-೮). ಸಮಸ್ತಭೂಪಾಲರನ್ನೂ ಗೆದ್ದು ಭೂತಳವನ್ನು ನಿನ್ನ ವಶಕ್ಕೆ ತಂದು, ಸಕಲ ಸಾಮಗ್ರಿಗಳನ್ನು ಸಂಪಾದಿಸಿಕೊಂಡು ಈ ಮಹಾಯಾಗವನ್ನು ನೆರವೇರಿಸು. ವಿಖ್ಯಾತರಾದ ಈ ನಿನ್ನ ತಮ್ಮಂದಿರು ಇಂದ್ರಾದಿಲೋಕಪಾಲರ ಅಂಶದಿಂದ ಹುಟ್ಟಿದವರು. ದುರ್ಜಯನಾದ ನಾನಂತೂ ಜಿತೇಂದ್ರಿಯನಾದ ನಿನಗೆ ವಶನಾಗಿ ಬಿಟ್ಟಿದ್ದೇನೆ! ಅಜಿತೇಂದ್ರಿಯರಿಗೆ ಮಾತ್ರ ನಾನು ವಶನಾಗತಕ್ಕವನಲ್ಲ (೯-೧೦). ನನ್ನ ಭಕ್ತನನ್ನು ಈ ಜಗತ್ತಿನಲ್ಲಿ ಯಾವಾತನೂ ತನ್ನ ತೇಜಸ್ಸಿನಿಂದ, ಯಶಸ್ಸಿನಿಂದ, ಐಶ್ವರ್ಯದಿಂದ, ಸೇನಾದಿಸಾಮಗ್ರಿಯಿಂದ- ಯಾವುದರಿಂದಲೂ ಜಯಿಸಲಾರ, ದೇವೇಂದ್ರನೂ ಜಯಿಸಲಾರ. ಇನ್ನು ಮಾನವನ ರಾಜನು ಏನು ಮಾಡಿಯಾನು ?'' ಎಂದನು (೧೧). ಭಗವಂತನ ಈ ಉದ್ಗಾರವನ್ನು ಕೇಳಿ ಯುಧಿಷ್ಠಿರನು ಹಿಗ್ಗಿದನು. ಅವನ ಮುಖಕಮಲ ಅರಳಿತು. ವೈಷ್ಣವ ತೇಜಸ್ಸಿನಿಂದ ಆವಾಹಿತರಾದ ತಮ್ಮಂದಿರನ್ನು ದ್ವಿಗ್ವಿಜಯಕ್ಕಾಗಿ ನೇಮಿಸಿದನು (೧೨).

ಸಹದೇವಂ ದಕ್ಷಿಣಸ್ಯಾಮಾದಿಶತ್ ಸಹ ಸೃಂಜಯೈಃ ।
ದಿಶಿ ಪ್ರತೀಚ್ಯಾಂ ನಕುಲಮುದೀಚ್ಯಾಂ ಸವ್ಯಸಾಚಿನಮ್ ।
ಪ್ರಾಚ್ಯಾಂ ವೃಕೋದರಂ ಮತ್ಸ್ಯೈಃಕೇಕಯೈಃ ಸಹ ಮದ್ರಕೈಃ ॥ ೧೩

ತೇ ವಿಜಿತ್ಯ ನೃಪಾನ್ ವೀರಾ ಆಜಹ್ರುರ್ದಿಗ್ಭ್ಯ ಓಜಸಾ ।
ಅಜಾತಶತ್ರವೇ ಭೂರಿ ದ್ರವಿಣಂ ನೃಪ ಯಕ್ಷ್ಯತೇ ॥ ೧೪

ಶ್ರುತ್ವಾಜಿತಂ ಜರಾಸಂಧಂ ನೃಪತೇರ್ಧ್ಯಾಯತೋ ಹರಿಃ ।
ಆಹೋಪಾಯಂ ತಮೇವಾದ್ಯ ಉದ್ಧವೋ ಯಮುವಾಚ ಹ ॥ ೧೫

ಭೀಮಸೇನೋಽರ್ಜುನಃ ಕೃಷ್ಣೋ ಬ್ರಹ್ಮಲಿಂಗಧರಾಸ್ತ್ರಯಃ ।
ಜಗ್ಮುರ್ಗಿರಿವ್ರಜಂ ತಾತ ಬೃಹದ್ರಥಸುತೋ ಯತಃ ॥ ೧೬

ತೇ ಗತ್ವಾಽತಿಥ್ಯವೇಲಾಯಾಂ ಗೃಹೇಷು ಗೃಹಮೇಧಿನಮ್ ।
ಬ್ರಹ್ಮಣ್ಯಂ ಸಮಯಾಚೇರನ್ ರಾಜನ್ಯಾ ಬ್ರಹ್ಮಲಿಂಗಿನಃ ॥ ೧೭

ಸಹದೇವನು ಯಾದವರೊಡನೆ ದಕ್ಷಿಣದಿಕ್ಕಿಗೂ, ನಕುಲನು ಮತ್ಸ್ಯರೊಡನೆ ಪಶ್ಚಿಮದಿಕ್ಕಿಗೂ ಅರ್ಜುನನು ಕೇಕಯರೊಡನೆ ಉತ್ತರದಿಕ್ಕಿಗೂ, ಭೀಮಸೇನನು ಮದ್ರಕರೊಡನೆ ಪೂರ್ವದಿಕ್ಕಿಗೂ ದಿಗ್ವಿಜಯಕ್ಕಾಗಿ ಹೋಗಬೇಕೆಂದು ಧರ್ಮರಾಜನು ಗೊತ್ತುಮಾಡಿದನು (೧೩). ಅನಂತರ ವೀರರಾದ ಸಹದೇವಾದಿಗಳು ಆಯಾ ದಿಕ್ಕುಗಳಿಗೆ ಹೋಗಿ ತಮ್ಮ ಪರಾಕ್ರಮದಿಂದ ಭೂಪಾಲರನ್ನು ಜಯಿಸಿ, ಯಾಗಮಾಡಲಿದ್ದ ಧರ್ಮರಾಜನಿಗೆ ಹೇರಳವಾದ ಧನರಾಶಿಯನ್ನು ತಂದೊಪ್ಪಿಸಿದರು (೧೪). ಆದರೆ ಮಾಗಧನೊಬ್ಬನನ್ನು ಜಯಿಸಲಿಲ್ಲವೆಂಬುದನ್ನುಕೇಳಿ ಧರ್ಮರಾಜನು ಚಿಂತಾಕ್ರಾಂತನಾದನು. ಆತನನ್ನು ಜಯಿಸುವುದಕ್ಕೆ ಉದ್ಧವನು ಹಿಂದೆ ಯಾವ ಉಪಾಯವನ್ನು ಹೇಳಿದ್ದನೋ ಅದನ್ನೇ ಈಗ ಶ್ರೀಕೃಷ್ಣನು ಧರ್ಮರಾಜನಿಗೆ ಹೇಳಿದನು (೧೫). ಅನಂತರ ಭೀಮ ಸೇನ, ಅರ್ಜುನ, ಶ್ರೀಕೃಷ್ಣ ಈ ಮೂವರು ಬ್ರಾಹ್ಮಣವೇಷವನ್ನು ಧರಿಸಿ, ಬೃಹದ್ರಥನ ಸುತನಾದ ಜರಾಸಂಧನಿದ್ದ ಗಿರಿವ್ರಜಕ್ಕೆ ತೆರಳಿದರು. ಬ್ರಾಹ್ಮಣ ಪ್ರಿಯನೂ ಗೃಹಸ್ಥನೂ ಆದ ಜರಾಸಂಧನು ಅತಿಥಿಸತ್ಕಾರಮಾಡುತ್ತಿದ್ದ ವೇಳೆಯಲ್ಲಿ ಆತನ ಮನೆಗೆ, ಬ್ರಾಹ್ಮಣ ವೇಷಧಾರಿಗಳಾದ ಈ ಕ್ಷತ್ರಿಯರು ಹೋಗಿ ಈ ರೀತಿಯಲ್ಲಿ ತಮ್ಮ

ರಾಜನ್ ವಿದ್ಧ್ಯತಿಥೀನ್ ಪ್ರಾಪ್ತನರ್ಥಿನೋ ದೂರಮಾಗತಾನ್ ।
ತನ್ನಃ ಪ್ರಯಚ್ಛ ಭದ್ರಂ ತೇ ಯದ್ ವಯಂ ಕಾಮಯಾಮಹೇ ॥ ೧೮

ಕಿಂ ದುರ್ಮರ್ಷಂ ತಿತಿಕ್ಷೂಣಾಂ ಕಿಮಕಾರ್ಯಮಸಾಧುಭಿಃ ।
ಕಿಂ ನ ದೇಯಂ ವದಾನ್ಯಾನಾಂ ಕಃ ಪರಃ ಸಮದರ್ಶಿನಾಮ್ ॥ ೧೯

ಯೋಽನಿತ್ಯೇನ ಶರೀರೇಣ ಸತಾಂ ಗೇಯಂ ಯಶೋ ಧ್ರುವಮ್ ।
ನಾಚಿನೋತಿ ಸ್ವಯಂ ಕಲ್ಪಃ ಸ ವಾಚ್ಯಃ ಶೋಚ್ಯ ಏವ ಸಃ ॥ ೨೦

ಹರಿಶ್ಚಂದ್ರೋ ರಂತಿದೇವ ಉಂಛವೃತ್ತಿಃ ಶಿಬಿರ್ಬಲಿಃ ।
ವ್ಯಾಧಃ ಕಪೋತೋ ಬಹವೋ ಹ್ಯಧ್ರುವೇಣ ಧ್ರುವಂ ಗತಾಃ ॥ ೨೧

ಬೇಡಿಕೆಯನ್ನು ತಿಳಿಸಿದರು (೧೬-೧೭). "ರಾಜ ನಾವು ದೂರದಿಂದ ಬಂದ ಅತಿಥಿಗಳೆಂದು ತಿಳಿ. ಆದ್ದರಿಂದ ನಾವು ಬಯಸುವ ಇಷ್ಟಾರ್ಥವನ್ನು ನೆರವೇರಿಸು. ನಿನಗೆ ಮಂಗಳವಾಗಲಿ. ಉಪಶಾಂತರಿಗೆ ಸಹಿಸಿಕೊಳ್ಳಲಾರದುದು ಯಾವುದು ? ದುರ್ಜನರಿಗೆ ಮಾಡಬಾರದ್ದು ಯಾವುದು ? ಸಮದರ್ಶಿಗಳಿಗೆ ಪರರೆಂದರೆ ಯಾರು ? ಹಾಗೆಯೇ ಉದಾರಿಗಳಿಗೆ ಕೊಡಬಾರದ್ದು ಯಾವುದೂ ಇಲ್ಲ(೧೮-೧೯). ಯಾವಾತನು ಸ್ವಯಂ ಸಮರ್ಥನಾಗಿದ್ದರೂ ಅನಿತ್ಯವಾದ ಈ ಶರೀರದ ಬಳಕೆಯಿಂದ, ಸಜ್ಜನರು ಹಾಡಿಹೊಗಳುವ ಶಾಶ್ವತವಾದ ಕೀರ್ತಿಯನ್ನು ಗಳಿಸುವುದಿಲ್ಲವೋ ಅವನು ನಿಂದಾರ್ಹನು. ಅವನು ಶೋಚನೀಯನೇ ಸರಿ (೨೦). ಪೂರ್ವದಲ್ಲಿ ಹರಿಶ್ಚಂದ್ರ, ರಂತಿದೇವ, ಕಾಳನ್ನಾರಿಸಿ ಜೀವಿಸುತ್ತಿದ್ದ ಮುದ್ಗಲ, ಶಿಬಿ, ಬಲಿ, ವ್ಯಾಧ, ಕಪೋತ[1] ಮೊದಲಾದ

---

೧ ಹರಿಶ್ಚಂದ್ರನ ಕಥೆ ಪ್ರಸಿದ್ಧವಾಗಿದೆ. ರಂತಿದೇವನು ಪತ್ನಿಪುತ್ರರೊಡನೆ ೪೮ ದಿನ ಉಪವಾಸವಿದ್ದು, ಆಮೇಲೆ ಬಹು ಪ್ರಯಾಸದಿಂದ ದೊರಕಿದ ನೀರನ್ನು ಜಲಾಪೇಕ್ಷಿಯಾದ ಬ್ರಾಹ್ಮಣನಿಗೆ ಕೊಟ್ಟನು. ಮುದ್ಗಲನು ಆರು ತಿಂಗಳು ಹೊಟ್ಟೆಗಿಲ್ಲದ ಕೃಶನಾದರೂ ಅನಂತರ ದೊರಕಿದ ಆಹಾರವನ್ನು ಅತಿಥಿಗಳಿಗೆ ಒಪ್ಪಿಸಿದನು. ಶಿಬಿಯು ಪಾರಿವಾಳದ ರಕ್ಷಣೆಗಾಗಿ ತನ್ನ ದೇಹವನ್ನು ಒಪ್ಪಿಸಿದ್ದೂ, ಬಲಿಚಕ್ರವರ್ತಿಯು ವಾಮನನಿಗೆ ಸರ್ವಸ್ವವನ್ನು ಅರ್ಪಿಸಿದ್ದೂ ಪ್ರಸಿದ್ಧವಾಗಿದೆ. ಒಂದು ಕಪೋತವು ಅತಿಥಿಯಾಗಿ ಬಂದ ವ್ಯಾಧನಿಗೆ ತನ್ನ ದೇಹವನ್ನು ಒಪ್ಪಿಸಿತು. ಅದರ ತ್ಯಾಗಬುದ್ಧಿಯನ್ನು ಕಂಡು ವ್ಯಾಧನು ಪಶ್ಚಾತ್ತಾಪದಿಂದ ಅಗ್ನಿಪ್ರವೇಶಮಾಡಿದನು. ಇವರೆಲ್ಲರಿಗೂ ಸದ್ಗತಿ ದೊರಕಿತು.

ಶ್ರೀಶುಕ ಉವಾಚ-

ಸ್ವರೈಕಾಕೃತಿಭಿಸ್ತಾಂಸ್ತು ಪ್ರಕೋಷ್ಠೈರ್ಜ್ಯಾಹತೈರಪಿ।
ರಾಜನ್ಯಬಂಧೂನ್ ವಿಜ್ಞಾಯ ದೃಷ್ಟಪೂರ್ವಾನಚಿಂತಯತ್ ॥ ೨೨

ರಾಜನ್ಯಬಂಧವೋ ಹ್ಯೇತೇ ಬ್ರಹ್ಮಲಿಂಗಾನಿ ಬಿಭ್ರತಿ।
ದದಾಮಿ ಭಿಕ್ಷಿತಂ ತೇಭ್ಯ ಆತ್ಮಾನಮಪಿ ದುಸ್ತ್ಯಜಮ್ ॥ ೨೩

ಬಲೇರ್ನು ಶ್ರೂಯತೇ ಕೀರ್ತಿರ್ವಿತತಾ ದಿಕ್ಷ್ವಕಲ್ಮಷಾ।
ಐಶ್ವರ್ಯಾದ್ ಭ್ರಂಶಿತಸ್ಯಾಪಿ ವಿಪ್ರವ್ಯಾಜೇನ ವಿಷ್ಣುನಾ ॥ ೨೪

ಶ್ರಿಯಂ ಜಿಹೀರ್ಷತೇಂದ್ರಸ್ಯ ವಿಷ್ಣವೇ ದ್ವಿಜರೂಪಿಣೇ।
ಜಾನನ್ನಪಿ ಮಹೀಂ ಪ್ರಾದಾದ್ ವಾರ್ಯಮಾಣೋಽಪಿ ದೈತ್ಯರಾಟ್ ॥

ಜೀವತಾ ಬ್ರಾಹ್ಮಣಾರ್ಥಾಯ ಕೋ ನ್ವರ್ಥಃ ಕ್ಷತ್ರಬಂಧುನಾ।
ದೇಹೇನ ಪತಮಾನೇನ ನೇಹತಾ ವಿಪುಲಂ ಯಶಃ ॥ ೨೬

ಹಲವರು ಅನಿತ್ಯವಾದ ಶರೀರದಿಂದ ನಿತ್ಯವಾದ ಸದ್ಗತಿಯನ್ನು ಪಡೆದಿದ್ದಾರೆ'' ಎಂದರು (೨೧). ಆಗ ಜರಾಸಂಧನು ಅವರ ಮಾತಿನ ಧ್ವನಿಯಿಂದಲೂ ದೇಹಾಕೃತಿಯಿಂದಲೂ ಹೆದೆಯನ್ನು ಮೀಟಿ ಕಿಣಗಟ್ಟಿದ ಮುಂಗೈಗಳಿಂದಲೂ ಅವರು ಕ್ಷತ್ರಿಯರೆಂದೂ ಎಲ್ಲಿಯೋ ಹಿಂದೆ ಕಂಡವರೆಂದೂ ತಿಳಿದು ತನ್ನ ಮನಸ್ಸಿನಲ್ಲಿ ಹೀಗೆ ಚಿಂತಿಸಿದನು (೨೨). ''ಇವರು ಕ್ಷತ್ರಿಯರೇ ಸರಿ; ಬ್ರಾಹ್ಮಣವೇಷವನ್ನು ತಳೆದಿದ್ದಾರೆ. (ಯಾರಾದರೂ ಆಗಲಿ). ಇವರು ಬೇಡಿದ್ದನ್ನು ದುಸ್ತ್ಯಜವಾದ ಪ್ರಾಣವನ್ನೇ ಆದರೂ ಸಮರ್ಪಿಸುವೆನು. ವಿಪ್ರವೇಷದಲ್ಲಿ ಬಂದ ವಿಷ್ಣುವಿನಿಂದ ಬಲಿಚಕ್ರವರ್ತಿಯು ಐಶ್ವರ್ಯಚ್ಯುತನಾದರೂ ಅವನ ನಿರ್ಮಲವಾದ ಕೀರ್ತಿಯೂ ದಿಕ್ಕು ದಿಕ್ಕುಗಳಲ್ಲಿ ವಿಶ್ರುತವಾಗಿದೆಯಲ್ಲವೆ? ಇಂದ್ರನಿಗಾಗಿ ಐಶ್ವರ್ಯವನ್ನು ಕಿತ್ತುಕೊಳ್ಳಲು ಬಯಸಿದ ವಿಪ್ರರೂಪಿಯಾದ ವಿಷ್ಣುವಿಗೆ, ಅವನು ಯಾರೆಂದು ಗೊತ್ತಾದರೂ (ಶುಕ್ರಚಾರ್ಯನಿಂದ) ತಡೆಯಲ್ಪಟ್ಟರೂ ಆ ದೈತ್ಯರಾಜನು ಸಾಮ್ರಾಜ್ಯವನ್ನು ಕೊಟ್ಟುಬಿಟ್ಟನು (೨೩-೨೫). ಬಿದ್ದುಹೋಗುವ ಈ ದೇಹದಿಂದ ಬ್ರಾಹ್ಮಣರ ಇಷ್ಟಾರ್ಥವನ್ನು ನೆರವೇರಿಸಿ

ಇತ್ಯುದಾರಮತಿಃ ಪ್ರಾಹ ಕೃಷ್ಣಾರ್ಜುನವೃಕೋದರಾನ್ ।
ಹೇ ವಿಪ್ರಾ ವ್ರಿಯತಾಂ ಕಾಮೋ ದದಾಮ್ಯಾತ್ಮಶಿರೋಽಪಿ ವಃ ॥ ೨೭

ಶ್ರೀ ಭಗವಾನುವಾಚ-

ಯುದ್ಧಂ ನೋ ದೇಹಿ ರಾಜೇಂದ್ರ ದ್ವಂದ್ವಶೋ ಯದಿ ಮನ್ಯಸೇ ।
ಯುದ್ಧಾರ್ಥಿನೋ ವಯಂ ಪ್ರಾಪ್ತಾ ರಾಜನ್ಯಾ ನಾನ್ನಕಾಂಕ್ಷಿಣಃ ॥ ೨೮

ಅಸೌ ವೃಕೋದರಃ ಪಾರ್ಥಸ್ತಸ್ಯ ಭ್ರಾತಾರ್ಜುನೋ ಹ್ಯಯಮ್ ।
ಅನಯೋರ್ಮಾತುಲೇಯಂ ಮಾಂ ಕೃಷ್ಣಂ ಜಾನೀಹಿ ತೇ ರಿಪುಮ್ ॥

ಏವಮಾವೇದಿತೋ ರಾಜಾ ಜಹಾಸೋಚ್ಚೈಃ ಸ್ಮ ಮಾಗಧಃ ।
ಆಹ ಚಾಮರ್ಷಿತೋ ಮಂದಾ ಯುದ್ಧಂ ತರ್ಹಿ ದದಾಮಿ ವಃ ॥ ೩೦

ನ ತ್ವಯಾ ಭೀರುಣಾ ಯೋತ್ಸ್ಯೇ ಯುಧಿ ವಿಕ್ಲವಚೇತಸಾ ।
ಮಥುರಾಂ ಸ್ವಪುರೀಂ ತ್ಯಕ್ತ್ವಾ ಸಮುದ್ರಂ ಶರಣಂ ಗತಃ ॥ ೩೧

ವಿಪುಲವಾದ ಕೀರ್ತಿಯನ್ನು ಬಯಸದಿರುವ ಕ್ಷತ್ರಿಯನು ಜೀವಿಸಿ ಫಲವೇನು ?'' ಹೀಗೆ ಆಲೋಚಿಸಿ ಉದಾರಚಿತ್ತನಾದ ಜರಾಸಂಧನು ಶ್ರೀಕೃಷ್ಣ, ಅರ್ಜುನ, ಭೀಮಸೇನರನ್ನು ಕುರಿತು ''ಎಲೈ ಬ್ರಾಹ್ಮಣರೆ, ನಿಮ್ಮ ಇಷ್ಟಾರ್ಥವೇನೆಂದು ಕೇಳಿಕೊಳ್ಳಿರಿ. ಅದು ನನ್ನ ಶಿರಸ್ಸೇ ಆದರೂ ನಿಮಗೆ ಅರ್ಪಿಸುತ್ತೇನೆ'' ಎಂದನು (೨೬-೨೭). ಆಗ ಶ್ರೀಕೃಷ್ಣನು ''ರಾಜೇಂದ್ರ, ಹಾಗಾದರೆ ನಮಗೆ ದ್ವಂದ್ವಯುದ್ಧವನ್ನು ಕೊಡು ! ನಾವು ಯುದ್ಧಾರ್ಥಿಗಳಾಗಿ ಬಂದ ಕ್ಷತ್ರಿಯರು ! ಅನ್ನಾರ್ಥಿಗಳಲ್ಲ. ಅವನು ಪೃಥಾತನಯನಾದ ಭೀಮಸೇನ ; ಈತನು ಅವನ ಸೋದರನಾದ ಅರ್ಜುನ ; ನಾನು ಇವರಿಬ್ಬರ ಸೋದರಮಾವನ ಮಗನಾದ ಕೃಷ್ಣ! ನಾನು ನಿನ್ನ ವೈರಿ ಎಂಬುದು ಗೊತ್ತೇ ಇದೆಯಲ್ಲ! '' ಎಂದು ಹೇಳಿದನು (೨೮-೨೯). ಹೀಗೆ ತಿಳಿಸಲಾಗಿ ಮಗಧರಾಜನಾದ ಜರಾಸಂಧನು ಗಟ್ಟಿಯಾಗಿ ನಕ್ಕನು. ಅನಂತರ ಸಂಕ್ರುದ್ಧನಾಗಿ ''ಎಲೈ ದಡ್ಡರೆ, ಹಾಗಾದರೆ ನಿಮಗೆ ಯುದ್ಧವನ್ನು ನೀಡುವೆನು. ಎಲಾ ಕೃಷ್ಣ, ಯುದ್ಧವೆಂದರೆ ಹೆದರುವ ಅಂಜುಬುರಕನಾದ ನಿನ್ನೊಡನೆ ಯುದ್ಧಮಾಡೆನು ! ನಿನ್ನ ಮಧುರಾ ನಗರವನ್ನು ಬಿಟ್ಟು ಓಡಿಹೋಗಿ

ಅಯಂ ತು ವಯಸಾ ತುಲ್ಯೋ ನಾತಿಸತ್ತ್ವೋ ನ ಮೇ ಸಮಃ।
ಅರ್ಜುನೋ ನ ಭವೇದ್ ಯೋದ್ಧಾ ಭೀಮಸ್ತುಲ್ಯಬಲೋ ಮಮ ॥೩೨

ಇತ್ಯುಕ್ತ್ವಾ ಭೀಮಸೇನಾಯ ಪ್ರದಾಯ ಮಹತೀಂ ಗದಾಮ್ ।
ದ್ವಿತೀಯಾಂ ಸ್ವಯಮಾದಾಯ ನಿರ್ಜಗಾಮ ಪುರಾದ್ ಬಹಿಃ ॥ ೩೩

ತತಃ ಸಮೇ ಖಲೇ ವೀರೌ ಸಂಯುಕ್ತಾವಿತರೇತರೌ ।
ಜಘ್ನತುರ್ವಜ್ರಕಲ್ಪಾಭ್ಯಾಂ ಗದಾಭ್ಯಾಂ ರಣದುರ್ಮದೌ ॥ ೩೪

ಮಂಡಲಾನಿ ವಿಚಿತ್ರಾಣಿ ಸವ್ಯಂ ದಕ್ಷಿಣಮೇವ ಚ ।
ಚರತೋಃ ಶುಶುಭೇ ಯುದ್ಧಂ ನಟಯೋರಿವ ರಂಗಿಣೋಃ ॥ ೩೫

ತತಶ್ಚಟಚಟಾಶಬ್ದೋ ವಜ್ರನಿಷ್ಪೇಷಸಂನಿಭಃ ।
ಗದಯೋಃ ಕ್ಷಿಪ್ತಯೋ ರಾಜನ್ ದಂತಯೋರಿವ ದಂತಿನೋಃ ॥ ೩೬

ಸಮುದ್ರಕ್ಕೆ ಶರಣಾದವನು ನೀನು (೩೦-೩೧). ಇನ್ನು ಈ ಅರ್ಜುನನಾದರೋ ವಯಸ್ಸಿನಲ್ಲಿ ನನಗೆ ಸಮನಲ್ಲ, ಹೆಚ್ಚು ಬಲಶಾಲಿಯೂ ಅಲ್ಲ . ದೇಹದಾರ್ಢ್ಯದಲ್ಲಿಯೂ ನನಗೆ ತಕ್ಕವನಲ್ಲ. ಆದ್ದರಿಂದ ಇವನು ನನ್ನೊಡನೆ ಯುದ್ಧ ಮಾಡಲು ಅರ್ಹನಲ್ಲ. ಈ ಭೀಮನೊಬ್ಬನು ನನಗೆ ಸಮಬಲ'' ಎಂದನು (೩೨). ಹೀಗೆ ನುಡಿದು ಜರಾಸಂಧನು ಭೀಮಸೇನನಿಗೆ ದೊಡ್ಡ ಗದೆಯನ್ನು ಕೊಟ್ಟು ತಾನೂ ಇನ್ನೊಂದು ಗದೆಯನ್ನು ಹಿಡಿದು ನಗರದ ಹೊರಗೆ ನಡೆತಂದನು. ಆಮೇಲೆ ಸಮಕಟ್ಟಾದ ಮೈದಾನದಲ್ಲಿ ಆ ವೀರರಿಬ್ಬರೂ ಒಬ್ಬರನ್ನೊಬ್ಬರು ಆಕ್ರಮಿಸಿದರು. ಯುದ್ಧೋನ್ಮತ್ತರಾದ ಭೀಮ ಜರಾಸಂಧರು ವಜ್ರಾಯುಧಸದೃಶಗಳಾದ ಗದೆಗಳಿಂದ ಹೊಯ್ದಾಡಿದರು (೩೩-೩೪). ನಾನಾ ಬಗೆಯ ಮಂಡಲಾಕಾರವಾಗಿ ಸುತ್ತುತ್ತ ಎಡಕ್ಕೆ ಬಲಕ್ಕೆ ಚಲಿಸುತ್ತ ಹೋರಾಡುತ್ತಿದ್ದ ಆ ವೀರರ ಯುದ್ಧವು ರಂಗಸ್ಥಳದಲ್ಲಿ ವರ್ತಿಸುವ ನಟರೀರ್ವರ ನಾಟ್ಯದಂತೆ ಶೋಭಿಸಿತು ! (೩೫). ಪರೀಕ್ಷಿತರಾಜ, ಅನ್ಯೋನ್ಯವಾಗಿ ಬಡಿದ ಗದೆಗಳ ಹೊಡೆತದ ಶಬ್ದವು ಸಿಡಿಲಿನಂತೆ 'ಚಟ ಚಟ' ಎಂದು ಕೇಳಿಸುತ್ತಿತ್ತು. ಎರಡು ಕಾಡಾನೆಗಳು ಕಾದುತ್ತ ಕೋರೆಹಲ್ಲುಗಳಿಂದ ಒಂದನ್ನೊಂದು ಇಡಿದಾಗ, ಆ ಜಡಿತದಿಂದ ಹುಟ್ಟುವ ದಂತಘಟ್ಟನ ಧ್ವನಿಯಂತೆ ತೋರುತ್ತಿತ್ತು (೩೬).

ತೇ ವೈ ಗದೇ ಭುಜಜವೇನ ನಿಪಾತ್ಯಮಾನೇ
ಅನ್ಯೋನ್ಯತೋಽಂಸಕಟಿಪಾದಕರೋರುಜತ್ರೂನ್ ।
ಚೂರ್ಣೀಬಭೂವತುರುಪೇತ್ಯ ಯಥಾರ್ಕಶಾಖೇ
ಸಂಯುಧ್ಯತೋರ್ದ್ವಿರದಯೋರಿವ ದೀಪ್ತಮನ್ವ್ಯೋಃ ॥ ೨೭

ಇತ್ಥಂ ತಯೋಃ ಪ್ರಹತಯೋರ್ಗದಯೋರ್ನೃವೀರೌ
ಕ್ರುದ್ಧೌ ಸ್ವಮುಷ್ಟಿಭಿರಯಃಸ್ಪರ್ಶೈರಪಿಂಷ್ಟಾಮ್ ।
ಶಬ್ದಸ್ತಯೋಃ ಪ್ರಹರತೋರಿಭಯೋರಿವಾಸೀ-
ನ್ನಿರ್ಘಾತವಜ್ರಪರುಷಸ್ತಲತಾಡನೋತ್ಥಃ ॥ ೩೮

ತಯೋರೇವಂ ಪ್ರಹರತೋಃ ಸಮಶಿಕ್ಷಾಬಲೌಜಸೋಃ ।
ನಿರ್ವಿಶೇಷಮಭೂದ್ ಯುದ್ಧಮಕ್ಷೀಣಜವಯೋರ್ನೃಪ ॥ ೩೯

ಶತ್ರೋರ್ಜನ್ಮಮೃತೀ ವಿದ್ವಾನ್ ಜೀವಿತಂ ಚ ಜರಾಕೃತಮ್ ।
ಪಾರ್ಥಮಾಪ್ಯಾಯಯನ್ ಸ್ವೇನ ತೇಜಸಾಚಿಂತಯದ್ಧರಿಃ ॥ ೪೦

ಭೀಮ ಜರಾಸಂಧರು ಭುಜಗವೇಗದಿಂದ ಗದೆಗಳನ್ನಪ್ಪಳಿಸಿದಾಗ, ಆ ಗದೆಗಳು ಅವರಿಬ್ಬರ ಹೆಗಲು, ಸೊಂಟ, ಕಾಲು, ಕೈ, ತೊಡೆ, ಹೆಗಲ ಸಂದು-ಇವುಗಳನ್ನು ತಾಕಿ, ಕೋಪದಿಂದ ಹೋರಾಡುವ ಸಲಗಗಳ ನಡುವೆ ಸಿಕ್ಕಿದ ಎಕ್ಕದ ಕೊಂಬೆಗಳಂತೆ ಮುರಿದು ಪುಡಿ ಪುಡಿಯಾದವು ! (೩೭). ಹೀಗೆ ಗದೆಗಳು ಮುರಿದು ಪುಡಿಯಾಗಲು ರೋಷಾವಿಷ್ಟರಾದ ಆ ವೀರರು ಉಕ್ಕಿನಂತಹ ತಮ್ಮ ಮುಷ್ಟಿಗಳಿಂದಲೇ ಗುದ್ದಾಡಿದರು. ಅವರ ಗುದ್ದುಗಳಿಂದ ಎದ್ದ ಸದ್ದು ಸಿಡಿದ ಸಿಡಿಲಿನ ಮೊರೆತದಂತೆ ಕರ್ಣಕಠೋರವಾಗಿತ್ತು(೩೮). ಪರೀಕ್ಷಿತರಾಜ, ಹೀಗೆ ಹೋರಾಡುತ್ತಿದ್ದ ಅವರಿಬ್ಬರ ಯುದ್ಧ ಶಿಕ್ಷಣ, ಬಲ, ಸಾಮರ್ಥ್ಯಗಳು ಸಮಾನವಾದ ಕಾರಣ, ಯಾರೂ ಜಗ್ಗದೆ ಇದ್ದುದರಿಂದ, ಯುದ್ಧವು ಸಮವಾಗಿ ವ್ಯತ್ಯಾಸವಿಲ್ಲದೆ ಹೋಯಿತು ! * (೩೯). ಆಗ ವೈರಿಯಾದ ಜರಾಸಂಧನ ಜನನ

★ ಅನಂತರ, ಹೀಗೆ ಇಪ್ಪತ್ತೊಂದು ದಿನಗಳವರೆಗೆ ಯುದ್ಧ ನಡೆಯಿತೆಂದೂ ರಾತ್ರಿಯಲ್ಲಿ ಇಬ್ಬರೂ ಮಿತ್ರರಂತೆ ಇರುತ್ತಿದ್ದರೆಂದೂ ಒಂದು ಸಲ ಭೀಮನು ಶ್ರೀಕೃಷ್ಣನಿಗೆ ತಾನು ಜರಾಸಂಧನನ್ನು ಜಯಿಸಲು ಶಕ್ತನಲ್ಲವೆಂದು ತಿಳಿಸಿದನೆಂದೂ ಹೇಳುವ ಎರಡು ಶ್ಲೋಕಗಳು ಶ್ರೀಧರೀಯ ಪಾಠದಲ್ಲಿ ಮಾತ್ರ ದೊರಕುತ್ತವೆ.

ಸಂಚಿಂತ್ಯಾರಿವಧೋಪಾಯಂ ಭೀಮಸ್ಯಾಮೋಘದರ್ಶನಃ ।
ದರ್ಶಯಾಮಾಸ ವಿಟಪಂ ಪಾಟಯನ್ನಿವ ಸಂಜ್ಞಯಾ ॥ ೪೧

ತದ್ ವಿಜ್ಞಾಯ ಮಹಾಸತ್ತ್ವೋ ಭೀಮಃ ಪ್ರಹರತಾಂ ವರಃ ।
ಗೃಹೀತ್ವಾ ಪಾದಯೋಃ ಶತ್ರುಂ ಪಾತಯಾಮಾಸ ಭೂತಲೇ ॥ ೪೨

ಏಕಂ ಪಾದಂ ಪದಾಽಽಕ್ರಮ್ಯ ದೋರ್ಭ್ಯಾಮನ್ಯಂ ಪ್ರಗೃಹ್ಯ ಸಃ ।
ಗುದತಃ ಪಾಟಯಾಮಾಸ ಶಾಖಾಮಿವ ಮಹಾಗಜಃ ॥ ೪೩

ಏಕಪಾದೋರುವೃಷಣಕಟಿಪೃಷ್ಠಸ್ತನಾಂಸಕೇ ।
ಏಕಬಾಹ್ವಕ್ಷಿಭ್ರೂಕರ್ಣೇ ಶಕಲೇ ದದೃಶುಃ ಪ್ರಜಾಃ ॥ ೪೪

ಹಾಹಾಕಾರೋ ಮಹಾನಾಸೀನ್ನಿಹತೇ ಮಗಧೇಶ್ವರೇ ।
ಪೂಜಯಾಮಾಸತುರ್ಭೀಮಂ ಪರಿರಭ್ಯ ಜಯಾಚ್ಯುತೌ ॥ ೪೫

ಮರಣ ಪ್ರಕಾರಗಳನ್ನೂ ಜರಾ ಎಂಬ ರಾಕ್ಷಸಿಯು ದೇಹದ ಎರಡು ಹೋಳುಗಳನ್ನು ಸರಿಯಾಗಿ ಜೋಡಿಸಿದ್ದರಿಂದ ಅವನು ಜೀವಿಸಿದ್ದಾನೆಂಬುದನ್ನೂ ಬಲ್ಲ ಶ್ರೀಕೃಷ್ಣನು ತನ್ನ ತೇಜಸ್ಸಿನಿಂದ ಭೀಮನನ್ನು ಬಲಗೊಳಿಸುತ್ತ ಮುಂದೇನೆಂದು ಆಲೋಚಿಸಿದನು (೪೦). ಬಳಿಕ ಸತ್ಯಸಂಕಲ್ಪನಾದ ಶ್ರೀಹರಿಯು ವೈರಿವಧೋಪಾಯವನ್ನು ಚಿಂತಿಸಿ ಮರದ ಕೊಂಬೆಯನ್ನು ಸೀಳುವವನಂತೆ ಸಂಜ್ಞೆಮಾಡಿ ಭೀಮನಿಗೆ ತೋರಿಸಿದನು. ಮಹಾಬಲಾಢ್ಯನೂ ಹೋರಾಟದಲ್ಲಿ ನಿಸ್ಸೀಮನೂ ಆದ ಭೀಮನು ಆ ಸಂಕೇತದ ಅರ್ಥವನ್ನು ಗ್ರಹಿಸಿ, ವೈರಿಯಾದ ಮಾಗಧನ ಕಾಲುಗಳನ್ನು ಹಿಡಿದೆಳೆದು ನೆಲದಮೇಲೆ ಬೀಳಿಸಿದನು (೪೧-೪೨). ಒಡನೆಯೇ ಅವನ ಒಂದು ಕಾಲನ್ನು ಕಾಲಿಂದ ಮೆಟ್ಟಿ ಇನ್ನೊಂದು ಕಾಲನ್ನು ಎರಡು ಕೈಗಳಿಂದ ಹಿಡಿದು, ಮದ್ದಾನೆಯು ಮರದಕೊಂಬೆಯನ್ನು ಸೀಳುವಂತೆ ಮಾಗಧನನ್ನು ಗುದಸ್ಥಾನದಿಂದ ಹಿಡಿದು ಎರಡು ಹೋಳಾಗಿ ಸೀಳಿದನು (೪೩). ನೆರೆದಿದ್ದ ಜನರು ಎರಡು ಸೀಳುಗಳಲ್ಲಿ ಒಂದೊಂದರಲ್ಲಿಯೂ ಒಂದೊಂದು ಕಾಲು, ತೊಡೆ, ವೃಷಣ, ಕಟಿ, ಪೃಷ್ಠ ಸ್ತನ, ಹೆಗಲುಗಳನ್ನೂ ಒಂದೊಂದು ತೋಳು, ಕಣ್ಣು ಹುಬ್ಬು, ಕಣ್ಣುಗಳನ್ನೂ ಕಂಡರು. ಮಗಧೇಶ್ವರನು ಹತನಾಗಲಾಗಿ ಹಾಹಾ ಎಂದು ದೊಡ್ಡ ಕೋಲಾಹಲವು ಮಸಗಿತು. ಅರ್ಜುನನೂ ಅಚ್ಯುತನೂ

ಸಹದೇವಂ ತತ್ತನಯಂ ಭಗವಾನ್ ಭೂತಭಾವನಃ।
ಅಭ್ಯಷಿಂಚದಮೇಯಾತ್ಮಾ ಮಗಧಾನಾಂ ಪತಿಂ ಪ್ರಭುಃ।
ಮೋಚಯಾಮಾಸ ರಾಜನ್ಯಾನ್ ಸಂರುದ್ಧಾ ಮಾಗಧೇನ ಯೇ॥

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ದ್ವಿಸಪ್ತತಿತಮಾಧ್ಯಾಯಃ

ತ್ರಿಸಪ್ತತಿತಮಾಧ್ಯಾಯಃ

ಶ್ರೀಶುಕ ಉವಾಚ-

ಅಯುತೇ ದ್ವೇ ಶತಾನ್ಯಷ್ಟೌ ಲೀಲಯಾ ಯುಧಿ ನಿರ್ಜಿತಾಃ।
ತೇ ನಿರ್ಗತಾ ಗಿರಿದ್ರೋಣ್ಯಾಂ ಮಲಿನಾ ಮಲವಾಸಸಃ॥ ೧

ಭೀಮಸೇನನನ್ನು ಆಲಂಗಿಸಿಕೊಂಡು ಆದರದಿಂದ ಹೊಗಳಿದರು (೪೪-೪೫). ಬಳಿಕ ಜಗನ್ನಿಯಾಮಕನೂ ಅಜ್ಞೇಯಮಹಿಮನೂ ಆದ ಭಗವಂತನು ಮಾಗಧನ ಮಗನಾದ ಸಹದೇವನಿಗೆ ರಾಜಪಟ್ಟಾಭಿಷೇಕವನ್ನು ನಡೆಸಿ, ಮಾಗಧನಿಂದ ಸೆರೆಯಿಡಲ್ಪಟ್ಟಿದ್ದ ರಾಜರನ್ನು ಸೆರೆಯಿಂದ ಬಿಡುಗಡೆಮಾಡಿಸಿದನು (೪೬).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಪ್ಪತ್ತೆರಡನೆಯ ಅಧ್ಯಾಯ

ಅಧ್ಯಾಯ ೭೩

ಜರಾಸಂಧನ ಸೆರೆಮನೆಯಲ್ಲಿದ್ದ ರಾಜರನ್ನು ಬಿಡಿಸಿ, ಅವರಿಗೆ ಹಿತೋಪದೇಶ ಮಾಡಿ ಶ್ರೀಕೃಷ್ಣನು ಭೀಮಾರ್ಜುನರೊಡನೆ ಇಂದ್ರಪ್ರಸ್ಥಕ್ಕೆ ಹಿಂದಿರುಗುವುದು.

ಶುಕಮಹರ್ಷಿಗಳು ಹೇಳಿದರು: ಪರೀಕ್ಷಿತರಾಜ, ಜರಾಸಂಧನು ಯುದ್ಧದಲ್ಲಿ ಲೀಲೆಯಿಂದ ಜಯಿಸಿ ಗಿರಿವ್ರಜದಲ್ಲಿ ಸೆರಿಹಿಡಿದಿಟ್ಟಿದ್ದ ರಾಜರ ಸಂಖ್ಯೆ ಇಪ್ಪತ್ತು ಸಾವಿರದ ಎಂಟುನೂರು. ಅವರೀಗ ಹೊರಬಂದರು. ಕಾರಾಗೃಹವಾಸದಿಂದ ಕಷ್ಟಕ್ಕೆ ಸಿಕ್ಕಿದ್ದ ಅವರು ಕೊಳೆಬಟ್ಟೆಯನ್ನುಟ್ಟು ಕೊಳೆಕೊಳೆಯಾಗಿ ಹಸಿವಿನಿಂದ

ಕ್ಷುತ್ಕ್ಷಾಮಾಃ ಶುಷ್ಕವದನಾಃ ಸಂರೋಧಪರಿಕರ್ಶಿತಾಃ ।
ದದೃಶುಸ್ತೇ ಘನಶ್ಯಾಮಂ ಪೀತಕೌಶೇಯವಾಸಸಮ್ ॥ ೨

ಶ್ರೀವತ್ಸಾಂಕಂ ಚತುರ್ಬಾಹುಂ ಪದ್ಮಗರ್ಭಾರುಣೇಕ್ಷಣಮ್ ।
ಚಾರುಪ್ರಸನ್ನವದನಂ ಸ್ಫುರನ್ಮಕರಕುಂಡಲಮ್ ॥ ೩

ಪದ್ಮಹಸ್ತಂ ಗದಾಶಂಖರಥಾಂಗೈರುಪಲಕ್ಷಿತಮ್ ।
ಕಿರೀಟಹಾರಕಟಕಕಟಿಸೂತ್ರಾಂಗದಾಚಿತಮ್ ॥ ೪

ಭ್ರಾಜದ್ವರಮಣಿಗ್ರೀವಂ ನಿವೀತಂ ವನಮಾಲಯಾ ।
ಪಿಬಂತ ಇವ ಚಕ್ಷುರ್ಭ್ಯಾಂ ಲಿಹಂತ ಇವ ಜಿಹ್ವಯಾ ॥ ೫

ಜಿಘ್ರಂತ ಇವ ನಾಸಾಭ್ಯಾಂ ರಂಭಂತ ಇವ ಬಾಹುಭಿಃ ।
ಪ್ರಣೇಮುರ್ಹತಪಾಪ್ಮಾನೋ ಮೂರ್ಧಭಿಃ ಪಾದಯೋರ್ಹರೇಃ ॥ ೬

ಕೃಷ್ಣಸಂದರ್ಶನಾಹ್ಲಾದಧ್ವಸ್ತಸಂರೋಧನಕ್ಲಮಾಃ ।
ಪ್ರಶಶಂಸುರ್ಹೃಷೀಕೇಶಂ ಗೀರ್ಭಿಃ ಪ್ರಾಂಜಲಯೋ ನೃಪಾಃ ॥ ೭

ಕೃಶರಾಗಿದ್ದರು. ಮುಖಗಳು ಬಾಡಿದ್ದವು. ಅವರು ಕಾರಾಗೃಹದಿಂದ ಹೊರಬಂದು ಪೀತಾಂಬರಧಾರಿಯೂ ಮೇಘಶ್ಯಾಮನೂ ಆದ ಶ್ರೀಕೃಷ್ಣನನ್ನು ಕಂಡರು (೧-೨). ಶ್ರೀವತ್ಸಾಂಕನೂ ಚತುರ್ಭುಜನೂ ತಾವರೆಯ ದಳದಂತೆ ವಿಶಾಲವಾದ ಕಣ್ಣುಗಳಿಂದಲೂ ಸುಂದರವಾದ ಪ್ರಸನ್ನವದನದಿಂದಲೂ ಶೋಭಿಸುತ್ತ, ಮಕರ ಕುಂಡಲಗಳಿಂದ ವಿರಾಜಿಸುತ್ತ ಶಂಕ, ಚಕ್ರ, ಗದಾ, ಪದ್ಮಗಳನ್ನು ಹಿಡಿದು, ಕಿರೀಟ, ಹಾರ, ಕಟಕ, ಕಟಿಸೂತ್ರ, ಭುಜಕೀರ್ತಿಗಳಿಂದ ಒಪ್ಪತಕ್ಕವನೂ ಆದ ಭಗವಂತನನ್ನು ನೋಡಿದರು (೩-೪). ಹೊಳೆಯುವ ಕೌಸ್ತುಭಮಣಿಯನ್ನು ಕೊರಳಲ್ಲಿ ಧರಿಸಿ ವನಮಾಲೆಯಿಂದ ಶೋಭಿತನಾದ ಶ್ರೀಕೃಷ್ಣನನ್ನು ವೀಕ್ಷಿಸಿದ ಆ ರಾಜರು ಕಣ್ಣುಗಳಿಂದ ಕುಡಿಯುವಂತೆಯೂ ನಾಲಗೆಯಿಂದ ನೆಕ್ಕುವಂತೆಯೂ ಮೂಗಿನಿಂದ ಮೂಸುವಂತೆಯೂ ತೋಳುಗಳಿಂದ ಅಪ್ಪುವಂತೆಯೂ ಸಂಭ್ರಮದಿಂದ ಬಂದು ಪಾಪರಹಿತರಾಗಿ ತಲೆಬಾಗಿಸಿ, ಆತನ ಪಾದಗಳಿಗೆ ದಂಡ ಪ್ರಣಾಮಮಾಡಿದರು (೫-೬). ಶ್ರೀಕೃಷ್ಣನ ಸಂದರ್ಶನದಿಂದಾದ ಆನಂದವು

ರಾಜಾನ ಊಚುಃ-

ನಮಸ್ತೇ ದೇವದೇವೇಶ ಪ್ರಪನ್ನಾರ್ತಿಹರಾವ್ಯಯ।
ಪ್ರಪನ್ನಾನ್ ಪಾಹಿ ನಃ ಕೃಷ್ಣ ನಿರ್ವಿಣ್ಣಾನ್ ಘೋರಸಂಸೃತೇಃ॥ ೮

ನೈನಂ ನಾಥಾನ್ವಸೂಯಾಮೋ ಮಾಗಧಂ ಮಧುಸೂದನ।
ಅನುಗ್ರಹೋ ಯದ್ ಭವತೋ ರಾಜ್ಞಾಂ ರಾಜ್ಯಚ್ಯುತಿರ್ವಿಭೋ॥೯

ರಾಜ್ಯೈಶ್ವರ್ಯಮದೋನ್ನದ್ಧೋ ನ ಶ್ರೇಯೋ ವಿಂದತೇ ನೃಪಃ।
ತ್ವನ್ಮಾಯಾಮೋಹಿತೋಽನಿತ್ಯಾ ಮನ್ಯತೇ ಸಂಪದೋಽಚಲಾಃ॥ ೧೦

ಮೃಗತೃಷ್ಣಾಂ ಯಥಾ ಬಾಲಾ ಮನ್ಯಂತ ಉದಕಾಶಯಮ್।
ಏವಂ ವೈಕಾರಿಕೀಂ ಮಾಯಾಮಯುಕ್ತಾ ವಸ್ತು ಚಕ್ಷತೇ॥ ೧೧

ವಯಂ ಪುರಾ ಶ್ರೀಮದನಷ್ಟದೃಷ್ಟಯೋ
ಜಿಗೀಷಯಾಸ್ಯಾ ಇತರೇತರಸ್ಪೃಧಃ।
ಘ್ನಂತಃ ಪ್ರಜಾಃ ಸ್ವಾ ಅತಿನಿರ್ಘೃಣಾಃ ಪ್ರಭೋ
ಮೃತ್ಯುಂ ಪುರಸ್ತ್ವಾವಿಗಣಯ್ಯ ದುರ್ಮದಾಃ॥ ೧೨

ಅವರ ಕಾರಾಗೃಹವಾಸದ ಕಷ್ಟವನ್ನು ದೂರಮಾಡಿತು. ಆ ರಾಜರು ಕೈಮುಗಿದುಕೊಂಡು ಹೃಷೀಕೇಶನನ್ನು ಪ್ರಶಸ್ತವಾಕ್ಯಗಳಿಂದ ಈ ಪ್ರಕಾರ ಸ್ತುತಿಸಿದರು (೭) : "ದೇವ ದೇವೇಶ್ವರ, ಭಕ್ತಕ್ಲೇಶವಿದೂರಕ, ಶಾಶ್ವತ, ನಿನಗೆ ನಮಸ್ಕಾರ. ಶ್ರೀಕೃಷ್ಣ ಘೋರಸಂಸಾರಕ್ಕೆ ಬೇಸತ್ತು ಶರಣಾಗತರಾಗಿರುವ ನಮ್ಮನ್ನು ಪಾಲಿಸು. ಸ್ವಾಮಿ ಮಧುಸೂದನ, ನಾವು ಈ ಮಾಗಧನಲ್ಲಿ ದೋಷವನ್ನೆಣಿಸುವುದಿಲ್ಲ, ರಾಜರೆನಿಸಿದ ನಮಗೆ ರಾಜ್ಯಭ್ರಂಶವೂ , ಹೇ ವಿಭು, ನಿನ್ನ ಒಂದು ಅನುಗ್ರಹವೇ ಸರಿ (೮-೯). ಏಕೆಂದರೆ, ರಾಜ್ಯೈಶ್ವರ್ಯಗಳ ಮದದಿಂದ ಕೊಬ್ಬಿದ ರಾಜನು ಎಂದಿಗೂ ಶ್ರೇಯಸ್ಸನ್ನು ಪಡೆಯುವುದಿಲ್ಲ. ಅವನು ನಿನ್ನ ಮಾಯೆಯಿಂದ ಮೋಹಿತನಾಗಿ ಅನಿತ್ಯವಾದ ಸಂಪತ್ತನ್ನು ಶಾಶ್ವತವೆಂದು ತಿಳಿಯುತ್ತಾನೆ (೧೦). ಬಾಲಕರು ಬಿಸಿಲ್ಗುದುರೆಯನ್ನು ಜಲಾಶಯವೆಂದು ತಿಳಿಯುವಂತೆ, ಈ ಅಜ್ಞಜನರು ಸೃಷ್ಟ್ಯಾದಿ ವಿಕಾರವನ್ನು ಪಡೆದ ನಿನ್ನ ಮಾಯೆಯನ್ನು ಪರಮಾರ್ಥವಸ್ತುವೆಂದು ಹೇಳುತ್ತಾರೆ (೧೧). ಹಿಂದೆ ನಾವು ಐಶ್ವರ್ಯಮದದಿಂದ ಬುದ್ಧಿಗೆಟ್ಟು ಸಂಪತ್ತನ್ನು

ತ ಏವ ಕೃಷ್ಣಾದ್ಯ ಗಭೀರರಂಹಸಾ
ದುರಂತವೀರ್ಯೇಣ ವಿಚಾಲಿತಾಃ ಶ್ರಿಯಃ ।
ಕಾಲೇನ ತನ್ವಾ ಭವತೋಽನುಕಂಪಯಾ
ವಿನಷ್ಟದರ್ಪಾಶ್ಚರಣೌ ಸ್ಮರಾಮ ತೇ ॥ ೧೩

ಅಥೋ ನ ರಾಜ್ಯಂ ಮೃಗತೃಷ್ಣಿರೂಪಿತಂ
ದೇಹೇನ ಶಶ್ವತ್ ಪತತಾ ರುಜಾಂ ಭುವಾ ।
ಉಪಾಸಿತವ್ಯಂ ಸ್ಪೃಹಯಾಮಹೇ ವಿಭೋ
ಕ್ರಿಯಾಫಲಂ ಪ್ರೇತ್ಯ ಚ ಕರ್ಣರೋಚನಮ್ ॥ ೧೪

ತಂ ನಃ ಸಮಾದಿಶೋಪಾಯಂ ಯೇನ ತೇ ಚರಣಾಬ್ಜಯೋಃ ।
ಸ್ಮೃತಿರ್ಯಥಾ ನ ವಿರಮೇದಪಿ ಸಂಸರತಾಮಿಹ ॥ ೧೫

ಕೃಷ್ಣಾಯ ವಾಸುದೇವಾಯ ಹರಯೇ ಪರಮಾತ್ಮನೇ ।
ಪ್ರಣತಕ್ಲೇಶನಾಶಾಯ ಗೋವಿಂದಾಯ ನಮೋ ನಮಃ ॥ ೧೬

ಗಳಿಸುವ ಆಸೆಯಿಂದ ಒಬ್ಬರನ್ನೊಬ್ಬರು ಸ್ಪರ್ಧಿಸುತ್ತಿದ್ದೆವು. ನಮ್ಮ ಪ್ರಜೆಗಳನ್ನೇ ಹಿಂಸಿಸುತ್ತ ದಯಾಶೂನ್ಯರಾಗಿ ಕ್ರೌರ್ಯದಿಂದ ವರ್ತಿಸಿದೆವು. ಹೇ ಪ್ರಭು, ಮದಾಂಧರಾದ ನಾವು ಎದುರಿಗೆ ಮೃತ್ಯುವಾಗಿ ನಿಂತಿದ್ದ ನಿನ್ನನ್ನು ಗಣಿಸಲಿಲ್ಲ (೧೨). ಅದೇ ನಾವು ಈಗ ಅತ್ಯಂತ ರಭಸವುಳ್ಳದ್ದೂ ಅಪಾರಶಕ್ತಿಯುಳ್ಳದ್ದೂ ನಿನ್ನ ಮೂರ್ತಿಸ್ವರೂಪವೂ ಆದ ಕಾಲದಿಂದ ಐಶ್ವರ್ಯಭ್ರಷ್ಟರಾದೆವು. ಕೃಷ್ಣ ನಿನ್ನ ಕೃಪೆಯಿಂದ ನಮ್ಮ ದರ್ಪ ವಡಗಿತು. ನಿನ್ನ ಪಾದಗಳನ್ನು ಸ್ಮರಿಸಬೇಕಾಯಿತು (೧೩). ಇನ್ನು ನಮಗೆ ಮೃಗತೃಷ್ಣಿಕೆಯಂತಿರುವ ಈ ರಾಜ್ಯಭೋಗ ಬೇಡ. ಅದನ್ನು ಅನುಭವಿಸುವ ಈ ಶರೀರವು ಸದಾ ರೋಗಗಳಿಗೆ ನೆಲೆಯಾದದ್ದು. ಒಂದು ದಿನ ಬಿದ್ದುಹೋಗತಕ್ಕದ್ದು. ಹೇ ವಿಭು, ಪುಣ್ಯಕರ್ಮಕ್ಕೆ ಫಲವಾಗಿ ಸತ್ತಮೇಲೆ ದೊರೆಯುವ ಕರ್ಣಾನಂದಕರವಾದ ಸ್ವರ್ಗಭೋಗವೂ ಬೇಡ (೧೪). ಆದ್ದರಿಂದ ಈ ಸಂಸಾರದಲ್ಲಿದ್ದರೂ ನಮಗೆ ನಿನ್ನ ಪಾದಕಮಲಗಳ ಸ್ಮರಣೆಯು ಅಳಿಸದಂತೆ ಒಂದು ಮಾರ್ಗವನ್ನು ನಮಗೆ ಉಪದೇಶಿಸು. ಕೃಷ್ಣನಿಗೆ-ವಾಸುದೇವನಿಗೆ-ಹರಿಗೆ ನಮಸ್ಕಾರ. ಪರಮಾತ್ಮನಿಗೆ-ಭಕ್ತರ ಕಷ್ಟವನ್ನು

ಶ್ರೀ ಶುಕಉವಾಚ-

ಸಂಸ್ತೂಯಮಾನೋ ಭಗವಾನ್ ರಾಜಭಿರ್ಮುಕ್ತಬಂಧನೈಃ।
ತಾನಾಹ ಕರುಣಸ್ತಾತ ಶರಣ್ಯಃ ಶ್ಲಕ್ಷ್ಣಯಾ ಗಿರಾ ॥ ೧೭

ಶ್ರೀಭಗವಾನುವಾಚ-

ಅದ್ಯಪ್ರಭೃತಿ ವೋ ಭೂಪಾ ಮಯ್ಯಾತ್ಮನ್ಯಖಿಲೇಶ್ವರೇ।
ಸುದೃಢಾ ಜಾಯತೇ ಭಕ್ತಿರ್ಬಾಢಮಾಶಂಸಿತಂ ತಥಾ ॥ ೧೮
ದಿಷ್ಟ್ಯಾ ವ್ಯವಸಿತಂ ಭೂಪಾ ಭವಂತ ಋತಭಾಷಿಣಃ।
ಶ್ರಿಯೈಶ್ವರ್ಯಮದೋನ್ನಾಹಂ ಪಶ್ಯ ಉನ್ಮಾದಕಂ ನೃಣಾಮ್ ॥ ೧೯
ಹೈಹಯೋ ನಹುಷೋ ವೇನೋ ರಾವಣೋ ನರಕೋಽಪರೇ।
ಶ್ರೀಮದಾದ್ ಭ್ರಂಶಿತಾಃ ಸ್ಥಾನಾದ್ ದೇವದೈತ್ಯನರೇಶ್ವರಾಃ ॥ ೨೦
ಭವಂತ ಏತದ್ ವಿಜ್ಞಾಯ ದೇಹಾದ್ಯುತ್ಪಾದ್ಯಮಂತವತ್।
ಮಾಂ ಯಜಂತೋಽಧ್ವರೈರ್ಯುಕ್ತಾಃ ಪ್ರಜಾ ಧರ್ಮೇಣ ರಕ್ಷಥ ॥ ೨೧

ಪರಿಹರಿಸುವ ಗೋವಿಂದನಿಗೆ-ನಮಸ್ಕಾರ. '' ಎಂದರು (೧೫-೧೬). ಅಪ್ಪಾ-ಪರೀಕ್ಷಿತರಾಜ, ಸೆರೆಯಿಂದ ವಿಮುಕ್ತರಾದ ರಾಜರು ಈ ಪ್ರಕಾರವಾಗಿ ಸ್ತುತಿಸಲಾಗಿ, ಕರುಣಾಳವೂ ಶರಣಾಗತರಕ್ಷಕನೂ ಆದ ಭಗವಂತನು ಮೃದು ನುಡಿಯಿಂದ ಹೀಗೆಂದನು (೧೭) : ''ಎಲೈ ಭೂಪಾಲರೆ, ಸರ್ವರಿಗೆ ಆತ್ಮನೂ ಅಖಿಲೇಶ್ವರನೂ ಆದ ನನ್ನಲ್ಲಿ ಇನ್ನು ಮೇಲೆ ನಿಮಗೆ ಅಚಲವಾದ ಭಕ್ತಿಯುಂಟಾಗುವುದು. ಆಗಲಿ ; ನಿಮ್ಮ ಅಪೇಕ್ಷೆಯು ಕೈಗೂಡುವುದು. ರಾಜರೆ, ನಿಮ್ಮ ಸಂಕಲ್ಪವು ಶುಭಕರವಾದುದು. ನೀವು ಸತ್ಯವನ್ನು ಹೇಳುತ್ತಿದ್ದೀರಿ (೧೮). ಸಂಪತ್ತು, ಪ್ರಭುತ್ವ-ಇವುಗಳಿಂದ ಹುಟ್ಟುವ ಮದಾತಿರೇಕವು ಜನರಿಗೆ ಹುಚ್ಚುಹಿಡಿಸುತ್ತದೆಯೆಂಬುದನ್ನು ನೋಡುತ್ತಿದ್ದೇನೆ. ದೇವದೈತ್ಯಮಾನವರ ಅಧಿಪತ್ಯವನ್ನು ಗಳಿಸಿದ ಕಾರ್ತವೀರ್ಯ, ನಹುಷ, ವೇನ, ರಾವಣ, ನರಕಾಸುರ-ಮೊದಲಾದವರು ಐಶ್ವರ್ಯಮದದ ನಿಮಿತ್ತದಿಂದಲೇ ತಮ್ಮ ಸ್ಥಾನದಿಂದ ಭ್ರಷ್ಟರಾದರು[1] (೧೯-೨೦). ದೇಹವೇ ಮೊದಲಾದ ಯಾವ

---

೧ ಇವರಲ್ಲಿ ನಹುಷನು ದೇವತೆಗಳ ಅಧಿಪತ್ಯವನ್ನು ಪಡೆದಿದ್ದನು ; ಅಗಸ್ತ್ಯರ ಶಾಪದಿಂದ ಅಜಗರವಾದನು. ಕಾರ್ತವೀರ್ಯನು ಪರಶುರಾಮನಿಂದಲೂ ವೇನನು ಬ್ರಾಹ್ಮಣರಹುಂಕರಾದಿಂದಲೂ ಹತರಾದರು. ರಾವಣ, ನರಕ-ಈ ಇಬ್ಬರು ದೈತ್ಯರು. ರಾವಣನನ್ನು ಶ್ರೀರಾಮನೂ ನರಕನನ್ನು ಶ್ರೀಕೃಷ್ಣನೂ ಸಂಹರಿಸಿದರು.

ಸಂತನ್ವಂತಃ ಪ್ರಜಾತಂತೂನ್ ಸುಖಂ ದುಃಖಂ ಭವಾಭವೌ ।
ಪ್ರಾಪ್ತಂ ಪ್ರಾಪ್ತಂ ಚ ಸೇವಂತೋ ಮಚ್ಚಿತ್ತಾ ವಿಚರಿಷ್ಯಥ ॥ ೨೨

ಉದಾಸೀನಾಶ್ಚ ದೇಹಾದಾವಾತ್ಮಾರಾಮಾ ಧೃತವ್ರತಾಃ ।
ಮಯ್ಯಾವೇಶ್ಯ ಮನಃ ಸಮ್ಯಙ್ಮಾಮಂತೇ ಬ್ರಹ್ಮ ಯಾಸ್ಯಥ ॥ ೨೩

ಶ್ರೀಶುಕ ಉವಾಚ-

ಇತ್ಯಾದಿಶ್ಯ ನೃಪಾನ್ ಕೃಷ್ಣೋ ಭಗವಾನ್ ಭುವನೇಶ್ವರಃ ।
ತೇಷಾಂ ನ್ಯಯುಂಕ್ತ ಪುರುಷಾನ್ ಸ್ತ್ರಿಯೋ ಮಜ್ಜನಕರ್ಮಣಿ ॥ ೨೪

ಸಪರ್ಯಾಂ ಕಾರಯಾಮಾಸ ಸಹದೇವೇನ ಭಾರತ ।
ನರದೇವೋಚಿತೈರ್ವಸ್ತ್ರೈರ್ಭೂಷಣೈಃ ಸ್ರಗ್ವಿಲೇಪನೈಃ ॥ ೨೫

ಭೋಜಯಿತ್ವಾ ವರಾನ್ನೇನ ಸುಸ್ನಾತಾನ್ ಸಮಲಂಕೃತಾನ್ ।
ಭೋಗೈಶ್ಚ ವಿವಿಧೈರ್ಯುಕ್ತಾಂಸ್ತಾಂಬೂಲಾದ್ಯೈರ್ನೃಪೋಚಿತೈಃ ॥ ೨೬

ಯಾವುದು ಜನ್ಯವೋ ಅದೆಲ್ಲವೂ ನಾಶವಾಗತಕ್ಕದ್ದು ಎಂಬುದನ್ನರಿತು, ನೀವು ಯಜ್ಞಗಳಿಂದ ನನ್ನನ್ನು ಅರ್ಚಿಸುತ್ತ, ಪ್ರಜೆಗಳನ್ನು ಧರ್ಮದಿಂದ ಪಾಲಿಸಿರಿ. ಪ್ರಜಾತಂತ್ರವನ್ನು ವಿಸ್ತರಿಸುತ್ತ ಆಗಾಗ ಪ್ರಾಪ್ತವಾಗುವ ಸುಖದುಃಖಗಳನ್ನೂ ಜನನಮರಣಗಳನ್ನೂ ಸಮಭಾವದಿಂದ ಸೇವಿಸುತ್ತ ನನ್ನಲ್ಲಿಯೇ ಚಿತ್ತವನ್ನಿರಿಸಿ ವ್ಯವಹಾರಮಾಡುತ್ತಿರಿ (೨೧-೨೨). ದೇಹಾದಿ ಪ್ರಪಂಚದಲ್ಲಿ ವ್ಯಾಮೋಹವನ್ನಿರಸದೆ ಉದಾಸೀನರಾಗಿದ್ದು ಆತ್ಮಾರಾಮರೂ ದೃಢ ನಿಷ್ಠೆಯುಳ್ಳವರೂ ಆಗಿರಿ. ಈ ರೀತಿ ನನ್ನಲ್ಲಿ ಪೂರ್ಣವಾಗಿ ಮನಸ್ಸನ್ನು ನೆಲೆಗೊಳಿಸಿದ್ದರೆ, ಕಡೆಗೆ ಪರಬ್ರಹ್ಮನಾದ ನನ್ನನ್ನು ಸೇರುವಿರಿ'' ಎಂದನು (೨೩). ಈ ಪ್ರಕಾರ ಜಗದೀಶ್ವರನಾದ ಭಗವಂತನು ರಾಜರಿಗೆ ಉಪದೇಶಿಸಿ, ಅವರಿಗೆ ಸ್ನಾನಮಾಡಿಸಬೇಕೆಂದು ತಕ್ಕ ಪುರುಷರಿಗೂ ಸ್ತ್ರೀಯರಿಗೂ ಆಜ್ಞಾಪಿಸಿದನು. ಅನಂತರ ರಾಜೋಚಿತವಾದ ವಸ್ತ್ರಭೂಷಣಗಳನ್ನೂ ಹಾರಗಂಧಾದ್ಯನು ಲೇಪನಗಳನ್ನೂ ಸಹದೇವನಿಂದ ಆ ರಾಜರಿಗೆ ಕೊಡಿಸಿ ಸತ್ಕಾರಮಾಡಿಸಿದನು (೨೪-೨೫). ಚೆನ್ನಾಗಿ ಸ್ನಾನಮಾಡಿ ಅಲಂಕೃತರಾದ ಅವರಿಗೆ ಮೃಷ್ಟಾನ್ನದಿಂದ ಭೋಜನಮಾಡಿಸಿ ತಾಂಬೂಲವೇ ಮೊದಲಾದ ನಾನಾ ಬಗೆಯ ರಾಜೋಚಿತ

ತೇ ಪೂಜಿತಾ ಮುಕುಂದೇನ ರಾಜಾನೋ ಮೃಷ್ಟಕುಂಡಲಾಃ ।
ವಿರೇಜುರ್ಮೋಚಿತಾಃ ಕ್ಲೇಶಾತ್ ಪ್ರಾವೃಡಂತೇ ಯಥಾ ಗ್ರಹಾಃ ॥ ೨೭

ರಥಾನ್ ಸದಶ್ವಾನಾರೋಪ್ಯ ಮಣಿಕಾಂಚನಭೂಷಿತಾನ್ ।
ಪ್ರೀಣಯ್ಯ ಸೂನೃತೈರ್ವಾಕ್ಯೈಃ ಸ್ವದೇಶಾನ್ ಪ್ರತ್ಯಯಾಪಯತ್ ॥ ೨೮

ತ ಏವಂ ಮೋಚಿತಾಃ ಕೃಚ್ಛ್ರಾತ್ ಕೃಷ್ಣೇನ ಸುಮಹಾತ್ಮನಾ ।
ಯಯುಸ್ತಮೇವ ಧ್ಯಾಯಂತಃ ಕೃತಾನಿ ಚ ಜಗತ್ಪತೇಃ ॥ ೨೯

ಜಗದುಃ ಪ್ರಕೃತಿಭ್ಯಸ್ತೇ ಮಹಾಪುರುಷಚೇಷ್ಟಿತಮ್ ।
ಯಥಾನ್ವಶಾಸದ್ ಭಗವಾಂಸ್ತಥಾ ಚಕ್ರುರತಂದ್ರಿತಾಃ ॥ ೩೦

ಜರಾಸಂಧಂ ಘಾತಯಿತ್ವಾ ಭೀಮಸೇನೇನ ಕೇಶವಃ ।
ಪಾರ್ಥಾಭ್ಯಾಂ ಸಂಯುತಃ ಪ್ರಾಯಾತ್ ಸಹದೇವೇನ ಪೂಜಿತಃ ॥ ೩೧

ಭೋಗಗಳಿಂದ ಸತ್ಕರಿಸಲಾಯಿತು. ಹೀಗೆ ಕಷ್ಟದಿಂದ ವಿಮೋಚಿತರಾಗಿ ಮುಕುಂದನಿಂದ ಸಂಮಾನಿತರಾದ ಆ ರಾಜರು ಹೊಳೆಯುವ ಕರ್ಣಕುಂಡಲಗಳನ್ನು ಧರಿಸಿ, ಮಳೆಗಾಲವು ಕಳೆದ ಮೇಲೆ ಬೆಳಗುವ ಗ್ರಹಗಳಂತೆ ಶೋಭಿಸಿದರು (೨೬-೨೭). ತರುವಾಯ ಉತ್ತಮಾಶ್ವಗಳನ್ನು ಹೂಡಿದ ಮಣಿಕಾಂಚನಭೂಷಿತಗಳಾದ ರಥಗಳಲ್ಲಿ ಅವರನ್ನು ಕುಳ್ಳಿರಿಸಿ ಪ್ರಿಯವೂ ಹಿತಕರವೂ ಆದ ಮಾತಿನಿಂದ ಸಂತೋಷಪಡಿಸಿ ಅವರವರ ದೇಶಗಳಿಗೆ ಶ್ರೀಕೃಷ್ಣನು ಕಳಿಸಿಕೊಟ್ಟನು (೨೮). ಹೀಗೆ ಮಹಾತ್ಮನಾದ ಶ್ರೀಕೃಷ್ಣನಿಂದ ಆ ರಾಜರು ತಮ್ಮ ಕ್ಲೇಶಗಳಿಂದ ಪಾರಾಗಿ ಆ ಜಗದೀಶನ ಉಪಕಾರಗಳನ್ನು ನೆನೆಯುತ್ತ ಪ್ರಯಾಣಮಾಡಿದರು. ತಮ್ಮ ದೇಶಕ್ಕೆ ಹೋಗಿ ಪ್ರಜೆಗಳಿಗೂ ಅಧಿಕಾರಿಗಳಿಗೂ ಆ ಮಹಾಪುರುಷನ ಕಾರ್ಯವನ್ನು ವಿವರಿಸಿದರು. ಅಲ್ಲದೆ ಭಗವಂತನು ಅಪ್ಪಣೆ ಮಾಡಿದಂತೆ ಎಚ್ಚರಿಕೆಯಿಂದ ರಾಜ್ಯಭಾರಮಾಡುತ್ತಿದ್ದರು (೨೯-೩೦). ಹೀಗೆ ಕೇಶವನು ಭೀಮಸೇನನ ಮೂಲಕ ಜರಾಸಂಧನನ್ನು ಕೊಲ್ಲಿಸಿ, ಅವನ ಮಗ ಸಹದೇವನಿಂದ ಪೂಜಿತನಾಗಿ, ಭೀಮಾರ್ಜುನರೊಡನೆ ಹೊರಟನು. ಶತ್ರುವನ್ನು ಜಯಿಸಿ ಬಂದ ಆ ಮೂವರೂ ಇಂದ್ರಪ್ರಸ್ಥವನ್ನು ಸೇರಿ ತಮ್ಮ ಶಂಖಗಳನ್ನು ಊದಿದರು. ಆ ಶಂಖಧ್ವನಿಯು ಅವರ ಮಿತ್ರರಿಗೆ ಹರ್ಷವನ್ನುಂಟು

ಗತ್ವಾತೇ ಖಾಂಡವಪ್ರಸ್ಥಂ ಶಂಖಾನ್ ದಧ್ಮುರ್ಜಿತಾರಯಃ ।
ಹರ್ಷಯಂತಃ ಸ್ವಸುಹೃದೋ ದುರ್ಹೃದಾಂ ಚಾಸುಖಾವಹಾಃ ॥ ೩೨

ತಚ್ಛ್ರುತ್ವಾ ಪ್ರೀತಮನಸ ಇಂದ್ರಪ್ರಸ್ಥನಿವಾಸಿನಃ ।
ಮೇನಿರೇ ಮಾಗಧಂ ಶಾಂತಂ ರಾಜಾ ಚಾಪ್ತಮನೋರಥಃ ॥ ೩೩

ಅಭಿವಂಧ್ಯಾಥ ರಾಜಾನಂ ಭೀಮಾರ್ಜುನಜನಾರ್ದನಾಃ ।
ಸರ್ವಮಾಶ್ರಾವಯಾಂಚಕ್ರುರಾತ್ಮನಾ ಯದನುಷ್ಠಿತಮ್ ॥ ೩೪

ನಿಶಮ್ಯ ಧರ್ಮರಾಜಸ್ತತ್ ಕೇಶವೇನಾನುಕಂಪಿತಮ್ ।
ಆನಂದಾಶ್ರುಕಲಾಂ ಮುಂಚನ್ ಪ್ರೇಮ್ಣಾ ನೋವಾಚ ಕಿಂಚನ ॥ ೩೫

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ತ್ರಿಸಪ್ತತಿತಮಾಧ್ಯಾಯಃ

ಮಾಡತಕ್ಕದ್ದೂ ದುರುಳರಿಗೆ ದುಃಖವನ್ನುಂಟುಮಾಡತಕ್ಕದ್ದೂ ಆಗಿತ್ತು (೩೧-೩೨). ಶಂಖಧ್ವನಿಯನ್ನು ಕೇಳಿ ಆನಂದಿತರಾದ ಇಂದ್ರಪ್ರಸ್ಥನಿವಾಸಿಗಳೂ, ಇಷ್ಟಾರ್ಥವನ್ನು ಕೈಗೂಡಿಸಿಕೊಂಡ ಧರ್ಮರಾಜನೂ ಮಾಗಧನ ಕಥೆ ಮುಗಿಯಿತೆಂದು ನಿಶ್ಚಯಿಸಿದರು (೩೩). ಅನಂತರ ಶ್ರೀಕೃಷ್ಣನೂ ಭೀಮಾರ್ಜುನರೂ ಧರ್ಮರಾಜನನ್ನು ಕಂಡು ನಮಸ್ಕರಿಸಿ, ತಾವು ಮಾಡಿದ ಕಾರ್ಯವನ್ನು ವಿವರಿಸಿ ಹೇಳಿದರು. ಕೇಶವನ ಕರುಣೆಯಿಂದಾದ ಕಾರ್ಯವಿಸ್ತಾರವನ್ನು ಆಕರ್ಣಿಸಿದ ಧರ್ಮರಾಜನು ಕಣ್ಣುಗಳಿಂದ ಆನಂದಬಾಷ್ಪಗಳನ್ನುಉದುರಿಸಿದನು. ಪ್ರೇಮಾಧಿಕ್ಯದಿಂದಾಗಿ ಅವನ ಬಾಯಿಂದ ಒಂದು ಮಾತೂ ಹೊರಡಲಿಲ್ಲ(೩೪-೩೫).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಪ್ಪತ್ತುಮೂರನೆಯ ಅಧ್ಯಾಯ

ಚತುಃಸಪ್ತತಿತಮಾಧ್ಯಾಯಃ

ಶ್ರೀಶುಕ ಉವಾಚ-
ಏವಂ ಯುಧಿಷ್ಠಿರೋ ರಾಜಾ ಜರಾಸಂಧವಧಂ ವಿಭೋಃ ।
ಕೃಷ್ಣಸ್ಯ ಚಾನುಭಾವಂ ತಂ ಶ್ರುತ್ವಾಪ್ರೀತಸ್ತಮಬ್ರವೀತ್ ॥ ೧

ಯುಧಿಷ್ಠಿರ ಉವಾಚ-
ಯೇ ಸ್ಯುಸ್ತ್ರೈಲೋಕ್ಯಗುರವಃ ಸರ್ವೇ ಲೋಕಮಹೇಶ್ವರಾಃ ।
ವಹಂತಿ ದುರ್ಲಭಂ ಲಬ್ಧ್ವಾ ಶಿರಸೈವಾನುಶಾಸನಮ್ ॥ ೨

ಸ ಭವಾನರವಿಂದಾಕ್ಷೋ ದೀನಾನಾಮೀಶಮಾನಿನಾಮ್ ।
ಧತ್ತೇಽನುಶಾಸನಂ ಭೂಮಂಸ್ತದತ್ಯಂತವಿಡಂಬನಮ್ ॥ ೩

ನ ಹ್ಯೇಕಸ್ಯಾದ್ವಿತೀಯಸ್ಯ ಬ್ರಹ್ಮಣಃ ಪರಮಾತ್ಮನಃ ।
ಕರ್ಮಭಿರ್ವರ್ಧತೇ ತೇಜೋ ಹ್ರಸತೇ ಚ ಯಥಾ ರವೇಃ ॥ ೪

ಅಧ್ಯಾಯ ೭೪

ಯುಧಿಷ್ಠಿರನ ರಾಜಸೂಯಯಾಗ, ಶ್ರೀಕೃಷ್ಣನಿಗೆ ಅಗ್ರಪೂಜೆ. ಶ್ರೀಕೃಷ್ಣನಿಂದ ಶಿಶುಪಾಲನ ವಧೆ.

ಈ ಪ್ರಕಾರವಾಗಿ ಧರ್ಮರಾಜನು ಜರಾಸಂಧನ ವಧೆಯನ್ನೂ ಶ್ರೀಕೃಷ್ಣನ ಪ್ರಭಾವವನ್ನೂ ಕೇಳಿ ಸಂತುಷ್ಟನಾಗಿ ಇಂತೆಂದನು : "ಶ್ರೀಕೃಷ್ಣ, ಮೂರು ಲೋಕಗಳಿಗೂ ಗುರುಗಳಾದ ಸನಕಾದಿಗಳೂ ಸಮಸ್ತಲೋಕೇಶ್ವರರೂ ದುರ್ಲಭವಾದ ನಿನ್ನ ಆಜ್ಞೆಯು ದೊರಕಿದರೆ, ಅದೇ ಭಾಗ್ಯವೆಂದು ತಿಳಿದು ಶಿರಸಾವಹಿಸಿ ನಡೆಸುತ್ತಾರೆ (೧-೨). ಹೇ ಮಹಾತ್ಮ, ಅಂತಹ ಅರವಿಂದಾಕ್ಷನಾದ ನೀನು ರಾಜರೆಂದು ತಿಳಿದುಕೊಂಡಿರುವ ದೀನರಾದ ನಮ್ಮಂಥವರ ಅಪ್ಪಣೆಯನ್ನು ಪಾಲಿಸುತ್ತೀಯೆ ಎಂಬುದು ದಿಟವಾಗಿಯೂ ಲೋಕವಿಡಂಬನೆ. ಸಜಾತೀಯ ವಿಜಾತೀಯ ವಸ್ತುವಿಲ್ಲದ ಪರಮಾತ್ಮನಾದ ಪರಬ್ರಹ್ಮವಸ್ತುವಿನ ಮಹಿಮೆಯು ಈ ಬಗೆಯ ಕರ್ಮಗಳಿಂದ ಹೆಚ್ಚುವುದೂ ಇಲ್ಲ, ಕ್ಷೀಣಿಸುವುದೂ ಇಲ್ಲ, ಉದಯಾಸ್ತಮಯ ಕ್ರಿಯೆಗಳಿಂದ ಸೂರ್ಯನ ತೇಜಸ್ಸು ಹೆಚ್ಚುವುದೂ ಇಲ್ಲ

ನ ವೈ ತೇಽಜಿತ ಭಕ್ತಾನಾಂ ಮಮಾಹಮಿತಿ ಮಾಧವ ।
ತ್ವಂ ತವೇತಿ ಚ ನಾನಾಧೀಃ ಪಶೂನಾಮಿವ ವೈಕೃತಾ ॥ ೫

ಶ್ರೀಶುಕ ಉವಾಚ-

ಇತ್ಯುಕ್ತ್ವಾ ಯಜ್ಞಿಯೇ ಕಾಲೇ ವವ್ರೇ ಯುಕ್ತಾನ್ ಸ ಋತ್ವಿಜಃ ।
ಕೃಷ್ಣಾನುಮೋದಿತಃ ಪಾರ್ಥೋ ಬ್ರಾಹ್ಮಣಾನ್ ಬ್ರಹ್ಮವಾದಿನಃ ॥ ೬

ದ್ವೈಪಾಯನೋ ಭರದ್ವಾಜಃ ಸುಮಂತುರ್ಗೌತಮೋಽಸಿತಃ ।
ವಸಿಷ್ಠಶ್ಚ್ಯವನಃ ಕಣ್ವೋ ಮೈತ್ರೇಯಃ ಕವಷಸ್ತ್ರಿತಃ ॥ ೭

ವಿಶ್ವಾಮಿತ್ರೋ ವಾಮದೇವಃ ಸುಮತಿರ್ಜೈಮಿನಿಃ ಕ್ರತುಃ ।
ಪೈಲಃ ಪರಾಶರೋ ಗರ್ಗೋ ವೈಶಂಪಾಯನ ಏವ ಚ ॥ ೮

ಅಥರ್ವಾ ಕಶ್ಯಪೋ ಧೌಮ್ಯೋ ರಾಮೋ ಭಾರ್ಗವ ಆಸುರಿಃ ।
ವೀತಿಹೋತ್ರೋ ಮಧುಚ್ಛಂದಾ ವೀರಸೇನೋಽಕೃತವ್ರಣಃ ॥ ೯

ಕುಂದುವುದೂ ಇಲ್ಲ. ಹಾಗೆಯೇ ಇದು (೩-೪). ಹೇ ಅಜಿತ-ಮಾಧವ, ನಾನು-ನನ್ನದು ನೀನು-ನಿನ್ನದು ಎಂದು ಪಶುಗಳಿಗಿರುವ ಶರೀರವಿಷಯಕವಾದ ಭೇದಬುದ್ಧಿಯು ನಿನ್ನ ಭಕ್ತರಿಗೇ ಇರುವುದಿಲ್ಲ. (ಹೀಗಿರುವಾಗ ನಿನಗೆ ಭೇದಬುದ್ಧಿ ಎಲ್ಲಿಯದು ?)'' ಎಂದನು★ (೫). ಹೀಗೆ ಹೇಳಿದ ಯುಧಿಷ್ಠಿರನು ಯಜ್ಞೋಚಿತವಾದ ವಸಂತಕಾಲದಲ್ಲಿ ಶ್ರೀಕೃಷ್ಣನ ಅನುಜ್ಞೆಯನ್ನು ಪಡೆದು ಅರ್ಹರೂ ಬ್ರಹ್ಮವಾದಿಗಳೂ ಆದ ಬ್ರಾಹ್ಮಣರನ್ನು ಋತ್ವಿಜರನ್ನಾಗಿ ವರಿಸಿದನು (೬). ಅವರು ಯಾರೆಂದರೆ: ವ್ಯಾಸ, ಭರದ್ವಾಜ, ಸುಮಂತು, ಗೌತಮ, ಅಸಿತ, ವಸಿಷ್ಠ, ಚ್ಯವನ, ಕಣ್ವ, ಮೈತ್ರೇಯ, ಕವಷ, ತ್ರಿತ, ವಿಶ್ವಾಮಿತ್ರ, ವಾಮದೇವ, ಸುಮತಿ, ಜೈಮಿನಿ, ಕ್ರತು, ಪೈಲ, ಪರಾಶರ, ಗರ್ಗ, ವೈಶಂಪಾಯನ, ಅಥರ್ವಾ, ಕಶ್ಯಪ, ಧೌಮ್ಯ, ಭೃಗುವಂಶೀಯನಾದ ಪರುಶುರಾಮ, ಆಸುರಿ, ವೀತಿಹೋತ್ರ,

---

★ ಧರ್ಮರಾಜನಾಡಿದ ಮಾತಿನ ಸಾರಾಂಶ ಇಷ್ಟು: ಜಗನ್ನಿಯಾಮಕನಾದ ನೀನು ನನ್ನ ಆಜ್ಞೆಯಂತೆ ಜರಾಸಂಧನನ್ನು ಕೊಂದೆಯೆಂಬುದು ಸರಿಯಲ್ಲ. ಪ್ರಪಂಚವೆಲ್ಲವೂ ಮಾಯಿಕವಾದ್ದರಿಂದ ಶುದ್ಧ ಬ್ರಹ್ಮವಾದ ನಿನಗೆ ಕರ್ಮಲೇಪವಿಲ್ಲ. ನಿನಗೆ ಮಿತ್ರ ಶತ್ರುಗಳೆಂಬ ಭೇದಭಾವವಿಲ್ಲ. ಶತ್ರುವಾದ ಜರಾಸಂಧನನ್ನು ಕೊಲ್ಲಿಸಿದೆಯೆಂಬುದು ಲೀಲಾಮಾತ್ರವೇ.

ಉಪಹೂತಾಸ್ತಥಾ ಚಾನ್ಯೇ ದ್ರೋಣಭೀಷ್ಮಕೃಪಾದಯಃ।
ಧೃತರಾಷ್ಟ್ರಃ ಸಹಸುತೋ ವಿದುರಶ್ಚ ಮಹಾಮತಿಃ॥ ೧೦

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ಯಜ್ಞದಿದೃಕ್ಷವಃ।
ತತ್ರೇಯುಃ ಸರ್ವರಾಜಾನೋ ರಾಜ್ಞಾಂ ಪ್ರಕೃತಯೋ ನೃಪ॥ ೧೧

ತತಸ್ತೇ ದೇವಯಜನಂ ಬ್ರಾಹ್ಮಣಾಃ ಸ್ವರ್ಣಲಾಂಗಲೈಃ।
ಕೃಷ್ಟ್ವಾತತ್ರ ಯಥಾಮ್ನಾಯಂ ದೀಕ್ಷಯಾಂಚಕ್ರಿರೇ ನೃಪಮ್॥ ೧೨

ಹೈಮಾಃ ಕಿಲೋಪಕರಣಾ ವರುಣಸ್ಯ ಯಥಾ ಪುರಾ।
ಇಂದ್ರಾದಯೋ ಲೋಕಪಾಲಾ ವಿರಿಂಚಭವಸಂಯುತಾಃ॥ ೧೩

ಸಗಣಾಃ ಸಿದ್ಧಗಂಧರ್ವಾ ವಿದ್ಯಾಧರಮಹೋರಗಾಃ।
ಮುನಯೋ ಯಕ್ಷರಕ್ಷಾಂಸಿ ಖಗಕಿನ್ನರಚಾರಣಾಃ॥ ೧೪

ಮಧುಚ್ಛಂದ್ರ, ವೀರಸೇನ ಮತ್ತು ಅಕೃತವ್ರಣ (೭-೯). ಇವರಲ್ಲದೆ ಯಜ್ಞ ಸಮಾರಂಭದರ್ಶನಕ್ಕಾಗಿ ದ್ರೋಣ, ಭೀಷ್ಮ, ಕೃಪಾದಿಗಳೂ ಧೃತರಾಷ್ಟ್ರ, ದುರ್ಯೋಧನನೇ ಮೊದಲಾದ ಅವನ ಮಕ್ಕಳು, ಪ್ರಾಜ್ಞನಾದ ವಿದುರ ಮತ್ತು ಇತರ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರನ್ನೂ ಯುಧಿಷ್ಠಿರನು ಆಹ್ವಾನಿಸಿದನು. ಹಾಗೆಯೇ ಸಮಸ್ತ ದೇಶಗಳ ರಾಜರೂ ಅವರ ಮಂತ್ರಿಗಳೂ ಆಹ್ವಾನವನ್ನು ಅಂಗೀಕರಿಸಿ ಯಜ್ಞದರ್ಶನಕ್ಕಾಗಿ ಬಂದು ಸೇರಿದರು (೧೦-೧೧). ಅನಂತರ ಋತ್ವಿಜರು ಚಿನ್ನದ ನೇಗಿಲುಗಳಿಂದ ಯಜ್ಞಭೂಮಿಯನ್ನು ಉತ್ತು ಶಾಸ್ತ್ರೋಕ್ತ ವಿಧಾನದಿಂದ ಯುಧಿಷ್ಠಿರನಿಗೆ ಯಜ್ಞದೀಕ್ಷೆಯನ್ನು ಕೊಟ್ಟರು. ಹಿಂದೆ ವರುಣನು ಯಾಗ ಮಾಡಿದಾಗ ಇದ್ದಂತೆ, ಈ ರಾಜಸೂಯಯಾಗದಲ್ಲಿ ಎಲ್ಲ ಉಪಕರಣಗಳೂ ಸುವರ್ಣಮಯವಾಗಿದ್ದವು. ಇಂದ್ರಾದಿ ಲೋಕಪಾಲರೂ ಬ್ರಹ್ಮರುದ್ರರೂ ಉಪಸ್ಥಿತರಾದರು (೧೨-೧೩). ಪರಿವಾರ ಸಹಿತರಾಗಿ ಸಿದ್ಧಗಂಧರ್ವರೂ ವಿದ್ಯಾಧರ ಮಹೋರಗರೂ ಯಕ್ಷರಕ್ಷೋಗಣಗಳೂ ಗರುಡಾದಿ ಖಗೇಶ್ವರರೂ ಕಿನ್ನರ ಚರಣರೂ ಬಂದರು. ಆಹೂತರಾದ ರಾಜರು ತಮ್ಮ ಪತ್ನಿಯರೊಡನೆ ಪಾಂಡುಸುತನಾದ ಧರ್ಮರಾಜನ ರಾಜಸೂಯಯಾಗಕ್ಕೆ

ರಾಜಾನಶ್ಚ ಸಮಾಹೂತಾ ರಾಜಪತ್ನ್ಯಶ್ಚ ಸರ್ವಶಃ ।
ರಾಜಸೂಯಂ ಸಮೀಯುಃ ಸ್ಮ ರಾಜ್ಞಃ ಪಾಂಡುಸುತಸ್ಯ ವೈ ॥ ೧೫

ಮೇನಿರೇ ಕೃಷ್ಣಭಕ್ತಸ್ಯ ಸೂಪಪನ್ನಮವಿಸ್ಮಿತಾಃ ।
ಅಯಾಜಯನ್ ಮಹಾರಾಜಂ ಯಾಜಕಾ ದೇವವರ್ಚಸಃ ।
ರಾಜಸೂಯೇನ ವಿಧಿವತ್ ಪ್ರಾಚೇತಸಮಿವಾಮರಾಃ ॥ ೧೬

ಸೌತ್ಯೇಽಹನ್ಯವನೀಪಾಲೋ ಯಾಜಕಾನ್ ಸದಸಸ್ಪತೀನ್ ।
ಅಪೂಜಯನ್ ಮಹಾಭಾಗಾನ್ ಯಥಾವತ್ ಸುಸಮಾಹಿತಃ ॥ ೧೭

ಸದಸ್ಯಾಗ್ರ್ಯಾರ್ಹಣಾರ್ಹಂ ವೈ ವಿಮೃಶಂತಃ ಸಭಾಸದಃ ।
ನಾಧ್ಯಗಚ್ಛನ್ನನೈಕಾಂತ್ಯಾತ್ ಸಹದೇವಸ್ತದಾಬ್ರವೀತ್ ॥ ೧೮

ಅರ್ಹತಿ ಹ್ಯಚ್ಯುತಃ ಶ್ರೈಷ್ಠ್ಯಂ ಭಗವಾನ್ ಸಾತ್ವತಾಂ ಪತಿಃ ।
ಏಷ ವೈ ದೇವತಾಃ ಸರ್ವಾ ದೇಶಕಾಲಧನಾದಯಃ ॥ ೧೯

ಆಗಮಿಸಿದರು (೧೪-೧೫). ವೈಭವೋಪೇತವಾದ ಏರ್ಪಾಡನ್ನು ಕಂಡು ಶ್ರೀಕೃಷ್ಣಭಕ್ತನಾದ ಧರ್ಮರಾಜನಿಗೆ ಅದು ಸಹಜವೆಂದೂ ಅಚ್ಚರಿಯೇನೂ ಅಲ್ಲವೆಂದೂ ಅವರೆಲ್ಲರೂ ಭಾವಿಸಿದರು. ಹಿಂದೆ ದೇವತೆಗಳು ವರುಣನಿಂದ ಯಾಗಮಾಡಿಸಿದಂತೆ, ದೇವತೆಗಳ ಹಾಗೆ ವರ್ಚಸ್ವಿಗಳಾದ ಋತ್ವಿಜರು ಧರ್ಮರಾಜನಿಂದ ರಾಜಸೂಯವನ್ನು ವಿಧಿವತ್ತಾಗಿ ಮಾಡಿಸಿದರು (೧೬). ಸೋಮಾಭಿಷವದ ದಿನ ಯುಧಿಷ್ಠಿರನು ಸಮಾಹಿತಚಿತ್ತನಾಗಿ ಮಹಾಭಾಗರಾದ ಋತ್ವಿಜರನ್ನೂ ಸಭಾಧ್ಯಕ್ಷರನ್ನೂ ಕ್ರಮವರಿತು ಪೂಜಿಸಿದನು. ಆ ಸಭೆಯಲ್ಲಿ ಅಗ್ರಪೂಜೆಗೆ ಅರ್ಹರಾದವರೊಬ್ಬರು ಬೇಕಾಗಿತ್ತು. ಸಭಾಸದರು ವಿಮರ್ಶಿಸಿದರು. ಅರ್ಹತೆಯುಳ್ಳವರು ಅನೇಕರಿದ್ದುದರಿಂದ ಯಾರನ್ನು ಆರಿಸುವುದೆಂದು ನಿಶ್ಚಯವಾಗಲಿಲ್ಲ. ಆಗ ಸಹದೇವನು ಹೀಗೆಂದನು (೧೭-೧೮) : "ಯದುಕುಲಪತಿಯಾದ ಭಗವಾನ್ ಅಚ್ಯುತನು ಅಗ್ರಪೂಜೆಗೆ ಅರ್ಹನಾದವನು. ಸಕಲ ದೇವತೆಗಳೂ ದೇಶಕಾಲದ್ರವ್ಯಾದಿಗಳೂ ಈತನೇ: ಈ ಪ್ರಪಂಚ, ಯಜ್ಞ ಯಾಗಗಳು, ಅಗ್ನಿ, ಆಹುತಿ, ವೇದ-ಇವೆಲ್ಲವೂ ಶ್ರೀಕೃಷ್ಣ ಸ್ವರೂಪವಾದವು. ಜ್ಞಾನಕಾಂಡ, ಉಪಾಸನಾಕಾಂಡಗಳು ಈತನನ್ನೇ ಪ್ರತಿ

ಯದಾತ್ಮಕಮಿದಂ ವಿಶ್ವಂ ಕ್ರತವಶ್ಚ ಯದಾತ್ಮಕಾಃ ।
ಅಗ್ನಿರಾಹುತಯೋ ಮಂತ್ರಾಃ ಸಾಂಖ್ಯಂ ಯೋಗಶ್ಚ ಯತ್ಪರಃ ॥ ೨೦

ಏಕ ಏವಾದ್ವಿತೀಯೋಽಸಾವೈತದಾತ್ಮ್ಯಮಿದಂ ಜಗತ್ ।
ಆತ್ಮನಾಽಽತ್ಮಾಶ್ರಯಃ ಸಭ್ಯಾಃ ಸೃಜತ್ಯವತಿ ಹಂತ್ಯಜಃ ॥ ೨೧

ವಿವಿಧಾನೀಹ ಕರ್ಮಾಣಿ ಜನಯನ್ ಯದವೇಕ್ಷಯಾ ।
ಈಹತೇ ಯದಯಂ ಸರ್ವಃ ಶ್ರೇಯೋ ಧರ್ಮಾದಿಲಕ್ಷಣಮ್ ॥ ೨೨

ತಸ್ಮಾತ್ ಕೃಷ್ಣಾಯ ಮಹತೇ ದೀಯತಾಂ ಪರಮಾರ್ಹಣಮ್ ।
ಏವಂ ಚೇತ್ ಸರ್ವಭೂತಾನಾಮಾತ್ಮನಶ್ಚಾರ್ಹಣಂ ಭವೇತ್ ॥ ೨೩

ಸರ್ವಭೂತಾತ್ಮಭೂತಾಯ ಕೃಷ್ಣಾಯಾನನ್ಯದರ್ಶಿನೇ ।
ದೇಯಂ ಶಾಂತಾಯ ಪೂರ್ಣಾಯ ದತ್ತಸ್ಯಾನಂತ್ಯಮಿಚ್ಛತಾ ॥ ೨೪

ಇತ್ಯುಕ್ತ್ವಾ ಸಹದೇವೋಽಭೂತ್ ತೂಷ್ಣೀಂ ಕೃಷ್ಣಾನುಭಾವವಿತ್ ।
ತಚ್ಛ್ರುತ್ವಾ ತುಷ್ಟುವುಃ ಸರ್ವೇ ಸಾಧು ಸಾಧ್ವಿತಿ ಸತ್ತಮಾಃ ॥ ೨೫

ಪಾದಿಸುತ್ತವೆ (೧೯-೨೦). ಅದ್ವಿತೀಯನಾಗಿ ಇರತಕ್ಕವನು ಈತನೊಬ್ಬನೇ. ಈ ಸಕಲ ಜಗತ್ತೂ ಕೃಷ್ಣಾತ್ಮಕ. ಎಲೈ ಸಭಾಸದರೆ, ಜನ್ಮರಹಿತನಾದ ಶ್ರೀಕೃಷ್ಣನು ಅನ್ಯನಿರಪೇಕ್ಷನಾಗಿ ತನ್ನಿಂದಲೇ ಈ ವಿಶ್ವವನ್ನು ಸೃಷ್ಟಿಸಿ, ಪಾಲಿಸಿ, ಅಂತ್ಯಗೊಳಿಸುವನು (೨೧). ಸರ್ವರೂ ವಿವಿಧಪುಣ್ಯಕರ್ಮಗಳನ್ನಾಚರಿಸಿ ಧರ್ಮವೇ ಮುಂತಾದ ಶ್ರೇಯಸ್ಸನ್ನು ಗಳಿಸುವುದು ಈತನ ಅನುಗ್ರಹದಿಂದಲೇ. (ಕರ್ಮ ಮತ್ತು ಕರ್ಮಫಲಗಳು ಇವನಿಗೆ ಅಧೀನವಾಗಿವೆ). ಆದ್ದರಿಂದ ಮಹಾತ್ಮನಾದ ಶ್ರೀಕೃಷ್ಣನಿಗೆ ಅಗ್ರಪೂಜೆಯು ಸಲ್ಲಬೇಕು. ಹೀಗೆ ಮಾಡಿದರೆ ಸರ್ವಭೂತಗಳಿಗೂ ಆತ್ಮನಾದವನಿಗೆ ಪೂಜೆಯನ್ನು ಮಾಡಿದಂತಾಗುತ್ತದೆ (೨೨-೨೩). ಕೊಟ್ಟದ್ದು ಅನಂತವಾಗಬೇಕೆಂದು ಬಯಸತಕ್ಕವನು ಸರ್ವಭೂತಗಳಿಗೆ ಆತ್ಮನೂ ತನಗಿಂತ ಬೇರೊಂದು ವಸ್ತುವನ್ನು ಕಾಣದವನೂ ಶಾಂತನೂ ಪೂರ್ಣನೂ ಆದ ಶ್ರೀಕೃಷ್ಣನಿಗೆ (ಕರ್ಮಫಲವನ್ನು) ಅರ್ಪಿಸಬೇಕು '' ಎಂಬುದಾಗಿ ಅಚ್ಯುತನ ಮಹಿಮೆಯನ್ನರಿತಿದ್ದ ಸಹದೇವನು ನುಡಿದು

ಶ್ರುತ್ವಾ ದ್ವಿಜೇರಿತಂ ರಾಜಾ ಜ್ಞಾತ್ವಾ ಹಾರ್ದಂ ಸಭಾಸದಾಮ್ ।
ಸಮರ್ಹಯದ್ಧೃಷೀಕೇಶಂ ಪ್ರೀತಃ ಪ್ರಣಯವಿಹ್ವಲಃ ॥ ೨೬

ತತ್ಪಾದಾವವನಿಜ್ಯಾಪಃ ಶಿರಸಾ ಲೋಕಪಾವನೀಃ ।
ಸಭಾರ್ಯಃ ಸಾನುಜಾಮಾತ್ಯಃ ಸಕುಟುಂಬೋಽವಹನ್ಮುದಾ ॥ ೨೭

ವಾಸೋಭಿಃ ಪೀತಕೌಶೇಯೈರ್ಭೂಷಣೈಶ್ಚ ಮಹಾಧನೈಃ ।
ಅರ್ಹಯಿತ್ವಾಶ್ರುಪೂರ್ಣಾಕ್ಷೋ ನಾಶಕತ್ ಸಮವೇಕ್ಷಿತುಮ್ ॥ ೨೮

ಇತ್ಥಂ ಸಭಾಜಿತಂ ವೀಕ್ಷ್ಯ ಸರ್ವೇ ಪ್ರಾಂಜಲಯೋ ಜನಾಃ ।
ನಮೋ ಜಯೇತಿ ನೇಮುಸ್ತಂ ನಿಪೇತುಃ ಪುಷ್ಪವೃಷ್ಟಯಃ ॥ ೨೯

ಇತ್ಥಂ ನಿಶಮ್ಯ ದಮಘೋಷಸುತಃ ಸ್ವಪೀಠಾ-
ದುತ್ಥಾಯ ಕೃಷ್ಣ ಗುಣವರ್ಣನಜಾತಮನ್ಯುಃ ।
ಉತ್ಕ್ಷಿಪ್ಯ ಬಾಹುಮಿದಮಾಹ ಸದಸ್ಯಮರ್ಷೀ
ಸಂಶ್ರಾವಯನ್ ಭಗವತೇ ಪರುಷ್ಯಾಣ್ಯಭೀತಃ ॥ ೩೦

ಸುಮ್ಮನಾದನು. ಅವನ ಮಾತನ್ನು ಕೇಳಿ ಸಭೆಯಲ್ಲಿದ್ದ ಎಲ್ಲ ಸಜ್ಜನರೂ 'ಸರಿಯಾದ ಮಾತು, ಭೇಷ್ ' ಎಂದು ಕೊಂಡಾಡಿದರು (೨೪-೨೫). ಬ್ರಾಹ್ಮಣರ ಹರ್ಷೋದ್ಗಾರವನ್ನು ಕೇಳಿ, ಸಭಾಸದರ ಹೃದ್ಗತವಾದ ಅಭಿಪ್ರಾಯವನ್ನರಿತು, ಸಂತುಷ್ಟನಾದ ಧರ್ಮರಾಜನು ಸ್ನೇಹಾತಿಶಯದಿಂದ ಹೃಷೀಕೇಶನನ್ನು ಅಗ್ರಪೀಠದಲ್ಲಿ ಕುಳ್ಳಿರಿಸಿ ಪೂಜಿಸಿದನು (೨೬). ಶ್ರೀಕೃಷ್ಣನ ಪಾದಗಳನ್ನು ತೊಳೆದು ಲೋಕಪಾವನವಾದ ಆ ಪಾದೋದಕವನ್ನು ಸಂತೋಷದಿಂದ ತನ್ನ ತಲೆಯ ಮೇಲೆ ಪ್ರೋಕ್ಷಿಸಿಕೊಂಡು ಮಡದಿಯರು, ತಮ್ಮಂದಿರು, ಮಂತ್ರಿಗಳು, ಮತ್ತಿತರ ಕುಟುಂಬದವರು-ಇವರೆಲ್ಲರ ತಲೆಯ ಮೇಲೆ ಪ್ರೋಕ್ಷಿಸಿದನು (೨೭). ರೇಶ್ಮೆಯ ಪೀತಾಂಬರಗಳನ್ನು ಬಹು ಬೆಲೆಬಾಳುವ ಒಡವೆಗಳನ್ನೂ ಶ್ರೀಕೃಷ್ಣನಿಗೆ ಅರ್ಪಿಸಿದನು. ಆನಂದಬಾಷ್ಪಗಳು ತುಳುಕುತ್ತಿದ್ದ ಧರ್ಮರಾಜನಿಗೆ ಏನೂ ಕಾಣಿಸಲೇ ಇಲ್ಲ! ಈ ರೀತಿಯಲ್ಲಿ ಸರ್ವೋತ್ತಮನೆಂದು ಪೂಜಿತನಾದ ವಾಸುದೇವನನ್ನು ನೋಡುತ್ತಿದ್ದ ಸಮಸ್ತ ಜನರೂ ಕೈಮುಗಿದುಕೊಂಡು ''ನಮೋ ವಾಸುದೇವಾಯ ಜಯ ಜಯ'' ಎಂದು ಹೇಳಿ ನಮಸ್ಕರಿಸಿದರು. ಪುಷ್ಪವೃಷ್ಟಿಗಳು ಸುರಿದವು (೨೮-೨೯). ಇದೆಲ್ಲವನ್ನೂ ಕೇಳುತ್ತಿದ್ದ ದಮಘೋಷಸುತನಾದ

ಈಶೋ ದುರತ್ಯಯಃ ಕಾಲ ಇತಿ ಸತ್ಯವತೀ ಶ್ರುತಿಃ ।
ವೃದ್ಧಾನಾಮಪಿ ಯದ್ ಬುದ್ಧಿರ್ಬಾಲವಾಕ್ಯೈರ್ವಿಭಿದ್ಯತೇ ॥ ೩೧

ಯೂಯಂ ಪಾತ್ರವಿದಾಂ ಶ್ರೇಷ್ಠಾ ಮಾ ಮಂಧ್ವಂ ಬಾಲಭಾಷಿತಮ್ ।
ಸದಸಸ್ಪತಯಃ ಸರ್ವೇ ಕೃಷ್ಣೋ ಯತ್ ಸಮ್ಮತೋಽರ್ಹಣೇ ॥ ೩೨

ತಪೋವಿದ್ಯಾವ್ರತಧರಾನ್ ಜ್ಞಾನವಿಧ್ವಸ್ತಕಲ್ಮಷಾನ್ ।
ಪರಮರ್ಷೀನ್ ಬ್ರಹ್ಮನಿಷ್ಠಾನ್ ಲೋಕಪಾಲೈಶ್ಚ ಪೂಜಿತಾನ್ ॥ ೩೩

ಸದಸ್ಪತೀನತಿಕ್ರಮ್ಯ ಗೋಪಾಲಃ ಕುಲಪಾಂಸನಃ ।
ಯಥಾ ಕಾಕಃ ಪುರೋಡಾಶಂ ಸಪರ್ಯಾಂ ಕಥಮರ್ಹತಿ ॥ ೩೪

ವರ್ಣಾಶ್ರಮಕುಲಾಪೇತಃ ಸರ್ವಧರ್ಮಬಹಿಷ್ಕೃತಃ ।
ಸ್ವೈರವರ್ತೀ ಗುಣೈರ್ಹೀನಃ ಸಪರ್ಯಾಂ ಕಥಮರ್ಹತಿ ॥ ೩೫

ಶಿಶುಪಾಲನಿಗೆ ಸಹನೆಯಾಗಲಿಲ್ಲ. ಶ್ರೀಕೃಷ್ಣನ ಗುಣವರ್ಣನೆಯಿಂದ ಅವನಿಗೆ ಕೋಪ ಉಕ್ಕಿತು. ಅವನು ಪೀಠದಿಂದ ಎದ್ದು ನಿಂತು ಕೈಯೆತ್ತಿ ನಿರ್ಭಯದಿಂದ ಸಭೆಯಲ್ಲಿ ಭಗವಂತನಿಗೆ ಕೇಳಿಸುವಂತೆ ಕಠೋರವಾದ ಈ ಮಾತನ್ನು ಆಡಿದನು (೩೦).''ಎಲೈ ಸಭಾಸದರೆ, ''ಸರ್ವಸಮರ್ಥವಾದ ಕಾಲವನ್ನು ಮೀರುವುದು ಅಸಾಧ್ಯ'' ಎಂಬ ನಾಣ್ನುಡಿ ಸತ್ಯವಾದದ್ದು. ಏಕೆಂದರೆ ಬಾಲಕರ ಮಾತುಗಳಿಂದ ಹಿರಿಯರ ಬುದ್ಧಿಯೂ ಪಲ್ಲಟವಾಗುತ್ತದೆ. ಸಭಾ ಮುಖ್ಯರಾದ ನೀವು ಅರ್ಹತೆ ಏನೆಂಬುದನ್ನು ಚೆನ್ನಾಗಿ ಬಲ್ಲವರು. ಕೃಷ್ಣನು ಅಗ್ರಪೂಜಾರ್ಹನೆಂಬ ಹುಡುಗಾಟಿಕೆಯ ಮಾತಿಗೆ ನೀವು ಬೆಲೆಕೊಡಬಾರದು (೩೧-೩೨). ಈ ಸಭೆಯಲ್ಲಿ ತಪಸ್ವಿಗಳೂ ವಿದ್ವಾಂಸರೂ ವ್ರತನಿಷ್ಠರೂ ಜ್ಞಾನಿಗಳೂ ನಿಷ್ಕಲ್ಮಷರೂ ಆದ ಮಹರ್ಷಿಗಳಿದ್ದಾರೆ. ಇವರು ಬ್ರಹ್ಮಜ್ಞಾನಿಗಳು. ದಿಕ್ಪಾಲರಿಂದಲೂ ಪೂಜಿತರಾದವರು. ಸಭೆಯಲ್ಲಿ ಅಗ್ರಗಣ್ಯರು. ಇವರೆಲ್ಲರನ್ನೂ ಅತಿಕ್ರಮಿಸಿ ಕುಲಗೇಡಿಯಾದ ದನಕಾಯುವವನಿಗೆ ಅಗ್ರಪೂಜೆ ಹೇಗೆ ಸಲ್ಲುತ್ತದೆ ? ಕಾಗೆಗೆ ಯಜ್ಞದ ಪುರೋಡಾಶವನ್ನಿತ್ತು ಪೂಜಿಸಬಹುದೆ ? (೩೩-೩೪). ಈ ಗೊಲ್ಲನು ವರ್ಣಾಶ್ರಮಗಳಿಲ್ಲದವನು. ಕುಲಹೀನ. ಸರ್ವಧರ್ಮಗಳಿಂದಲೂ ಬಹಿಷ್ಕೃತ.

ಯಯಾತಿನೈಷಾಂ ಹಿ ಕುಲಂ ಶಪ್ತಂ ಸದ್ಭಿರ್ಬಹಿಷ್ಕೃತಮ್ ।
ವೃಥಾ ಪಾನರತಂ ಶಶ್ವತ್ ಸಪರ್ಯಾಂ ಕಥಮರ್ಹತಿ ॥ ೩೬

ಬ್ರಹ್ಮರ್ಷಿ ಸೇವಿತಾನ್ ದೇಶಾನ್ ಹಿತ್ವೈತೇಽಬ್ರಹ್ಮವರ್ಚಸಮ್ ।
ಸಮುದ್ರಂ ದುರ್ಗಮಾಶ್ರಿತ್ಯ ಬಾಧಂತೇ ದಸ್ಯವಃ ಪ್ರಜಾಃ ॥ ೩೭

ಏವಮಾದೀನ್ಯಭದ್ರಾಣಿ ಬಭಾಷೇ ನಷ್ಟಮಂಗಲಃ ।
ನೋವಾಚ ಕಿಂಚಿದ್ ಭಗವಾನ್ ಯಥಾ ಸಿಂಹಃ ಶಿವಾರುತಮ್ ॥ ೩೮

ಭಗವನ್ನಿಂದನಂ ಶ್ರುತ್ವಾ ದುಃಸಹಂ ತತ್ ಸಭಾಸದಃ ।
ಕರ್ಣೌ ಪಿಧಾಯ ನಿರ್ಜಗ್ಮುಃ ಶಪಂತಶ್ಚೇದಿಪಂ ರುಷಾ ॥ ೩೯

ನಿಂದಾಂ ಭಗವತಃ ಶೃಣ್ವಂಸ್ತತ್ಪರಸ್ಯ ಜನಸ್ಯ ವಾ ।
ತತೋ ನಾಪೈತಿ ಯಃ ಸೋಽಪಿ ಯತ್ಯಾಧಃ ಸುಕೃತಾಚ್ಚ್ಯುತಃ ॥ ೪೦

ಸ್ವೇಚ್ಛಾಚಾರಿಯೂ ಗುಣಶೂನ್ಯನೂ ಆದ ಈತನು ಹೇಗೆ ತಾನೇ ಪೂಜಾರ್ಹನಾದಾನು ? ಯಯಾತಿಯು ಈತನ ಯದುಕುಲಕ್ಕೆ ಸಿಂಹಾಸನದ ಅರ್ಹತೆ ಇಲ್ಲವೆಂದು ಶಪಿಸಿದ್ದಾನೆ. ಸಜ್ಜನರು ಈ ಕುಲಕ್ಕೆ ಬಹಿಷ್ಕಾರ ಹಾಕಿದ್ದಾರೆ. ಯಾವಾಗಲೂ ಹೆಂಡವನ್ನೂ ಕುಡಿಯುತ್ತಿರುವ ಈ ವಂಶಕ್ಕೆ ಮಾನ್ಯತೆ ಹೇಗೆ ಬಂದೀತು ? (೩೫-೩೬). ಈ ಯಾದವರು ಬ್ರಹ್ಮರ್ಷಿಸೇವಿತವಾದ ಆರ್ಯಾವರ್ತವನ್ನು ಬಿಟ್ಟು ಬ್ರಾಹ್ಮಣ್ಯಶೂನ್ಯವಾದ ಸಮುದ್ರದ ದುರ್ಗದಲ್ಲಿ ವಾಸಿಸುತ್ತಿರುವ ದಸ್ಯುಗಳು! ಸದಾ ನಮ್ಮ ಪ್ರಜೆಗಳನ್ನು ಬಾಧಿಸುತ್ತಿದ್ದಾರೆ'' (೩೭). ಇವೇ ಮೊದಲಾದ ಕೆಟ್ಟಮಾತುಗಳನ್ನು ನಿರ್ಭಾಗ್ಯನಾದ ಶಿಶುಪಾಲನು ನುಡಿದನು. ನರಿಯ ಕೂಗನ್ನು ಕೇಳುತ್ತಿರುವ ಸಿಂಹದಂತೆ, ಆತನ ಮಾತನ್ನು ಕೇಳುತ್ತಿದ್ದ ಶ್ರೀಕೃಷ್ಣನು ಏನನ್ನೂ ಹೇಳದೆ ಮೌನವಾಗಿದ್ದನು (೩೮). ದುಃಸಹವಾದ ಭಗವನ್ನಿಂದೆಯನ್ನು ಕೇಳುತ್ತಿದ್ದ ಸಭಾಸದರು ಕಿವಿಗಳನ್ನು ಮುಚ್ಚಿಕೊಂಡು ಶಿಶುಪಾಲನನ್ನು ಶಪಿಸುತ್ತ ಸಭೆಯಿಂದ ಹೊರಗೆ ಹೋದರು. ಏಕೆಂದರೆ, ಪರೀಕ್ಷಿತರಾಜ, ಭಗವಂತನ ನಿಂದೆಯನ್ನಾಗಲಿ ಭಗವದ್ಭಕ್ತರ ನಿಂದೆಯನ್ನಾಗಲಿ ಕೇಳುವ ಪ್ರಸಂಗ ಬಂದಾಗ ಯಾವಾತನು ಆ ಸ್ಥಳದಿಂದ ತೆರಳುವುದಿಲ್ಲವೋ ಆತನು ಪುಣ್ಯಹೀನನಾಗಿ ಅಧೋಗತಿಗೆ ಹೋಗುವನು (೩೯-೪೦). ಆಗ

ತತಃ ಪಾಂಡುಸುತಾಃ ಕ್ರುದ್ಧಾ ಮತ್ಸ್ಯಕೈಕಯಸೃಂಜಯಾಃ ।
ಉದಾಯುಧಾಃ ಸಮುತ್ತಸ್ಥುಃ ಶಿಶುಪಾಲಜಿಘಾಂಸವಃ ॥ ೪೧

ತತಶ್ಚೈದ್ಯಸ್ತ್ವಸಂಭ್ರಾಂತೋ ಜಗೃಹೇ ಖಡ್ಗಚರ್ಮಣೀ ।
ಭರ್ತ್ಸಯನ್ ಕೃಷ್ಣಪಕ್ಷೀಯಾನ್ ರಾಜ್ಞಃ ಸದಸಿ ಭಾರತ ॥ ೪೨

ತಾವದುತ್ಥಾಯ ಭಗವಾನ್ ಸ್ವಾನ್ ನಿವಾರ್ಯ ಸ್ವಯಂ ರುಷಾ ।
ಶಿರಃ ಕ್ಷುರಾಂತಚಕ್ರೇಣ ಜಹಾರಾಪತತೋ ರಿಪೋಃ ॥ ೪೩

ಶಬ್ದಃ ಕೋಲಾಹಲೋಽಪ್ಯಾಸೀತ್ ಶಿಶುಪಾಲೇ ಹತೇ ಮಹಾನ್ ।
ತಸ್ಯಾನುಯಾಯಿನೋ ಭೂಪಾ ದುದ್ರುವುರ್ಜೀವಿತೈಷಿಣಃ ॥ ೪೪

ಚೈದ್ಯದೇಹೋತ್ಥಿತಂ ಜ್ಯೋತಿರ್ವಾಸುದೇವಮುಪಾವಿಶತ್ ।
ಪಶ್ಯತಾಂ ಸರ್ವಭೂತಾನಾಮುಲ್ಕೇವ ಭುವಿ ಖಾಚ್ಚ್ಯುತಾ ॥ ೪೫

ಪಾಂಡವರೂ ಮತ್ಸ್ಯಕೈಕಯಸೃಂಜಯರೂ ಕ್ರುದ್ಧರಾಗಿ ಶಿಶುಪಾಲನನ್ನು ಕೊಲ್ಲಬೇಕೆಂದು ಆಯುಧಗಳನ್ನು ಹಿರಿದು ಮೇಲೆದ್ದರು. ಆದಕ್ಕೆ ಶಿಶುಪಾಲನು ಸ್ವಲ್ಪವೂ ಬೆದರದೆ ತಾನು ಖಡ್ಗ ಗುರಾಣಿಗಳನ್ನು ಹಿಡಿದು, ಸಭೆಯಲ್ಲಿ ಕೃಷ್ಣನ ಪಕ್ಷವನ್ನು ವಹಿಸಿದ್ದ ರಾಜರನ್ನು ಹೀಗಳೆದನು (೪೧-೪೨). ಅಷ್ಟರಲ್ಲಿ ಶ್ರೀಕೃಷ್ಣನು ಕೋಪದಿಂದ ಎದ್ದುನಿಂತು ಅವರೆಲ್ಲರನ್ನೂ ತಡೆದನು. ತನ್ನ ಮೇಲೆ ನುಗ್ಗಿ ಬರುತ್ತಿದ್ದ ಶಿಶುಪಾಲನನ್ನು ನೋಡಿ ಅವನ ಶಿರಸ್ಸನ್ನು ನಿಶಿತವಾದ ಚಕ್ರಾಯುಧದಿಂದ ಕತ್ತರಿಸಿ ಹಾಕಿದನು (೪೩). ಹೀಗೆ ಶಿಶುಪಾಲನು ಹತನಾಗಲು ಸಭೆಯಲ್ಲಿ ಮಹತ್ತರವಾದ ಕೋಲಾಹಲವೆದ್ದಿತು. ಚೈದ್ಯನ ಅನುಯಾಯಿಗಳಾದ ಭೂಪರು ಬದುಕುವ ಹಂಬಲದಿಂದ ಓಡಿಹೋದರು (೪೪). ಶಿಶುಪಾಲನ ದೇಹದಿಂದ ಒಂದು ಜ್ಯೋತಿಯು, ಆಕಾಶದಿಂದ ಭೂಮಿಗೆ ಸಿಡಿದ ಉಲ್ಕೆಯಂತೆ ಹೊರಟು, ಎಲ್ಲರೂ ನೋಡುತ್ತಿರುವಾಗಲೇ ವಾಸುದೇವನಲ್ಲಿ ಐಕ್ಯವಾಯಿತು ! ಪರೀಕ್ಷಿತ, ಮೂರುಜನ್ಮಗಳಲ್ಲಿ ಬೆಳೆದು ಬಂದಿದ್ದ ವೈರದಿಂದ ಆವಿಷ್ಟವಾದ ಶಿಶುಪಾಲನ ಬುದ್ಧಿಯು ಭಗವಂತನನ್ನೇ ನಿರಂತರವಾಗಿ ನೆನೆಸಿಕೊಳ್ಳುತ್ತಿತ್ತು. ಆದ್ದರಿಂದ ಆತನು ಭಗವಂತನಲ್ಲಿ ಸೇರಿಹೋದನು. ಭಾವನೆಯು ಧ್ಯೇಯಾಕಾರವಾದ ಜನ್ಮಕ್ಕೆ

ಜನ್ಮತ್ರಯಾನುಗುಣಿತವೈರಸಂರಬ್ಧಯಾ ಧಿಯಾ ।
ಧ್ಯಾಯಂಸ್ತನ್ಮಯತಾಂ ಯಾತೋ ಭಾವೋ ಹಿ ಭವಕಾರಣಮ್ ॥ ೪೬

ಋತ್ವಿಗ್ಭ್ಯಃ ಸಸದಸ್ಯೇಭ್ಯೋ ದಕ್ಷಿಣಾಂ ವಿಪುಲಾಮದಾತ್ ।
ಸರ್ವಾನ್ ಸಂಪೂಜ್ಯ ವಿಧಿವಚ್ಚಕ್ರೇಽವಭೃಥಮೇಕರಾಟ್ ॥ ೪೭

ಸಾಧಯಿತ್ವಾ ಕ್ರತುಂ ರಾಜ್ಞಃ ಕೃಷ್ಣೋ ಯೋಗೇಶ್ವರೇಶ್ವರಃ ।
ಉವಾಸ ಕತಿಚಿನ್ಮಾಸಾನ್ ಸುಹೃದ್ಭಿರಭಿಯಾಚಿತಃ ॥ ೪೮

ತತೋಽನುಜ್ಞಾಪ್ಯ ರಾಜಾನಮನಿಚ್ಛಂತಮಪೀಶ್ವರಃ ।
ಯಯೌ ಸಭಾರ್ಯಃ ಸಾಮಾತ್ಯಃ ಸ್ವಪುರಂ ದೇವಕೀಸುತಃ ॥ ೪೯

ವರ್ಣಿತಂ ತದುಪಾಖ್ಯಾನಂ ಮಯಾ ತೇ ಬಹುವಿಸ್ತರಮ್ ।
ವೈಕುಂಠವಾಸಿನೋರ್ಜನ್ಮ ವಿಪ್ರಶಾಪಾತ್ ಪುನಃ ಪುನಃ ॥ ೫೦

ರಾಜಸೂಯಾವಭೃಥ್ಯೇನ ಸ್ನಾತೋ ರಾಜಾ ಯುಧಿಷ್ಠಿರಃ ।
ಬ್ರಹ್ಮಕ್ಷತ್ರಸಭಾಮಧ್ಯೇ ಶುಶುಭೇ ಸುರರಾಡಿವ ॥ ೫೧

ಕಾರಣವಷ್ಟೆ? (೪೫-೪೬). ಆಮೇಲೆ ಸಾಮ್ರಾಟನಾದ ಯುಧಿಷ್ಠಿರನು ಋತ್ವಿಜರಿಗೂ ಸದಸ್ಯರಾದ ವಿಪ್ರರಿಗೂ ವಿಪುಲವಾದ ದಕ್ಷಿಣೆಯನ್ನಿತ್ತು ಎಲ್ಲರನ್ನೂ ಸಂಮಾನಿಸಿ ವಿಧಿವತ್ತಾಗಿ ಅವಭೃಥಸ್ನಾನ ಮಾಡಿದನು (೪೭). ಯೋಗೇಶ್ವರನಾದ ಶ್ರೀಕೃಷ್ಣನು ಧರ್ಮರಾಜನ ಯಾಗವನ್ನು ಸಾಗಿಸಿಕೊಟ್ಟು ಮಿತ್ರರ ಪ್ರಾರ್ಥನೆಯಂತೆ ಕೆಲವು ತಿಂಗಳು ಇಂದ್ರಪ್ರಸ್ಥದಲ್ಲಿಯೇ ಇದ್ದನು. ಆಮೇಲೆ ಧರ್ಮರಾಜನಿಗೆ ಸಂಮತಿಯಿಲ್ಲದಿದ್ದರೂ ಒತ್ತಾಯದಿಂದ ಅವನ ಸಂಮತಿಯನ್ನು ಪಡೆದು, ವಾಸುದೇವನು ತನ್ನ ಪತ್ನಿಯರಿಂದಲೂ ಮಂತ್ರಿಗಳಿಂದಲೂ ಸಹಿತನಾಗಿ ದ್ವಾರಕೆಗೆ ತೆರಳಿದನು (೪೮-೪೯). ಪರೀಕ್ಷಿತರಾಜ, ವೈಕುಂಠವಾಸಿಗಳಾದ ಜಯವಿಜಯರಿಗೆ ಸನಕಾದಿ ವಿಪ್ರಶಾಪದಿಂದ ಬಾರಿಬಾರಿಗೂ ಉಂಟಾದ ಜನ್ಮವೃತ್ತಾಂತವನ್ನು ವಿಸ್ತಾರವಾಗಿ ನಿನಗೆ ಹೇಳಿದ್ದೇನೆ (೫೦). ರಾಜಸೂಯ ಯಾಗವನ್ನು ನೆರವೇರಿಸಿ ಅವಭೃಥಸ್ನಾನಮಾಡಿದ ಯುಧಿಷ್ಠಿರನು ಬ್ರಾಹ್ಮಣ ಕ್ಷತ್ರಿಯರಿಂದ ತುಂಬಿದ ಸಭಾಮಧ್ಯದಲ್ಲಿ ದೇವೇಂದ್ರನಂತೆ ವಿರಾಜಿಸಿದನು. ಎಲ್ಲ ಸುರಮಾನವ ಖೇಚರರು ಧರ್ಮರಾಜನಿಂದ ಸಂಮಾನಿತರಾಗಿ ಶ್ರೀಕೃಷ್ಣನನ್ನೂ

ರಾಜ್ಞಾ ಸಭಾಜಿತಾಃ ಸರ್ವೇ ಸುರಮಾನವಖೇಚರಾಃ।
ಕೃಷ್ಣಂ ಕ್ರತುಂ ಚ ಶಂಸಂತಃ ಸ್ವಧಾಮಾನಿ ಯಯುರ್ಮುದಾ॥ ೫೨

ದುರ್ಯೋಧನಮೃತೇ ಪಾಪಂ ಕಲಿಂ ಕುರುಕುಲಾಮಯಮ್।
ಯೋ ನ ಸೇಹೇ ಶ್ರಿಯಂ ಸ್ಫೀತಾಂ ದೃಷ್ಟ್ವಾ ಪಾಂಡುಸುತಸ್ಯ ತಾಮ್॥

ಯ ಇದಂ ಕೀರ್ತಯೇದ್ ವಿಷ್ಣೋಃ ಕರ್ಮ ಚೈದ್ಯವಧಾದಿಕಮ್।
ರಾಜಮೋಕ್ಷಂ ವಿತಾನಂ ಚ ಸರ್ವಪಾಪೈಃ ಪ್ರಮುಚ್ಯತೇ॥ ೫೪

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ಚತುಃಸಪ್ತತಿತಮಾಧ್ಯಾಯಃ

ಯಾಗವನ್ನು ಪ್ರಶಂಸೆಮಾಡುತ್ತ ಸಂತೋಷದಿಂದ ತಮ್ಮ ತಮ್ಮ ಗೃಹಗಳಿಗೆ ತೆರಳಿದರು (೫೧-೫೨). ಆದರೆ ಪಾಪಿಯೂ ಕಲಿಪುರುಷನೂ ಕುರುಕುಲ ಕಳಂಕನೂ ಆದ ದುರ್ಯೋಧನನೊಬ್ಬನು ಮಾತ್ರ ಪಾಂಡುಪುತ್ರನಾದ ಧರ್ಮರಾಜನ ವಿಪುಲೈಶ್ವರ್ಯವನ್ನು ಕಂಡು ಸೈರಿಸಲಿಲ್ಲ. ಅವನೊಬ್ಬನನ್ನು ಬಿಟ್ಟು ಉಳಿದವರೆಲ್ಲರೂ ಸಂತೋಷಿಸಿದರು (೫೩). ವಿಷ್ಣುವಿನ ಕಾರ್ಯವಾದ ಚೈದ್ಯವಧೆ ಮುಂತಾದ ವೃತ್ತಾಂತವನ್ನೂ (ಮಾಗಧನ ಸೆರೆಮನೆಯಿಂದ) ರಾಜರ ಬಿಡುಗಡೆಯನ್ನೂ ರಾಜಸೂಯಯಾಗದ ವಿಷಯವನ್ನೂ ಯಾವನು ಕೀರ್ತಿಸುವನೋ ಅವನು ಸರ್ವಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ (೫೪).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಪ್ಪತ್ತುನಾಲ್ಕನೆಯ ಅಧ್ಯಾಯ

ಪಂಚಸಪ್ತತಿತಮಾಧ್ಯಾಯಃ

ರಾಜೋವಾಚ-
ಅಜಾತಶತ್ರೋಸ್ತಂ ದೃಷ್ಟ್ವಾ ರಾಜಸೂಯಮಹೋದಯಮ್ ।
ಸರ್ವೇ ಮುಮುದಿರೇ ಬ್ರಹ್ಮನ್ ನೃದೇವಾ ಯೇ ಸಮಾಗತಾಃ ॥ ೧

ದುರ್ಯೋಧನಂ ವರ್ಜಯಿತ್ವಾ ರಾಜಾನಃ ಸರ್ಷಯಃ ಸುರಾಃ ।
ಇತಿ ಶ್ರುತಂ ನೋ ಭಗವಂಸ್ತತ್ರ ಕಾರಣಮುಚ್ಯತಾಮ್ ॥ ೨

ಋಷಿರುವಾಚ-
ಪಿತಾಮಹಸ್ಯ ತೇ ಯಜ್ಞೇ ರಾಜಸೂಯೇ ಮಹಾತ್ಮನಃ ।
ಬಾಂಧವಾಃ ಪರಿಚರ್ಯಾಯಾಂ ತಸ್ಯಾಸನ್ ಪ್ರೇಮಬಂಧನಾಃ ॥ ೩

ಭೀಮೋ ಮಹಾನಸಾಧ್ಯಕ್ಷೋ ಧನಾಧ್ಯಕ್ಷಃ ಸುಯೋಧನಃ ।
ಸಹದೇವಸ್ತು ಪೂಜಾಯಾಂ ನಕುಲೋ ದ್ರವ್ಯಸಾಧನೇ ॥ ೪

ಅಧ್ಯಾಯ ೭೫

ರಾಜಸೂಯದ ಅವಭೃಥೋತ್ಸವ. ಮಯನಿರ್ಮಿತ ಸಭೆಯಲ್ಲಿದುರ್ಯೋಧನನಿಗಾದ ಅವಮಾನ. ಅವನ ಅಸೂಯೆ.

ಪರೀಕ್ಷಿತರಾಜನು ಹೇಳಿದನು : ''ಬ್ರಹ್ಮರ್ಷಿಗಳೆ, ಅಜಾತಶತ್ರುವೆನಿಸಿದ ಧರ್ಮರಾಜನ ರಾಜಸೂಯವೈಭವವನ್ನು ಕಂಡು, ಅಲ್ಲಿಗೆ ಬಂದಿದ್ದ ಸಮಸ್ತ ರಾಜರಿಗೂ ಋಷಿಗಳಿಗೂ ದೇವತೆಗಳಿಗೂ ಸಂತೋಷವಾಯಿತು, ದುರ್ಯೋಧನನೊಬ್ಬನಿಗೆ ಮಾತ್ರ ಸಂತೋಷವಾಗಲಿಲ್ಲ ಎಂದು ಕೇಳಿದೆನು. ಅದಕ್ಕೆ ಕಾರಣವೇನು ? ಹೇಳೋಣವಾಗಲಿ'' ಎಂದನು (೧-೨). ಆಗ ಶುಕಮುನಿಗಳು ಹೇಳಿದರು : ಪರೀಕ್ಷಿತ, ಮಹಾತ್ಮನಾದ ನಿನ್ನ ಅಜ್ಜನು ನಡೆಸಿದ ರಾಜಸೂಯದಲ್ಲಿ ಆತನ ಬಾಂಧವರು ಪ್ರೇಮಬಂಧನಕ್ಕೆ ವಶರಾಗಿ ತಾವಾಗಿಯೇ ಪರಿಚರ್ಯಾಕಾರ್ಯದಲ್ಲಿ ತೊಡಗಿದ್ದರು. ಭೀಮನು ಪಾಕಶಾಲೆಗೂ ದುರ್ಯೋಧನನು ಹಣಕಾಸಿನ ವ್ಯವಸ್ಥೆಗೂ ಅಧ್ಯಕ್ಷರಾಗಿದ್ದರು. ಸಹದೇವನು ಅತಿಥಿ ಸತ್ಕಾರದಲ್ಲಿಯೂ ನಕುಲನು ಸಾಮಗ್ರಿಗಳನ್ನು ಒದಗಿಸುವುದರಲ್ಲಿಯೂ ನಿಯುಕ್ತರಾಗಿದ್ದರು (೩-೪). ಅರ್ಜುನನು ಗುರುಹಿರಿಯರ ಸೇವೆಯಲ್ಲಿ

ಗುರುಶುಶ್ರೂಷಣೇ ಜಿಷ್ಣುಃ ಕೃಷ್ಣಃ ಪಾದಾವನೇ ಜನೇ।
ಪರಿವೇಷಣೇ ದ್ರುಪದಜಃ ಕರ್ಣೋ ದಾನೇ ಮಹಾಮನಾಃ॥ ೫

ಯುಯುಧಾನೋ ವಿಕರ್ಣಶ್ಚ ಹಾರ್ದಿಕ್ಯೋ ವಿದುರಾದಯಃ।
ಬಾಹ್ಲೀಕಪುತ್ರಾ ಭೂರ್ಯಾದ್ಯಾ ಯೇ ಚ ಸಂತರ್ದನಾದಯಃ॥ ೬

ನಿರೂಪಿತಾ ಮಹಾಯಜ್ಞೇ ನಾನಾಕರ್ಮಸು ತೇ ತದಾ।
ಪ್ರವರ್ತಂತೇ ಸ್ಮ ರಾಜೇಂದ್ರ ರಾಜ್ಞಃ ಪ್ರಿಯಚಿಕೀರ್ಷವಃ॥ ೭

ಋತ್ವಿಕ್ಸದಸ್ಯ ಬಹುವಿತ್ಸು ಸುಹೃತ್ತಮೇಷು
ಸ್ವಿಷ್ಟೇಷು ಸೂನೃತಸಮರ್ಹಣದಕ್ಷಿಣಾಭಿಃ।
ಚೈದ್ಯೇ ಚ ಸಾತ್ವತಪತೇಶ್ಚರಣಂ ಪ್ರವಿಷ್ಟೇ
ಚಕ್ರುಸ್ತತಸ್ತ್ವವಭೃಥಸ್ನಪನಂ ದ್ಯುನದ್ಯಾಮ್॥ ೮

ನಿರತನಾಗಿದ್ದನು. ಶ್ರೀಕೃಷ್ಣನು ಬಂದ ಅತಿಥಿಗಳ ಪಾದಗಳನ್ನು ತೊಳೆಯುತ್ತಿದ್ದನು! ದ್ರುಪದನ ಮಗನಾದ[1] ಧೃಷ್ಟದ್ಯುಮ್ನನು ಅಡಿಗೆಯನ್ನು ಬಡಿಸುವ ಏರ್ಪಾಡಿನಲ್ಲಿಯೂ ಮನಸ್ವಿಯಾದ ಕರ್ಣನು ದಾನಕಾರ್ಯದಲ್ಲಿಯೂ ಉದ್ಯುಕ್ತರಾಗಿದ್ದರು (೫). ಯುಯುಧಾನ, ವಿಕರ್ಣ, ಹಾರ್ದಿಕ್ಯ, ವಿದುರ ಮೊದಲಾದವರೂ ಬಾಹ್ಲೀಕನ ಮಕ್ಕಳಾದ ಭೂರಿ ಮುಂತಾದವರೂ ಸಂತರ್ದನಾದಿಗಳೂ ಸಹ, ರಾಜೇಂದ್ರ, ಧರ್ಮರಾಜನಿಗೆ ಸಂತೋಷವಾಗಲೆಂದು ಆ ಮಹಾಯಜ್ಞದಲ್ಲಿ ತಾವಾಗಿಯೇ ನಾನಾ ಕಾರ್ಯಭಾರಗಳನ್ನು ವಹಿಸಿಕೊಂಡಿದ್ದರು[2] (೬-೭). ಇಂತು ಯಜ್ಞಕಾರ್ಯದಲ್ಲಿ

---

೧. 'ಪರಿವೇಷಣೇ ದ್ರುಪದಜಾ' ಎಂದು ಮೂಲದಲ್ಲಿ ಪಾಠಾಂತರ ಉಂಟು. ಆ ಪಕ್ಷದಲ್ಲಿ ದ್ರೌಪದಿಯೆಂದು ಅರ್ಥ. ಆ ಪಾಠ ಅಷ್ಟು ಸಮಂಜಸವೆನಿಸುವುದಿಲ್ಲ. ದ್ರೌಪದಿಯು ಯಜಮಾನ ಪತ್ನಿಯಾದ್ದರಿಂದ ಧರ್ಮರಾಜನ ಬಳಿಯಲ್ಲಿಯೇ ಇರಬೇಕಾಗುತ್ತದೆ.

೨. ಯುಯುಧಾನ =ಸಾತ್ಯಕಿ, ವಿಕರ್ಣ=ಧೃತರಾಷ್ಟ್ರನ ಮಗ, ಹಾರ್ದಿಕ್ಯ=ಈ ಹೆಸರಿನ ಒಬ್ಬ ರಾಜ. ಕೃತವರ್ಮನಿಗೂ ಈ ಹೆಸರಿದೆ. ಬಾಹ್ಲೀಕನೆಂದರೆ ಇಲ್ಲಿ ಅವನ ಮಗ ಸೋಮದತ್ತ (ಭಾಗ. ೯-೨೨-೧೮). ಇವನ ಮಕ್ಕಳು ಭೂರಿ, ಭೂರಿಶ್ರವ ಮತ್ತು ಶಲ. ಸಂತರ್ದನನು ವಸುದೇವನ ಸೋದರಿಯಾದ ಶ್ರುತಕೀರ್ತಿಯ ಮಗ ; ಇವನು ಕೇಕಯ ದೇಶದ ರಾಜ.

ಮೃದಂಗಶಂಖಪಣವಧುಂಧುರ್ಯಾನಕಗೋಮುಖಾಃ।
ವಾದಿತ್ರಾಣಿ ವಿಚಿತ್ರಾಣಿ ನೇದುರಾವಭೃಥೋತ್ಸವೇ ॥ ೯

ನರ್ತಕ್ಯೋ ನನೃತುರ್ಹೃಷ್ಟಾ ಗಾಯಕಾ ಯೂಥಶೋ ಜಗುಃ।
ವೀಣಾವೇಣುತಲೋನ್ನಾದಸ್ತೇಷಾಂ ಸ ದಿವಮಸ್ಪೃಶತ್ ॥ ೧೦

ಚಿತ್ರಧ್ವಜಪತಾಕಾಗ್ರೈರಿಭೇಂದ್ರಸ್ಯಂದನಾರ್ವಭಿಃ।
ಸ್ವಲಂಕೃತೈರ್ಭಟೈರ್ಭೂಪಾ ನಿರ್ಯಯೂ ರುಕ್ಮಮಾಲಿನಃ ॥ ೧೧

ಯದುಸೃಂಜಯಕಾಂಬೋಜಕುರುಕೇಕಯಕೋಸಲಾಃ।
ಕಂಪಯಂತೋ ಭುವಂ ಸೈನ್ಯೈರ್ಯಜಮಾನಪುರಸ್ಸರಾಃ ॥ ೧೨

ಸದಸ್ಯರ್ತ್ವಿಗ್ದ್ವಿಜಶ್ರೇಷ್ಠಾ ಬ್ರಹ್ಮಘೋಷೇಣ ಭೂಯಸಾ।
ದೇವರ್ಷಿಪಿತೃಗಂಧರ್ವಾಸ್ತುಷ್ಟುವುಃ ಪುಷ್ಪವರ್ಷಿಣಃ ॥ ೧೩

ತೊಡಗಿದ್ದ ಋತ್ವಿಜರು, ಸಭಾಸದರು, ವಿದ್ವಾಂಸರು ಮತ್ತು ಆಪ್ತಮಿತ್ರರು ಪ್ರಿಯವಚನ, ಸಂಮಾನ, ದಕ್ಷಿಣೆಗಳಿಂದ ಸತ್ಕೃತರಾದಮೇಲೆ, ಶಿಶುಪಾಲನು ಶ್ರೀಕೃಷ್ಣನ ಪಾದವನ್ನು ಸೇರಿಕೊಂಡಮೇಲೆ, ಗಂಗಾನದಿಯಲ್ಲಿ ಅವಭೃಥಸ್ನಾನವನ್ನು ಮಾಡಲು ಉದ್ಯುಕ್ತರಾದರು (೮). ಮೃದಂಗ, ಶಂಖ, ಪಣವ, ಧುಂಧುರಿ, ಆನಕ, ಗೋಮುಖಾದಿ ವಾದ್ಯಗಳು ಆ ಉತ್ಸವದಲ್ಲಿ ಧ್ವನಿಗೈಯುತ್ತಿದ್ದವು. ನರ್ತಕಿಯರು ಹರ್ಷದಿಂದ ನರ್ತನಮಾಡಿದರು. ಗಾಯಕರು ಗುಂಪಾಗಿ ಹಾಡಿದರು. ವೀಣೆ, ಕೊಳಲುಗಳ ಸ್ವರವು ಸ್ವರ್ಗದವರೆಗೆ ಹಬ್ಬಿತು (೯-೧೦). ಚಿನ್ನದ ಹಾರಗಳನ್ನು ಧರಿಸಿದ್ದ ಭೂಪಾಲರು ಬಣ್ಣಬಣ್ಣದ ಧ್ವಜಪತಾಕೆಗಳಿರುವ ಆನೆ, ರಥ, ಕುದುರೆಗಳಲ್ಲಿ ಕುಳಿತು ಅಲಂಕೃತರಾಗಿದ್ದ ಸೈನಿಕರೊಡನೆ ಹೊರಟರು. ಯಾದವ, ಸೃಂಜಯ, ಕಾಂಬೋಜ, ಕುರು, ಕೇಕಯ, ಕೋಸಲೇಶ್ವರರು ಯಜಮಾನನಾದ ಧರ್ಮರಾಜನನ್ನು ಮುಂದುಮಾಡಿಕೊಂಡು ತಮ್ಮ ತಮ್ಮ ಸೇನೆಗಳಿಂದ ನೆಲವನ್ನು ಅದುರಿಸುತ್ತ ಪ್ರಯಾಣಮಾಡಿದರು (೧೧-೧೨). ಸದಸ್ಯರೂ ಋತ್ವಿಜರೇ ಮೊದಲಾದ ದ್ವಿಜೋತ್ತಮರೂ ವೇದಘೋಷವನ್ನು ಮಾಡುತ್ತಿದ್ದರು. ದೇವರ್ಷಿ ಪಿತೃಗಂಧರ್ವರು ಹೂಗಳನ್ನು ಚೆಲ್ಲುತ್ತ ಸ್ತುತಿಗೈದರು. ಗಂಡಸರು ಹೆಂಗಸರೆಲ್ಲರೂ

ಸ್ವಲಂಕೃತಾ ನರಾ ನಾರ್ಯೋ ಗಂಧಸ್ರಗ್ಭೂಷಣಾಂಬರೈಃ।
ವಿಲಿಂಪಂತ್ಯೋಽಭಿಷಿಂಚಂತ್ಯೋ ವಿಜಹ್ರುರ್ವಿವಿಧೈ ರಸೈಃ॥ ೧೪

ತೈಲಗೋರಸಗಂಧೋದಹರಿದ್ರಾಸಾಂದ್ರಕುಂಕುಮೈಃ।
ಪುಂಭಿರ್ಲಿಪ್ತಾಃ ಪ್ರಲಿಂಪಂತ್ಯೋ ವಿಜಹ್ರುರ್ವಾರಯೋಷಿತಃ॥ ೧೫

ಗುಪ್ತಾ ನೃಭಿರ್ನಿರಗಮನ್ನುಪಲಬ್ಧುಮೇತದ್
ದೇವ್ಯೋ ಯಥಾ ದಿವಿ ವಿಮಾನವರೈರ್ನೃದೇವ್ಯಃ।
ತಾ ಮಾತುಲೇಯಸಖಿಭಿಃ ಪರಿಷಿಚ್ಯಮಾನಾಃ
ಸವ್ರೀಡಹಾಸವಿಕಸದ್ವದನಾ ವಿರೇಜುಃ॥ ೧೬

ತಾ ದೇವರಾನುತ ಸಖೀನ್ ಸಿಷಿಚುರ್ದೃತೀಭಿಃ
ಕ್ಲಿನ್ನಾಂಬರಾ ವಿವೃತಗಾತ್ರಕುಚೋರುಮಧ್ಯಾಃ।
ಔತ್ಸುಕ್ಯಮುಕ್ತಕಬರಾಚ್ಚ್ಯವಮಾನಮಾಲ್ಯಾಃ
ಕ್ಷೋಭಂ ದಧುರ್ಮಲಧಿಯಾಂ ರುಚಿರೈರ್ವಿಹಾರೈಃ॥ ೧೭

ಗಂಧಮಾಲ್ಯಗಳಿಂದಲೂ ವಸ್ತ್ರಭೂಷಣಗಳಿಂದಲೂ ಭೂಷಿತರಾಗಿದ್ದರು. ಅವರು ನಾನಾಬಗೆಯ ಗಂಧರಸಗಳನ್ನು ಒಬ್ಬರಿಗೊಬ್ಬರು ಹಚ್ಚುತ್ತ ಎರಚುತ್ತ ವಿನೋದಿಸುತ್ತಿದ್ದರು (೧೩-೧೪). ಅಲ್ಲಿ ವೇಶ್ಯಾಸ್ತ್ರೀಯರು ಎಣ್ಣೆ ಹಾಲು ಗಂಧೋದಕಗಳನ್ನೂ ಅರಿಸಿಣ ಸೇರಿದ ಕುಂಕುಮರಸಗಳನ್ನೂ ಗಂಡಸರ ಮೇಲೆ ಚೆಲ್ಲುತ್ತ ಅವರಿಂದ ಚೆಲ್ಲಿಸಿಕೊಳ್ಳುತ್ತ ವಿಹರಿಸಿದರು (೧೫). ಆಗ ಅವಭೃಥಮಹೋತ್ಸವವನ್ನು ನೋಡುವುದಕ್ಕಾಗಿ ದೇವತಾಸ್ತ್ರೀಯರು ವಿಮಾನಗಳಲ್ಲಿ ಕುಳಿತು ಆಕಾಶಮಾರ್ಗದಲ್ಲಿ ಹೊರಟರು. ಅಂತೆಯೇ ರಾಜಸ್ತ್ರೀಯರು ಪಲ್ಲಕ್ಕಿ-ಮೊದಲಾದ ವಾಹನಗಳಲ್ಲಿ ಕುಳಿತು ಭಟರಿಂದ ರಕ್ಷಿತರಾಗಿ ಹೊರಟರು. ಸೋದರಮಾವನ ಮಕ್ಕಳು ಮತ್ತು ಗೆಳತಿಯರು ಅವರಿಗೆ ಓಕಳಿಯನ್ನು ಎರಚಲಾಗಿ, ನಾಚಿಕೆ ನಸುನಗೆಗಳಿಂದ ಆ ಸ್ತ್ರೀಯರ ಮುಖಗಳು ಚೆಲುವಾದವು (೧೬). ಸ್ನಾನಸಮಯದಲ್ಲಿ ಆ ಸ್ತ್ರೀಯರು ತಮ್ಮ ಭಾವಮೈದುನರಿಗೂ ಸ್ನೇಹಿತರಿಗೂ ಜೀರ್ಕೊಳವೆಯಿಂದ ನೀರನ್ನೆರಚುತ್ತಿದ್ದರು. ಬಟ್ಟೆ ಒದ್ದೆಯಾದ್ದರಿಂದ ಆ ತರುಣಿಯರ ದೇಹ, ಸ್ತನ, ತೊಡೆ, ನಡುಗಳ

ಸ ಸಮ್ರಾಡ್ ರಥಮಾರೂಢಃ ಸದಶ್ವಂ ರುಕ್ಮಮಾಲಿನಮ್ ।
ವ್ಯರೋಚತ ಸ್ವಪತ್ನೀಭಿಃ ಕ್ರಿಯಾಭಿಃ ಕ್ರತುರಾಡಿವ ॥ ೧೮

ಪತ್ನೀಸಂಯಾಜಾವಭೃಥ್ಯೈಶ್ಚರಿತ್ವಾತೇ ತಮೃತ್ವಿಜಃ ।
ಆಚಾಂತಂ ಸ್ನಾಪಯಾಂಚಕ್ರುರ್ಗಂಗಾಯಾಂ ಸಹ ಕೃಷ್ಣಯಾ ॥ ೧೯

ದೇವದುಂದುಭಯೋ ನೇದುರ್ನರದುಂದುಭಿಭಿಃ ಸಮಮ್ ।
ಮುಮುಚುಃ ಪುಷ್ಪವರ್ಷಾಣಿ ದೇವರ್ಷಿಪಿತೃಮಾನವಾಃ ॥ ೨೦

ಸಸ್ನುಸ್ತತ್ರ ತತಃ ಸರ್ವೇ ವರ್ಣಾಶ್ರಮಯುತಾ ನರಾಃ ।
ಮಹಾಪಾತಕ್ಯಪಿ ಯತಃ ಸದ್ಯೋ ಮುಚ್ಯೇತ ಕಿಲ್ಬಿಷಾತ್ ॥ ೨೧

ಅಥ ರಾಜಾऽಹತೇ ಕ್ಷೌಮೇ ಪರಿಧಾಯ ಸ್ವಲಂಕೃತಃ ।
ಋತ್ವಿಕ್ಸದಸ್ಯವಿಪ್ರಾದೀನಾನರ್ಚಾಭರಣಾಂಬರೈಃ ॥ ೨೨

ಕಾಣಿಸುತ್ತಿದ್ದವು. ಅವರ ಸಡಗರದಲ್ಲಿ ಮುಡಿಗಳಿಂದ ಹೂಗಳು ಉದುರುತ್ತಿದ್ದವು. ಆ ಸ್ತ್ರೀಯರು ತಮ್ಮ ಲಲಿತಕ್ರೀಡೆಗಳಿಂದ ಕಲ್ಮಷಚಿತ್ತರಾದ ಕಾಮುಕರಿಗೆ ಕ್ಷೋಭೆಯನ್ನುಂಟುಮಾಡಿದರು (೧೭). ಸುವರ್ಣಭೂಷಿತವೂ ಉತ್ತಮಾಶ್ವಗಳನ್ನು ಹೂಡಿದುದೂ ಆದ ರಥದಲ್ಲಿ ಕುಳಿತಿದ್ದ ಸಮ್ರಾಜನಾದ ಯುಧಿಷ್ಠಿರನು ತನ್ನ ಪತ್ನಿಯರಿಂದ ಸಹಿತನಾಗಿ, ಯಜ್ಞಾಂಗ ಕ್ರಿಯೆಗಳಿಂದ ಸಹಿತನಾದ ರಾಜಸೂಯವೇ ಮೂರ್ತೀಭವಿಸಿತೋ ಎಂಬಂತೆ ಕಂಗೊಳಿಸಿದನು (೧೮). ಆಮೇಲೆ ಋತ್ವಿಜರು ಪತ್ನೀಸಂಯಾಜವೆಂಬ ಹೋಮವಿಶೇಷವನ್ನೂ ಅವಭೃಥಕ್ಕೆ ಸಂಬಂಧಿಸಿದ ಇತರ ಕ್ರಿಯೆಗಳನ್ನೂ ಮಾಡಿಸಿದರು. ಅನಂತರ ಧರ್ಮರಾಜನು ಶುದ್ಧಾಚಮನವನ್ನು ಮಾಡಲಾಗಿ ಅವನಿಗೆ ದ್ರೌಪದಿಯೊಡನೆ ಗಂಗಾನದಿಯಲ್ಲಿ ಸ್ನಾನಮಾಡಿಸಿದರು (೧೯). ಮನುಷ್ಯರು ಹೊಡೆಯುತ್ತಿದ್ದ ನಗಾರಿಗಳಿಗೆ ಸಮವಾಗಿ ದೇವದುಂದುಭಿಗಳು ಮೊಳಗಿದವು. ದೇವರ್ಷಿಪಿತೃಮಾನವರು ಹೂಮಳೆಗರೆದರು. ಅನಂತರ ವರ್ಣಾಶ್ರಮ ಧರ್ಮನಿರತರಾದ ಸಮಸ್ತ ಜನರೂ ಗಂಗಾನದಿಯ ಅವಭೃಥೋದಕದಲ್ಲಿ ಸ್ನಾನಮಾಡಿದರು. ಮಹಾಪಾತಕಿಯೂ ಸಹ ಅಂತಹ ಸ್ನಾನಮಾಡಿದರೆ ಒಡನೆಯೇ ಸಕಲಪಾಪಗಳಿಂದ ಬಿಡುಗಡೆಹೊಂದುವನು (೨೦-೨೧).

ಬಂಧುಜ್ಞಾತಿನೃಪಾನ್ ಮಿತ್ರಸುಹೃದೋಽನ್ಯಾಂಶ್ಚ ಸರ್ವಶಃ।
ಅಭೀಕ್ಷ್ಣಂ ಪೂಜಯಾಮಾಸ ನಾರಾಯಣಪರೋ ನೃಪಃ॥ ೨೩

ಸರ್ವೇ ಜನಾಃ ಸುರರುಚೋ ಮಣಿಕುಂಡಲಸ್ರ-
ಗುಷ್ಣೀಷಕಂಚುಕದುಕೂಲಮಹಾರ್ಘ್ಯಹಾರಾಃ।
ನಾರ್ಯಶ್ಚ ಕುಂಡಲಯುಗಾಲಕವೃಂದಜುಷ್ಟ-
ವಕ್ತ್ರಶ್ರಿಯಃ ಕನಕಮೇಖಲಯಾ ವಿರೇಜುಃ॥ ೨೪

ಅಥರ್ತ್ವಿಜೋ ಮಹಾಶೀಲಾಃ ಸದಸ್ಯಾ ಬ್ರಹ್ಮವಾದಿನಃ।
ಬ್ರಹ್ಮಕ್ಷತ್ರಿಯವಿಟ್‌ಶೂದ್ರಾ ರಾಜಾನೋ ಯೇ ಸಮಾಗತಾಃ॥ ೨೫

ದೇವರ್ಷಿಪಿತೃಭೂತಾನಿ ಲೋಕಪಾಲಾಃ ಸಹಾನುಗಾಃ।
ಪೂಜಿತಾಸ್ತಮನುಜ್ಞಾಪ್ಯ ಸ್ವಧಾಮಾನಿ ಯಯುರ್ನೃಪ॥ ೨೬

ಹರಿದಾಸಸ್ಯ ರಾಜರ್ಷೇ ರಾಜಸೂಯಮಹೋದಯಮ್।
ನೈವಾತೃಪ್ಯನ್ ಪ್ರಶಂಸಂತಃ ಪಿಬನ್ ಮರ್ತ್ಯೋಽಮೃತಂ ಯಥಾ॥ ೨೭

ತರುವಾಯ ಯುಧಿಷ್ಠಿರನು ನೂತನ ವಸ್ತ್ರಗಳನ್ನುಟ್ಟು ಸರ್ವಾಭರಣ ಭೂಷಿತನಾಗಿ ನಾರಾಯಣಸ್ಮರಣೆಮಾಡುತ್ತ ಋತ್ವಿಜರು, ಸದಸ್ಯರಾದ ವಿಪ್ರಾದಿಗಳು, ಬಂಧುಗಳು, ಜ್ಞಾತಿಗಳು, ರಾಜರು, ಮಿತ್ರರು, ಆಪ್ತರು, ಮತ್ತಿತರ ಸೇವಕ ವರ್ಗದವರು- ಇವರಿಗೆಲ್ಲ ವಸ್ತ್ರಾಭರಣಗಳನ್ನಿತ್ತು ವಿಶೇಷವಾಗಿ ಸತ್ಕರಿಸಿದನು (೨೨-೨೩). ಅಲ್ಲಿ ಸೇರಿದ್ದ ಸರ್ವಪುರುಷರೂ ಮಣಿಕುಂಡಲ, ಹೂಮಾಲೆ, ಮುಂಡಾಸ, ಕವಚ, ದುಕೂಲ ಮತ್ತು ಬಹುಮೂಲ್ಯದ ಮುಕ್ತಾಹಾರಗಳನ್ನು ಧರಿಸಿದರು. ಸ್ತ್ರೀಯರು ವಿಶೇಷವಾಗಿ ಕುಂಡಲಗಳನ್ನೂ ಚಿನ್ನದ ಡಾಭನ್ನೂ ಧರಿಸಿ ಮುಂಗುರುಳಿನ ಮುಖಶೋಭೆಯಿಂದ ವಿರಾಜಿಸಿದರು. ಎಲ್ಲ ಸ್ತ್ರೀಪುರುಷರೂ ದೇವತೆಗಳಂತೆ ಕಂಗೊಳಿಸಿದರು (೨೪). ಪರೀಕ್ಷಿತರಾಜ, ತರುವಾಯ ಶೀಲವಂತರಾದ ಋತ್ವಿಜರೂ, ವೇದಪಾಠಕರಾದ ಸದಸ್ಯರೂ, ಬ್ರಾಹ್ಮಣ ಕ್ಷತ್ರಿಯ ವೈಶ್ಯಶೂದ್ರರೂ, ರಾಜರೂ, ದೇವರ್ಷಿ ಪಿತೃಭೂತಗಣಗಳೂ ಪರಿವಾರ ಸಹಿತರಾದ ಲೋಕಪಾಲರೂ ಧರ್ಮರಾಜನಿಂದ ಪೂಜಿತರಾಗಿ ಬೀಳ್ಕೊಂಡು ತಮ್ಮತಮ್ಮ ಸ್ಥಳಗಳಿಗೆ ತೆರಳಿದರು (೨೫-೨೬). ಹರಿದಾಸನೂ ರಾಜರ್ಷಿಯೂ

ತತೋ ಯುಧಿಷ್ಠಿರೋ ರಾಜಾ ಸುಹೃತ್ಸಂಬಂಧಿಬಾಂಧವಾನ್ ।
ಪ್ರೇಮ್ಣಾ ನಿವಾಸಯಾಮಾಸ ಕೃಷ್ಣಂ ಚ ತ್ಯಾಗಕಾತರಃ ॥ ೨೮

ಭಗವಾನಪಿ ತತ್ರಾಂಗ ನ್ಯವಾತ್ಸೀತ್ತತ್ಪ್ರಿಯಂಕರಃ ।
ಪ್ರಸ್ಥಾಪ್ಯ ಯದುವೀರಾಂಶ್ಚ ಸಾಂಬಾದೀಂಶ್ಚ ಕುಶಸ್ಥಲೀಮ್ ॥ ೨೯

ಇತ್ಥಂ ರಾಜಾ ಧರ್ಮಸುತೋ ಮನೋರಥಮಹಾರ್ಣವಮ್ ।
ಸುದುಸ್ತರಂ ಸಮುತ್ತೀರ್ಯ ಕೃಷ್ಣೇನಾಸೀದ್ ಗತಜ್ವರಃ ॥ ೩೦

ಏಕದಾಂತಃಪುರೇ ತಸ್ಯ ವೀಕ್ಷ್ಯ ದುರ್ಯೋಧನಃ ಶ್ರಿಯಮ್ ।
ಅತಪ್ಯದ್ ರಾಜಸೂಯಸ್ಯ ಮಹಿತ್ವಂ ಚಾಚ್ಯುತಾತ್ಮನಃ ॥ ೩೧

ಯಸ್ಮಿನ್ ನರೇಂದ್ರದಿತಿಜೇಂದ್ರ ಸುರೇಂದ್ರ ಲಕ್ಷ್ಮೀ-
ರ್ನಾನಾ ವಿಭಾಂತಿ ಕಿಲ ವಿಶ್ವಸೃಜೋಪಕ್ಲೃಪ್ತಾಃ ।
ತಾಭಿಃ ಪತೀನ್ ದ್ರುಪದರಾಜಸುತೋಪತಸ್ಥೇ
ಯಸ್ಯಾಂ ವಿಷಕ್ತಹೃದಯಃ ಕುರುರಾಡತಪ್ಯತ್ ॥ ೩೨

ಆದ ಯುಧಿಷ್ಠಿರನ ರಾಜಸೂಯ ಯಾಗದ ಮಹಾ ವೈಭವವನ್ನು ಎಷ್ಟೆಷ್ಟು ಕೊಂಡಾಡಿದರು ಅವರಿಗೆ ತೃಪ್ತಿಯಾಗಲಿಲ್ಲ. ಮಾನವನಿಗೆ ಅಮೃತವು ಲಭಿಸಿದಂತೆ ಅವರಿಗೆ ಆನಂದವಾಗಿತ್ತು(೨೭). ಆಮೇಲೆ ಯುಧಿಷ್ಠಿರನು ತನ್ನ ಮಿತ್ರರನ್ನೂ ನೆಂಟರನ್ನೂ ಜ್ಞಾತಿಗಳನ್ನೂ ಮತ್ತು ಶ್ರೀಕೃಷ್ಣನನ್ನೂ ಅಗಲಿರಲಾರದೆ ಪ್ರೇಮದಿಂದ ಇಂದ್ರಪ್ರಸ್ಥದಲ್ಲಿ ಉಳಿಸಿಕೊಂಡನು (೨೮). ಶ್ರೀಕೃಷ್ಣನಾದರೋ ಯದುವೀರರಾದ ಸಾಂಬಾದಿಗಳನ್ನು ದ್ವಾರಕೆಗೆ ಕಳಿಸಿ, ಧರ್ಮರಾಜನಿಗೆ ಪ್ರಿಯವಾಗಲೆಂದು ತಾನು ಇಂದ್ರಪ್ರಸ್ಥದಲ್ಲಿ ಇದ್ದನು. ಹೀಗೆ ಧರ್ಮಪುತ್ರನಾದ ಯುಧಿಷ್ಠಿರನು ತನ್ನ ಮನೋರಥವೆಂಬ ದುಸ್ತರವಾದ ಮಹಾಸಾಗರವನ್ನು ಶ್ರೀಕೃಷ್ಣನ ನೆರವಿನಿಂದ ದಾಟಿ ನಿಶ್ಚಿಂತನಾದನು (೨೯-೩೦). ಹೀಗಿರಲು ಒಂದುದಿನ ದುರ್ಯೋಧನನು ಅಚ್ಯುತಭಕ್ತನಾದ ಧರ್ಮರಾಜನ ಅಂತಃಪುರದಲ್ಲಿ ಪೇರಿಸಿದ್ದ ಐಶ್ವರ್ಯವನ್ನು ಕಂಡು, ರಾಜಸೂಯಯಾಗದ ವೈಭವವನ್ನು ನೆನೆದು ಸಂಕಟಪಟ್ಟನು(೩೧). ಆ ಅಂತಃಪುರದಲ್ಲಿ ನರೇಂದ್ರ ದೈತ್ಯೇಂದ್ರ ಸುರೇಂದ್ರರ

ಯಸ್ಮಿಂಸ್ತದಾ ಮಧುಪತೇರ್ಮಹಿಷೀಸಹಸ್ರಂ
ಶ್ರೋಣೀಭರೇಣ ಶನಕೈಃ ಕ್ವಣದಂಘ್ರಿಶೋಭಮ್ ।
ಮಧ್ಯೇ ಸುಚಾರು ಕುಚಕುಂಕುಮಶೋಣಹಾರಂ
ಶ್ರೀಮನ್ಮುಖಂ ಪ್ರಚಲಕುಂಡಲಕುಂತಲಾಢ್ಯಮ್ ॥ ೩೩

ಸಭಾಯಾಂ ಮಯಕ್ಲೃಪ್ತಾಯಾಂ ಕ್ವಾಪಿ ಧರ್ಮಸುತೋಽಧಿರಾಟ್ ।
ವೃತೋಽನುಜೈರ್ಬಂಧುಭಿಶ್ಚ ಕೃಷ್ಣೇನಾಪಿ ಸ್ವಚಕ್ಷುಷಾ ॥ ೩೪

ಆಸೀನಃ ಕಾಂಚನೇ ಸಾಕ್ಷಾದಾಸನೇ ಮಘವಾನಿವ ।
ಪಾರಮೇಷ್ಠ್ಯಶ್ರಿಯಾ ಜುಷ್ಟಃ ಸ್ತೂಯಮಾನಶ್ಚ ವಂದಿಭಿಃ ॥ ೩೫

ಸಂಪತ್ತು ತುಂಬಿತ್ತು. ಮಯನು ನಿರ್ಮಿಸಿದ ನಾನಾ ಪ್ರಕಾರದ ಸಾಮಗ್ರಿಗಳು ವಿರಾಜಿಸುತ್ತಿದ್ದವು. ದ್ರೌಪದಿಯು ಆ ಭೋಗಸಾಮಗ್ರಿಗಳಿಂದ ತನ್ನ ಪತಿಗಳನ್ನು ಉಪಚರಿಸುತ್ತಿದ್ದಳು. ಅವಳಲ್ಲಿ ಕುರುರಾಜನಾದ ದುರ್ಯೋಧನನಿಗೆ ವೈಮನಸ್ಯವಿತ್ತು. ಈ ಕಾರಣಗಳಿಂದ ಅವನು ಸಂತಾಪಗೊಂಡಿದ್ದನು[೧] (೩೨). ಅಲ್ಲದೆ ಆ ಮಯನಿರ್ಮಿತ ಸಭೆಯಲ್ಲಿ ಯದುಪತಿಯಾದ ವಾಸುದೇವನ ಸಾವಿರಾರು ಮಡದಿಯರು ಶ್ರೋಣೀ ಭಾರದಿಂದ ಬಳುಕುತ್ತ ಕಾಲ್ಕಡಗಗಳನ್ನು ಜಣಗುಟ್ಟಿಸುತ್ತ ಮೆಲ್ಲಗೆ ತಿರುಗಾಡುತ್ತಿದ್ದರು. ಕುಚಕುಂಕುಮಗಳಿಂದ ಕೆಂಪಾದ ಹಾರಗಳನ್ನು ಧರಿಸಿ, ಚಲಿಸುವ ಕುಂಡಲಗಳಿಂದಲೂ ಹಾರಾಡುವ ಮುಂಗುರುಳಿಂದಲೂ ಮನೋಹರವಾದ ಮುಖವುಳ್ಳವರಾಗಿ ಕಂಗೊಳಿಸುತ್ತಿದ್ದರು (೩೩). ಮಯನಿರ್ಮಿತವಾದ ಆ ಸಭಾಮಂದಿರದ ಒಂದು ಪಾರ್ಶ್ವದಲ್ಲಿ ಸಮ್ರಾಜನಾದ ಯುಧಿಷ್ಠಿರನು ತಮ್ಮಂದಿರಿಂದಲೂ ಬಂಧು

---

೧. ಈ ಶ್ಲೋಕದ ಅರ್ಥದಲ್ಲಿ ತೊಡಕಿದೆ. 'ವಿಭಾಂತಿ' ಎಂಬ ಕ್ರಿಯಾಪದದೊಡನೆ 'ಲಕ್ಷ್ಮೀಃ' ಎಂಬ ಏಕವಚನ ಕೂಡುವುದಿಲ್ಲ. ಆದ್ದರಿಂದ ಅದನ್ನು ಆರ್ಷ ಬಹುವಚನವಾಗಿ ವ್ಯಾಖ್ಯಾನಕಾರರು ಸ್ವೀಕರಿಸಿದ್ದಾರೆ. ನಮ್ಮ ಅನುವಾದದಲ್ಲಿ ಬೇರೆ ವಾಕ್ಯವನ್ನಾಗಿ ಮಾಡಿ ಏಕವಚನವನ್ನೇ ಯೋಜಿಸಲಾಗಿದೆ. ವಿಶ್ವಸೃಟ್ ಎಂದರೆ ವಿಶ್ವಕರ್ಮನೆಂಬ ಅರ್ಥ ಸ್ವರಸ. ಆದರೆ ಮಯ ಎಂದು ಅರ್ಥಮಾಡಬೇಕು. ಅಲ್ಲದೆ 'ಯಸ್ಯಾಂ ವಿಷಕ್ತ ಹೃದಯಃ' ಎಂಬಲ್ಲಿ ಯಸ್ಯಾಂ ಎಂಬ ಸರ್ವನಾಮದಿಂದ ದ್ರೌಪದಿಯನ್ನು ಗ್ರಹಿಸಬೇಕೆ, ಲಕ್ಷ್ಮಿಯನ್ನೆ? ಮತ್ತು ವಿಷಕ್ತಹೃದಯ ಎಂದರೆ ಆಸಕ್ತಚಿತ್ತನೆಂದು ಅರ್ಥವೆ? ಅಥವಾ ಮತ್ಸರಗ್ರಸ್ತಚಿತ್ತನೆಂದೆ?

ತತ್ರ ದುರ್ಯೋಧನೋ ಮಾನೀ ಪರೀತೋ ಭ್ರಾತೃಭಿರ್ನೃಪ ।
ಕಿರೀಟಮಾಲೀ ನ್ಯವಿಶದಸಿಹಸ್ತಃ ಕ್ಷಿಪನ್ ರುಷಾ ॥ ೩೬

ಸ್ಥಲೇಽಭ್ಯಗೃಹ್ಣಾದ್ ವಸ್ತ್ರಾಂತಂ ಜಲಂ ಮತ್ವಾ ಸ್ಥಲೇಽಪತತ್ ।
ಜಲೇ ಚ ಸ್ಥಲವದ್ ಭ್ರಾಂತ್ಯಾ ಮಯಮಾಯಾವಿಮೋಹಿತಃ ॥ ೩೭

ಜಹಾಸ ಭೀಮಸ್ತಂ ದೃಷ್ಟ್ವಾ ಸ್ತ್ರಿಯೋ ನೃಪತಯೋಽಪರೇ ।
ನಿವಾರ್ಯಮಾಣಾ ಅಪ್ಯಂಗ ರಾಜ್ಞಾ ಕೃಷ್ಣಾನುಮೋದಿತಾಃ ॥ ೩೮

ಸ ವ್ರೀಡಿತೋಽವಾಗ್ವದನೋ ರುಷಾ ಜ್ವಲನ್
ನಿಷ್ಕ್ರಮ್ಯ ತೂಷ್ಣೀಂ ಪ್ರಯಯೌ ಗಜಾಹ್ವಯಮ್ ।
ಹಾಹೇತಿ ಶಬ್ದಃ ಸುಮಹಾನಭೂತ್ ಸತಾ-
ಮಜಾತಶತ್ರುರ್ವಿಮನಾ ಇವಾಭವತ್ ।
ಬಭೂವ ತೂಷ್ಣೀಂ ಭಗವಾನ್ ಭುವೋ ಭರಂ
ಸಮುಜ್ಜಿಹೀರ್ಷುರ್ಭ್ರಮತಿ ಸ್ಮ ಯದ್ದೃಶಾ ॥ ೩೯

ಗಳಿಂದಲೂ ತನ್ನ ಕಣ್ಣೆನಿಸಿದ ಶ್ರೀಕೃಷ್ಣನಿಂದಲೂ ಪರಿವೃತನಾಗಿ, ಸಾಕ್ಷಾತ್ ದೇವೇಂದ್ರನೋ ಎಂಬಂತೆ, ಕಾಂಚನಮಯ ಸಿಂಹಾಸನದಲ್ಲಿ ಮಂಡಿಸಿದ್ದನು. ಆತನಲ್ಲಿ ಚಕ್ರವರ್ತಿಯ ವೈಭವ ಒಪ್ಪುತ್ತಿತ್ತು. ಬಂದಿಗಳು ಸ್ತುತಿಸುತ್ತಿದ್ದರು (೩೪-೩೫). ಪರೀಕ್ಷಿತರಾಜ, ಆ ಸಮಯದಲ್ಲಿ ಅಹಂಕಾರಿಯಾದ ದುರ್ಯೋಧನನು ಕಿರೀಟವನ್ನು ಧರಿಸಿ, ತನ್ನ ಸೋದರರಿಂದ ಪರಿವೃತನಾಗಿ, ಕೈಯಲ್ಲಿ ಖಡ್ಗವನ್ನು ಹಿಡಿದು, ಕೋಪದಿಂದ ಜನರನ್ನು ಗದರಿಸುತ್ತ ಸಭೆಯನ್ನು ಪ್ರವೇಶಿಸಿದನು (೩೬). ಅವನು ಮಯನ ಮಾಯೆಯಿಂದ ಮೋಹಿತನಾಗಿ ನೆಲವನ್ನು ಕಂಡು ನೀರೆಂದು ಉಟ್ಟ ಬಟ್ಟೆಯನ್ನು ಮೇಲಕ್ಕೆ ಸರಿಸಿಕೊಂಡನು! ನೀರೆಂದು ತಿಳಿದು ನೆಲದಲ್ಲಿ ಮುಗ್ಗರಿಸಿದನು ! ನೆಲವೆಂಬ ಭ್ರಾಂತಿಯಿಂದ ಜಲದಲ್ಲಿ ಜಾರಿಬಿದ್ದನು ! (೩೭). ಈ ಪರಿಸ್ಥಿತಿಯಲ್ಲಿದ್ದ ದುರ್ಯೋಧನನನ್ನು ನೋಡಿ ಭೀಮನು ನಕ್ಕನು. ಧರ್ಮರಾಜನು ಬೇಡ ಬೇಡವೆಂದು ತಡೆದರೂ ಅಲ್ಲಿದ್ದ ಸ್ತ್ರೀಯರೂ ಮತ್ತಿತರ ರಾಜರೂ ನಗುತ್ತಿದ್ದರು. ಶ್ರೀಕೃಷ್ಣನು ಮಾತ್ರ ನಗುವುದಕ್ಕೆ ಸಂಮತಿಯನ್ನು ಸೂಚಿಸಿದನು! (೩೮). ಆಗ ದುರ್ಯೋಧನನು ನಾಚಿಕೆಯಿಂದ

ಏತತ್ತೇಽಭಿಹಿತಂ ರಾಜನ್ ಯತ್ ಪೃಷ್ಟೋಽಹಮಿಹ ತ್ವಯಾ ।
ಸುಯೋಧನಸ್ಯ ದೌರಾತ್ಮ್ಯಂ ರಾಜಸೂಯೇ ಮಹಾಕ್ರತೌ ॥ ४೦

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ
ಪಂಚಸಪ್ತತಿತಮಾಧ್ಯಾಯಃ

ಷಟ್ಸಪ್ತತಿತಮಾಧ್ಯಾಯಃ

ಶ್ರೀಶುಕ ಉವಾಚ-

ಅಥಾನ್ಯದಪಿ ಕೃಷ್ಣಸ್ಯ ಶೃಣು ಕರ್ಮಾದ್ಭುತಂ ನೃಪ ।
ಕ್ರೀಡಾನರಶರೀರಸ್ಯ ಯಥಾ ಸೌಭಪತಿರ್ಹತಃ ॥ ೧

ತಲೆತಗ್ಗಿಸಿ ಸಿಟ್ಟಿನಿಂದ ಬುಸುಗುಟ್ಟುತ್ತ ಒಡನೆಯೇ ಸುಮ್ಮನೆ ಸಭಾಮಂದಿರದಿಂದ ಹೊರಟು ನೆಟ್ಟಗೆ ಹಸ್ತಿನಾವತಿಗೆ ಹೋಗಿಬಿಟ್ಟನು! 'ಹಾಹಾ' ಎಂಬ ಕಳವಳಶಬ್ದವು ದೊಡ್ಡದಾಯಿತು. ಅಜಾತಶತ್ರುವಾದ ಧರ್ಮರಾಜನು ವಿಷಣ್ಣನಾದನು. ಯಾವಾತನ ಇಚ್ಛಾಮಾತ್ರದಿಂದ ದುರ್ಯೋಧನನಿಗೆ ಭ್ರಾಂತಿಯುಂಟಾಯಿತೋ ಆ ಭಗವಂತನು (ಈ ಕಲಹ ಬೀಜದಿಂದಲೇ) ಭೂಭಾರವನ್ನು ಹೋಗಲಾಡಿಸಬೇಕೆಂದು ಸಂಕಲ್ಪಿಸಿ ಸುಮ್ಮನಿದ್ದನು(೩೯). ಪರೀಕ್ಷಿತರಾಜ, ನೀನು ನನ್ನನ್ನು ಕೇಳಿದ ಪ್ರಕಾರ, ರಾಜಸೂಯ ಯಾಗದಲ್ಲಿ ದುರ್ಯೋಧನನಿಗೆ ಅಸೂಯೆ ಏಕೆ ಹುಟ್ಟಿತೆಂಬುದಕ್ಕೆ ಉತ್ತರವಾಗಿ ಇದನ್ನು ಹೇಳಿದ್ದೇನೆ (४೦).

ಇಲ್ಲಿಗೆ ಶ್ರೀಮದ್ ಭಾಗವತದ ದಶಮಸ್ಕಂಧದಲ್ಲಿ ಎಪ್ಪತ್ತೈದನೆಯ ಅಧ್ಯಾಯ

ಅಧ್ಯಾಯ ೭೬

ಸಾಲ್ವನು ದ್ವಾರಕೆಯನ್ನು ಮುತ್ತುವುದು. ಪ್ರದ್ಯುಮ್ನನು ಯುದ್ಧದಲ್ಲಿ ಮೂರ್ಛೆಹೋಗುವುದು.

ಶುಕಮುನಿಗಳು ಹೇಳಿದರು : ರಾಜ, ಶ್ರೀಕೃಷ್ಣನ ಇನ್ನೊಂದು ಅದ್ಭುತ ಕಾರ್ಯವನ್ನು ಹೇಳುತ್ತೇನೆ. ಲೀಲಾಮಾನುಷ ವಿಗ್ರಹನಾದ ಆತನು ಸೌಭೇಶ್ವರನಾದ ಸಾಲ್ವನನ್ನು ಸಂಹರಿಸಿದ ವೃತ್ತಾಂತವನ್ನು ಕೇಳು (೧).

ಶಿಶುಪಾಲಸಖಃ ಶಾಲ್ವೋ ರುಕ್ಮಿಣ್ಯುದ್ವಾಹ ಆಗತಃ ।
ಯದುಭಿರ್ನಿರ್ಜಿತಃ ಸಂಖ್ಯೇ ಜರಾಸಂಧಾದಯಸ್ತಥಾ ॥ ೨

ಶಾಲ್ವಃ ಪ್ರತಿಜ್ಞಾಮಕರೋತ್ ಶೃಣ್ವತಾಂ ಸರ್ವಭೂಭುಜಾಮ್ ।
ಅಯಾದವೀಂ ಕ್ಷ್ಮಾಂ ಕರಿಷ್ಯೇ ಪೌರುಷಂ ಮಮ ಪಶ್ಯತ ॥ ೩

ಇತಿ ಮೂಢಃ ಪ್ರತಿಜ್ಞಾಯ ದೇವಂ ಪಶುಪತಿಂ ಪ್ರಭುಮ್ ।
ಆರಾಧಯಾಮಾಸ ನೃಪ ಪಾಂಸುಮುಷ್ಟಿಂ ಸಕೃದ್ ಗ್ರಸನ್ ॥ ೪

ಸಂವತ್ಸರಾಂತೇ ಭಗವಾನಾಶುತೋಷ ಉಮಾಪತಿಃ ।
ವರೇಣ ಚ್ಛಂದಯಾಮಾಸ ಶಾಲ್ವಂ ಶರಣಮಾಗತಮ್ ॥ ೫

ದೇವಾಸುರಮನುಷ್ಯಾಣಾಂ ಗಾಂಧರ್ವೋರಗರಕ್ಷಸಾಮ್ ।
ಅಭೇದ್ಯಂ ಕಾಮಗಂ ವವ್ರೇ ಸ ಯಾನಂ ವೃಷ್ಣಿಭೀಷಣಮ್ ॥ ೬

ರುಕ್ಮಿಣಿಯ ವಿವಾಹ ಪ್ರಸಂಗದಲ್ಲಿ ಶಿಶುಪಾಲನ ಮಿತ್ರನಾದ ಸಾಲ್ವನು ಬಂದಿದ್ದನು. ಆತನೂ ಜರಾಸಂಧಾದಿಗಳೂ ಆಗ ನಡೆದ ಯುದ್ಧದಲ್ಲಿ ಯಾದವರಿಗೆ ಸೋತು ಹೋದರಷ್ಟೆ (೨). ಆಮೇಲೆ ಸಾಲ್ವನು (ಸೋತುಹೋದ) ರಾಜರೆದುರಿಗೆ ''ಈ ಜಗತ್ತಿನಲ್ಲಿ ಯಾದವರೇ ಇಲ್ಲದಂತೆ ಮಾಡುವೆನು. ನನ್ನ ಪರಾಕ್ರಮವನ್ನು ನೋಡಿರಿ!'' ಎಂದು ಪ್ರತಿಜ್ಞೆ ಮಾಡಿದನು. ಹೀಗೆ ಪ್ರತಿಜ್ಞೆ ಮಾಡಿ ಆ ಮೂಢನು ಪಶುಪತಿಯೂ ಪ್ರಭುವೂ ಆದ ಮಹಾದೇವನನ್ನು ಕುರಿತು ತಪಸ್ಸನ್ನಾಚರಿಸಿದನು. ದಿನಕ್ಕೆ ಒಂದು ಸಲ ಒಂದು ಮುಷ್ಟಿ ಧೂಳನ್ನು ತಿನ್ನುತ್ತ ಶಿವನನ್ನು ಆರಾಧಿಸಿದನು (೩-೪). ಆಶುತೋಷನಾದ-ಎಂದರೆ ಬೇಗನೆ ಭಕ್ತರಿಗೆ ಒಲಿಯತಕ್ಕವನಾದರೂ ಭಗವಾನ್ ಉಮೇಶ್ವರನು ಒಂದು ವರುಷದ ಮೇಲೆ ಭಕ್ತನಾದ ಸಾಲ್ವನಿಗೆ ಪ್ರಸನ್ನನಾಗಿ ವರವನ್ನು ಕೇಳಿಕೊಳ್ಳುವಂತೆ ಹೇಳಿದನು (೫). ಸಾಲ್ವನು ದೇವಾಸುರಮನುಷ್ಯರಿಗೂ ಗಂಧರ್ವೋರಗ ರಾಕ್ಷಸರಿಗೂ ಅಭೇದ್ಯವೂ ಯಾದವರಿಗೆ ಭಯಂಕರವೂ ಕಾಮಚಾರಿಯೂ ಆದ ವಿಮಾನವು ಬೇಕೆಂದು ಬೇಡಿಕೊಂಡನು. ಆಗಬಹುದೆಂದು ಶಿವನು ಅಂತಹ ವಿಮಾನವನ್ನು ನಿರ್ಮಿಸಿಕೊಡುವಂತೆ ಪರಪುರಂಜಯನಾದ ಮಯನೆಂಬ ಶಿಲ್ಪಿಗೆ ಆಜ್ಞಾಪಿಸಿದನು.

ತಥೇತಿ ಗಿರಿಶಾದಿಷ್ಟೋ ಮಯಃ ಪರಪುರಂಜಯಃ ।
ಪುರಂ ನಿರ್ಮಾಯ ಶಾಲ್ವಾಯ ಪ್ರಾದಾತ್ಸೌಭಮಯಸ್ಮಯಮ್ ॥ ೭

ಸ ಲಬ್ಧ್ವಾ ಕಾಮಗಂ ಯಾನಂ ತಮೋಧಾಮ ದುರಾಸದಮ್ ।
ಯಯೌ ದ್ವಾರವತೀಂ ಶಾಲ್ವೋ ವೈರಂ ವೃಷ್ಣಿಕೃತಂ ಸ್ಮರನ್ ॥ ೮

ನಿರುಧ್ಯ ಸೇನಯಾ ಶಾಲ್ವೋ ಮಹತ್ಯಾ ಭರತರ್ಷಭ ।
ಪುರೀಂ ಬಭಂಜೋಪವನಾನ್ಯುದ್ಯಾನಾನಿ ಚ ಸರ್ವಶಃ ॥ ೯

ಸಗೋಪುರಾಣಿ ದ್ವಾರಾಣಿ ಪ್ರಾಸಾದಾಟ್ಟಾಲತೋಲಿಕಾಃ ।
ವಿಹಾರಾನ್ ಸ ವಿಮಾನಾಗ್ರ್ಯಾನ್ನಿಪೇತುಃ ಶಸ್ತ್ರವೃಷ್ಟಯಃ ॥ ೧೦

ಅಂತೆಯೇ ಮಯನು ಲೋಹಮಯವಾದ ಸೌಭ ಎಂಬ ವಿಮಾನವನ್ನು ರಚಿಸಿ ಸಾಲ್ವನಿಗೆ ಕೊಟ್ಟನು (೬-೭). ಕಾಮಚಾರಿಯೂ ತಮೋಧಾಮವೂ[೧] ಅಭೇದ್ಯವೂ ಆದ ಆ ವಿಮಾನವನ್ನು ಪಡೆದು, ಯಾದವರಿಂದಾದ ವೈರಕೃತ್ಯವನ್ನು ನೆನೆಸಿಕೊಳ್ಳುತ್ತ ಸಾಲ್ವನು ದ್ವಾರಾವತಿಯ ಕಡೆಗೆ ಸಾಗಿದನು. ಪರೀಕ್ಷಿತರಾಜ, ಸಾಲ್ವನು ದೊಡ್ಡ ಸೇನೆಯೊಡನೆ ನಗರವನ್ನು ಮುತ್ತಿ ಉಪವನಗಳನ್ನೂ ಉದ್ಯಾನಗಳನ್ನೂ[೨] ಧ್ವಂಸಮಾಡಿದನು (೮-೯). ನಗರದ್ವಾರಗಳನ್ನೂ ಮನೆಯ ಬಾಗಿಲುಗಳನ್ನೂ ಭವ್ಯ ಗೃಹಗಳನ್ನೂ ಉಪ್ಪರಿಗೆಗಳನ್ನೂ ತೊಲೆಗಳನ್ನೂ[೩] ವಿಹಾರಸ್ಥಾನಗಳನ್ನೂ ನಾಶಮಾಡಿದನು. ಸೌಭವಿಮಾನದಿಂದ ಶಸ್ತ್ರದ ಮಳೆಗಳು

---

೧. ತಮೋಧಾಮ ಎಂಬ ಪದಕ್ಕೆ 'ಅಂಧಕಾರದಿಂದ ತುಂಬಿದ' ಎಂದು ವ್ಯಾಖ್ಯಾನಕಾರರು ಅರ್ಥಮಾಡಿದ್ದಾರೆ. ತಮಸ್ ಎಂದರೆ ಮಾಯೆಯೆಂದು ಅರ್ಥವುಂಟು. ಆದ್ದರಿಂದ 'ಮಾಯಮಯವಾದ' ಎಂಬ ಅರ್ಥ ಉತ್ತಮವೆನಿಸುತ್ತದೆ. (ಇದೇ ಅಧ್ಯಾಯದ ೨೨ನೆಯ ಶ್ಲೋಕವನ್ನು ನೋಡಿ)

೨. ಉಪವನ=ಗಿಡಮರಗಳನ್ನು ಬೆಳೆಸಿರುವ ಚಿಕ್ಕವನ. ಉದ್ಯಾನ=ರಾಜವಿಹಾರ ಯೋಗ್ಯವಾದ ದೊಡ್ಡ ಕೃತ್ರಿಮವನ.

೩. ತೋಲಿಕಾಃ=ಪರ್ಯಂತಕುಡ್ಯಾನಿ ಎಂದು ಶ್ರೀಧರೀಯದಲ್ಲಿದೆ. ಭಾರವನ್ನು ಹೊರುವ ಅಂಚಿನ ಗೋಡೆಗಳು ಎಂದು ತಾತ್ಪರ್ಯವಾಗುತ್ತದೆ. ತೋಲಕ ಎಂದರೆ ಕಂಭಗಳ ಮೇಲೆ ಹಾಸಿದ 'ತೊಲೆ' ಎಂಬ ಅರ್ಥ ಕೋಶದಲ್ಲಿದೆ.

ಶಿಲಾ ದ್ರುಮಾಶ್ಚಾಶನಯಃ ಸರ್ಪಾ ಆಸಾರಶರ್ಕರಾಃ ।
ಪ್ರಚಂಡಶ್ಚಕ್ರವಾತೋಽಭೂದ್ ರಜಸಾಽಽಚ್ಛಾದಿತಾ ದಿಶಃ ॥ ೧೧

ಇತ್ಯರ್ದ್ಯಮಾನಾ ಸೌಭೇನ ಕೃಷ್ಣಸ್ಯ ನಗರೀ ಭೃಶಮ್ ।
ನಾಭ್ಯಪದ್ಯತ ಶಂ ರಾಜಂಸ್ತ್ರಿಪುರೇಣ ಯಥಾ ಮಹೀ ॥ ೧೨

ಪ್ರದ್ಯುಮ್ನೋ ಭಗವಾನ್ ವೀಕ್ಷ್ಯ ಬಾಧ್ಯಮಾನಾ ನಿಜಾಃ ಪ್ರಜಾಃ ।
ಮಾ ಭೈಷ್ಟೇತ್ಯಭ್ಯಧಾದ್ ವೀರೋ ರಥಾರೂಢೋ ಮಹಾಯಶಾಃ ॥ ೧೩

ಸಾತ್ಯಕಿಶ್ಚಾರುದೇಷ್ಣಶ್ಚ ಸಾಂಬೋಽಕ್ರೂರಃ ಸಹಾನುಜಃ ।
ಹಾರ್ದಿಕ್ಯೋ ಭಾನುವಿಂದಶ್ಚ ಗದಶ್ಚ ಶುಕಸಾರಣೌ ॥ ೧೪

ಅಪರೇ ಚ ಮಹೇಷ್ವಾಸಾ ರಥಯೂಥಪಯೂಥಪಾಃ ।
ನಿರ್ಯಯುರ್ದಂಶಿತಾ ಗುಪ್ತಾ ರಥೇಭಾಶ್ವಪದಾತಿಭಿಃ ॥ ೧೫

ತತಃ ಪ್ರವವೃತೇ ಯುದ್ಧಂ ಶಾಲ್ವಾನಾಂ ಯದುಭಿಃ ಸಹ ।
ಯಥಾಸುರಾಣಾಂ ವಿಬುಧೈಸ್ತುಮುಲಂ ಲೋಮಹರ್ಷಣಮ್ ॥ ೧೬

ಸುರಿದವು (೧೦). ಶಿಲೆಗಳೂ ಮರಗಳೂ ಅಶನಿಗಳೆಂಬ ಆಯುಧಗಳೂ ಸರ್ಪಗಳೂ ಮರಳುರಾಶಿಗಳೂ ವಿಮಾನದಿಂದ ಸತತವಾಗಿ ಬಿದ್ದವು. ಘೋರವಾದ ಸುಂಟರಗಾಳಿ ಎದ್ದಿತು. ದಿಕ್ಕುಗಳು ಧೂಳಿಂದ ತುಂಬಿ ಹೋದವು (೧೧). ಈ ಪ್ರಕಾರವಾಗಿ ಸಾಲ್ವನ ಸೌಭದಿಂದ ಆಕ್ರಾಂತವಾದ ಶ್ರೀಕೃಷ್ಣನ ನಗರವು, ತ್ರಿಪುರಾಸುರನಿಂದ ಪೀಡಿತವಾದ ಭೂಮಿಯಂತೆ ಸುಖವನ್ನು ಕಾಣದೆ ಕಷ್ಟಕ್ಕೆ ಸಿಕ್ಕಿತು (೧೨). ಹೀಗೆ ತನ್ನ ಪ್ರಜೆಗಳು ಪೀಡೆಗೆ ಸಿಕ್ಕಿದುದನ್ನು ಕಂಡು ಭಗವಾನ್ ಪ್ರದ್ಯುಮ್ನನು 'ಹೆದರಬೇಡಿರಿ' ಎಂದು ಅಭಯವನ್ನಿತ್ತನಲ್ಲದೆ, ಕೀರ್ತಿಶಾಲಿಯಾದ ಆ ವೀರನು ರಥವನ್ನೇರಿದನು. ಮತ್ತು ಸಾತ್ಯಕಿ, ಚಾರುದೇಷ್ಣ ಸಾಂಬ, ಅಕ್ರೂರ, ಅವನ ತಮ್ಮ, ಹಾರ್ದಿಕ್ಯ, ಭಾನುವಿಂದ, ಗದ, ಶುಕ, ಸಾರಣ-ಮುಂತಾದ ಮಹಾರಥರು ಕವಚಗಳನ್ನು ಬಿಗಿದು ಧನುರ್ಧಾರಿಗಳಾಗಿ ರಥಾದಿ ಚತುರಂಗಗಳಿಂದ ರಕ್ಷಿತರಾಗಿ ಯುದ್ಧಕ್ಕೆ ಹೊರಟರು (೧೩-೧೫). ಅನಂತರ ದೇವಾಸುರರಿಗೆ ನಡೆದಂತೆ, ಸಾಲ್ವದೇಶೀಯರಿಗೂ ಯಾದವರಿಗೂ

ತಾಶ್ಚ ಸೌಭಪತೇರ್ಮಾಯಾ ದಿವ್ಯಾಸ್ತ್ರೈ ರುಕ್ಮಿಣೀಸುತಃ ।
ಕ್ಷಣೇನ ನಾಶಯಾಮಾಸ ನೈಶಂ ತಮ ಇವೋಷ್ಣಗುಃ ॥ ೧೭

ವಿವ್ಯಾಧ ಪಂಚವಿಂಶತ್ಯಾ ಸ್ವರ್ಣಪುಂಖೈರಯೋಮುಖೈಃ ।
ಶಾಲ್ವಸ್ಯ ಧ್ವಜಿನೀಪಾಲಂ ಶರೈಃ ಸಂನತಪರ್ವಭಿಃ ॥ ೧೮

ಶತೇನಾತಾಡಯಚ್ಛಾಲ್ವಮೇಕೈಕೇನಾಸ್ಯ ಸೈನಿಕಾನ್ ।
ದಶಾಭಿರ್ದಶಭಿರ್ನೇತೄನ್ ವಾಹನಾನಿ ತ್ರಿಭಿಸ್ತ್ರಿಭಿಃ ॥ ೧೯

ತದದ್ಭುತಂ ಮಹತ್ ಕರ್ಮ ಪ್ರದ್ಯುಮ್ನಸ್ಯ ಮಹಾತ್ಮನಃ ।
ದೃಷ್ಟ್ವಾ ತಂ ಪೂಜಯಾಮಾಸುಃ ಸರ್ವೇ ಸ್ವಪರಸೈನಿಕಾಃ ॥ ೨೦

ಬಹುರೂಪೈಕರೂಪಂ ತದ್ ದೃಶ್ಯತೇ ನ ಚ ದೃಶ್ಯತೇ ।
ಮಾಯಾಮಯಂ ಮಯಕೃತಂ ದುರ್ವಿಭಾವ್ಯಂ ಪರೈರಭೂತ್ ॥ ೨೧

ಕ್ವಚಿದ್ ಭೂಮೌ ಕ್ವಚಿದ್ ವ್ಯೋಮ್ನಿ ಗಿರಿಮೂರ್ಧ್ನಿ ಜಲೇ ಕ್ವಚಿತ್ ।
ಅಲಾತಚಕ್ರವದ್ ಭ್ರಾಮ್ಯತ್ ಸೌಭಂ ತದ್ ದುರವಸ್ಥಿತಮ್ ॥ ೨೨

ರೋಮಾಂಚಕರವಾದ ತುಮುಲ ಸಂಗ್ರಾಮ ನಡೆಯಿತು. ಸೌಭಪತಿಯಾದ ಸಾಲ್ವನ ಆ ಮಾಯೆಗಳೆಲ್ಲವನ್ನು ರುಕ್ಮಿಣೀಸುತನಾದ ಪ್ರದ್ಯುಮ್ನನು, ರಾತ್ರಿಯ ಕತ್ತಲೆಯನ್ನುಸೂರ್ಯನು ನಾಶಮಾಡುವಂತೆ, ದಿವ್ಯಾಸ್ತ್ರಗಳಿಂದ ಒಂದು ಕ್ಷಣದಲ್ಲಿ ನಾಶಮಾಡಿದನು (೧೬-೧೭). ಸುವರ್ಣಪುಂಖಗಳಿಂದಲೂ ಉಕ್ಕಿನ ಅಲಗುಗಳಿಂದಲೂ ಕೂಡಿದ ಇಪ್ಪತ್ತೈದು ಕೊಂಕುಬಾಣಗಳಿಂದ ಸಾಲ್ವನ ಸೇನಾಪತಿಯನ್ನೂ ನೂರು ಬಾಣಗಳಿಂದ ಸಾಲ್ವನನ್ನೂ ಒಂದೊಂದರಿಂದ ಪ್ರತಿಯೊಬ್ಬ ಸೈನಿಕನನ್ನೂ ಹತ್ತು ಹತ್ತರಿಂದ ಸೇನಾನಾಯಕರನ್ನು ಮೂರು ಮೂರರಿಂದ ಅವರ ವಾಹನಗಳನ್ನೂ ಬಾರಿಸಿದನು (೧೮-೧೯). ವೀರನಾದ ಪ್ರದ್ಯುಮ್ನನ ವಿಸ್ಮಯ ಜನಕವಾದ ಸಾಹಸ ಕಾರ್ಯವನ್ನು ಕಂಡು ಉಭಯಪಕ್ಷದ ಸೈನಿಕರೂ ಅವನನ್ನು ಕೊಂಡಾಡಿದರು. ಆಗ ಮಯನಿರ್ಮಿತವೂ ಮಾಯಾ ಮಯವೂ ಆದ ಸೌಭವಿಮಾನವು ಒಮ್ಮೆ ಬಹುರೂಪವಾಗಿ ಒಮ್ಮೆ ಏಕರೂಪವಾಗಿ, ಒಂದು ಸಲ ಕಾಣುತ್ತ ಒಂದು ಸಲ ಕಾಣದೆ ಮಾಯವಾಗುತ್ತ ಶತ್ರುಗಳ ಊಹೆಗೆ ನಿಲುಕದಂತಾಯಿತು (೨೦-೨೧) ಆ ವಿಮಾನವು ಒಮ್ಮೆ

ಯತ್ರ ಯತ್ರೋಪಲಕ್ಷ್ಯೇತ ಸಸೌಭಃ ಸಹಸೈನಿಕಃ ।
ಶಾಲ್ವಸ್ತತಸ್ತತೋಽಮುಂಚನ್ ಶರಾನ್ ಸಾತ್ವತಯೂಥಪಾಃ ॥ ೨೩

ಶರೈರಗ್ನ್ಯರ್ಕಸಂಸ್ಪರ್ಶೈರಾಶೀವಿಷದುರಾಸದೈಃ ।
ಪೀಡ್ಯಮಾನಪುರಾನೀಕಃ ಶಾಲ್ವೋಽಮುಹ್ಯತ್ ಪರೇರಿತೈಃ ॥ ೨೪

ಶಾಲ್ವಾನೀಕಪಶಸ್ತ್ರೌಘೈರ್ವೃಷ್ಣಿವೀರಾ ಭೃಶಾರ್ದಿತಾಃ ।
ನ ತತ್ಯಜೂ ರಣಂ ಸ್ವಂ ಸ್ವಂ ಲೋಕದ್ವಯಜಿಗೀಷವಃ ॥ ೨೫

ಶಾಲ್ವಾಮಾತ್ಯೋದ್ಯುಮಾನ್ ನಾಮ ಪ್ರದ್ಯುಮ್ನಂ ಪ್ರಾಕ್ಪ್ರಪೀಡಿತಃ ।
ಆಸಾದ್ಯ ಗದಯಾ ಮೌರ್ವ್ಯಾ ವ್ಯಾಹತ್ಯ ವ್ಯನದದ್ ಬಲೀ ॥ ೨೬

ಪ್ರದ್ಯುಮ್ನಂ ಗದಯಾ ಶೀರ್ಣವಕ್ಷಃಸ್ಥಲಮರಿಂದಮಮ್ ।
ಅಪೋವಾಹ ರಣಾತ್ ಸೂತೋ ಧರ್ಮವಿದ್ ದಾರುಕಾತ್ಮಜಃ ॥ ೨೭

ನೆಲದಲ್ಲಿ ಮತ್ತೊಮ್ಮೆ ಗಗನದಲ್ಲಿ ಇನ್ನೊಮ್ಮೆ ಜಲದಲ್ಲಿ ಕಾಣಿಸಿಕೊಳ್ಳುತ್ತ ಅಲಾತಚಕ್ರದಂತೆ ತಿರುಗುತ್ತ ಒಂದೆಡೆ ನಿಲ್ಲದೆ ಸುಳಿದಾಡುತ್ತಿತ್ತು (೨೨). ಇಂತಹ ಸೌಭವಿಮಾನದಲ್ಲಿ ಸೈನಿಕರೊಡನೆ ಹಾರಾಡುತ್ತಿದ್ದ ಸಾಲ್ವನು ಎಲ್ಲೆಲ್ಲಿ ಕಾಣಿಸಿಕೊಳ್ಳುತ್ತಿದ್ದನೋ ಅಲ್ಲಲ್ಲಿಗೆ ಯದುನಾಯಕರು ಶರಗಳನ್ನು ಸುರಿಯುತ್ತಿದ್ದರು ಸೂರ್ಯಾಗ್ನಿಗಳಂತೆ ಉಜ್ವಲವಾಗಿಯೂ ಸರ್ಪವಿಷದಂತೆ ಕ್ರೂರವಾಗಿಯೂ ಇದ್ದ ಆ ಶತ್ರುಶರಗಳಿಂದ ಸೌಭಸೇನೆಯು ಪೀಡಿತವಾಗಲು ಸಾಲ್ವನು ದಿಕ್ಕುಗಾಣದೆ ಸಂಭ್ರಾಂತನಾದನು (೨೩-೨೪). ಸಾಲ್ವ ಸೇನಾಧಿಪತಿಗಳ ಶಸ್ತ್ರ ರಾಶಿಗಳಿಂದ ವೃಷ್ಣಿವೀರರೂ ತುಂಬ ಗಾಯಗೊಂಡು ಪೀಡಿತರಾದರು, ಆದರೂ ಇಹಲೋಕವನ್ನೋ ಪರಲೋಕವನ್ನೋ ಜಯಿಸುತ್ತೇವೆಂಬ ಆಸೆಯಿಂದ ಅವರು ತಮ್ಮ ಹೋರಾಟವನ್ನು ಬಿಡಲಿಲ್ಲ (೨೫). ಸಾಲ್ವನ ಅಮಾತ್ಯನಾದ ದ್ಯುಮಂತ ಎಂಬುವನು ಪ್ರದ್ಯುಮ್ನನಿಂದ ಮೊದಲು ಪೆಟ್ಟು ತಿಂದಿದ್ದನು. ಬಲಿಷ್ಠನಾದ ಆತನು ನುಗ್ಗಿಬಂದು ಉಕ್ಕಿನ ಗದೆಯಿಂದ ಪ್ರದ್ಯುಮ್ನನ ಎದೆಗೆ ಬಡಿದು ಸಿಂಹನಾದ ಮಾಡಿದನು. ಆ ಹೊಡೆತದಿಂದ ಎದೆ ಬಿರಿಯಲು ಮೂರ್ಛಿತನಾದ ಪ್ರದ್ಯುಮ್ನನನ್ನು, ರಣಧರ್ಮಜ್ಞನೂ ದಾರುಕನ ಮಗನೂ ಆದ ಸಾರಥಿಯು

ಲಬ್ಧಸಂಜ್ಞೋ ಮುಹೂರ್ತೇನ ಕಾರ್ಷ್ಣಿಃ ಸಾರಥಿಮಬ್ರವೀತ್ ।
ಅಹೋ ಅಸಾಧ್ವಿದಂ ಸೂತ ಯದ್ ರಣನ್ಮೇಽಪಸರ್ಪಣಮ್ ॥ ೨೮

ನ ಯದೂನಾಂ ಕುಲೇ ಜಾತಃ ಶ್ರೂಯತೇ ರಣವಿಚ್ಯುತಃ ।
ವಿನಾ ಮತ್ ಕ್ಲೀಬಚಿತ್ತೇನ ಸೂತೇನ ಪ್ರಾಪ್ತಕಿಲ್ಬಿಷಾತ್ ॥ ೨೯

ಕಿಂ ನು ವಕ್ಷ್ಯೇಽಭಿಸಂಗಮ್ಯ ಪಿತರೌ ರಾಮಕೇಶವೌ ।
ಯುದ್ಧಾತ್ ಸಮ್ಯಗಪಕ್ರಾಂತಃ ಪೃಷ್ಟಸ್ತತ್ರಾತ್ಮನಃ ಕ್ಷಮಮ್ ॥ ೩೦

ವ್ಯಕ್ತಂ ಮೇ ಕಥಯಿಷ್ಯಂತಿ ಹಸಂತ್ಯೋ ಭ್ರಾತೃಜಾಮಯಃ ।
ಕ್ಲೈಬ್ಯಂ ಕಥಂ ಕಥಂ ವೀರ ತವಾನ್ಯೈಃ ಕಥ್ಯತಾಂ ಮೃಧೇ ॥ ೩೧

ಸಾರಥಿರುವಾಚ-

ಧರ್ಮಂ ವಿಜಾನತಾಽಽಯುಷ್ಮನ್ ಕೃತಮೇತನ್ಮಯಾ ವಿಭೋ ।
ಸೂತಃ ಕೃಚ್ಛ್ರಗತಂ ರಕ್ಷೇದ್ ರಥಿನಂ ಸಾರಥಿಂ ರಥೀ ॥ ೩೨

ಯುದ್ಧರಂಗದಿಂದ ಬೇರೆಡೆಗೆ ಒಯ್ದನು (೨೬-೨೭). ಸ್ವಲ್ಪ ಹೊತ್ತಿನಲ್ಲಿ ಎಚ್ಚರಗೊಂಡ ಪ್ರದ್ಯುಮ್ನನು "ಅಯ್ಯೋ-ಸಾರಥಿ, ನನ್ನನ್ನು ರಣರಂಗದಿಂದ ಬೇರೆಡೆಗೆ ಕರೆತಂದದ್ದು ಸರಿಯಾಗಲಿಲ್ಲ. ಯದುಕುಲದಲ್ಲಿ ಹುಟ್ಟಿದ ಯಾವನೂ ರಣರಂಗದಿಂದ ಹಿಮ್ಮೆಟ್ಟಿದ್ದನ್ನು ಇದುವರೆಗೆ ಯಾರೂ ಕೇಳಿಲ್ಲ ! ಅಂಜುಬುರುಕನಾದ ಸಾರಥಿಯಿಂದ ಅಪಕೀರ್ತಿಗೊಳಗಾದ ನನ್ನನ್ನು ಬಿಟ್ಟು ಇನ್ನೊಬ್ಬನು ಓಡಿಬಂದಿಲ್ಲ! (೨೮-೨೯). ತಂದೆಗಳಾದ ಬಲರಾಮ ಕೇಶವರ ಬಳಿಗೆ ಹೋಗಿ ಏನು ಹೇಳಲಿ ? ಯುದ್ಧ ವೃತ್ತಾಂತವನ್ನು ಅವರು ಕೇಳಿದರೆ, ಚೆನ್ನಾಗಿ ನುಸುಳಿ ಬಂದಿರುವ ನಾನು ಯೋಗ್ಯವಾದ ಯಾವ ಉತ್ತರವನ್ನು ಹೇಳಬೇಕು ? ನನ್ನ ಸೋದರರ ಹೆಂಡತಿಯರು ನಗುತ್ತ ನನ್ನ ಹೇಡಿತನವನ್ನು ದಿಟವಾಗಿಯೂ ಹಂಗಿಸಿ ಆಡಿಕೊಳ್ಳುತ್ತಾರೆ. 'ವೀರಾಗ್ರಣಿ ! ಯುದ್ಧದಲ್ಲಿ ನಿನಗೂ ಶತ್ರುಗಳಿಗೂ ಹೋರಾಟವು ಹೇಗೆ ಹೇಗೆ ನಡೆಯಿತು ? ' ಎಂದು ಕೇಳುತ್ತಾರೆ " ಎಂದನು (೩೦-೩೧). ಆಗ ಸಾರಥಿಯು ಪ್ರದ್ಯುಮ್ನನನ್ನು ಕುರಿತು "ಸ್ವಾಮಿ- ಆಯುಷ್ಮಂತನೆ, ಯುದ್ಧಧರ್ಮವನ್ನರಿತು ನಾನು ಹೀಗೆ ಮಾಡಿದೆನು. ಕಷ್ಟದಲ್ಲಿರುವ ರಥಿಕನನ್ನು ಸಾರಥಿಯೂ ಸಾರಥಿಯನ್ನು ರಥಿಕನೂ

ಏತದ್ ವಿದಿತ್ವಾತು ಭವಾನ್ ಮಯಾಪೋವಾಹಿತೋ ರಣಾತ್ ।
ಉಪಸೃಷ್ಟಃ ಪರೇಣೇತಿ ಮೂರ್ಛಿತೋ ಗದಯಾ ಹತಃ ॥ ೩೩

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಷಟ್ ಸಪ್ತತಿತಮಾಧ್ಯಾಯಃ

ಸಪ್ತಸಪ್ತತಿತಮಾಧ್ಯಾಯಃ

ಶ್ರೀಶುಕ ಉವಾಚ-

ಸ ತೂಪಸ್ಪೃಶ್ಯ ಸಲಿಲಂ ದಂಶಿತೋ ಧೃತಕಾರ್ಮುಕಃ ।
ನಯ ಮಾಂ ದ್ಯುಮತಃ ಪಾರ್ಶ್ವಂ ವೀರಸ್ಯೇತ್ಯಾಹ ಸಾರಥಿಮ್ ॥ ೧

ವಿಧಮಂತಂ ಸ್ವಸೈನ್ಯಾನಿ ದ್ಯುಮಂತಂ ರುಕ್ಮಿಣೀಸುತಃ ।
ಪ್ರತಿಹತ್ಯ ಪ್ರತ್ಯವಿಧ್ಯನ್ನಾರಾಚೈರಷ್ಟಭಿಃ ಸ್ಮಯನ್ ॥ ೨

ಚತುರ್ಭಿಶ್ಚತುರೋ ವಾಹಾನ್ ಸೂತಮೇಕೇನ ಚಾಹನತ್ ।
ದ್ವಾಭ್ಯಾಂ ಧನುಶ್ಚ ಕೇತುಂ ಚ ಶರೇಣಾನ್ಯೇನ ವೈ ಶಿರಃ ॥ ೩

ರಕ್ಷಿಸಬೇಕೆಂಬುದು ಯುದ್ಧಧರ್ಮ. ನಾನು ಇದನ್ನರಿತು ನಿನ್ನನ್ನು ರಣಭೂಮಿಯಿಂದ ಈಚೆಗೆ ಕರೆತಂದನು. ಶತ್ರುವು ಆಕ್ರಮಣಮಾಡಿ ಗದೆಯಿಂದ ಹೊಡೆದಾಗ ನೀನು ಮೂರ್ಛಿತನಾದೆ'' ಎಂದು ನುಡಿದನು (೩೨-೩೩).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಪ್ಪತ್ತಾರನೆಯ ಅಧ್ಯಾಯ.

ಅಧ್ಯಾಯ ೭೭

ಇಂದ್ರಪ್ರಸ್ಥದಿಂದ ಶ್ರೀಕೃಷ್ಣನು ಬರುವುದು. ಸಾಲ್ವನ ಮಾಯಾಯುದ್ಧ
ಶ್ರೀಕೃಷ್ಣನಿಂದ ಸಾಲ್ವನ ವಧೆ.

ಅನಂತರ ಪ್ರದ್ಯುಮ್ನನು ನೀರಿಂದ ಮುಖತೊಳೆದು ಆಚಮನಮಾಡಿ ಕವಚವನ್ನು ತೊಟ್ಟ ಧನಸ್ಸನ್ನು ಹಿಡಿದು ''ಸಾರಥಿ, ವೀರನಾದ ದ್ಯುಮಂತನ ಬಳಿಗೆ ನನ್ನನ್ನು ಕರೆದೊಯ್ಯಬೇಕು'' ಎಂದನು (೧). ಅಲ್ಲಿ ಪ್ರದ್ಯುಮ್ನನು ತನ್ನ ಸೈನ್ಯಗಳನ್ನು ಧ್ವಂಸಮಾಡುತ್ತಿದ್ದ ದ್ಯುಮಂತನನ್ನು ಅಡ್ಡಗಟ್ಟಿ ನಗುತ್ತ ಎಂಟು ಬಾಣಗಳಿಂದ

ಗದಸಾತ್ಯಕಿಸಾಂಬಾದ್ಯಾ ಜಘ್ನುಃ ಸೌಭಪತೇರ್ಬಲಮ್ ।
ಪೇತುಃ ಸಮುದ್ರೇ ಸೌಭೇಯಾಃ ಸರ್ವೇ ಸಂಭಿನ್ನಕಂಧರಾಃ ॥ ೪

ಏವಂ ಯದೂನಾಂ ಶಾಲ್ವಾನಾಂ ನಿಘ್ನತಾಮಿತರೇತರಮ್ ।
ಯುದ್ಧಂ ತ್ರಿಣವರಾತ್ರಂ ತದಭೂತ್ತುಮುಲಮುಲ್ಬಣಮ್ ॥ ೫

ಇಂದ್ರಪ್ರಸ್ಥಂ ಗತಃ ಕೃಷ್ಣ ಆಹೂತೋ ಧರ್ಮಸೂನುನಾ ।
ರಾಜಸೂಯೇಽಥ ನಿರ್ವೃತ್ತೇ ಶಿಶುಪಾಲೇ ಚ ಸಂಸ್ಥಿತೇ ॥ ೬

ಕುರುವೃದ್ಧಾನನುಜ್ಞಾಪ್ಯ ಮುನೀಂಶ್ಚ ಸಸುತಾಂ ಪೃಥಾಮ್ ।
ನಿಮಿತ್ತಾನ್ಯತಿಘೋರಾಣಿ ಪಶ್ಯನ್ ದ್ವಾರವತೀಂ ಯಯೌ ॥ ೭

ಆಹ ಚಾಹಮಿಹಾಯಾತ ಆರ್ಯಮಿಶ್ರಾಭಿಸಂಗತಃ ।
ರಾಜನ್ಯಾಶ್ಚೈದ್ಯಪಕ್ಷೀಯಾ ನೂನಂ ಹನ್ಯುಃ ಪುರೀಂ ಮಮ ॥ ೮

ಅವನನ್ನು ಬಿಗಿದನು. ನಾಲ್ಕು ಶರಗಳಿಂದ ಆತನ ರಥದ ನಾಲ್ಕು ಕುದುರೆಗಳನ್ನು ವಧಿಸಿ, ಒಂದು ಬಾಣದಿಂದ ಸೂತನನ್ನು ಕೊಂದು, ಎರಡು ಸರಳುಗಳಿಂದ ಧನಸ್ಸನ್ನೂ ಧ್ವಜವನ್ನೂ ಕತ್ತರಿಸಿ, ಮತ್ತೊಂದು ನಾರಾಚದಿಂದ ದ್ಯುಮಂತನ ಶಿರವನ್ನು ತರಿದನು (೨-೩). ಅಷ್ಟರಲ್ಲಿ ಗದ, ಸಾತ್ಯಕಿ, ಸಾಂಬ- ಮೊದಲಾದವರು ಸೌಭೇಶ್ವರನ ಸೇನೆಯನ್ನಾಕ್ರಮಿಸಿ ಸೈನಿಕರ ತಲೆಗಳನ್ನು ಅರಿಯಲು, ಆ ಸೈನಿಕರು ಸಮುದ್ರದಲ್ಲಿ ಸತ್ತು ಬೀಳುತ್ತಿದ್ದರು. ಹೀಗೆ ಯಾದವರಿಗೂ ಸಾಲ್ವಯೋಧರಿಗೂ ಭೀಕರವಾದ ದ್ವಂದ್ವಯುದ್ಧವು ಇಪ್ಪತ್ತೊಂದು ದಿನಗಳವರೆಗೆ ನಡೆಯಿತು (೪-೫). ಇತ್ತಲಾಗಿ ಧರ್ಮರಾಜನ ಆಹ್ವಾನವನ್ನು ಮನ್ನಿಸಿ ಶ್ರೀಕೃಷ್ಣನು ಇಂದ್ರಪ್ರಸ್ಥಕ್ಕೆ ಹೋಗಿದ್ದನಷ್ಟೆ. ರಾಜಸೂಯವು ಮುಗಿಯಿತು. ಶಿಶುಪಾಲನು ಹತನಾದನು. ಆಮೇಲೆ ಕೆಲವು ಘೋರ ಶಕುನಗಳು ಕಂಡುಬರಲಾಗಿ, ಶ್ರೀಕೃಷ್ಣನು ಕುರುವಂಶದ ಹಿರಿಯರಾದ ಭೀಷ್ಮಾದಿಗಳನ್ನೂ ಮುನಿಗಳು, ಪಾಂಡವರು, ಕುಂತಿ ಇವರೆಲ್ಲರನ್ನೂ ಕಂಡು ಬೀಳ್ಕೊಂಡು ದ್ವಾರಾವತಿಗೆ ಧಾವಿಸಿದನು (೬-೭). ಅವನು ಮನಸ್ಸಿನಲ್ಲಿ ''ನಾನು ಇತ್ತ ಇಂದ್ರಪ್ರಸ್ಥದ ಕಡೆಗೆ ಬಂದೆನು. ಅಣ್ಣನಾದ ಬಲಭದ್ರನೂ ಬಂದು ನನ್ನೊಡನೆ ಇದ್ದಾನೆ. ಶಿಶುಪಾಲನ ಪಕ್ಷಕ್ಕೆ ಸೇರಿದ ರಾಜರು

ವೀಕ್ಷ್ಯ ತತ್ ಕದನಂ ಸ್ವಾನಾಂ ನಿರೂಪ್ಯ ಪುರರಕ್ಷಣಮ್ ।
ಸೌಭಂ ಚ ಶಾಲ್ವರಾಜಂ ಚ ದಾರುಕಂ ಪ್ರಾಹ ಕೇಶವಃ ॥ ೯

ರಥಂ ಪ್ರಾಪಯ ಮೇ ಸೂತ ಶಾಲ್ವಸ್ಯಾಂತಿಕಮಾಶು ವೈ ।
ಸಂಭ್ರಮಸ್ತೇ ನ ಕರ್ತವ್ಯೋ ಮಾಯಾವೀ ಸೌಭರಾಡಯಮ್ ॥ ೧೦

ಇತ್ಯುಕ್ತಶ್ಚೋದಯಾಮಾಸ ರಥಮಾಸ್ಥಾಯ ದಾರುಕಃ ।
ವಿಶಂತಂ ದದೃಶುಃ ಸರ್ವೇ ಸ್ವೇ ಪರೇ ಚಾರುಣಾನುಜಮ್ ॥ ೧೧

ಶಾಲ್ವಶ್ಚ ಕೃಷ್ಣಮಾಲೋಕ್ಯ ಹತಪ್ರಾಯಬಲೇಶ್ವರಃ ।
ಪ್ರಾಹರತ್ ಕೃಷ್ಣಸೂತಾಯ ಶಕ್ತಿಂ ಭೀಮರವಾಂ ಮೃಧೇ ॥ ೧೨

ತಾಮಾಪತಂತೀಂ ನಭಸಿ ಮಹೋಲ್ಕಾಮಿವ ರಂಹಸಾ ।
ಭಾಸಯಂತೀಂ ದಿಶಃ ಶೌರಿಃ ಸಾಯಕೈಃ ಶತಧಾಚ್ಛಿನತ್ ॥ ೧೩

ದಿಟವಾಗಿಯೂ ನನ್ನ ದ್ವಾರಕನಗರವನ್ನು ಬಾಧಿಸುತ್ತಾರೆ'' ಎಂದುಕೊಂಡನು (೮). ನಗರಕ್ಕೆ ಬಂದಾಗ ತನ್ನವರು ನಡೆಸುತ್ತಿದ್ದ ಹೋರಾಟವು ಕಾಣಿಸಿತು. ಸೌಭವಿಮಾನವನ್ನೂ ಸಾಲ್ವರಾಜನನ್ನೂ ವೀಕ್ಷಿಸಿದ ಕೇಶವನು ನಗರ ರಕ್ಷಣೆಯನ್ನು ಬಲಭದ್ರನಿಗೆ ವಹಿಸಿ, ದಾರುಕನನ್ನು ಕರೆದು ''ಸಾರಥಿ, ನನ್ನ ರಥವನ್ನು ಸಾಲ್ವನ ಬಳಿಗೆ ತ್ವರೆಯಿಂದ ಓಡಿಸು. ಈ ಸೌಭರಾಜನು ಮಾಯಾವಿ. ನೀನೇನೂ ಸಂಭ್ರಾಂತನಾಗಬೇಡ'' ಎಂದನು (೯-೧೦). ಹೀಗೆ ಹೇಳಿದೊಡನೆ ದಾರುಕನು ರಥವನ್ನೇರಿ ಅದನ್ನು ರಣರಂಗಕ್ಕೆ ದೌಡಾಯಿಸಿದನು. ರಥದಲ್ಲಿ ಗರುಡಧ್ವಜವು ಚಲಿಸುತ್ತನುಗ್ಗಿ ಬರುವುದನ್ನು ಉಭಯಪಕ್ಷದ ಸೈನಿಕರೂ ಕಂಡರು (೧೧). ಸಾಲ್ವನ ಸೇನೆಯಲ್ಲಿ ಬಹುಭಾಗ ಹತವಾಗಿತ್ತು. ಆವನು ರಣಮಧ್ಯದಲ್ಲಿ ಶ್ರೀಕೃಷ್ಣನನ್ನು ಕಂಡೊಡನೆ, ಭೀಕರ ಧ್ವನಿಗೈಯುವ ಶಕ್ತ್ಯಾಯುಧವನ್ನು ಸಾರಥಿಯಾದ ದಾರಕನ ಮೇಲೆ ಪ್ರಯೋಗಿಸಿದನು. ಗಗನ ಮಾರ್ಗದಲ್ಲಿ ದಶದಿಕ್ಕುಗಳನ್ನೂ ಬೆಳಗುತ್ತ ದೊಡ್ಡ ಉಲ್ಕೆಯಂತೆ ವೇಗದಿಂದ ಬರುತ್ತಿದ್ದ ಆ ಶಕ್ತಿಯನ್ನು, ಶ್ರೀಕೃಷ್ಣನು ಬಾಣಗಳನ್ನು ಹೊಡೆದು ನೂರು ಚೂರಾಗಿ

ತಂ ಚ ಷೋಡಶಭಿರ್ವಿದ್ಧ್ವಾ ಬಾಣೈಃ ಸೌಭಂ ಚ ಖೇ ಭ್ರಮತ್ ।
ಅವಿಧ್ಯಚ್ಛರಸಂದೋಹೈಃ ಖಂ ಸೂರ್ಯ ಇವ ರಶ್ಮಿಭಿಃ ॥ ೧೪

ಶಾಲ್ವಃ ಶೌರೇಸ್ತು ದೋಃ ಸವ್ಯಂ ಸಶಾರ್ಙ್ಗಂ ಶಾರ್ಙ್ಗಧನ್ವನಃ ।
ಬಿಭೇದ ನ್ಯಪತದ್ಧಸ್ತಾತ್ ಶಾರ್ಙ್ಗಮಾಸೀತ್ತದದ್ಭುತಮ್ ॥ ೧೫

ಹಾಹಾಕಾರೋ ಮಹಾನಾಸೀದ್ ಭೂತಾನಾಂ ತತ್ರ ಪಶ್ಯತಾಮ್ ।
ವಿನದ್ಯ ಸೌಭರಾಡುಚ್ಚೈರಿದಮಾಹ ಜನಾರ್ದನಮ್ ॥ ೧೬

ಯತ್ತ್ವಯಾ ಮೂಢ ನಃ ಸಖ್ಯುರ್ಭ್ರಾತುರ್ಭಾರ್ಯಾ ಹೃತೇಕ್ಷತಾಮ್ ।
ಪ್ರಮತ್ತಃ ಸ ಸಭಾಮಧ್ಯೇ ತ್ವಯಾ ವ್ಯಾಪಾದಿತಃ ಸಖಾ ॥ ೧೭

ತಂ ತ್ವಾದ್ಯ ನಿಶಿತೈರ್ಬಾಣೈರಪರಾಜಿತಮಾನಿನಮ್ ।
ನಯಾಮ್ಯಪುನರಾವೃತ್ತಿಂ ಯದಿ ತಿಷ್ಠೇರ್ಮಮಾಗ್ರತಃ ॥ ೧೮

ತುಂಡರಿಸಿದನು (೧೨-೧೩). ಅಲ್ಲದೆ ಆಕಾಶದಲ್ಲಿ ಹಾರಾಡುತ್ತಿದ್ದ ಸೌಭವಿಮಾನಕ್ಕೆ ಹದಿನಾರು ಶರಗಳನ್ನು ಬಿಗಿದು, ಸೂರ್ಯನು ತನ್ನ ಕಿರಣಗಳನ್ನು ಆಕಾಶದಲ್ಲಿ ತುಂಬುವಂತೆ, ಶರಸಂದೋಹಗಳನ್ನು ಎಲ್ಲೆಲ್ಲಿಯೂ ರಾಚಿದನು. ಆಗ ಶಾರ್ಙ್ಗಧನ್ವನಾದ ವಾಸುದೇವನ ಎಡಗೈಗೆ ಸಾಲ್ವನು ಅಸ್ತ್ರದಿಂದ ಜಡಿಯಲಾಗಿ, ಶಾರ್ಙ್ಗಧನಸ್ಸು ಆತನ ಕೈಯಿಂದ ಕೆಳಗೆ ಬಿದ್ದಿತು! ಅದೊಂದು ಅದ್ಭುತವೇ ಸರಿ! (೧೪-೧೫). ಅದನ್ನು ನೋಡುತ್ತಿದ್ದ ಸಕಲ ಜನರ ಬಾಯಿಂದ 'ಹಾಹಾ' ಎಂಬ ದೊಡ್ಡ ಕೋಲಾಹಲಧ್ವನಿ ಹೊರಟಿತು. ಸೌಭೇಶ್ವರನಾದ ಸಾಲ್ವನು ಸಿಂಹನಾದಗೈದು ಜನಾರ್ದನನನ್ನು ಕುರಿತು ಗಟ್ಟಿಯಾಗಿ ಕೂಗಿ ಹೇಳಿದನು: "ಎಲೈ ಮೂಢ, ನಮಗೆ ಸೋದರನಂತಿದ್ದ ಮಿತ್ರನಾದ ಶಿಶುಪಾಲನಿಗೆ ಗೊತ್ತಾದ ಮಡದಿಯನ್ನು ಎಲ್ಲರೆದುರಿಗೆ ಅಪಹರಿಸಿಕೊಂಡು ಹೋಗಿದ್ದೀಯೆ. ಅಷ್ಟೇ ಅಲ್ಲದೆ ಕೊಬ್ಬಿರುವ ನೀನು ಸಭಾಮಧ್ಯದಲ್ಲಿ ನಮ್ಮ ಆ ಸ್ನೇಹಿತನನ್ನು ಸಂಹರಿಸಿದ್ದೀಯೆ. ಯಾರಿಗೂ ನಾನು ಬಗ್ಗುವುದಿಲ್ಲವೆಂದು ತಿಳಿದು ಕೊಂಡಿದ್ದೀಯೆ. ಮತ್ತೊಮ್ಮೆ ಹೀಗೆ ಮಾಡದಂತೆ ನಿನ್ನನ್ನೀಗ ಯಮಪುರಿಗೆ ದಬ್ಬುವೆನು, (ಓಡಿ ಹೋಗದೆ) ನನ್ನೆದುರಿಗೆ ನಿಲ್ಲುವೆಯಾದರೆ!" ಎಂದು ಅಬ್ಬರಿಸಿದನು (೧೬-೧೮).

ಶ್ರೀ ಭಗವಾನುವಾಚ-
ವೃಥಾ ತ್ವಂ ಕತ್ಥಸೇ ಮಂದ ನ ಪಶ್ಯಸ್ಯಂತಿಕೇಽಂತಕಮ್ ।
ಪೌರುಷಂ ದರ್ಶಯಂತಿ ಸ್ಮ ಶೂರಾ ನ ಬಹುಭಾಷಿಣಃ ॥ ೧೯

ಇತ್ಯುಕ್ತ್ವಾ ಭಗವಾನ್ ಶಾಲ್ವಂ ಗದಯಾ ಭೀಮವೇಗಯಾ ।
ತತಾಡ ಜತ್ರೌ ಸಂರಬ್ಧಃ ಸ ಚಕಂಪೇ ವಮನ್ನಸೃಕ್ ॥ ೨೦

ಗದಾಯಾಂ ಸನ್ನಿವೃತ್ತಾಯಾಂ ಶಾಲ್ವಸ್ತ್ವಂತರಧೀಯತ ।
ತತೋ ಮುಹೂರ್ತ ಆಗತ್ಯ ಪುರುಷಃ ಶಿರಸಾಚ್ಯುತಮ್ ।
ದೇವಕ್ಯಾ ಪ್ರಹಿತೋಽಸ್ಮೀತಿ ನತ್ವಾ ಪ್ರಾಹ ವಚೋ ರುದನ್ ॥ ೨೧

ಕೃಷ್ಣ ಕೃಷ್ಣ ಮಹಾಬಾಹೋ ಪಿತಾ ತೇ ಪಿತೃವತ್ಸಲ ।
ಬದ್ಧ್ವಾಪನೀತಃ ಶಾಲ್ವೇನ ಸೌನಿಕೇನ ಯಥಾ ಪಶುಃ ॥ ೨೨

ನಿಶಮ್ಯ ವಿಪ್ರಿಯಂ ಕೃಷ್ಣೋ ಮಾನುಷೀಂ ಪ್ರಕೃತಿಂ ಗತಃ ।
ವಿಮನಸ್ಕೋ ಘೃಣೀ ಸ್ನೇಹಾದ್ ಬಭಾಷೇ ಪ್ರಾಕೃತೋ ಯಥಾ ॥ ೨೩

ಆಗ ಭಗವಂತನು ಹೇಳಿದನು : "ಎಲೋ ದಡ್ಡ! ವ್ಯರ್ಥವಾಗಿ ಬಡಿವಾರದ ಮಾತಾನ್ನಾಡುತ್ತಿದ್ದೀಯೆ. ಬಳಿಯಲ್ಲಿಯೇ ನಿಂತಿರುವ ಮೃತ್ಯುವನ್ನು ಕಾಣದೆ ಇದ್ದೀಯೆ ! ಶೂರರಾದವರು ಪೌರುಷವನ್ನು ಮೆರೆಸುತ್ತಾರೆಯೇ ಹೊರತು, ಬರಿದೆ ಒಣಮಾತುಗಳನ್ನು ಹರಟುವುದಿಲ್ಲ" ಎಂದು ನುಡಿದು ಭೀಕರವಾದ ಗದೆಯಿಂದ ಶತ್ರುವಿನ ಹೆಗಲಸಂದಿಗೆ ಬಡಿದನು. ಸಾಲ್ವನು ತಲೆತಿರುಗಿ ತತ್ತರಿಸಿ ನೆತ್ತರನ್ನು ಕಕ್ಕಿದನು (೧೯-೨೦). ಗದೆಯು ಹೆಗಲಿಂದ ಜಾರಿದೊಡನೆ ಸಾಲ್ವನು ಯಾರಿಗೂ ಕಾಣದಂತೆ ಮಾಯವಾದನು! ಸ್ವಲ್ಪಕಾಲದಮೇಲೆ ಒಬ್ಬ ಮನುಷ್ಯನು ಬಂದು ಅಚ್ಯುತನಿಗೆ ತಲೆಬಾಗಿ ನಮಸ್ಕರಿಸಿ "ಪ್ರಭು, ದೇವಕೀದೇವಿಯು ನನ್ನನ್ನು ಕಳಿಸಿದ್ದಾಳೆ. ಅವಳು 'ಕೃಷ್ಣ ಕೃಷ್ಣ ಮಹಾಬಾಹು, ಕಟುಕನು ಪಶುವನ್ನು ಕಟ್ಟಿ ಎಳೆದೊಯ್ಯುವಂತೆ, ಹೇ ಪಿತೃವಾತ್ಸಲ, ನಿನ್ನ ತಂದೆಯನ್ನು ಸಾಲ್ವನು ಎಳೆದುಕೊಂಡು ಹೋಗಿದ್ದಾನೆ' ಎಂದು ತಿಳಿಸಿದ್ದಾಳೆ" ಎಂಬುದಾಗಿ ಅಳುತ್ತ ಹೇಳಿದನು (೨೧-೨೨). ಆ ದುಃಖವಾರ್ತೆಯನ್ನು ಕೇಳಿ ಶ್ರೀಕೃಷ್ಣನು ಮಾನವ

ಕಥಂ ರಾಮಮಸಂಭ್ರಾಂತಂ ಜಿತ್ವಾಜೇಯಂ ಸುರಾಸುರೈಃ।
ಶಾಲ್ವೇನಾಲ್ಪೀಯಸಾ ನೀತಃ ಪಿತಾ ಮೇ ಬಲವಾನ್ ವಿಧಿಃ ॥ ೨೪

ಇತಿ ಬ್ರುವಾಣೇ ಗೋವಿಂದೇ ಸೌಭರಾಟ್ ಪ್ರತ್ಯುಪಸ್ಥಿತಃ।
ವಸುದೇವಮಿವಾನೀಯ ಕೃಷ್ಣಂ ಚೇದಮುವಾಚ ಸಃ ॥ ೨೫

ಏಷ ತೇ ಜನಿತಾ ತಾತೋ ಯದರ್ಥಮಿಹ ಜೀವಸಿ।
ವಧಿಷ್ಯೇ ವೀಕ್ಷತಸ್ತೇಽಮುಮೀಶಶ್ಚೇತ್ ಪಾಹಿ ಬಾಲಿಶ ॥ ೨೬

ಏವಂ ನಿರ್ಭರ್ತ್ಸ್ಯ ಮಾಯಾವೀ ಖಡ್ಗೇನಾನಕದುಂದುಭೇಃ।
ಉತ್ಕೃತ್ಯ ಶಿರ ಆದಾಯ ಖಸ್ಥಂ ಸೌಭಂ ಸಮಾವಿಶತ್ ॥ ೨೭

ತತೋ ಮುಹೂರ್ತಂ ಪ್ರಕೃತಾವುಪಪ್ಲುತಃ
ಸ್ವಬೋಧ ಆಸ್ತೇ ಸ್ವಜನಾನುಷಂಗತಃ।
ಮಹಾನುಭಾವಸ್ತದಬುದ್ಧ್ಯದಾಸುರೀಂ
ಮಾಯಾಂ ಸ ಶಾಲ್ವಪ್ರಸೃತಾಂ ಮಯೋದಿತಾಮ್ ॥ ೨೮

ಸ್ವಭಾವವನ್ನನುಸರಿಸಿ ವಿಭ್ರಾಂತನಾದನು. ಪಿತೃವಾತ್ಸಲ್ಯದಿಂದ ಮರುಗುತ್ತ ಪ್ರಾಕೃತಮನುಷ್ಯನಂತೆ "ಬಲರಾಮನು ಎಚ್ಚರಿಕೆಯಿಂದ ಇರತಕ್ಕವನು. ದೇವಾಸುರರು ಒಟ್ಟುಗೂಡಿದರೂ ಅವನನ್ನು ಜಯಿಸಲು ಸಾಧ್ಯವಿಲ್ಲ. ಅಂಥವನನ್ನು ಅಲ್ಪನಾದ ಸಾಲ್ವನು ಗೆದ್ದು ನಮ್ಮ ತಂದೆಯನ್ನು ಹೇಗೆ ಒಯ್ದಿರಬಹುದು? ಅಯ್ಯೋ! ದೈವವೇ ಬಲಶಾಲಿ!" ಎಂದನು (೨೩-೨೪). ಹೀಗೆ ಹೇಳುತ್ತಿರುವಾಗ ಸೌಭೇಶ್ವರನು ಪ್ರತ್ಯಕ್ಷನಾದನು! ಅವನು ವಸುದೇವನಂತಿದ್ದ ಒಬ್ಬ ಪುರುಷನನ್ನು ಎಳತಂದು ಶ್ರೀಕೃಷ್ಣನನ್ನುದ್ದೇಶಿಸಿ "ಎಲವೊ, ಈತನು ನಿನ್ನನ್ನು ಹಡೆದ ತಂದೆ. ಇವನಿಗಾಗಿ ಅಲ್ಲವೆ ನೀನು ಬದುಕಿರುವುದು! ನಿನ್ನ ಕಣ್ಣೆದುರಿಗೇ ಈತನನ್ನು ವಧಿಸುವೆನು. ಮೂಢ, ಸಾಮರ್ಥ್ಯವಿದ್ದರೆ ಉಳಿಸಿಕೊ" ಎಂದನು. ಒಡನೆಯೇ ಆ ಮಾಯಾವಿಯು ಖಡ್ಗದಿಂದ ಆ ವಸುದೇವನ ಕತ್ತನ್ನು ಕಡಿದು ಗಗನದಲ್ಲಿದ್ದ ಸೌಭವಿಮಾನವನ್ನಡರಿದನು (೨೫-೨೭). ಆಗ ಶ್ರೀಕೃಷ್ಣನು ಸ್ವತಃಸಿದ್ಧನಿತ್ಯ ಬೋಧಸ್ವರೂಪನಾದರೂ ಒಂದು ಕ್ಷಣಕಾಲ ಮಾನವಸ್ವಭಾವದಲ್ಲಿ ಮುಳುಗಿ

ನ ತತ್ರ ದೂತಂ ನ ಪಿತುಃ ಕಲೇವರಂ
ಪ್ರಬುದ್ಧ ಆಜೌ ಸಮಪಶ್ಯದಚ್ಯುತಃ ।
ಸ್ವಾಪ್ನಂ ಯಥಾ ಚಾಂಬರಚಾರಿಣಂ ರಿಪುಂ
ಸೌಭಸ್ಥಮಾಲೋಕ್ಯ ನಿಹಂತುಮುದ್ಯತಃ ॥ ೨೯

ಏವಂ ವದಂತಿ ರಾಜರ್ಷೇ ಋಷಯಃ ಕೇಚನಾನ್ವಿತಾಃ ।
ಯತ್ ಸ್ವವಾಚೋ ವಿರುಧ್ಯೇತ ನೂನಂ ತೇ ನ ಸ್ಮರಂತ್ಯುತ ॥ ೩೦

ಕ್ವ ಶೋಕಮೋಹೌ ಸ್ನೇಹೋ ವಾ ಭಯಂ ವಾ ಯೇಽಜ್ಞಸಂಭವಾಃ ।
ಕ್ವ ಚಾಖಂಡಿತವಿಜ್ಞಾನಜ್ಞಾನೈಶ್ವರ್ಯಸ್ತ್ವಖಂಡಿತಃ ॥ ೩೧

ಯತ್ಪಾದಸೇವೋರ್ಜಿತಯಾಽಽತ್ಮವಿದ್ಯಯಾ
ಹಿನ್ವಂತ್ಯನಾದ್ಯಾತ್ಮವಿಪರ್ಯಯಗ್ರಹಮ್ ।
ಲಭಂತ ಆತ್ಮೀಯಮನಂತಮೈಶ್ವರಂ
ಕುತೋ ನು ಮೋಹಃ ಪರಮಸ್ಯ ಸದ್ಗತೇಃ ॥ ೩೨

ಬಂಧುಪ್ರೇಮದಿಂದ ವಿಹ್ವಲನಾದನು. ಆ ಮಹಾಮಹಿಮನು ಮರುಕ್ಷಣದಲ್ಲಿ ಅದೆಲ್ಲವೂ ಮಯನಿಂದ ಉಪದಿಷ್ಟವೂ ಸಾಲ್ವನಿಂದ ನಿರ್ಮಿತವೂ ಆದ ಆಸುರೀಮಾಯೆಯೆಂದು ತಿಳಿದುಕೊಂಡನು (೨೮). ಆಗ ಅಚ್ಯುತನಿಗೆ ದೇವಕಿಯು ಕಳಿಸಿದ ದೂತನೂ ಸಮರಾಂಗಣದಲ್ಲಿ ಕಾಣಸಲಿಲ್ಲ, ತಂದೆಯ ಕಳೇಬರವೂ ಕಾಣಸಲಿಲ್ಲ! ಎಲ್ಲವೂ ಸ್ವಪ್ನಪ್ರಪಂಚದಂತೆ ಆಯಿತು! ಸೌಭದಲ್ಲಿ ಕುಳಿತು ಅಂಬದಲ್ಲಿ ಸಂಚರಿಸುತ್ತಿದ್ದ ವೈರಿಯನ್ನು ನೋಡಿ, ಅವನನ್ನು ಕೊಲ್ಲಬೇಕೆಂದು ಸಂಕಲ್ಪಿಸಿದನು (೨೯). ಎಲೈ ರಾಜರ್ಷಿ-ಪರೀಕ್ಷಿತ, ಈ ಪ್ರಕಾರವಾಗಿ ಪೂರ್ವಾನುಸಾರಿಗಳಾದ ಕೆಲವು ಋಷಿಗಳು ವಿರೋಧವನ್ನು ಗಮನಿಸದೆ ಹೇಳಿಬಿಡುತ್ತಾರೆ. ತಮ್ಮ ಹೇಳಿಕೆಗೇ ಅದು ವಿರುದ್ಧವೆಂಬುದನ್ನು ಮರೆತುಬಿಡುತ್ತಾರೆ! [೧] (೩೦). ಅಜ್ಞಾನಿಗಳಿಗಾಗುವ ಶೋಕಮೋಹಗಳಾಗಲಿ ಸ್ನೇಹಭಯಗಳಾಗಲಿ ಎಲ್ಲಿ? ಅಪ್ರತಿಹತವಾದ ಜ್ಞಾನ[೧] ವಿಜ್ಞಾನ ಐಶ್ವರ್ಯಗಳಿಗೆ

---

೧. ಅನುಬಂಧವನ್ನು ನೋಡಿ.

ತಂ ಶಸ್ತ್ರಪೂಗೈಃ ಪ್ರಹರಂತಮೋಜಸಾ
ಶಾಲ್ವಂ ಶರೈಃ ಶೌರಿರಮೋಘವಿಕ್ರಮಃ ।
ವಿದ್ಧ್ವಾಚ್ಛಿನದ್ ವರ್ಮ ಧನುಃಶಿರೋಮಣಿಂ
ಸೌಭಂ ಚ ಶತ್ರೋರ್ಗದಯಾ ರುರೋಜ ಹ ॥ ೩೩

ತತ್ ಕೃಷ್ಣಹಸ್ತೇರಿತಯಾ ವಿಚೂರ್ಣಿತಂ
ಪಪಾತ ತೋಯೇ ಗದಯಾ ಸಹಸ್ರಧಾ ।
ವಿಸೃಜ್ಯ ತದ್ ಭೂತಲಮಾಸ್ಥಿತೋ ಗದಾ-
ಮುದ್ಯಮ್ಯ ಶಾಲ್ವೋಽಚ್ಯುತಮಭ್ಯಗಾದ್ ದ್ರುತಮ್ ॥ ೩೪

ಆಧಾವತಃ ಸಗದಂ ತಸ್ಯ ಬಾಹುಂ
ಭಲ್ಲೇನ ಛಿತ್ತ್ವಾಥ ರಥಾಂಗಮದ್ಭುತಮ್ ।
ವಧಾಯ ಶಾಲ್ವಸ್ಯ ಲಯಾರ್ಕಸನ್ನಿಭಂ
ಬಿಭ್ರದ್ ಬಭೌ ಸಾರ್ಕ ಇವೋದಯಾಚಲಃ ॥ ೩೫

ನೆಲೆಯಾದ ಆ ವಿಭುವೆಲ್ಲಿ? ಯಾವಾತನ ಪಾದಸೇವೆಯಿಂದ ಗಳಿಸಿದ ಶ್ರೇಷ್ಠವಾದ ಆತ್ಮವಿದ್ಯೆಯಿಂದ ಸಜ್ಜನರು ¹ಅನಾದಿಯಾದ ತಮ್ಮ ಭ್ರಾಂತಿಜ್ಞಾನವನ್ನು ಹೋಗಲಾಡಿಸಿಕೊಳ್ಳುವರೋ, ಆತ್ಮಸಂಬಂಧಿಯಾದ ಅನಂತಸಾಮ್ರಾಜ್ಯವನ್ನು ಗಳಿಸುವರೋ ಅಂತಹ ಸದ್ಗತಿಯಾದ ಪರಮಾತ್ಮನಿಗೆ ಮೋಹವೆಂಬುದುಂಟೆ? (೩೧-೩೨). ತರುವಾಯ ನಾನಾವಿಧದ ಶಸ್ತ್ರರಾಶಿಗಳನ್ನು ರಭಸದಿಂದ ಪ್ರಯೋಗಿಸುತ್ತಿದ್ದ ಸಾಲ್ವನನ್ನು, ಅಪ್ರತಿಮಶೂರನಾದ ಶೌರಿಯು ಶರಗಳಿಂದ ತಾಡಿಸಿ ಅವನ ಕವಚವನ್ನು ಸೀಳಿ, ಶ್ರೇಷ್ಠವಾದ ಧನುಸ್ಸನ್ನು ತುಂಡರಿಸಿ, ಸೌಭವಿಮಾನವನ್ನು ಗದೆಯಿಂದ ಬಡಿದನು (೩೩). ಶ್ರೀಕೃಷ್ಣನು ಕೈಯಿಂದ ಬಡಿದ ಗದೆಯ ಜಡಿತಕ್ಕೆ ಸಿಕ್ಕಿ ಸೌಭವಿಮಾನವು ಸಾವಿರಾರು ಚೂರಾಗಿ ಸಮುದ್ರಜಲದಲ್ಲಿ ಬಿದ್ದಿತು. ಅಷ್ಟರಲ್ಲಿ ಸಾಲ್ವನು ವೇಗವಾಗಿ ವಿಮಾನದಿಂದ ನೆಲಕ್ಕೆ ಧುಮುಕಿ ಗದೆಯನ್ನೆತ್ತಿ ಬಹುರಭಸದಿಂದ ಅಚ್ಯುತನಿದ್ದ ಕಡೆಗೆ ಧಾವಿಸಿಬಂದನು (೩೪). ಧಾವಿಸಿ ಬರುತ್ತಿದ್ದ ಸಾಲ್ವನ ಗದಾಸಹಿತವಾದ ತೋಳನ್ನು ಭಲ್ಲೆಯಿಂದ ತುಂಡರಿಸಿ,

---

೧. ವಿಜ್ಞಾನ=ಆತ್ಮವಿಷಯಕವಾದ ಅರಿವು. ಜ್ಞಾನ=ಬಾಹ್ಯವಿಷಯಕವಾದ ಅರಿವು.

ಜಹಾರ ತೇನೈವ ಶಿರಃ ಸಕುಂಡಲಂ
ಕಿರೀಟಯುಕ್ತಂ ಪುರುಮಾಯಿನೋ ಹರಿಃ।
ವಜ್ರೇಣ ವೃತ್ರಸ್ಯ ಯಥಾ ಪುರಂದರೋ
ಬಭೂವ ಹಾಹೇತಿ ವಚಸ್ತದಾ ನೃಣಾಮ್ ॥ ೩೬

ತಸ್ಮಿನ್ ನಿಪತಿತೇ ಪಾಪೇ ಸೌಭೇ ಚ ಗದಯಾ ಹತೇ।
ನೇದುರ್ದುಂದುಭಯೋ ರಾಜನ್ ದಿವಿ ದೇವಗಣೇರಿತಾಃ।
ಸಖೀನಾಮಪಚಿತಿಂ ಕುರ್ವನ್ ದಂತವಕ್ತ್ರೋ ರುಷಾಭ್ಯಗಾತ್ ॥ ೩೭

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಸಪ್ತ ಸಪ್ತತಿತಮಾಧ್ಯಾಯಃ

ಆತನನ್ನು ಸಂಹರಿಸುವುದಕ್ಕಾಗಿ ಶ್ರೀಕೃಷ್ಣನು ಭೀಕರವಾದ ಚಕ್ರವನ್ನು ಹಿಡಿದನು. ಪ್ರಳಯಕಾಲದ ಸೂರ್ಯನಂತೆ ಜಗಜಗಿಸುತ್ತಿದ್ದ ಚಕ್ರವನ್ನು ಹಿಡಿದ ಶ್ರೀಕೃಷ್ಣನು, (ಪ್ರಭಾತದಲ್ಲಿ) ಸೂರ್ಯಸಹಿತನಾಗಿರುವ ಉದಯಾಚಲದಂತೆ ರಾರಾಜಿಸಿದನು (೩೫). ಒಡನೆಯೇ ಶ್ರೀಹರಿಯು ಆ ಚಕ್ರದಿಂದ ಮಹಾಮಾಯಾವಿಯಾದ ಸಾಲ್ವನ ಕಿರೀಟಯುಕ್ತವೂ ಕುಂಡಲ ಸಹಿತವೂ ಆದ ಶಿರಸ್ಸನ್ನು, ವೃತ್ರಾಸುರನ ಶಿರಸ್ಸನ್ನು ವಜ್ರಾಯುಧದಿಂದ ದೇವೇಂದ್ರನು ಕತ್ತರಿಸಿದಂತೆ ಕತ್ತರಿಸಿದನು. ಜನರ ಹಾಹಾಕಾರವು ಎದ್ದಿತು (೩೬). ಪರೀಕ್ಷಿತರಾಜ, ಪಾಪಿಯಾದ ಸಾಲ್ವನು ಹತನಾಗಲು, ಸೌಭವಿಮಾನವು ಗದೆಯಿಂದ ಚೂರುಚೂರಾಗಲು, ಗಗನದಲ್ಲಿ ದೇವದುಂದುಭಿಗಳು ಮೊಳಗಿದವು. ಆಗ ದಂತವಕ್ತ್ರನೆಂಬುವನು ತನ್ನ ಸ್ನೇಹಿತರ ಮರಣಕ್ಕೆ ಪ್ರತೀಕಾರವನ್ನು ಮಾಡಲೆಣಿಸಿ ರೋಷದಿಂದ ಯುದ್ಧಕ್ಕೆ ಬಂದನು (೩೭).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಪ್ಪತ್ತೇಳನೆಯ ಅಧ್ಯಾಯ

ಅಷ್ಟಸಪ್ತತಿತಮಾಧ್ಯಾಯಃ

ಶ್ರೀಶುಕ ಉವಾಚ-

ಶಿಶುಪಾಲಸ್ಯ ಶಾಲ್ವಸ್ಯ ಪೌಂಡ್ರಕಸ್ಯಾಪಿ ದುರ್ಮತಿಃ ।
ಪರಲೋಕಗತಾನಾಂ ಚ ಕುರ್ವನ್ ಪಾರೋಕ್ಷ್ಯ ಸೌಹೃದಮ್ ॥ ೧

ಏಕಃ ಪದಾತಿಃ ಸಂಕ್ರುದ್ಧೋ ಗದಾಪಾಣಿಃ ಪ್ರಕಂಪಯನ್ ।
ಪದ್ಭ್ಯಾಮಿಮಾಂ ಮಹಾರಾಜ ಮಹಾಸತ್ತ್ವೋ ವ್ಯದೃಶ್ಯತ ॥ ೨

ತಂ ತಥಾಽಽಯಾಂತಮಾಲೋಕ್ಯ ಗದಾಮಾದಾಯ ಸತ್ವರಃ ।
ಅವಪ್ಲುತ್ಯ ರಥಾತ್ ಕೃಷ್ಣಂ ಸಿಂಧುಂ ವೇಲೇವ ಪ್ರತ್ಯಧಾತ್ ॥ ೩

ಗದಾಮುದ್ಯಮ್ಯ ಕಾರೂಷೋ ಮುಕುಂದಂ ಪ್ರಾಹ ದುರ್ಮದಃ ।
ದಿಷ್ಟ್ಯಾ ದಿಷ್ಟ್ಯಾ ಭವಾನದ್ಯ ಮಮ ದೃಷ್ಟಿಪಥಂ ಗತಃ ॥ ೪

ಅಧ್ಯಾಯ ೭೮

ಶ್ರೀಕೃಷ್ಣನಿಂದ ದಂತವಕ್ರವಿದೂರಥರ ಸಂಹಾರ. ಬಲರಾಮನು ತೀರ್ಥಯಾತ್ರಾ ಪ್ರಸಂಗದಲ್ಲಿ ಪೌರಾಣಿಕನಾದ ರೋಮಹರ್ಷಣನನ್ನು ಕೊಲ್ಲುವುದು.

ಶುಕಮಹರ್ಷಿಗಳು ಹೇಳಿದರು : ಮಹಾರಾಜ-ಪರೀಕ್ಷಿತ, ಪರಲೋಕವನ್ನು ಸೇರಿದ ಶಿಶುಪಾಲ, ಸಾಲ್ವ, ಪೌಂಡ್ರಕರಿಗೆ ಪರೋಕ್ಷದಲ್ಲಾದರೂ ತನ್ನ ಸ್ನೇಹವನ್ನು ಪ್ರಕಟಿಸಬೇಕೆಂದು ದುರ್ಬುದ್ಧಿಯಾದ ದಂತವಕ್ರನು ಉದ್ದೇಶಿಸಿದನು. ಸಂಕ್ರುದ್ಧನಾದ ಆ ಪರಾಕ್ರಮಿಯು ಪದಾತಿಯಾಗಿ ಏಕಾಕಿಯಾಗಿದ್ದರೂ ಗದೆಯನ್ನೆತ್ತಿಕೊಂಡು, ನೆಲವು ನಡುಗುವಂತೆ ಕಾಲುಗಳನ್ನಿಡುತ್ತ ಬಂದು ಕಾಣಿಸಿಕೊಂಡನು (೧-೨). ಹಾಗೆ ಬರುತ್ತಿದ್ದ ದಂತವಕ್ರನನ್ನು ನೋಡಿದ ಕೂಡಲೆ ಶ್ರೀಕೃಷ್ಣನು ಗದಾಧಾರಿಯಾಗಿ ರಥದಿಂದ ಧುಮುಕಿ, ನುಗ್ಗಿ ಬರುವ ಸಮುದ್ರವನ್ನು ದಡವು ತಡೆಯುವಂತೆ, ತಡೆದು ಅಡ್ಡಗಟ್ಟಿದನು (೩). ಮದಾಂಧನಾದ ದಂತವಕ್ರನು ಗದೆಯನ್ನೆತ್ತಿ ಮುಕುಂದನನ್ನು ಕುರಿತು "ಭಪ್ಪರೆ ! ನೀನೀಗ ನನ್ನ ಕಣ್ಣಿಗೆ ಬಿದ್ದದ್ದು ಒಳ್ಳೆಯದಾಯಿತು! ಎಲೋ ಕೃಷ್ಣ ನೀನು ನನ್ನ ಸೋದರಮಾವನ

ತ್ವಂ ಮಾತುಲೇಯೋ ನಃ ಕೃಷ್ಣ ಮಿತ್ರಧ್ರುಙ್ಮಾಂ ಜಿಘಾಂಸಸಿ ।
ಅತಸ್ತ್ವಾಂ ಗದಯಾ ಮಂದ ಹನಿಷ್ಯೇ ವಜ್ರಕಲ್ಪಯಾ ॥ ೫

ತರ್ಹ್ಯಾನೃಣ್ಯಮುಪೈಮ್ಯಜ್ಞ ಮಿತ್ರಾಣಾಂ ಮಿತ್ರವತ್ಸಲಃ ।
ಬಂಧುರೂಪಮರಿಂ ಹತ್ವಾ ವ್ಯಾಧಿಂ ದೇಹಚರಂ ಯಥಾ ॥ ೬

ಏವಂ ರೂಕ್ಷೈಸ್ತುದನ್ ವಾಕ್ಯೈಃ ಕೃಷ್ಣಂ ತೋತ್ತ್ರೈರಿವ ದ್ವಿಪಮ್ ।
ಗದಯಾತಾಡಯನ್ಮೂರ್ಧ್ನಿ ಸಿಂಹವದ್ ವ್ಯನದಚ್ಚ ಸಃ ॥ ೭

ಗದಯಾಭಿಹತೋಽಪ್ಯಾಜೌ ನ ಚಚಾಲ ಯದೂದ್ವಹಃ ।
ಕೃಷ್ಣೋಽಪಿ ತಮಹನ್ ಗುರ್ವ್ಯಾ ಕೌಮೋದಕ್ಯಾ ಸ್ತನಾಂತರೇ ॥ ೮

ಗದಾನಿರ್ಭಿನ್ನಹೃದಯ ಉದ್ವಮನ್ ರುಧಿರಂ ಮುಖಾತ್ ।
ಪ್ರಸಾರ್ಯ ಕೇಶಬಾಹ್ವಂಘ್ರೀನ್ ಧರಣ್ಯಾಂ ನ್ಯಪತದ್ ವ್ಯಸುಃ ॥ ೯

ಮಗನಾದರೂ[೧] ನನ್ನ ಮಿತ್ರರಿಗೆ ದ್ರೋಹವನ್ನು ಬಗೆದೆಯಲ್ಲದೆ ನನ್ನನ್ನು ಕೊಲ್ಲಲು ಬಯಸಿದ್ದೀಯೆ. ಆದ್ದರಿಂದ, ಎಲಾ ಅವಿವೇಕಿ, ವಜ್ರಾಯುಧದಂತಿರುವ ಈ ಗದೆಯಿಂದ ನಿನ್ನನ್ನು ಬಡಿದು ಕೊಲ್ಲುವೆನು (೪-೫). ಏ ಪೆದ್ದ, ಮಿತ್ರವತ್ಸಲನಾದ ನಾನು ಹಾಗೆ ಮಾಡಿ ಮಿತ್ರರ ಋಣದಿಂದ ಮುಕ್ತನಾಗುವೆನು. ನೆಂಟನಾದರೂ ಮೈಗೆ ಅಂಟಿದ ರೋಗವಿದ್ದಂತೆ ಶತ್ರುವಾಗಿರುವ ನಿನ್ನನ್ನು ನಾಶಪಡಿಸುವೆನು " ಎಂದನು (೬). ಅಂಕುಶಗಳಿಂದ ಆನೆಯನ್ನು ತಿವಿಯುವಂತೆ, ಈ ರೀತಿಯಾದ ಕರ್ಣಕಠೋರ ವಾಕ್ಯಗಳಿಂದ ದಂತವಕ್ತ್ರನು ಶ್ರೀಕೃಷ್ಣನನ್ನು ಚುಚ್ಚುತ್ತ ಆತನ ತಲೆಯಮೇಲೆ ಗದೆಯನ್ನಪ್ಪಳಿಸಿ ಸಿಂಹನಾದಗೈದನು (೭). ಯುದ್ಧದಲ್ಲಿ ಹೀಗೆ ಗದೆಯಿಂದ ತಾಡಿತನಾದರೂ ಯದುನಾಯಕನು ಅಲ್ಲಾಡದೆ ನಿಂತಿದ್ದು,

---

೧ ದಂತವಕ್ತ್ರನು ವಸುದೇವನ ಸೋದರಿಯಾದ ಶ್ರುತದೇವಾ ಎಂಬುವಳ ಮಗ. ಕರೂಷ ದೇಶದ ರಾಜ. ಜನ್ಮಾಂತರದಲ್ಲಿ ಹಿರಣ್ಯಾಕ್ಷ ಮತ್ತು ಕುಂಭಕರ್ಣ. ಶಿಶುಪಾಲನು ವಸುದೇವನ ಸೋದರಿಯಾದ ಶ್ರುತಶ್ರವಸ್ ಎಂಬುವಳ ಮಗ. ಚೇದಿ ದೇಶದ ರಾಜ. ಜನ್ಮಾಂತರದಲ್ಲಿ ಹಿರಣ್ಯಕಶಿಪು ಮತ್ತು ರಾವಣ (ನೋಡಿ ಭಾಗ ೭-೧ ; ವಿಷ್ಣುಪುರಾಣ ೪-೧೪,೧೫ ಅಧ್ಯಾಯ).

ತತಃ ಸೂಕ್ಷ್ಮತರಂ ಜ್ಯೋತಿಃ ಕೃಷ್ಣಮಾವಿಶದದ್ಭುತಮ್ ।
ಪಶ್ಯತಾಂ ಸರ್ವಭೂತಾನಾಂ ಯಥಾ ಚೈದ್ಯವಧೇ ನೃಪ ॥ ೧೦

ವಿದೂರಥಸ್ತು ತದ್ಭ್ರಾತಾ ಭ್ರಾತೃಶೋಕಪರಿಪ್ಲುತಃ ।
ಆಗಚ್ಛದಸಿಚರ್ಮಭ್ಯಾಮುಚ್ಛ್ವಸಂಸ್ತಜ್ಜಿಘಾಂಸಯಾ ॥ ೧೧

ತಸ್ಯ ಚಾಪತತಃ ಕೃಷ್ಣಶ್ಚಕ್ರೇಣ ಕ್ಷುರನೇಮಿನಾ ।
ಶಿರೋ ಜಹಾರ ರಾಜೇಂದ್ರ ಸಕಿರೀಟಂ ಸಕುಂಡಲಮ್ ॥ ೧೨

ಏವಂ ಸೌಭಂ ಚ ಶಾಲ್ವಂ ಚ ದಂತವಕ್ತ್ರಂ ಸಹಾನುಜಮ್ ।
ಹತ್ವಾದುರ್ವಿಷಹಾನನ್ಯೈರೀಡಿತಃ ಸುರಮಾನವೈಃ ॥ ೧೩

ಮುನಿಭಿಃ ಸಿದ್ಧಗಂಧರ್ವೈರ್ವಿದ್ಯಾಧರಮಹೋರಗೈಃ ।
ಅಪ್ಸರೋಭಿಃ ಪಿತೃಗಣೈರ್ಯಕ್ಷೈಃ ಕಿನ್ನರಚಾರಣೈಃ ॥ ೧೪

ಕೌಮೋದಕಿಯೆಂಬ ತನ್ನ ದೊಡ್ಡ ಗದೆಯಿಂದ ದಂತವಕ್ತ್ರನ ಎದೆಗೆ ಬಡಿದನು. ಗಧಾಘಾತದಿಂದ ಎದೆಯೊಡೆಯಲು, ದಂತವಕ್ತ್ರನು ಬಾಯಿಂದ ರಕ್ತವನ್ನು ಕಾರುತ್ತ ತಲೆಗೂದಲು ಕೆದರಿ ಕೈಕಾಲುಗಳನ್ನು ಚಾಚಿ ನೆಲದಮೇಲೆ ಸತ್ತು ಬಿದ್ದನು (೮-೯). ರಾಜ, ಹಿಂದೆ ಶಿಶುಪಾಲನನ್ನು ಕೊಂದಾಗ ಹೇಗೋ ಹಾಗೆ, ಎಲ್ಲರೂ ನೋಡುತ್ತಿರುವಾಗ, ಅತ್ಯಂತ ಸೂಕ್ಷ್ಮವಾದ ಒಂದು ಜ್ಯೋತಿಯು ಆಶ್ಚರ್ಯಕರವಾಗಿ ಆತನ ದೇಹದಿಂದ ಹೊರಟು ಶ್ರೀಕೃಷ್ಣನಲ್ಲಿ ಲೀನವಾಯಿತು ! (೧೦). ಅವನ ತಮ್ಮನಾದ ವಿದೂರಥನು ಅಣ್ಣನ ಹತ್ಯೆಯಿಂದ ಶೋಕಕ್ರಾಂತನಾಗಿ ಖಡ್ಗವನ್ನೂ ಗುರಾಣಿಯನ್ನೂ ಹಿಡಿದುಕೊಂಡು ಶ್ರೀಕೃಷ್ಣನನ್ನು ಕೊಲ್ಲುವುದಕ್ಕಾಗಿ ಏದುತ್ತ ಓಡುತ್ತ ಬಂದನು. ಅವನು ಬರುತ್ತಿರುವಾಗಲೇ ಅಚ್ಯುತನು ತೀಕ್ಷ್ಣಧಾರೆಯುಳ್ಳ ಚಕ್ರಾಯುಧದಿಂದ ಕಿರೀಟಕುಂಡಲಸಹಿತವಾದ ಆತನ ಶಿರಸ್ಸನ್ನು ತರಿದನು (೧೧-೧೨). ಹೀಗೆ ಇನ್ನೊಬ್ಬರಿಂದ ಜಯಿಸಲಶಕ್ಯವಾಗಿದ್ದ ಸೌಭವಿಮಾನ, ಸಾಲ್ವ, ದಂತವಕ್ತ್ರ ಅವನ ತಮ್ಮ ವಿದೂರಥ-ಇವರನ್ನು ನಾಶಪಡಿಸಿದ ಶ್ರೀಕೃಷ್ಣನನ್ನು ದೇವತೆಗಳೂ ಮಾನವರೂ ಸ್ತುತಿಸಿದರು(೧೩). ಮುನಿಗಳು, ಸಿದ್ಧಗಂದರ್ವರು, ವಿದ್ಯಾಧರಮಹೋರಗರು,

ಉಪಗೀಯಮಾನವಿಜಯಃ ಕುಸುಮೈರಭಿವರ್ಷಿತಃ ।
ವೃತಶ್ಚ ವೃಷ್ಣಿಪ್ರವರೈರ್ವಿವೇಶಾಲಂಕೃತಾಂ ಪುರೀಮ್ ॥ ೧೫

ಏವಂ ಯೋಗೇಶ್ವರಃ ಕೃಷ್ಣೋ ಭಗವಾನ್ ಜಗದೀಶ್ವರಃ ।
ಈಯತೇ ಪಶುದೃಷ್ಟೀನಾಂ ನಿರ್ಜಿತೋ ಜಯತೀತಿ ಸಃ ॥ ೧೬

ಶ್ರುತ್ವಾಯುದ್ಧೋದ್ಯಮಂ ರಾಮಃ ಕುರೂಣಾಂ ಸಹ ಪಾಂಡವೈಃ ।
ತೀರ್ಥಾಭಿಷೇಕವ್ಯಾಜೇನ ಮಧ್ಯಸ್ಥಃ ಪ್ರಯಯೌ ಕಿಲ ॥ ೧೭

ಸ್ನಾತ್ವಾ ಪ್ರಭಾಸೇ ಸಂತರ್ಪ್ಯ ದೇವರ್ಷಿಪಿತೃಮಾನವಾನ್ ।
ಸರಸ್ವತೀಂ ಪ್ರತಿಸ್ರೋತಂ ಯಯೌ ಬ್ರಾಹ್ಮಣಸಂವೃತಃ ॥ ೧೮

ಅಪ್ಸರೆಯರು, ಪಿತೃಗಣಗಳು, ಯಕ್ಷರು, ಕಿನ್ನರಚಾರಣರು ಶ್ರೀಕೃಷ್ಣನಮೇಲೆ ಹೂಮಳೆಯನ್ನು ಸುರಿಸಿ ಅವನ ವಿಜಯಕಥೆಯನ್ನು ಕೊಂಡಾಡಿದರು. ಭಗವಂತನು ಯಾದವಪ್ರಮುಖರಿಂದ ಪರಿವೃತನಾಗಿ ಅಲಂಕೃತವಾದ ದ್ವಾರಕಾಪುರಿಯನ್ನು ಪ್ರವೇಶಿಸಿದನು (೧೪-೧೫). ಈ ಪ್ರಕಾರವಾಗಿ ಯೋಗೇಶ್ವರನೂ ಜಗದೀಶ್ವರನೂ ಆದ ಭಗವಾನ್ ಶ್ರೀಕೃಷ್ಣನು ಸರ್ವದಾ ಜಯಿಸುತ್ತಾನೆ ! (ಜರಾಸಂಧಾದಿಗಳಿಂದ) ಅವನು ಪರಾಜಿತನಾದವನೆಂದು ಪಾಮರದೃಷ್ಟಿಯವರಿಗೆ ಕಾಣುತ್ತಾನೆ[೧] (೧೬). ಪರೀಕ್ಷಿತರಾಜ, (ಆಮೇಲೆ ನಡೆದ ಭಾರತದ ಕಥೆ ನಿನಗೆ ಗೊತ್ತಿದೆ) ಅತ್ತ ಪಾಂಡವರಿಗೂ ಕೌರವರಿಗೂ ಯುದ್ಧಸಂನಾಹವು ನಡೆಸುತ್ತಿದೆಯೆಂಬುದನ್ನು ಕೇಳಿ, ತಟಸ್ಥನಾದ ಬಲರಾಮನು ತೀರ್ಥಸ್ನಾನದ ನೆವದಿಂದ ಹೊರಟನು (೧೭). ಆತನು ಪ್ರಭಾಸ ತೀರ್ಥದಲ್ಲಿ ಸ್ನಾನಮಾಡಿ ದೇವರ್ಷಿಪಿತೃಮಾನವರಿಗೆ ತರ್ಪಣವನ್ನಿತ್ತು, ಬ್ರಾಹ್ಮಣ ಪರಿವೃತನಾಗಿ ಪಶ್ಚಿಮಾವಾಹಿನಿಯಾದ ಸರಸ್ವತೀನದಿಯನ್ನು ಸೇರಿದನು. ಅನಂತರ ಪೃಥೂದಕ, ಬಿಂದುಸರಸ್ಸು, ತ್ರಿತಕೂಪ, ಸುದರ್ಶನ, ವಿಶಾಲ, ಬ್ರಹ್ಮತೀರ್ಥ, ಚಕ್ರತೀರ್ಥಗಳಿಗೆ ಹೋಗಿ ಪೂರ್ವವಾಹಿನಿಯಾದ ಸರಸ್ವತೀ ನದಿಯ ಬಳಿಗೆ ಬಂದನು

---

೧ ಭಗವಂತನು ಜಯಿಸುತ್ತಾನೆ ಸೋಲುತ್ತಾನೆ- ಎಂಬುದೆರಡೂ ಪಾಮರದೃಷ್ಟಿಯವರಿಗೆ ಮಾತ್ರ. ಅವನು ನಿತ್ಯಶುದ್ಧ, ನಿರ್ಗುಣ, ನಿರಂಜನ ಎಂದೂ ಕೆಲವರು ಅರ್ಥ ಹೇಳುತ್ತಾರೆ.

ಪೃಥೂದಕಂ ಬಿಂದುಸರಸ್ತ್ರಿತಕೂಪಂ ಸುದರ್ಶನಮ್ ।
ವಿಶಾಲಂ ಬ್ರಹ್ಮತೀರ್ಥಂ ಚ ಚಕ್ರಂ ಪ್ರಾಚೀಂ ಸರಸ್ವತೀಮ್ ॥ ೧೯

ಯಮುನಾಮನು ಯಾನ್ಯೇವ ಗಂಗಾಮನು ಚ ಭಾರತ ।
ಜಗಾಮ ನೈಮಿಷಂ ಯತ್ರ ಋಷಯಃ ಸತ್ರಮಾಸತೇ ॥ ೨೦

ತಮಾಗತಮಭಿಪ್ರೇತ್ಯ ಮುನಯೋ ದೀರ್ಘಸತ್ರಿಣಃ ।
ಅಭಿನಂದ್ಯ ಯಥಾನ್ಯಾಯಂ ಪ್ರಣಮ್ಯೋತ್ಥಾಯ ಚಾರ್ಚಯನ್ ॥ ೨೧

ಸೋಽರ್ಚಿತಃ ಸಪರೀವಾರಃ ಕೃತಾಸನಪರಿಗ್ರಹಃ ।
ರೋಮಹರ್ಷಣಮಾಸೀನಂ ಮಹರ್ಷೇಃ ಶಿಷ್ಯಮೈಕ್ಷತ ॥ ೨೨

ಅಪ್ರತ್ಯುತ್ಥಾಯಿನಂ ಸೂತಮಕೃತಪ್ರಹ್ವಣಾಂಜಲಿಮ್ ।
ಅಧ್ಯಾಸೀನಂ ಚ ತಾನ್ ವಿಪ್ರಾಂಶ್ಚುಕೋಪೋದ್ವೀಕ್ಷ್ಯ ಮಾಧವಃ ॥ ೨೩

ಕಸ್ಮಾದಸಾವಿಮಾನ್ ವಿಪ್ರಾನಧ್ಯಾಸ್ತೇ ಪ್ರತಿಲೋಮಜಃ ।
ಧರ್ಮಪಾಲಾಂಸ್ತಥೈವಾಸ್ಮಾನ್ ವಧಮರ್ಹತಿ ದುರ್ಮತಿಃ ॥ ೨೪

(೧೮-೧೯). ಆಮೇಲೆ ಬಲಭದ್ರನು ಗಂಗಾಯಮುನಾ ನದೀತೀರಗಳಲ್ಲಿರುವ ಕ್ಷೇತ್ರಗಳನ್ನು ಸಂದರ್ಶಿಸಿ, ಋಷಿಗಳು ಯಜ್ಞದೀಕ್ಷೆಯಲ್ಲಿ ತೊಡಗಿದ್ದ ನೈಮಿಷಾರಣ್ಯವನ್ನು ತಲುಪಿದನು. ಬಂದವನು ಬಲರಾಮನೆಂದು ತಿಳಿದು ದೀರ್ಘಸತ್ರ ದೀಕ್ಷೆಯಲ್ಲಿ ಉದ್ಯುಕ್ತರಾಗಿದ್ದ ಮುನಿಗಳು ಅವನನ್ನು ಸ್ವಾಗತಿಸಿ, ವಿಧಿವತ್ತಾಗಿ ನಮಸ್ಕರಿಸಿ ಗೌರವಿಸಿದರು (೨೦-೨೧). ಪರಿವಾರ ಸಮೇತನಾದ ಬಲರಾಮನು ಸತ್ಕಾರವನ್ನು ಸ್ವೀಕರಿಸಿ ಪೀಠದಲ್ಲಿ ಕುಳಿತುಕೊಂಡು, ವ್ಯಾಸಮುನಿಗಳ ಶಿಷ್ಯನಾದ ರೋಮಹರ್ಷಣನು ಎತ್ತರವಾದ ಪೀಠದಲ್ಲಿ ಕುಳಿತೇ ಇದ್ದುದನ್ನು ಗಮನಿಸಿದನು. ತಾನು ಬಂದರೂ ಎದ್ದುನಿಲ್ಲದೆ ಕೈಮುಗಿದು ನಮಸ್ಕರಿಸದೆ ವಿಪ್ರರ ನಡುವೆ ಎತ್ತರದಲ್ಲಿ ಕುಳಿತೇ ಇದ್ದ ಆ ಸೂತಜಾತಿಯವನನ್ನು ನೋಡಿ ಬಲರಾಮನು ಕುಪಿತನಾದನು (೨೨-೨೩). ಆಗ ''ಪ್ರತಿಲೋಮಜಾತಿಯಲ್ಲಿ ಹುಟ್ಟಿದ ಆ ಸೂತನು ವಿಪ್ರರೆದುರಿಗೆ, ಧರ್ಮಪಾಲಕರಾದ ನಮ್ಮೆದುರಿಗೆ, ಉನ್ನತಾಸನದಲ್ಲಿ ಕುಳಿತಿರುವುದೇಕೆ ? ಆ ದುರ್ಬುದ್ಧಿಯವನಿಗೆ ಮರಣಶಿಕ್ಷೆಯನ್ನು ವಿಧಿಸಬೇಕು !

ಋಷೇರ್ಭಗವತೋ ಭೂತ್ವಾ ಶಿಷ್ಯೋಽಧೀತ್ಯ ಬಹೂನಿ ಚ।
ಸೇತಿಹಾಸಪುರಾಣಾನಿ ಧರ್ಮಶಾಸ್ತ್ರಾಣಿ ಸರ್ವಶಃ॥ ೨೫

ಅದಾಂತಸ್ಯಾವಿನೀತಸ್ಯ ವೃಥಾ ಪಂಡಿತಮಾನಿನಃ।
ನ ಗುಣಾಯ ಭವಂತಿ ಸ್ಮ ನಟಸ್ಯೇವಾಜಿತಾತ್ಮನಃ॥ ೨೬

ಏತದರ್ಥೋ ಹಿ ಲೋಕೇಽಸ್ಮಿನ್ನವತಾರೋ ಮಯಾ ಕೃತಃ।
ವಧ್ಯಾ ಮೇ ಧರ್ಮಧ್ವಜಿನಸ್ತೇ ಹಿ ಪಾತಕಿನೋಽಧಿಕಾಃ॥ ೨೭

ಏತಾವದುಕ್ತ್ವಾ ಭಗವಾನ್ ನಿವೃತ್ತೋಽಸದ್ವಧಾದಪಿ।
ಭಾವಿತ್ವಾತ್ತಂ ಕುಶಾಗ್ರೇಣ ಕರಸ್ಥೇನಾಹನತ್ ಪ್ರಭುಃ॥ ೨೮

ಹಾಹೇತಿ ವಾದಿನಃ ಸರ್ವೇ ಮುನಯಃ ಖಿನ್ನಮಾನಸಾಃ।
ಊಚುಃ ಸಂಕರ್ಷಣಂ ದೇವಮಧರ್ಮಸ್ತೇ ಕೃತಃ ಪ್ರಭೋ॥ ೨೯

---

(೨೪). ಭಗವಾನ್ ವೇದವ್ಯಾಸ ಋಷಿಗಳ ಶಿಷ್ಯನಾಗಿ ಇತಿಹಾಸ ಪುರಾಣ ಧರ್ಮಶಾಸ್ತ್ರಾದಿ ಸಕಲ ಗ್ರಂಥಗಳನ್ನು ಕಲಿತಿದ್ದರೂ ಅವನಿಗೆ ಇಂದ್ರಿಯ ನಿಗ್ರಹವಿಲ್ಲ, ವಿನಯಗುಣ ಬರಲಿಲ್ಲ. ತಾನು ಪಂಡಿತನೆಂದು ವ್ಯರ್ಥವಾಗಿ ತಿಳಿದುಕೊಂಡಿದ್ದಾನೆ. ಈ ದುರಭಿಮಾನಿಗೆ ವಿದ್ಯೆಗಳಿಂದ ಯಾವ ಗುಣಶೀಲಗಳೂ ಉಂಟಾಗಲಿಲ್ಲ. ಇವನೊಬ್ಬ ನಾಟ್ಯವಾಡುವ ನಟನಿದ್ದಂತೆ! (೨೫-೨೬). ಇಂಥವರ ದಂಡನೆಗಾಗಿಯೇ ನಾನು ಲೋಕದಲ್ಲಿ ಅವತರಿಸಿರುವುದು. ಧರ್ಮದ ಹೆಸರಿನಲ್ಲಿ ಡಂಭಾಚಾರಮಾಡತಕ್ಕವರು ಇತರ ದುಷ್ಕರ್ಮಿಗಳಿಗಿಂತಲೂ ಹೆಚ್ಚಿನ ಮಹಾಪಾಪಿಗಳು. ಇಂಥವರನ್ನು ನಾನು ವಧಿಸತಕ್ಕವನು'' ಎಂದು ಹೇಳಿ ಭಗವಾನ್ ಬಲಭದ್ರನು, ಕೆಟ್ಟದಾದ ಕೊಲೆಗೆಲಸವನ್ನು ಮಾಡ ತಕ್ಕವನಲ್ಲವಾದರೂ, ಭವಿತವ್ಯತೆಯು ಬಲವತ್ತರವಾದ್ದರಿಂದ, ತನ್ನ ಕೈಯಲ್ಲಿದ್ದ ಕುಶಗಳಿಂದ ಆ ಸೂತನನ್ನು ಹೊಡೆದು ಕೊಂದನು (೨೭-೨೮). ಸಕಲ ಮುನಿಗಳೂ 'ಹಾಹಾ' ಎಂದು ಕೂಗುತ್ತ ಬಹಳ ಖಿನ್ನರಾದರು. ಅವರು ಬಲರಾಮನನ್ನು ಕುರಿತು ''ಪ್ರಭು, ನೀನು ಮಾಡಿದ್ದು ಸರಿಯಲ್ಲ. ಯದುನಂದನ, ನಮ್ಮ ಈ ಸತ್ರವು ಮುಗಿಯುವವರೆಗೂ ರೋಮಹರ್ಷಣನಿಗೆ ಬ್ರಹ್ಮಪೀಠವನ್ನು

ಅಸ್ಯ ಬ್ರಹ್ಮಾಸನಂ ದತ್ತಮಸ್ಮಾಭಿರ್ಯದುನಂದನ।
ಆಯುಶ್ಚಾತ್ಮಾಕ್ಲಮಂ ತಾವದ್ ಯಾವತ್ ಸತ್ರಂ ಸಮಾಪ್ಯತೇ॥ ೩೦

ಅಜಾನತೈವಾಚರಿತಸ್ತ್ವಯಾ ಬ್ರಹ್ಮವಧೋ ಯಥಾ।
ಯೋಗೇಶ್ವರಸ್ಯ ಭವತೋ ನಾಮ್ನಾಯೋಽಪಿ ನಿಯಾಮಕಃ॥ ೩೧

ಯದ್ಯೇತದ್ ಬ್ರಹ್ಮಹತ್ಯಾಯಾಃ ಪಾವನಂ ಲೋಕಪಾವನ।
ಚರಿಷ್ಯತಿ ಭವಾನ್ ಲೋಕಸಂಗ್ರಹೋಽನನ್ಯಚೋದಿತಃ॥ ೩೨

ಶ್ರೀಭಗವಾನುವಾಚ-

ಕರಿಷ್ಯೇ ವಧನಿರ್ವೇಶಂ ಲೋಕಾನುಗ್ರಹಕಾಮ್ಯಯಾ।
ನಿಯಮಃ ಪ್ರಥಮೇ ಕಲ್ಪೇ ಯಾವಾನ್ ಸ ತು ವಿಧೀಯತಾಮ್॥ ೩೩

ದೀರ್ಘಮಾಯುರ್ಬತೈತಸ್ಯ ಸತ್ತ್ವಮಿಂದ್ರಿಯಮೇವ ಚ।
ಆಶಾಸಿತಂ ಯತ್ತದ್ ಬ್ರೂತ ಸಾಧಯೇ ಯೋಗಮಾಯಯಾ॥ ೩೪

ಕೊಟ್ಟಿದ್ದೆವಲ್ಲದೆ, ಅವನಿಗೆ ಶರೀರಾಯಾಸವಾಗದಂತೆ ಆಯಸ್ಸನ್ನೂ ಬಯಸಿದ್ದೆವು (೨೯-೩೦). ನೀನು ಇದನ್ನರಿಯದೇ ಬ್ರಹ್ಮಹತ್ಯಾಸಮಾನವಾದ ಈ ಕಾರ್ಯವನ್ನು ಮಾಡಿದೆ. ಯೋಗೇಶ್ವರನಾದ ನಿನಗೆ 'ಬ್ರಾಹ್ಮಣೋ ನ ಹಂತವ್ಯಃ ' ಇತ್ಯಾದಿ ಶಾಸ್ತ್ರವಚನವೂ ನಿಯಾಮಕವಲ್ಲ. ಹೇ ಲೋಕಪಾವನ, ನೀನು ಸ್ವಯಂ ಪ್ರೇರಣೆಯಿಂದ ಈ ಬ್ರಹ್ಮಹತ್ಯೆಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವುದಾದರೆ ಲೋಕ ಶಿಕ್ಷಣವಾಗುತ್ತದೆ'' ಎಂದರು (೩೧-೩೨). ಆಗ ಬಲರಾಮನು ''ಮುನಿಗಳೇ, ಲೋಕಾನುಗ್ರಹದ ಕಾಮನೆಯಿಂದ ಈ ಹತ್ಯೆಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುವೆನು. ಮುಖ್ಯ ಕಲ್ಪವಾಗಿ ಇದಕ್ಕೆ ಪ್ರಾಯಶ್ಚಿತ್ತನಿಯಮವನ್ನು ವಿಧಿಸಿರಿ. ಅಲ್ಲದೆ ಈ ಸೂತನಿಗೆ ಧೀರ್ಘಾಯುಸ್ಸು, ದೇಹಬಲ, ಇಂದ್ರಿಯಪಾಟವ-ಇತ್ಯಾದಿ ಏನೇನನ್ನು ಬಯಸುವಿರೋ ಅದನ್ನು ಹೇಳಿರಿ. ಯೋಗಮಾಯಾಬಲದಿಂದ ಸಾಧಿಸಿಕೊಡುವೆನು'' ಎಂದನು (೩೩-೩೪). ಅದಕ್ಕೆ ಮುನಿಗಳು ''ಬಲರಾಮ, ನಿನ್ನ ಅಸ್ತ್ರ-ಪರಾಕ್ರಮ- ಅಸ್ತ್ರದಿಂದಾದ ಮರಣ

ಋಷಯ ಊಚುಃ -

ಅಸ್ತ್ರಸ್ಯ ತವ ವೀರ್ಯಸ್ಯ ಮೃತ್ಯೋರಸ್ಮಾಕಮೇವ ಚ ।
ಯಥಾ ಭವೇದ್ ವಚಃ ಸತ್ಯಂ ತಥಾ ರಾಮ ವಿಧೀಯತಾಮ್ ॥ ೩೫

ಶ್ರೀಭಗವಾನುವಾಚ-

ಆತ್ಮಾ ವೈ ಪುತ್ರ ಉತ್ಪನ್ನ ಇತಿ ವೇದಾನುಶಾಸನಮ್ ।
ತಸ್ಮಾದಸ್ಯ ಭವೇದ್ ವಕ್ತಾ ಆಯುರಿಂದ್ರಿಯಸತ್ತ್ವವಾನ್ ॥ ೩೬

ಕಿಂ ವಃ ಕಾಮೋ ಮುನಿಶ್ರೇಷ್ಠಾ ಬ್ರೂತಾಹಂ ಕರವಾಣ್ಯಥ ।
ಅಜಾನತಸ್ತ್ವಪಚಿತಿಂ ಯಥಾ ಮೇ ಚಿಂತ್ಯತಾಂ ಬುಧಾಃ ॥ ೩೭

ಋಷಯ ಊಚುಃ-

ಇಲ್ವಲಸ್ಯ ಸುತೋ ಘೋರೋ ಬಲ್ವಲೋ ನಾಮ ದಾನವಃ ।
ಸ ದೂಷಯತಿ ನಃ ಸತ್ರಮೇತ್ಯ ಪರ್ವಣಿ ಪರ್ವಣಿ ॥ ೩೮

ಮತ್ತು ನಮ್ಮ ವಚನ-ಇವೆಲ್ಲವೂ ಹೇಗೆ ಮಾಡಿದರೆ ಸತ್ಯವಾಗುವುದೋ ಹಾಗೆ ಮಾಡು !'' ಎಂದರು (೩೫). ಆಗ ಬಲರಾಮನು ''ಋಷಿಗಳೆ, 'ಆತ್ಮಾ ವೈ ಪುತ್ರನಾಮಾಸಿ' ಎಂಬ ವೇದವಚನದಂತೆ ತಂದೆಯೇ ಮಗನಾಗಿರುತ್ತಾನೆ. ಆದ್ದರಿಂದ ಈ ಸೂತನ ಪುತ್ರನಾದ ಉಗ್ರಶ್ರವನು ಆಯುಸ್ಸು, ಇಂದ್ರಿಯಪಾಟವ, ದೇಹಬಲಗಳಿಂದ ಯುಕ್ತನಾಗಿ ನಿಮಗೆ ಪುರಾಣ ಪ್ರವಚನಕರ್ತನಾಗಲಿ![೧] ಅಲ್ಲದೆ ಇನ್ನೇನಾದರೂ ನಿಮ್ಮ ಕಾಮನೆ ಇದ್ದರೆ ಹೇಳಿರಿ, ನಡೆಸುವೆನು. ಮತ್ತು ಈ ಬ್ರಹ್ಮಹತ್ಯೆಗೆ ಪ್ರಾಯಶ್ಚಿತ್ತವನ್ನರಿಯದ ನನಗೆ ಅದೇನೆಂದು ಆಲೋಚಿಸಿ ಹೇಳಿರಿ'' ಎಂದನು (೩೬-೩೭). ಅದಕ್ಕೆ ಮುನಿಗಳು ''ಇಲ್ವಲನ ಮಗನಾದ ಬಲ್ವಲ ಎಂಬ ಭಯಂಕರ ದಾನವನೊಬ್ಬನು ಪ್ರತಿಯೊಂದು ಪರ್ವ ಕಾಲದಲ್ಲಿಯೂ ಬಂದು

---

೧ ಹೀಗಾದರೆ- ಬಲರಾಮನು ಮಾಡಿದ ರೋಮಹರ್ಷಣನ ವಧೆಯೂ ಸತ್ಯವಾಯಿತು, ತಂದೆಯೇ ಮಗನಾದ್ದರಿಂದ ಮುನಿಗಳು ಕೊಟ್ಟಿದ್ದ ವರವೂ ಸತ್ಯವಾಯಿತು ! - ಎಂದು ಅಭಿಪ್ರಾಯ.

ತಂ ಪಾಪಂ ಜಹಿ ದಾಶಾರ್ಹ ತನ್ನಃ ಶುಶ್ರೂಷಣಂ ಪರಮ್ ।
ಪೂಯಶೋಣಿತವಿಣ್ಮೂತ್ರ ಸುರಾಮಾಂಸಾಭಿವರ್ಷಿಣಮ್ ॥ ೩೯

ತತಶ್ಚ ಭಾರತಂ ವರ್ಷಂ ಪರೀತ್ಯ ಸುಸಮಾಹಿತಃ ।
ಚರಿತ್ವಾದ್ವಾದಶ ಮಾಸಾಂಸ್ತೀರ್ಥಸ್ನಾಯೀ ವಿಶುದ್ಧ್ಯಸೇ ॥ ೪೦

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಅಷ್ಟಸಪ್ತತಿತಮಾಧ್ಯಾಯಃ

ಏಕೋನಾಶೀತಿತಮಾಧ್ಯಾಯಃ

ಶ್ರೀ ಶುಕಉವಾಚ-
ತತಃ ಪರ್ವಣ್ಯುಪಾವೃತ್ತೇ ಪ್ರಚಂಡಃ ಪಾಂಸುವರ್ಷಣಃ ।
ಭೀಮೋ ವಾಯುರಭೂದ್ ರಾಜನ್ ಪೂಯಗಂಧಸ್ತು ಸರ್ವಶಃ ॥ ೧

ನಮ್ಮ ಯಜ್ಞವನ್ನು ಕೆಡಿಸುತ್ತಿದ್ದಾನೆ. ಆತನು ಇಲ್ಲಿಗೆ ಬಂದು ಕೀವು, ರಕ್ತ, ಮಲ, ಮೂತ್ರ, ಹೆಂಡ, ಮಾಂಸಗಳನ್ನು ಸುರಿದು ಹಾಳುಮಾಡುತ್ತಿದ್ದಾನೆ. ಆ ಪಾಪಿಯನ್ನು ಸಂಹರಿಸು. ಅದೇ ನಮಗೆ ಪರಮೋಪಕಾರ (೩೮-೩೯). ಹೇ ದಾಶಾರ್ಗ, ಆಮೇಲೆ ಶಾಂತಚಿತ್ತನಾಗಿ ಹನ್ನೆರಡು ತಿಂಗಳವರೆಗೆ ಭರತಖಂಡದಲ್ಲಿ ಸುತುತ್ತ ತೀರ್ಥಸ್ನಾನಮಾಡಿದರೆ ಪರಿಶುದ್ಧನಾಗುವೆ'' ಎಂದರು (೪೦).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಪ್ಪತ್ತೆಂಟನೆಯ ಅಧ್ಯಾಯ

ಅಧ್ಯಾಯ ೭೯

ಬಲರಾಮನು ಬಲ್ವಲಾಸುರನನ್ನು ಸಂಹರಿಸಿ, ತೀರ್ಥಯಾತ್ರೆ ಮಾಡಿ ಸೂತವಧೆಯ ದೋಷವನ್ನು ಪರಿಹರಿಸಿಕೊಳ್ಳುವುದು.

ಬಳಿಕ ಪರ್ವಕಾಲವು ಸಮೀಪಿಸಿತು. ಇದ್ದಕ್ಕಿದ್ದಂತೆ ಪ್ರಚಂಡವೂ ಭೀಕರವೂ ಆದ ಬಿರುಗಾಳಿ ಬೀಸಿ ಧೂಳೆಬ್ಬಿಸಿತು. ಎಲ್ಲೆಡೆಯೂ ದುರ್ಗಂಧ ಹರಡಿತು. ಒಡನೆಯೇ ಯಜ್ಞಶಾಲೆಯಲ್ಲಿ ಬಲ್ವಲನು ತಂದ ಕಶ್ಮಲವಸ್ತುಗಳ ಮಳೆ ಸುರಿಯಿತು. ಜೊತೆಗೆ ಶೂಲಧಾರಿಯಾದ ಬಲ್ವಲನು ಕಾಣಿಸಿಕೊಂಡನು (೧-೨). ಕಾಡಿಗೆಯ

ತತೋಽಮೇಧ್ಯಮಯಂ ವರ್ಷಂ ಬಲ್ವಲೇನ ವಿನಿರ್ಮಿತಮ್ ।
ಅಭವದ್ ಯಜ್ಞಶಾಲಾಯಾಂ ಸೋಽನ್ವದೃಶ್ಯತ ಶೂಲಧೃಕ್ ॥ ೨

ತಂ ವಿಲೋಕ್ಯ ಬೃಹತ್ಕಾಯಂ ಭಿನ್ನಾಂಜನಚಯೋಪಮಮ್ ।
ತಪ್ತತಾಮ್ರಶಿಖಾಶ್ಮಶ್ರುಂ ದಂಷ್ಟ್ರೋಗ್ರಭ್ರುಕುಟೀಮುಖಮ್ ॥ ೩

ಸಸ್ಮಾರ ಮುಸಲಂ ರಾಮಃ ಪರಸೈನ್ಯ ವಿದಾರಣಮ್ ।
ಹಲಂ ಚ ದೈತ್ಯದಮನಂ ತೇ ತೂರ್ಣಮುಪತಸ್ಥತುಃ ॥ ೪

ತಮಾಕೃಷ್ಣ ಹಲಾಗ್ರೇಣ ಬಲ್ವಲಂ ಗಗನೇಚರಮ್ ।
ಮುಸಲೇನಾಹನತ್ ಕ್ರುದ್ಧೋ ಮೂರ್ಧ್ನಿ ಬ್ರಹ್ಮದ್ರುಹಂ ಬಲಃ ॥ ೫

ಸೋಽಪತದ್ ಭುವಿ ನಿರ್ಭಿನ್ನ ಲಲಾಟೋಽಸೃಕ್ ಸಮುತ್ಸೃಜನ್ ।
ಮುಂಚನ್ನಾರ್ತಸ್ವರಂ ಶೈಲೋ ಯಥಾ ವಜ್ರಹತೋಽರುಣಃ ॥ ೬

ಸಂಸ್ತುತ್ಯ ಮುನಯೋ ರಾಮಂ ಪ್ರಯುಜ್ಯಾಪಿ ತಥಾಶಿಷಃ ।
ಅಭ್ಯಷಿಂಚನ್ ಮಹಾಭಾಗಾ ವೃತ್ರಘ್ನಂ ವಿಬುಧಾ ಯಥಾ ॥ ೭

ರಾಶಿಯಂತೆ ಕಪ್ಪಾಗಿ, ಕಾಯಿಸಿದ ತಾಮ್ರದಂತೆ ಕೆಂಪಾದ ತಲೆಗೂದಲು ಗಡ್ಡ ಮೀಸೆಯುಳ್ಳವನಾಗಿ, ಕೋರೆದಾಡೆಗಳಿಂದಲೂ ಗಂಟುಹುಬ್ಬಿನಿಂದಲೂ ಉಗ್ರಮುಖವುಳ್ಳವನೂ ಬೃಹತ್ಕಾಯನೂ ಆದ ಬಲ್ವಲನನ್ನು ಬಲಭದ್ರನು ಕಂಡನು (೩). ಕೂಡಲೆ ಬಲರಾಮನು ಪರಸೈನ್ಯವಿನಾಶಕವಾದ ತನ್ನ ಮುಸಲವನ್ನೂ ದೈತ್ಯ ಧ್ವಂಸಕವಾದ ಹಲಾಯುಧವನ್ನೂ ಸ್ಮರಿಸಿಕೊಳ್ಳಲು, ಅವು ಉಪಸ್ಥಿತವಾದವು. ಕ್ರುದ್ಧನಾದ ಬಲರಾಮನು ಗಗನಚರನಾದ ಬಲ್ವಲನನ್ನು ಹಲಾಯುಧದ ತುದಿಯಿಂದ ಹಿಡಿದೆಳೆದು ಮುಸಲಾಯುಧದಿಂದ ಆ ವೇದ ವಿದ್ವೇಷಿಯ ತಲೆಯಮೇಲೆ ಬಡಿದನು (೪-೫). ಬಲ್ವಲನ ಹಣೆಯೊಡೆಯಿತು. ಅವನು ಕೆಟ್ಟದಾಗಿ ಕೂಗುತ್ತ ರಕ್ತವನ್ನು ಕಾರುತ್ತ ವಜ್ರಾಯುಧದಿಂದ ತಾಡಿತವಾದ ರಕ್ತವರ್ಣದ ಶೈಲದಂತೆ ನೆಲದಮೇಲೆ ಸತ್ತುಬಿದ್ದನು (೬). ಮಹಾತ್ಮರಾದ ಮುನಿಗಳು ಬಲರಾಮನನ್ನು ಸ್ತುತಿಸಿ ಆಶೀರ್ವಾದಮಾಡಿ, ದೇವತೆಗಳು ದೇವೇಂದ್ರನಿಗೆ ಅಭಿಷೇಕ ಮಾಡಿದಂತೆ, ತೀರ್ಥಸ್ನಾನ ಮಾಡಿಸಿದರು. ಅರಳಿದ

ವೈಜಯಂತೀಂ ದದುರ್ಮಾಲಾಂ ಶ್ರೀಧಾಮಾಮ್ಲಾನಪಂಕಜಾಮ್ ।
ರಾಮಾಯ ವಾಸಸೀ ದಿವ್ಯೇ ದಿವ್ಯಾನ್ಯಾಭರಣಾನಿ ಚ ॥ ೮

ಅಥ ತೈರಭ್ಯನುಜ್ಞಾತಃ ಕೌಶಿಕೀಮೇತ್ಯ ಬ್ರಾಹ್ಮಣೈಃ ।
ಸ್ನಾತ್ವ ಸರೋವರಮಗಾದ್ ಯತಃ ಸರಯುರಾಸ್ರವತ್ ॥ ೯

ಅನುಸ್ರೋತೇನ ಸರಯೂಂ ಪ್ರಯಾಗಮುಪಗಮ್ಯ ಸಃ ।
ಸ್ನಾತ್ವಾ ಸಂತರ್ಪ್ಯ ದೇವಾದೀನ್ ಜಗಾಮ ಪುಲಹಾಶ್ರಮಮ್ ॥ ೧೦

ಗೋಮತೀಂ ಗಂಡಕೀಂ ಸ್ನಾತ್ವಾ ವಿಪಾಶಾಂ ಶೋಣ ಆಪ್ಲುತಃ ।
ಗಯಾಂ ಗತ್ವಾ ಪಿತೄನಿಷ್ಟ್ವಾ ಗಂಗಾಸಾಗರಸಂಗಮೇ ॥ ೧೧

ಉಪಸ್ಪೃಶ್ಯ ಮಹೇಂದ್ರಾದ್ರೌ ರಾಮಂ ದೃಷ್ಟ್ವಾಭಿವಾದ್ಯ ಚ ।
ಸಪ್ತಗೋದಾವರೀಂ ವೇಣಾಂ ಪಂಪಾಂ ಭೀಮರಥೀಂ ತತಃ ॥ ೧೨

ಕಮಲಗಳಿಂದ ನಿರ್ಮಿಸಿದ ಶೋಭಾಕರವಾದ ವೈಜಯಂತೀಮಾಲೆಯನ್ನೂ ದಿವ್ಯ ವಸ್ತ್ರಗಳನ್ನೂ ದಿವ್ಯಾಭರಣಗಳನ್ನೂ ಬಲರಾಮನಿಗೆ ಕೊಟ್ಟರು (೭-೮). ತರುವಾಯ ಬಲರಾಮನು ಮುನಿಗಳನ್ನು ಬೀಳ್ಕೊಂಡು ಜೊತೆಗೆ ಬಂದಿದ್ದ ವಿಪ್ರರೊಡನೆ ಹೊರಟು, ಕೌಶಿಕೀನದಿಗೆ ಹೋಗಿ ಅಲ್ಲಿ ಸ್ನಾನಮಾಡಿ ಸರಯೂ ನದಿಯ ಮೂಲಸ್ಥಾನವಾದ ಮಾನಸಸರೋವರಕ್ಕೆ ಹೋದನು (೯). ಅಲ್ಲಿಂದ ಸರಯೂ ಪ್ರವಾಹವನ್ನನುಸರಿಸಿ ಪ್ರಯಾಗಕ್ಕೆ ಬಂದು ಸ್ನಾನಮಾಡಿ ದೇವಾದಿಗಳಿಗೆ ತರ್ಪಣವನ್ನಿತ್ತು ಪುಲಹಾಶ್ರಮಕ್ಕೆ ಹೋದನು. ಆಮೇಲೆ ಕ್ರಮವಾಗಿ ಗೋಮತೀ, ಗಂಡಕೀ, ವಿಪಾಶಾ, ಶೋಣ ನದಿಗಳಲ್ಲಿ ಸ್ನಾನಮಾಡಿ ಗಯೆಯಲ್ಲಿ ಪಿತೃದೇವತೆಗಳಿಗೆ ಶ್ರಾದ್ಧವನ್ನು ಮಾಡಿ ಗಂಗಾಸಾಗರ ಸಂಗಮವನ್ನು ಸೇರಿದನು (೧೦-೧೧). ಅಲ್ಲಿಂದು ಮಹೇಂದ್ರಗಿರಿಯಲ್ಲಿ ಪರುಶುರಾಮನನ್ನು ಕಂಡು ಅಭಿವಾದನೆ ಮಾಡಿ, ಅನುಕ್ರಮವಾಗಿ ಸಪ್ತಗೋದಾವರೀ, ವೇಣಾ, ಪಂಪಾ, ಭೀಮರಥಿಗಳನ್ನು ಸೇರಿ, ಸ್ಕಂದನನ್ನು ಸಂದರ್ಶಿಸಿ ಮಹಾದೇವನಿಗೆ ನಿಲಯವಾದ ಶ್ರೀಶೈಲಪರ್ವತಕ್ಕೆ ಹೋದನು. ಬಳಿಕ ಬಲರಾಮನು ದ್ರವಿಡದೇಶದಲ್ಲಿರುವ ಮಹಾಪುಣ್ಯಕರವಾದ ವೆಂಕಟಾದ್ರಿಯನ್ನು ಸಂದರ್ಶಿಸಿದನು (೧೨-೧೩).

ಸ್ಕಂದಂ ದೃಷ್ಟ್ವಾ ಯಯೌ ರಾಮಃ ಶ್ರೀ ಶೈಲಂ ಗಿರಿಶಾಲಯಮ್ ।
ದ್ರವಿಡೇಷು ಮಹಾಪುಣ್ಯಂ ದೃಷ್ಟ್ವಾದ್ರಿಂ ವೇಂಕಟಂ ಪ್ರಭುಃ ॥ ೧೩

ಕಾಮಕೋಷ್ಣೀಂ ಪುರೀಂ ಕಾಂಚೀಂ ಕಾವೇರೀಂ ಚ ಸರಿದ್ವರಾಮ್ ।
ಶ್ರೀರಂಗಾಖ್ಯಂ ಮಹಾಪುಣ್ಯಂ ಯತ್ರ ಸಂನಿಹಿತೋ ಹರಿಃ ॥ ೧೪

ಋಷಭಾದ್ರಿಂ ಹರೇಃ ಕ್ಷೇತ್ರಂ ದಕ್ಷಿಣಾಂ ಮಥುರಾಂ ತಥಾ ।
ಸಾಮುದ್ರಂ ಸೇತುಮಗಮನ್ಮಹಾಪಾತಕನಾಶನಮ್ ॥ ೧೫

ತತ್ರಾಯುತಮದಾದ್ ಧೇನೂರ್ಬ್ರಾಹ್ಮಣೇಭ್ಯೋ ಹಲಾಯುಧಃ ।
ಕೃತಮಾಲಾಂ ತಾಮ್ರಪರ್ಣೀಂ ಮಲಯಂ ಚ ಕುಲಾಚಲಮ್ ॥ ೧೬

ತತ್ರಾಗಸ್ತ್ಯಂ ಸಮಾಸೀನಂ ನಮಸ್ಕೃತ್ಯಾಭಿವಾದ್ಯ ಚ ।
ಯೋಜಿತಸ್ತೇನ ಚಾಶೀರ್ಭಿರನುಜ್ಞಾತೋ ಗತೋಽರ್ಣವಮ್ ।
ದಕ್ಷಿಣಂ ತತ್ರ ಕನ್ಯಾಖ್ಯಾಂ ದುರ್ಗಾಂ ದೇವೀಂ ದದರ್ಶ ಸಃ ॥ ೧೭

ತತಃ ಫಾಲ್ಗುನಮಾಸಾದ್ಯ ಪಂಚಾಪ್ಸರಸಮುತ್ತಮಮ್ ।
ವಿಷ್ಣುಃ ಸಂನಿಹಿತೋ ಯತ್ರ ಸ್ನಾತ್ವಾಸ್ಪರ್ಶದ್ ಗವಾಯುತಮ್ ॥ ೧೮

ಆಮೇಲೆ ಕಾಮಕೋಟಿ, ಕಾಂಚೀಪುರೀ, ಉತ್ತಮನದಿಯಾದ ಕಾವೇರಿ, ಶ್ರೀಹರಿಯು ಸಂನಿಹಿತನಾಗಿರುವ ಶ್ರೀರಂಗವೆಂಬ ಪುಣ್ಯಕ್ಷೇತ್ರ, ವಿಷ್ಣುಕ್ಷೇತ್ರವಾದ ವೃಷಭಾದ್ರಿ, ದಕ್ಷಿಣದ ಮಥುರೆಗಳನ್ನು ವೀಕ್ಷಿಸಿ ಮಹಾಪಾತಕ ನಾಶಕವಾದ ಸಮುದ್ರದ ಶ್ರೀರಾಮ ಸೇತುವನ್ನು ಸೇರಿದನು (೧೪-೧೫). ಅಲ್ಲಿ ಹಲಾಯುಧನು ಹತ್ತು ಸಾವಿರ ಗೋವುಗಳನ್ನು ಬ್ರಾಹ್ಮಣರಿಗೆ ದಾನಮಾಡಿದನು. ಅಲ್ಲಿಂದ ಕೃತಮಾಲಾ, ತಾಮ್ರಪರ್ಣೀ ನದಿಗಳಲ್ಲಿ ಮಿಂದು, ಕುಲಪರ್ವತವಾದ ಮಲಯಗಿರಿಗೆ ಹೋಗಿ, ಅಲ್ಲಿ ಆಸೀನರಾಗಿದ್ದ ಅಗಸ್ತ್ಯಮುನಿಗಳಿಗೆ ಅಭಿವಾದನೆಮಾಡಿ ನಮಸ್ಕರಿಸಿದನು. ಅವರ ಆಶೀರ್ವಾದಗಳನ್ನು ಪಡೆದು ಬೀಳ್ಕೊಂಡು ದಕ್ಷಿಣ ಸಮುದ್ರಕ್ಕೆ ಹೋಗಿ ಕನ್ಯಾ ಎಂಬ ಹೆಸರಿನ ದುರ್ಗಾದೇವಿಯನ್ನು ಸಂದರ್ಶಿಸಿದನು (೧೬-೧೭). ಅನಂತರ ಬಲರಾಮನು ಫಾಲ್ಗುನ ಕ್ಷೇತ್ರಕ್ಕೆ (ಅಂತಶಯನ) ಬಂದು ವಿಷ್ಣು ಸಾಂನಿಧ್ಯವುಳ್ಳ ಪಂಚಾಪ್ಸರಸ

ತತೋಽಭಿವ್ರಜ್ಯ ಭಗವಾನ್ ಕೇರಲಾಂಸ್ತು ತ್ರಿಗರ್ತಕಾನ್ ।
ಗೋಕರ್ಣಾಖ್ಯಂ ಶಿವಕ್ಷೇತ್ರಂ ಸಾಂನಿಧ್ಯಂ ಯತ್ರ ಧೂರ್ಜಟೇಃ ॥ ೧೯

ಆರ್ಯಾಂ ದ್ವೈಪಾಯನೀಂ ದೃಷ್ಟ್ವಾ ಶೂರ್ಪಾರಕಮಗಾದ್ ಬಲಃ ।
ತಾಪೀಂ ಪಯೋಷ್ಣೀಂ ನಿರ್ವಿಂಧ್ಯಾಮುಪಸ್ಪೃಶ್ಯಾಥ ದಂಡಕಮ್ ॥

ಪ್ರವಿಶ್ಯ ರೇವಾಮಗಮದ್ ಯತ್ರ ಮಾಹಿಷ್ಮತೀ ಪುರೀ ।
ಮನುತೀರ್ಥಮುಪಸ್ಪೃಶ್ಯ ಪ್ರಭಾಸಂ ಪುನರಾಗಮತ್ ॥ ೨೧

ಶ್ರುತ್ವಾ ದ್ವಿಜೈಃ ಕಥ್ಯಮಾನಂ ಕುರುಪಾಂಡವಸಂಯುಗೇ ।
ಸರ್ವರಾಜನ್ಯನಿಧನಂ ಭಾರಂ ಮೇನೇ ಹೃತಂ ಭುವಃ ॥ ೨೨

ಸ ಭೀಮದುರ್ಯೋಧನಯೋರ್ಗದಾಭ್ಯಾಂ ಯುಧ್ಯತೋರ್ಮೃಧೇ ।
ವಾರಯಿಷ್ಯನ್ ವಿನಶನಂ ಜಗಾಮ ಯದುನಂದನಃ ॥ ೨೩

ಸರೋವರವನ್ನು ತಲುಪಿ ಹತ್ತು ಸಾವಿರ ಗೋದಾನಮಾಡಿದನು. ಅಲ್ಲಿಂದ ಹೊರಟು ಕೇರಳ, ತ್ರಿಗರ್ತದೇಶಗಳನ್ನು ದಾಟಿ ಗೋಕರ್ಣವೆಂಬ ಶಿವಕ್ಷೇತ್ರಕ್ಕೆ ಹೋಗಿ, ದ್ವೈಪಾಯನಿಯೆಂಬ ಅಂಬಿಕಾದೇವಿಯನ್ನು ಸಂದರ್ಶಿಸಿ, ಶೂರ್ಪಾರಕ ಕ್ಷೇತ್ರದ ಮೂಲಕ ಸಾಗಿ ತಾಪೀ, ಪಯೋಷ್ಣೀ, ನಿರ್ವಿಂಧ್ಯೆಗಳಲ್ಲಿ ಮಿಂದು, ದಂಡಕೆಗೆ ಬಂದು, ಮಾಹಿಷ್ಮತೀ ನಗರದ ಬಳಿ ಇರುವ ರೇವಾನದಿಗೆ ಹೋಗಿ ಸೇರಿದನು. ಆಮೇಲೆ ಮನು ತೀರ್ಥದಲ್ಲಿ ಸ್ನಾನಮಾಡಿ ಪ್ರಭಾಸಕ್ಷೇತ್ರಕ್ಕೆ ಮತ್ತೆ ಮರಳಿ ಬಂದನು (೧೮-೨೧). ಅಲ್ಲಿಗೆ ಬಂದಾಗ ಕೌರವರಿಗೂ ಪಾಂಡವರಿಗೂ ನಡೆದ ಯುದ್ಧದಲ್ಲಿ ಸಕಲ ಕ್ಷತ್ರಿಯರೂ ಮಡಿದರೆಂದು ಯಾತ್ರಿಕರಾದ ಬ್ರಾಹ್ಮಣರು ಹೇಳುತ್ತಿದ್ದ ಸುದ್ದಿಯನ್ನು ಕೇಳಿ, ಭೂಭಾರವು ತಗ್ಗಿತೆಂದು ತಿಳಿದುಕೊಂಡನು (೨೨). ಆಗ ಭೀಮಸೇನನಿಗೂ ದುರ್ಯೋಧನನಿಗೂ ಗದಾಯುದ್ಧವು ನಡೆಯುತ್ತದೆಂಬುದನ್ನು ಕೇಳಿ, ಅದನ್ನು ತಪ್ಪಿಸಬೇಕೆಂದು ಬಲಭದ್ರನು ಕುರುಕ್ಷೇತ್ರಕ್ಕೆ ಹೋದನು. ಅವನನ್ನು ಕಂಡ ಕೂಡಲೆ ಯುಧಿಷ್ಠಿರನೂ ನಕುಲ ಸಹದೇವರೂ ಕೃಷ್ಣಾರ್ಜುನರೂ ನಮಸ್ಕರಿಸಿ 'ಇವನು ಏನು ಹೇಳಬೇಕೆಂದು ಇಲ್ಲಿಗೆ ಬಂದಿರುವನೋ !' ಎಂದು ಆಲೋಚಿಸುತ್ತ ಎಲ್ಲರೂ ಸುಮ್ಮನಿದ್ದರು (೨೩-೨೪). ರೋಷಾವಿಷ್ಟರಾದ ಭೀಮ ದುರ್ಯೋಧನರು ಗದಾಪಾಣಿಗಳಾಗಿ

ಯುಧಿಷ್ಠಿರಸ್ತು ತಂ ದೃಷ್ಟ್ವಾ ಯಮೌ ಕೃಷ್ಣಾರ್ಜುನಾವಪಿ ।
ಅಭಿವಾದ್ಯಾಭವಂಸ್ತೂಷ್ಣೀಂ ಕಿಂವಿವಕ್ಷುರಿಹಾಗತಃ ॥ ೨೪

ಗದಾಪಾಣೀ ಉಭೌ ದೃಷ್ಟ್ವಾ ಸಂರಬ್ಧೌ ವಿಜಯೈಷಿಣೌ ।
ಮಂಡಲಾನಿ ವಿಚಿತ್ರಾಣಿ ಚರಂತಾವಿದಮಬ್ರವೀತ್ ॥ ೨೫

ಯುವಾಂ ತುಲ್ಯಬಲೌ ವೀರೌ ಹೇ ರಾಜನ್ ಹೇ ವೃಕೋದರ ।
ಏಕಂ ಪ್ರಾಣಾಧಿಕಂ ಮನ್ಯೇ ಉತೈಕಂ ಶಿಕ್ಷಯಾಧಿಕಮ್ ॥ ೨೬

ತಸ್ಮಾದೇಕತರಸ್ಯೇಹ ಯುವಯೋಃ ಸಮವೀರ್ಯಯೋಃ ।
ನ ಲಕ್ಷ್ಯತೇ ಜಯೋಽನ್ಯೋ ವಾ ವಿರಮತ್ವಫಲೋ ರಣಃ ॥ ೨೭

ನ ತದ್ವಾಕ್ಯಂ ಜಗೃಹತುರ್ಬದ್ಧವೈರೌ ನೃಪಾರ್ಥವತ್ ।
ಅನುಸ್ಮರಂತಾವನ್ಯೋನ್ಯಂ ದುರುಕ್ತಂ ದುಷ್ಕೃತಾನಿ ಚ ॥ ೨೮

ದಿಷ್ಟಂ ತದನುಮನ್ವಾನೋ ರಾಮೋ ದ್ವಾರವತೀಂ ಯಯೌ ।
ಉಗ್ರಸೇನಾದಿಭಿಃ ಪ್ರೀತೈರ್ಜ್ಞಾತಿಭಿಃ ಸಮುಪಾಗತಃ ॥ ೨೯

ವಿಜಯಾಪೇಕ್ಷೆಯಿಂದ ನಾನಾ ಬಗೆಯಲ್ಲಿ ಮಂಡಲಾಕಾರವಾಗಿ ಸುತ್ತುತ್ತಿರುವುದನ್ನು ನೋಡಿ ಬಲಭದ್ರನು ಹೀಗೆಂದನು (೨೫) : ''ಹೇ ದುರ್ಯೋಧನ, ಹೇ ಭೀಮಸೇನ, ನೀವಿಬ್ಬರೂ ಪರಾಕ್ರಮಿಗಳು. ಬಲದಲ್ಲಿ ಸಮಾನರೇ ಸರಿ. ಒಬ್ಬನು ದೇಹಶಕ್ತಿಯಲ್ಲಿ ಅಧಿಕನಾದರೆ, ಇನ್ನೊಬ್ಬನು ವಿದ್ಯಾಶಿಕ್ಷಣದಲ್ಲಿ ಅಧಿಕನೆಂದು ನಾನು ಬಲ್ಲೆನು. ಆದ್ದರಿಂದ ಒಟ್ಟಿನಲ್ಲಿ ಸಮಕಕ್ಷಿಗಳಾದ ನಿಮ್ಮಿಬ್ಬರಲ್ಲಿ ಒಬ್ಬನಿಗೆ ಜಯವಾದೀತೆಂದು ತೋರುವುದಿಲ್ಲ. ಯುದ್ಧವು ವ್ಯರ್ಥ, ಸಾಕು '' ಎಂದನು (೨೬-೨೭). ಆದರೆ ಪರೀಕ್ಷಿತ, ಬದ್ಧ ವೈರಿಗಳಾದ ಭೀಮ ದುರ್ಯೋಧನರು ಬಲರಾಮನ ಅರ್ಥವತ್ತಾದ ಆ ಮಾತನ್ನು ನಡೆಸಲಿಲ್ಲ. ಅನ್ಯೋನ್ಯವಾಗಿ ಆಡಿದ್ದ ದುರ್ವಚನಗಳನ್ನೂ ದುಷ್ಕೃತಿಗಳನ್ನೂ ಸ್ಮರಿಸಿಕೊಳ್ಳುತ್ತ ಅವರಿಬ್ಬರೂ ಹೋರಾಟವನ್ನು ಮುಂದುವರಿಸಿದರು (೨೮). ತನ್ನ ಮಾತು ನಡೆಯದಿರುವುದನ್ನು ಕಂಡು ಬಲರಾಮನು ''ದೈವ ಹೀಗಿದೆ'' ಎಂದುಕೊಂಡು ದ್ವಾರಕೆಗೆ ತೆರಳಿದನು. ಉಗ್ರಸೇನನೇ ಮೊದಲಾದ ಬಂಧುಗಳು ಸಂತೋಷದಿಂದ

ತಂ ಪುನರ್ನೈಮಿಷಂ ಪ್ರಾಪ್ತಮೃಷಯೋಽಯಾಜಯನ್ ಮುದಾ।
ಕ್ರತ್ವಂಗಂ ಕ್ರತುಭಿಃ ಸರ್ವೈರ್ನಿವೃತ್ತಾಖಿಲವಿಗ್ರಹಮ್ ॥ ೩೦

ತೇಭ್ಯೋ ವಿಶುದ್ಧವಿಜ್ಞಾನಂ ಭಗವಾನ್ ವ್ಯತರದ್ ವಿಭುಃ।
ಯೇನೈವಾತ್ಮನ್ಯದೋ ವಿಶ್ವಮಾತ್ಮಾನಂ ವಿಶ್ವಗಂ ವಿದುಃ ॥ ೩೧

ಸ್ವಪತ್ನ್ಯಾವಭೃಥಸ್ನಾತೋ ಜ್ಞಾತಿಬಂಧುಸುಹೃದ್ವೃತಃ।
ರೇಜೇ ಸ್ವಜ್ಯೋತ್ಸ್ನಯೇವೇಂದುಃ ಸುವಾಸಾಃ ಸುಷ್ಠ್ವಲಂಕೃತಃ ॥

ಈದೃಗ್ವಿಧಾನ್ಯಸಂಖ್ಯಾನಿ ಬಲಸ್ಯ ಬಲಶಾಲಿನಃ।
ಅನಂತಸ್ಯಾಪ್ರಮೇಯಸ್ಯ ಮಾಯಾಮರ್ತ್ಯಸ್ಯ ಸಂತಿ ಹಿ ॥ ೩೩

ಅವನನ್ನು ಸ್ವಾಗತಿಸಿದರು (೨೯). ಬಲರಾಮನು ಪುನಃ ನೈಮಿಷಾರಣ್ಯಕ್ಕೆ ಹೋದನು. ಅಲ್ಲಿದ್ದ ಋಷಿಗಳು ಆನಂದದಿಂದ ಬರಮಾಡಿಕೊಂಡು ಯಜ್ಞಮೂರ್ತಿಯೂ ಸಕಲ ಯುದ್ಧಗಳಿಂದ[1] ನಿವೃತ್ತನೂ ಆದ ಬಲಭದ್ರನಿಂದ ಸಮಸ್ತಯಜ್ಞಗಳನ್ನೂ ಮಾಡಿಸಿದರು (೩೦). ಆಗ ಭಗವಾನ್ ಬಲಭದ್ರನು, ಯಾವುದರಿಂದ ಈ ದೃಶ್ಯ ಪ್ರಪಂಚವನ್ನೂ ಈ ಪ್ರಪಂಚದಲ್ಲಿ ಅನುಸ್ಯೂತನಾದ ಆತ್ಮನನ್ನೂ ತಮ್ಮಲ್ಲಿಯೇ ತಿಳಿಯಬಲ್ಲರೋ ಅಂತಹ ವಿಶುದ್ಧವಿಜ್ಞಾನವನ್ನು ಅವರಿಗೆ ಉಪದೇಶಿಸಿದನು (೩೧). ಬಳಿಕ ತನ್ನ ಪತ್ನಿಯಾದ ರೇವತಿಯೊಡನೆ ಅವಭೃಥಸ್ನಾನಮಾಡಿ ದಿವ್ಯ ವಸ್ತ್ರಾಲಂಕಾರಗಳನ್ನು ಧರಿಸಿದ ಬಲರಾಮನು, ಬೆಳದಿಂಗಳಿನಿಂದ ಸಹಿತನಾದ ಚಂದ್ರನಂತೆ ಕಂಗೊಳಿಸಿದನು (೩೨). ಪರೀಕ್ಷಿತರಾಜ, ಅನಂತನೂ ಅಪ್ರಮೇಯನೂ ಮಾಯಾಮಾನುಷ ವಿಗ್ರಹನೂ ಬಲಶಾಲಿಯೂ ಆದ ಬಲಭದ್ರನ ಈ ಬಗೆಯ ಚರಿತೆಗಳು ಅಸಂಖ್ಯಾತವಾಗಿವೆ. ಅದ್ಭುತ ಚರಿತನಾದ ಆತನ ಕಾರ್ಯಗಳನ್ನು ಪ್ರತಿದಿನ ಪ್ರಾತಃ ಸಾಯಂಕಾಲಗಳಲ್ಲಿ

---

೧ ಮೂಲದಲ್ಲಿರುವ 'ನಿವೃತ್ತಾಖಿಲವಿಗ್ರಹಂ' ಎಂಬಲ್ಲಿ ವಿಗ್ರಹ ಶಬ್ದಕ್ಕೆ ನಾನಾರ್ಥಗಳಿರುವುದರಿಂದ ಮತ್ತು ಸಮಾಸಭೇದದಿಂದ, ಶರೀರವಿಲ್ಲದ ನಿರಾಕಾರನೆಂದೂ ಭ್ರಮರಹಿತನೆಂದೂ ಭ್ರಮೆಯನ್ನು ಹೋಗಲಾಡಿಸತಕ್ಕವನೆಂದೂ ಅರ್ಥ ಹೇಳಬಹುದು.

ಯೋಽನುಸ್ಮರೇತ ರಾಮಸ್ಯ ಕರ್ಮಾಣ್ಯದ್ಭುತಕರ್ಮಣಃ ।
ಸಾಯಂ ಪ್ರಾತರನಂತಸ್ಯ ವಿಷ್ಣೋಃ ಸ ದಯಿತೋ ಭವೇತ್ ॥ ೩೪

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಏಕೋನಾಶೀತಿತಮಾಧ್ಯಾಯಃ

ಅಶೀತಿತಮಾಧ್ಯಾಯಃ

ರಾಜೋವಾಚ-
ಭಗವಾನ್ ಯಾನಿ ಚಾನ್ಯಾನಿ ಮುಕುಂದಸ್ಯ ಮಹಾತ್ಮನಃ ।
ವೀರ್ಯಾಣ್ಯನಂತವೀರ್ಯಸ್ಯ ಶ್ರೋತುಮಿಚ್ಛಾಮಹೇ ಪ್ರಭೋ ॥೧

ಕೋ ನು ಶ್ರುತ್ವಾಸಕೃದ್ ಬ್ರಹ್ಮನ್ನುತ್ತಮಶ್ಲೋಕಸತ್ಕಥಾಃ ।
ವಿರಮೇತ ವಿಶೇಷಜ್ಞೋ ವಿಷಣ್ಣಃ ಕಾಮಮಾರ್ಗಣೈಃ ॥ ೨

ಸಾ ವಾಗ್ ಯಯಾ ತಸ್ಯ ಗುಣಾನ್ ಗೃಣೀತೇ
ಕರೌ ಚ ತತ್ಕರ್ಮಕರೌ ಮನಶ್ಚ ।
ಸ್ಮರೇದ್ ವಸಂತಂ ಸ್ಥಿರಜಂಗಮೇಷು
ಶೃಣೋತಿ ತತ್ಪುಣ್ಯಕಥಾಃ ಸ ಕರ್ಣಃ ॥ ೩

ಯಾವಾತನು ಸ್ಮರಿಸುವನೋ ಆತನು ಅನಂತನಾದ ಶ್ರೀಮನ್ನಾರಾಯಣನಿಗೆ ಪ್ರೀತಿಪಾತ್ರನಾಗುವನು (೩೩-೩೪).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಪ್ಪತ್ತೊಂಬತ್ತನೆಯ ಅಧ್ಯಾಯ

ಅಧ್ಯಾಯ ೮೦

ಕುಚೇಲನು ಶ್ರೀಕೃಷ್ಣನ ಅರಮನೆಗೆ ಬರುವುದು. ಅವನಿಗೆ ಶ್ರೀಕೃಷ್ಣನಿಂದ ಸತ್ಕಾರ

ಪರಿಕ್ಷೀತನು ಹೇಳಿದನು : "ಸ್ವಾಮಿ-ಮಹರ್ಷಿಗಳೆ, ಅನಂತವೀರ್ಯನೂ ಮಹಾತ್ಮನೂ ಆದ ಮುಕುಂದನ ಇನ್ನಿತರ ಅದ್ಭುತ ಚರಿತೆಗಳನ್ನು ಕೇಳಲು ಬಯಸುತ್ತೇನೆ. ಕಾಮಶರಗಳಿಂದ ಬಳಲಿ ನೊಂದಿರುವ ಯಾವ ಸಾರಜ್ಞನು ತಾನೇ ಉತ್ತಮ ಶ್ಲೋಕನ ದಿವ್ಯ ಚರಿತೆಗಳನ್ನು ಎಷ್ಟು ಕೇಳಿದರೂ ಸಾಕೆಂದು

ಶಿರಸ್ತು ತಸ್ಯೋಭಯಲಿಂಗಮಾನಮೇ-
ತ್ತದೇವ ಯತ್ ಪಶ್ಯತಿ ತದ್ಧಿ ಚಕ್ಷುಃ ।
ಅಂಗಾನಿ ವಿಷ್ಣೋರಥ ತಜ್ಜನಾನಾಂ
ಪಾದೋದಕಂ ಯಾನಿ ಭಜಂತಿ ನಿತ್ಯಮ್ ॥ ೪

ಸೂತ ಉವಾಚ-

ವಿಷ್ಣುರಾತೇನ ಸಂಪೃಷ್ಟೋ ಭಗವಾನ್ ಬಾದರಾಯಣಿಃ ।
ವಾಸುದೇವೇ ಭಗವತಿ ನಿಮಗ್ನಹೃದಯೋಽಬ್ರವೀತ್ ॥ ೫

ಶ್ರೀಶುಕ ಉವಾಚ-

ಕೃಷ್ಣಸ್ಯಾಸೀತ್ ಸಖಾ ಕಶ್ಚಿದ್ ಬ್ರಾಹ್ಮಣೋ ಬ್ರಹ್ಮವಿತ್ತಮಃ ।
ವಿರಕ್ತ ಇಂದ್ರಿಯಾರ್ಥೇಷು ಪ್ರಶಾಂತಾತ್ಮಾ ಜಿತೇಂದ್ರಿಯಃ ॥ ೬

ಯದೃಚ್ಛಯೋಪಪನ್ನೇನ ವರ್ತಮಾನೋ ಗೃಹಾಶ್ರಮೀ ।
ತಸ್ಯ ಭಾರ್ಯಾ ಕುಚೈಲಸ್ಯ ಕ್ಷುತ್ಕ್ಷಾಮಾ ಚ ತಥಾವಿಧಾ ॥ ೭

ತೃಪ್ತನಾದನು? (೧-೨). ಯಾವುದು ಭಗವಂತನ ಗುಣಗಳನ್ನು ಹೊಗಳುವುದೋ ಅದೇ ವಾಣಿ. ಆತನ ಸೇವೆ ಮಾಡತಕ್ಕವೇ ಕೈಗಳು. ಸ್ಥಾವರ ಜಂಗಮಗಳಲ್ಲಿ ನೆಲೆಸಿರುವ ಆತನನ್ನು ಸ್ಮರಿಸಿಕೊಳ್ಳತಕ್ಕದ್ದೇ ಮನಸ್ಸು. ಭಗವಂತನ ಪುಣ್ಯಕಥೆಗಳನ್ನು ಕೇಳತಕ್ಕದ್ದೇ ಕಿವಿಯೆನಿಸುವುದು (೩). ಸ್ಥಾವರ ಜಂಗಮಗಳೆರಡೂ ಆತನ ರೂಪವೆಂದು ಯಾವುದು ಬಾಗುವುದೋ ಅದೇ ಶಿರಸ್ಸು. ಆ ಎರಡೂ ಭಗವದ್ರೂಪಗಳೆಂದು ನೋಡತಕ್ಕದ್ದೇ ಕಣ್ಣು. ವಿಷ್ಣುವಿನ ಮತ್ತು ವಿಷ್ಣುಭಕ್ತರ ಪಾದೋದಕವನ್ನು ಪಡೆಯತಕ್ಕವೇ ಅಂಗಗಳು (೪). ಹೀಗೆ ಪರೀಕ್ಷಿತನು ಕೇಳಲಾಗಿ ಬಾದರಾಯಣಪುತ್ರರಾದ ಶುಕಮುನಿಗಳು ವಾಸುದೇವನನ್ನು ಧ್ಯಾನಿಸುತ್ತ ಹೇಳಿದರು: ರಾಜ, ಶ್ರೀಕೃಷ್ಣನಿಗೆ ಬ್ರಹ್ಮಜ್ಞಾನಿಯಾದ ಕುಚೇಲನೆಂಬ ಬ್ರಾಹ್ಮಣನು ಮಿತ್ರನಾಗಿದ್ದನು. ಅವನು ಜಿತೇಂದ್ರಿಯ; ವಿಷಯ ಸುಖಗಳಲ್ಲಿ ವಿರಕ್ತ; ಸದಾ ಶಾಂತ ಸ್ವಭಾವದವನು. ತಾನಾಗಿ ದೊರಕಿದಷ್ಟರಿಂದ ತೃಪ್ತಿಪಡುವ ಗೃಹಸ್ಥ. ಕುಚೇಲನ ಮಡದಿಯೂ ಅದೇ ಸ್ವಭಾವದವಳು.

ಪತಿವ್ರತಾ ಪತಿಂ ಪ್ರಾಹ ಮ್ಲಾಯತಾ ವದನೇನ ಸಾ ।
ದರಿದ್ರಾ ಸೀದಮಾನಾ ಸಾ ವೇಪಮಾನಾಭಿಗಮ್ಯ ಚ ॥ ೮

ನನು ಬ್ರಹ್ಮನ್ ಭಗವತಃ ಸಖಾ ಸಾಕ್ಷಾಚ್ಛ್ರಿಯಃ ಪತಿಃ ।
ಬ್ರಹ್ಮಣ್ಯಶ್ಚ ಶರಣ್ಯಶ್ಚ ಭಗವಾನ್ ಸಾತ್ವತರ್ಷಭಃ ॥ ೯

ತಮುಪೈಹಿ ಮಹಾಭಾಗ ಸಾಧೂನಾಂ ಚ ಪರಾಯಣಮ್ ।
ದಾಸ್ಯತಿ ದ್ರವಿಣಂ ಭೂರಿ ಸೀದತೇ ತೇ ಕುಟುಂಬಿನೇ ॥ ೧೦

ಆಸ್ತೇಽಧುನಾ ದ್ವಾರವತ್ಯಾಂ ಭೋಜವೃಷ್ಣ್ಯಂಧಕೇಶ್ವರಃ ।
ಸ್ಮರತಃ ಪಾದಕಮಲಮಾತ್ಮಾನಮಪಿ ಯಚ್ಛತಿ ।
ಕಿಂನ್ವರ್ಥಕಾಮಾನ್ ಭಜತೋ ನಾತ್ಯಭೀಷ್ಟಾನ್ ಜಗದ್ಗುರುಃ ॥ ೧೧

ಸ ಏವಂ ಭಾರ್ಯಯಾ ವಿಪ್ರೋ ಬಹುಶಃ ಪ್ರಾರ್ಥಿತೋ ಮೃದು ।
ಅಯಂ ಹಿ ಪರಮೋ ಲಾಭ ಉತ್ತಮಶ್ಲೋಕದರ್ಶನಮ್ ॥ ೧೨

ಹಸಿವಿನಿಂದ ಕೃಶಳಾಗಿದ್ದಳು (೫-೭). ಬಡತನದಲ್ಲಿ ನೊಂದು ಬೆಂದ ಆ ಪತಿವ್ರತೆಯು ಒಂದು ಸಲ ಪತಿಯ ಬಳಿಗೆ ಬಂದು ಬಾಡಿದ ಮುಖದಿಂದ ಹೇಳಿದಳು. ಹೇಳುವಾಗ ಅವಳ ದೇಹವು ನಡುಗುತ್ತಿತ್ತು. ''ಓ ಬ್ರಾಹ್ಮಣ, ನೀನು ಭಗವಂತನ ಸ್ನೇಹಿತನಲ್ಲವೆ ? ಆತನು ಸಾಕ್ಷಾತ್ ಲಕ್ಷ್ಮೀಪತಿಯಾಗಿದ್ದಾನೆ. ಆ ಯಾದವೋತ್ತಮನು ಬ್ರಹ್ಮಣ್ಯನೆಂದೂ ಶರಣ್ಯನೆಂದೂ ಖ್ಯಾತನಾಗಿದ್ದಾನೆ. (೮-೯). ಸಾಧುಜನರಿಗೆ ಗತಿಯಾಗಿರುವ ಆ ಶ್ರೀಕೃಷ್ಣನ ಬಳಿಗೆ ಹೋಗಿ ಬಾ. ಬಡತನದಿಂದ ಬಳಲುತ್ತಿರುವ ಕುಟುಂಬಿಯಾದ ನಿನಗೆ ಬೇಕಾದಷ್ಟು ಧನ ಸಹಾಯವನ್ನು ಮಾಡುವನು. ಭೋಜ-ವೃಷ್ಣಿ-ಅಂಧಕರಿಗೆ ಅಧೀಶ್ವರನಾದ ಶ್ರೀಕೃಷ್ಣನು ಈಗ ದ್ವಾರಾವತಿಯಲ್ಲಿ ಇದ್ದಾನೆ. ತನ್ನ ಪಾದಕಮಲವನ್ನು ಸ್ಮರಿಸತಕ್ಕವರಿಗೆ ತನ್ನನ್ನಾದರೂ ಅರ್ಪಿಸಿ ಬಿಡತಕ್ಕವನು ಆತ. ಹೀಗಿರುವಾಗ ಭಕ್ತರು ಬಯಸುವಷ್ಟು ಧನವನ್ನು ಕೊಡದೆ ಇರುತ್ತಾನೆಯೆ ?'' ಎಂದಳು (೧೦-೧೧). ಹೀಗೆ ಪತ್ನಿಯು ಮತ್ತೆ ಮತ್ತೆ ಮೃದುವಾಗಿ ಬೇಡಿಕೊಳ್ಳಲು ಆ ವಿಪ್ರನು ಮನಸ್ಸಿನಲ್ಲಿ ''ನಾನು ಹೋದರೆ ಭಗವಂತನ ದರ್ಶನವಾಗುವುದಲ್ಲವೆ ? ಅದೇ ನನಗೆ

ಇತಿ ಸಂಚಿಂತ್ಯ ಮನಸಾ ಗಮನಾಯ ಮತಿಂ ದಧೇ ।
ಅಪ್ಯಸ್ತ್ಯುಪಾಯನಂ ಕಿಂಚಿದ್ ಗೃಹೇ ಕಲ್ಯಾಣಿ ದೀಯತಾಮ್ ॥ ೧೩

ಯಾಚಿತ್ವಾ ಚತುರೋ ಮುಷ್ಟೀನ್ ವಿಪ್ರಾನ್ ಪೃಥುಕತುಂಡುಲಾನ್ ।
ಚೈಲಖಂಡೇನ ತಾನ್ ಬದ್ಧ್ವಾ ಭರ್ತ್ರೇ ಪ್ರಾದಾದುಪಾಯನಮ್ ॥ ೧೪

ಸ ತಾನಾದಾಯ ವಿಪ್ರಾಗ್ರ್ಯಃ ಪ್ರಯಯೌ ದ್ವಾರಕಾಂ ಕಿಲ ।
ಕೃಷ್ಣಸಂದರ್ಶನಂ ಮಹ್ಯಂ ಕಥಂ ಸ್ಯಾದಿತಿ ಚಿಂತಯನ್ ॥ ೧೫

ತ್ರೀಣಿ ಗುಲ್ಮಾನ್ಯತೀಯಾಯ ತಿಸ್ರಃ ಕಕ್ಷಾಶ್ಚ ಸ ದ್ವಿಜಃ ।
ವಿಪ್ರೋಽಗಮ್ಯಾಂಧಕವೃಷ್ಣೀನಾಂ ಗೃಹೇಷ್ವಚ್ಯುತಧರ್ಮಿಣಾಮ್ ॥ ೧೬

ಗೃಹಂ ದ್ವ್ಯಷ್ಟಸಹಸ್ರಾಣಾಂ ಮಹಿಷೀಣಾಂ ಹರೇರ್ದ್ವಿಜಃ ।
ವಿವೇಶೈಕತಮಂ ಶ್ರೀಮದ್ ಬ್ರಹ್ಮಾನಂದಂ ಗತೋ ಯಥಾ ॥ ೧೭

ಪರಮಲಾಭ ! '' ಎಂದಾಲೋಚಿಸಿ ಹೋಗಲು ನಿರ್ಧರಿಸಿದನು. ಹೀಗೆ ನಿರ್ಧರಿಸಿ ಕುಚೇಲನು ಪತ್ನಿಯನ್ನು ಕರೆದು ''ಸೌಮ್ಯೆ, ಶ್ರೀಕೃಷ್ಣನಿಗೆ ಕಾಣಕೆಯಾಗಿ ಕೊಡುವುದಕ್ಕೆ ಮನೆಯಲ್ಲೇನಾದರೂ ಇದ್ದರೆ ಕೊಡು! '' ಎಂದನು (೧೨-೧೩). ಅವಳು ಕೆಲವು ವಿಪ್ರರ ಮನೆಗೆ ಹೋಗಿ ಭಿಕ್ಷೆಬೇಡಿ ನಾಲ್ಕು ಮುಷ್ಟಿ ಅವಲಕ್ಕಿಯನ್ನು ತಂದು ಬಟ್ಟೆಯ ತುಂಡಿನಲ್ಲಿ ಕಟ್ಟಿ ಇದು ಕಾಣಕೆಯೆಂದು ಗಂಡನ ಕೈಗೆ ಕೊಟ್ಟಳು. ಆ ವಿಪ್ರೋತ್ತಮನು ಅದನ್ನು ತೆಗೆದುಕೊಂಡು ದ್ವಾರಕೆಗೆ ಹೋದನು. ಶ್ರೀಕೃಷ್ಣನ ದರ್ಶನ ನನಗೆ ಹೇಗಾದೀತು- ಎಂಬುದೇ ಅವನ ಚಿಂತೆಯಾಗಿತ್ತು (೧೪-೧೫). ಆತನು ಮೂರು ಸೇನಾನಿವೇಶಗಳನ್ನೂ ಮೂರು ಪ್ರಾಕಾರಗಳನ್ನೂ ದಾಟಿ ನಗರದೊಳಗೆ ಹೋದನು. ಅಲ್ಲಿ ಹೋಗಿ ನೋಡಲು ಅಶಕ್ಯರೂ ವಿಷ್ಣುಭಕ್ತರೂ ಆದ ಅಂಧಕ ವೃಷ್ಣಿಗಳ ಭವನಗಳಿದ್ದವು. ಅವುಗಳ ನಡುವೆ ಶ್ರೀಹರಿಯ ಹದಿನಾರು ಸಾವಿರ ಮಹಿಷಿಯರ ಭವನಗಳಿದ್ದವು. ಅವುಗಳಲ್ಲಿ ವೈಭವಯುಕ್ತವಾದ ಒಂದು ಗೃಹವನ್ನು ಕುಚೇಲನು ಪ್ರವೇಶಿಸಿ ಬಿಟ್ಟನು! ಅವನಿಗೆ ಬ್ರಹ್ಮಾನಂದವೇ ದೊರಕಿದಂತಾಗಿತ್ತು! (೧೬-೧೭).

ತಂ ವಿಲೋಕ್ಯಾಚ್ಯುತೋ ದೂರಾತ್ ಪ್ರಿಯಾಪರ್ಯಂಕಮಾಸ್ಥಿತಃ ।
ಸಹಸೋತ್ಥಾಯ ಚಾಭ್ಯೇತ್ಯ ದೋರ್ಭ್ಯಾಂ ಪರ್ಯಗ್ರಹೀನ್ಮುದಾ ॥ ೧೮

ಸಖ್ಯುಃ ಪ್ರಿಯಸ್ಯ ವಿಪ್ರರ್ಷೇರಂಗಸಂಗಾತಿನಿರ್ವೃತಃ ।
ಪ್ರೀತೋ ವ್ಯಮುಂಚದಬ್ಬಿಂದೂನ್ ನೇತ್ರಾಭ್ಯಾಂ ಪುಷ್ಕರೇಕ್ಷಣಃ ॥ ೧೯

ಅಥೋಪವೇಶ್ಯ ಪರ್ಯಂಕೇ ಸ್ವಯಂ ಸಖ್ಯುಃ ಸಮರ್ಹಣಮ್ ।
ಉಪಹೃತ್ಯಾವನಿಜ್ಯಾಸ್ಯ ಪಾದೌ ಪಾದಾವನೇಜನೀಃ ॥ ೨೦

ಅಗ್ರಹೀಚ್ಛಿರಸಾ ರಾಜನ್ ಭಗವಾನ್ ಲೋಕಪಾವನಃ ।
ವ್ಯಲಿಂಪದ್ ದಿವ್ಯಗಂಧೇನ ಚಂದನಾಗುರುಕುಂಕುಮೈಃ ॥ ೨೧

ಧೂಪೈಃ ಸುರಭಿಭಿರ್ಮಿತ್ರಂ ಪ್ರದೀಪಾವಲಿಭಿರ್ಮುದಾ ।
ಅರ್ಚಿತ್ವಾಽಽವೇದ್ಯ ತಾಂಬೂಲಂ ಗಾಂ ಚ ಸ್ವಾಗತಮಬ್ರವೀತ್ ॥ ೨೨

ಕಾಂತೆಯಾದ ರುಕ್ಮಿಣಿಯೊಡನೆ ಪೀಠದಲ್ಲಿ ಮಂಡಿಸಿದ್ದ ಶ್ರೀಕೃಷ್ಣನಿಗೆ ದೂರದಲ್ಲಿ ಕುಚೇಲನು ಕಾಣಿಸಿದನು ಕೂಡಲೇ ಆತನು ಪೀಠದಿಂದ ಎದ್ದುಬಂದು ಆನಂದಿಸುತ್ತ ಆ ಬ್ರಾಹ್ಮಣನನ್ನು ಎರಡು ಕೈಗಳಿಂದಲೂ ಅಪ್ಪಿಕೊಂಡನು. ಪ್ರಿಯಮಿತ್ರನೂ ಬ್ರಹ್ಮರ್ಷಿಯೂ ಆದ ಕುಚೇಲನ ಅಂಗಸಂಗದಿಂದ ಶ್ರೀಕೃಷ್ಣನಿಗೆ ಪರಮಾನಂದವಾಯಿತು. ಆ ಕಮಲೇಕ್ಷಣನ ಕಣ್ಣುಗಳಿಂದ ಆನಂದಬಾಷ್ಪಗಳು ಉದುರಿದವು (೧೮-೧೯). ಆಮೇಲೆ ಶ್ರೀಕೃಷ್ಣನು ಕುಚೇಲನನ್ನು ತನ್ನ ಪೀಠದಲ್ಲಿ ಕುಳ್ಳಿರಿಸಿ, ಸೇವಾಸಾಮಾಗ್ರಿಗಳನ್ನು ಗೆಳೆಯನಿಗಾಗಿ ತಾನೇ ತಂದು ಅವನ ಪಾದಗಳನ್ನು ತೊಳೆದನು. ಲೋಕಪಾವನನಾದ ಭಗವಂತನು, ಪರೀಕ್ಷಿತ, ಆ ಪಾದೋದಕವನ್ನು ತನ್ನ ತಲೆಯಮೇಲೆ ಪ್ರೋಕ್ಷಿಸಿಕೊಂಡನು! ದಿವ್ಯ ಗಂಧವನ್ನು ಬಳಿದು ಚಂದನಾಗರು ಕುಂಕುಮಗಳನ್ನರ್ಪಿಸಿದನು (೨೦-೨೧). ಸುಗಂಧಿಯಾದ ಧೂಪವನ್ನು ಹಚ್ಚಿ, ಮಿತ್ರನಿಗೆ ಆರತಿಯಿಂದ ಬೆಳಗಿ ಪೂಜಿಸಿ, ತಾಂಬೂಲವನ್ನು ಗೋವನ್ನೂ ಸಮರ್ಪಿಸಿ, ಸ್ವಾಗತವನ್ನು ಹೇಳಿದನು. ಹರಕು ಬಟ್ಟೆಯನ್ನುಟ್ಟುಕೊಳೆಕೊಳೆಯಾಗಿ ನರಗಳು ಹೊರಗೆ ಚಾಚಿಕೊಂಡು ಕೃಶನಾಗಿದ್ದ

ಕುಚೈಲಂ ಮಲಿನಂ ಕ್ಷಾಮಂ ದ್ವಿಜಂ ಧಮನಿಸಂತತಮ್ ।
ದೇವೀ ಪರ್ಯಚರತ್ ಸಾಕ್ಷಾಚ್ಚಾ ಮರವ್ಯಜನೇನ ವೈ ॥ ೨೩

ಅಂತಃಪುರಜನೋ ದೃಷ್ಟ್ವಾ ಕೃಷ್ಣೇನಾಮಲಕೀರ್ತಿನಾ ।
ವಿಸ್ಮಿತೋಽಭೂದತಿಪ್ರೀತ್ಯಾ ಅವಧೂತಂ ಸಭಾಜಿತಮ್ ॥ ೨೪

ಕಿಮನೇನ ಕೃತಂ ಪುಣ್ಯಮವಧೂತೇನ ಭಿಕ್ಷುಣಾ ।
ಶ್ರಿಯಾ ಹೀನೇನ ಲೋಕೇಽಸ್ಮಿನ್ ಗರ್ಹಿತೇನಾಧಮೇನ ಚ ॥ ೨೫

ಯೋಽಸೌ ತ್ರಿಲೋಕಗುರುಣಾ ಶ್ರೀನಿವಾಸೇನ ಸಂಭೃತಃ ।
ಪರ್ಯಂಕಸ್ಥಾಂ ಶ್ರಿಯಂ ಹಿತ್ವಾ ಪರಿಷ್ವಕ್ತೋಽಗ್ರಜೋ ಯಥಾ ॥ ೨೬

ಕಥಯಾಂಚಕ್ರತುರ್ಗಾಥಾಃ ಪೂರ್ವಾ ಗುರುಕುಲೇ ಸತೋಃ ।
ಆತ್ಮನೋ ಲಲಿತಾ ರಾಜನ್ ಕರೌ ಗೃಹ್ಯ ಪರಸ್ಪರಮ್ ॥ ೨೭

ಶ್ರೀ ಭಗವಾನುವಾಚ-
ಅಪಿ ಬ್ರಹ್ಮನ್ ಗುರುಕುಲಾದ್ ಭವತಾ ಲಬ್ಧದಕ್ಷಿಣಾತ್ ।
ಸಮಾವೃತ್ತೇನ ಧರ್ಮಜ್ಞ ಭಾರ್ಯೋಢಾ ಸದೃಶೀ ನ ವಾ ॥ ೨೮

ಆ ದ್ವಿಜನನ್ನು, ರುಕ್ಮಿಣೀದೇವಿಯು ಸ್ವತಃ ಚಾಮರವ್ಯಜನಗಳನ್ನು ಹಿಡಿದು ಸೇವಿಸಿದಳು ! (೨೨-೨೩). ಶುಭಕೀರ್ತಿಯಾದ ಶ್ರೀಕೃಷ್ಣನು ಅತ್ಯಂತ ಹರ್ಷದಿಂದ ಈ ಅವಧೂತನಿಗೆ ಮಾಡಿದ ಸೇವಾವಿಧಾನವನ್ನು ಕಂಡು ಅಂತಃಪುರದ ಜನರು ಅಚ್ಚರಿಗೊಂಡರು. ''ಅಬ್ಬಾ! ತಿರುಕನಾದ ಈ ನಿರ್ಗತಿಕನು ಯಾವ ಪುಣ್ಯ ಮಾಡಿರಬಹುದು ! ಕೈಯಲ್ಲಿ ಕಾಸಿಲ್ಲ, ಲೋಕದಲ್ಲಿ ನಿಂದಿತನಾದ ಒಬ್ಬ ಕೀಳು ಮನುಷ್ಯನಿವನು (೨೪-೨೫). ತ್ರಿಲೋಕ ಗುರುವೂ ಲಕ್ಷ್ಮೀನಿವಾಸನೂ ಆದ ಶ್ರೀಕೃಷ್ಣನು ಈತನಿಗೆ ಈ ಪರಿಯ ಗೌರವವನ್ನಿತ್ತು ಸತ್ಕರಿಸಿದನಲ್ಲ! ಜೊತೆಗೆ ಪೀಠದಲ್ಲಿ ಕುಳಿತಿದ್ದ ದೇವಿಯನ್ನೂ ಬಿಟ್ಟು ಎದ್ದುಹೋಗಿ ತನ್ನ ಅಣ್ಣನೋ ಎಂಬಂತೆ ಆಲಂಗಿಸಿಕೊಂಡನಲ್ಲ!'' ಎಂದುಕೊಂಡರು (೨೬). ಪರೀಕ್ಷಿತರಾಜ, ಅನಂತರ ಶ್ರೀಕೃಷ್ಣನೂ ಕುಚೇಲನೂ ಒಬ್ಬರೊಬ್ಬರ ಕೈಗಳನ್ನು ಹಿಡಿದುಕೊಂಡು ಹಿಂದೆ ತಾವು ಗುರುಕುಲದಲ್ಲಿದ್ದಾಗ ನಡೆದ ವಿನೋದವೃತ್ತಾಂತಗಳನ್ನು ಕುರಿತು ಮಾತನಾಡಿದರು (೨೭). ಬಳಿಕ ಭಗವಂತನು

ಪ್ರಾಯೋ ಗೃಹೇಷು ತೇ ಚಿತ್ತಮಕಾಮವಿಹತಂ ತಥಾ ।
ನೈವಾತಿಪ್ರೀಯಸೇ ವಿದ್ವನ್ ಧನೇಷು ವಿದಿತಂ ಹಿ ಮೇ ॥ ೨೯

ಕೇಚಿತ್ ಕುರ್ವಂತಿ ಕರ್ಮಾಣಿ ಕಾಮೈರಹತಚೇತಸಃ ।
ತ್ಯಜಂತಃ ಪ್ರಕೃತೀರ್ದೈವೀರ್ಯಥಾಹಂ ಲೋಕಸಂಗ್ರಹಮ್ ॥ ೩೦

ಕಚ್ಚಿದ್ ಗುರುಕುಲೇ ವಾಸಂ ಬ್ರಹ್ಮನ್ ಸ್ಮರಸಿ ನೌ ಯತಃ ।
ದ್ವಿಜೋ ವಿಜ್ಞಾಯ ವಿಜ್ಞೇಯಂ ತಮಸಃ ಪಾರಮಶ್ನುತೇ ॥ ೩೧

ಸ ವೈ ಸತ್ಕರ್ಮಣಾಂ ಸಾಕ್ಷಾದ್ ದ್ವಿಜಾತೇರಿಹ ಸಂಭವಃ ।
ಆದ್ಯೋಽಂಗ ಯತ್ರಾಶ್ರಮಿಣಾಂ ಯಥಾಹಂ ಜ್ಞಾನದೋ ಗುರುಃ ॥ ೩೨

ನನ್ವರ್ಥ ಕೋವಿದಾ ಬ್ರಹ್ಮನ್ ವರ್ಣಾಶ್ರಮವತಾಮಿಹ ।
ಯೇ ಮಯಾ ಗುರುಣಾ ವಾಚಾ ತರಂತ್ಯಂಜೋ ಭವಾರ್ಣವಮ್ ॥ ೩೩

ಹೇಳಿದನು: "ಬ್ರಾಹ್ಮಣೋತ್ತಮ, ಗುರುದಕ್ಷಿಣೆಯನ್ನು ಕೊಟ್ಟು ಗುರುಕುಲದಿಂದ ನೀನು ಹಿಂದಿರುಗಿದಮೇಲೆ, ಸಮಾವರ್ತನೆಯನ್ನು ಮಾಡಿಕೊಂಡು ಅನುರೂಪಳಾದ ಕನ್ಯೆಯನ್ನು ಮದುವೆಯಾದೆಯೊ, ಇಲ್ಲವೊ ? (೨೮). ನಿನ್ನ ಮನಸ್ಸು ಕಾಮಹತ ವಲ್ಲವಾದ್ದರಿಂದ ಸಂಸಾರದಲ್ಲಿ ವಿಶೇಷವಾಗಿ ಆಸಕ್ತವಾದದ್ದಲ್ಲ. ವಿದ್ವಾಂಸನಾದ ನಿನಗೆ ಧನಾರ್ಜನೆಯಲ್ಲಿ ಹೆಚ್ಚಿನ ಒಲವಿಲ್ಲ. ಇದು ನನಗೆ ಗೊತ್ತಿದ್ದ ವಿಷಯವೇ. ಕೆಲವರು ಕಾಮನಾರಹಿತರಾಗಿ ಫಲಾಸಕ್ತಿ ಇಲ್ಲದೆ ಕರ್ತವ್ಯಗಳನ್ನು ಮಾಡುತ್ತ ಇರುತ್ತಾರೆ. ಅವರು ದೇವಮಾಯಾಕಲ್ಪಿತವಾದ ವಿಷಯ ವಾಸನೆಯನ್ನು ತೊರೆದು, ಲೋಕ ಸಂಗ್ರಹಕ್ಕಾಗಿ ನನ್ನಂತೆ ಕರ್ಮಗಳನ್ನು ನಡೆಸುತ್ತಾರೆ (೨೯-೩೦). ದ್ವಿಜನು ಗುರುಕುಲದಲ್ಲಿ ಕಲಿಯಬೇಕಾದ ಶಾಸ್ತ್ರಾರ್ಥವನ್ನು ಕಲಿತು ಅಜ್ಞಾನಾಂಧಕಾರವನ್ನು ದಾಟುತ್ತಾನಷ್ಟೆ. ಅಂತಹ ಗುರುಕುಲದಲ್ಲಿ ನಾವಿದ್ದ ಪ್ರಸಂಗವು ನೆನಪಿದೆಯೆ? ಗುರುಕುಲದಲ್ಲಿರುವ ಗುರುವು ದ್ವಿಜನಿಗೆ ಸತ್ಕರ್ಮಗಳ ಸಾಕ್ಷಾತ್ ಉದ್ಗಮಸ್ಥಾನ. ಅವನು ಎಲ್ಲ ಆಶ್ರಮಿಗಳಿಗೂ ಪ್ರಥಮ ಗುರು. ನಾನು ಜ್ಞಾನಪ್ರದಾದ ಗುರು[೧] (೩೧-೩೨). ಆದ್ದರಿಂದ, ವಿಪ್ರೋತ್ತಮ, ಈ ಮನುಷ್ಯ

---

೧ ಅನುಬಂಧವನ್ನು ನೋಡಿ.

ನಾಹಮಿಜ್ಯಾಪ್ರಜಾತಿಭ್ಯಾಂ ತಪಸೋಪಶಮೇನ ವಾ ।
ತುಷ್ಯೇಯಂ ಸರ್ವಭೂತಾತ್ಮಾ ಗುರುಶುಶ್ರೂಷಯಾ ಯಥಾ ॥ ೩೪

ಅಪಿ ನಃ ಸ್ಮರ್ಯತೇ ಬ್ರಹ್ಮನ್ ವೃತ್ತಂ ನಿವಸತಾಂ ಗುರೌ ।
ಗುರುದಾರೈಶ್ಚೋದಿತಾನಾಮಿಂಧನಾನಯನೇ ಕ್ವಚಿತ್ ॥ ೩೫

ಪ್ರವಿಷ್ಟಾನಾಂ ಮಹಾರಣ್ಯಮಪರ್ತೌ ಸುಮಹತ್ ದ್ವಿಜ ।
ವಾತವರ್ಷಮಭೂತ್ತೀವ್ರಂ ನಿಷ್ಠುರಾಃ ಸ್ತನಯಿತ್ನವಃ ॥ ೩೬

ಸೂರ್ಯಶ್ಚಾಸ್ತಂ ಗತಸ್ತಾವತ್ ತಮಸಾ ಚಾವೃತಾ ದಿಶಃ ।
ನಿಮ್ನಂ ಕೂಲಂ ಜಲಮಯಂ ನ ಪ್ರಾಜ್ಞಾಯತ ಕಿಂಚನ ॥ ೩೭

ವಯಂ ಭೃಶಂ ತತ್ರ ಮಹಾನಿಲಾಂಬುಭಿ-
ರ್ನಿಹನ್ಯಮಾನಾ ಮುಹುರಂಬುಸಂಪ್ಲವೇ ।
ದಿಶೋಽವಿದಂತೋಽಥ ಪರಸ್ಪರಂ ವನೇ
ಗೃಹೀತಹಸ್ತಾಃ ಪರಿಬಭ್ರಿಮಾತುರಾಃ ॥ ೩೮

ಜನ್ಮದಲ್ಲಿ ಆದರಲ್ಲಿಯೂ ವರ್ಣಾಶ್ರಮಧರ್ಮಯುಕ್ತರಲ್ಲಿ ಗುರುವಾದ ನನ್ನಿಂದ ಯಾರು ಉಪದೇಶದ ಮೂಲಕ ಶೀಘ್ರವಾಗಿ ಸಂಸಾರ ಸಮುದ್ರವನ್ನು ದಾಟುತ್ತಾರೋ ಅವರೇ ಬುದ್ಧಿಶಾಲಿಗಳು (೩೩). ಸರ್ವಭೂತಾತ್ಮನಾದ ನನಗೆ ಗುರುಶುಶ್ರೂಷೆಯಿಂದಾಗುವಷ್ಟು ಸಂತೋಷವು (ಗೃಹಸ್ಥ ಧರ್ಮವಾದ) ಯಜ್ಞದಿಂದಾಗಲಿ ಬ್ರಹ್ಮಚರ್ಯದಿಂದಾಗಲಿ ತಪೋವೈರಾಗ್ಯಾದಿಗಳಿಂದಾಗಲಿ ಆಗುವುದಿಲ್ಲ[೧] (೩೪). ಮಿತ್ರ, ನಾವು ಗುರುಕುಲದಲ್ಲಿ ಇದ್ದಾಗ ಗುರುಪತ್ನಿಯ ಆಜ್ಞೆಯಂತೆ ಸೌದೆಯನ್ನು ತರಲು ಒಂದು ಮಹಾರಣ್ಯಕ್ಕೆ ಹೋದದ್ದು ನೆನಪಿದೆಯೆ ? ಆಗ ಸೌದೆಯನ್ನು ತರುವುದಕ್ಕೆ ಅಕಾಲವಾಗಿತ್ತು. ನಾವು ಅರಣ್ಯಕ್ಕೆ ಹೋದಾಗ ಬಿರುಗಾಳಿಯೊಡನೆ ದೊಡ್ಡಮಳೆ ಬಂದಿತು. ಕಠೋರವಾಗಿ ಗುಡುಗು ಸಿಡಿಲುಗಳು ಹುಟ್ಟಿದವು. ಸೂರ್ಯನು ಮುಳುಗಿದ. ಎಲ್ಲ ದಿಕ್ಕುಗಳನ್ನೂ ಕತ್ತಲೆ ವ್ಯಾಪಿಸಿತು. ಹಳ್ಳತಿಟ್ಟುಗಳು ಜಲಮಯವಾದವು (೩೫-೩೭).

೧ಇಜ್ಯಾ=ಯಜ್ಞ ಮುಂತಾದ ಗೃಹಸ್ಥಧರ್ಮ. ಪ್ರಜಾತಿ=ಪ್ರಕೃಷ್ಟ ಜನ್ಮವಾದ ಉಪನಯನ. ಇದರಿಂದ ಬ್ರಹ್ಮಚರ್ಯವನ್ನು ಗ್ರಹಿಸಬೇಕು. ತಪಸ್ಸು ವಾನಪ್ರಸ್ಥ ಧರ್ಮ, ಉಪಶಮ ಸಂನ್ಯಾಸಿಧರ್ಮ.

ಏತದ್ ವಿದಿತ್ವಾ ಉದಿತೇ ರವೌ ಸಾಂದೀಪನಿರ್ಗುರುಃ ।
ಅನ್ವೇಷಮಾಣೋ ನಃ ಶಿಷ್ಯಾನಾಚಾರ್ಯೋಽಪಶ್ಯದಾತುರಾನ್ ॥ ೩೯

ಅಹೋ ಹೇ ಪುತ್ರಕಾ ಯೂಯಮಸ್ಮದರ್ಥೇಽತಿದುಃಖಿತಾಃ ।
ಆತ್ಮಾ ವೈ ಪ್ರಾಣಿನಾಂ ಪ್ರೇಷ್ಠಸ್ತಮನಾದೃತ್ಯ ಮತ್ಪರಾಃ ॥ ೪೦

ಏತದೇವ ಹಿ ಸಚ್ಛಿಷ್ಯೈಃ ಕರ್ತವ್ಯಂ ಗುರುನಿಷ್ಕೃತಮ್ ।
ಯದ್ ವೈ ವಿಶುದ್ಧಭಾವೇನ ಸರ್ವಾರ್ಥಾತ್ಮಾರ್ಪಣಂ ಗುರೌ ॥ ೪೧

ತುಷ್ಟೋಽಹಂ ಭೋ ದ್ವಿಜಶ್ರೇಷ್ಠಾಃ ಸತ್ಯಾಃ ಸಂತು ಮನೋರಥಾಃ ।
ಛಂದಾಂಸ್ಯಯಾತಯಾಮಾನಿ ಭವಂತ್ವಿಹ ಪರತ್ರ ಚ ॥ ೪೨

ಇತ್ಥಂ ವಿಧಾನ್ಯನೇಕಾನಿ ವಸತಾಂ ಗುರುವೇಶ್ಮಸು ।
ಗುರೋರನುಗ್ರಹೇಣೈವ ಪುಮಾನ್ ಪೂರ್ಣಃ ಪ್ರಶಾಂತಯೇ ॥ ೪೩

ಜಲಮಯವಾದ ಕಾಡಿನಲ್ಲಿ ನಾವು ಬಿರುಗಾಳಿ ಮಳೆಗಳಿಗೆ ಸಿಕ್ಕಿ ಬಹಳ ತೊಂದರೆಗೆ ಒಳಗಾದೆವು. ಯಾವ ದಿಕ್ಕು ಎತ್ತ ಕಡೆ ಎಂಬುದೇ ತಿಳಿಯಲಿಲ್ಲ! ನಾವು ಸಂಭ್ರಾಂತರಾಗಿ ಒಬ್ಬರ ಕೈಯನ್ನು ಒಬ್ಬರು ಹಿಡಿದುಕೊಂಡು ಅಲೆದಾಡಿದವು! (೩೮). ಸೂರ್ಯೋದಯವಾದ ಮೇಲೆ ಈ ವಿಷಯವನ್ನರಿತು ಸಾಂದೀಪನಿಗುರುಗಳು ಶಿಷ್ಯರನ್ನು ಹುಡುಕುತ್ತ ಬಂದು, ಕಂಗೆಟ್ಟಿದ್ದ ನಮ್ಮನ್ನು ಕಂಡರು. ಅವರು ಮರುಕದಿಂದ ''ಅಯ್ಯೋ ಮಕ್ಕಳಿರಾ, ನಮಗಾಗಿ ಇಷ್ಟು ಕಷ್ಟಕ್ಕೆ ಒಳಗಾದಿರಿ. ಪ್ರಾಣಿಗಳಿಗೆ ತಮ ಪ್ರಾಣವೇ ಶ್ರೇಷ್ಠವಾದದ್ದು. ಪ್ರಾಣವನ್ನು ಲೆಕ್ಕಿಸದೆ ನೀವು ನನಗಾಗಿ ಶ್ರಮಪಟ್ಟಿರಿ (೩೯-೪೦). ಸರ್ವಸ್ವವಾದ ಆತ್ಮವನ್ನು ಗುರುವಿಗಾಗಿ ಅರ್ಪಣೆ ಮಾಡುವುದು ಉತ್ತಮಶಿಷ್ಯರ ಕರ್ತವ್ಯ. ಗುರುವಿನ ಋಣವನ್ನು ತೀರಿಸುವುದೆಂದರೆ ಇದೇ. ಎಲೈ ವಟುಗಳೆ, ನಾನು ಸಂತೃಪ್ತನಾದೆನು. ನಿಮ್ಮ ಮನೋರಥಗಳು ಈಡೇರಲಿ. ನನ್ನಿಂದ ಕಲಿತ ವೇದಗಳು ಇಹಪರಗಳೆರಡರಲ್ಲಿಯೂ ಸಾರವತ್ತಾಗಿ ಉಳಿದು ಫಲವನ್ನು ನೀಡಲಿ'' ಎಂದು ಹರಿಸಿದರು (೪೧-೪೨). ಈ ರೀತಿಯಲ್ಲಿ ನಾವು ಗುರುಕುಲದಲ್ಲಿರುವಾಗ ಎಷ್ಟೋ ಪ್ರಸಂಗಗಳು ನಡೆದವು. ಗುರುವಿನ ಅನುಗ್ರಹದಿಂದಲೇ ಮನುಷ್ಯನು ಪೂರ್ಣತೆಯನ್ನು ಪಡೆದು ಶಾಂತಿಯನ್ನು ಗಳಿಸುವನು'' ಎಂದನು (೪೩). ಆಗ

ಬ್ರಾಹ್ಮಣ ಉವಾಚ-
ಕಿಮಸ್ಮಾಭಿರನಿರ್ವೃತ್ತಂ ದೇವದೇವ ಜಗದ್ಗುರೋ ।
ಭವತಾ ಸತ್ಯಕಾಮೇನ ಯೇಷಾಂ ವಾಸೋ ಗುರಾವಭೂತ್ ॥ ೪೪

ಯಸ್ಯ ಛಂದೋಮಯಂ ಬ್ರಹ್ಮ ದೇಹ ಆವಪನಂ ವಿಭೋ ।
ಶ್ರೇಯಸಾಂ ತಸ್ಯ ಗುರುಷು ವಾಸೋಽತ್ಯಂತವಿಡಂಬನಮ್ ॥ ೪೫

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಅಶೀತಿತಮಾಧ್ಯಾಯಃ

ಏಕಾಶೀತಿತಮಾಧ್ಯಾಯಃ

ಶ್ರೀಶುಕ ಉವಾಚ-
ಸ ಇತ್ಥಂ ದ್ವಿಜಮುಖ್ಯೇನ ಸಹ ಸಂಕಥಯನ್ ಹರಿಃ ।
ಸರ್ವಭೂತಮನೋಽಭಿಜ್ಞಃ ಸ್ಮಯಮಾನ ಉವಾಚ ತಮ್ ॥ ೧

ಬ್ರಹ್ಮಣ್ಯೋ ಬ್ರಾಹ್ಮಣಂ ಕೃಷ್ಣೋ ಭಗವಾನ್ ಪ್ರಹಸನ್ ಪ್ರಿಯಮ್ ।
ಪ್ರೇಮ್ಣಾ ನಿರೀಕ್ಷಣೇನೈವ ಪ್ರೇಕ್ಷನ್ ಖಲು ಸತಾಂ ಗತಿಃ ॥ ೨

ಕುಚೇಲನು ಶ್ರೀಕೃಷ್ಣನಿಗೆ ''ದೇವದೇವ-ಜಗದ್ಗುರು, ಸತ್ಯಕಾಮನಾದ ನಿನ್ನ ಜೊತೆಗೆ ಗುರುಕುಲವಾಸವನ್ನು ಮಾಡಿದ ನಾವು ಸಂಪಾದಿಸದೆ ಇದ್ದದ್ದು ಯಾವುದು ? ನಿನ್ನ ದೇಹವೇ ವೇದಾಖ್ಯವಾದ ಬ್ರಹ್ಮವಾಗಿದೆ. ಸಕಲ ಶ್ರೇಯಸ್ಸುಗಳಿಗೆ ಉದ್ಭವಸ್ಥಾನವಾಗಿದೆ. ಇಂತಹ ನೀನು ಗುರುಕುಲದಲ್ಲಿ ವಾಸಮಾಡುವುದೆಂಬುದು ದೊಡ್ಡ ಲೋಕವಿಡಂಬನೆ!'' ಎಂದನು (೪೪-೪೫).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಂಬತ್ತನೆಯ ಅಧ್ಯಾಯ

ಅಧ್ಯಾಯ ೮೧

ಕುಚೇಲನು ತನ್ನ ಮನೆಗೆ ಹಿಂದಿರುಗುವುದು ಭಗವಂತನು ಅನುಗ್ರಹಿಸಿದ ಸಂಪತ್ತನ್ನು ಮನೆಯಲ್ಲಿ ಕಂಡು ಅವನ ಕಾರುಣ್ಯವನ್ನು ಕೊಂಡಾಡುವುದು.

ಈ ಬಗೆಯಲ್ಲಿ ಕುಚೇಲನೊಡನೆ ಸರಸಾಲಾಪವನ್ನು ಮಾಡಿ, ಸರ್ವರ ಮನೋಗತವನ್ನೂ ಬಲ್ಲ ಶ್ರೀಹರಿಯು (ಈತನು ಅವಲಕ್ಕಿಯನ್ನು ಕೊಡಲು

ಶ್ರೀ ಭಗವಾನುವಾಚ-

ಕಿಮುಪಾಯನಮಾನೀತಂ ಬ್ರಹ್ಮನ್ ಮೇ ಭವತಾ ಗೃಹಾತ್ ।
ಅಣ್ವಪ್ಯುಪಾಹೃತಂ ಭಕ್ತೈಃ ಪ್ರೇಮ್ಣಾ ಭೂರ್ಯೇವ ಮೇ ಭವೇತ್ ।
ಭೂರ್ಯಪ್ಯಭಕ್ತೋಪಹೃತಂ ನ ಮೇ ತೋಷಾಯ ಕಲ್ಪತೇ ॥ ೩

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥ ೪

ಇತ್ಯುಕ್ತೋಽಪಿ ದ್ವಿಜಸ್ತಸ್ಮೈ ವ್ರೀಡಿತಃ ಪತಯೇ ಶ್ರಿಯಃ ।
ಪೃಥುಕಪ್ರಸೃತಿಂ ರಾಜನ್ ನ ಪ್ರಾಯಚ್ಛದವಾಙ್ಮುಖಃ ॥ ೫

ಸರ್ವಭೂತಾತ್ಮದೃಕ್ ಸಾಕ್ಷಾತ್ ತಸ್ಯಾಗಮನಕಾರಣಮ್ ।
ವಿಜ್ಞಾಯಾಚಿಂತಯನ್ನಾಯಂ ಶ್ರೀಕಾಮೋ ಮಾಭಜತ್ ಪುರಾ ॥ ೬

ಪತ್ನ್ಯಾಃ ಪತಿವ್ರತಾಯಾಸ್ತು ಸಖಾ ಪ್ರಿಯಚಿಕೀರ್ಷಯಾ ।
ಪ್ರಾಪ್ತೋ ಮಾಮಸ್ಯ ದಾಸ್ಯಾಮಿ ಸಂಪದೋಽಮರ್ತ್ಯದುರ್ಲಭಾಃ ॥ ೭

ನಾಚುತ್ತಾನೆಂದು ತಿಳಿದು) ನಗುತ್ತ ಹೇಳಿದನು. ಬ್ರಾಹ್ಮಣಪ್ರಿಯನೂ ಸಜ್ಜನ ಶರಣ್ಯನೂ ಆದ ಶ್ರೀಕೃಷ್ಣನು ತನಗೆ ಪ್ರಿಯನಾದ ಆ ವಿಪ್ರನನ್ನು ಪ್ರೇಮ ದೃಷ್ಟಿಯಿಂದ ನೋಡುತ್ತ ಮುಗುಳ್ನಗೆ ಬೀರುತ್ತ ಹೀಗೆಂದನು (೧-೨). "ದ್ವಿಜೋತ್ತಮ, ನನಗೋಸ್ಕರ ಮನೆಯಿಂದ ಯಾವ ಕಾಣಿಕೆಯನ್ನು ತಂದಿದ್ದೀಯೆ? ಭಕ್ತರು ಪ್ರೀತಿಯಿಂದ ಕೊಟ್ಟದ್ದು ಅತ್ಯಲ್ಪವಾದರೂ ನನಗೆ ಬಹುವಾಗಿಬಿಡುತ್ತದೆ ! ಭಕ್ತಿ ಇಲ್ಲದವರು ಎಷ್ಟು ದೊಡ್ಡದನ್ನು ಕೊಟ್ಟರೂ ನನಗೆ ಸಂತೋಷವಾಗದು (೩). ಪರಿಶುದ್ಧಚಿತ್ತನಾದವನು ಭಕ್ತಿಯಿಂದ ಅರ್ಪಿಸಿದ್ದು-ಪತ್ರ, ಪುಷ್ಪ, ಫಲ, ಜಲ-ಯಾವುದಾದರೂ ನಾನು ಅದನ್ನು ಸ್ವೀಕರಿಸುತ್ತೇನೆ" ಎಂದು ನುಡಿದನು. ಪರೀಕ್ಷಿತರಾಜ, ಹೀಗೆ ಹೇಳಿದರೂ ಆ ಬ್ರಾಹ್ಮಣನು ಅವಲಕ್ಕಿಯನ್ನು ಕೊಡಲಿಲ್ಲ! ಸಾಕ್ಷಾತ್ ಲಕ್ಷ್ಮೀಪತಿಯಾದವನಿಗೆ ಒಂದು ಹಿಡಿ ಅವಲಕ್ಕಿಯನ್ನು ಕೊಡುವುದು ಹೇಗೆಂದು ನಾಚಿಕೆಯಿಂದ ತಲೆ ತಗ್ಗಿಸಿದನು (೪-೫). ಸರ್ವಭೂತಗಳ ಅಂತಃಕರಣಕ್ಕೆ ಸಾಕ್ಷಿಯಾದ ಶ್ರೀಕೃಷ್ಣನು ಕುಚೇಲನ ಆಗಮನಕ್ಕೆ ಕಾರಣವನ್ನರಿತು

ಇತ್ಥಂ ವಿಚಿಂತ್ಯ ವಸನಾಚ್ಚೀರಬದ್ಧಾನ್ ದ್ವಿಜನ್ಮನಃ ।
ಸ್ವಯಂ ಜಹಾರ ಕಿಮಿದಮಿತಿ ಪೃಥುಕತಂಡುಲಾನ್ ॥ ೮

ನನ್ವೇತದುಪನೀತಂ ಮೇ ಪರಮಪ್ರೀಣನಂ ಸಖೇ ।
ತರ್ಪಯಂತ್ಯಂಗ ಮಾಂ ವಿಶ್ವಮೇತೇ ಪೃಥುಕತಂಡುಲಾಃ ॥ ೯

ಇತಿ ಮುಷ್ಟಿಂ ಸಕೃಜ್ಜಗ್ಧ್ವಾ ದ್ವಿತೀಯಾಂ ಜಗ್ಧುಮಾದದೇ ।
ತಾವಚ್ಛ್ರೀರ್ಜಗೃಹೇ ಹಸ್ತಂ ತತ್ಪರಾ ಪರಮೇಷ್ಠಿನಃ ॥ ೧೦

ಏತಾವತಾಲಂ ವಿಶ್ವಾತ್ಮನ್ ಸರ್ವಸಂಪತ್ಸಮೃದ್ಧಯೇ ।
ಅಸ್ಮಿನ್ ಲೋಕೇಽಥವಾಮುಷ್ಮಿನ್ ಪುಂಸಸ್ತ್ವತ್ತೋಷಕಾರಣಮ್ ॥ ೧೧

ಬ್ರಾಹ್ಮಣಸ್ತಾಂ ತು ರಜನೀಮುಷಿತ್ವಾಚ್ಯುತಮಂದಿರೇ ।
ಭುಕ್ತ್ವಾ ಪೀತ್ವಾ ಸುಖಂ ಮೇನೇ ಆತ್ಮಾನಂ ಸ್ವರ್ಗತಂ ಯಥಾ ॥ ೧೨

''ಈತನು ಹಿಂದೆ ಎಂದೂ ಹಣದ ಆಸೆಗಾಗಿ ನನ್ನನ್ನು ಭಜಿಸಿದವನಲ್ಲ. ಈಗಲಾದರೋ ಪತಿವ್ರತೆಯಾದ ತನ್ನ ಪತ್ನಿಗೆ ಸಂತೋಷವಾಗಲೆಂದು ಈ ಸ್ನೇಹಿತನು ನನ್ನ ಬಳಿಗೆ ಬಂದಿದ್ದಾನೆ. ದೇವತೆಗಳಿಗೂ ದುರ್ಲಭವಾದಷ್ಟು ಸಂಪತ್ತನ್ನು ಇವನಿಗೆ ಕೊಟ್ಟುಬಿಡುತ್ತೇನೆ'' ಎಂದು ಆಲೋಚಿಸಿದನು (೬-೭). ಹೀಗೆ ಆಲೋಚಿಸಿ ಆ ಬ್ರಾಹ್ಮಣನ ಚಿಂದಿ ಬಟ್ಟೆಯಲ್ಲಿ ಮರೆಸಿಕೊಂಡಿದ್ದ ಅವಲಕ್ಕಿಯನ್ನು 'ಇದೇನು !' ಎನ್ನುತ್ತ ತಾನೇ ಕೈಹಾಕಿ ತೆಗೆದುಕೊಂಡನು ! ''ಆಹಾ ! ಮಿತ್ರ, ನನಗೆ ತುಂಬ ಪ್ರಿಯವಾದ ವಸ್ತುವನ್ನೇ ತಂದಿದ್ದೀಯಲ್ಲ! ವಿಶ್ವಾತ್ಮನಾದ ನನಗೆ ಅವಲಕ್ಕಿ ಬಹಳ ಪ್ರಿಯವಾದದ್ದು! ನನಗೆ ತೃಪ್ತಿಯಾಗುವುದು'' ಎನ್ನುತ್ತ ಶ್ರೀಕೃಷ್ಣನು ಒಂದು ಹಿಡಿ ಅವಲಕ್ಕಿಯನ್ನು ತಿಂದು ಇನ್ನೊಂದು ಹಿಡಿಗೆ ಕೈಹಾಕಿದನು. ಅಷ್ಟರಲ್ಲಿ ಲಕ್ಷ್ಮೀದೇವಿಯಾದ ರುಕ್ಮಿಣಿಯು ತನ್ನ ಪತಿಯಾದ ಸರ್ವೇಶ್ವರನ ಕೈಯನ್ನು ಗಪ್ಪನೆ ಹಿಡಿದು ಇಂತೆಂದಳು (೮-೧೦) : ''ಓ ವಿಶ್ವಾತ್ಮ, ಇಷ್ಟು ಸಾಕು ! ಇಷ್ಟರಿಂದಲೇ ಮನುಷ್ಯನಿಗೆ ಇಹದಲ್ಲಾಗಲಿ ಪರದಲ್ಲಾಗಲಿ ಸಕಲ ಸಂಪತ್ತುಗಳೂ ನೀನು ಮೆಚ್ಚುವಷ್ಟು ದೊರಕುತ್ತವೆ !'' ಎಂದು ನುಡಿದಳು (೧೧). ಕುಚೇಲನು ಆ ರಾತ್ರಿ ಅಚ್ಯುತನ ಅರಮನೆಯಲ್ಲಿ ಉಳಿದು ಮೃಷ್ಟಾನ್ನವನ್ನುಂಡು ಉತ್ತಮ

ಶ್ವೋಭೂತೇ ವಿಶ್ವಭಾವೇನ ಸ್ವಸುಖೇನಾಭಿವಂದಿತಃ ।
ಜಗಾಮ ಸ್ವಾಲಯಂ ತಾತ ಪಥ್ಯನುವ್ರಜ್ಯ ನಂದಿತಃ ॥ ೧೩

ಸ ಚಾಲಬ್ಧ್ವಾ ಧನಂ ಕೃಷ್ಣಾನ್ನ ತು ಯಾಚಿತವಾನ್ ಸ್ವಯಮ್ ।
ಸ್ವಗೃಹಾನ್ ವ್ರೀಡಿತೋಽಗಚ್ಛನ್ಮಹದ್ದರ್ಶನನಿರ್ವೃತಃ ॥ ೧೪

ಅಹೋ ಬ್ರಹ್ಮಣ್ಯದೇವಸ್ಯ ದೃಷ್ಟಾ ಬ್ರಹ್ಮಣ್ಯತಾ ಮಯಾ ।
ಯದ್ ದರಿದ್ರತಮೋ ಲಕ್ಷ್ಮೀಮಾಶ್ಲಿಷ್ಟೋ ಬಿಭ್ರತೋರಸಿ ॥ ೧೫

ಕ್ವಾಹಂ ದರಿದ್ರಃ ಪಾಪೀಯಾನ್ ಕ್ವ ಕೃಷ್ಣಃ ಶ್ರೀನಿಕೇತನಃ ।
ಬ್ರಹ್ಮ ಬಂಧುರಿತಿ ಸ್ಮಾಹಂ ಬಾಹುಭ್ಯಾಂ ಪರಿರಂಭಿತಃ ॥ ೧೬

ನಿವಾಸಿತಃ ಪ್ರಿಯಾಜುಷ್ಟೇ ಪರ್ಯಂಕೇ ಭ್ರಾತರೋ ಯಥಾ ।
ಮಹಿಷ್ಯಾ ವೀಜಿತಃ ಶ್ರಾಂತೋ ವಾಲವ್ಯಜನಹಸ್ತಯಾ ॥ ೧೭

ಪೇಯವನ್ನು ಕುಡಿದು ತಾನು ಸ್ವರ್ಗದಲ್ಲಿದ್ದೇನೆಂದು ಭಾವಿಸಿದನು! ಮಾರನೆಯ ದಿನ ಜಗಜ್ಜನಕನೂ ಆನಂದಪೂರ್ಣನೂ ಆದ ಭಗವಂತನಿಂದ ಸತ್ಕೃತನಾಗಿ ತನ್ನ ಮನೆಗೆ ಹೊರಟನು. ಶ್ರೀಕೃಷ್ಣನು ಅವನನ್ನು ದಾರಿಯಲ್ಲಿ ಸರಸಾಲಾಪದಿಂದ ಸಂತೋಷಪಡಿಸುತ್ತ ಜೊತೆಗೆ ಹೋಗಿ ಕಳಿಸಿಕೊಟ್ಟನು (೧೨-೧೩). ಕುಚೇಲನು ಶ್ರೀಕೃಷ್ಣನಿಂದ ಧನವನ್ನು ಪಡೆಯಲಿಲ್ಲ! ಲಜ್ಜೆಯಿಂದ ತಾನಾಗಿ ಬೇಡಲಿಲ್ಲ! ಆದರೂ ಮಹಾಪುರುಷನ ದರ್ಶನವಾಯಿತೆಂದು ಸಂತೋಷದಿಂದ ಮನೆಗೆ ಹಿಂದಿರುಗಿದನು. ದಾರಿಯನ್ನು ತುಳಿಯುತ್ತ ಮನಸ್ಸಿನಲ್ಲಿ ''ಆಹಾ ! ಬ್ರಾಹ್ಮಣ ಪ್ರಿಯನಾದ ದೇವನಿಗೆ ಬ್ರಾಹ್ಮಣನಲ್ಲಿ ಎಷ್ಟು ಪ್ರೀತಿಯೆಂಬುದನ್ನು ಕಣ್ಣಾರೆ ಕಂಡೆನು. ವಕ್ಷಸ್ಥಳದಲ್ಲಿ ಲಕ್ಷ್ಮೀದೇವಿಯನ್ನು ಧರಿಸಿದ ಆ ಮಹಾನುಭಾವನು ಹುಟ್ಟುದರಿದ್ರನಾದ ನನ್ನನ್ನು ಆಲಿಂಗಿಸಿ ಕೊಂಡನಲ್ಲ! (೧೪-೧೫). ದರಿದ್ರನೂ ಅಲ್ಪನೂ ಆದ ನಾನೆಲ್ಲಿ? ಲಕ್ಷ್ಮೀನಿವಾಸನಾದ ಶ್ರೀಕೃಷ್ಣನೆಲ್ಲಿ? ಕೇವಲ ಬ್ರಾಹ್ಮಣನೆಂದು ನನ್ನನ್ನು ಎರಡು ತೋಳುಗಳಿಂದಲೂ ಅಪ್ಪಿಕೊಂಡನು. ಪತ್ನಿಯೊಡನೆ ಕುಳಿತುಕೊಳ್ಳುವ ತನ್ನ ಮಂಚದಲ್ಲಿ ತನ್ನ ಅಣ್ಣತಮ್ಮಂದಿರ ಹಾಗೆ, ನನ್ನನ್ನು ಕುಳ್ಳಿರಿಸಿಕೊಂಡನು ! ನಾನು ಬಳಲಿದ್ದೇನೆಂದು ಅವನ ರಾಣಿಯೇ

ಶುಶ್ರೂಷಯಾ ಪರಮಯಾ ಪಾದಸಂವಾಹನಾದಿಭಿಃ ।
ಪೂಜಿತೋ ದೇವದೇವೇನ ವಿಪ್ರದೇವೇನ ದೇವವತ್ ॥ ೧೮

ಸ್ವರ್ಗಾಪವರ್ಗಯೋಃ ಪುಂಸಾಂ ರಸಾಯಾಂ ಭುವಿ ಸಂಪದಾಮ್ ।
ಸರ್ವಾಸಾಮಪಿ ಸಿದ್ಧೀನಾಂ ಮೂಲಂ ತಚ್ಚರಣಾರ್ಚನಮ್ ॥ ೧೯

ಅಧನೋಽಯಂ ಧನಂ ಪ್ರಾಪ್ಯ ಮಾಧ್ಯನ್ನುಚ್ಚೈರ್ನ ಮಾಂ ಸ್ಮರೇತ್ ।
ಇತಿ ಕಾರುಣಿಕೋ ನೂನಂ ಧನಂ ಮೇಽಭೂರಿ ನಾದದಾತ್ ॥ ೨೦

ಇತಿ ತಚ್ಚಿಂತಯನ್ನಂತಃ ಪ್ರಾಪ್ತೋ ನಿಜಗೃಹಾಂತಿಕಮ್ ।
ಸೂರ್ಯಾನಲೇಂದುಸಂಕಾಶೈರ್ವಿಮಾನೈಃ ಸರ್ವತೋ ವೃತಮ್ ॥ ೨೧

ವಿಚಿತ್ರೋಪವನೋದ್ಯಾನೈಃ ಕೂಜದ್ದ್ವಿಜಕುಲಾಕುಲೈಃ ।
ಪ್ರೋತ್ಫುಲ್ಲಕುಮುದಾಂಭೋಜಕಹ್ಲಾರೋತ್ಪಲವಾರಿಭಿಃ ॥ ೨೨

ತನ್ನ ಕೈಯಲ್ಲಿ ಚಾಮರವನ್ನು ಹಿಡಿದು ಗಾಳಿ ಬೀಸಿದಳು! (೧೬-೧೭). ಆ ದೇವ ದೇವನು ನಾನೊಬ್ಬ ದೇವತೆಯೋ ಎಂಬಂತೆ ಕಾಲೊತ್ತುವುದೇ ಮೊದಲಾದ ಸೇವೆಯಿಂದ ನನ್ನನ್ನು ಪೂಜಿಸಿದನು. ಜನರಿಗೆ ಸ್ವರ್ಗಾಪವರ್ಗಗಳಿಗೂ ಸಕಲ ಸಂಪತ್ತುಗಳಿಗೂ ಸಮಸ್ತ ಸಿದ್ಧಿಗಳಿಗೂ ಈ ಲೋಕದಲ್ಲಿ ಆತನ ಅಡಿದಾವರೆಯ ಅರ್ಚನೆ ಮೂಲಕಾರಣ (೧೮-೧೯). ''ದರಿದ್ರನಾದ ಈತನಿಗೆ ಧನವನ್ನು ಕೊಟ್ಟರೆ ಅಹಂಕಾರಿಯಾಗಿ ನನ್ನ ಸ್ಮರಣೆಯನ್ನು ಬಿಟ್ಟಾನು' ಎಂದೇ ಕರುಣಾ ಶಾಲಿಯಾದ ಆತನು ನನಗೆ ಸ್ವಲ್ಪ ಹಣವನ್ನೂ ಕೊಡಲಿಲ್ಲ!'' ಎಂದು ಆಲೋಚಿಸುತ್ತ ಕುಚೇಲನು ತಾನಿದ್ದ ಮನೆಯ ಸಮೀಪಕ್ಕೆ ಬಂದನು. ಎದುರಿಗೊಂದು ದಿವ್ಯ ಭವನವು ಸೂರ್ಯಾಗ್ನಿ ಚಂದ್ರರಂತೆ ಹೊಳೆಯುವ ಗೋಪುರಗಳಿಂದ ವಿರಾಜಿಸುತ್ತಿತ್ತು! (೨೦-೨೧). ಅದರ ಸುತ್ತಲೂ ವೃಕ್ಷವಾಟಿಕೆ, ಹೂದೋಟ. ಅದರಲ್ಲಿ ಹಕ್ಕಿಗಳು ಚಲಿಪಿಲಿಗುಟ್ಟುತ್ತಿವೆ. ಕೊಳಗಳಲ್ಲಿ ಬಿಳಿಯ ನೈದಿಲೆ, ತಾವರೆ, ಬಿಳಿಯ ಜಲಪುಷ್ಪ ಕನ್ನೈದಿಲೆಗಳು ಅರಳಿವೆ! (೨೨).

ಜುಷ್ಟಂ ಸ್ವಲಂಕೃತೈಃ ಪುಂಭಿಃ ಸ್ತ್ರೀಭಿಶ್ಚ ಹರಿಣಾಕ್ಷಿಭಿಃ।
ಕಿಮಿದಂ ಕಸ್ಯ ವಾ ಸ್ಥಾನಂ ಕಥಂ ತದಿದಮಿತ್ಯಭೂತ್ ॥ ೨೩

ಏವಂ ಮೀಮಾಂಸಮಾನಂ ತಂ ನರಾ ನಾರ್ಯೋಽಮರಪ್ರಭಾಃ।
ಪ್ರತ್ಯಗೃಹ್ಣನ್ ಮಹಾಭಾಗಂ ಗೀತವಾದ್ಯೇನ ಭೂ ಯಸಾ ॥ ೨೪

ಪತಿಮಾಗತಮಾಕರ್ಣ್ಯ ಪತ್ನ್ಯುದ್ಧರ್ಷಾತಿ ಸಂಭ್ರಮಾ।
ನಿಶ್ಚಕ್ರಾಮ ಗೃಹಾತ್ತೂರ್ಣಂ ರೂಪಿಣೀ ಶ್ರೀರಿವಾಲಯಾತ್ ॥ ೨೫

ಪತಿವ್ರತಾ ಪತಿಂ ದೃಷ್ಟ್ವಾ ಪ್ರೇಮೋತ್ಕಂಠಶ್ರುಲೋಚನಾ।
ಮೀಲಿತಾಕ್ಷ್ಯನಮದ್ ಬುದ್ಧ್ಯಾ ಮನಸಾ ಪರಿಷಸ್ವಜೇ ॥ ೨೬

ಪತ್ನೀಂ ವೀಕ್ಷ್ಯ ವಿಸ್ಫುರಂತೀಂ ದೇವೀಂ ವೈಮಾನಿಕೀಮಿವ।
ದಾಸೀನಾಂ ನಿಷ್ಕಕಂಠೀನಾಂ ಮಧ್ಯೇ ಭಾಂತೀಂ ಸ ವಿಸ್ಮಿತಃ ॥ ೨೭

ಅಲಂಕರಿಸಿಕೊಂಡಿದ್ದ ಗಂಡಸರೂ ಹರಿಣಾಕ್ಷಿಯರಾದ ಹೆಂಗಸರೂ ಸಂಚರಿಸುತ್ತಿದ್ದಾರೆ! ಅದನ್ನು ನೋಡಿ ಕುಚೇಲನು "ಅಬ್ಬಾ! ಇದೇನು? ಯಾರ ಮನೆ ಇದು? ಅದು ಹೇಗೆ ಇದಾಯಿತು!" ಎಂದು ಅಚ್ಚರಿಯಿಂದ ಆಲೋಚಿಸುತ್ತ ನಿಂತನು (೨೩). ಹೀಗೆ ಆಲೋಚಿಸುತ್ತಿದ್ದ ಆ ಪುಣ್ಯಾತ್ಮನನ್ನು ದೇವತೆಗಳಂತೆ ಕಂಗೊಳಿಸುತ್ತಿದ್ದ ಸ್ತ್ರೀ ಪುರುಷರು ಗೀತವಾದ್ಯಗಳೊಡನೆ ಸ್ವಾಗತಿಸಿದರು! ಪತಿಯು ಬಂದನೆಂದು ಕೇಳಿ ಆತನ ಮಡದಿಯು ಅತ್ಯಂತ ಹರ್ಷಿತಳಾಗಿ ಸಡಗರಿಸುತ್ತ ಸಾಕ್ಷಾಲಕ್ಷ್ಮಿಯಂತೆ ಬೇಗಬೇಗನೆ ಮನೆಯಿಂದ ಹೊರಬಂದಳು (೨೪-೨೫). ಆ ಪತಿವ್ರತೆಯು ಗಂಡನನ್ನು ನೋಡಿ ಪ್ರೇಮಾತಿಶಯದಿಂದ ಆನಂದಾಶ್ರುಗಳನ್ನು ಸುರಿಸುತ್ತ ಕಣ್ಣುಮುಚ್ಚಿ ಹೃದಯಲ್ಲಿಯೇ ಅವನಿಗೆ ನಮಸ್ಕರಿಸಿದಳು. ಮನಸ್ಸಿನಲ್ಲಿಯೇ ಅವನನ್ನು ಆಲಿಂಗಿಸಿಕೊಂಡಳು! (೨೬). ಚಿನ್ನದ ಹಾರಗಳನ್ನು ಧರಿಸಿದ್ದ ದಾಸಿಯರ ನಡುವೆ, ವಿಮಾನಾರೂಢಳಾದ ದೇವತೆಯೋ ಎಂಬಂತೆ ಕಂಗೊಳಿಸುತ್ತಿದ್ದ ಹೆಂಡತಿಯನ್ನು ನೋಡಿ ಕುಚೇಲನು ವಿಸ್ಮಿತನಾದನು. ತರುವಾಯ ಅವಳೊಡನೆ ಸಂತೋಷದಿಂದ

ಪ್ರೀತಃ ಸ್ವಯಂ ತಯಾ ಯುಕ್ತಃ ಪ್ರವಿಷ್ಟೋ ನಿಜಮಂದಿರಮ್ ।
ಮಣಿಸ್ತಂಭಶತೋಪೇತಂ ಮಹೇಂದ್ರಭವನಂ ಯಥಾ ॥ ೨೮

ಪಯಃ ಫೇನನಿಭಾಃ ಶಯ್ಯಾ ದಾಂತಾ ರುಕ್ಮಪರಿಚ್ಛದಾಃ ।
ಪರ್ಯಂಕಾ ಹೇಮದಂಡಾನಿ ಚಾಮರವ್ಯಜನಾನಿ ಚ ॥ ೨೯

ಆಸನಾನಿ ಚ ಹೈಮಾನಿ ಮೃದೂಪಸ್ತರಣಾನಿ ಚ ।
ಮುಕ್ತಾದಾಮವಿಲಂಬೀನಿ ವಿತಾನಾನಿ ದ್ಯುಮಂತಿ ಚ ॥ ೩೦

ಸ್ವಚ್ಛಸ್ಫಟಿಕ ಕುಡ್ಯೇಷು ಮಹಾಮಾರಕತೇಷು ಚ ।
ರತ್ನದೀಪಾ ಭ್ರಾಜಮಾನಾ ಲಲನಾರತ್ನ ಸಂಯುತಾಃ ॥ ೩೧

ವಿಲೋಕ್ಯ ಬ್ರಾಹ್ಮಣಸ್ತತ್ರ ಸಮೃದ್ಧೀಃ ಸರ್ವಸಂಪದಾಮ್ ।
ತರ್ಕಯಾಮಾಸ ನಿರ್ವ್ಯಗ್ರಃ ಸ್ವಸಮೃದ್ಧಿಮಹೈತುಕೀಮ್ ॥ ೩೨

ನೂನಂ ಬತೈತನ್ಮಮ ದುರ್ಭಗಸ್ಯ
ಶಶ್ವದ್ದರಿದ್ರಸ್ಯ ಸಮೃದ್ಧಿ ಹೇತುಃ ।
ಮಹಾವಿಭೂತೇರವಲೋಕತೋಽನ್ಯೋ
ನೈವೋಪಪದ್ಯೇತ ಯದೂತ್ತಮಸ್ಯ ॥ ೩೩

ಕುಚೇಲನು ದೇವೇಂದ್ರಭವನವೋ ಎಂಬಂತಿದ್ದ ತನ್ನ ಮನೆಯನ್ನು ಪ್ರವೇಶಿಸಿದನು (೨೭-೨೮). ಮನೆಯಲ್ಲಿ ಮಣಿಮಯವಾದ ನೂರಾರು ಕಂಭಗಳು. ಹಾಲಿನ ನೊರೆಯಂತೆ ಬೆಳ್ಳಗಿರುವ ದಂತ ನಿರ್ಮಿತವಾದ ಹಾಸಿಗೆಗಳು. ಚಿನ್ನದ ಜರತಾರಿ ಹೊದಿಸಿದ ಸುಪ್ಪತ್ತಿಗೆಗಳು. ಚಿನ್ನದ ಹಿಡಿಯುಳ್ಳ ಚಾಮರಗಳು, ಬೀಸಣಿಗೆಗಳು. ಮೆತ್ತನೆಯ ಆಸನವನ್ನು ಹಾಸಿರುವ ಸುವರ್ಣ ಪೀಠಗಳು. ಮುತ್ತಿನ ಗೊಂಚಲುಗಳು ತೂಗುತ್ತಿರುವ ಸುಂದರವಾದ ಮೇಲ್ಕಟ್ಟುಗಳು (೨೯-೩೦). ಶುಭ್ರವಾದ ಸ್ಫಟಿಕ ಶಿಲೆಗಳಿಂದಲೂ ಇಂದ್ರನೀಲ ಮಣಿಗಳಿಂದಲೂ ರಚಿತವಾದ ಗೋಡೆಗಳು. ಸುಂದರವಾದ ಸ್ತ್ರೀ ಪ್ರತಿಮೆಗಳು ಹಿಡಿದಿರುವ ರತ್ನದೀಪಗಳು! (೩೧). ಈ ರೀತಿಯಲ್ಲಿ ತನಗೆ ಪ್ರಾಪ್ತವಾದ ಸಕಲ ಸಂಪತ್ತುಗಳು ಸಮೃದ್ಧಿಯನ್ನು ವೀಕ್ಷಿಸಿ ಆ ಬ್ರಾಹ್ಮಣನು ಅದರಲ್ಲಿ ಯಾವ ಆಸಕ್ತಿಯನ್ನೂ ತಳೆಯದೆ ಶಾಂತನಾಗಿ, ನಾನು ಬಯಸದೆ ಇದ್ದರೂ ಆಕಸ್ಮಿಕವಾಗಿ ಈ ಸಂಪತ್ತು ಹೇಗೆ ಬಂದಿತೆಂದು ವಿಚಾರಮಾಡಿದನು (೩೨). "ಆಹಾ! ನಿರ್ಭಾಗ್ಯನೂ ಹುಟ್ಟುದರಿದ್ರನೂ ಆದ ನನಗೆ ಇಷ್ಟು ಸಂಪತ್ತು ಬರಲು ಕಾರಣವೇನಿರಬಹುದು? ಮಹಾಮಹಿಮನಾದ

ನನ್ವಬ್ರುವಾಣೋ ದಿಶತೇ ಸಮಕ್ಷಂ
ಯಾಚಿಷ್ಣವೇ ಭೂರ್ಯಪಿ ಭೂರಿಭೋಜಃ ।
ಪರ್ಜನ್ಯವತ್ತತ್ ಸ್ವಯಮೀಕ್ಷಮಾಣೋ
ದಾಶಾರ್ಹಕಾಣಾಮೃಷಭಃ ಸಖಾ ಮೇ ॥ ೩೪

ಕಿಂಚಿತ್ಕರೋತ್ಯುರ್ವಪಿ ಯತ್ ಸ್ವದತ್ತಂ
ಸುಹೃತ್ಕೃತಂ ಫಲ್ಗ್ವಪಿ ಭೂರಿಕಾರೀ ।
ಮಯೋಪನೀತಾಂ ಪೃಥುಕೈಕಮುಷ್ಟಿಂ
ಪ್ರತ್ಯಗ್ರಹೀತ್ ಪ್ರೀತಿಯುತೋ ಮಹಾತ್ಮಾ ॥ ೩೫

ತಸ್ಯೈವ ಮೇ ಸೌಹೃದಸಖ್ಯಮೈತ್ರೀ
ದಾಸ್ಯಂ ಪುನರ್ಜನ್ಮನಿ ಜನ್ಮನಿ ಸ್ಯಾತ್ ।
ಮಹಾನುಭಾವೇನ ಗುಣಾಲಯೇನ
ವಿಷಜ್ಜತಸ್ತತ್ಪುರುಷಪ್ರಸಂಗಃ ॥ ೩೬

ಆ ಯದೂತ್ತಮನ ದರ್ಶನ ಭಾಗ್ಯವೇ ಇದಕ್ಕೆ ಕಾರಣವಲ್ಲದೆ ಇನ್ನೊಂದಿಲ್ಲ! (೩೩). ನನ್ನ ಮಿತ್ರನಾದ ಯದುಶ್ರೇಷ್ಠನು ಎದುರಿಗೆ ಏನನ್ನೂ ಹೇಳುವುದಿಲ್ಲ. ಆಮೇಲೆ ತಾನೇ ವಿಚಾರಮಾಡಿ ಯಾಚಕನಿಗೆ ಹಿಂದಿನಿಂದ ಲೆಕ್ಕವಿಲ್ಲದಷ್ಟನ್ನು ಕೊಟ್ಟು ಬಿಡುತ್ತಾನೆ. ಭೂರಿದಾನ ಮಾಡುವ ಆತನು ಮಳೆಸುರಿಸುವ ಮೋಡವಿದ್ದಂತೆ. (ರೈತನು ರಾತ್ರಿ ಮಲಗಿದ್ದಾಗ ಮೋಡವು ಬೇಕಾದಷ್ಟು ಮಳೆಸುರಿಸಿ ಹೊಲವನ್ನು ಫಲವತ್ತಾಗಿ ಮಾಡುತ್ತದೆ) (೩೪). [೧]ಶ್ರೀ ಕೃಷ್ಣನು ತಾನು ಮಾಡಿದ ಸಹಾಯ ದೊಡ್ಡದಾದರೂ ಚಿಕ್ಕದೆಂದು ತಿಳಿಯುತ್ತಾನೆ. ಸ್ನೇಹಿತರು ಮಾಡಿದ್ದು ಅತ್ಯಲ್ಪವಾದರೂ ಬಹು ದೊಡ್ಡದೆಂದು ಭಾವಿಸುತ್ತಾನೆ. ನಾನು ಒಯ್ದ ಒಂದು ಹಿಡಿ ಅವಲಕ್ಕಿಯನ್ನು ಎಷ್ಟು ಸಂತೋಷದಿಂದ ಆ ಮಹಾತ್ಮನು ಸ್ವೀಕರಿಸಿದನು! (೩೫). ಜನ್ಮಜನ್ಮಾಂತರಗಳಲ್ಲಿಯೂ ನನಗೆ ಆತನಲ್ಲಿಯೇ ಪ್ರೇಮ, ಸ್ನೇಹ, ಶುಭ ಪ್ರಾರ್ಥನೆಗಳು ನೆಲೆಸಿರಲಿ. ಅವನ ದಾಸ್ಯವೂ ಲಭಿಸಲಿ.

---

೧ ಈ ಶ್ಲೋಕದಲ್ಲಿ 'ಭೂರಿಭೋಜಃ' ಎಂಬ ಶಬ್ದವಿದೆ. ಪ್ರಭೂತವಾದ ಭೋಗವುಳ್ಳವನು, ಸ್ವಯಂ ಲಕ್ಷ್ಮೀಪತಿಯಾದ್ದರಿಂದ-ಎಂದು ವ್ಯಾಖ್ಯಾನಕಾರರು ಅರ್ಥಮಾಡಿದ್ದಾರೆ. ಭೂರಿ ಭುಂಕ್ತೇ ಇತಿ ಭೂರಿಭೋಜಃ ಎಂದು ಈ ಶಬ್ದಕ್ಕೆ ವ್ಯುತ್ಪತ್ತಿ. ಅನುವಾದದಲ್ಲಿ ಭೂರಿ ಭೋಜಯತೀತಿ ಭೂರಿಭೋಜಃ ಎಂಬ ವ್ಯುತ್ಪತ್ತಿಯನ್ನಿಟ್ಟು ಅರ್ಥ ಬರೆದಿದೆ.

ಭಕ್ತಾಯ ಚಿತ್ರಾ ಭಗವಾನ್ ಹಿ ಸಂಪದೋ
ರಾಜ್ಯಂ ವಿಭೂತೀರ್ನ ಸಮರ್ಥಯತ್ಯಜಃ ।
ಅದೀರ್ಘಬೋಧಾಯ ವಿಚಕ್ಷಣಃ ಸ್ವಯಂ
ಪಶ್ಯನ್ ನಿಪಾತಂ ಧನಿನಾಂ ಮದೋದ್ಭವಮ್ ॥ ೩೭

ಇತ್ಥಂ ವ್ಯವಸಿತೋ ಬುದ್ಧ್ಯಾ ಭಕ್ತೋಽತೀವ ಜನಾರ್ದನೇ ।
ವಿಷಯಾನ್ ಜಾಯಯಾ ತ್ಯಕ್ಷ್ಯನ್ ಬುಭುಜೇ ನಾತಿಲಂಪಟಃ ॥ ೩೮

ತಸ್ಯ ವೈ ದೇವದೇವಸ್ಯ ಹರೇರ್ಯಜ್ಞ ಪತೇಃ ಪ್ರಭೋಃ ।
ಬ್ರಾಹ್ಮಣಾಃ ಪ್ರಭವೋ ದೈವಂ ನ ತೇಭ್ಯೋ ವಿದ್ಯತೇ ಪರಮ್ ॥ ೩೯

ಏವಂ ಸ ವಿಪ್ರೋ ಭಗವತ್ಸುಹೃತ್ತದಾ
ದೃಷ್ಟ್ವಾ ಸ್ವಭೃತ್ಯೈರಜಿತಂ ಪರಾಜಿತಮ್ ।
ತದ್ಧ್ಯಾನವೇಗೋದ್ಗ್ರಥಿತಾತ್ಮಬಂಧನ-
ಸ್ತದ್ಧಾಮ ಲೇಭೇಽಚಿರತಃ ಸತಾಂ ಗತಿಮ್ ॥ ೪೦

ಮಹಾನುಭಾವನೂ ಸದ್ಗುಣನಿಲಯನೂ ಆದ ಶ್ರೀಕೃಷ್ಣನ ಸಂಗದಲ್ಲಿ ಆತನ ಭಕ್ತರ ಸಹವಾಸವೂ ದೊರೆಯಲಿ (೩೬). ಜನ್ಮರಹಿತನಾದ ಭಗವಂತನು ಮಹಾಬುದ್ಧಿಶಾಲಿ. ಧನವಂತರಿಗೆ ಧನಮದದಿಂದಾಗುವ ಸರ್ವನಾಶವನ್ನು ತಿಳಿದಿದ್ದಾನೆ. ಆದ್ದರಿಂದ ತನ್ನ ಭಕ್ತನು ಅವಿವೇಕಿಯಾದಾನೆಂದು ನಾನಾ ಬಗೆಯ ಸಂಪತ್ತನ್ನಾಗಲಿ ರಾಜ್ಯವನ್ನಾಗಲಿ ವಿವಿಧ ಸಿದ್ಧಿಗಳನ್ನಾಗಲಿ ಭಕ್ತನಿಗೆ ಕೊಡಲು ಬಯಸುವುದಿಲ್ಲ. (ನನ್ನ ಭಕ್ತಿ ವಿವೇಕಗಳನ್ನು ಪರೀಕ್ಷಿಸಲು ಈ ಸಂಪತ್ತನ್ನು ಕೊಟ್ಟಿರಬಹುದು) (೩೭). ಹೀಗೆ ಮನಸ್ಸಿನಲ್ಲಿ ವಿಚಾರಮಾಡಿ ನಿರ್ಧರಿಸಿ ಕುಚೇಲನು ಜನಾರ್ದನನಲ್ಲಿ ಇನ್ನೂ ಅಧಿಕವಾದ ಭಕ್ತಿಯನ್ನು ದೃಢಗೊಳಿಸಿದನು. ವಿಷಯ ಸುಖಗಳನ್ನು ಮೆಲ್ಲಮೆಲ್ಲನೆ ತ್ಯಜಿಸುತ್ತ ಅನಾಸಕ್ತನಾಗಿಯೇ ಪತ್ನಿಯೊಡನೆ ಸಂಪತ್ತನ್ನು ಅನುಭವಿಸಿದನು (೩೮). ಪರೀಕ್ಷಿತರಾಜ, ದೇವದೇವನೂ ಯಜ್ಞಪತಿಯೂ ತ್ರಿಲೋಕಪ್ರಭುವೂ ಆದ ಶ್ರೀಹರಿಗೆ ಬ್ರಹ್ಮವಿದರು ಒಡೆಯರು ; ದೇವರು. ಅವರಿಗಿಂತ ಹೆಚ್ಚು ಪ್ರಿಯವಾದ ವಸ್ತು ಯಾವುದೂ ಇಲ್ಲ (೩೯). ಭಗವಂತನು ಜಗತ್ತಿನಲ್ಲಿ ಯಾರಿಗೂ ಸೋಲದಿದ್ದರೂ ಭಕ್ತರಿಗೆ ಸೋಲುತ್ತಾನೆ ಎಂಬುದನ್ನು ವಿಮರ್ಶಿಸಿ, ಆ ವಿಪ್ರನು ಮನಸ್ಸನ್ನು ಶ್ರೀಕೃಷ್ಣನಲ್ಲಿ ನೆಲೆಗೊಳಿಸಿದನು.

ಏತದ್ ಬ್ರಹ್ಮಣ್ಯದೇವಸ್ಯ ಶ್ರುತ್ವಾ ಬ್ರಹ್ಮಣ್ಯತಾಂ ನರಃ।
ಲಬ್ಧಭಾವೋ ಭಗವತಿ ಕರ್ಮಬಂಧಾದ್ ವಿಮುಚ್ಯತೇ ॥ ೪೧

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಏಕಾಶೀತಿತಮಾಧ್ಯಾಯಃ

ದ್ವ್ಯಶೀತಿತಮಾಧ್ಯಾಯಃ

ಶ್ರೀಶುಕ ಉವಾಚ-
ಅಥೈಕದಾ ದ್ವಾರವತ್ಯಾಂ ವಸತೋ ರಾಮಕೃಷ್ಣಯೋಃ।
ಸೂರ್ಯೋಪರಾಗಃ ಸುಮಹಾನಾಸೀತ್ ಕಲ್ಪಕ್ಷಯೇ ಯಥಾ ॥ ೧

ತಂ ಜ್ಞಾತ್ವಾ ಮನುಜಾ ರಾಜನ್ ಪುರಸ್ತಾದೇವ ಸರ್ವತಃ।
ಸಮಂತಪಂಚಕಕ್ಷೇತ್ರಂ ಯಯುಃ ಶ್ರೇಯೋವಿಧಿತ್ಸಯಾ ॥ ೨

ಅವನು ಧ್ಯಾನಾತಿಶಯದಿಂದ ಅಹಂಕಾರ ಬಂಧನವನ್ನು ನೀಗಿ ಸ್ವಲ್ಪ ಕಾಲದಲ್ಲಿ ಸಜ್ಜನರಿಗೆ ಗತಿಯಾದ ಭಗವಂತನ ಧಾಮವನ್ನು ಸೇರಿದನು (೪೦). ಹೀಗೆ ಬ್ರಹ್ಮಣ್ಯದೇವನ ಬ್ರಾಹ್ಮಣಪ್ರಿಯತೆಯ ವೃತ್ತಾಂತವನ್ನು ಕೇಳಿದ ಮನುಷ್ಯನು ಭಗವಂತನಲ್ಲಿ ಭಕ್ತಿಯನ್ನು ಗಳಿಸಿ ಕರ್ಮಬಂಧದಿಂದ ಬಿಡುಗಡೆ ಹೊಂದುತ್ತಾನೆ (೪೧).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಂಬತ್ತೊಂದನೆಯ ಅಧ್ಯಾಯ

ಅಧ್ಯಾಯ ೮೨

ಸೂರ್ಯಗ್ರಹಣ ನಿಮಿತ್ತವಾಗಿ ಯಾದವರು ಕುರುಕ್ಷೇತ್ರಕ್ಕೆ ಹೋಗುವುದು. ಅಲ್ಲಿ ಪಾಂಡವ ನಂದಗೋಪಾದಿಗಳೊಡನೆ ಸಂಮಿಲನ.

ಹೀಗೆ ಬಲರಾಮಕೃಷ್ಣರು ದ್ವಾರಕೆಯಲ್ಲಿರುವಾಗ ಒಂದು ಸಲ, ಪ್ರಳಯ ಕಾಲದಲ್ಲಿ ಹೇಗೋ ಹಾಗೆ, ಪೂರ್ಣಸೂರ್ಯಗ್ರಹಣ ಸಂಭವಿಸಿತು. ಪರೀಕ್ಷಿತ ರಾಜ, ಅದನ್ನು ತಿಳಿದ ಎಲ್ಲ ದೇಶಗಳಿಂದಲೂ ಜನರು ಪುಣ್ಯಕಾರ್ಯವನ್ನು ಮಾಡುವುದಕ್ಕಾಗಿ ಸಮಂತ ಪಂಚಕವೆಂಬ ಕುರುಕ್ಷೇತ್ರಕ್ಕೆ ಹೋದರು (೧-೨).

ನಿಃಕ್ಷತ್ರಿಯಾಂ ಮಹೀಂ ಕುರ್ವನ್ ರಾಮಃ ಶಸ್ತ್ರಭೃತಾಂ ವರಃ ।
ನೃಪಾಣಾಂ ರುಧಿರೌಘೇಣ ಯತ್ರ ಚಕ್ರೇ ಮಹಾಹ್ರದಾನ್ ॥ ೩

ಈಜೇ ಚ ಭಗವಾನ್ ರಾಮೋ ಯತ್ರಾಸ್ಪೃಷ್ಟೋಽಪಿ ಕರ್ಮಣಾ ।
ಲೋಕಸ್ಯ ಗ್ರಾಹಯನ್ನೀಶೋ ಯಥಾನ್ಯೋಽಘಾಪನುತ್ತಯೇ ॥ ೪

ಮಹತ್ಯಾಂ ತೀರ್ಥಯಾತ್ರಾಯಾಂ ತತ್ರಾಗನ್ ಭಾರತೀಃ ಪ್ರಜಾಃ ।
ವೃಷ್ಣಯಶ್ಚ ತಥಾಕ್ರೂರವಸುದೇವಾಹುಕಾದಯಃ ॥ ೫

ಯಯುರ್ಭಾರತ ತತ್ ಕ್ಷೇತ್ರಂ ಸ್ವಮಘಂ ಕ್ಷಪಯಿಷ್ಣವಃ ।
ಗದಪ್ರದ್ಯುಮ್ನಸಾಂಬಾದ್ಯಾಃ ಸುಚಂದ್ರಶುಕಸಾರಣೈಃ ॥ ೬

ಆಸ್ತೇಽನಿರುದ್ಧೋ ರಕ್ಷಾಯಾಂ ಕೃತವರ್ಮಾ ಚ ಯೂಥಪಃ ।
ತೇ ರಥೈರ್ದೇವಧಿಷ್ಣ್ಯಾಭೈರ್ಹಯೈಶ್ಚ ತರಲಪ್ಲವೈಃ ॥ ೭

ಗಜೈರ್ನದದ್ಭಿರಭ್ರಾಭೈರ್ನೃಭಿರ್ವಿದ್ಯಾಧರದ್ಯುಭಿಃ ।
ವ್ಯರೋಚಂತ ಮಹಾತೇಜಾಃ ಪಥಿ ಕಾಂಚನಮಾಲಿನಃ ॥ ೮

ಅಲ್ಲಿಯೇ ಶಸ್ತ್ರಧಾರಿಗಳಲ್ಲಿ ಅಗ್ರಗಣ್ಯನಾದ ಪರಶುರಾಮನು ಕ್ಷತ್ರಿಯರನ್ನು ಭೂಮಿಯಲ್ಲಿಲ್ಲದಂತೆ ತೊಡೆದುಹಾಕಿ ಆ ರಾಜರ ನೆತ್ತರ ಹೊನಲಿಂದ ದೊಡ್ಡ ಮಡುಗಳನ್ನು ನಿರ್ಮಿಸಿದ್ದನು. ಅಲ್ಲಿಯೇ ಪ್ರಭುವಾದ ಪರುಶುರಾಮನು ತನಗೆ ಕರ್ಮಲೇಪವಿಲ್ಲದಿದ್ದರೂ ಸಹ, ಸಾಮಾನ್ಯನಾದ ಇನ್ನೊಬ್ಬನು ಪಾಪವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಮಾಡುವಂತೆ, ಲೋಕಸಂಗ್ರಹಾರ್ಥವಾಗಿ ಯಜ್ಞವನ್ನು ಮಾಡಿದ್ದನು (೩-೪). ಮಹತ್ತರವಾದ ಆ ತೀರ್ಥಯಾತ್ರೆಗೆ ಭರತಖಂಡದ ಎಲ್ಲ ಪ್ರಾಂತಗಳ ಜನರೂ ಬಂದಿದ್ದರು. ಅಂತೆಯೇ ಅಕ್ರೂರ, ವಸುದೇವ, ಉಗ್ರಸೇನ, ಗದ, ಪ್ರದ್ಯುಮ್ನ, ಸಾಂಬ-ಮೊದಲಾದ ಯಾದವರು ತಮ್ಮ ಪಾಪವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಆ ಕ್ಷೇತ್ರಕ್ಕೆ ಹೋದರು (೫-೬). ಸುಚಂದ್ರ, ಶುಕ, ಸಾರಣರೊಡನೆ ಅನಿರುದ್ಧನೂ ಸೇನಾಪತಿಯಾದ ಕೃತವರ್ಮನೂ ನಗರರಕ್ಷಣೆಗಾಗಿ ದ್ವಾರಾವತಿಯಲ್ಲಿ ಉಳಿದರು. ಉಳಿದ ಯಾದವರು ದೇವ ವಿಮಾನಗಳಂತಿರುವ ರಥಗಳನ್ನೂ, ಶೀಘ್ರಗಾಮಿಗಳಾದ

ದಿವ್ಯಸ್ರಗ್ವಸ್ತ್ರಸನ್ನಾಹಾಃ ಕಲತ್ರೈಃ ಖೇಚರಾ ಇವ ।
ತತ್ರ ಸ್ನಾತ್ವಾ ಮಹಾಭಾಗಾ ಉಪೋಷ್ಯ ಸುಸಮಾಹಿತಾಃ ॥ ೯

ಬ್ರಾಹ್ಮಣೇಭ್ಯೋ ದದುರ್ಧೇನೂರ್ವಾಸಃ ಸ್ರಗ್ರುಕ್ಮಮಾಲಿನೀಃ ।
ರಾಮಹ್ರದೇಷು ವಿಧಿವತ್ ಪುನರಾಪ್ಲುತ್ಯ ವೃಷ್ಣಯಃ ॥ ೧೦

ದದುಃ ಸ್ವನ್ನಂ ದ್ವಿಜಾಗ್ರ್ಯೇಭ್ಯಃ ಕೃಷ್ಣೇ ನೋ ಭಕ್ತಿರಸ್ತ್ವಿತಿ ।
ಸ್ವಯಂ ಚ ತದನುಜ್ಞಾತಾ ವೃಷ್ಣಯಃ ಕೃಷ್ಣದೇವತಾಃ ॥ ೧೧

ಭುಕ್ತ್ವೋಪವಿವಿಶುಃ ಕಾಮಂ ಸ್ನಿಗ್ಧಚ್ಛಾಯಾಂಘ್ರಿಪಾಂಘ್ರಿಷು ।
ತತ್ರಾಗತಾಂಸ್ತೇ ದದೃಶುಃ ಸುಹೃತ್ಸಂಬಂಧಿನೋ ನೃಪಾನ್ ॥ ೧೨

ಮತ್ಸ್ಯೋಶೀನರಕೌಸಲ್ಯವಿದರ್ಭಕುರುಸೃಂಜಯಾನ್ ।
ಕಾಂಬೋಜಕೈಕಯಾನ್ ಮದ್ರಾನ್ ಕುಂತೀನಾನರ್ತಕೇರಲಾನ್ ॥ ೧೩

ಕುದುರೆಗಳನ್ನೂ ಮೋಡಗಳಂತೆ ಘೀಂಕರಿಸುವ ಆನೆಗಳನ್ನೂ ಏರಿ ವಿದ್ಯಾಧರರಂತೆ ಕಂಗೊಳಿಸುವ ಪಾದತಿಗಳೊಡನೆ ತೆರಳಿದರು (೭-೮). ಚಿನ್ನದ ಸರಗಳನ್ನು ಧರಿಸಿ ದಿವ್ಯಪುಷ್ಪಮಾಲೆಗಳನ್ನೂ ವಸ್ತ್ರಗಳನ್ನೂ ಧರಿಸಿ, ಮಡದಿಯರೊಡನೆ ಮಾರ್ಗದಲ್ಲಿ ಹೋಗುತ್ತಿದ್ದ ತೇಜಸ್ವಿಗಳಾದ ಅವರು ದೇವತೆಗಳೋ ಎಂಬಂತೆ ಕಾಣುತ್ತಿದ್ದರು. ಭಾಗ್ಯಶಾಲಿಗಳಾದ ಅವರೆಲ್ಲರೂ ಕುರುಕ್ಷೇತ್ರದಲ್ಲಿ ಏಕಾಗ್ರತೆಯಿಂದ ಸ್ನಾನಮಾಡಿ ಉಪವಾಸವಿದ್ದರು (೯). ಆ ಯಾದವರು ವಸ್ತ್ರಮಾಲಾಸುವರ್ಣಭೂಷಿತಗಳಾದ ಹಸುಗಳನ್ನು ಬ್ರಾಹ್ಮಣರಿಗೆ ದಾನಮಾಡಿದರು. ಗ್ರಹಣಮೋಕ್ಷವಾದ ಮೇಲೆ ಪರುಶುರಾಮನ ಸ್ಯಮಂತಪಂಚಕವೆಂಬ ಮಡುಗಳಲ್ಲಿ ಮತ್ತೆ ವಿಧಿವತ್ತಾಗಿ ಮಿಂದು "ಶ್ರೀಕೃಷ್ಣನಲ್ಲಿ ನಮಗೆ ದೃಢವಾದ ಭಕ್ತಿ ನೆಲೆಸಿರಲಿ" ಎಂದು ಸಂಕಲ್ಪಿಸಿ ದ್ವಿಜರಿಗೆ ಅನ್ನದಾನ ಮಾಡಿದರು. ಆಮೇಲೆ ದ್ವಿಜರಿಂದ ಅನುಮತಿಯನ್ನು ಪಡೆದು ಶ್ರೀಕೃಷ್ಣಭಕ್ತರಾದ ಯಾದವರು ತಾವೂ ಭೋಜನ ಮಾಡಿದರು (೧೦-೧೧). ಬಳಿಕ ದಟ್ಟವಾದ ಮರಗಳ ನೆರಳಿನಲ್ಲಿ ಮನಬಂದಂತೆ ವಿಶ್ರಮಿಸುತ್ತ ಕುಳಿತರು. ಅಲ್ಲಿಗೆ ತೀರ್ಥಯಾತ್ರೆಗಾಗಿ ಬಂದಿದ್ದ ಮಿತ್ರ ಬಾಂಧವರನ್ನೂ ದೊರೆಗಳನ್ನೂ ಕಂಡರು. ಮತ್ಸ್ಯ, ಉಶೀನರ, ಕೌಸಲ್ಯ, ವಿದರ್ಭ, ಕುರು, ಸೃಂಜಯ, ಕಾಂಬೋಜ, ಕೈಕಯ, ಮದ್ರ, ಕುಂತಿ, ಆನರ್ತ, ಕೇರಳ ರಾಜ್ಯಗಳ ಜನರನ್ನು

ಅನ್ಯಾಂಶ್ಚೈವಾತ್ಮಪಕ್ಷೀಯಾನ್ ಪರಾಂಶ್ಚ ಶತಶೋ ನೃಪ ।
ನಂದಾದೀನ್ ಸುಹೃದೋ ಗೋಪಾನ್
ಗೋಪೀಶ್ಚೋತ್ಕಂಠಿತಾಶ್ಚಿರಮ್ ॥ ೧೪

ಅನ್ಯೋನ್ಯಸಂದರ್ಶನಹರ್ಷರಂಹಸಾ
ಪ್ರೋತ್ಫುಲ್ಲಹೃದ್ವಕ್ತ್ರಸರೋರುಹಶ್ರಿಯಃ ।
ಆಶ್ಲಿಷ್ಯ ಗಾಢಂ ನಯನೈಃ ಸ್ರವಜ್ಜಲಾ
ಹೃಷ್ಯತ್ತ್ವಚೋ ರುದ್ಧಗಿರೋ ಯಯುರ್ಮುದಮ್ ॥ ೧೫

ಸ್ತ್ರಿಯಶ್ಚ ಸಂವೀಕ್ಷ್ಯ ಮಿಥೋಽತಿಸೌಹೃದ-
ಸ್ಮಿತಾಮಲಾಪಾಂಗದೃಶೋಽಭಿರೇಭಿರೇ ।
ಸ್ತನೈಃ ಸ್ತನಾನ್ ಕುಂಕುಮಪಂಕರೂಷಿತಾನ್
ನಿಹತ್ಯ ದೋರ್ಭಿಃ ಪ್ರಣಯಾಶ್ರುಲೋಚನಾಃ ॥ ೧೬

ತತೋಽಭಿವಾದ್ಯ ತೇ ವೃದ್ಧಾನ್ ಯವಿಷ್ಠೈರಭಿವಾದಿತಾಃ ।
ಸ್ವಾಗತಂ ಕುಶಲಂ ಪೃಷ್ಟ್ವಾ ಚಕ್ರುಃ ಕೃಷ್ಣಕಥಾ ಮಿಥಃ ॥ ೧೭

ವೀಕ್ಷಿಸಿದರು (೧೨-೧೩). ಇನ್ನೂ ಅನೇಕ ದೇಶಗಳಿಂದ ಬಂದಿದ್ದ ಸ್ವಪಕ್ಷೀಯರೂ ಪರಪಕ್ಷೀಯರೂ ಆದ ನೂರಾರು ರಾಜರು ಕಾಣಿಸಿದರು. ಹಾಗೆಯೇ ತಮ್ಮನ್ನು ನೋಡಲು ತವಕಿಸುತ್ತಿದ್ದ ಆಪ್ತರಾದ ನಂದಾದಿ ಗೋಪರನ್ನೂ ಗೋಪಿಯರನ್ನೂ ಯಾದವರು ಸಂದರ್ಶಿಸಿದರು (೧೪). ಯಾದವರಿಗೂ ನಂದಾದಿಗೋಪರಿಗೂ ದರ್ಶನವಾದಾಗ ಅವರ ಹರ್ಷವು ತುತ್ತ ತುದಿಯನ್ನು ಮುಟ್ಟಿತು. ಉಭಯರ ಮುಖದಾವರೆಗಳು ಅರಳಿದವು. ಒಬ್ಬರನ್ನೊಬ್ಬರು ಗಾಢವಾಗಿ ಅಪ್ಪಿಕೊಂಡರು. ಕಣ್ಣುಗಳಿಂದ ಆನಂದಾಶ್ರು ಹರಿಯಿತು. ರೋಮಾಂಚನವಾಯಿತು. ಸಂತೋಷಾತಿರೇಕದಲ್ಲಿ ಅವರ ಬಾಯಿಂದ ಮಾತುಗಳೇ ಹೊರಡಲಿಲ್ಲ! (೧೫). ಸ್ತ್ರೀಯರೂ ಒಬ್ಬರನ್ನೊಬ್ಬರು ನೋಡಿ ಸೌಹಾರ್ದದಿಂದ ಮಂದಹಾಸವನ್ನು ಬೀರುತ್ತ ನಿರ್ಮಲವಾದ ಕಡೆಗಣ್ಣಿನ ನೋಟದಿಂದ ಅನುರಾಗವನ್ನು ಸೂಸುತ್ತ ಕುಂಕುಮಲಿಪ್ತವಾದ ಸ್ತನಗಳಿಂದ ಸ್ತನಗಳು ತಾಗುವಂತೆ ಅನ್ಯೋನ್ಯವಾಗಿ ಅಪ್ಪಿಕೊಂಡರು. ಸ್ನೇಹಬಾಷ್ಪಗಳನ್ನು ತುಳುಕಿಸಿದರು (೧೬). ಹಿರಿಯರಿಗೆ ವಂದಿಸಿದರು. ಕಿರಿಯರಿಗೆ ಆಶೀರ್ವದಿಸಿದ ರು. ಸ್ವಾಗತವನ್ನು ಹೇಳಿ ಕುಶಲವನ್ನು

ಪೃಥಾ ಭ್ರಾತೄನ್ ಸ್ವಸೄರ್ವೀಕ್ಷ್ಯ ತತ್ಪುತ್ರಾನ್ ಪಿತರಾವಪಿ।
ಭ್ರಾತೃಪತ್ನೀರ್ಮುಕುಂದಂ ಚ ಜಹೌ ಸಂಕಥಯಾ ಶುಚಃ॥ ೧೮

ಕುಂತ್ಯುವಾಚ-

ಆರ್ಯ ಭ್ರಾತರಹಂ ಮನ್ಯೇ ಆತ್ಮಾನಮಕೃತಾಶಿಷಮ್।
ಯದ್ ವಾ ಆಪತ್ಸು ಮದ್ವಾರ್ತಾಂ ನಾನುಸ್ಮರಥ ಸತ್ತಮಾಃ॥ ೧೯

ಸುಹೃದೋ ಜ್ಞಾತಯಃ ಪುತ್ರಾ ಭ್ರಾತರಃ ಪಿತರಾವಪಿ।
ನಾನುಸ್ಮರಂತಿ ಸ್ವಜನಂ ಯಸ್ಯ ದೈವಮದಕ್ಷಿಣಮ್॥ ೨೦

ವಸುದೇವ ಉವಾಚ-

ಅಂಬ ಮಾಸ್ಮಾನಸೂಯೇಥಾ ದೈವಕ್ರೀಡನಕಾನ್ ನರಾನ್।
ಈಶಸ್ಯ ಹಿ ವಶೇ ಲೋಕಃ ಕುರುತೇ ಕಾರ್ಯತೇಽಥವಾ॥ ೨೧

ಕಂಸಪ್ರತಾಪಿತಾಃ ಸರ್ವೇ ವಯಂ ಯಾತಾ ದಿಶಂ ದಿಶಮ್।
ಏತರ್ಹ್ಯೇವ ಪುನಃ ಸ್ಥಾನಂ ದೈವೇನಾಸಾದಿತಾಃ ಸ್ವಸಃ॥ ೨೨

ಕೇಳಿ, ಶ್ರೀಕೃಷ್ಣನ ವಿಷಯವನ್ನು ಕುರಿತು ಉಭಯರೂ ಮಾತಾಡತೊಡಗಿದರು! (೧೭). ಆಗ ಪೃಥೆಯು (ಕುಂತೀದೇವಿ) ತನ್ನ ಅಣ್ಣತಮ್ಮಂದಿರನ್ನೂ ಅಕ್ಕತಂಗಿಯರನ್ನೂ ಅವರ ಮಕ್ಕಳನ್ನೂ ತಂದೆತಾಯಿಗಳನ್ನೂ ಅತ್ತಿಗೆ ನಾದಿನಿಯರನ್ನೂ ಶ್ರೀಕೃಷ್ಣನನ್ನೂ ಕಂಡು, (ಬಹುದಿನಗಳಿಂದ ಅವರನ್ನು ಕಾಣದಿದ್ದ) ದುಃಖವನ್ನು ನಿವಾರಿಸಿಕೊಂಡಳು (೧೮). ಅವಳು ವಸುದೇವನನ್ನು ನೋಡಿ "ಅಣ್ಣ, ನಾನು ಪುಣ್ಯಹೀನೆ. ಆಪತ್ತಿನಲ್ಲಿ ಸಿಕ್ಕಿದ ನನ್ನ ಸುದ್ದಿಯನ್ನು ಸಜ್ಜನರಾಜ ನೀವೂ ವಿಚಾರಿಸಲಿಲ್ಲ, ನನ್ನನ್ನು ಮರೆತುಬಿಟ್ಟಿರಿ! ಸ್ನೇಹಿತರು, ಬಂಧುಗಳು, ಮಕ್ಕಳು, ಅಣ್ಣತಮ್ಮಂದಿರು, ಕಡೆಗೆ ತಾಯಿ ತಂದೆಗಳೂ ಸಹ, ನಮ್ಮ ದೈವ ಕ್ರೂರವಾಗಿದ್ದಾಗ, ಅವರು ನಮ್ಮವರೆಂಬುದನ್ನು ಮರೆತುಬಿಡುತ್ತಾರೆ!" ಎಂದಳು (೧೯-೨೦). ಆಗ ವಸುದೇವನು ತಂಗಿಯಾದ ಪೃಥೆಯನ್ನು ಕುರಿತು ಹೀಗೆಂದನು: "ತಾಯಿ, ನಮ್ಮ ಮೇಲೆ ಬೇಸರಬೇಡ. ನಾವೆಲ್ಲರೂ ದೈವದ ಕೈಯಲ್ಲಿ ಆಟದ ಗೊಂಬೆಗಳು. ಸರ್ವೇಶ್ವರನ ವಶದಲ್ಲಿ ಲೋಕವು ಕೆಲಸ

ಶ್ರೀಶುಕ ಉವಾಚ-
ವಸುದೇವೋಗ್ರಸೇನಾದ್ಯೈರ್ಯದುಭಿಸ್ತೇಽರ್ಚಿತಾ ನೃಪಾಃ।
ಆಸನ್ನಚ್ಯುತಸಂದರ್ಶ ಪರಮಾನಂದನಿರ್ವೃತಾಃ॥ ೨೩

ಭೀಷ್ಮೋ ದ್ರೋಣೋಽಂಬಿಕಾಪುತ್ರೋ ಗಾಂಧಾರೀ ಸಸುತಾ ತಥಾ।
ಸದಾರಾಃ ಪಾಂಡವಾಃ ಕುಂತೀ ಸೃಂಜಯೋ ವಿದುರಃ ಕೃಪಃ॥ ೨೪

ಕುಂತಿಭೋಜೋ ವಿರಾಟಶ್ಚ ಭೀಷ್ಮಕೋ ನಗ್ನಜಿನ್ಮಹಾನ್।
ಪುರುಜಿದ್ ದ್ರುಪದಃ ಶಲ್ಯೋ ಧೃಷ್ಟಕೇತುಃ ಸಕಾಶಿರಾಟ್॥ ೨೫

ದಮಘೋಷೋ ವಿಶಾಲಾಕ್ಷೋ ಮೈಥಿಲೋ ಮದ್ರಕೇಕಯೌ।
ಯುಧಾಮನ್ಯುಃ ಸುಶರ್ಮಾ ಚ ಸಸುತಾ ಬಾಹ್ಲಿಕಾದಯಃ॥ ೨೬

ರಾಜಾನೋ ಯೇ ಚ ರಾಜೇಂದ್ರ ಯುಧಿಷ್ಠಿರಮನುವ್ರತಾಃ।
ಶ್ರೀನಿಕೇತಂ ವಪುಃ ಶೌರೇಃ ಸಸ್ತ್ರೀಕಂ ವೀಕ್ಷ್ಯ ವಿಸ್ಮಿತಾಃ॥ ೨೭

ಮಾಡುತ್ತದೆ. ಅವನೇ ಮಾಡಿಸುತ್ತಾನೆ. ಕಂಸನ ಪೀಡೆಗೆ ಸಿಕ್ಕಿ ನಾವು ದಿಕ್ಕುದಿಕ್ಕಿಗೆ ಓಡಿಹೋಗಿದ್ದೆವು. ತಂಗಿ, ಈಗ ಮತ್ತೆ ದೈವವು ನಮ್ಮನ್ನು ಒಂದು ಕಡೆ ಸೇರಿಸಿತು'' ಎಂದನು (೨೧-೨೨). ವಸುದೇವ, ಉಗ್ರಸೇನಾದಿ ಯಾದವರು ಮಿತ್ರರಾದ ರಾಜರನ್ನು ಆದರದಿಂದ ಬರಮಾಡಿಕೊಳ್ಳಲು, ಅವರು ಅಚ್ಯುತನ ಸಂದರ್ಶನದಿಂದ ಪರಮಾನಂದ ಭರಿತರಾದರು. ಭೀಷ್ಮ, ದ್ರೋಣ, ಧೃತರಾಷ್ಟ್ರ, ಗಾಂಧಾರಿ, ಅವಳ ಮಕ್ಕಳು, ದ್ರೌಪದೀ ಸಹಿತರಾದ ಪಾಂಡವರು, ಕುಂತಿ, ಸೃಂಜಯದೇಶದ ರಾಜ, ವಿದುರ, ಕೃಪ, ಕುಂತಿಭೋಜ, ವಿರಾಟ, ಭೀಷ್ಮಕ (ಗಾಂಧಾರದೇಶದ) ನಗ್ನಜಿತ್, (ಕುಂತಿಭೋಜನ ಮಗನಾದ) ಪುರುಜಿತ್, ದ್ರುಪದ, ಶಲ್ಯ, ಧೃಷ್ಟಕೇತು, ಕಾಶಿರಾಜ(೨೩-೨೫). ದಮಘೋಷ, (ವಿರಾಟನ ತಮ್ಮ) ವಿಶಾಲಾಕ್ಷ, ಮಿಥಿಲಾಧಿಪತಿ, ಮದ್ರ ಕೇಕಯರಾಜರು, ಯುಧಾಮನ್ಯು, ಸುಶರ್ಮ, ಬಾಹ್ಲಿಕ ರಾಜ, ಅವರ ಮಕ್ಕಳು, ಯುಧಿಷ್ಠಿರನಲ್ಲಿ ಸ್ನೇಹವಿರಿಸಿದ್ದ ಇತರ ರಾಜರು-ಎಲ್ಲರೂ ಶ್ರೀಕೃಷ್ಣನ ದೇಹ ಸೌಂದರ್ಯವನ್ನೂ ಅವನ ಮಡದಿಯರನ್ನೂ ನೋಡಿ ವಿಸ್ಮಿತರಾದರು (೨೬-೨೭).

ಅಥ ತೇ ರಾಮಕೃಷ್ಣಾಭ್ಯಾಂ ಸಮ್ಯಕ್ ಪ್ರಾಪ್ತಸಮರ್ಹಣಾಃ ।
ಪ್ರಶಶಂಸುರ್ಮುದಾ ಯುಕ್ತಾ ವೃಷ್ಣೀನ್ ಕೃಷ್ಣಪರಿಗ್ರಹಾನ್ ॥ ೨೮

ಅಹೋ ಭೋಜಪತೇ ಯೂಯಂ ಜನ್ಮಭಾಜೋ ನೃಣಾಮಿಹ ।
ಯತ್ ಪಶ್ಯಥಾಸಕೃತ್ ಕೃಷ್ಣಂ ದುರ್ದರ್ಶಮಪಿ ಯೋಗಿನಾಮ್ ॥ ೨೯

ಯದ್ವಿಶ್ರುತಿಃ ಶ್ರುತಿನುತೇದಮಲಂ ಪುನಾತಿ
ಪಾದಾವನೇಜನಪಯಶ್ಚ ವಚಶ್ಚ ಶಾಸ್ತ್ರಮ್ ।
ಭೂಃ ಕಾಲಭರ್ಜಿತಭಗಾಪಿ ಯದಂಘ್ರಿಪದ್ಮ-
ಸ್ಪರ್ಶೋತ್ಥಶಕ್ತಿರಭಿವರ್ಷತಿ ನೋಽಖಿಲಾರ್ಥಾನ್ ॥ ೩೦

ತದ್ದರ್ಶನಸ್ಪರ್ಶನಾನುಪಥಪ್ರಜಲ್ಪ-
ಶಯ್ಯಾಸನಾಶನ ಸಯೌನ ಸಪಿಂಡಬಂಧಃ ।
ಯೇಷಾಂ ಗೃಹೇ ನಿರಯವರ್ತ್ಮನಿ ವರ್ತತಾಂ ವಃ
ಸ್ವರ್ಗಾಪವರ್ಗವಿರಮಃ ಸ್ವಯಮಾಸ ವಿಷ್ಣುಃ ॥ ೩೧

ಬಲರಾಮನಿಂದಲೂ ಶ್ರೀಕೃಷ್ಣನಿಂದಲೂ ಸತ್ಕಾರ ಹೊಂದಿದ ಅವರೆಲ್ಲರೂ ಉಗ್ರಸೇನನನ್ನು ನೋಡಿ "ಓ ಭೋಜರಾಜ, ಮನುಷ್ಯ ವರ್ಗದಲ್ಲಿ ಶ್ರೇಷ್ಠ ಜನ್ಮವೆಂದರೆ ಯಾದವರಾದ ನಿಮ್ಮದೇ. ಯೋಗಿಗಳಿಗೂ ದುರ್ದಶನಾದ ಶ್ರೀಕೃಷ್ಣನನ್ನು ಮತ್ತೆ ಮತ್ತೆ ನೋಡುವ ಭಾಗ್ಯ ನಿಮಗಿದೆ ! (೨೮-೨೯). ವೇದವಿನುತವಾದ ಶ್ರೀಕೃಷ್ಣನ ಕೀರ್ತಿ, ಕಾಲುತೊಳೆದ ನೀರಾದ ಗಂಗೆ, ಈತನ ವಾಣಿಯೆಂಬ ವೇದಶಾಸ್ತ್ರ-ಇವು ವಿಶ್ವವನ್ನೇ ಪಾವನಗೊಳಿಸುತ್ತಿವೆ. ಕಾಲಕಳೆದಂತೆ ಫಲ ನೀಡುವ ಶಕ್ತಿಯನ್ನು ಭೂಮಿಯು ಕಳೆದುಕೊಂಡರೂ ಈತನ ಅಡಿದಾವರೆಯ ಸ್ಪರ್ಶಮಹಿಮೆಯಿಂದಲೇ ನಮಗೆ ಬೇಕಾದ (ಧನಧಾನ್ಯಾದಿ) ಸಮಸ್ತ ವಸ್ತುಗಳನ್ನೂ ನೀಡುತ್ತಿದೆ (೩೦). ಅಂತಹ ಭಗವಂತನನ್ನು ನೋಡುವುದು, ಮುಟ್ಟುವುದು, ಅವನೊಡನೆ ಹೋಗುವುದು, ಮಾತಾಡುವುದು, ಮಲಗುವುದು, ಕುಳಿತು ಕೊಳ್ಳುವುದು, ಊಟಮಾಡುವುದು, ವಿವಾಹವನ್ನು ಬೆಳೆಸುವುದು-ಎಂಬ ದೈಹಿಕ ಸಂಬಂಧವು ನಿಮಗೆ ಲಭಿಸಿದೆ. ಸಂಸಾರದ ಕಷ್ಟಮಾರ್ಗದಲ್ಲಿರುವ ನಿಮ್ಮ ಮನೆಯಲ್ಲಿಯೇ, ಸ್ವರ್ಗಮೋಕ್ಷಗಳನ್ನಿತ್ತು

ಶ್ರೀಶುಕ ಉವಾಚ-

ನಂದಸ್ತತ್ರ ಯದೂನ್ ಪ್ರಾಪ್ತಾನ್ ಜ್ಞಾತ್ವಾ ಕೃಷ್ಣಪುರೋಗಮಾನ್ ।
ತತ್ರಾಗಮದ್ ವೃತೋ ಗೋಪೈರನಃಸ್ಥಾರ್ಥೈರ್ದಿದೃಕ್ಷಯಾ ॥ ೩೨

ತಂ ದೃಷ್ಟ್ವಾ ವೃಷ್ಣಯೋ ಹೃಷ್ಟಾಸ್ತನ್ವಃ ಪ್ರಾಣಮಿವೋತ್ಥಿತಾಃ ।
ಪರಿಷಸ್ವಜಿರೇ ಗಾಢಂ ಚಿರದರ್ಶನಕಾತರಾಃ ॥ ೩೩

ವಸುದೇವಃ ಪರಿಷ್ವಜ್ಯ ಸಂಪ್ರೀತಃ ಪ್ರೇಮವಿಹ್ವಲಃ ।
ಸ್ಮರನ್ ಕಂಸಕೃತಾನ್ ಕ್ಲೇಶಾನ್ ಪುತ್ರನ್ಯಾಸಂ ಚ ಗೋಕುಲೇ ॥ ೩೪

ಕೃಷ್ಣರಾಮೌ ಪರಿಷ್ವಜ್ಯ ಪಿತರಾವಭಿವಾದ್ಯ ಚ ।
ನ ಕಿಂಚನೋಚತುಃ ಪ್ರೇಮ್ಣಾ ಸಾಶ್ರುಕಂಠೌ ಕುರೂದ್ವಹ ॥ ೩೫

ತಾವಾತ್ಮಾಸನಮಾರೋಪ್ಯ ಬಾಹುಭ್ಯಾಂ ಪರಿರಭ್ಯ ಚ ।
ಯಶೋದಾ ಚ ಮಹಾಭಾಗಾ ಸುತೌ ವಿಜಹತುಃ ಶುಚಃ ॥ ೩೬

ಶಾಂತಿನೀಡುವ ಮಹಾವಿಷ್ಣು ಸ್ವಯಂ ವಾಸವಾಗಿದ್ದಾನೆ ! ಭಾಗ್ಯವಂತರು ನೀವು !'' ಎಂದರು (೩೧). ಶ್ರೀಕೃಷ್ಣನೊಡನೆ ಯಾದವರು ಅಲ್ಲಿಗೆ ಬಂದಿದ್ದಾರೆಂದು ನಂದಗೋಪನಿಗೆ ಗೊತ್ತಾಯಿತು. ಒಡನೆಯೇ ಅವನು ಅವರನ್ನು ನೋಡಬೇಕೆಂದು ಗಾಡಿಗಳಲ್ಲಿ ಹೇರಿದ ಪದಾರ್ಥಗಳೊಡನೆ ಗೋಪಾಲರಿಂದ ಪರಿವೃತನಾಗಿ ಬಂದನು (೩೨). ನಂದನು ಬಂದುದನ್ನು ಕಂಡೊಡನೆ ವೃಷ್ಣಿಗಳು, ಪ್ರಾಣಬಂದ ದೇಹಗಳಂತೆ ಹರ್ಷದಿಂದ ಪುಟಿದೆದ್ದು ನೋಡದೆ ಬಹುದಿನಗಳಾದ್ದರಿಂದ ತಳಮಳಿಸುತ್ತ ಒಬ್ಬರನ್ನೊಬ್ಬರು ಗಾಢವಾಗಿ ಅಪ್ಪಿಕೊಂಡರು (೩೩). ವಸುದೇವನು ಸಂತೋಷದಿಂದ ಪ್ರೇಮಪರವಶನಾಗಿ ನಂದಗೋಪನನ್ನು ತಬ್ಬಿಕೊಂಡು, ಕಂಸನ ಉಪದ್ರವಗಳನ್ನೂ ತನ್ನ ಮಕ್ಕಳನ್ನು ಸಾಕುವುದಕ್ಕಾಗಿ ನಂದಗೋಪನ ಮನೆಯಲ್ಲಿ ಬಿಟ್ಟುದನ್ನೂ ನೆನೆಸಿಕೊಂಡನು. ಅಷ್ಟರಲ್ಲಿ ಶ್ರೀಕೃಷ್ಣನೂ ಬಲರಾಮನೂ ಬಂದು ತಾಯಿತಂದೆಗಳಾದ ನಂದನನ್ನೂ ಯಶೋದೆಯನ್ನೂ ಆಲಂಗಿಸಿ ಅಭಿವಾದನೆ ಮಾಡಿದರು. ಪರೀಕ್ಷಿತ, ಪ್ರೇಮಭಾರದಿಂದ ಕಣ್ಣೀರು ತುಂಬಿ ಕಂಠವು ಗದ್ಗದಿಸಿತು. ಮಾತು ಹೊರಡಲಿಲ್ಲ (೩೪-೩೫). ನಂದಗೋಪನೂ ಭಾಗ್ಯಶಾಲಿನಿಯಾದ ಯಶೋದೆಯೂ

ರೋಹಿಣೀ ದೇವಕೀ ಚಾಥ ಪರಿಷ್ವಜ್ಯ ವ್ರಜೇಶ್ವರೀಮ್ ।
ಸ್ಮರಂತ್ಯೌ ತತ್ಕೃತಾಂ ಮೈತ್ರೀಂ ಬಾಷ್ಪಕಂಠ್ಯೌ ಸಮೂಚತುಃ ॥ ೩೭

ಕಾ ವಿಸ್ಮರೇತ ವಾಂ ಮೈತ್ರೀಮನಿವೃತ್ತಾಂ ವ್ರಜೇಶ್ವರಿ ।
ಅವಾಪ್ಯಾಪ್ಯೈಂದ್ರಮೈಶ್ವರ್ಯಂ ಯಸ್ಯಾ ನೇಹ ಪ್ರತಿಕ್ರಿಯಾ ॥ ೩೮

ಏತಾವದೃಷ್ಟಪಿತರೌ ಯುವಯೋಃ ಸ್ಮ ಪಿತ್ರೋಃ
ಸಂಪ್ರೀಣನಾಭ್ಯುದಯ ಪೋಷಣಪಾಲನಾನಿ ।
ಪ್ರಾಪ್ಯೋಷತುರ್ಭವತಿ ಪಕ್ಷ್ಮ ಹ ಯದ್ವದಕ್ಷ್ಣೋ-
ರ್ನ್ಯಸ್ತಾವಕುತ್ರಚಭಯೌ ನ ಸತಾಂ ಪರಃ ಸ್ವಃ ॥ ೩೯

ಶ್ರೀಶುಕ ಉವಾಚ-

ಗೋಪ್ಯಶ್ಚ ಕೃಷ್ಣಮುಪಲಭ್ಯ ಚಿರಾದಭೀಷ್ಟಂ
ಯತ್ಪ್ರೇಕ್ಷಣೇ ದೃಶಿಷು ಪಕ್ಷ್ಮಕೃತಂ ಶಪಂತಿ ।
ದೃಗ್ಭಿರ್ಹೃದೀಕೃತಮಲಂ ಪರಿರಭ್ಯ ಸರ್ವಾ-
ಸ್ತದ್ಭಾವಮಾಪುರಪಿ ನಿತ್ಯಯುಜಾಂ ದುರಾಪಮ್ ॥ ೪೦

ರಾಮಕೃಷ್ಣರನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಎರಡು ತೋಳುಗಳಿಂದಲೂ ಅಪ್ಪಿಕೊಂಡರು. ಹೀಗೆ ಮಾನಸಿಕವಾದ ತಳಮಳವನ್ನು ಕಳೆದುಕೊಂಡರು. ರೋಹಿಣಿಯೂ, ದೇವಕಿಯೂ ವ್ರಜೇಶ್ವರಿಯಾದ ಯಶೋದೆಯನ್ನು ಅಪ್ಪಿಕೊಂಡು ಅವಳ ಸ್ನೇಹವನ್ನು ಸ್ಮರಿಸಿಕೊಳ್ಳುತ್ತ ಕಣ್ಣೀರು ತುಂಬಿ ''ಓ ಯಶೋದೆ-ವ್ರಜೇಶ್ವರಿ, ನಿಮ್ಮಿಬ್ಬರ ತುದಿಯಿಲ್ಲದ ಸ್ನೇಹವನ್ನು ಯಾವಳು ಮರೆತಾಳು ? ದೇವೇಂದ್ರನ ಐಶ್ವರ್ಯ ಲಭಿಸಿದರೂ ನಿಮ್ಮ ಪ್ರೀತಿಗೆ ತಕ್ಕ ಪ್ರತ್ಯುಪಕಾರವನ್ನು ಮಾಡಲು, ಶಕ್ಯವಿಲ್ಲ (೩೭-೩೮). ತಾಯಿ ತಂದೆಗಳನ್ನು ಕಾಣದ ಈ ಮಕ್ಕಳನ್ನು ನೀವೇ ತಾಯಿ ತಂದೆಗಳಾಗಿ ಸಲಹಿದಿರಿ. ಲಾಲನೆ, ಅಭ್ಯುದಯ, ಪೋಷಣ, ಪಾಲನೆಗಳನ್ನು ನಿಮ್ಮಿಂದ ಪಡೆದು ಬೆಳೆದರು. ಹೇ ಸೌಮ್ಯೆ, ಇವರಿಗೆ ಯಾವ ಭಯವೂ ಇಲ್ಲದಂತೆ, ರೆಪ್ಪೆಯು ಕಣ್ಣುಗಳನ್ನು ಕಾಪಾಡುವಂತೆ, ಕಾಪಾಡಿದಿರಿ. ಸಜ್ಜನರಿಗೆ ತಮ್ಮದು ಅನ್ಯರದು ಎಂಬ ಭೇದವಿಲ್ಲ'' ಎಂದರು (೩೯). ಬಹುಕಾಲದಿಂದ ನೋಡಲು ತವಕಿಸುತ್ತಿದ್ದ ಗೋಪಿಯರಿಗೆ

ಭಗವಾಂಸ್ತಾಸ್ತಥಾಭೂತಾ ವಿವಿಕ್ತ ಉಪಸಂಗತಃ ।
ಆಶ್ಲಿಷ್ಯಾನಾಮಯಂ ಪೃಷ್ಟ್ವಾ ಪ್ರಹಸನ್ನಿದಮಬ್ರವೀತ್ ॥ ೪೧

ಅಪಿ ಸ್ಮರಥ ನಃ ಸಖ್ಯಃ ಸ್ವಾನಾಮರ್ಥಚಿಕೀರ್ಷಯಾ ।
ಗತಾಂಶ್ಚಿರಾಯಿತಾನ್ ಶತ್ರುಪಕ್ಷ ಕ್ಷಪಣಚೇತಸಃ ॥ ೪೨

ಅಪ್ಯವಧ್ಯಾಯಥಾಸ್ಮಾನ್ ಸ್ವಿದಕೃತಜ್ಞಾವಿಶಂಕಯಾ ।
ನೂನಂ ಭೂತಾನಿ ಭಗವಾನ್ ಯುನಕ್ತಿ ವಿಯುನಕ್ತಿ ಚ ॥ ೪೩

ವಾಯುರ್ಯಥಾ ಘನಾನೀಕಂ ತೃಣಂ ತೂಲಂ ರಜಾಂಸಿ ಚ ।
ಸಂಯೋಜ್ಯಾಕ್ಷಿಪತೇ ಭೂಯಸ್ತಥಾ ಭೂತಾನಿ ಭೂತಕೃತ್ ॥ ೪೪

ಶ್ರೀಕೃಷ್ಣನು ಗೋಚರಿಸಿದನು ! ಅವರು ಎಷ್ಟು ಆಸೆಯಿಂದ ಗೋವಿಂದನನ್ನು ನೋಡಿದರೆಂದರೆ-ತಮ್ಮ ರೆಪ್ಪೆಯು ಮುಚ್ಚುವುದನ್ನೂ ಬಯ್ದುಕೊಂಡರು! ಆತನ ಆಕೃತಿಯನ್ನು ಎಲ್ಲರೂ ಕಣ್ಣುಗಳಿಂದ ಕುಡಿದು ಹೃದಯದೊಳಗೆ ತಂದುಕೊಂಡು ಆಲಿಂಗಿಸಿದರು ! ಆ ಗೋಪಿಯರು ಶ್ರೀಕೃಷ್ಣನನ್ನು ಮನದಲ್ಲಿ ಆಲಂಗಿಸಿಕೊಂಡು, ನಿತ್ಯಯೋಗಿಗಳಿಗೂ ದುರ್ಲಭವಾದ ತನ್ಮಯೀಭಾವವನ್ನು ತಳೆದರು (೪೦). ಆ ಪರಿಸ್ಥಿತಿಯಲ್ಲಿದ್ದ ಗೋಪಿಯರನ್ನು ಭಗವಂತನು ಏಕಾಂತಸ್ಥಳಕ್ಕೆ ಕರೆದೊಯ್ದು ಆಲಿಂಗಿಸಿ ಕುಶಲಪ್ರಶ್ನೆಯನ್ನು ಮಾಡಿ ನಗುತ್ತ ಹೀಗೆಂದನು : ''ಗೆಳತಿಯರೆ, ನಮ್ಮವರ ಕಾರ್ಯವನ್ನು ನಡೆಸಿಕೊಡಬೇಕೆಂದು ಶತ್ರುಸಂಹಾರದಲ್ಲಿ ಮನಸ್ಸಿಟ್ಟು ನಾವು ಹೋಗಿ ಬಹಳ ಕಾಲವಾಯಿತು. ನಮ್ಮನ್ನು ಸ್ಮರಿಸಿಕೊಳ್ಳುತ್ತಿರುವಿರಾ ? (೪೧-೪೨). ಅಥವಾ ಈತನು ಕೃತಜ್ಞನಲ್ಲವೆಂಬ ಸ್ವಲ್ಪಶಂಕೆಯಿಂದ ಕಡೆಗಣಿಸುವಿರಾ ? ಸರ್ವಶಕ್ತವಾದ ದೈವವು ದಿಟವಾಗಿಯೂ ಜೀವಿಗಳನ್ನು ಒಂದೆಡೆ ಸೇರಿಸುತ್ತದೆ. ಹಾಗೆಯೇ ಅಗಲಿಸುತ್ತದೆ (೪೩). ಮೋಡ, ಹುಲ್ಲು, ಹತ್ತಿ ಅಥವಾ ದೂಳಿಯನ್ನು ಗಾಳಿ ಒಂದೆಡೆ ಕೂಡಿಸಿ ಮತ್ತೆ ಹೇಗೆ ಅತ್ತಿತ್ತ ತಳ್ಳಿಬಿಡುವುದೋ ಹಾಗೆ ಸೃಷ್ಟಿಕರ್ತನು ಪ್ರಾಣಿಗಳನ್ನು ಸೇರಿಸಿ, ದೂರಮಾಡುತ್ತಾನೆ.

---

೧ ಪಕ್ಷ್ಮಣೋಃ ಕೃತಂ ಪಕ್ಷ್ಮಕೃತಂ = ರೆಪ್ಪೆಗಳ ಮುಚ್ಚುವ ಕೆಲಸ. ಪಕ್ಷ್ಮಣೀ ಕರೋತೀತಿ ಪಕ್ಷಕೃತ್ ಎಂಬ ವ್ಯುತ್ಪತ್ತಿಯಿಂದ ರೆಪ್ಪೆಗಳನ್ನು ನಿರ್ಮಿಸಿದ ವಿಧಿಯನ್ನು ಎಂದೂ ಅರ್ಥಹೇಳಬಹುದು.

ಮಯಿ ಭಕ್ತಿರ್ಹಿ ಭೂತಾನಾಮಮೃತತ್ವಾಯ ಕಲ್ಪತೇ।
ದಿಷ್ಟ್ಯಾಯದಾಸೀನ್ಮತ್ಸ್ನೇಹೋ ಭವತೀನಾಂ ಮದಾಪನಃ॥ ೪೫

ಅಹಂ ಹಿ ಸರ್ವಭೂತಾನಾಮಾದಿರಂತೋಽಂತರಂ ಬಹಿಃ।
ಭೌತಿಕಾನಾಂ ಯಥಾ ಖಂ ವಾರ್ಭೂರ್ವಾಯುರ್ಜ್ಯೋತಿರೇಂಗನಾಃ॥

ಏವಂ ಹ್ಯೇತಾನಿ ಭೂತಾನಿ ಭೂತೇಷ್ವಾತ್ಮಾಽಽತ್ಮನಾ ತತಃ।
ಉಭಯಂ ಮಯ್ಯಥ ಪರೇ ಪಶ್ಯತಾಭಾತಮಕ್ಷರೇ॥ ೪೭

ಶ್ರೀಶುಕ ಉವಾಚ-

ಅಧ್ಯಾತ್ಮಶಿಕ್ಷಯಾ ಗೋಪ್ಯ ಏವಂ ಕೃಷ್ಣೇನ ಶಿಕ್ಷಿತಾಃ।
ತದನುಸ್ಮರಣಧ್ವಸ್ತಜೀವಕೋಶಾಸ್ತಮಧ್ಯಗನ್॥ ೪೮

ಗೋಪಿಯರೆ, ನನ್ನಲ್ಲಿ ಭಕ್ತಿಯು ಪ್ರಾಣಿಗಳಿಗೆ ಮೋಕ್ಷವನ್ನು ದೊರಕಿಸಿಕೊಡಲು ಸಮರ್ಥವಾಗಿದೆ. ಪುಣ್ಯವಶದಿಂದ ನಿಮಗೆ ನನ್ನಲ್ಲಾದ ಪ್ರೇಮವು ನಿಮ್ಮನ್ನು ನನ್ನಲ್ಲಿಸೇರಿಸುವುದು (೪೪-೪೫). ಎಲೌ ಸ್ತ್ರೀಯರೆ, ಸಕಲಜೀವಜಾತಗಳಿಗೂ ನಾನೇ ಆದಿ. ನಾನೇ ಅಂತ. ಒಳಗೆ ಹೊರಗೆ ಎಲ್ಲವೂ ನಾನೇ. ಭೌತಿಕ ಪದಾರ್ಥಗಳಾದ ಘಟಪಟಾದಿಗಳಿಗೆ ಆಕಾಶ, ಜಲ, ಪೃಥ್ವಿ, ವಾಯು ಅಗ್ನಿಗಳೆಂಬ ಪಂಚಭೂತಗಳು ಹೇಗೋ ಹಾಗೆ (೪೬). ಘಟಪಟಾದಿ ಪದಾರ್ಥಗಳಂತೆಯೇ ಸಕಲ ಪ್ರಾಣಿಗಳೂ ಪಂಚಮಹಾಭೂತಗಳಲ್ಲಿ ಸೇರಿಕೊಳ್ಳುತ್ತವೆ. ಜೀವಾತ್ಮನು ಭೋಕ್ತೃ[೧]ರೂಪದಿಂದ ಇದ್ದಾನೆ. ಪಂಚಭೂತಗಳು, ಜೀವಾತ್ಮ-ಈ ಉಭಯವೂ ಸಹ ಅವ್ಯಯನೂ ಪರಮಾತ್ಮನೂ ಆದ ನನ್ನಲ್ಲಿ ಇದೆ. ಇದನ್ನು ನೀವು ತಿಳಿದು ಕೊಳ್ಳಿರಿ'' ಎಂದು ಬೋಧಿಸಿದನು (೪೭). ಈ ಪ್ರಕಾರವಾಗಿ ಶ್ರೀಕೃಷ್ಣನಿಂದ ಅಧ್ಯಾತ್ಮವಿದ್ಯೆಯ ಉಪದೇಶವನ್ನು ಪಡೆದ ಗೋಪಿಯರು ಆತನ ಸತತಧ್ಯಾನದಲ್ಲಿ ನಿರತರಾಗಿ, ಲಿಂಗಶರೀರವನ್ನು ಭಂಗಿಸಿ, ಮುಂದೆ ಪರಮಾತ್ಮನನ್ನು ಸೇರಿದರು (೪೮).

---

೧ ಜೀವನು ಭೋಕ್ತೃವೆನಿಸುತ್ತಾನೆ. ಪಂಚಭೂತಗಳು ಭೋಗ್ಯ ಎಂದರೆ ವಿಷಯ. ಜೀವನು ಭೋಕ್ತಾ ಎಂದರೆ ವಿಷಯಿ. ಈತನು ಪಂಚಭೂತಗಳಲ್ಲಿ ಸೇರುವುದಿಲ್ಲ. ಘಟಕ್ಕೆ ಮಣ್ಣು ಇದ್ದಂತೆ ಇವೆಲ್ಲಕ್ಕೂ ಪರಮಾತ್ಮನು ಮೂಲಕಾರಣ-ಎಂದು ಅಭಿಪ್ರಾಯ.

ಆಹುಶ್ಚ ತೇ ನಲಿನನಾಭ ಪದಾರವಿಂದಂ
ಯೋಗೇಶ್ವರೈರ್ಹೃದಿ ವಿಚಿಂತ್ಯಮಗಾಧಬೋಧೈಃ।
ಸಂಸಾರಕೂಪಪತಿತೋತ್ತರಣಾವಲಂಬಂ
ಗೇಹಂಜುಷಾಮಪಿ ಮನಸ್ಯುದಿಯಾತ್ ಸದಾ ನಃ॥ ೪೯

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ದ್ವ್ಯಶೀತಿತಮಾಧ್ಯಾಯಃ

ತ್ರ್ಯಶೀತಿತಮಾಧ್ಯಾಯಃ

ಶ್ರೀಶುಕ ಉವಾಚ-
ತಥಾನುಗೃಹ್ಯ ಭಗವಾನ್ ಗೋಪೀನಾಂ ಸ ಗುರುರ್ಗತಿಃ।
ಯುಧಿಷ್ಠಿರಮಥಾಪೃಚ್ಛತ್ ಸರ್ವಾಂಶ್ಚ ಸುಹೃದೋಽವ್ಯಯಮ್॥ ೧

ತ ಏವಂ ಲೋಕನಾಥೇನ ಪರಿಪೃಷ್ಟಾಃ ಸುಸತ್ಕೃತಾಃ।
ಪ್ರತ್ಯೂಚುರ್ಹೃಷ್ಟಮನಸಸ್ತತ್ಪಾದೇಕ್ಷಾಹತಾಂಹಸಃ॥ ೨

ಶ್ರೀಕೃಷ್ಣನ ಉಪದೇಶವನ್ನು ಕೇಳಿದಮೇಲೆ ಆ ಗೋಪಿಯರು "ಹೇ ಸ್ವಾಮಿ-ಪದ್ಮನಾಭ, ಮಹಾಜ್ಞಾನಿಗಳಾದ ಯೋಗೇಶ್ವರರಿಂದ ಹೃದಯದಲ್ಲಿ ಧ್ಯಾನಿಸಲ್ಪಡತಕ್ಕದ್ದೂ ಸಂಸಾರಕೂಪದಲ್ಲಿ ಬಿದ್ದವರನ್ನು ಮೇಲೆತ್ತಲು ಅವಲಂಬನವಾದದ್ದೂ ಆಗಿರುವ ನಿನ್ನ ಅಡಿದಾವರೆಯು ಸಂಸಾರಿಗಳಾದ ನಮ್ಮ ಮನಸ್ಸಿನಲ್ಲಿಸರ್ವದಾ ಉದಿತವಾಗಿ ಕಾಣಿಸುತ್ತಿರಲಿ" ಎಂದು ನುಡಿದರು (೪೯).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿಎಂಬತ್ತೆರಡನೆಯ ಅಧ್ಯಾಯ

ಅಧ್ಯಾಯ ೮೩

ಶ್ರೀಕೃಷ್ಣನ ಪತ್ನಿಯರು ತಮ್ಮತಮ್ಮ ವಿವಾಹ ವೃತ್ತಾಂತವನ್ನು ದ್ರೌಪದಿಗೆ ಹೇಳುವುದು.

ಜಗದ್ಗುರವೂ ಸರ್ವರಿಗೆ ಗತಿಯೂ ಆದ ಭಗವಂತನು ಈ ಪ್ರಕಾರವಾಗಿ ಉಪದೇಶದಿಂದ ಗೋಪಿಯರನ್ನು ಅನುಗ್ರಹಿಸಿ, ಧರ್ಮರಾಜನ ಮತ್ತು ಇತರ ಮಿತ್ರರ ಕುಶಲವನ್ನು ವಿಚಾರಿಸಿದನು. ಲೋಕನಾಥನು ಆದರಪೂರ್ವಕವಾಗಿ

ಕುತೋಽಶಿವಂ ತ್ವಚ್ಚರಣಾಂಬುಜಾಸವಂ
ಮಹನ್ಮನಸ್ತೋ ಮುಖನಿಃಸೃತಂ ಕ್ವಚಿತ್ ।
ಪಿಬಂತಿ ಯೇ ಕರ್ಮಪುಟೈರಲಂ ಪ್ರಭೋ
ದೇಹಂಭೃತಾಂ ದೇಹಕೃದಸ್ಮೃತಿಚ್ಛಿದಮ್ ॥ ೩

ಹಿತ್ವಾಽಽತ್ಮಧಾಮ ವಿಧುತಾತ್ಮಕೃತತ್ರ್ಯವಸ್ಥ-
ಮಾನಂದಸಂಪ್ಲವಮಖಂಡಮಕುಂಠಬೋಧಮ್ ।
ಕಾಲೋಪಸೃಷ್ಟನಿಗಮಾವನ ಆತ್ತಯೋಗ-
ಮಾಯಾಕೃತಿಂ ಪರಮಹಂಸಗತಿಂ ನತಾಃ ಸ್ಮ ॥ ೪

ಕುಶಲವನ್ನು ವಿಚಾರಿಸಿದಾಗ ಅವರು ಸಂತುಷ್ಟರಾದರು. ಆತನ ಪಾದದರ್ಶನದಿಂದ ತಮ್ಮ ಪಾಪವನ್ನು ಹೋಗಲಾಡಿಸಿಕೊಂಡು ಹೀಗೆಂದರು (೧-೨) : "ಹೇ ಸ್ವಾಮಿ, ಮಹಾತ್ಮರ ಮನಸ್ಸಿನಲ್ಲಿದ್ದು ಬಾಯಿಂದ ಹೊರಡುವ, ನಿನ್ನ ಪಾದಪದ್ಮ ಕಥಾಮೃತವನ್ನು ಕಿವಿಗಳಿಂದ ಯಾರು ಕುಡಿಯುತ್ತಾರೋ ಅವರಿಗೆ ಅಶುಭವೆಲ್ಲಿಯದು ? ಆ ಅಮೃತವು ದೇಹಿಗಳಿಗೆ ದೇಹವನ್ನು ಕೊಟ್ಟು ನಿನ್ನ ಮರವೆಯನ್ನು ಮರೆಸತಕ್ಕದ್ದು(೩). ಸ್ವಪ್ರಕಾಶವಾದ ನಿನ್ನ ನಿಜಸ್ವರೂಪವಾದರೋ ಬುದ್ಧಿ ನಿಮಿತ್ತಕವಾದ ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ಮೂರು ಅವಸ್ಥೆಗಳನ್ನು ದಾಟಿದ್ದು. ಆನಂದಕಂದವೂ ಅಪರಿಚ್ಛಿನ್ನವೂ ನಿತ್ಯಾಜ್ಞಾನರೂಪವೂ ಆದದ್ದು. ಅದನ್ನು ನೀನು ಪರಿತ್ಯಜಿಸಿ, ಕಾಲವಶದಿಂದ ವಿಪತ್ತಿಗೆ ಸಿಕ್ಕಿದ ವೇದಗಳ ಉದ್ಧಾರಕ್ಕಾಗಿ ಯೋಗಮಾಯೆಯಿಂದ ಮಾನವಾಕೃತಿಯನ್ನು ತಳೆದಿದ್ದೀಯೆ. ಪರಮಹಂಸರಿಗೆ ಶರಣ್ಯನಾದ ನಿನಗೆ, ಇದೋ, ತಲೆಬಾಗಿ, ನಮಸ್ಕರಿಸುತ್ತೇನೆ" ಎಂದರು[೧] (೪).

---

೧ ಈ ಶ್ಲೋಕದಲ್ಲಿ 'ಹಿತ್ವಾ' ಎಂಬುದನ್ನು ಹಿ-ತ್ವಾ ಎಂದು ವಿಭಜಿಸಿ ತ್ವಾ = ನಿನ್ನನ್ನು ಎಂದು ಶ್ರೀಧರಿಯದಲ್ಲಿ ಅರ್ಥಮಾಡಿದ್ದಾರೆ. ಅಲ್ಲದೆ, ಆತ್ಮಧಾಮ=ದೇಹ ದೈಹಿಕಸಂಗವನ್ನು ಹಿತ್ವಾ= ತ್ಯಜಿಸಿ ಎಂದೂ ಅರ್ಥಹೇಳಿದ್ದಾರೆ. ನಮ್ಮ ಅನುವಾದದಲ್ಲಿ ಆತ್ಮಧಾಮ=ಸ್ವಪ್ರಕಾಶವಾದ ನಿಜಸ್ವರೂಪವನ್ನು ಹಿತ್ವಾ=ಪರಿತ್ಯಜಿಸಿ ಎಂದು ಇಟ್ಟುಕೊಳ್ಳಲಾಗಿದೆ.

ಋಷಿರುವಾಚ-

ಇತ್ಯುತ್ತಮಶ್ಲೋಕಶಿಖಾಮಣಿಂ ಜನೇ-
ಷ್ವಭಿಷ್ಟುವತ್ಸ್ವಂಧಕ ಕೌರವಸ್ತ್ರಿಯಃ ।
ಸಮೇತ್ಯ ಗೋವಿಂದಕಥಾ ಮಿಥೋಽಗೃಣಂ-
ಸ್ತ್ರಿಲೋಕಗೀತಾಃ ಶೃಣು ವರ್ಣಯಾಮಿ ತೇ ॥ ೫

ದ್ರೌಪದ್ಯುವಾಚ-

ಹೇ ವೈದರ್ಭ್ಯಚ್ಯುತೋ ಭದ್ರೇ ಹೇ ಜಾಂಬವತಿ ಕೌಸಲೇ ।
ಹೇ ಸತ್ಯಭಾಮೇ ಕಾಲಿಂದಿ ಶೈಬ್ಯೇ ರೋಹಿಣಿ ಲಕ್ಷ್ಮಣೇ ॥ ೬

ಹೇ ಕೃಷ್ಣಪತ್ನ್ಯ ಏತನ್ನೋ ಬ್ರೂತ ವೋ ಭಗವಾನ್ ಸ್ವಯಮ್ ।
ಉಪಯೇಮೇ ಯಥಾ ಲೋಕಮನುಕುರ್ವನ್ ಸ್ವಮಾಯಯಾ ॥ ೭

ರುಕ್ಮಿಣ್ಯುವಾಚ-

ಚೈದ್ಯಾಯ ಮಾರ್ಪಯಿತುಮುದ್ಯತ ಕಾರ್ಮುಕೇಷು
ರಾಜಸ್ವಜೇಯ ಭಟಶೇಖರಿತಾಂಘ್ರಿರೇಣುಃ ।
ನಿನ್ಯೇ ಮೃಗೇಂದ್ರ ಇವ ಭಾಗಮಜಾವಿಯೂಥಾತ್
ತಚ್ಛ್ರೀನಿಕೇತ ಚರಣೋಽಸ್ತು ಮಮಾರ್ಚನಾಯ ॥ ೮

ಪರೀಕ್ಷಿತರಾಜ, ಧರ್ಮರಾಜನೇ ಮೊದಲಾದ ಜನರು ಈ ವಿಧವಾಗಿ ಉತ್ತಮ ಶ್ಲೋಕಶಿರೋಮಣಿಯಾದ ಗೋವಿಂದನನ್ನು ಸ್ತುತಿಸುತ್ತಿರಲು, ಯಾದವ ಕೌರವ ಸ್ತ್ರೀಯರು ಇನ್ನೊಂದೆಡೆ ಸೇರಿ ಲೋಕತ್ರಯಸ್ತುತವಾದ ಗೋವಿಂದನ ಲೀಲೆಗಳನ್ನು ಹೇಳಿಕೊಳ್ಳುತ್ತಿದ್ದರು. ಅದರ ಒಂದು ಪ್ರಕಾರವನ್ನು ನಿನಗೆ ಹೇಳುತ್ತೇನೆ, ಕೇಳು (೫). ದ್ರೌಪದಿಯು ಶ್ರೀಕೃಷ್ಣನ ಪತ್ನಿಯರನ್ನು ಕುರಿತು ಹೀಗೆಂದಳು : ''ಹೇ ವೈದರ್ಭಿ- ರುಕ್ಮಿಣಿ, ಭದ್ರೇ- ಜಾಂಬವತಿ, ಕೋಸಲರಾಜಪುತ್ರಿ- ಸತ್ಯೆ, ಹೇ ಸತ್ಯಭಾಮೆ, ಕಾಲಿಂದಿ, ಶೈಬ್ಯೆ- ಮಿತ್ರವಿಂದೆ, ರೋಹಿಣಿ, ಲಕ್ಷ್ಮಣೆ, ಎಲೌ ಮತ್ತಿತರ ಶ್ರೀಕೃಷ್ಣಪತ್ನಿಯರೆ, ಭಗವಾನ್ ಅಚ್ಯುತನು ಮಾಯಾವಿಲಾಸದಿಂದ ಲೋಕವನ್ನನುಸರಿಸಿ ನಿಮ್ಮನ್ನು ಮದುವೆಯಾದನಷ್ಟೆ, ಆ ಪ್ರಕಾರವನ್ನು ತಿಳಿಸಿರಿ!'' ಎಂದಳು (೬-೭). ಆಗ ರುಕ್ಮಿಣಿಯು ಇಂತೆಂದಳು : ''ದ್ರೌಪದಿ, ಕೇಳು. ಚೇದಿರಾಜನಾದ ಶಿಶುಪಾಲನಿಗೆ ನನ್ನನ್ನು ಕೊಡಿಸಬೇಕೆಂದು ಜರಾಸಂಧಾದಿಗಳು

ಸತ್ಯಭಾಮೋವಾಚ-

ಯೋ ಮೇ ಸನಾಭಿವಧತಪ್ತಹೃದಾ ತತೇನ
ಲಿಪ್ತಾಭಿಶಾಪಮಪಮಾರ್ಷ್ಟುಮುಪಾಜಹಾರ ।
ಜಿತ್ವರ್ಕ್ಷರಾಜಮಥ ರತ್ನಮದಾತ್ ಸ ತೇನ
ಭೀತಃ ಪಿತಾದಿಶತ ಮಾಂ ಪ್ರಭವೇಽಪಿ ದತ್ತಾಮ್ ॥ ೯

ಜಾಂಬವತ್ಯುವಾಚ-

ಪ್ರಾಜ್ಞಾಯ ದೇಹಕೃದಮುಂ ನಿಜನಾಥ ದೇವಂ
ಸೀತಾಪತಿಂ ತ್ರಿಣವಹಾನ್ಯಮುನಾಭ್ಯಯುಧ್ಯತ್ ।
ಜ್ಞಾತ್ವಾ ಪರೀಕ್ಷಿತ ಉಪಾಹರದರ್ಹಣಂ ಮಾಂ
ಪಾದೌ ಪ್ರಗೃಹ್ಯ ಮಣಿನಾಹಮಮುಷ್ಯ ದಾಸೀ ॥ ೧೦

ಧನುರ್ಧಾರಿಗಳು ನಿಂತಿದ್ದರು. ಆಗ ಅಚ್ಯುತನು ಬಂದು, ಮೇಕೆಕುರಿಗಳ ಮಂದೆಗೆ ಸಿಂಹವು ನುಗ್ಗಿ ತನ್ನ ಪಾಲನ್ನು ಕೊಂಡೊಯ್ಯುವಂತೆ, ಆ ಯೋಧರ ತಲೆಗಳನ್ನು ಕಾಲಿಂದ ಮೆಟ್ಟಿ ಧೂಳನ್ನು ಕೊಡಹಿ, ನನ್ನನ್ನು ಕರೆದೊಯ್ದನು. ಆ ಶ್ರೀನಿಕೇತನನ ಚರಣವು ಸದಾ ನನ್ನ ಅರ್ಚನೆಯನ್ನು ಸ್ವೀಕರಿಸುತ್ತಿರಲಿ'' (೮).
ಸತ್ಯಭಾಮೆ ಹೇಳಿದಳು : ''ನನ್ನ ತಮ್ಮ ಪ್ರಸೇನನ ಸಾವಿನಿಂದ ದುಃಖಿತನಾದ ನನ್ನ ತಂದೆ ಸತ್ರಾಜಿತನು ಈ ಪ್ರಭುವಿನ ಮೇಲೆ ಅಪವಾದವನ್ನು ಹೊರಿಸಿದನು. ಅದನ್ನು ನೀಗಿಕೊಳ್ಳುವುದಕ್ಕಾಗಿ ಈ ಸ್ವಾಮಿಯು ಅರಣ್ಯಕ್ಕೆ ಹೋಗಿ ಜಾಂಬವಂತನನ್ನು ಗೆದ್ದು ಸ್ಯಮಂತಕಮಣಿಯನ್ನು ತಂದು ನನ್ನ ತಂದೆಗೆ ಕೊಟ್ಟನು. ಆಗ ಸುಳ್ಳು ಅಪವಾದವನ್ನು ಹೊರಿಸಿದನೆಂಬ ಭಯದಿಂದ ನನ್ನ ತಂದೆ, ಅಕ್ರೂರನಿಗೆ ವಾಗ್ದತ್ತಳಾಗಿದ್ದರೂ ನನ್ನನ್ನು, ಈ ಸ್ವಾಮಿಗೆ ಮದುವೆ ಮಾಡಿಕೊಟ್ಟನು'' (೯).
ಜಾಂಬವತಿ ಇಂತೆಂದಳು : ''ನನ್ನ ತಂದೆ ಜಾಂಬವಂತನು ಶ್ರೀಕೃಷ್ಣನನ್ನರಿಯದೆ ಈತನೊಡನೆ ಇಪ್ಪತ್ತೊಂದು ದಿನಗಳವರೆಗೆ ಯುದ್ಧ ಮಾಡಿದನು. ಈತನೇ ತನ್ನ ಸ್ವಾಮಿಯೂ ದೇವರೂ ಆದ ಶ್ರೀರಾಮನೆಂಬುದು ನನ್ನ ತಂದೆಗೆ ಗೊತ್ತಿರಲಿಲ್ಲ. ಅನಂತರ ಪರೀಕ್ಷೆ ಮಾಡಿದವನಾಗಿ ಶ್ರೀರಾಮನೆಂಬುದನ್ನರಿತು ಈತನ ಪಾದಗಳಿಗೆ ವಂದಿಸಿ ಸ್ಯಮಂತಕಮಣಿಯ ಜೊತೆಗೆ ನನ್ನನ್ನು ಕಾಣಿಕೆಯಾಗಿ ಕೊಟ್ಟನು.

ಕಾಲಿಂದ್ಯುವಾಚ-

ತಪಶ್ಚರಂತೀಮಾಜ್ಞಾಯ ಸ್ವಪಾದಸ್ಪರ್ಶನಾಶಯಾ ।
ಸಖ್ಯೋಪೇತ್ಯಾಗ್ರಹೀತ್ ಪಾಣಿಂ ಯೋಽಹಂ ತದ್ಗೃಹಮಾರ್ಜನೀ ॥

ಮಿತ್ರವಿಂದೋವಾಚ-

ಯೋ ಮಾಂ ಸ್ವಯಂವರ ಉಪೇತ್ಯ ವಿಜಿತ್ಯ ಭೂಪಾನ್
ನಿನ್ಯೇ ಶ್ವಯೂಥಗಮಿವಾತ್ಮಬಲಿಂ ದ್ವಿಪಾರಿಃ ।
ಭ್ರಾತೄಂಶ್ಚ ಮೇಽಪಕುರುತಃ ಸ್ವಪುರಂ ಶ್ರಿಯೌಕ -
ಸ್ತಸ್ಯಾಸ್ತು ಮೇಽನುಭವಮಂಘ್ರ್ಯವನೇಜನತ್ವಮ್ ॥ ೧೨

ಸತ್ಯೋವಾಚ-

ಸಪ್ತೋಕ್ಷಣೋಽತಿಬಲವೀರ್ಯಸುತೀಕ್ಷ್ಣಶೃಂಗಾನ್
ಪಿತ್ರಾ ಕೃತಾನ್ ಕ್ಷಿತಿಪವೀರ್ಯಪರೀಕ್ಷಣಾಯ ।
ತಾನ್ ವೀರದುರ್ಮದಹನಸ್ತರಸಾ ನಿಗೃಹ್ಯ
ಕ್ರೀಡನ್ ಬಬಂಧ ಹ ಯಥಾ ಶಿಶವೋಽಜತೋಕಾನ್ ॥೧೩

ಅಂದಿನಿಂದ ನಾನು ಶ್ರೀಕೃಷ್ಣನ ದಾಸಿಯಾಗಿದ್ದೇನೆ'' (೧೦). ಕಾಳಿಂದಿ ಹೇಳಿದಳು: ''ದ್ರೌಪದಿ, ಕೇಳು. ನಾನು ಗೋವಿಂದನ ಪಾದಸ್ಪರ್ಶವನ್ನು ಬಯಸಿ (ಯಮುನಾತೀರದಲ್ಲಿ) ತಪಸ್ಸು ಮಾಡುತ್ತಿದ್ದೆನು. ಅದನ್ನರಿತು ಈ ಮಹಾನುಭಾವನು ತನ್ನ ಮಿತ್ರನಾದ ಅರ್ಜುನನೊಡನೆ ಅಲ್ಲಿಗೆ ಬಂದು ನನ್ನ ಪಾಣಿಗ್ರಹಣವನ್ನು ಮಾಡಿದನು. ನಾನು ಶ್ರೀಕೃಷ್ಣನ ಮನೆಯಲ್ಲಿ ಒಬ್ಬ ಕಸಗುಡಿಸತಕ್ಕವಳು'' (೧೧). ಮಿತ್ರವಿಂದೆ ಹೀಗೆಂದಳು ''ದ್ರೌಪದಿ, ಲಾಲಿಸು. ಗೋವಿಂದನು ನನ್ನ ಸ್ವಯಂವರಕ್ಕೆ ಬಂದು ಅಲ್ಲಿ ನೆರದಿದ್ದ ರಾಜರನ್ನೂ ಅಪಕಾರಿಗಳಾದ ನನ್ನ ಸೋದರರನ್ನೂ ಜಯಿಸಿದನು. ನಾಯಿಗಳ ಹಿಂಡಿನ ನಡುವೆ ಇರುವ ತನ್ನ ಆಹಾರವನ್ನು ಕಂಠೀರವವು ಸೆಳೆದೊಯ್ಯುವಂತೆ, ನನ್ನನ್ನು ತನ್ನ ನಗರಕ್ಕೆ ಕರೆದೊಯ್ದನು. ಲಕ್ಷ್ಮೀನಿವಾಸನಾದ ಈತನ ಕಾಲು ತೊಳೆಯುವ ಸೌಭಾಗ್ಯ ನನಗೆ ಜನ್ಮಜನ್ಮಗಳಲ್ಲಿಯೂ ಲಭಿಸಲಿ'' (೧೨). ಸತ್ಯೆ ನುಡಿದಳು : ''ನನ್ನ ತಂದೆ ನಗ್ನಜಿತನು ರಾಜರ ಬಲಪರೀಕ್ಷೆಗಾಗಿ ಏಳು ಹೋರಿಗಳನ್ನುಸಾಕಿದ್ದನು. ಅವು ನಿರತಿಶಯ ಬಲಪರಾಕ್ರಮವುಳ್ಳವು. ಹರಿತವಾದ

ಯ ಇತ್ಥಂ ವೀರ್ಯಶುಲ್ಕಾಂ ಮಾಂ ದಾಸೀಭಿಶ್ಚತುರಂಗಿಣೀಮ್ ।
ಪಥಿ ನಿರ್ಜಿತ್ಯ ರಾಜನ್ಯಾನ್ ನಿನ್ಯೇ ತದ್ದಾಸ್ಯಮಸ್ತು ಮೇ ॥ ೧೪

ಭದ್ರೋವಾಚ-

ಪಿತಾ ಮೇ ಮಾತುಲೇಯಾಯಾ ಸ್ವಯಮಾಹೂಯ ದತ್ತವಾನ್ ।
ಕೃಷ್ಣೇ ಕೃಷ್ಣಾಯ ತಚ್ಚಿತ್ತಾಮಕ್ಷೌಹಿಣ್ಯಾ ಸಖೀಜನೈಃ ॥ ೧೫

ಅಸ್ಯ ಮೇ ಪಾದಸಂಸ್ಪರ್ಶೋ ಭವೇಜ್ಜನ್ಮನಿ ಜನ್ಮನಿ ।
ಕರ್ಮಭಿರ್ಭ್ರಾಮ್ಯಮಾಣಾಯಾ ಯೇನ ತಚ್ಛ್ರೇಯ ಆತ್ಮನಃ ॥ ೧೬

ಲಕ್ಷ್ಮಣೋವಾಚ-

ಮಮಾಪಿ ರಾಜ್ಞ್ಯಚ್ಯುತಜನ್ಮಕರ್ಮ
ಶ್ರುತ್ವಾ ಮುಹುರ್ನಾರದಗೀತಮಾಸ ಹ ।
ಚಿತ್ತಂ ಮುಕುಂದೇ ಕಿಲ ಪದ್ಮಹಸ್ತಯಾ
ವೃತಃ ಸುಸಂಮೃಶ್ಯ ವಿಹಾಯ ಲೋಕಪಾನ್ ॥ ೧೭

ಕೊಂಬುಗಳಿದ್ದವು. ಎಂತಹ ವೀರರು ಬಂದರೂ ಅವರ ಅಹಂಕಾರವನ್ನು ಅಡಗಿಸಿಬಿಡುತ್ತಿದ್ದವು. ಅಂತಹ ಹೋರಿಗಳನ್ನು ಈ ಮುಕುಂದನು ಪರಾಕ್ರಮದಿಂದ ನಿಗ್ರಹಿಸಿ, ಮಕ್ಕಳು ಮೇಕೆಯ ಮರಿಗಳನ್ನು ಹಿಡಿಯುವಂತೆ ಹಿಡಿದು ಬಗ್ಗಿಸಿ ಲೀಲೆಯಿಂದ ಕಟ್ಟಿ ಬಿಗಿದನು! ಹೀಗೆ ವೀರ್ಯ ಶುಲ್ಕೆಯಾಗಿದ್ದ ನನ್ನನ್ನು ದಾಸಿಯರೊಡನೆ ಮತ್ತು ಚತುರಂಗ ಬಲದೊಡನೆ ಕರೆದುಕೊಂಡು ಬರುತ್ತಾ ದಾರಿಯಲ್ಲಿ ಅಡ್ಡಗಟ್ಟಿದ ರಾಜನ್ಯರನ್ನು ಸದೆಬಡಿದು, ಈ ಮಹಾತ್ಮನು ನನ್ನನ್ನು ತಂದುಕೊಂಡನು. ಈತನ ದಾಸ್ಯವು ನನಗೆ ನಿರಂತರ ಇರಲಿ'' (೧೩-೧೪). ಆಮೇಲೆ ಭದ್ರೆ ಹೇಳಿದಳು: ''ದ್ರುಪದನಂದನೆ-ಕೃಷ್ಣೆ ಆಕರ್ಣಿಸು. ಶ್ರೀಕೃಷ್ಣನು ನನ್ನ ಸೋದರಮಾವನ ಮಗ. ಇವನಲ್ಲಿ ನನಗೆ ಮನಸ್ಸು ನೆಟ್ಟಿತ್ತು. ಆದ್ದರಿಂದ ನನ್ನ ತಂದೆ ತಾನಾಗಿ ಈತನನ್ನು ಆಹ್ವಾನಿಸಿ ಮದುವೆಮಾಡಿ, ಒಂದು ಅಕ್ಷೌಹಿಣೀ ಸಖೀಜನರೊಡನೆ ನನ್ನನ್ನು ಕಳಿಸಿಕೊಟ್ಟನು. ನನಗೆ ಶ್ರೀಕೃಷ್ಣನ ಪಾದಸೇವೆಯು ಜನ್ಮ ಜನ್ಮಗಳಲ್ಲಿಯೂ ದೊರೆಯಲೆಂದು ಹಾರೈಸುತ್ತಿದ್ದೇನೆ. ಕರ್ಮಬಂಧನದಲ್ಲಿ ಬಳಲುವ ನನಗೆ ಅದರಿಂದ ಶ್ರೇಯಸ್ಸಾಗುವುದು''

ಜ್ಞಾತ್ವಾ ಮಮ ಮತಂ ಸಾಧ್ವಿ ಪಿತಾ ದುಹಿತೃವತ್ಸಲಃ।
ಬೃಹತ್ಸೇನ ಇತಿ ಖ್ಯಾತಸ್ತತ್ರೋಪಾಯಮಚೀಕರತ್ ॥ ೧೮

ಯಥಾ ಸ್ವಯಂವರೇ ರಾಜ್ಞಿ ಮತ್ಸ್ಯಃ ಪಾರ್ಥೇಪ್ಸಯಾ ಕೃತಃ।
ಅಯಂ ತು ಬಹಿರಾಚ್ಛನ್ನೋ ದೃಶ್ಯತೇ ಸ ಜಲೇ ಪರಮ್ ॥ ೧೯

ಶ್ರುತ್ವೈತತ್ ಸರ್ವತೋ ಭೂಪಾ ಆಯಯುರ್ಮತ್ಪಿತುಃ ಪುರಮ್ ।
ಸರ್ವಾಸ್ತ್ರ ಶಸ್ತ್ರತತ್ತ್ವಜ್ಞಾಃ ಸೋಪಾಧ್ಯಾಯಾಃ ಸಹಸ್ರಶಃ ॥ ೨೦

ಪಿತ್ರಾ ಸಂಪೂಜಿತಾಃ ಸರ್ವೇ ಯಥಾ ವೀರ್ಯಂ ಯಥಾ ವಯಃ ।
ಆದದುಃ ಸಶರಂ ಚಾಪಂ ವೇದ್ಧುಂ ಪರ್ಷದಿ ಮದ್ಧಿಯಃ ॥ ೨೧

(೧೫-೧೬). ಅನಂತರ ಲಕ್ಷ್ಮಣೆ ನುಡಿದಳು: ''ಮಹಾರಾಣಿ-ದ್ರೌಪದಿ, ನಾರದರು ಆಗಾಗ ಹೇಳುತ್ತಿದ್ದ ಅಚ್ಯುತನ ಅವತಾರ ವೃತ್ತಾಂತವನ್ನೂ ಸಾಹಸ ಕಾರ್ಯಗಳನ್ನೂ ಕೇಳಿ ನನ್ನ ಮನಸ್ಸೂ ಸಹ ಮುಕುಂದನಲ್ಲಿ ನೆಲೆಸಿತು. ಪದ್ಮಹಸ್ತೆಯಾದ ಲಕ್ಷ್ಮೀದೇವಿಯು ಚೆನ್ನಾಗಿ ವಿಮರ್ಶಿಸಿ ದೇವೇಂದ್ರಾದಿ ಲೋಕಪಾಲರನ್ನೂ ಉಪೇಕ್ಷಿಸಿ, ಈತನನ್ನು ವರಿಸಿದ್ದಳಂತೆ ! (೧೭). ನನ್ನ ಅಭಿಲಾಷೆಯನ್ನರಿತು ನನ್ನ ತಂದೆಯಾದ ಬೃಹತ್‌ಸೇನನು ಪುತ್ರೀವಾತ್ಸಲ್ಯದಿಂದ ಅದಕ್ಕಾಗಿ ಒಂದು ಉಪಾಯವನ್ನು ಹೂಡಿದನು. ದ್ರೌಪದಿ, ನಿನ್ನ ತಂದೆಯು ಅರ್ಜುನನನ್ನು ಅರಸುವುದಕ್ಕಾಗಿ ಸ್ವಯಂವರದಲ್ಲಿ ಮತ್ಸ್ಯಯಂತ್ರವನ್ನು ಅಳವಡಿಸಿದ್ದನಷ್ಟೆ ಹಾಗೆಯೇ ನನ್ನತಂದೆಯೂ ಮಾಡಿದನು. ವ್ಯತ್ಯಾಸವೇನೆಂದರೆ, ನಿಮ್ಮ ಮತ್ಸ್ಯಯಂತ್ರಹೊರಗಡೆ ಮಾತ್ರ ಮರೆಯಾಗಿತ್ತು. (ಸ್ತಂಭದ ಬುಡದಿಂದ ನೋಡಿದರೆ ಮೇಲಕ್ಕೆ ಗುರಿ ಕಾಣುತಿತ್ತು) ನಮ್ಮ ಮತ್ಸ್ಯಯಂತ್ರದಲ್ಲಿ ಗುರಿಯು ಒಳಗಿನಿಂದಲೂ ಮರೆಯಾಗಿತ್ತು. ಕೆಳಗೆ ನೀರಿನಲ್ಲಿ ಮಾತ್ರ ಅದು ಕಾಣುತ್ತಿತ್ತು (ನೋಡಬೇಕಾದ್ದು ಕೆಳಗೆ, ಹೊಡೆಯಬೇಕಾದ್ದು ಮೇಲೆ) (೧೮-೧೯). ಈ ಸ್ವಯಂವರ ವಾರ್ತೆಯನ್ನು ಕೇಳಿ ಅಸ್ತ್ರಶಸ್ತ್ರಗಳಲ್ಲಿ ನಿಪುಣರಾದ ಸಾವಿರಾರು ಭೂಪಾಲರು ತಮ್ಮ ಪುರೋಹಿತರೊಡನೆ ನನ್ನ ತಂದೆಯ ರಾಜಧಾನಿಗೆ ಆಗಮಿಸಿದರು. ಅವರೆಲ್ಲರನ್ನೂ ನನ್ನ ತಂದೆ ಅವರವರ

ಆದಾಯ ವ್ಯಸೃಜನ್ ಕೇಚಿತ್ ಸಜ್ಯಂ ಕರ್ತುಮನೀಶ್ವರಾಃ ।
ಆಕೋಟಿ ಜ್ಯಾಂ ಸಮುತ್ಕೃಷ್ಯ ಪೇತುರೇಕೇಽಮುನಾ ಹತಾಃ ॥ ೨೨

ಸಜ್ಯಂ ಕೃತ್ವಾಪರೇ ವೀರಾ ಮಾಗಧಾಂಬಷ್ಠ ಚೇದಿಪಾಃ ।
ಭೀಮೋ ದುರ್ಯೋಧನಃ ಕರ್ಣೋ ನಾವಿಂದಂಸ್ತದವಸ್ಥಿತಿಮ್ ॥ ೨೩

ಮತ್ಸ್ಯಾಭಾಸಂ ಜಲೇ ವೀಕ್ಷ್ಯ ಜ್ಞಾತ್ವಾ ಚ ತದವಸ್ಥಿತಿಮ್ ।
ಪಾರ್ಥೋ ಯತ್ತೋಽಸೃಜದ್ ಬಾಣಂ ನಾಚ್ಛಿನತ್ ಪಸ್ಪೃಶೇ ಪರಮ್

ರಾಜನ್ಯೇಷು ನಿವೃತ್ತೇಷು ಭಗ್ನಮಾನೇಷು ಮಾನಿಷು ।
ಭಗವಾನ್ ಧನುರಾದಾಯ ಸಜ್ಯಂ ಕೃತ್ವಾಥ ಲೀಲಯಾ ॥ ೨೫

ತಸ್ಮಿನ್ ಸಂಧಾಯ ವಿಶಿಖಂ ಮತ್ಸ್ಯಂ ವೀಕ್ಷ್ಯ ಸಕೃಜ್ಜಲೇ ।
ಛಿತ್ತ್ವೇಷುಣಾಪಾತಯತ್ತಂ ಸೂರ್ಯೇ ಚಾಭಿಜಿತಿ ಸ್ಥಿತೇ ॥ ೨೬

ಪರಾಕ್ರಮ, ವಯಸ್ಸುಗಳಿಗೆ ಅನುಗುಣವಾಗಿ ಸತ್ಕರಿಸಿದನು. ಅನಂತರ ಆ ಭೂಪಾಲರು ನನ್ನಲ್ಲಿ ಮನಸ್ಸಿಟ್ಟು, ಸ್ವಯಂವರ ಸಭೆಯಲ್ಲಿ ಗುರಿಯನ್ನು ಹೊಡೆಯುವುದಕ್ಕಾಗಿ ಬಿಲ್ಲುಬಾಣಗಳನ್ನು ಹಿಡಿಯಲು ಮುಂದಾದರು (೨೦-೨೧). ಕೆಲವರು ಧನುಸ್ಸಿಗೆ ಹೆದೆಯೇರಿಸಲು ಕೈಲಾಗದೆ ಅಲ್ಲಿಯೇ ಬಿಟ್ಟರು. ಕೆಲವರು ಹೆದೆಯನ್ನು ಧನುಸ್ಸಿನ ತುದಿಯವರೆಗೆ ಜಗ್ಗಿದರೂ ಅದರ ವೇಗದ ಹೊಡೆತಕ್ಕೆ ಸಿಡಿದುಬಿದ್ದರು. ಆಮೇಲೆ ವೀರರಾದ ಮಾಗಧ, ಅವಂತೀಶ್ವರನಾದ ಅಂಬಷ್ಠ, ಶಿಶುಪಾಲ, ಭೀಮ, ದುರ್ಯೋಧನ, ಕರ್ಣ-ಇವರು ಹೆದೆಯೇರಿಸಿದರೂ ಲಕ್ಷ್ಯವಾದ ಮತ್ಸ್ಯದ ಸ್ಥಳವನ್ನು ಗೊತ್ತುಮಾಡಲಾರದೆ ಕೈಬಿಟ್ಟರು (೨೨-೨೩). ಅರ್ಜುನನು ಹೆದೆಯೇರಿಸಿ ಮೀನಿನ ಪ್ರತಿಬಿಂಬವನ್ನು ನೀರಲ್ಲಿ ಕಂಡು, ಮತ್ಸ್ಯದ ಸ್ಥಾನವನ್ನು ಗೊತ್ತುಮಾಡಿ ಏಕಾಗ್ರತೆಯಿಂದ ಬಾಣವನ್ನೇನೋ ಹೊಡೆದನು. ಅದು ಮತ್ಸ್ಯವನ್ನು ತಾಗಿಕೊಂಡು ಹೋಯಿತೇ ಹೊರತು ಅದನ್ನು ಕತ್ತರಿಸಿ ಬೀಳಿಸಲಿಲ್ಲ (೨೪). ಹೀಗೆ ಮಾನಶೀಲರಾದ ಕ್ಷತ್ರಿಯರೆಲ್ಲರ ದರ್ಪವಡಗಿ ಅವರು ಹಿಮ್ಮೆಟ್ಟಲು, ಭಗವಾನ್ ಶ್ರೀಕೃಷ್ಣನು ಧನುಸ್ಸನ್ನೆತ್ತಿ ಲೀಲೆಯಿಂದ ಹೆದೆಯೇರಿಸಿದನು. ಒಡನೆಯೇ ಧನುಸ್ಸಿಗೆ

ದಿವಿ ದುಂದುಭಯೋ ನೇದುರ್ಜಯಶಬ್ದಯುತಾ ಭುವಿ।
ದೇವಾಶ್ಚ ಕುಸುಮಾಸಾರಾನ್ ಮುಮುಚುರ್ಹರ್ಷ ವಿಹ್ವಲಾಃ॥ ೨೭

ತದ್ ರಂಗಮಾವಿಶಮಹಂ ಕಲನೂಪುರಾಭ್ಯಾಂ
ಪದ್ಭ್ಯಾಂ ಪ್ರಗೃಹ್ಯ ಕನಕೋಜ್ಜ್ವಲರತ್ನಮಾಲಾಮ್।
ನೂತ್ನೇ ನಿವೀಯ ಪರಿಧಾಯ ಚ ಕೌಶಿಕಾಗ್ರ್ಯೇ
ಸವ್ರೀಡಹಾಸವದನಾ ಕಬರೀಧೃತಸ್ರಕ್॥ ೨೮

ಉನ್ನೀಯ ವಕ್ತ್ರಮುರುಕುಂತಲಕುಂಡಲತ್ವಿಡ್-
ಗಂಡಸ್ಥಲಂ ಶಿಶಿರಹಾಸಕಟಾಕ್ಷಮೋಕ್ಷೈಃ।
ರಾಜ್ಞೋ ನಿರೀಕ್ಷ್ಯ ಪರಿತಃ ಶನಕೈರ್ಮುರಾರೇ-
ರಂಸೇಽನುರಕ್ತಹೃದಯಾ ನಿದಧೇ ಸ್ವಮಾಲಾಮ್॥ ೨೯

ತಾವನ್ಮೃದಂಗಪಟಹಾಃ ಶಂಖಭೇರ್ಯಾನಕಾದಯಃ।
ನಿನೇದುರ್ನಟನರ್ತಕ್ಯೋ ನನೃತುರ್ಗಾಯಕಾ ಜಗುಃ॥ ೩೦

ಶರವನ್ನಳವಡಿಸಿ, ನೀರಿನಲ್ಲಿ ಮೀನಿನ ಪ್ರತಿಬಿಂಬವನ್ನೊಮ್ಮೆ ನೋಡಿ, ಆ ಶರದಿಂದ ಗುರಿಗೆ ಹೊಡೆದು ಮೀನನ್ನುರುಳಿಸಿದನು ! ಆಗ ಸೂರ್ಯನು ಅಭಿಜಿನ್ಮುಹೂರ್ತದಲ್ಲಿದ್ದನು (೨೫-೨೬). ಗಗನದಲ್ಲಿ ದೇವದುಂಭಿಗಳು ಜಯಕಾರದೊಡನೆ ಮೊಳಗಿದವು. ಭುವಿಯಲ್ಲಿ ನಗಾರಿಗಳು ಬಾರಿಸಿದವು. ದೇವತೆಗಳು ಆನಂದಪರವಶರಾಗಿ ಹೂಮಳೆಗರೆದರು (೨೭). ಆಗ ನಾನು ಉತ್ತಮ ಸೀರೆಯನ್ನುಟ್ಟು ದುಕೂಲವನ್ನು ಹೊದೆದು ಮುಡಿಯಲ್ಲಿ ಹೂಮಾಲೆಯನ್ನು ಧರಿಸಿ, ಕನಕಮಯವಾದ ರತ್ನಹಾರವನ್ನು ಕೈಯಲ್ಲಿ ಹಿಡಿದು, ಮುಖದಲ್ಲಿ ನಾಚಿಕೆಯಿಂದ ಮುಗುಳ್ನಗೆಯನ್ನು ಬೀರುತ್ತ, ಜಣಜಣಗುಟ್ಟುವ ಕಾಲಂದುಗೆಗಳನ್ನು ಹಾಕಿದ ಕಾಲುಗಳಿಂದ ಅಡಿಯಿಡುತ್ತ ರಂಗಮಂಟಪವನ್ನು ಪ್ರವೇಶಿಸಿದೆನು (೨೮). ಬಳಿಕ ನಾನು ಮುಸುಕಿದ ಮುಂಗುರುಳಿಂದಲೂ ಗಂಡಸ್ಥಳದಲ್ಲಿ ತಾಂಡವಿಸುವ ಕುಂಡಲಗಳ ಕಾಂತಿಯಿಂದಲೂ ಅಂದವಾದ ಮುಖವನ್ನೆತ್ತಿ ತಂಪಾದ ಎಳನಗೆಯನ್ನು ಸೂಸುವ ಕಟಾಕ್ಷವೀಕ್ಷಣಗಳಿಂದ ಸುತ್ತಲೂ ಕುಳಿತಿದ್ದ ಪೊಡವಿಯೊಡೆಯರನ್ನು ನೋಡುತ್ತ ಮೆಲ್ಲಗೆ ಹೋಗಿ,

ಏವಂ ವೃತೇ ಭಗವತಿ ಮಯೇಶೇ ನೃಪಯೂಥಪಾಃ ।
ನ ಸೇಹಿರೇ ಯಾಜ್ಞಸೇನಿ ಸ್ಪರ್ಧಂತೋ ಹೃಚ್ಛಯಾತುರಾಃ ॥ ೩೧

ಮಾಂ ತಾವದ್ ರಥಮಾರೋಪ್ಯ ಹಯರತ್ನ ಚತುಷ್ಟಯಮ್ ।
ಶಾರ್ಙ್ಗಮುದ್ಯಮ್ಯ ಸಂನದ್ಧಸ್ತಸ್ಥಾವಾಜೌ ಚತುರ್ಭುಜಃ ॥ ೩೨

ದಾರುಕಶ್ಚೋದಯಾಮಾಸ ಕಾಂಚನೋಪಸ್ಕರಂ ರಥಮ್ ।
ಮಿಷತಾಂ ಭೂಭುಜಾಂ ರಾಜ್ಞಿ ಮೃಗಾಣಾಂ ಮೃಗರಾಡಿವ ॥ ೩೩

ತೇಽನ್ವಸಜ್ಜಂತ ರಾಜನ್ಯಾ ನಿಷೇದ್ಧುಂ ಪಥಿ ಕೇಚನ ।
ಸಂಯತ್ತಾ ಉದ್ಧೃತೇಷ್ವಾಸಾ ಗ್ರಾಮಸಿಂಹಾ ಯಥಾ ಹರಿಮ್ ॥ ೩೪

ತೇ ಶಾರ್ಙ್ಗಚ್ಯುತಬಾಣೌಘೈಃ ಕೃತ್ತಬಾಹ್ವಂಘ್ರಿಕಂಧರಾಃ ।
ನಿಪೇತುಃ ಪ್ರಧನೇ ಕೇಚಿದೇಕೇ ಸಂತ್ಯಜ್ಯ ದುದ್ರುವುಃ ॥ ೩೫

ತತಃ ಪುರೀಂ ಯದುಪತಿರತ್ಯಲಂಕೃತಾಂ
ರವಿಚ್ಛದಧ್ವಜಪಟಚಿತ್ರತೋರಣಾಮ್ ।
ಕುಶಸ್ಥಲೀಂ ದಿವಿ ಭುವಿ ಚಾಭಿಸಂಸ್ತುತಾಂ
ಸಮಾವಿಶತ್ತರಣಿರಿವ ಸ್ವಕೇತನಮ್ ॥ ೩೬

ಅನುರಾಗಪೂರಿತಳಾಗಿ ಮುರಾರಿಯ ಕೊರಳಿನಲ್ಲಿ ಹಾರವನ್ನು ಹಾಕಿದೆನು (೨೯). ಆ ಸಮಯದಲ್ಲಿ ಮೃದಂಗ, ತಮಟೆ, ಶಂಖ, ಡೋಳ್ಳು, ನಗಾರಿಗಳು ಭೋರ್ಗರೆದವು. ನಟನರ್ತಕಿಯರು ನರ್ತಿಸಿದರು. ಗಾಯಕರು ಹಾಡಿದರು. ಯಾಜ್ಞಸೇನಿ, ಹೀಗೆ ನಾನು ಸರ್ವೇಶ್ವರನಾದ ಭಗವಂತನನ್ನು ವರಿಸಲಾಗಿ, ಸ್ಪರ್ಧಿಸಲು ಬಂದಿದ್ದ ಕಾಮಾತುರರಾದ ರಾಜಾಧಿರಾಜರು ಅದನ್ನು ಸಹಿಸಲಿಲ್ಲ! (೩೦-೩೧). ಆಗ ಅಚ್ಯುತನು ನಾಲ್ಕು ಉತ್ತಮಾಶ್ವಗಳನ್ನು ಹೂಡಿದ್ದ ರಥದಲ್ಲಿ ಮೊದಲು ನನ್ನನ್ನು ಕುಳ್ಳಿರಿಸಿ, ಕವಚವನ್ನು ತೊಟ್ಟು ಶಾರ್ಙ್ಗಧನಸ್ಸನ್ನು ಹಿಡಿದು ಯುದ್ಧಕ್ಕೆ ಸಜ್ಜಾದನು. ಎಲ್ಲ ರಾಜರೂ ಕಣ್ಣುಬಿಟ್ಟು ನೋಡುತ್ತಿರುವಾಗಲೇ, ರಾಣಿ-ದ್ರೌಪದಿ, ಹುಲ್ಲೆಗಳೆದುರಿಗೆ ಸಿಂಹದಂತೆ, ದಾರುಕನು ಸುವರ್ಣಾಲಂಕೃತವಾದ ರಥವನ್ನು ದೌಡಾಯಿಸಿದನು (೩೨-೩೩). ಅವರಲ್ಲಿ ಕೆಲವು ರಾಜರು ಬಿಲ್ಲನ್ನು ಹಿಡಿದು ಸಜ್ಜಾಗಿ ಶ್ರೀಕೃಷ್ಣನನ್ನು ದಾರಿಯಲ್ಲಿ ಅಡ್ಡಗಟ್ಟಿದರು. ನಾಯಿಗಳು ಸಿಂಹವನ್ನು ಅಡ್ಡಗಟ್ಟಿದಂತಾಯಿತು. ಶಾರ್ಙ್ಗಧನುಸ್ಸಿನಿಂದ

ಪಿತಾ ಮೇ ಪೂಜಯಾಮಾಸ ಸುಹೃತ್ಸಂಬಂಧಿಬಾಂಧವಾನ್ ।
ಮಹಾರ್ಹವಾಸೋಽಲಂಕಾರೈಃ ಶಯ್ಯಾಸನಪರಿಚ್ಛದೈಃ ॥ ೩೭

ದಾಸೀಭಿಃ ಸರ್ವಸಂಪದ್ಭಿರ್ಭಟೇಭರಥವಾಜಿಭಿಃ ।
ಆಯುಧಾನಿ ಮಹಾರ್ಹಾಣಿ ದದೌ ಪೂರ್ಣಸ್ಯ ಭಕ್ತಿತಃ ॥ ೩೮

ಆತ್ಮಾರಾಮಸ್ಯ ತಸ್ಯೇಮಾ ವಯಂ ವೈ ಗೃಹದಾಸಿಕಾಃ ।
ಸರ್ವಸಂಗನಿವೃತ್ತ್ಯಾದ್ಧಾ ತಪಸಾ ಚ ಬಭೂವಿಮ ॥ ೩೯

ಭೌಮಂ ನಿಹತ್ಯ ಸಗಣಂ ಯುಧಿ ತೇನ ರುದ್ಧಾ
ಜ್ಞಾತ್ವಾಥ ನಃ ಕ್ಷಿತಿಜಯೇ ಜಿತರಾಜಕನ್ಯಾಃ ।
ನಿರ್ಮುಚ್ಯ ಸಂಸೃತಿವಿಮೋಕ್ಷಮನುಸ್ಮರಂತೀಃ
ಪಾದಾಂಬುಜಂ ಪರಿಣಿನಾಯ ಯ ಆಪ್ತಕಾಮಃ ॥ ೪೦

ಹೊರಹೊಮ್ಮಿದ ಶರರಾಶಿಗಳು ಆ ರಾಜರ ತೋಳು, ಕಾಲು, ಕತ್ತುಗಳನ್ನು ಕತ್ತರಿಸಿ ಚೆಲ್ಲಿದವು. ಕೆಲವರು ರಣಭೂಮಿಯಲ್ಲಿ ಸತ್ತು ಬಿದ್ದರು ಉಳಿದವರು ಓಡಿಹೋದರು (೩೪-೩೫). ಅನಂತರ ಯದುನಾಥನು ಸೂರ್ಯನನ್ನು ಮರೆಮಾಡುವ ಧ್ವಜಪಟಗಳಿಂದಲೂ ಬಣ್ಣಬಣ್ಣದ ತೋರಣಗಳಿಂದಲೂ ಅಲಂಕೃತವಾಗಿ, ಭೂಲೋಕ ಸ್ವರ್ಗಲೋಕಗಳಲ್ಲಿ ವಿಖ್ಯಾತವಾದ ಕುಶಸ್ಥಲಿಗೆ (ದ್ವಾರಕೆಗೆ), ಸೂರ್ಯನು ತನ್ನ ನೆಲೆಯನ್ನು ಸೇರುವಂತೆ, ಬಂದು ಸೇರಿದನು (೩೬). ಆಮೇಲೆ ನನ್ನ ತಂದೆ ದ್ವಾರಕೆಗೆ ಬಂದು ಉತ್ತಮವಾದ ವಸ್ತ್ರಾಲಂಕಾರಗಳನ್ನೂ ಶಯ್ಯೆ, ಪೀಠ, ಹೊದಿಕೆಗಳನ್ನೂ ಕೊಟ್ಟು ಸ್ನೇಹಿತರನ್ನೂ ಬಂಧುಬಾಂಧವರನ್ನೂ ಗೌರವಿಸಿದನು. ಪರಿಪೂರ್ಣನಾದ ಶ್ರೀ ಕೃಷ್ಣನಿಗೆ ದಾಸಿಯರನ್ನೂ, ನಾನಾ ಸಂಪತ್ತುಗಳನ್ನೂ, ಪದಾತಿ ಮೊದಲಾದ ಚತುರಂಗ ಸೇನೆಯನ್ನೂ, ಶ್ರೇಷ್ಠವಾದ ಆಯುಧಗಳನ್ನೂ ಭಕ್ತಿಯಿಂದ ಸಮರ್ಪಿಸಿದನು (೩೭-೩೮). ದ್ರೌಪದಿ, ಹೀಗೆ ನಾವು ನಿಜವಾಗಿಯೂ ಪೂರ್ವಜನ್ಮಗಳಲ್ಲಿ ಸರ್ವಸಂಗಪರಿತ್ಯಾಗಮಾಡಿ ಆಚರಿಸಿದ ತಪಸ್ಸಿನ ಮಹಿಮೆಯಿಂದ ಆತ್ಮಾರಾಮನಾದ ಆ ಮಹಾತ್ಮನ ಗೃಹದಾಸಿಯರಾಗಿದ್ದೇವೆ" ಎಂದಳು (೩೯). ಆಮೇಲೆ ಶ್ರೀಕೃಷ್ಣನ ಉಳಿದ ಪತ್ನಿಯರು ಹೇಳಿದರು : "ದ್ರೌಪದಿ, ಹಿಂದೆ

ನ ವಯಂ ಸಾಧ್ವಿಸಾಮ್ರಾಜ್ಯಂ ಸ್ವಾರಾಜ್ಯಂ ಭೌಜ್ಯಮಪ್ಯುತ ।
ವೈರಾಜ್ಯಂ ಪಾರಮೇಷ್ಠ್ಯಂ ಚ ಆನಂತ್ಯಂ ವಾ ಹರೇಃ ಪದಮ್ ॥ ೪೧

ಕಾಮಯಾಮಹ ಏತಸ್ಯ ಶ್ರೀಮತ್ಪಾದರಜಃಶ್ರಿಯಃ ।
ಕುಚಕುಂಕುಮಗಂಧಾಢ್ಯಂ ಮೂರ್ಧ್ನಾ ವೋಢುಂ ಗದಾಭೃತಃ ॥ ೪೨

ವ್ರಜಸ್ತ್ರಿಯೋ ಯದ್ ವಾಂಛಂತಿ ಪುಲಿಂದ್ಯ ಸ್ತೃಣವೀರುಧಃ ।
ಗಾವಶ್ಚಾರಯತೋ ಗೋಪಾಃ ಪಾದಸ್ಪರ್ಶಂ ಮಹಾತ್ಮನಃ ॥ ೪೩

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ತ್ರ್ಯಶೀತಿಮಾಧ್ಯಾಯಃ

ನರಕಾಸುರನು ದ್ವಿಗ್ವಿಜಯಕಾಲದಲ್ಲಿ ಬಹುಮಂದಿ ರಾಜರನ್ನು ಜಯಿಸಿ ಅವರ ಪುತ್ರಿಯರನ್ನು ಸೆರೆಹಿಡಿದಿಟ್ಟಿದ್ದನು. ಆ ರಾಜಪುತ್ರಿಯರೇ ನಾವು. ಶ್ರೀಕೃಷ್ಣನು ನರಕಾಸುರನನ್ನೂ ಅವನ ಪರಿವಾರವನ್ನೂ ಯುದ್ಧದಲ್ಲಿ ಸಂಹರಿಸಿದನು. ಅನಂತರ, ಸಂಸಾರದಿಂದ ಬಿಡುಗಡೆ ಮಾಡಿಸುವ ಆತನ ಪಾದಕಮಲವನ್ನೇ ಧ್ಯಾನಿಸುತ್ತಿದ್ದ ನಮ್ಮ ವಿಷಯವನ್ನರಿತು, ತಾನು ಆಪ್ತಕಾಮನಾದರೂ ಅಚ್ಯುತನು ನಮ್ಮನ್ನು ಮದುವೆಯಾದನು (೪೦). ಹೇ ಸಾಧ್ವಿ, ನಮಗೆ ಸಾಮ್ರಾಜ್ಯವೂ[1] ಬೇಡ, ಸ್ವಾರಾಜ್ಯವೂ ಬೇಡ, ಭೌಜ್ಯವಾಗಲಿ ವೈರಾಗ್ಯವಾಗಲಿ ಬೇಡ. ಪಾರಮೇಷ್ಠ್ಯವೂ ಬೇಡ. ವಿಷ್ಣುಪದವೆನಿಸಿದ ಶಾಶ್ವತವಾದ ಮೋಕ್ಷವೂ ಬೇಡ. ಭಗವಂತನ ಪಾದಧೂಳಿಯೊಂದನ್ನೇ ನಾವು ಬಯಸುತ್ತೇವೆ. ಲಕ್ಷ್ಮೀದೇವಿಯ ಕುಚ ಕುಂಕುಮದಿಂದ ಸುಗಂಧಿಯಾದ ಶ್ರೀಕೃಷ್ಣನ ಪಾದಧೂಳಿಯನ್ನು ಸದಾ ತಲೆಯಲ್ಲಿ ಧರಿಸಬೇಕೆಂದು ಹಂಬಲಿಸುತ್ತೇವೆ (೪೧-೪೨). ಕಾಡಿನಲ್ಲಿ ಗೋವುಗಳನ್ನು ಮೇಯಿಸುತ್ತಿರುವಾಗ ಆ ಮಹಾತ್ಮನ ಪಾದಸ್ಪರ್ಶವನ್ನು ಗೊಲ್ಲತಿಯರೂ ಬೇಡತಿಯರೂ ಹುಲ್ಲುಬಳ್ಳಿಗಳೂ ಹೇಗೆ ಬಯಸುತ್ತಿದ್ದವೋ ಹಾಗೆ ಪಾದಧೂಳಿಯನ್ನು ಬಯಸುತ್ತೇವೆ'' ಎಂದರು (೪೩).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಂಬತ್ತುಮೂರನೆಯ ಅಧ್ಯಾಯ

---

೧ ಸಾಮ್ರಾಜ್ಯ=ಚಕ್ರವರ್ತಿಪದವಿ, ಸ್ವಾರಾಜ್ಯ = ಇಂದ್ರಪದವಿ, ಭೌಜ್ಯ=ತ್ರಿಲೋಕಾಧಿಪತ್ಯ, ವೈರಾಜ್ಯ = ಅಣಿಮಾದ್ಯಷ್ಟಸಿದ್ಧಿ ಪಾರಮೇಷ್ಠ್ಯ=ಬ್ರಹ್ಮಪದವಿ.

ಚತುರಶೀತಮಾಧ್ಯಾಯಃ

ಶ್ರೀಶುಕ ಉವಾಚ-

ಶ್ರುತ್ವಾ ಪೃಥಾ ಸುಬಲಪುತ್ರ್ಯಥ ಯಾಜ್ಞಸೇನೀ
ಮಾಧವ್ಯಥ ಕ್ಷಿತಿಪಪತ್ನ್ಯ ಉತ ಸ್ವಗೋಪ್ಯಃ।
ಕೃಷ್ಣೇऽಖಿಲಾತ್ಮನಿ ಹರೌ ಪ್ರಣಯಾನುಬಂಧಂ
ಸರ್ವಾ ವಿಸಿಸ್ಮ್ಯುರಲಮಶ್ರುಕಲಾಕುಲಾಕ್ಷ್ಯಃ॥ ೧

ಇತಿ ಸಂಭಾಷಮಾಣಾಸು ಸ್ತ್ರೀಭಿಃ ಸ್ತ್ರೀಷು ನೃಭಿರ್ನೃಷು।
ಆಯಯುರ್ಮುನಯಸ್ತತ್ರ ಕೃಷ್ಣರಾಮದಿದೃಕ್ಷಯಾ॥ ೨

ದ್ವೈಪಾಯನೋ ನಾರದಶ್ಚ ಚ್ಯವನೋ ದೇವಲೋऽಸಿತಃ।
ವಿಶ್ವಾಮಿತ್ರಃ ಶತಾನಂದೋ ಭರದ್ವಾಜೋऽಥ ಗೌತಮಃ॥ ೩

ರಾಮಃ ಸಶಿಷ್ಯೋ ಭಗವಾನ್ ವಸಿಷ್ಠೋ ಗಾಲವೋ ಭೃಗುಃ।
ಪುಲಸ್ತ್ಯಃ ಕಶ್ಯಪೋऽತ್ರಿಶ್ಚ ಮಾರ್ಕಂಡೇಯೋ ಬೃಹಸ್ಪತಿಃ॥ ೪

ಅಧ್ಯಾಯ ೮೪

ಋಷಿಗಳು ಬಂದು ಶ್ರೀಕೃಷ್ಣನನ್ನು ಸ್ತುತಿಸುವುದು. ವಸುದೇವನು ಕುರುಕ್ಷೇತ್ರದಲ್ಲಿ ಯಾಗ ಮಾಡುವುದು.

ಶುಕಮುನಿಗಳು ಹೇಳಿದರು : ಪರೀಕ್ಷಿತ ರಾಜ, ಸಕಲರಿಗೂ ಆತ್ಮನಾದ ಶ್ರೀಕೃಷ್ಣನಲ್ಲಿ ಆತನ ಮಡದಿಯರಿಗಿದ್ದ ಆಳವಾದ ಪ್ರೇಮಾತಿಶಯವನ್ನು ತಿಳಿದು ಕುಂತಿ, ಗಾಂಧಾರಿ, ದ್ರೌಪದಿ, ಸುಭದ್ರೆ, ಇತರ ರಾಜಪತ್ನಿಯರು ಮತ್ತು ಗೋಪಿಯರು ಬಹಳ ಅಚ್ಚರಿಗೊಂಡರು. ಭಾವೋದ್ರೇಕದಿಂದ ಅವರ ಕಣ್ಣುಗಳಲ್ಲಿ ನೀರು ತುಂಬಿತು (೧). ಈ ರೀತಿಯಲ್ಲಿ ಹೆಂಗಸರು ಹೆಂಗಸರೊಡನೆಯೂ ಗಂಡಸರು ಗಂಡಸರೊಡನೆಯೂ ಮಾತಾಡುತ್ತಿರಲು, ಶ್ರೀಕೃಷ್ಣನನ್ನೂ ಬಲರಾಮನನ್ನೂ ಕಾಣುವ ತವಕದಿಂದ ಕೆಲವು ಮುನಿಗಳು ಅಲ್ಲಿಗೆ ಬಂದರು (೨). ವ್ಯಾಸ, ನಾರದ, ಚ್ಯವನ, ದೇವಲ, ಅಸಿತ, ವಿಶ್ವಾಮಿತ್ರ,

ದ್ವಿತಸ್ತ್ರಿತಶ್ಚೈಕತಶ್ಚ ಬ್ರಹ್ಮಪುತ್ರಾಸ್ತಥಾಂಗಿರಾಃ ।
ಅಗಸ್ತ್ಯೋ ಯಾಜ್ಞವಲ್ಕ್ಯಶ್ಚ ವಾಮದೇವಾದಯೋಽಪರೇ ॥ ೫

ತಾನ್ ದೃಷ್ಟ್ವಾ ಸಹಸೋತ್ಥಾಯ ಪ್ರಾಗಾಸೀನಾ ನೃಪಾದಯಃ ।
ಪಾಂಡವಾಃ ಕೃಷ್ಣರಾಮೌ ಚ ಪ್ರಣೇಮುರ್ವಿಶ್ವವಂದಿತಾನ್ ॥ ೬

ತಾನಾನರ್ಚುರ್ಯಥಾ ಸರ್ವೇ ಸಹರಾಮೋಽಚ್ಯುತೋಽರ್ಚಯತ್ ।
ಸ್ವಾಗತಾಸನಪಾದ್ಯಾರ್ಘ್ಯ ಮಾಲ್ಯಧೂಪಾನುಲೇಪನೈಃ ॥ ೭

ಉವಾಚ ಸುಖಮಾಸೀನಾನ್ ಭಗವಾನ್ ಧರ್ಮಗುಪ್ತನುಃ ।
ಸದಸಸ್ತಸ್ಯ ಮಹತೋ ಯತವಾಚೋಽನುಶೃಣ್ವತಃ ॥ ೮

ಶ್ರೀ ಭಗವಾನುವಾಚ-
ಅಹೋ ವಯಂ ಜನ್ಮಭೃತೋ ಲಬ್ಧಂ ಕಾರ್ತ್ಸ್ನ್ಯೇನ ತತ್ಫಲಮ್ ।
ದೇವಾನಾಮಪಿ ದುಷ್ಪ್ರಾಪಂ ಯದ್ ಯೋಗೇಶ್ವರದರ್ಶನಮ್ ॥ ೯

ಶತಾನಂದ, ಭರದ್ವಾಜ, ಗೌತಮ, ಶಿಷ್ಯರಿಂದ ಕೂಡಿದ ಭಗವಾನ್ ಪರಶುರಾಮ, ವಸಿಷ್ಠ, ಗಾಲವ, ಭೃಗು, ಪುಲಸ್ತ್ಯ, ಕಾಶ್ಯಪ, ಅತ್ರಿ, ಮಾರ್ಕಂಡೇಯ, ಬೃಹಸ್ಪತಿ, ದ್ವಿತ, ತ್ರಿತ, ಏಕತ, ಬ್ರಹ್ಮಪುತ್ರನಾದ ಅಂಗಿರಸ್ಸು, ಅಗಸ್ತ್ಯ, ಯಾಜ್ಞವಲ್ಕ್ಯ, ವಾಮದೇವ-ಮೊದಲಾದ ಋಷಿಗಳು ಆಗಮಿಸಿದರು (೩-೫). ಜಗದ್ವಂದಿತರಾದ ಆ ಋಷಿಗಳನ್ನು ನೋಡಿದೊಡನೆ ಕುಳಿತಿದ್ದ ವಿಭಿನ್ನದೇಶಗಳ ರಾಜರೂ ಪಾಂಡವರೂ ಬಲರಾಮಕೃಷ್ಣರೂ ಎದ್ದುನಿಂತು ಅವರಿಗೆ ನಮಸ್ಕರಿಸಿದರು. ಎಲ್ಲರೂ ಆ ಮುನಿಗಳನ್ನು ಅರ್ಚಿಸಿದಂತೆ, ಅಚ್ಯುತನು ಬಲರಾಮಸಹಿತನಾಗಿ ಸ್ವಾಗತಿಸಿ, ಪೀಠಗಳನ್ನಿತ್ತು, ಪಾದ್ಯ ಅರ್ಘ್ಯ ಮಾಲ್ಯ ಧೂಪದೀಪ ಚಂದನಾದ್ಯನು ಲೇಪನಗಳನ್ನರ್ಪಿಸಿ ಪೂಜಿಸಿದನು. ಅವರೆಲ್ಲರೂ ಸುಖವಾಗಿ ಕುಳಿತುಕೊಂಡಮೇಲೆ, ಧರ್ಮರಕ್ಷಣೆಗಾಗಿ ಮಾನುಷ ರೂಪವನ್ನು ತಳೆದಿದ್ದ ಶ್ರೀಕೃಷ್ಣನು, ಮಾತಾಡದೆ ಆಲಿಸುತ್ತಿದ್ದ ಎಲ್ಲ ಸಭಾಸದರೆದುರಿಗೆ ಹೀಗೆಂದನು (೬-೮). ''ಆಹಾ ! ನಮ್ಮ ಜನ್ಮ ಸಾರ್ಥಕವಾಯಿತು ! ಹುಟ್ಟಿದುದಕ್ಕೆ ಪೂರ್ತಿಯಾಗಿ ಫಲ ದೊರೆಯಿತು ! ದೇವತೆಗಳಿಗೂ ದುರ್ಲಭವಾದ ಯೋಗೇಶ್ವರರ ದರ್ಶನವು ನಮಗಿಂದು ಲಭಿಸಿತು. ಮಹರ್ಷಿಗಳೆ,

ಕಿಂ ಸ್ವಲ್ಪತಪಸಾಂ ನೄಣಾಮರ್ಚಾಯಾಂ ದೇವಚಕ್ಷುಷಾಮ್ ।
ದರ್ಶನಸ್ಪರ್ಶನಪ್ರಶ್ನಪ್ರಹ್ವಪಾದಾರ್ಚನಾದಿಕಮ್ ॥ ೧೦

ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ ।
ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ ॥ ೧೧

ನಾಗ್ನಿರ್ನ ಸೂರ್ಯೋ ನ ಚ ಚಂದ್ರತಾರಕಾ
ನ ಭೂರ್ಜಲಂ ಖಂ ಶ್ವಸನೋಽಥ ವಾಙ್ಮನಃ ।
ಉಪಾಸಿತಾ ಭೇದಕೃತೋ ಹರಂತ್ಯಘಂ
ವಿಪಶ್ಚಿತೋ ಘ್ನಂತಿ ಮುಹೂರ್ತಸೇವಯಾ ॥ ೧೨

ಯಸ್ಯಾತ್ಮಬುದ್ಧಿಃ ಕುಣಪೇ ತ್ರಿಧಾತುಕೇ
ಸ್ವಧೀಃ ಕಲತ್ರಾದಿಷು ಭೌಮ ಇಜ್ಯಧೀಃ ।
ಯತ್ತೀರ್ಥಬುದ್ಧಿಃ ಸಲಿಲೇ ನ ಕರ್ಹಿಚಿ-
ಜ್ಜನೇಷ್ವಭಿಜ್ಞೇಷು ಸ ಏವ ಗೋಖರಃ ॥ ೧೩

ತೀರ್ಥಸ್ನಾನವೆಂಬ ಅಲ್ಪತಪಸ್ಸನ್ನಾಚರಿಸುತ್ತ ವಿಗ್ರಹವನ್ನು ದೇವರೆಂದು ತಿಳಿದು ಪೂಜಿಸುತ್ತಿರುವ ಜನರಿಗೆ, ತಮ್ಮೆಲ್ಲರ ದರ್ಶನ, ಸ್ಪರ್ಶನ, ಕುಶಲಪ್ರಶ್ನೆ, ವಂದನೆ, ಪಾದಾರ್ಚನೆ ಮೊದಲಾದ್ದು ದೊರಕುವುದೆಂದರೆ ಭಾಗ್ಯವಲ್ಲವೆ ? (೯-೧೦). ಜಲಮಯವಾದ ತೀರ್ಥಗಳಾಗಲಿ ಮಣ್ಣುಕಲ್ಲುಗಳ ರೂಪದಲ್ಲಿರುವ ದೇವತೆಗಳಾಗಲಿ ಅಷ್ಟು ಬೇಗನೆ ನಮ್ಮನ್ನು ಪಾವನಗೊಳಿಸಲಾರವು. ಬಹುಕಾಲದಮೇಲೆ ಅವು ಫಲವನ್ನು ನೀಡಬಹುದು. ತಮ್ಮಂತಹ ಸತ್ಪುರುಷರಾದರೋ ದರ್ಶನಮಾತ್ರದಿಂದ ಪಾವನಗೊಳಿಸುತ್ತಾರೆ (೧೧). ಅಗ್ನಿ ಸೂರ್ಯ, ಚಂದ್ರ, ನಕ್ಷತ್ರ, ಭೂಮಿ, ಜಲ, ಆಕಾಶ, ವಾಯುಗಳಾಗಲಿ ವಾಕ್ಕು ಮತ್ತು ಮನಸ್ಸಾಗಲಿ [1] ಭೇದಬುದ್ಧಿಯನ್ನು ಉಳಿಸತಕ್ಕವುಗಳಾದ್ದರಿಂದ ಉಪಾಸನೆಮಾಡಿದರೆ ಅಜ್ಞಾನವೆಂಬ ದೋಷವನ್ನು ಹೋಗಲಾಡಿಸುವುದಿಲ್ಲ, ಜ್ಞಾನಿಗಳಾದರೋ (ಭೇದಬುದ್ಧಿಯನ್ನು ಅಳಿಸತಕ್ಕವರಾದ್ದರಿಂದ) ಕ್ಷಣ ಕಾಲದ ಸೇವೆಯಿಂದಲೇ ಅಜ್ಞಾನವನ್ನು ಹೋಗಲಾಡಿಸುತ್ತಾರೆ (೧೨). ವಾತ, ಪಿತ್ತ

೧ 'ಯೋ ವಾಚಂ ಬ್ರಹ್ಮೇತ್ಯುಪಾಸ್ತೇ, ಮನೋಬ್ರಹ್ಮೇತ್ಯುಪಾಸ್ತೇ' ಇತ್ಯಾದಿ ಶ್ರುತಿವಾಕ್ಯಗಳಲ್ಲಿ ಇವುಗಳ ಉಪಾಸನೆ ವಿಹಿತವಾಗಿದೆ. ಉಪಾಸನೆಯಲ್ಲಿ ಉಪಾಸ್ಯ-ಉಪಾಸಕ ಎಂಬ ಭೇದ ಬುದ್ಧಿ ಇರುತ್ತದೆ.

ಶ್ರೀಶುಕ ಉವಾಚ-

ನಿಶಮ್ಯೇತ್ಥಂ ಭಗವತಃ ಕೃಷ್ಣಸ್ಯಾಕುಂಠಮೇಧಸಃ ।
ವಚೋ ದುರನ್ವಯಂ ವಿಪ್ರಾಸ್ತೂಷ್ಣೀಮಾಸನ್ ಭ್ರಮದ್ಧಿಯಃ ॥ ೧೪

ಚಿರಂ ವಿಮೃಶ್ಯ ಮುನಯ ಈಶ್ವರಸ್ಯೇಶಿತವ್ಯತಾಮ್ ।
ಜನಸಂಗ್ರಹ ಇತ್ಯೂಚುಃ ಸ್ಮಯಂತಸ್ತಂ ಜಗುದ್ಗುರುಮ್ ॥ ೧೫

ಮುನಯ ಊಚುಃ-

ಯನ್ಮಾಯಯಾ ತತ್ತ್ವವಿದುತ್ತಮಾ ವಯಂ
ವಿಮೋಹಿತಾ ವಿಶ್ವಸೃಜಾಮಧೀಶ್ವರಾಃ ।
ಯದೀಶಿತವ್ಯಾಯತಿ ಗೂಢ ಈಹಯಾ
ಅಹೋ ವಿಚಿತ್ರಂ ಭಗವದ್ವಿಚೇಷ್ಟಿತಮ್ ॥ ೧೬

ಕಫಮಯವಾದ ಈ ಹೆಣವೆಂಬ ದೇಹದಲ್ಲಿ ಯಾವಾತನಿಗೆ ನಾನೆಂಬ ಆತ್ಮಬುದ್ಧಿ ಇರುವುದೋ, ಪತ್ನೀಪುತ್ರಾದಿಗಳಲ್ಲಿ ಆತ್ಮವಾದ ನನಗೆ ಸೇರಿದವರೆಂಬ ಬುದ್ಧಿಯೂ, ಮೃನ್ಮಯವಾದ ವಿಗ್ರಹದಲ್ಲಿ ಇದೇ ದೇವರೆಂಬ ಬುದ್ಧಿಯೂ ನೀರಿನಲ್ಲಿ ಇದೇ ಪಾವನಗೊಳಿಸುವುದೆಂಬ ತೀರ್ಥಬುದ್ಧಿಯೂ ಇರುವುದೋ, ತತ್ತ್ವವಿದರಾದ ಜ್ಞಾನಿಗಳ ವಿಷಯದಲ್ಲಿ ಅಂತಹ ಬುದ್ಧಿ ಇಲ್ಲವೋ ಆತನು ಒಂದು ಎತ್ತು, ಒಂದು ಕತ್ತೆ ! '' ಎಂದು ನುಡಿದನು (೧೩). ಸರ್ವಜ್ಞನಾದ ಶ್ರೀಕೃಷ್ಣನ ಅನನುರೂಪವಾದ [1] ಈ ನುಡಿಯನ್ನು ಕೇಳಿ ಋಷಿಗಳ ಬುದ್ಧಿ ಗಿರ್ರೆಂದಿತು ! ಅವರು ಮೂಕವಿಸ್ಮಿತರಾಗಿ ಸುಮ್ಮನೆ ಕುಳಿತಿದ್ದರು. ಆ ಈಶ್ವರನು ಶಾಸ್ತ್ರವಿಧಿಗೆ ಅಧೀನನಾಗಿ ಕರ್ಮವನ್ನಾಚರಿಸಿದ ಬಗೆಯನ್ನು ಬಹಳ ಹೊತ್ತು ಆಲೋಚಿಸಿ, ಮುಗುಳ್ನಗೆ ಬೀರುತ್ತ ಆ ಜಗದ್ಗುರುವನ್ನು ಕುರಿತು ''ಇದು ಲೋಕಸಂಗ್ರಹ!''[2] ಎಂದು ಉದ್ಗರಿಸಿದರು (೧೪-೧೫). ಆಮೇಲೆ ಹೀಗೆಂದರು :

---

೧ ಭಗವಂತನನ್ನು ಪವಿತ್ರಗೊಳಿಸುತ್ತಾರೆಂಬುದು ಋಷಿಗಳಿಗೆ ಅನ್ವಯಿಸತಕ್ಕದ್ದಲ್ಲ. ಋಷಿಗಳನ್ನು ಪೂಜಿಸಬೇಕೆಂಬುದು ಶ್ರೀಕೃಷ್ಣನಿಗೆ ಅನ್ವಯಿಸತಕ್ಕದ್ದಲ್ಲ. ಆದ್ದರಿಂದ ಆತನ ನುಡಿ ದುರನ್ವಯ- ಅನನುರೂಪ.

೨. ಲೋಕಸಂಗ್ರಹ= ಜನರು ತಪ್ಪುದಾರಿಯನ್ನು ತುಳಿಯದಂತೆ ತಿದ್ದುವುದು.

ಅನೀಹ ಏತದ್ ಬಹುಧೈಕ ಆತ್ಮನಾ
ಸೃಜತ್ಯವತ್ಯತ್ತಿ ನ ಬಧ್ಯತೇ ಯಥಾ ।
ಭೌಮೈರ್ಹಿ ಭೂಮಿರ್ಬಹುನಾಮರೂಪಿಣೀ
ಅಹೋ ವಿಭೂಮ್ನಶ್ಚರಿತಂ ವಿಡಂಬನಮ್ ॥ ೧೭

ಅಥಾಪಿ ಕಾಲೇ ಸ್ವಜನಾಭಿಗುಪ್ತಯೇ
ಬಿಭರ್ಷಿ ಸತ್ತ್ವಂ ಖಲನಿಗ್ರಹಾಯ ಚ ।
ಸ್ವಲೀಲಯಾ ವೇದಪಥಂ ಸನಾತನಂ
ವರ್ಣಾಶ್ರಮಾತ್ಮಾ ಪುರುಷಃ ಪರೋ ಭವಾನ್ ॥ ೧೮

''ನಾವು ಶ್ರೇಷ್ಠಜ್ಞಾನಿಗಳಾಗಿದ್ದರೂ ಲೋಕಕರ್ತರಿಗೆ ಅಧೀಶ್ವರರಾಗಿದ್ದರೂ[1] ಭಗವಂತನ ಮಾಯೆಗೆ ಮರುಳಾದೆವು! ಈತನು ಇಚ್ಛಾನುಸಾರವಾಗಿ ಮನುಷ್ಯಾಕೃತಿಯಲ್ಲಿ ಗೂಢನಾಗಿದ್ದು ಶಾಸ್ತ್ರವಿಹಿತಕರ್ಮಕ್ಕೆ-ಇನ್ನೊಬ್ಬರಿಗೆ ಅಧೀನನೋ ಎಂಬಂತೆ ನಡೆಯುತ್ತಾನೆ! ಅಬ್ಬಾ! ಭಗವಂತನ ಕಾರ್ಯ ವಿಚಿತ್ರವಾದುದು! (೧೬). ಈತನು ನಿಷ್ಕಾಮನಾದರೂ ಅದ್ವಿತೀಯವಾದ ಒಂದೇ ವಸ್ತುವಾದರೂ ಬಹುರೂಪದ ಈ ಜಗತ್ತನ್ನು ಸೃಜಿಸುತ್ತಾನೆ, ರಕ್ಷಿಸುತ್ತಾನೆ, ನಾಶಗೊಳಿಸಿಯೂ ಬಿಡುತ್ತಾನೆ. ಆದರೆ ಈ ಕರ್ಮದ ಲೇಪ ಅವನಿಗಿಲ್ಲ. ಒಂದೇ ಮಣ್ಣು ಗಡಿಗೆ, ಕುಡಿಕೆ ಮೊದಲಾದ ವಿಕಾರಗಳಿಂದ ನಾನಾ ನಾಮರೂಪಗಳನ್ನು ಪಡೆಯುತ್ತದೆಯಲ್ಲವೆ? ಆಹಾ! ಪರಿಪೂರ್ಣನಾದವನಿಗೆ ಜನ್ಮಾದಿಚರಿತೆ ಎಂಬುದು ಬರಿಯ ನಟನೆ! (೧೭). ಹೇ ಸ್ವಾಮಿ, ಹಾಗಿದ್ದರೂ ಸಮಯ ಬಂದಾಗ ನಿನ್ನ ಭಕ್ತರನ್ನು ರಕ್ಷಿಸುವುದಕ್ಕಾಗಿಯೂ ದುಷ್ಟರನ್ನು ನಿಗ್ರಹಿಸುವುದಕ್ಕಾಗಿಯೂ ನೀನು ಸಾತ್ತ್ವಿಕ ರೂಪವನ್ನು ಧರಿಸುತ್ತೀಯೆ. ನಿನ್ನ ಲೀಲೆಯಿಂದ ಸನಾತನವಾದ ವೇದಮಾರ್ಗವನ್ನು ಅನುಸರಿಸುತ್ತೀಯೆ. ವರ್ಣಾಶ್ರಮ ಧರ್ಮಸ್ವರೂಪನಾದ ಪುರುಷನೇ ನೀನು (೧೮). ತಪಸ್ಸು ಅಧ್ಯಯನ ಇಂದ್ರಿಯನಿಗ್ರಹಗಳಿಂದ

---

೧ ಮೂಲದಲ್ಲಿ ''ವಿಶ್ವಸೃಜಾಮಧೀಶ್ವರಃ'' ಎಂದು ಏಕವಚನ ಪಾಠವಿದ್ದರೆ ಉತ್ತಮ. ಆಗ ಶ್ರೀಕೃಷ್ಣನಿಗೆ ಅನ್ವಿತವಾಗುತ್ತದೆ. ಲೋಕಕರ್ತರಿಗೆ ಈಶ್ವರನಾದ ಶ್ರೀಕೃಷ್ಣನು ಎಂದರ್ಥ. ''ಈಶಿತವ್ಯಾಯತಿ'' ಎಂಬ ಕ್ರಿಯಾಪದದೊಡನೆ ಸರಿಯಾಗಿ ಹೊಂದಿಕೊಳ್ಳುತ್ತದೆ.

ಬ್ರಹ್ಮ ತೇ ಹೃದಯಂ ಶುಕ್ಲಂ ತಪಃಸ್ವಾಧ್ಯಾಯಸಂಯಮೈಃ ।
ಯತ್ರೋಪಲಬ್ಧಂ ಸದ್ ವ್ಯಕ್ತಮವ್ಯಕ್ತಂ ಚ ತತಃ ಪರಮ್ ॥ ೧೯

ತಸ್ಮಾದ್ ಬ್ರಹ್ಮಕುಲಂ ಬ್ರಹ್ಮನ್ ಶಾಸ್ತ್ರಯೋನೇಸ್ತ್ವಮಾತ್ಮನಃ ।
ಸಭಾಜಯಸಿ ಸದ್ಧಾಮ ತದ್ ಬ್ರಹ್ಮಣ್ಯಾಗ್ರಣೀರ್ಭವಾನ್ ॥ ೨೦

ಅದ್ಯ ನೋ ಜನ್ಮಸಾಫಲ್ಯಂ ವಿದ್ಯಾಯಾಸ್ತಪಸೋ ದೃಶಃ ।
ತ್ವಯಾ ಸಂಗಮ್ಯ ಸದ್ಗತ್ಯಾ ಯದಂತಃ ಶ್ರೇಯಸಾಂ ಪರಃ ॥ ೨೧

ನಮಸ್ತಸ್ಮೈ ಭಗವತೇ ಕೃಷ್ಣಾಯಾಕುಂಠಮೇಧಸೇ ।
ಸ್ವಯೋಗಮಾಯಯಾಚ್ಛನ್ನಮಹಿಮ್ನೇ ಪರಮಾತ್ಮನೇ ॥ ೨೨

ನ ಯಂ ವಿದಂತ್ಯಮೀ ಭೂಪಾ ಏಕಾರಾಮಾಶ್ಚ ವೃಷ್ಣಯಃ ।
ಮಾಯಾಜವನಿಕಾಚ್ಛನ್ನ ಮಾತ್ಮಾನಂ ಕಾಲಮೀಶ್ವರಮ್ ॥ ೨೩

ವ್ಯಕ್ತವಾದ ಕಾರ್ಯವೂ ಅವ್ಯಕ್ತವಾದ ಕಾರಣವೂ ಇವೆರಡರ ಆಚೆಗಿರುವ ಸತ್ತಾರೂಪವಾದ ಪರಬ್ರಹ್ಮವೂ ಯಾವುದರಲ್ಲಿ ವಿದಿತವಾಗುವುದೋ ಆ ವೇದಾಖ್ಯವಾದ ಬ್ರಹ್ಮವೇ ನಿನ್ನ ಶುದ್ಧವಾದ ಅಂತರಂಗ (೧೯). ಹೇ ಬ್ರಹ್ಮನ್, ವೇದಪ್ರಮಾಣವೇದ್ಯನಾದ ನಿನಗೆ ಬ್ರಾಹ್ಮಣ ಕುಲವು ನಿವಾಸಸ್ಥಳ-ಉಪಲಬ್ಧಿಸ್ಥಾನ. ಆದ್ದರಿಂದ ಬ್ರಾಹ್ಮಣ ಕುಲವನ್ನು ನೀನು ಪೂಜಿಸುತ್ತಿರುವೆ. ಬ್ರಾಹ್ಮಣಪ್ರಿಯರಲ್ಲಿ ನೀನೇ ಅಗ್ರಗಣ್ಯನಾಗಿದ್ದೀಯೆ (೨೦). ಶ್ರೀಕೃಷ್ಣ ಸದ್ಗತಿಯಾದ ನಿನ್ನ ಸಹವಾಸವು ದೊರೆತಿದ್ದರಿಂದ ಈಗ ನಮ್ಮ ಜನ್ಮ ಸಫಲವಾಯಿತು. ನಮ್ಮ ವಿದ್ಯೆ, ನಮ್ಮ ತಪಸ್ಸು, ನಮ್ಮ ಕಣ್ಣು ಸಾರ್ಥಕವಾದವು. ಸಕಲ ಶ್ರೇಯಸ್ಸುಗಳಿಗೂ ನೀನೇ ಕಡೆಯ ಅವಧಿಯಾಗಿದ್ದೀಯೆ (೨೧). ಭಗವಂತನೂ ಸರ್ವಜ್ಞನೂ ಯೋಗಮಾಯೆಯಿಂದ ತನ್ನ ಮಹಿಮೆಯನ್ನು ಮರೆಸಿಕೊಂಡಿರುವವನೂ ಆದ ಶ್ರೀಕೃಷ್ಣನಿಗೆ ನಮಸ್ಕಾರ ! ಪರಮಾತ್ಮನಿಗೆ ನಮಸ್ಕಾರ! (೨೨). ಮಾಯೆಯೆಂಬ ತೆರೆಯಲ್ಲಿ ಮರೆಯಾಗಿರುವ ಪರಮಾತ್ಮನೂ ಕಾಲಸ್ವರೂಪನೂ ಈಶ್ವರನೂ ಆದ ನಿನ್ನ ನೆಲೆಯನ್ನು ಈ ದೊರೆಗಳೂ ಅರಿಯರು. ನಿರಂತರವೂ ಒಡನಾಡುತ್ತಿರುವ ಈ ಯಾದವರೂ ತಿಳಿಯರು (೨೩).

ಯಥಾ ಶಯಾನಃ ಪುರುಷ ಆತ್ಮಾನಂ ಗುಣತತ್ತ್ವದೃಕ್ ।
ನಾಮಮಾತ್ರೇಂದ್ರಿಯಾಭಾತಂ ನ ವೇದ ರಹಿತಂ ಪರಮ್ ॥ ೨೪

ಏವಂ ತ್ವಾ ನಾಮಮಾತ್ರೇಷು ವಿಷಯೇಷ್ವಿಂದ್ರಿಯೇಹಯಾ ।
ಮಾಯಯಾ ವಿಭ್ರಮಚ್ಚಿತ್ತೋ ನ ವೇದ ಸ್ಮೃತ್ಯುಪಪ್ಲವಾತ್ ॥ ೨೫

ತಸ್ಯಾದ್ಯ ತೇ ದದೃಶಿಮಾಂಘ್ರಿಮಘೌಘಮರ್ಷ-
ತೀರ್ಥಾಸ್ಪದಂ ಹೃದಿ ಕೃತಂ ಸುವಿಪಕ್ವಯೋಗೈಃ ।
ಉತ್ಸಿಕ್ತಭಕ್ತ್ಯುಪಹತಾಶಯಜೀವಕೋಶಾ
ಆಪುರ್ಭವದ್ಗತಿಮಥೋಽನುಗೃಹಾಣ ಭಕ್ತಾನ್ ॥ ೨೬

ಶ್ರೀಶುಕ ಉವಾಚ-

ಇತ್ಯನುಜ್ಞಾಪ್ಯ ದಾಶಾರ್ಹಂ ಧೃತರಾಷ್ಟ್ರಂ ಯುಧಿಷ್ಠಿರಮ್ ।
ರಾಜರ್ಷೇ ಸ್ವಾಶ್ರಮಾನ್ ಗಂತುಂ ಮುನಯೋ ದಧಿರೇ ಮನಃ ॥ ೨೭

ನಿದ್ರೆಯಲ್ಲಿ ಕನಸು ಕಾಣುತ್ತಿರುವ ಮನುಷ್ಯನು ಕನಸಿನ ವಸ್ತುಗುಣವೇ ಸತ್ಯವೆಂದು ಭಾವಿಸಿ, ತನ್ನನ್ನು ನಾಮಮಾತ್ರದಿಂದ ಮನಸ್ಸಿಗೆ ತೋರುವ ಹುಲಿಯೆಂದೋ ಹಂದಿಯೆಂದೋ ತಿಳಿದುಕೊಳ್ಳುವುದುಂಟು ; ತಾನು ಅದಾವುದೂ ಅಲ್ಲದ ಮನುಷ್ಯನೆಂದು ತಿಳಿಯುವುದಿಲ್ಲ. ಹಾಗೆಯೇ ಇಂದ್ರಿಯಪ್ರವೃತ್ತಿಯೆಂಬ ಮಾಯೆಯಿಂದ ಮೋಹಿತನಾದ ಮಾನವನು ನಾಮ ಮಾತ್ರದಿಂದ ತೋರುವ ವಿಷಯಗಳಲ್ಲಿ ಪರಮಾರ್ಥವಾಗಿರುವವನು ನೀನೇ ಎಂಬುದನ್ನು ಅರಿಯನು. ಏಕೆಂದರೆ, ಅವನಿಗೆ ವಿವೇಕವು ನಷ್ಟವಾಗಿರುತ್ತದೆ (ಆತ್ಮಾನುಭವದ ಸ್ಮರಣಶಕ್ತಿ ಲುಪ್ತವಾಗಿರುತ್ತದೆ) (೨೪-೨೫). ಶ್ರೀಕೃಷ್ಣ ಅಂತಹ ನಿನ್ನ ಪಾದವನ್ನಿಂದು ಕಂಡೆವು. ಈ ಪಾದವು ಪಾಪರಾಶಿಯನ್ನು ತೊಡೆಯುವ ಗಂಗಾತೀರ್ಥದ ಉದ್ಭವಸ್ಥಾನ. ಯೋಗ ನಿಷ್ಣಾತರು ತಮ್ಮ ಹೃದಯದಲ್ಲಿ ಇರಿಸಿಕೊಂಡದ್ದು. ಅತಿಶಯವಾದ ಭಕ್ತಿಯಿಂದ ಜೀವದ ಆವರಣವಾದ ಆಶಯವೆಂಬ ಅಹಂಕಾರ ಗ್ರಂಥಿಯನ್ನು ಬಿಡಿಸಿ ಎಸೆದಿರತಕ್ಕವರು ನಿನ್ನ ಪಾದವನ್ನು ಸೇರಿಕೊಂಡಿದ್ದಾರೆ. ಆದ್ದರಿಂದ ಭಕ್ತರಾದ ನಮ್ಮನ್ನು ಅನುಗ್ರಹಿಸು'' ಎಂದರು (೨೬). ಪರೀಕ್ಷಿತರಾಜ, ಹೀಗೆ ಹೇಳಿ ಆ ಮುನಿಗಳು ಶ್ರೀಕೃಷ್ಣನನ್ನೂ ಧೃತರಾಷ್ಟ್ರ

ತದ್ ವೀಕ್ಷ್ಯ ತಾನುಪವ್ರಜ್ಯ ವಸುದೇವೋ ಮಹಾಯಶಾಃ ।
ಪ್ರಣಮ್ಯ ಚೋಪಸಂಗೃಹ್ಯ ಬಭಾಷೇದಂ ಸುಯಂತ್ರಿತಃ ॥ ೨೮

ವಸುದೇವ ಉವಾಚ-

ನಮೋ ವಃ ಸರ್ವದೇವೇಭ್ಯ ಋಷಯಃ ಶ್ರೋತುಮರ್ಹಥ ।
ಕರ್ಮಣಾ ಕರ್ಮನಿರ್ಹಾರೋ ಯಥಾ ಸ್ಯಾನ್ನಸ್ತದುಚ್ಯತಾಮ್ ॥ ೨೯

ನಾರದ ಉವಾಚ-

ನಾತಿಚಿತ್ರಮಿದಂ ವಿಪ್ರಾ ವಸುದೇವೋ ಬುಭುತ್ಸಯಾ ।
ಕೃಷ್ಣಂ ಮತ್ವಾರ್ಭಕಂ ಯನ್ನಃ ಪೃಚ್ಛತಿ ಶ್ರೇಯ ಆತ್ಮನಃ ॥ ೩೦

ಸಂನಿಕರ್ಷೋ ಹಿ ಮರ್ತ್ಯಾನಾಮನಾದರಣಕಾರಣಮ್ ।
ಗಾಂಗಂ ಹಿತ್ವಾ ಯಥಾನ್ಯಾಂಭಸ್ತತ್ರತ್ಯೋ ಯಾತಿ ಶುದ್ಧಯೇ ॥ ೩೧

ಯಸ್ಯಾನುಭೂತಿಃ ಕಾಲೇನ ಲಯೋತ್ಪತ್ತ್ಯಾದಿನಾಸ್ಯ ವೈ ।
ಸ್ವತೋಽನ್ಯಸ್ಮಾಚ್ಚ ಗುಣತೋ ನ ಕುತಶ್ಚನ ರಿಷ್ಯತಿ ॥ ೩೨

ಯುಧಿಷ್ಠಿರರನ್ನೂ ಬೀಳ್ಕೊಂಡು ತಮ್ಮ ಆಶ್ರಮಗಳಿಗೆ ತೆರಳಲನುವಾದರು. ಅದನ್ನು ಕಂಡು ಕೀರ್ತಿಶಾಲಿಯಾದ ವಸುದೇವನು ಋಷಿಗಳನ್ನು ಹಿಂಬಾಲಿಸಿ ಹೋಗಿ ಪಾದಗಳನ್ನು ಮುಟ್ಟಿ ನಮಸ್ಕರಿಸಿ ವಿನಯದಿಂದ ಈ ರೀತಿ ವಿಜ್ಞಾಪಿಸಿದನು (೨೭-೨೮) : ''ಮಹರ್ಷಿಗಳೆ, ಸರ್ವದೇವತಾ ಸ್ವರೂಪರಾದ ನಿಮಗೆ ನಮಸ್ಕಾರ. ನನ್ನ ಮಾತನ್ನು ಆಲಿಸಬೇಕು. ಕರ್ಮದಿಂದ ಕರ್ಮಫಲದ ಲೇಪವು ಹೋಗುವುದು ಹೇಗೆ ? ಹೇಳೋಣವಾಗಲಿ'' ಎಂದನು (೨೯). ಅದನ್ನು ಕೇಳಿ ನಾರದರು ಇಂತೆಂದರು : ''ಋಷಿಗಳೆ, ವಸುದೇವನು ತನಗೆ ಶ್ರೇಯಸ್ಕರವಾದದ್ದು ಯಾವುದೆಂದು ತಿಳಿಯುವ ಉದ್ದೇಶದಿಂದ ನಮ್ಮನ್ನು ಕೇಳುತ್ತಿದ್ದಾನೆ. ಕೃಷ್ಣನು ಒಬ್ಬ ಬಾಲಕನೆಂದು ಇವನು ಭಾವಿಸಿದ್ದಾನೆ! ಇದೇನು ಅಚ್ಚರಿಯಲ್ಲ (೩೦). ಏಕೆಂದರೆ, ಜನರ ಹತ್ತಿರ ಇರುವುದು ಅವರ ಅನಾದರಕ್ಕೆ ಕಾರಣವಾಗುತ್ತದೆ. ಗಂಗಾತೀರದಲ್ಲಿರತಕ್ಕವನು ಪವಿತ್ರನಾಗಬೇಕೆಂದು ಗಂಗಾಜಲವನ್ನು ಬಿಟ್ಟು ಬೇರೆ ತೀರ್ಥಕ್ಕೆ ಹೋಗುತ್ತಾನೆ! (೩೧). ಶ್ರೀಕೃಷ್ಣನ ಜ್ಞಾನ ನಿತ್ಯವಾದದ್ದು. ಆ ಜ್ಞಾನವು

ತಂ ಕ್ಲೇಶಕರ್ಮಪರಿಪಾಕಗುಣಪ್ರವಾಹೈ-
ರವ್ಯಾಹತಾನುಭವಮೀಶ್ವರಮದ್ವಿತೀಯಮ್ ।
ಪ್ರಾಣಾದಿಭಿಃ ಸ್ವವಿಭವೈರುಪಗೂಢಮನ್ಯೋ
ಮನ್ಯೇತ ಸೂರ್ಯಮಿವ ಮೇಘಹಿಮೋಪರಾಗೈಃ ॥ ೩೩

ಅಥೋಚುರ್ಮುನಯೋ ರಾಜನ್ನಾಭಾಷ್ಯಾನಕದುಂದುಭಿಮ್ ।
ಸರ್ವೇಷಾಂ ಶೃಣ್ವತಾಂ ರಾಜ್ಞಾಂ ತಥೈವಾಚ್ಯುತರಾಮಯೋಃ ॥ ೩೪

ಕರ್ಮಣಾ ಕರ್ಮನಿರ್ಹಾರ ಏಷ ಸಾಧು ನಿರೂಪಿತಃ ।
ಯಚ್ಛ್ರದ್ಧಯಾ ಯಜೇದ್ ವಿಷ್ಣುಂ ಸರ್ವಯಜ್ಞೇಶ್ವರಂ ಮಖೈಃ ॥

ಕಾಲಕ್ರಮದಲ್ಲಿ (ಹಣ್ಣಿನಂತೆ ಕೊಳೆತು) ನಾಶವಾಗತಕ್ಕದ್ದಲ್ಲ. ಜಗತ್ತಿನ ಪ್ರಳಯೋತ್ಪತ್ತಿಗಳಿಂದಲೂ ಹೋಗತಕ್ಕದ್ದಲ್ಲ. (ಮಿಂಚಿನಂತೆ) ಬೆಳಗಿ ಸ್ವತಃ ಮರೆಯಾಗತಕ್ಕದ್ದಲ್ಲ (ಗಡಿಗೆಯು ದೊಣ್ಣೆಯಿಂದ ಧ್ವಂಸವಾಗುವಂತೆ) ಇನ್ನೊಂದರಿಂದ ಅಳಿದುಹೋಗುವಂತಹದೂ ಅಲ್ಲ. (ವೃದ್ಧಿಹ್ರಾಸಾದಿಗುಣದಿಂದ ದೇಹವು ರೂಪಾಂತರವನ್ನು ಪಡೆಯುವಂತೆ) ಆತನ ಜ್ಞಾನವು ಬದಲಾಯಿಸಿ ವಿಕೃತವಾಗತಕ್ಕದ್ದೂ ಅಲ್ಲ. ಇನ್ನು ಯಾವುದರಿಂದಲೂ ಭಗವಂತನ ನಿತ್ಯಜ್ಞಾನಕ್ಕೆ ಬಾಧೆ ಇಲ್ಲ(೩೨). ಕ್ಲೇಶ, ಕರ್ಮ, ಕರ್ಮಪರಿಪಾಕ ಮತ್ತು ಗುಣಪ್ರವಾಹಗಳ[೧] ಸಂಬಂಧವೇ ಇಲ್ಲವಾದ್ದರಿಂದ ಅವನು ಈಶ್ವರ ; ಅದ್ವಿತೀಯ ; ಅವನ ಜ್ಞಾನಕ್ಕೆ ತಡೆ ಇಲ್ಲ. ಕ್ಲೇಶಾದಿಗಳೂ ಪ್ರಾಣ ದೇಹಾದಿಗಳೂ ಅವನಿಂದ ಕಲ್ಪಿತವಾದ ಅವನ ವೈಭವಗಳು. ಈಶ್ವರನಿಗೆ ಇವುಗಳ ಸ್ಪರ್ಶವಿಲ್ಲದಿದ್ದರೂ ಇವುಗಳಿಂದ ಕೂಡಿದ ಒಬ್ಬ ಮನುಷ್ಯನೆಂದು ಮೂಢನು ತಿಳಿಯುತ್ತಾನೆ, ಮೋಡ ಮಂಜು ಗ್ರಹಣಗಳು ಸೂರ್ಯನನ್ನು ಮುಚ್ಚಿವೆ ಎಂದು ತಿಳಿಯುವ ಹಾಗೆ ಇದು'' ಎಂದರು (೩೩). ಅನಂತರ ವಸುದೇವನನ್ನು ಕುರಿತು ಆ ಮುನಿಗಳು ಎಲ್ಲ ರಾಜರ ಮತ್ತು ಬಲರಾಮಕೃಷ್ಣರೆದುರಿಗೆ ''ವಸುದೇವ, ಸರ್ವಯಜ್ಞೇಶ್ವರನಾದ ವಿಷ್ಣುವನ್ನು ಯಜ್ಞಗಳಿಂದ ಶ್ರದ್ಧಾಪೂರ್ವಕವಾಗಿ ಆರಾಧಿಸುವುದೇ ಕರ್ಮದಿಂದ

೧ಕ್ಲೇಶ=ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ ಎಂಬ ಪಂಚಕ್ಲೇಶಗಳು. ಕರ್ಮವಿಪಾಕ=ಸುಖದುಃಖಗಳು. ಗುಣಪ್ರವಾಹ=ಸತ್ತ್ವರಜಸ್ತಮೋಗುಣಗಳು.

ಚಿತ್ತಸ್ಯೋಪಶಮೋಽಯಂ ವೈ ಕವಿಭಿಃ ಶಾಸ್ತ್ರಚಕ್ಷುಷಾ ।
ದರ್ಶಿತಃ ಸುಗಮೋ ಯೋಗೋ ಧರ್ಮಶ್ಚಾತ್ಮ ಮುದಾವಹಃ ॥ ೩೬

ಅಯಂ ಸ್ವಸ್ತ್ಯಯನಃ ಪಂಥಾ ದ್ವಿಜಾತೇರ್ಗೃಹಮೇಧಿನಃ ।
ಯಚ್ಛ್ರದ್ಧಯಾಽಽಪ್ತವಿತ್ತೇನ ಶುಕ್ಲೇನೇಜ್ಯೇತ ಪೂರುಷಃ ॥ ೩೭

ವಿತ್ತೈಷಣಾಂ ಯಜ್ಞದಾನೈರ್ಗೃಹೈರ್ದಾರಸುತೈಷಣಾಮ್ ।
ಆತ್ಮಲೋಕೈಷಣಾಂ ದೇವ ಕಾಲೇನ ವಿಸೃಜೇದ್ ಬುಧಃ ।
ಗ್ರಾಮೇ ತ್ಯಕ್ತೈಷಣಾಃ ಸರ್ವೇ ಯಯುರ್ಧೀರಾಸ್ತಪೋವನಮ್ ॥ ೩೮

ಋಣೈಸ್ತ್ರಿಭಿರ್ದ್ವಿಜೋ ಜಾತೋ ದೇವರ್ಷಿಪಿತೄಣಾಂ ಪ್ರಭೋ ।
ಯಜ್ಞಾಧ್ಯಯಪುತ್ರೈಸ್ತಾನ್ಯನಿಸ್ತೀರ್ಯ ತ್ಯಜನ್ ಪತೇತ್ ॥ ೩೯

ತ್ವಂ ತ್ವದ್ಯ ಮುಕ್ತೋ ದ್ವಾಭ್ಯಾಂ ವೈ ಋಷಿಪಿತ್ರೋರ್ಮಹಾಮತೇ ।
ಯಜ್ಞೈರ್ದೇವರ್ಣಮುನ್ಮುಚ್ಯ ನಿರ್ಋಣೋಽಶರಣೋ ಭವ ॥ ೪೦

ಕರ್ಮಫಲದ ಲೇಪವನ್ನು ಕಳೆದುಕೊಳ್ಳುವ ಸರಿಯಾದ ದಾರಿ (೩೪-೩೫). ವಿದ್ವಾಂಸರು ಶಾಸ್ತ್ರೀಯ ವಿಚಾರದಿಂದ ತೋರಿಸಿಕೊಟ್ಟ ದಾರಿ ಇದು. ಇದರಲ್ಲಿ ಮನಸ್ಸಿಗೆ ಶಾಂತಿಯುಂಟು. ಸುಲಭವಾದ ಕರ್ಮಯೋಗವಿದು. ಆತ್ಮ ತೃಪ್ತಿಯನ್ನುಂಟುಮಾಡುವ ಧರ್ಮವಿದು. ನ್ಯಾಯಮಾರ್ಗದಲ್ಲಿ ಸಂಪಾದಿಸಿದ ದ್ರವ್ಯದಿಂದ ಭಕ್ತಿಪೂರ್ವಕವಾಗಿ ಪರಮಪುರುಷನ ಆರಾಧನೆಯೆಂಬುದು ಕ್ಷೇಮಕರವಾದ ದಾರಿ. ಗೃಹಸ್ಥನಾದ ದ್ವಿಜನಿಗೆ ಇದು ಹೇಳಿಸಿದ್ದು (೩೬-೩೭). ಬುದ್ಧಿಶಾಲಿಯಾದವನು ಯಜ್ಞದಾನಗಳಿಂದ ಹಣದ ವ್ಯಾಮೋಹವನ್ನೂ ಗೃಹಭೋಗವನ್ನನುಭವಿಸಿ ಇದು ಇಷ್ಟೇ ಎಂಬ ನಿರ್ಧಾರದಿಂದ ಹೆಂಡತಿಮಕ್ಕಳ ವ್ಯಾಮೋಹವನ್ನೂ, ಕಾಲವಶವಾಗಿ ಎಲ್ಲವೂ ಕ್ಷಯಿಸುವುದೆಂಬ ನಿಶ್ಚಯದಿಂದ ದೇಹದ ಮತ್ತು ಸ್ವರ್ಗದ ವ್ಯಾಮೋಹವನ್ನೂ ತ್ಯಜಿಸಬೇಕು. ವಸುದೇವ, ಈ ಪ್ರಕಾರವಾಗಿ ವಿದ್ವಾಂಸರು ವ್ಯಾಮೋಹವೆಂಬ ಏಷಣಾತ್ರಯವನ್ನು ಪರಿತ್ಯಜಿಸಿ ಗ್ರಾಮವಾಸದಲ್ಲಿ ವಿರಕ್ತರಾಗಿ ತಪೋವನಕ್ಕೆ ಹೋಗಿದ್ದಾರೆ (೩೮). ದೇವಋಣ, ಋಷಿಋಣ, ಪಿತೃಋಣಗಳೆಂಬ ಋಣತ್ರಯದಿಂದ ಸಹಿತನಾಗಿಯೇ ದ್ವಿಜನು ಹುಟ್ಟಿರುತ್ತಾನೆ, ಯಜ್ಞದಿಂದ ದೇವಋಣವನ್ನೂ ವೇದಾಧ್ಯಯನದಿಂದ ಋಷಿಋಣವನ್ನೂ ಪುತ್ರಸಂತಾನದಿಂದ ಪಿತೃಋಣವನ್ನೂ ತೀರಿಸಬೇಕು. ತೀರಿಸದೆ ಕರ್ಮಮಾರ್ಗವನ್ನು ಬಿಡತಕ್ಕವನು ಪತಿತನಾಗುವನು (೩೯). ವಸುದೇವ,

ವಸುದೇವ ಭವಾನ್ ನೂನಂ ಭಕ್ತ್ಯಾ ಪರಮಯಾ ಹರಿಮ್ ।
ಜಗತಾಮೀಶ್ವರಂ ಪ್ರಾರ್ಚಃ ಸ ಯದ್ ವಾಂ ಪುತ್ರತಾಂ ಗತಃ ॥ ೪೧

ಶ್ರೀಶುಕ ಉವಾಚ-
ಇತಿ ತದ್ವಚನಂ ಶ್ರುತ್ವಾ ವಸುದೇವೋ ಮಹಾಮನಾಃ ।
ತಾನೃಷೀನೃತ್ವಿಜೋ ವವ್ರೇ ಮೂರ್ಧ್ನಾಽಽನಮ್ಯ ಪ್ರಸಾದ್ಯ ಚ ॥ ೪೨

ತ ಏನಮೃಷಯೋ ರಾಜನ್ ವೃತಾ ಧರ್ಮೇಣ ಧಾರ್ಮಿಕಮ್ ।
ತಸ್ಮಿನ್ನಯಾಜಯನ್ ಕ್ಷೇತ್ರೇ ಮುಖ್ಯೈರುತ್ತಮಕಲ್ಪಕೈಃ ॥ ೪೩

ತದ್ದೀಕ್ಷಾಯಾಂ ಪ್ರವೃತ್ತಾಯಾಂ ವೃಷ್ಣಯಃ ಪುಷ್ಕರಸ್ರಜಃ ।
ಸ್ನಾತಾಃ ಸುವಾಸಸೋ ರಾಜನ್ ರಾಜಾನಃ ಸುಷ್ಠ್ವಲಂಕೃತಾಃ ॥ ೪೪

ತನ್ಮಹಿಷ್ಯಶ್ಚ ಮುದಿತಾ ನಿಷ್ಕಕಂಠ್ಯಃ ಸುವಾಸಸಃ ।
ದೀಕ್ಷಾಶಾಲಾಮುಪಾಜಗ್ಮುರಾಲಿಪ್ತಾ ವಸ್ತುಪಾಣಯಃ ॥ ೪೫

ನೀನೀಗ ಋಷಿಋಣ ಪಿತೃಋಣಗಳೆಂಬ ಎರಡರಿಂದ ಬಿಡುಗಡೆ ಹೊಂದಿದ್ದೀಯೆ. ಇನ್ನು ಯಜ್ಞ ಮಾಡಿ ದೇವಋಣವನ್ನು ತೀರಿಸಿ ಋಣತ್ರಯವಿಮುಕ್ತನಾಗಿ ವೈರಾಗ್ಯದಿಂದ ಗೃಹವನ್ನು ತ್ಯಜಿಸು. ನೀನು ಜನ್ಮಾಂತರದಲ್ಲಿ ಪರಮಭಕ್ತಿಯಿಂದ ಜಗದೀಶ್ವರನಾದ ಶ್ರೀಹರಿಯನ್ನು ಅರ್ಚಿಸಿದ್ದೀಯೆ. ಆದ್ದರಿಂದ ಆತನು ಈಗ ದಂಪತಿಗಳಾದ ನಿಮಗೆ ಪುತ್ರನಾಗಿ ಅವತರಿಸಿದ್ದಾನೆ'' ಎಂದರು (೪೦-೪೧). ಇಂತು ಮುನಿವಚನವನ್ನಾಲಿಸಿ ಮನಸ್ವಿಯಾದ ವಸುದೇವನು ಮುನಿಗಳಿಗೆ ದಂಡ ಪ್ರಣಾಮವನ್ನು ಮಾಡಿ ಪ್ರಸನ್ನಗೊಳಿಸಿ, ತಾನು ಮಾಡುವ ಯಾಗದಲ್ಲಿ ನೀವು ಋತ್ವಿಜರಾಗಬೇಕೆಂದು ಬೇಡಿಕೊಂಡನು (೪೨). ಹೀಗೆ ವಸುದೇವನಿಂದ ವಿಧಿವತ್ತಾಗಿ ಯಜ್ಞವರಣವನ್ನು ಪಡೆದ ಆ ಋಷಿಗಳು ಧಾರ್ಮಿಕನಾದ ಆತನಿಂದ ಕುರುಕ್ಷೇತ್ರದಲ್ಲಿ ಕಲ್ಪಾನುಸಾರವಾಗಿ ಹಲವಾರು ಯಜ್ಞಗಳನ್ನು ಮಾಡಿಸಿದರು (೪೩). ಯಜ್ಞದೀಕ್ಷೆಯು ಆರಂಭವಾದೊಡನೆ ಯಾದವರೂ ಇತರ ರಾಜರೂ ಮಂಗಳಸ್ನಾನಮಾಡಿ ಉತ್ತಮ ವಸ್ತ್ರವನ್ನುಟ್ಟು ಪದ್ಮಮಾಲೆಗಳನ್ನು ಧರಿಸಿ ಅಲಂಕರಿಸಿಕೊಂಡರು. ಅವರ ಪತ್ನಿಯರೂ ಸಂತೋಷದಿಂದ ಒಳ್ಳೆಯ ವಸ್ತ್ರವನ್ನುಟ್ಟು ಚಿನ್ನದ ಸರಗಳನ್ನು ಧರಿಸಿ ಚಂದನಾದಿಗಳಿಂದ ಅನುಲಿಪ್ತರಾದರು. ಎಲ್ಲರೂ ಪುಷ್ಪಫಲಾದಿವಸ್ತುಗಳನ್ನು ಕೈಯಲ್ಲಿ ಹಿಡಿದುಕೊಂಡು ಯಜ್ಞಶಾಲೆಗೆ

ನೇದುರ್ಮೃದಂಗಪಟಹಶಂಖಭೇರ್ಯಾನಕಾದಯಃ।
ನನೃತುರ್ನಟನರ್ತಕ್ಯಸ್ತುಷ್ಟುವುಃ ಸೂತಮಾಗಧಾಃ।
ಜಗುಃ ಸುಕಂಠ್ಯೋ ಗಂಧರ್ವ್ಯಃ ಸಂಗೀತಂ ಸಹಭರ್ತೃಕಾಃ॥ ೪೬

ತಮಭ್ಯಷಿಂಚನ್ ವಿಧಿವದಕ್ತಮಭ್ಯಕ್ತಮೃತ್ವಿಜಃ।
ಪತ್ನೀಭಿರಷ್ಟಾದಶಭಿಃ ಸೋಮರಾಜಮಿವೋಡುಭಿಃ ॥ ೪೭

ತಾಭಿರ್ದುಕೂಲವಲಯೈರ್ಹಾರ ನೂಪುರಕುಂಡಲೈಃ।
ಸ್ವಲಂಕೃತಾಭಿರ್ವಿಬಭೌ ದೀಕ್ಷಿತೋಽಜಿನಸಂವೃತಃ॥ ೪೮

ತಸ್ಯರ್ತ್ವಿಜೋ ಮಹಾರಾಜ ರತ್ನಕೌಶೇಯವಾಸಸಃ।
ಸಸದಸ್ಯಾ ವಿರೇಜುಸ್ತೇ ಯಥಾ ವೃತ್ರಹಣೋಽಧ್ವರೇ॥ ೪೯

ತದಾ ರಾಮಶ್ಚ ಕೃಷ್ಣಶ್ಚ ಸ್ವೈಃ ಸ್ವೈರ್ಬಂಧುಭಿರನ್ವಿತೌ।
ರೇಜತುಃ ಸ್ವಸುತೈರ್ದಾರೈರ್ಜೀವೇಶೌ ಸ್ವವಿಭೂತಿಭಿಃ॥ ೫೦

ಹೋದರು(೪೪-೪೫). ಮೃದಂಗ, ತಮಟೆ, ಶಂಖ, ಭೇರಿ, ಡೊಳ್ಳು ಮೊದಲಾದ ಮಂಗಳವಾದ್ಯಗಳು ಭೋರ್ಗರೆದವು. ನಟನರ್ತಕಿಯರು ಕುಣಿದರು. ಸೂತಮಾಗಧರು ಹೊಗಳಿದರು. ಗಂಧರ್ವಸ್ತ್ರೀಯರು ತಮ್ಮ ಗಂಡರೊಂದಿಗೆ ಮಧುರಕಂಠದಿಂದ ಸಂಗೀತವನ್ನು ಹಾಡಿದರು. ಆಗ ಋತ್ವಿಜರು ವಸುದೇವನ ಕಣ್ಣುಗಳಿಗೆ ಕಾಡಿಗೆಯನ್ನೂ ದೇಹಕ್ಕೆ ಬೆಣ್ಣೆಯನ್ನೂ ಲೇಪಿಸಿ, ನಕ್ಷತ್ರಗಳಿಂದ ಸಹಿತನಾದ ಚಂದ್ರನಂತೆ ಹದಿನೆಂಟು ಮಡದಿಯರಿಂದ ಸಹಿತನಾಗಿದ್ದ ವಸುದೇವನಿಗೆ ವಿಧಿವತ್ತಾಗಿ ಮಂಗಳಸ್ನಾನ ಮಾಡಿಸಿದರು(೪೬-೪೭). ಅನಂತರ ಕೃಷ್ಣಾಜಿನವನ್ನು ಧರಿಸಿದ ವಸುದೇವನು ದುಕೂಲ ಕೈಬಳೆ ಹಾರ ನೂಪುರಕುಂಡಲಗಳಿಂದ ಭೂಷಿತರಾದ ಪತ್ನಿಯರೊಡನೆ ಕುಳಿತು ಯಜ್ಞ ದೀಕ್ಷೆಯನ್ನು ವಹಿಸಿದನು (೪೮). ಮಹಾರಾಜ-ಪರೀಕ್ಷಿತ, ಆತನ ಋತ್ವಿಜರು ರೇಶ್ಮೆಯ ವಸ್ತ್ರವನ್ನುಟ್ಟು ರತ್ನಾಭರಣಗಳನ್ನು ತೊಟ್ಟಿದ್ದರು. ಸಭಾಸದರಿಂದ ಪರಿವೃತರಾದ ಅವರು, ದೇವೇಂದ್ರನ ಯಾಗದಲ್ಲಿದ್ದ ಋತ್ವಿಜರಂತೆ ಕಂಗೊಳಿಸಿದರು. ಸಕಲ ಜೀವಜಾತಗಳಿಗೂ ಪ್ರಭುಗಳಾದ ಬಲರಾಮಕೃಷ್ಣರು ತಮ್ಮ ತಮ್ಮ ಬಂಧುಗಳಿಂದಲೂ ಮಕ್ಕಳಿಂದಲೂ ಮಡದಿಯರಿಂದಲೂ

ಈಜೇಽನುಯಜ್ಞಂ ವಿಧಿನಾ ಅಗ್ನಿಹೋತ್ರಾದಿಲಕ್ಷಣೈಃ।
ಪ್ರಾಕೃತೈರ್ವೈಕೃತೈರ್ಯಜ್ಞೈರ್ದ್ರವ್ಯಜ್ಞಾನಕ್ರಿಯೇಶ್ವರಮ್॥ ೫೧

ಅಥರ್ತ್ವಿಗ್ಭ್ಯೋಽದದಾತ್ ಕಾಲೇ ಯಥಾಮ್ನಾತಂ ಸ ದಕ್ಷಿಣಾಃ।
ಸ್ವಲಂಕೃತೇಭ್ಯೋಽಲಂಕೃತ್ಯ ಗೋಭೂಕನ್ಯಾ ಮಹಾಧನಾಃ॥ ೫೨

ಪತ್ನೀಸಂಯಾಜಾವಭೃಥ್ಯೈಶ್ಚರಿತ್ವಾ ತೇ ಮಹರ್ಷಯಃ।
ಸಸ್ನೂ ರಾಮಹ್ರದೇ ವಿಪ್ರಾ ಯಜಮಾನಪುರಸ್ಸರಾಃ॥ ೫೩
ಸ್ನಾತೋಽಲಂಕಾರವಾಸಾಂಸಿ ವಂದಿಭ್ಯೋಽದಾತ್ತಥಾ ಸ್ತ್ರಿಯಃ।
ತತಃ ಸ್ವಲಂಕೃತೋ ವರ್ಣಾನಾಶ್ವಭ್ಯೋಽನ್ನೇನ ಪೂಜಯತ್॥ ೫೪

ಬಂಧೂನ್ ಸದಾರಾನ್ ಸಸುತಾನ್ ಪಾರಿಬರ್ಹೇಣ ಭೂಯಸಾ।
ವಿದರ್ಭ ಕೋಸಲಕುರೂನ್ ಕಾಶಿಕೇಕಯಸೃಂಜಯಾನ್॥ ೫೫

ಪರಿವೃತರಾಗಿ ತಮ್ಮದೇ ಆದ ವೈಭವದಿಂದ ವಿರಾಜಿಸಿದರು (೪೯-೫೦). ಅನಂತರ ವಸುದೇವನು ಪ್ರತಿಯಜ್ಞದಲ್ಲಿಯೂ ಅಗ್ನ್ಯುಪಾಸನೆಯೇ ಲಕ್ಷ್ಯವಾಗಿರುವ ಸರ್ವಾಂಗಸಹಿತವಾದ ಜ್ಯೋತಿಷ್ಟೋಮಾದಿ ಪ್ರಾಕೃತಯಾಗಗಳಿಂದಲೂ ಅತಿದೇಶಪ್ರಾಪ್ತವಾದ ಸೌರ್ಯಸತ್ರಾದಿ ವೈಕೃತ ಯಾಗಗಳಿಂದಲೂ ದ್ರವ್ಯಜ್ಞಾನ ಕ್ರಿಯೇಶ್ವರನಾದ ಯಜ್ಞ ಪುರುಷನನ್ನು ಆರಾಧಿಸಿದನು (೫೧). ಬಳಿಕ ಅಲಂಕೃತರಾಗಿದ್ದ ಋತ್ವಿಜರಿಗೆ ವಸ್ತ್ರಮಾಲ್ಯಾದಿಗಳನ್ನಿತ್ತು ಮತ್ತೆ ಅಲಂಕರಿಸಿ ಗೋ ಭೂಮಿ ಕನ್ಯೆಯರನ್ನೂ ಅಧಿಕವಾದ ದಕ್ಷಿಣೆಯನ್ನೂ ಯಥೋಕ್ತವಾಗಿ ಅರ್ಪಿಸಿದನು (೫೨). ಅನಂತರ ಆ ಮಹರ್ಷಿಗಳು ಯಜಮಾನನಾದ ವಸುದೇವನೊಡಗೂಡಿ ಪತ್ನೀಸಂಯಾಜ ಅವಭೃಥ್ಯ ಎಂಬ ಯಾಗಗಳನ್ನು ನೆರವೇರಿಸಿ ಸಮಂತಪಂಚಕದಲ್ಲಿ ಅವಭೃಥಸ್ನಾನವನ್ನು ಮಾಡಿದರು (೫೩). ವಸುದೇವನು ಸ್ನಾನಮಾಡಿ ವಂದಿಮಾಗಧರಿಗೆ ಮತ್ತು ಸ್ತ್ರೀಯರಿಗೆ ಅಲಂಕಾರಗಳನ್ನೂ ವಸ್ತ್ರಗಳನ್ನೂ ಕೊಟ್ಟನು. ನಾಯಿಗಳಿಂದ ಹಿಡಿದು ಸಕಲರಿಗೂ ಅನ್ನದಾನಮಾಡಿ ಸತ್ಕರಿಸಿದನು. ತರುವಾಯ ಬಂಧುಗಳಾದ ವಿದರ್ಭ, ಕೋಸಲ, ಕುರು, ಕಾಶಿ, ಕೇಕಯ, ಸೃಂಜಯದೇಶಗಳ ಅರಸರಿಗೂ ಅವರ ಪತ್ನೀ ಪುತ್ರರಿಗೂ ಸದಸ್ಯರು, ಋತ್ವಿಜರು, ಸುರಗಣಗಳು, ನೆರೆದಿದ್ದ ಇತರ ಜನರು, ಭೂತಗಣಗಳು,

ಸದಸ್ಯರ್ತ್ವಿಕ್ಸುರಗಣಾನ್ ನೃಭೂತಪಿತೃಚಾರಣಾನ್ ।
ಶ್ರೀನಿಕೇತಮನುಜ್ಞಾಪ್ಯ ಶಂಸಂತಃ ಪ್ರಯಯುಃ ಕ್ರತುಮ್ ॥ ೫೬

ಧೃತರಾಷ್ಟ್ರೋಽನುಜಃ ಪಾರ್ಥಾ ಭೀಷ್ಮೋ ದ್ರೋಣಃ ಪೃಥಾಯಮೌ
ನಾರದೋ ಭಗವಾನ್ ವ್ಯಾಸಃ ಸುಹೃತ್ಸಂಬಂಧಿಬಾಂಧವಾಃ ॥ ೫೭

ಬಂಧೂನ್ ಪರಿಷ್ವಜ್ಯ ಯದೂನ್ ಸೌಹೃದಾತ್ ಕ್ಲಿನ್ನಚೇತಸಃ ।
ಯಯುರ್ವಿರಹಕೃಚ್ಛ್ರೇಣ ಸ್ವದೇಶಾಂಶ್ಚಾಪರೇ ಜನಾಃ ॥ ೫೮

ನಂದಸ್ತು ಸಹ ಗೋಪಾಲೈರ್ಬೃಹತ್ಯಾ ಪೂಜಯಾರ್ಚಿತಃ ।
ಕೃಷ್ಣರಾಮೋಗ್ರಸೇನಾದ್ಯೈರ್ನ್ಯವಾತ್ಸೀದ್ ಬಂಧುವತ್ಸಲಃ ॥ ೫೯

ವಸುದೇವೋಽಂಜಸೋತ್ತೀರ್ಯ ಮನೋರಥಮಹಾರ್ಣವಮ್ ।
ಸುಹೃದ್ವೃತಃ ಪ್ರೀತಮನಾ ನಂದಮಾಹ ಕರೇಸ್ಪೃಶನ್ ॥ ೬೦

ಪಿತೃಚಾರಣರು-ಇವರಿಗೂ ಯಥೇಷ್ಟವಾಗಿ ವಸ್ತ್ರಾಭರಣಾದಿಗಳನ್ನಿತ್ತು ಗೌರವಿಸಿದನು. ಎಲ್ಲರೂ ಶ್ರೀನಿವಾಸನಾದ ಮುಕುಂದನ ಅನುಜ್ಞೆಯನ್ನು ಪಡೆದು ಯಜ್ಞವನ್ನು ಹೊಗಳುತ್ತ ತೆರಳಿದರು (೫೪-೫೬). ಧೃತರಾಷ್ಟ್ರ, ಅವನ ತಮ್ಮ ವಿದುರ, ಧರ್ಮರಾಜ ಭೀಮಾರ್ಜುನರು, ಭೀಷ್ಮ, ದ್ರೋಣ, ಕುಂತಿ ನಕುಲಸಹದೇವರು, ನಾರದರು, ಭಗವಾನ್ ವ್ಯಾಸಮುನಿಗಳು, ಸ್ನೇಹಿತರು, ಬಂಧುಬಾಂಧವರು-ಎಲ್ಲರೂ ತಮ್ಮ ಬಂಧುಗಳನ್ನು ಪ್ರೀತಿಯಿಂದ ಆಲಿಂಗಿಸಿ ಬೀಳ್ಕೊಂಡು ತಮ್ಮ ತಮ್ಮ ಸ್ಥಳಗಳಿಗೆ ಪ್ರಯಾಣ ಮಾಡಿದರು (೫೭-೫೮). ನಂದಗೋಪನಾದರೋ ಶ್ರೀಕೃಷ್ಣ ಬಲರಾಮ, ಉಗ್ರಸೇನ ಮೊದಲಾದವರಿಂದ ವಿಶೇಷವಾಗಿ ಆದರ ಸತ್ಕಾರಗಳನ್ನು ಪಡೆದು, ಅವರ ವಾತ್ಸಲ್ಯಕ್ಕೆ ಕಟ್ಟು ಬಿದ್ದು ಗೋಪಾಲರೊಡನೆ ಅಲ್ಲಿಯೇ ಇದ್ದನು (೫೯). ವಸುದೇವನು ತನ್ನ ಮನೋರಥವೆಂಬ ಮಹಾಸಾಗರವನ್ನು ಸುಲಭವಾಗಿ ದಾಟಿ ಸಂಪ್ರೀತನಾಗಿ ಸ್ನೇಹಿತರ ನಡುವೆ ನಂದಗೋಪನ ಕೈಯನ್ನು ಹಿಡಿದುಕೊಂಡು ಹೇಳಿದನು: ''ಸೋದರ-ನಂದ, ಸ್ನೇಹವೆಂಬುದು ಮನುಷ್ಯರಿಗೆ ಈಶ್ವರ ನಿರ್ಮಿತವಾದ ಒಂದು ಪಾಶ. ಎಂತಹ ಶೂರರಿಗೂ ಯೋಗಿಗಳಿಗೂ ಈ ಪಾಶದಿಂದ

ವಸುದೇವ ಉವಾಚ-

ಭ್ರಾತರೀಶಕೃತಃ ಪಾಶೋ ನೃಣಾಂ ಯಃ ಸ್ನೇಹಸಂಜ್ಞಿತಃ।
ತಂ ದುಸ್ತ್ಯಜಮಹಂ ಮನ್ಯೇ ಶೂರಾಣಾಮಪಿ ಯೋಗಿನಾಮ್ ॥ ೬೧

ಅಸ್ಮಾಸ್ವಪ್ರತಿಕಲ್ಪೇಯಂ ಯತ್ ಕೃತಾಜ್ಞೇಷು ಸತ್ತಮೈಃ।
ಮೈತ್ರ್ಯರ್ಪಿತಾಫಲಾ ವಾಪಿ ನ ನಿವರ್ತೇತ ಕರ್ಹಿಚಿತ್ ॥ ೬೨

ಪ್ರಾಗಕಲ್ಪಾಚ್ಚ ಕುಶಲಂ ಭ್ರಾತರ್ನೋ ನಾಚರಾಮ ಹಿ।
ಅಧುನಾ ಶ್ರೀಮದಾಂಧಾಕ್ಷಾ ನ ಪಶ್ಯಾಮಃ ಪುರಃ ಸತಃ ॥ ೬೩

ಮಾ ರಾಜ್ಯಶ್ರೀರಭೂತ್ ಪುಂಸಃ ಶ್ರೇಯಸ್ಕಾಮಸ್ಯ ಮಾನದ।
ಸ್ವಜನಾನುತ ಬಂಧೂನ್ ವಾ ನ ಪಶ್ಯತಿ ಯಯಾಂಧದೃಕ್ ॥ ೬೪

ಶ್ರೀ ಶುಕಉವಾಚ-

ಏವಂ ಸೌಹೃದಶೈಥಿಲ್ಯಚಿತ್ತ ಆನಕದುಂದುಭಿಃ।
ರುರೋದ ತತ್ಕೃತಾಂ ಮೈತ್ರೀಂ ಸ್ಮರನ್ನಶ್ರುವಿಲೋಚನಃ ॥ ೬೫

ಬಿಡಿಸಿಕೊಳ್ಳಲು ಸಾಧ್ಯವಿಲ್ಲವೆಂದು ನನ್ನ ಅಭಿಪ್ರಾಯ (೬೦-೬೧). ಉಪಕಾರ ಸ್ಮರಣೆಯಿಲ್ಲದ ನಮ್ಮಲ್ಲಿ ಸಾಧುಶಿರೋಮಣಿಗಳಾದ ನೀವು ಎಂತಹ ಅಸಾಧಾರಣವಾದ ಸ್ನೇಹವನ್ನು ಇರಿಸಿದ್ದಿರಿ ! ಅದಕ್ಕೆ ನಮ್ಮಿಂದ ಪ್ರತಿಫಲವು ದೊರೆಯದಿದ್ದರೂ ಆ ಸ್ನೇಹವು ಎಷ್ಟು ಗಾಢವಾಗಿ ಅಚಲವಾಗಿ ಉಳಿದುಕೊಂಡಿದೆ ! (೬೨). ಸೋದರ, ಹಿಂದೆ ನಾವು ಅಸಮರ್ಥರಾದ್ದರಿಂದ ಯಾವ ಒಳ್ಳೆಯದನ್ನೂ ನಿಮಗಾಗಿ ಮಾಡಲಾಗಲಿಲ್ಲ. ಈಗ ಐಶ್ವರ್ಯಮದದಿಂದ ಕುರುಡರಾದ ನಮಗೆ ಎದುರಿಗಿರುವುದೂ ಕಾಣಿಸುತ್ತಿಲ್ಲ! ಪ್ರಿಯಮಿತ್ರ, ಶ್ರೇಯಸ್ಸನ್ನು ಬಯಸುವ ಮನುಷ್ಯನಿಗೆ ಎಂದಿಗೂ ದೊಡ್ಡ ಐಶ್ವರ್ಯವು ಬರಬಾರದು. ಅದರಿಂದ ಅವನು ಕುರುಡನಾಗಿಬಿಡುತ್ತಾನೆ. ಸ್ವಜನರೂ ಸ್ನೇಹಿತರೂ ಅವನಿಗೆ ಕಾಣಿಸುವುದೇ ಇಲ್ಲ'' (೬೩-೬೪). ಹೀಗೆ ಹೇಳುವಾಗ ನಂದಗೋಪನಿಂದಾದ ಉಪಕಾರದ ಸ್ಮರಣೆಯುಂಟಾಗಿ ವಸುದೇವನ ಕಣ್ಣಲ್ಲಿ ನೀರುತುಂಬಿತು. ತನ್ನಸ್ನೇಹದಲ್ಲಿ ಶೈಥಿಲ್ಯ ಉಂಟಾಯಿತೆಂಬ ಕಳವಳದಿಂದ ವಸುದೇವನು ಗಳಗಳನೆ ಅತ್ತುಬಿಟ್ಟನು (೬೫).

ನಂದಸ್ತು ಸಖ್ಯುಃ ಪ್ರಿಯಕೃತ್ ಪ್ರೇಮ್ಣಾ ಗೋವಿಂದರಾಮಯೋಃ ।
ಅದ್ಯ ಶ್ವ ಇತಿ ಮಾಸಾಂಸ್ತ್ರೀನ್ ಯದುಭಿರ್ಮಾನಿತೋಽವಸತ್ ॥ ೬೬

ತತಃ ಕಾಮೈಃ ಪೂರ್ಯಮಾಣಃ ಸವ್ರಜಃ ಸಹಬಾಂಧವಃ ।
ಪರಾರ್ಧ್ಯಾಭರಣಕ್ಷೌಮನಾನಾನರ್ಘ್ಯಪರಿಚ್ಛದೈಃ ॥ ೬೭

ವಸುದೇವೋಗ್ರಸೇನಾಭ್ಯಾಂ ಕೃಷ್ಣೋದ್ಧವಬಲಾದಿಭಿಃ ।
ದತ್ತಮಾದಾಯ ಪಾರಿಬರ್ಹಂ ಯಾಪಿತೋ ಯದುಭಿರ್ಯಯೌ ॥ ೬೮

ನಂದೋ ಗೋಪಾಶ್ಚ ಗೋಪ್ಯಶ್ಚ ಗೋವಿಂದಚರಣಾಂಬುಜೇ ।
ಮನಃ ಕ್ಷಿಪ್ತಂ ಪುನರ್ಹರ್ತುಮನೀಶಾ ಮಥುರಾಂ ಯಯುಃ ॥ ೬೯

ಬಂಧುಷು ಪ್ರತಿಯಾತೇಷು ವೃಷ್ಣಯಃ ಕೃಷ್ಣದೇವತಾಃ ।
ವೀಕ್ಷ್ಯ ಪ್ರಾವೃಷಮಾಸನ್ನಂ ಯಯುರ್ದ್ವಾರವತೀಂ ಪುನಃ ॥ ೭೦

ನಂದನಾದರೋ ಮಿತ್ರನಾದ ವಸುದೇವನಿಗೆ ಸಂತೋಷವಾಗಲೆಂಬ ಆಶಯದಿಂದಲೂ ಗೋವಿಂದಬಲರಾಮರ ಮೇಲಿದ್ದ ಪ್ರೇಮಾತಿಶಯದಿಂದಲೂ 'ಇಂದು ಹೋದರಾಯಿತು, ನಾಳೆ ಹೋದರಾಯಿತು !' ಎಂಬ ದಾಕ್ಷಿಣ್ಯಕ್ಕೆ ವಶನಾಗಿ ಯಾದವರ ಸತ್ಕಾರವನ್ನು ಪಡೆಯುತ್ತ ಮೂರು ತಿಂಗಳವರೆಗೆ ಅವರ ಜೊತೆಯಲ್ಲಿಯೇ ಇದ್ದನು (೬೬). ನಂದನಿಗೂ ಗೋಕುಲದವರಿಗೂ ನಂದರ ಬಂಧುಗಳಿಗೂ ಅಮೂಲ್ಯಗಳಾದ ಆಭರಣ, ಪಟ್ಟವಸ್ತ್ರ ಬೆಲೆಬಾಳುವ ವಸ್ತುಗಳನ್ನು ಕೊಟ್ಟು ಗೌರವಿಸಲಾಯಿತು. ಆಮೇಲೆ ವಸುದೇವ, ಉಗ್ರಸೇನ, ಶ್ರೀಕೃಷ್ಣ, ಉದ್ಧವ, ಬಲರಾಮರು ಅರ್ಪಿಸಿದ ವಿಶೇಷ ಮರ್ಯಾದೆಗಳನ್ನು ನಂದನು ಸ್ವೀಕರಿಸಿ ಅವರೆಲ್ಲರಿಂದಲೂ ಬೀಳ್ಕೊಂಡು ಪ್ರಯಾಣ ಮಾಡಿದನು (೬೭-೬೮). ನಂದ-ಗೋಪ-ಗೋಪಿಯರು ಶ್ರೀಕೃಷ್ಣನ ಅಡಿದಾವರೆಯಲ್ಲಿ ಇರಿಸಿದ್ದ ತಮ್ಮ ಮನಸ್ಸನ್ನು ಬೇರೆಡೆಗೆ ತಿರುಗಿಸಲಾರದೆ ಅವನನ್ನೇ ಸ್ಮರಿಸುತ್ತ ಮಥುರೆಗೆ ಹೋದರು (೬೯). ಹೀಗೆ ಬಂಧುಗಳೆಲ್ಲರೂ ತೆರಳಿದ ಮೇಲೆ ಮಳೆಗಾಲವು ಸಮೀಪಿಸಿತೆಂದು ತಿಳಿದು, ಶ್ರೀಕೃಷ್ಣನನ್ನು ದೇವರೆಂದು ಗೌರವಿಸುತ್ತಿದ್ದ ಯಾದವರು ದ್ವಾರಕೆಗೆ ಹಿಂದಿರುಗಿದರು. ಅಲ್ಲಿ ತಾವು

ಜನೇಭ್ಯಃ ಕಥಯಾಂಚಕ್ರುರ್ಯದುದೇವಮಹೋತ್ಸವಮ್ ।
ಯದಾಸೀತ್ತೀರ್ಥಯಾತ್ರಾಯಾಂ ಸುಹೃತ್ಸಂದರ್ಶನಾದಿಕಮ್ ॥ ೭೧

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಚತುರಶೀತಮಾಧ್ಯಾಯಃ

ಪಂಚಾಶೀತಿತಮಾಧ್ಯಾಯಃ

ಶ್ರೀ ಬಾದರಾಯಣಿರುವಾಚ-

ಅಥೈಕದಾಽಽತ್ಮಜೌ ಪ್ರಾಪ್ತೌ ಕೃತಪಾದಾಭಿವಂದನೌ ।
ವಸುದೇವೋಽಭಿನಂದ್ಯಾಹ ಪ್ರೀತ್ಯಾ ಸಂಕರ್ಷಣಾಚ್ಯುತೌ ॥ ೧

ಮುನೀನಾಂ ಸ ವಚಃ ಶ್ರುತ್ವಾ ಪುತ್ರಯೋರ್ಧಾಮಸೂಚಕಮ್ ।
ತದ್ವೀರ್ಯೈರ್ಜಾತವಿಶ್ರಂಭಃ ಪರಿಭಾಷ್ಯಾಭ್ಯಭಾಷತ ॥ ೨

ತೀರ್ಥಯಾತ್ರೆಗೆ ಹೋದಾಗ ವಸುದೇವನು ನಡೆಸಿದ ಯಾಗಮಹೋತ್ಸವದ ವೈಭವವನ್ನೂ ಬಂಧುಮಿತ್ರಾದಿಗಳ ದರ್ಶನವಾದುದನ್ನೂ ಜನರಿಗೆ ಹೇಳುತ್ತಿದ್ದರು (೭೦-೭೧).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಂಬತ್ತುನಾಲ್ಕನೆಯ ಅಧ್ಯಾಯ

ಅಧ್ಯಾಯ ೮೫

ವಸುದೇವನಿಂದ ತತ್ತ್ವವಿಮರ್ಶೆ. ಕಂಸನಿಂದ ಹತರಾಗಿದ್ದ ಮಕ್ಕಳನ್ನು ದೇವಕಿಯ ಬಯಕೆಯಂತೆ ಬಲರಾಮಕೃಷ್ಣರು ಸುತಳಲೋಕದಿಂದ ತಂದೊಪ್ಪಿಸುವುದು.

ಶುಕಮಹರ್ಷಿಗಳು ಹೇಳಿದರು : ಪರೀಕ್ಷಿತರಾಜ, ಅಚ್ಯುತಬಲರಾಮರು ಒಂದು ದಿನ ಎಂದಿನಂತೆ ಬಂದು ತಂದೆಯ ಪಾದಕ್ಕೆ ವಂದಿಸಿದರು. ಮಕ್ಕಳ ಪರಾಕ್ರಮಾತಿಶಯಗಳಿಂದಲೂ ನಾರದಾದಿಮುನಿಗಳು ಅವರ ವಿಷಯವಾಗಿ ಹೇಳಿದ ಪ್ರಭಾವಸೂಚಕವಾದ ಮಾತನ್ನು ಕೇಳಿದ್ದರಿಂದಲೂ ವಸುದೇವನಿಗೆ

ಕೃಷ್ಣ ಕೃಷ್ಣ ಮಹಾಯೋಗಿನ್ ಸಂಕರ್ಷಣ ಸನಾತನ ।
ಜಾನೇ ವಾಮಸ್ಯ ಯತ್ ಸಾಕ್ಷಾತ್ ಪ್ರಧಾನಪುರುಷೌ ಪರೌ ॥ ೩

ಯತ್ರ ಯೇನ ಯತೋ ಯಸ್ಯ ಯಸ್ಮೈ ಯದ್ ಯದ್ ಯಥಾ ಯದಾ
ಸ್ಯಾದಿದಂ ಭಗವಾನ್ ಸಾಕ್ಷಾತ್ ಪ್ರಧಾನಪುರುಷೇಶ್ವರಃ ॥ ೪

ಏತನ್ನಾನಾವಿಧಂ ವಿಶ್ವಮಾತ್ಮಸೃಷ್ಟಮಧೋಕ್ಷಜ ।
ಆತ್ಮನಾನುಪ್ರವಿಶ್ಯಾತ್ಮನ್ ಪ್ರಾಣೋ ಜೀವೋ ಬಿಭರ್ಷ್ಯಜಃ ॥ ೫

ಪ್ರಾಣದೀನಾಂ ವಿಶ್ವಸೃಜಾಂ ಶಕ್ತಯೋ ಯಾಃ ಪರಸ್ಯ ತಾಃ ।
ಪಾರತಂತ್ರ್ಯಾದ್ ವೈ ಸಾದೃಶ್ಯಾದ್ ದ್ವಯೋಶ್ಚೇಷ್ಟೈವ ಚೇಷ್ಟತಾಂ ॥ ೬

ಅಚ್ಯುತಬಲರಾಮರು ದೇವತಾಪುರುಷರೆಂದು ನಂಬಿಕೆಯಾಗಿತ್ತು. ಅವನು ಪುತ್ರರನ್ನು ಅಭಿನಂದಿಸಿ ಹೀಗೆಂದನು (೧-೨) : ''ಕೃಷ್ಣ ಕೃಷ್ಣ ನೀನು ಮಹಾಯೋಗಿ. ಬಲಭದ್ರ, ನೀನು ಶಾಶ್ವತನಾದ ಪುರಾಣಪುರುಷ. ನೀವಿಬ್ಬರೂ ಪ್ರಕೃತಿಪುರುಷರೆಂದೂ ಸಾಕ್ಷಾತ್ ಈಶ್ವರರೆಂದೂ ನಾನು ತಿಳಿದಿದ್ದೇನೆ. ಈ ಜಗತ್ತಿನ ಅಧಿಕರಣ (ಆಧಾರ) ಪ್ರಯೋಜಕ ಕರ್ತೃ, ಕರಣ, ಕಾರಣ, ಅಪಾದಾನ, ಸಂಬಂಧಿ, ಉದ್ದೇಶ್ಯ, ಕರ್ಮ, ಪ್ರಯೋಜ್ಯಕರ್ತೃ-ಇವೆಲ್ಲವೂ, ಜಗತ್ತಿನ ಪ್ರಕಾರ, ಕಾಲ-ಮೊದಲಾದವೂ, ಇದರ ಆಗುಹೋಗುಗಳೂ-ಎಲ್ಲವೂ ಪ್ರಧಾನಪುರುಷೇಶ್ವರನಾದ ನೀನೇ ಸರಿ[1] (೩-೪). ಹೇ ಅಧೋಕ್ಷಜ, ಹೇ ಆತ್ಮ, ನಾನಾ ವಿಧವಾದ ಈ ವಿಶ್ವವನ್ನು ಅಜನಾದ ನೀನು ಸೃಜಿಸಿ ನೀನೇ ಇದರಲ್ಲಿ ಅನುಪ್ರವೇಶಮಾಡಿ ಪ್ರಾಣನಾಗಿ, ಜೀವನಾಗಿ ಇದನ್ನು ಧರಿಸಿದ್ದೀಯೆ. ಪ್ರಾಣವೆಂಬ ಸೂತ್ರಾತ್ಮ-ಮೊದಲಾದವು ಜಗತ್ಕಾರಣಗಳೆನಿಸಿದ್ದರೂ ಅವುಗಳ ಶಕ್ತಿಗಳು ನಿನ್ನವೇ ಹೊರತು ಅವುಗಳದ್ದಲ್ಲ (ಬಾಣವು ಗುರಿಯನ್ನು ಭೇದಿಸಿದರೂ ಬಾಣಕ್ಕೆ ಆ ಶಕ್ತಿ ಯೋಧನಿಂದ ಬಂದದ್ದು). ಅಚೇತನಗಳಾದ ಪ್ರಾಣಾದಿಗಳು

---

೧ ಈ ಜಗತ್ತು ಇದರ ಕರ್ತೃ-ಎಲ್ಲವೂ ನೀನೇ ಎಂದು ಅಭಿಪ್ರಾಯ. ಭೋಗ್ಯ ವಸ್ತುವೆಲ್ಲವೂ ಪ್ರಕೃತಿ. ಭೋಕ್ತೃವಾದ ಜೀವನು ಪುರುಷ. ಇವುಗಳಿಗೆ ಈಶ್ವರನು ಪರಬ್ರಹ್ಮ. ಹಿಂದಿನ ಶ್ಲೋಕದಲ್ಲಿ ಪ್ರಕೃತಿ, ಪುರುಷ, ಈಶ್ವರ-ಎಲ್ಲವೂ ನೀನೇ ಎಂದು ಹೇಳಿರುವುದನ್ನು ಗಮನಿಸಬೇಕು. ಶ್ರೀಕೃಷ್ಣ ಬಲರಾಮ-ಇಬ್ಬರೂ ಮೂಲತಃ ಒಬ್ಬನೇ ಎಂದು ಏಕವಚನ ಪ್ರಯೋಗ ಬಂದಿದೆ.

ಕಾಂತಿಸ್ತೇಜಃ ಪ್ರಭಾ ಸತ್ತಾ ಚಂದ್ರಾಗ್ನ್ಯರ್ಕರ್ಕ್ಷವಿದ್ಯುತಾಮ್ ।
ಯತ್ ಸ್ಥೈರ್ಯಂ ಭೂಭೃತಾಂ ಭೂಮೇರ್ವೃತ್ತಿರ್ಗಂಧೋಽರ್ಥತೋ
ಭವಾನ್ ॥೭

ತರ್ಪಣಂ ಪ್ರಾಣನಮಪಾಂ ದೇವ ತ್ವಂ ತಾಶ್ಚ ತದ್ರಸಃ ।
ಓಜಃ ಸಹೋ ಬಲಂ ಚೇಷ್ಟಾ ಗತಿರ್ವಾಯೋಸ್ತವೇಶ್ವರ ॥ ೮

ದಿಶಾಂ ತ್ವಮವಕಾಶೋಽಸಿ ದಿಶಃ ಖಂ ಸ್ಫೋಟ ಆಶ್ರಯಃ ।
ನಾದೋ ವರ್ಣಸ್ತ್ವಮೋಂಕಾರ ಆಕೃತೀನಾಂ ಪೃಥಕ್ಕೃತಿಃ ॥ ೯

ಇಂದ್ರಿಯಂ ತ್ವಿಂದ್ರಿಯಾಣಾಂ ತ್ವಂ ದೇವಾಶ್ಚ ತದನುಗ್ರಹಃ ।
ಅವಬೋಧೋ ಭವಾನ್ ಬುದ್ಧೇರ್ಜೀವಸ್ಯಾನುಸ್ಮೃತಿಃ ಸತೀ ॥ ೧೦

ನಿನಗೆ ಅಧೀನವಾದವು. ಚೇತನನಾದ ನಿನಗೂ ಅಚೇತನಗಳಾದ ಅವುಗಳಿಗೂ ಹೋಲಿಕೆ ಇಲ್ಲ. ಅಲ್ಲದೆ ಒಂದು ಕಾರ್ಯದಲ್ಲಿ ಅನೇಕರಿಗೆ ಸ್ವಾತಂತ್ರ್ಯವಿದ್ದರೆ ಕಾರ್ಯ ನಿರ್ವಾಹವಾಗುವುದಿಲ್ಲ. ಆದ್ದರಿಂದ ಪ್ರಾಣಾದಿಗಳಿಗೆ ಇರತಕ್ಕದ್ದು ಶಕ್ತಿಯಲ್ಲ, ಅದು ಶಕ್ತಿಶಾಲಿಯಾದ ನಿನ್ನಿಂದ ಅವುಗಳಲ್ಲಿ ಹುಟ್ಟುವ ಕೇವಲ ಒಂದು ಕ್ರಿಯೆ (೫-೬). ಚಂದ್ರನ ಕಾಂತಿ, ಅಗ್ನಿಯ ತೇಜಸ್ಸು, ಸೂರ್ಯನ ಪ್ರಭೆ, ನಕ್ಷತ್ರ ಮತ್ತು ಮಿಂಚುಗಳು ಸ್ಫುರಣ, ಪರ್ವತಗಳ ಸ್ಥಿರತ್ವ, ಭೂಮಿಯ ಆಧಾರತೆ ಮತ್ತು ಗಂಧ-ಇವೆಲ್ಲವೂ ನೀನೇ, ನಿನ್ನ ಶಕ್ತಿಯೇ (೭). ಹೇ ದೇವ, ನೀರಿನಲ್ಲಿರುವ ತೃಪ್ತಿಗೊಳಿಸುವ ಮತ್ತು ಪ್ರಾಣ ಉಳಿಸುವ ಶಕ್ತಿ, ನೀರು, ಅದರ ರುಚಿ-ಎಲ್ಲವೂ ನೀನೇ. ವಾಯುವಿನ ಸಾಮರ್ಥ್ಯ, ವೇಗ, ಬಲ, ಕ್ರಿಯೆ, ಚಲನ ಶಕ್ತಿ-ಎಲ್ಲ ನಿನ್ನದೇ (೮). ದಿಕ್ಕುಗಳಲ್ಲಿರುವ ಅವಕಾಶ, ದಿಕ್ಕು, ಸಾಮಾನ್ಯಾಕಾಶ, ಆಕಾಶಕ್ಕೆ ಆಶ್ರಯವಾದ ಸ್ಫೋಟ (ಪರಾವಾಕ್-ಶಬ್ದತನ್ಮಾತ್ರೆ) ನಾದವೆಂಬ ಪಶ್ಯಂತೀ ವಾಕ್, ಓಂಕಾರವೆಂಬ ಮಧ್ಯಮಾ ವಾಕ್, ಅರ್ಥವನ್ನು ಪೃಥಕ್ಕರಿಸಿ ಬೋಧಿಸುವ ವರ್ಣಾತ್ಮಕ ವೈಖರೀವಾಕ್-ಇದೆಲ್ಲವೂ ನೀನೇ (೯). ಇಂದ್ರಿಯಗಳಿಗೆ ನೀನು ಇಂದ್ರಿಯ ಎಂದರೆ ವಿಷಯ ಪ್ರಕಾಶನ ಶಕ್ತಿ. ಇಂದ್ರಿಯಗಳ ಅಭಿಮಾನಿ ದೇವತೆಗಳೂ ಅವರ ಅಧಿಷ್ಠಾನ ಶಕ್ತಿಯೂ ನೀನೇ. ಬುದ್ಧಿಯ ನಿಶ್ಚಯಶಕ್ತಿಯೂ

ಭೂತಾನಾಮಪಿ ಭೂತಾದಿರಿಂದ್ರಿಯಾಣಾಂ ಚ ತೈಜಸಃ ।
ವೈಕಾರಿಕೋ ವಿಕಲ್ಪಾನಾಂ ಪ್ರಧಾನಮನುಶಾಯಿನಾಮ್ ॥ ೧೧

ನಶ್ವರೇಷ್ವಿಹ ಭಾವೇಷು ತದಸಿ ತ್ವಮನಶ್ವರಮ್ ।
ಯಥಾ ದ್ರವ್ಯವಿಕಾರೇಷು ದ್ರವ್ಯಮಾತ್ರಂ ನಿರೂಪಿತಮ್ ॥ ೧೨

ಸತ್ತ್ವಂ ರಜಸ್ತಮ ಇತಿ ಗುಣಾಸ್ತದ್ವೃತ್ತಯಶ್ಚ ಯಾಃ ।
ತ್ವಯ್ಯದ್ಧಾ ಬ್ರಹ್ಮಣಿ ಪರೇ ಕಲ್ಪಿತಾ ಯೋಗಮಾಯಯಾ ॥ ೧೩

ತಸ್ಮಾನ್ನ ಸಂತ್ಯಮೀ ಭಾವಾ ಯರ್ಹಿ ತ್ವಯಿ ವಿಕಲ್ಪಿತಾಃ ।
ತ್ವಂ ಚಾಮೀಷು ವಿಕಾರೇಷು ಹ್ಯನ್ಯದಾಽವ್ಯಾವಹಾರಿಕಃ ॥ ೧೪

ಗುಣಪ್ರವಾಹ ಏತಸ್ಮಿನ್ನಬುಧಾಸ್ತ್ವಖಿಲಾತ್ಮನಃ ।
ಗತಿಂ ಸೂಕ್ಷ್ಮಾಮಬೋಧೇನ ಸಂಸರಂತೀಹ ಕರ್ಮಭಿಃ ॥ ೧೫

ಜೀವನಿಗಿರುವ ಸ್ಮರಣಶಕ್ತಿಯೂ ನೀನೇ (೧೦). ಪೃಥಿವ್ಯಾದಿ ಭೂತಗಳಿಗೆ ಕಾರಣವಾದ ತಾಮಸಾಹಂಕಾರವೂ, ಶ್ರೋತ್ರಾದಿ ಇಂದ್ರಿಯಗಳಿಗೆ ಕಾರಣವಾದ ರಾಜಸಾಹಂಕಾರವೂ (ಅಧಿದೈವ ಅಧ್ಯಾತ್ಮ ಅಧಿಭೂತ-ಎಂಬ) ಭೇದದಿಂದ ಕಲ್ಪಿತಗಳಾದ ದೇವತೆಗಳಿಗೆ ಕಾರಣವಾದ ಸಾತ್ತ್ವಿಕಾಹಂಕಾರವೂ (ಅವಿದ್ಯೆಯಲ್ಲಿ ಅಡಗಿರುವ) ಜೀವರಿಗೆ ಸಂಸಾರಕಾರಣವಾದ ಪ್ರಕೃತಿಯೂ ನೀನೇ (೧೧). ಮಣ್ಣಿನ ವಿಕಾರವಾದ ಗಡಿಗೆ, ಚಿನ್ನದ ವಿಕಾರವಾದ ಬಳೆ-ಮುಂತಾದ ದ್ರವ್ಯವಿಕಾರಗಳಲ್ಲಿ ಮಣ್ಣು ಚಿನ್ನ ಮುಂತಾದ ಮೂಲದ್ರವ್ಯವು ಮಾತ್ರ ನಾಶವಾಗದೆ ಹೇಗೆ ಸ್ಥಿರವೆನಿಸುವುದೋ ಹಾಗೆಯೇ ನಶ್ವರವಾದ ಈ ಜಗತ್ತಿನ ಸಕಲವಸ್ತುಗಳಲ್ಲಿಯೂ ಸ್ಥಿರವಾಗಿ ಉಳಿಯತಕ್ಕ ಶಾಶ್ವತವಸ್ತು ನೀನೇ ಆಗಿದ್ದೀಯೆ (೧೨). ಏಕೆಂದರೆ, ಸತ್ತ್ವರಜಸ್ತಮೋಗುಣಗಳೂ ಅವುಗಳ ಪರಿಣಾಮವಾದ ಮಹದಾದಿಗಳೂ ಪರಬ್ರಹ್ಮವಾದ ನಿನ್ನಲ್ಲಿ ಸಾಕ್ಷಾತ್ತಾಗಿ ಯೋಗಮಾಯೆಯಿಂದ ಕಲ್ಪಿತವಾಗಿವೆ (೧೩). ಆದ್ದರಿಂದ ಘಟಪಟಾದಿ ಪದಾರ್ಥಗಳು ವಸ್ತುತಃ ಇಲ್ಲ. ಇವು ನಿನ್ನಲ್ಲಿ ಅಧ್ಯಾಸದಿಂದ ಕಲ್ಪಿತವಾದವು. ನೀನು ಈ ಪದಾರ್ಥವಿಕಾರಗಳಲ್ಲಿ ಕಲ್ಪನೆಗೆ ಆಶ್ರಯನಾಗಿ ಇದ್ದೀಯೆ. ಈ ಕಲ್ಪನೆ ಇಲ್ಲದಿದ್ದಾಗ ನೀನು ವ್ಯವಹಾರಕ್ಕೆ ವಿಷಯನೇ ಆಗುವುದಿಲ್ಲ (೧೪). (ಮಾಯಾಶಕ್ತಿಯ) ಈ ಗುಣ ಪ್ರವಾಹದಲ್ಲಿ

ಯದೃಚ್ಛಯಾ ನೃತಾಂ ಪ್ರಾಪ್ಯ ಸುಕಲ್ಪಾಮಿಹ ದುರ್ಲಭಾಮ್ ।
ಸ್ವಾರ್ಥೇ ಪ್ರಮತ್ತಸ್ಯ ವಯೋ ಗತಂ ತ್ವನ್ಮಾಯಯೇಶ್ವರ ॥ ೧೬

ಅಸಾವಹಂ ಮಮೈವೈತೇ ದೇಹೇ ಚಾಸ್ಯಾನ್ವಯಾದಿಷು ।
ಸ್ನೇಹಪಾಶೈರ್ನಿಬಧ್ನಾತಿ ಭವಾನ್ ಸರ್ವಮಿದಂ ಜಗತ್ ॥ ೧೭

ಯುವಾಂ ನ ನಃ ಸುತೌ ಸಾಕ್ಷಾತ್ ಪ್ರಧಾನಪುರುಷೇಶ್ವರೌ ।
ಭೂಭಾರಕ್ಷತ್ರಕ್ಷಪಣ ಅವತೀರ್ಣೌ ತಥಾಽಽತ್ಥ ಹ ॥ ೧೮

ತತ್ತೇ ಗತೋಽಸ್ಮ್ಯರಣಮದ್ಯ ಪದಾರವಿಂದ-
ಮಾಪನ್ನಸಂಸೃತಿಭಯಾಪಹಮಾರ್ತಬಂಧೋ ।
ಏತಾವತಾಲಮಲಮಿಂದ್ರಿಯಲಾಲಸೇನ
ಮರ್ತ್ಯಾತ್ಮದೃಕ್ ತ್ವಯಿ ಪರೇ ಯದಪತ್ಯಬುದ್ಧಿಃ ॥ ೧೯

ಸಿಕ್ಕಿರುವ ಜನರು ಅಖಿಲಾತ್ಮನಾದ ನಿನ್ನ ನಿಷ್ಪ್ರಪಂಚವಾದ ಸ್ಥಿತಿಯನ್ನರಿಯದೆ ಅಜ್ಞಾನದಿಂದ ಕರ್ಮಬಂಧಗಳಿಗೆ ಒಳಗಾದ ಸಂಸಾರದಲ್ಲಿ ತೊಳಲುತ್ತಾರೆ (೧೫). ಇಂದ್ರಿಯಾದಿಗಳಿಂದ ಕ್ರಿಯಾಸಮರ್ಥವಾಗಿರುವ ಮನುಷ್ಯಜನ್ಮವು ಲೋಕದಲ್ಲಿ ದುರ್ಲಭ. ಅಕಸ್ಮಾತ್ತಾಗಿ ಈ ಜನ್ಮ ನನಗೆ ಬಂದಿದ್ದರೂ, ಹೇ ಪರಮೇಶ್ವರ, ನಿನ್ನ ಮಾಯೆಯಿಂದ ಸ್ವಾರ್ಥಕ್ಕೆ ಒಳಗಾಗಿ ಪ್ರಮತ್ತನಾಗಿದ್ದ ನನ್ನ ಆಯುಸ್ಸು ವ್ಯರ್ಥವಾಯಿತು (೧೬). ದೇಹದ ವಿಷಯದಲ್ಲಿ 'ಈ ದೇಹ ನಾನು, ಇಂಥವನು' ಎಂಬುದಾಗಿಯೂ ದೇಹಕ್ಕೆ ಸಂಬಂಧಿಸಿದ ಪತ್ನೀಪುತ್ರಾದಿಗಳ ವಿಷಯದಲ್ಲಿ 'ಇವರು ನನ್ನವರು' ಎಂಬುದಾಗಿಯೂ ಬುದ್ಧಿಯನ್ನು ಕೊಟ್ಟು, ಸ್ನೇಹಪಾಶಗಳಿಂದ ಈ ಸಕಲ ಜಗತ್ತನ್ನೂ ನೀನು ಕಟ್ಟಿಹಾಕಿದ್ದೀಯೆ ! (೧೭). ನೀವಿಬ್ಬರೂ ನಮ್ಮ ಮಕ್ಕಳಲ್ಲ ! ಪ್ರಕೃತಿಪುರುಷರಿಗೆ ಸಾಕ್ಷಾತ್ ಈಶ್ವರರು ನೀವು. ಭೂಮಿಗೆ ಭಾರವಾಗಿರುವ ಕ್ಷತ್ರಿಯರನ್ನು ನಾಶಮಾಡುವುದಕ್ಕಾಗಿ ಅವತರಿಸಿದ್ದೀರಿ. ಹಾಗೆಂದು ನೀನು ಹೇಳಿದ್ದೀಯಲ್ಲವೆ ? (೧೮). ಆದ್ದರಿಂದ, ಹೇ ದೀನಬಂಧೋ, ಶರಣಾಗತರ ಸಂಸಾರಭಯವನ್ನು ನೀಗುವ ನಿನ್ನ ಚರಣಾರವಿಂದಕ್ಕೆ ಶರಣಾಗಿದ್ದೇನೆ. ಇಂದ್ರಿಯ ಲಾಲಸೆ ಇಷ್ಟು ಸಾಕು, ಸಾಕು. ನಶ್ವರವಾದ ದೇಹವು ಆತ್ಮವೆಂದು ತಿಳಿದಿದ್ದೆನು ! ಪರಮಾತ್ಮನಾದ ನೀನು ಮಗನೆಂದು ನಂಬಿದ್ದೆನು !

ಸೂತೀಗೃಹೇ ನನು ಜಗಾದ ಭವಾನಜೋ ನೌ
ಸಂಜಜ್ಞ ಇತ್ಯನುಯುಗಂ ನಿಜಧರ್ಮಗುಪ್ತ್ಯೈ ।
ನಾನಾತನೂರ್ಗಗನವದ್ ವಿದಧಜ್ಜಹಾಸಿ
ಕೋವೇದಭೂಮ್ನ ಉರುಗಾಯ ವಿಭೂತಿಮಾಯಾಂ ॥ ೨೦

ಶ್ರೀಶುಕ ಉವಾಚ-

ಆಕರ್ಣ್ಯೇತ್ಥಂ ಪಿತುರ್ವಾಕ್ಯಂ ಭಗವಾನ್ ಸಾತ್ವತರ್ಷಭಃ ।
ಪ್ರತ್ಯಾಹ ಪ್ರಶ್ರಯಾನಮ್ರಃ ಪ್ರಹಸನ್ ಶ್ಲಕ್ಷ್ಣಯಾ ಗಿರಾ ॥ ೨೧

ಶ್ರೀಭಗವಾನುವಾಚ-

ವಚೋ ವಃ ಸಮವೇತಾರ್ಥಂ ತಾತೈತದುಪಮನ್ಮಹೇ ।
ಯನ್ನಃ ಪುತ್ರಾನ್ ಸಮುದ್ದಿಶ್ಯ ತತ್ತ್ವಗ್ರಾಮ ಉದಾಹೃತಃ ॥ ೨೨

ಅಹಂ ಯೂಯಮಸಾವಾರ್ಯ ಇಮೇ ಚ ದ್ವಾರಕೌಕಸಃ ।
ಸರ್ವೇಽಪ್ಯೇವಂ ಯದುಶ್ರೇಷ್ಠ ವಿಮೃಶ್ಯಾಃ ಸಚರಾಚರಮ್ ॥ ೨೩

---

(೧೯). ಆಗ ಹೆರಿಗೆ ಮನೆಯಲ್ಲಿಯೇ ನಮ್ಮಿಬ್ಬರನ್ನು ಕುರಿತು ನಿನ್ನ ವೈದಿಕಧರ್ಮರಕ್ಷಣೆಗಾಗಿ ಅಜನಾದರೂ ನೀನು "ದಂಪತಿಗಳಾದ ನಿಮ್ಮಲ್ಲಿ ಅವತರಿಸುತ್ತ ಬಂದಿದ್ದೇನೆ " ಎಂದು ಹೇಳಿದ್ದೀಯೆ. ಆಕಾಶದಂತೆ ಅಸಂಗನಾದರೂ ನೀನು ನಾನಾದೇಹಗಳನ್ನು ಧರಿಸುತ್ತೀಯೆ, ತ್ಯಜಿಸುತ್ತೀಯೆ. "ಓ ಕೀರ್ತಿಶಾಲಿ, ಸರ್ವಗತನಾದ ನಿನ್ನ ವಿಭೂತಿಯೆಂಬ ಮಾಯೆಯನ್ನು ಯಾವನು ಬಲ್ಲನು?" ಎಂದು ಹೇಳಿದನು (೨೦). ತಂದೆಯಾಡಿದ ಈ ಮಾತನ್ನು ಕೇಳಿ ಭಗವಾನ್ ಶ್ರೀಕೃಷ್ಣನು ವಿನಯದಿಂದ ವಂದಿಸಿ ಮುಗುಳ್ನಗೆ ಬೀರುತ್ತ ಮೆಲ್ನುಡಿಯಿಂದ ಇಂತೆಂದನು : "ಓ ತಂದೆ, ಮಕ್ಕಳಾದ ನಮಗೆ ಪರತತ್ತ್ವವನ್ನು ವಿಮರ್ಶೆಮಾಡಿ ಚೆನ್ನಾಗಿ ಹೇಳಿದ್ದೀಯೆ. ಅರ್ಥಪುಷ್ಟವಾದ ಈ ಸೂಕ್ತಿಯು ಒಪ್ಪತಕ್ಕದ್ದೇ" (೨೧-೨೨). ನಾನು ನೀವು, ಈ ನನ್ನ ಅಣ್ಣ, ದ್ವಾರಕಾವಾಸಿಗಳಾದ ಸಕಲರೂ, ಅಷ್ಟೇಕೆ, ಚರಾಚರಾತ್ಮಕವಾದ ಈ ವಿಶ್ವವೆಲ್ಲವೂ ನೀನು ಹೇಳಿದಂತೆ ಬ್ರಹ್ಮಸ್ವರೂಪವೆಂದು ತಿಳಿಯಬೇಕು (೨೩). ಏಕೆಂದರೆ, ಅದ್ವಿತೀಯನೂ

ಆತ್ಮಾಹ್ಯೇಕಃಸ್ವಯಂಜ್ಯೋತಿರ್ನಿತ್ಯೋಽನ್ಯೋನಿರ್ಗುಣೋ ಗುಣೈಃ
ಆತ್ಮಸೃಷ್ಟೈಸ್ತತ್ಕೃತೇಷು ಭೂತೇಷು ಬಹುಧೇಯತೇ ॥ ೨೪
ಖಂ ವಾಯುರ್ಜ್ಯೋತಿರಾಪೋ ಭೂಸ್ತತ್ಕೃತೇಷು ಯಥಾಶಯಮ್ ।
ಆವಿಸ್ತಿರೋಽಲ್ಪಭೂರ್ಯೇಕೋ ನಾನಾತ್ವಂ ಯಾತ್ಯಸಾವಪಿ ॥ ೨೫

ಶ್ರೀಶುಕಉವಾಚ-

ಏವಂ ಭಗವತಾ ರಾಜನ್ ವಸುದೇವ ಉದಾಹೃತಮ್ ।
ಶ್ರುತ್ವಾವಿನಷ್ಟನಾನಾಧೀಸ್ತೂಷ್ಣೀಂ ಪ್ರೀತಮನಾ ಅಭೂತ್ ॥ ೨೬
ಅಥ ತತ್ರ ಕುರುಶ್ರೇಷ್ಠ ದೇವಕೀ ಸರ್ವದೇವತಾ ।
ಶ್ರುತ್ವಾಽಽನೀತಂ ಗುರೋಃ ಪುತ್ರಮಾತ್ಮಜಾಭ್ಯಾಂ ಸುವಿಸ್ಮಿತಾ ॥ ೨೭

ಸ್ವಯಂಜ್ಯೋತಿಯೂ ಆದ ಆತ್ಮನೊಬ್ಬನೇ ಇರತಕ್ಕವನು. ಆತನು ಸೃಜಿಸಿದ ಸತ್ವಾದಿಗುಣಗಳಿಂದ ನಿರ್ಮಿತವಾದ ಪಂಚಭೂತಾದಿ ವಿಕಾರಗಳಲ್ಲಿ ಆತ್ಮನೇ ನಾನಾ ಪ್ರಕಾರವಾಗಿ ತೋರುತ್ತಾನೆ. ಏಕನಾದರೂ ಅನೇಕನಾಗಿ ಸ್ವಯಂಜ್ಯೋತಿಯಾದರೂ ದೃಶ್ಯನಾಗಿ ನಿತ್ಯನಾದರೂ ಅನಿತ್ಯನಾಗಿ ನಿರ್ಗುಣನಾದರೂ ಸುಗುಣನಾಗಿ ಗೋಚರಿಸುತ್ತಾನೆ (೨೪). ಹೇಗೆಂದರೆ : ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ-ಇವು ತಮ್ಮಿಂದ ನಿರ್ಮಿತವಾದ ಘಟಪಟಾದಿಗಳಲ್ಲಿ ಆಯಾ ಉಪಾಧಿಯನ್ನನುಸರಿಸಿ ನಾನಾ ಪ್ರಕಾರವಾಗಿ ತೋರುತ್ತವೆ. ಇವು ಘಟಾದಿರೂಪದಿಂದ ಹುಟ್ಟಿದಂತೆ, ನಾಶವಾದಂತೆ, ಚಿಕ್ಕದಾಗಿರುವಂತೆ, ದೊಡ್ಡದಾಗಿರುವಂತೆ, ಅನೇಕವಾಗಿರುವಂತೆ ಗೋಚರಿಸುತ್ತವಲ್ಲವೆ? ಹಾಗೆಯೇ ಆತ್ಮನೂ ಗೋಚರಿಸುತ್ತಾನೆ'' ಎಂದನು (೨೫). ಹೀಗೆ ಭಗವಂತನಾಡಿದ ನುಡಿಯನ್ನು ಕೇಳಿ ವಸುದೇವನಿಗೆ ನಾನಾತ್ವದ ಭೇದಬುದ್ಧಿ ಅಳಿಯಿತು. ಅವನು ಸಂತೃಪ್ತನಾಗಿ ಸುಮ್ಮನಾದನು. ಪರೀಕ್ಷಿತರಾಜ, (ಹಿಂದೆ ಬಲರಾಮಕೃಷ್ಣರು ಸಾಂದೀಪನಿಯೆಂಬ ಗುರುವಿನ ಮೃತಪುತ್ರನನ್ನು ಯಮಲೋಕದಿಂದ ತಂದುಕೊಟ್ಟಿದ್ದರಷ್ಟೆ). ಈಗ ಬಳಿಯಲ್ಲಿ ಕುಳಿತಿದ್ದ ಸರ್ವದೇವತಾತ್ಮಕಳಾದ ದೇವಕಿಯು ಈ ಸಂಭಾಷಣೆಯನ್ನು ಕೇಳಿ ವಿಸ್ಮಿತಳಾದಳು. ತನ್ನ ಮಕ್ಕಳು ಗುರುಪುತ್ರನನ್ನು ತಂದುಕೊಟ್ಟದ್ದು ನೆನಪಾಯಿತು. ಹಾಗೆಯೇ ಹಿಂದೆ

ಕೃಷ್ಣರಾಮೌ ಸಮಾಶ್ರಾವ್ಯ ಪುತ್ರಾನ್ ಕಂಸವಿಹಂಸಿತಾನ್ ।
ಸ್ಮರಂತೀ ಕೃಪಣಂ ಪ್ರಾಹ ವೈಕ್ಲವ್ಯಾದಶ್ರುಲೋಚನಾ ॥ ೨೮

ದೇವಕ್ಯುವಾಚ-

ರಾಮ ರಾಮಾಪ್ರಮೇಯಾತ್ಮನ್ ಕೃಷ್ಣ ಯೋಗೇಶ್ವರೇಶ್ವರ ।
ವೇದಾಹಂ ವಾಂ ವಿಶ್ವಸೃಜಾಮೀಶ್ವರಾವಾದಿಪೂರುಷೌ ॥ ೨೯

ಕಾಲವಿಧ್ವಸ್ತಸತ್ತ್ವಾನಾಂ ರಾಜ್ಞಾ ಮುಚ್ಛಾಸ್ತ್ರವರ್ತಿನಾಮ್ ।
ಭೂಮೇರ್ಭಾರಾಯಮಾಣಾನಾಮವತೀರ್ಣೌ ಕಿಲಾದ್ಯ ಮೇ ॥ ೩೦

ಯಸ್ಯಾಂಶಾಂಶಾಂಶಭಾಗೇನ ವಿಶ್ವೋತ್ಪತ್ತಿ ಲಯೋದಯಾಃ ।
ಭವಂತಿ ಕಿಲ ವಿಶ್ವಾತ್ಮಂಸ್ತಂ ತ್ವಾದ್ಯಾಹಂ ಗತಿಂ ಗತಾ ॥ ೩೧

ಚಿರಾನ್ಮೃತಸುತಾದಾನೇ ಗುರುಣಾ ಕಾಲಚೋದಿತೌ ।
ಆನಿನ್ಯಥುಃ ಪಿತೃಸ್ಥಾನಾದ್ ಗುರವೇ ಗುರುದಕ್ಷಿಣಾಮ್ ॥ ೩೨

ಕಂಸನಿಂದ ಹತರಾದ ತನ್ನ ಮಕ್ಕಳ ಸ್ಮರಣೆ ಬಂದಿತು. ಮರುಕದಿಂದ ಅವಳ ಕಣ್ಣಲ್ಲಿ ನೀರು ತುಂಬಿತು. ಅವಳು ಬಲರಾಮ ಶ್ರೀಕೃಷ್ಣರನ್ನು ಕುರಿತು ಹೇಳಿದಳು : (೨೬-೨೮). "ರಾಮ, ಅಪ್ರಮೇಯಾತ್ಮರಾಮ, ಯೋಗೇಶ್ವರೇಶ್ವರ ಕೃಷ್ಣ ಸೃಷ್ಟಿಕರ್ತರಾದ ಪ್ರಕೃತಿಪುರುಷರಿಗೂ ನೀವು ಈಶ್ವರರಾದ ಪುರಾಣ ಪುರುಷರೆಂದು ನಾನು ತಿಳಿದಿದ್ದೇನೆ. ಕಾಲಮಹಿಮೆಯಿಂದ ಸತ್ತ್ವಗುಣವು ನಷ್ಟವಾಗಿ ಭೂಮಿಗೆ ಭಾರವಾಗಿರುವ ಉನ್ಮಾರ್ಗಗಾಮಿಗಳಾದ ರಾಜರನ್ನು ದಂಡಿಸುವುದ ಕೋಸ್ಕರ ನೀವೀಗ ನನ್ನ ಪುತ್ರರಾಗಿ ಅವತರಿಸಿದ್ದೀರಿ (೨೯-೩೦). ಹೇ ವಿಶ್ವಾತ್ಮ, ಯಾವಾತನ ಅಂಶಾಂಶದ ಅಂಶ ಭಾಗದಿಂದ[೧] ಜಗತ್ತಿನ ಸೃಷ್ಟಿ ಸ್ಥಿತಿಲಯಗಳು ಸಂಭವಿಸುತ್ತವೆಯೋ ಅಂತಹ ನಿನ್ನನ್ನೀಗ ಮರೆಹೊಕ್ಕಿದ್ದೇನೆ (೩೧). ಬಹಳ ಹಿಂದೆ ಮೃತನಾಗಿದ್ದ ಮಗನನ್ನು ತಂದುಕೊಡಬೇಕೆಂದು ನಿಮ್ಮ ಗುರು ಪ್ರೇರಿಸಿದಾಗ, ಪಿತೃಲೋಕದಿಂದ ಆ ಬಾಲಕನನ್ನು ತಂದು ನಿಮ್ಮ ಗುರುವಿಗೆ ಗುರು ದಕ್ಷಿಣೆಯನ್ನು ಒಪ್ಪಿಸಿದ್ದೀರಲ್ಲವೆ ? ಯೋಗೇಶ್ವರೇಶ್ವರರಾದ ನೀವು ಹಾಗೆಯೇ ನನ್ನ

೧ ಪರಬ್ರಹ್ಮದ ಅಂಶ ಈಶ್ವರ, ಅವನ ಅಂಶ ಮಾಯೆ, ಅದರ ಅಂಶ ಗುಣತ್ರಯ, ಅದರ ಭಾಗ ಪರಮಾಣು.

ತಥಾ ಮೇ ಕುರುತಂ ಕಾಮಂ ಯುವಾಂ ಯೋಗೇಶ್ವರೇಶ್ವರೌ ।
ಭೋಜರಾಜಹತಾನ್ ಪುತ್ರಾನ್ ಕಾಮಯೇ ದ್ರಷ್ಟುಮಾಹೃತಾನ್ ॥ ೩೩

ಋಷಿರುವಾಚ-
ಏವಂ ಸಂಚೋದಿತೌ ಮಾತ್ರಾ ರಾಮಃ ಕೃಷ್ಣಶ್ಚ ಭಾರತ ।
ಸುತಲಂ ಸಂವಿವಿಶತುರ್ಯೋಗಮಾಯಾಮುಪಾಶ್ರಿತೌ ॥ ೩೪

ತಸ್ಮಿನ್ ಪ್ರವಿಷ್ಟಾವುಪಲಭ್ಯ ದೈತ್ಯರಾಟ್
ವಿಶ್ವಾತ್ಮದೈವಂ ಸುತರಾಂ ತಥಾಽಽತ್ಮನಃ ।
ತದ್ದರ್ಶನಾಹ್ಲಾದಪರಿಪ್ಲುತಾಶಯಃ
ಸದ್ಯಃ ಸಮುತ್ಥಾಯ ನನಾಮ ಸಾನ್ವಯಃ ॥ ೩೫

ತಯೋಃ ಸಮಾನೀಯ ವರಾಸನಂ ಮುದಾ
ನಿವಿಷ್ಟಯೋಸ್ತತ್ರ ಮಹಾತ್ಮನೋಸ್ತಯೋಃ ।
ದಧಾರ ಪಾದಾವವನಿಜ್ಯ ತಜ್ಜಲಂ
ಸವೃಂದ ಆಬ್ರಹ್ಮ ಪುನದ್ ಯದಂಬು ಹ ॥ ೩೬

ಬಯಕೆಯನ್ನು ನಡೆಸಿರಿ. ಕಂಸನು ಕೊಂದುಹಾಕಿದ ನನ್ನ ಮಕ್ಕಳನ್ನು ತನ್ನಿರಿ. ಅವರನ್ನು ನೋಡಬೇಕೆಂದು ನನಗೆ ಬಯಕೆಯಾಗಿದೆ'' ಎಂದಳು (೩೨-೩೩). ಹೀಗೆ ತಾಯಿ ಆದೇಶವನ್ನೀಯಲು ಬಲರಾಮಕೃಷ್ಣರು, ಪರೀಕ್ಷಿತರಾಜ, ಯೋಗಮಯಾ ಬಲದಿಂದ ಸುತಳವನ್ನು ಪ್ರವೇಶಿಸಿದರು. ಅವರಿಬ್ಬರೂ ಸುತಳಲೋಕಕ್ಕೆ ಬಂದರೆಂದು ದೈತ್ಯರಾಜನಾದ ಬಲಿಚಕ್ರವರ್ತಿಗೆ ತಿಳಿಯಿತು. ವಿಶ್ವಕ್ಕೆ ಆತ್ಮನಾದ, ವಿಶೇಷವಾಗಿ ತನ್ನ ಇಷ್ಟದೇವತೆಯಾದ ಸ್ವಾಮಿಯ ಆಗಮನವನ್ನು ತಿಳಿದೊಡನೆ, ಆತನ ದರ್ಶನವಾಯಿತೆಂಬ ಆನಂದದಿಂದ ತುಳುಕುತ್ತ ಬಲರಾಜನು ಥಟ್ಟನೆ ಮೇಲೆದ್ದು ತನ್ನ ಪತ್ನೀಪರಿವಾರಸಹಿತನಾಗಿ ಅವರಿಗೆ ಪ್ರಣಾಮಮಾಡಿದನು (೩೪-೩೫). ಅಚ್ಯುತಬಲರಾಮರನ್ನು ಸಂತೋಷದಿಂದ ಸ್ವಾಗತಿಸಿ ಕರೆತಂದು ದಿವ್ಯಪೀಠಗಳನ್ನಿತ್ತು ಕುಳ್ಳಿರಿಸಿ ಅವರ ಪಾದಗಳನ್ನು ತೊಳೆದು, ಬ್ರಹ್ಮಪರ್ಯಂತವಾಗಿ ಪಾವನಗೊಳಿಸುವ ಆ ಪಾದೋದಕವನ್ನು ಬಲಿಚಕ್ರವರ್ತಿಯು ತನ್ನ ಪರಿವಾರದೊಂದಿಗೆ ಶಿರಸ್ಸಿನಲ್ಲಿ ಧರಿಸಿದನು (೩೬).

ಸಮರ್ಹಯಾಮಾಸ ಸ ತೌ ವಿಭೂತಿಭಿ-
ರ್ಮಹಾರ್ಹವಸ್ತ್ರಾಭರಣಾನುಲೇಪನೈಃ।
ತಾಂಬೂಲದೀಪಾಮೃತಭಕ್ಷಣಾದಿಭಿಃ
ಸ್ವಗೋತ್ರವಿತ್ತಾತ್ಮಸಮರ್ಪಣೇನ ಚ॥ ೩೭

ಸ ಇಂದ್ರಸೇನೋ ಭಗವತ್ಪದಾಂಬುಜಂ
ಬಿಭ್ರನ್ಮುಹುಃ ಪ್ರೇಮವಿಭಿನ್ನಯಾ ಧಿಯಾ।
ಉವಾಚ ಹಾನಂದಜಲಾಕುಲೇಕ್ಷಣಃ
ಪ್ರಹೃಷ್ಟರೋಮಾ ನೃಪ ಗದ್ಗದಾಕ್ಷರಮ್॥ ೩೮

ಬಲಿರುವಾಚ-

ನಮೋಽನಂತಾಯ ಬೃಹತೇ ನಮಃ ಕೃಷ್ಣಾಯ ವೇಧಸೇ।
ಸಾಂಖ್ಯಯೋಗವಿತಾನಾಯ ಬ್ರಹ್ಮಣೇ ಪರಮಾತ್ಮನೇ॥ ೩೯

ದರ್ಶನಂ ವಾಂ ಹಿ ಭೂತಾನಾಂ ದುಷ್ಪ್ರಾಪಂ ಚಾಪ್ಯದುರ್ಲಭಮ್।
ರಜಸ್ತಮಃಸ್ವಭಾವಾನಾಂ ಯನ್ನಃ ಪ್ರಾಪ್ತೌ ಯದೃಚ್ಛಯಾ॥ ೪೦

ಅನಂತರ ಮಹಾವೈಭವದಿಂದ ಅವರನ್ನು ಶ್ರೇಷ್ಠವಾದ ವಸ್ತ್ರಾಭರಣ ಚಂದನಗಳಿಂದಲೂ ದೀಪನೈವೇದ್ಯತಾಂಬೂಲಾದಿಗಳಿಂದಲೂ ಪೂಜಿಸಿದನು. ಅಲ್ಲದೆ ತನ್ನ ಕುಲ, ವಿತ್ತ ಪ್ರಾಣಗಳನ್ನು ಭಗವಧೀನವೆಂದು ನಿವೇದಿಸಿದನು (೩೭). ಬಳಿಕ ಇಂದ್ರಸೇನನು (ಬಲಿಚಕ್ರವರ್ತಿ) ಪ್ರೇಮಾಕುಲವಾದ ಚಿತ್ತದಿಂದ ಭಗವಂತನ ಅಡಿದಾವರೆಯನ್ನು ತನ್ನ ಶಿರಸ್ಸಿಗೆ ಮತ್ತೆ ಮತ್ತೆ ಒತ್ತಿಕೊಳ್ಳುತ್ತ ಆನಂದ ಬಾಷ್ಪಗಳನ್ನು ತುಳುಕಿಸುತ್ತ ರೋಮಾಂಚಗೊಂಡು ಭಕ್ತಿಯಿಂದ ತೊದಲುತ್ತ ಹೀಗೆಂದನು (೩೮) : ''ಭೂಮನಾದ ಆದಿಶೇಷನಿಗೆ ನಮಸ್ಕಾರ ! ಜಗತ್ಕಾರಣನಾದ ಕೃಷ್ಣನಿಗೆ ನಮಸ್ಕಾರ! ಸಾಂಖ್ಯಯೋಗ ಪ್ರತಿಪಾದ್ಯನೂ ವಿಭುವೂ ಆದ ಪರಮಾತ್ಮನಿಗೆ ನಮಸ್ಕಾರ! (೩೯). ನಿಮ್ಮ ದರ್ಶನವು ರಜಸ್ತಮಃಸ್ವಭಾವದ ಜನರಿಗೆ ದುರ್ಲಭವಾದರೂ ಕೆಲವರಿಗೆ ಅಷ್ಟು ದುರ್ಲಭವಲ್ಲ! ನೀವಾಗಿ ನಮ್ಮ ಬಳಿಗೆ ಬಂದಿರಲ್ಲವೆ ? ದೈತ್ಯ-ದಾನವ-ಗಂಧರ್ವರೂ ಸಿದ್ಧ-ವಿದ್ಯಾಧರ-ಚಾರಣರೂ ಯಕ್ಷ-ರಕ್ಷಃ-ಪಿಶಾಚಗಳೂ ಭೂತ-ಪ್ರಮಥ ನಾಯಕರೂ

ದೈತ್ಯದಾನವಗಂಧರ್ವಾಃ ಸಿದ್ಧವಿದ್ಯಾಧ್ರಚಾರಣಾಃ।
ಯಕ್ಷರಕ್ಷಃಪಿಶಾಚಾಶ್ಚ ಭೂತಪ್ರಮಥನಾಯಕಾಃ॥ ೪೧

ವಿಶುದ್ಧಸತ್ತ್ವಧಾಮ್ನ್ಯದ್ಧಾ ತ್ವಯಿ ಶಾಸ್ತ್ರಶರೀರಿಣಿ।
ನಿತ್ಯಂ ನಿಬದ್ಧವೈರಾಸ್ತೇ ವಯಂ ಚಾನ್ಯೇ ಚ ತಾದೃಶಾಃ॥ ೪೨

ಕೇಚನೋದ್ಬದ್ಧವೈರೇಣ ಭಕ್ತ್ಯಾ ಕೇಚನ ಕಾಮತಃ।
ನ ತಥಾ ಸತ್ತ್ವಸಂರಬ್ಧಾಃ ಸಂನಿಕೃಷ್ಟಾಃ ಸುರಾದಯಃ॥ ೪೩

ಇದಮಿತ್ಥಮಿತಿ ಪ್ರಾಯಸ್ತವ ಯೋಗೇಶ್ವರೇಶ್ವರ।
ನ ವಿದಂತ್ಯಪಿ ಯೋಗೇಶ ಯೋಗಮಾಯಾಂ ಕುತೋ ವಯಮ್॥ ೪೪

ತನ್ನಃ ಪ್ರಸೀದ ನಿರಪೇಕ್ಷವಿಮೃಗ್ಯಯುಷ್ಮತ್ -
ಪಾದಾರವಿಂದಧಿಷಣಾನ್ಯಗೃಹಾಂಧಕೂಪಾತ್।
ನಿಷ್ಕ್ರಮ್ಯ ವಿಶ್ವಶರಣಾಂಘ್ರ್ಯುಪಲಬ್ಧವೃತ್ತಿಃ
ಶಾಂತೋ ಯಥೈಕ ಉತ ಸರ್ವಸಖೈಶ್ಚರಾಮಿ॥ ೪೫

ವೇದಶರೀರನೂ ಪರಿಶುದ್ಧಸತ್ತ್ವಗುಣಕ್ಕೆ ನೆಲೆಯೂ ಆದ ನಿನ್ನಲ್ಲಿ ಯಾವಾಗಲೂ ಬದ್ಧವೈರರಾಗಿದ್ದಾರೆ. ನಾವು ನಮ್ಮಂಥವರೂ ಸಹ ಹಾಗೆಯೇ ಆಗಿದ್ದೆವು! (೪೦-೪೨). ಕೆಲವರು ವೈರದಿಂದಲೂ ಕೆಲವರು ಭಕ್ತಿಯಿಂದಲೂ ಗೋಪಿ ಮೊದಲಾದವರು ಕಾಮದಿಂದಲೂ (ಸದಾ ನಿನ್ನ ಸ್ಮರಣೆಯನ್ನು ಮಾಡುತ್ತ) ನಿನಗೆ ಹತ್ತಿರದವರೇ ಆಗಿದ್ದಾರೆ! ಸತ್ತ್ವಗುಣಸಂಪನ್ನರಾದರೂ ದೇವಾದಿಗಳು ನಿನಗೆ ಅಷ್ಟು ಹತ್ತಿರದವರಲ್ಲ! (೪೩-೪೪). ಹೇ ಯೋಗೇಶ್ವರೇಶ್ವರ, ಯೋಗಿಗಳೂ ಸಹ ಇದು ಹೀಗೆಯೇ ಎಂದು ನಿನ್ನ ಯೋಗಮಾಯೆಯನ್ನು ಅರಿಯರು. ಇನ್ನು ನಾವು ತಿಳಿದೇವೆ? ಆದ್ದರಿಂದ, ಸ್ವಾಮಿ, ಪ್ರಸನ್ನನಾಗು. ನಿಷ್ಕಾಮರಾದವರು ಹುಡುಕುತ್ತಿರುವ ನಿನ್ನ ಪಾದಾರವಿಂದವೇ ನಿಜವಾದ ಗೃಹ. ಅದನ್ನು ಬಿಟ್ಟು ಬೇರೆ ಗೃಹವೆಂಬುದು ಅಂಧಕೂಪವೇ ಸರಿ! ಈ ಅಂಧಕೂಪದಿಂದ ಹೊರಟು ಸರ್ವ ಶರಣ್ಯವಾದ ನಿನ್ನ ಪಾದದ ಬಳಿ ಹೇಗೋ ಜೀವನವನ್ನು ನಡೆಸುತ್ತ ಶಾಂತಿಯಿಂದ ಏಕಾಕಿಯಾಗಿ ನಾನು ಸಂಚರಿಸುವಂತೆ ಅನುಗ್ರಹಿಸು. ಅಥವಾ ಸರ್ವ ಭೂತಗಳಲ್ಲಿಯೂ ಮೈತ್ರಿಯನ್ನಿರಿಸಿರುವ ನಿನ್ನ ಭಕ್ತರೊಡನೆ ತಿರುಗಾಡುವಂತೆ

ಶಾಧ್ಯಸ್ಮಾನೀಶಿತವ್ಯೇಶ ನಿಷ್ಪಾಪಾನ್ ಕುರು ನಃ ಪ್ರಭೋ ।
ಪುಮಾನ್ ಯಚ್ಛ್ರದ್ಧಯಾಽಽತಿಷ್ಠಂಶ್ಚೋದನಾಯಾ ವಿಮುಚ್ಯತೇ ॥ ೪೬

ಶ್ರೀಭಗವಾನುವಾಚ-

ಆಸನ್ ಮರೀಚೇಃ ಷಟ್ ಪುತ್ರಾ ಊರ್ಣಾಯಾಂ ಪ್ರಥಮೇಽಂತರೇ ।
ದೇವಾಃ ಕಂ ಜಹಸುರ್ವೀಕ್ಷ್ಯ ಸುತಾಂ ಯಭಿತುಮುದ್ಯತಮ್ ॥ ೪೭

ತೇನಾಸುರೀಮಗನ್ ಯೋನಿಮಧುನಾವದ್ಯಕರ್ಮಣಾ ।
ಹಿರಣ್ಯಕಶಿಪೋರ್ಜಾತಾ ನೀತಾಸ್ತೇ ಯೋಗಮಾಯಯಾ ॥ ೪೮

ದೇವಕ್ಯಾ ಉದರೇ ಜಾತಾ ರಾಜನ್ ಕಂಸವಿಹಿಂಸಿತಾಃ ।
ಸಾ ತಾನ್ ಶೋಚತ್ಯಾತ್ಮಜಾನ್ ಸ್ವಾಂಸ್ತ ಇಮೇಽಧ್ಯಾಸತೇಽಂತಿಕೇ ॥೪೯

ಇತ ಏತಾನ್ ಪ್ರಣೇಷ್ಯಾಮೋ ಮಾತೃಶೋಕಾಪನುತ್ತಯೇ ।
ತತಃ ಶಾಪಾದ್ ವಿನಿರ್ಮುಕ್ತಾ ಲೋಕಂ ಯಾಸ್ಯಂತಿ ವಿಜ್ವರಾಃ ॥ ೫೦

ಮಾಡು (೪೫). ನಿಯಮ್ಯಗಳಾಗಿರುವ ಈ ಸಕಲ ವಸ್ತುಗಳಿಗೂ ಈಶ್ವರನು ನೀನು. ಹೇ ಪ್ರಭು, ನಮ್ಮ ಪಾಪಗಳನ್ನು ದೂರಮಾಡು. ಹೀಗೆ ಮಾಡಬೇಕೆಂದು ನಮಗೆ ಆಜ್ಞಾಪಿಸು. ನಿನ್ನ ಆಜ್ಞೆಯನ್ನು ಭಕ್ತಿಯಿಂದ ಪಾಲಿಸುತ್ತ ವಿಧಿನಿಷೇಧಗಳಿಗೆ ಒಳಪಡದ ಏಕಾಂತಭಕ್ತರನ್ನಾಗಿ ನಮ್ಮನ್ನು ಮಾಡಿಕೊ '' ಎಂದನು (೪೬). ಆಗ ಶ್ರೀಕೃಷ್ಣನು ಬಲಿಚಕ್ರವರ್ತಿಯನ್ನು ಕುರಿತು ಹೀಗೆಂದನು : ''ಇಂದ್ರಸೇನ, ಮೊದಲನೆಯ ಸ್ವಾಯಂಭುವ ಮನ್ವಂತರದಲ್ಲಿ ಮರೀಚಿಗೆ ಊರ್ಣಾದೇವಿಯಲ್ಲಿ ಆರು ಮಂದಿ ದೇವಪುತ್ರರು ಹುಟ್ಟಿದರು. ಒಮ್ಮೆ ಬ್ರಹ್ಮನು ತನ್ನ ಪುತ್ರಿಯಾದ ಸರಸ್ವತಿಯಲ್ಲಿ ರಮಿಸಲು ಉದ್ಯುಕ್ತನಾದುದನ್ನು ಕಂಡು ಆ ಮರೀಚಿಪುತ್ರರು ನಕ್ಕರು (೪೭). ಆ ಪಾಪ ಕರ್ಮದಿಂದ ಆಗಲೇ ಅವರು ಅಸುರಜನ್ಮವನ್ನು ಪಡೆದು ಹಿರಣ್ಯಕಶಿಪುವಿಗೆ ಮಕ್ಕಳಾಗಿ ಜನಿಸಿದರು. ತರುವಾಯ ನನ್ನ ಯೋಗಮಾಯೆಯಿಂದ ಅವರು ದೇವಕೀಗರ್ಭದಲ್ಲಿ ಜನಿಸಿ ಕಂಸನಿಂದ ಹತರಾದರು. ಬಲಿರಾಜ, ಅವರು ತನ್ನ ಮಕ್ಕಳೆಂದು ತಿಳಿದು ದೇವಕಿಯು ಗೋಳಾಡುತ್ತಿದ್ದಾಳೆ. ಅವರೀಗ ನಿನ್ನ ಬಳಿಯಲ್ಲಿದ್ದಾರೆ (೪೮-೪೯). ತಾಯಿಯ

ಸ್ಮರೋದ್ಗೀಥಃ ಪರಿಷ್ವಂಗಃ ಪತಂಗಃ ಕ್ಷುದ್ರಭೃದ್ ಘೃಣೀ ।
ಷಡಿಮೇ ಮತ್ಪ್ರಸಾದೇನ ಪುನರ್ಯಾಸ್ಯಂತಿ ಸದ್ಗತಿಮ್ ॥ ೫೧

ಇತ್ಯುಕ್ತ್ವಾ ತಾನ್ ಸಮಾದಾಯ ಇಂದ್ರಸೇನೇನ ಪೂಜಿತೌ ।
ಪುನರ್ದ್ವಾರವತೀಮೇತ್ಯ ಮಾತುಃ ಪುತ್ರಾನಯಚ್ಛತಾಮ್ ॥ ೫೨

ತಾನ್ ದೃಷ್ಟ್ವಾ ಬಾಲಕಾನ್ ದೇವೀ ಪುತ್ರಸ್ನೇಹಸ್ನುತಸ್ತನೀ ।
ಪರಿಷ್ವಜ್ಯಾಂಕಮಾರೋಪ್ಯ ಮೂರ್ಧ್ನ್ಯಜಿಘ್ರದಭೀಕ್ಷ್ಣಶಃ ॥ ೫೩

ಅಪಾಯಯತ್ ಸ್ತನಂ ಪ್ರೀತಾ ಸುತಸ್ಪರ್ಶಪರಿಪ್ಲುತಾ ।
ಮೋಹಿತಾ ಮಾಯಯಾ ವಿಷ್ಣೋರ್ಯಯಾ ಸೃಷ್ಟಿಃ ಪ್ರವರ್ತತೇ ॥ ೫೪

ಪೀತ್ವಾಮೃತಂ ಪಯಸ್ತಸ್ಯಾಃ ಪೀತಶೇಷಂ ಗದಾಭೃತಃ ।
ನಾರಾಯಣಾಂಗಸಂಸ್ಪರ್ಶಪ್ರತಿಲಬ್ಧಾತ್ಮದರ್ಶನಾಃ ॥ ೫೫

ದುಃಖವನ್ನು ಪರಿಹರಿಸುವುದಕ್ಕಾಗಿ ನಾವು ಇವರನ್ನು ಕೊಂಡೊಯ್ಯುವೆವು. ಆಮೇಲೆ ಇವರು ಶಾಪವಿಮುಕ್ತರಾಗಿ ನಿಶ್ಚಿಂತೆಯಿಂದ ದೇವಲೋಕಕ್ಕೆ ಹೋಗುವರು. ಸ್ಮರ,[1] ಉದ್ಗೀಥ, ಪರಿಷ್ವಂಗ, ಪತಂಗ, ಕ್ಷುದ್ರಭೃತ್, ಘೃಣಿ- ಎಂಬ ಈ ಆರು ಜನರು ನನ್ನಅನುಗ್ರಹದಿಂದ ಸದ್ಗತಿಯನ್ನು ಪಡೆಯಲಿ'' ಎಂದನು (೫೦-೫೧). ಅನಂತರ ಅಚ್ಯುತಬಲರಾಮರು ಇಂದ್ರಸೇನನಿಂದ ಪೂಜಿತರಾಗಿ, ಆ ಆರುಮಂದಿಯನ್ನು ದ್ವಾರಕೆಗೆ ಕರೆದೊಯ್ದು ಇವರು ನಿನ್ನ ಪುತ್ರರೆಂದು ದೇವಕಿಗೆ ಒಪ್ಪಿಸಿದರು (೫೨). ಆ ಬಾಲಕರನ್ನು ನೋಡಿದಾಗ ದೇವಕೀದೇವಿಗೆ ಪುತ್ರವಾತ್ಸಲ್ಯದಿಂದ ಮೊಲೆಹಾಲು ಹೊಮ್ಮಿತು. ಅವರನ್ನಾಲಿಂಗಿಸಿ ತೊಡೆಯಮೇಲೆ ಕುಳ್ಳಿರಿಸಿಕೊಂಡು ಬಾಲಕರ ಶಿರಸ್ಸನ್ನು ಮತ್ತೆ ಮತ್ತೆ ಆಘ್ರಾಣಿಸಿದಳು (೫೩). ಪುತ್ರಸ್ಪರ್ಶದಿಂದ ಮೊಲೆಹಾಲು ಜಿನುಗಲಾಗಿ, ದೇವಕಿಯು ಸಂತೋಷದಿಂದ ಅವರಿಗೆ ಮೊಲೆಯುಣಿಸಿದಳು. ಸೃಷ್ಟಿಗೆ ಕಾರಣವಾದ ವಿಷ್ಣುಮಾಯೆಯಿಂದ ಅವಳು ಮೋಹಿತಳಾಗಿದ್ದಳು (೫೪). ಶ್ರೀಕೃಷ್ಣನು ಕುಡಿದು ಉಳಿಸಿದ್ದ ಮೊಲೆ ಹಾಲು ಆ ಬಾಲಕರ ಪಾಲಿಗೆ ಅಮೃತವಾಯಿತು. ಭಗವಂತನ ಸಾಕ್ಷಾತ್ ಅಂಗ ಸ್ಪರ್ಶದಿಂದ ಅವರಿಗೆ ತಾವು ಯಾರೆಂಬ ಪೂರ್ವಜ್ಞಾನ ಉದಿಸಿತು. ಅವರೆಲ್ಲರೂ

---

೧ ಈ ಸ್ಮರನೇ ಹಿಂದೆ ಹೇಳಿದ ಕೀರ್ತಿಮಂತ (ನೋಡಿ ಭಾಗ ೧೦-೧-೫೭).

ತೇ ನಮಸ್ಕೃತ್ಯ ಗೋವಿಂದಂ ದೇವಕೀಂ ಪಿತರಂ ಬಲಮ್ ।
ಮಿಷತಾಂ ಸರ್ವಭೂತಾನಾಂ ಯಯುರ್ಧಾಮ ದಿವೌಕಸಾಮ್ ೫೬

ತಂ ದೃಷ್ಟ್ವಾ ದೇವಕೀ ದೇವೀ ಮೃತಾಗಮನನಿರ್ಗಮಮ್ ।
ಮೇನೇ ಸುವಿಸ್ಮಿತಾ ಮಾಯಾಂ ಕೃಷ್ಣಸ್ಯ ರಚಿತಾಂ ನೃಪ ॥ ೫೭

ಏವಂವಿಧಾನ್ಯದ್ಭುತಾನಿ ಕೃಷ್ಣಸ್ಯ ಪರಮಾತ್ಮನಃ ।
ವೀರ್ಯಾಣ್ಯನಂತವೀರ್ಯಸ್ಯ ಸಂತ್ಯನಂತಾನಿ ಭಾರತ ॥ ೫೮

ಸೂತ ಉವಾಚ-

ಯ ಇದಮನುಶೃಣೋತಿ ಶ್ರಾವಯೇದ್ ವಾ ಮುರಾರೇ-
ಶ್ಚರಿತಮಮೃತಕೀರ್ತೇರ್ವರ್ಣಿತಂ ವ್ಯಾಸಪುತ್ರೈಃ ।
ಜಗದಘಭಿದಲಂ ತದ್ಭಕ್ತಸತ್ಕರ್ಣಪೂರಂ
ಭಗವತಿ ಕೃತಚಿತ್ತೋ ಯಾತಿ ತತ್ಕ್ಷೇಮಧಾಮ ॥ ೫೯

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಪಂಚಾಶೀತಿತಮಾಧ್ಯಾಯಃ

ಗೋವಿಂದನಿಗೂ ವಸುದೇವದೇವಕಿಯರಿಗೂ ಬಲಭದ್ರನಿಗೂ ನಮಸ್ಕರಿಸಿ, ನೆರೆದಿದ್ದ ಸಕಲರೂ ನೋಡುತ್ತಿರುವಾಗ ಸ್ವರ್ಗಲೋಕಕ್ಕೆ ತೆರಳಿದರು ! (೫೫-೫೬). ಪರೀಕ್ಷಿತರಾಜ, ಸತ್ತುಹೋದ ಮಕ್ಕಳು ಬಂದದ್ದು, ಹಾಗೆಯೇ ಹೊರಟುಹೋದದ್ದು-ಇದನ್ನು ಕಂಡು ದೇವಕೀದೇವಿಯು ಆಶ್ಚರ್ಯಪಟ್ಟು ಇದೆಲ್ಲವೂ ಶ್ರೀಕೃಷ್ಣನ ಮಾಯಾವಿಲಾಸವೆಂದು ಭಾವಿಸಿದಳು (೫೭). ಅನಂತ ಶಕ್ತಿಯುಳ್ಳ ಪರಮಾತ್ಮನ ಈ ಬಗೆಯ ಅದ್ಭುತಲೀಲೆಗಳು ಅನಂತವಾಗಿವೆ- ಎಂದು ಶುಕಮುನಿಗಳು ಹೇಳಿದರು. ಹೀಗೆ ನುಡಿದು ಸೂತಪುರಾಣಿಕರು ''ಶಾಶ್ವತಕೀರ್ತಿಯುಳ್ಳ ಶ್ರೀಮನ್ನಾರಾಯಣನ ಈ ಚರಿತೆಯನ್ನು ವ್ಯಾಸಪುತ್ರರಾದ ಶುಕಮಹರ್ಷಿಗಳು ಹೇಳಿದ್ದಾರೆ. ಈ ಚರಿತೆ ಸರ್ವರ ಪಾಪವನ್ನೂ ಹೋಗಲಾಡಿಸತಕ್ಕದ್ದು. ಭಗವದ್ಭಕ್ತರ ಕರ್ಣಾಭರಣವಿದು. ಯಾವಾತನು ಇದನ್ನು ಕೇಳುವನೋ ಪ್ರವಚನಮಾಡುವನೋ ಅವನು ಭಗವದ್ಭಕ್ತನಾಗಿ ಭಗವಂತನ ಪರಮಪದವನ್ನು ಸೇರುವನು'' ಎಂದರು (೫೮-೫೯).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಂಬತ್ತೈದನೆಯ ಅಧ್ಯಾಯ

ಷಡಶೀತಿತಮಾಧ್ಯಾಯಃ

ರಾಜೋವಾಚ-
ಬ್ರಹ್ಮನ್ ವೇದಿತುಮಿಚ್ಛಾಮಃ ಸ್ವಸಾರಂ ರಾಮಕೃಷ್ಣಯೋಃ ।
ಯಥೋಪಯೇಮೇ ವಿಜಯೋ ಯಾ ಮಮಾಸೀತ್ ಪಿತಾಮಹೀ ॥೧

ಶ್ರೀಶುಕ ಉವಾಚ-
ಅರ್ಜುನಸ್ತೀರ್ಥಯಾತ್ರಾಯಾಂ ಪರ್ಯಟನ್ನವನೀಂ ಪ್ರಭುಃ ।
ಗತಃ ಪ್ರಭಾಸಮಶೃಣೋನ್ಮಾತುಲೇಯಾಂ ಸ ಆತ್ಮನಃ ॥ ೨

ದುರ್ಯೋಧನಾಯ ರಾಮಸ್ತಾಂ ದಾಸ್ಯತೀತಿ ನ ಚಾಪರೇ ।
ತಲ್ಲಿಪ್ಸುಃ ಸ ಯತಿರ್ಭೂತ್ವಾ ತ್ರಿದಂಡೀ ದ್ವಾರಕಾಮಗಾತ್ ॥ ೩

ತತ್ರ ವೈ ವಾರ್ಷಿಕಾನ್ ಮಾಸಾನವಾತ್ಸೀತ್ ಸ್ವಾರ್ಥಸಾಧಕಃ ।
ಪೌರೈಃ ಸಭಾಜಿತೋಽಭೀಕ್ಷ್ಣಂ ರಾಮೇಣಾಜಾನತಾ ಚ ಸಃ ॥ ೪

ಅಧ್ಯಾಯ ೮೬

ಅರ್ಜುನನಿಂದ ಸುಭದ್ರಾಹರಣ. ಶ್ರೀಕೃಷ್ಣನು ಬಹುಲಾಶ್ವ ಮತ್ತು ಶ್ರುತದೇವರನ್ನು ಅನುಗ್ರಹಿಸುವುದು.

ಆಮೇಲೆ ಪರೀಕ್ಷಿತರಾಜನು ''ಮಹರ್ಷಿಗಳೆ, ಬಲರಾಮಕೃಷ್ಣರಿಗೆ ತಂಗಿಯೂ ನನಗೆ ಪಿತಾಮಹಿಯೂ ಆದ ಸುಭದ್ರಾದೇವಿಯನ್ನು ಅರ್ಜುನನು ಮದುವೆಯಾದ ವೃತ್ತಾಂತವನ್ನು ಕೇಳಲು ಬಯಸುತ್ತೇನೆ'' ಎಂದನು (೧). ಆಗ ಶುಕಮುನಿಗಳು ಹೇಳಿದರು : ಪರೀಕ್ಷಿತ, ಅರ್ಜುನನು ತೀರ್ಥಯಾತ್ರೆಗಾಗಿ ಭೂಮಿಯಲ್ಲಿ ಸಂಚರಿಸುತ್ತ ಒಮ್ಮೆ ಪ್ರಭಾಸಕ್ಷೇತ್ರಕ್ಕೆ ಬಂದನು. ಅಲ್ಲಿ ಅರ್ಜುನನು ತನ್ನ ಸೋದರಮಾವನ ಮಗಳಾದ ಸುಭದ್ರೆಯನ್ನು ದುರ್ಯೋಧನನಿಗೆ ಕೊಟ್ಟು ಮದುವೆಮಾಡಬೇಕೆಂದು ಬಲರಾಮನು ಉದ್ದೇಶಿಸಿದ್ದಾನೆಂದೂ ಅದಕ್ಕೆ ವಸುದೇವಾದಿಗಳು ಒಪ್ಪುತ್ತಿಲ್ಲವೆಂದೂ ಸುದ್ದಿಯನ್ನು ಕೇಳಿದನು. ಅವಳನ್ನು ತಾನು ಮದುವೆಯಾಗಲೆಳಸಿದ ಅರ್ಜುನನು (ಬಲರಾಮನನ್ನು ವಂಚಿಸುವುದಕ್ಕಾಗಿ) ತ್ರಿದಂಡಿ ಸಂನ್ಯಾಸಿಯ ವೇಷವನ್ನು ಧರಿಸಿ ದ್ವಾರಕೆಗೆ ಹೋದನು (೨-೩). ಅಲ್ಲಿ ಪೌರರಿಂದಲೂ ಈ ಕಪಟವನ್ನರಿಯದ ಬಲರಾಮನಿಂದಲೂ ವಿಶೇಷವಾಗಿ

ಏಕದಾ ಗೃಹಮಾನೀಯ ಆತಿಥ್ಯೇನ ನಿಮಂತ್ರ್ಯ ತಮ್ ।
ಶ್ರದ್ಧಯೋಪಹೃತಂ ಭೈಕ್ಷ್ಯಂ ಬಲೇನ ಬುಭುಜೇ ಕಿಲ ॥ ೫

ಸೋಽಪಶ್ಯತ್ತತ್ರ ಮಹತೀಂ ಕನ್ಯಾಂ ವೀರಮನೋಹರಾಮ್ ।
ಪ್ರೀತ್ಯುತ್ಫುಲ್ಲೇಕ್ಷಣಸ್ತಸ್ಯಾಂ ಭಾವಕ್ಷುಬ್ಧಂ ಮನೋ ದಧೇ ॥ ೬

ಸಾಪಿ ತಂ ಚಕಮೇ ವೀಕ್ಷ್ಯ ನಾರೀಣಾಂ ಹೃದಯಂಗಮಮ್ ।
ಹಸಂತೀ ವ್ರೀಡಿತಾಪಾಂಗೀ ತನ್ನ್ಯಸ್ತಹೃದಯೇಕ್ಷಣಾ ॥ ೭

ತಾಂ ಪರಂ ಸಮನುಧ್ಯಾಯನ್ನಂತರಂ ಪ್ರೇಪ್ಸುರರ್ಜುನಃ ।
ನ ಲೇಭೇ ಶಂ ಭ್ರಮಚ್ಚಿತ್ತಃ ಕಾಮೇನಾತಿಬಲೀಯಸಾ ॥ ೮

ಮಹತ್ಯಾಂ ದೇವಯಾತ್ರಾಯಾಂ ರಥಸ್ಥಾಂ ದುರ್ಗನಿರ್ಗತಾಮ್ ।
ಜಹಾರಾನುಮತಃ ಪಿತ್ರೋಃ ಕೃಷ್ಣಸ್ಯ ಚ ಮಹಾರಥಃ ॥ ೯

ಸತ್ಕಾರವನ್ನು ಪಡೆಯುತ್ತ ಸ್ವಾರ್ಥಸಾಧನೆಗಾಗಿ ಮಳೆಗಾಲದ ಚತುರ್ಮಾಸ್ಯ ವ್ರತವನ್ನಾಚರಿಸುವ ನೆವದಲ್ಲಿ ನೆಲೆಸಿದನು (೪). ಹೀಗಿರಲು ಒಂದು ದಿನ ಬಲದೇವನು ಈ ಸಂನ್ಯಾಸಿಯನ್ನು ಭಿಕ್ಷೆಗಾಗಿ ಪ್ರಾರ್ಥಿಸಿ ತನ್ನ ಮನೆಗೆ ಕರೆದುಕೊಂಡು ಬಂದು ಭಕ್ತಿಯಿಂದ ಭೋಜನಮಾಡಿಸಿದನು. ಆಗ ಆ ರಾಜಮಂದಿರದಲ್ಲಿ ತನ್ವಿಯೂ ಚೆಲುವೆಯೂ ಆದ ಆ ಕನ್ಯೆಯನ್ನು ಈ ಕಪಟ ಸಂನ್ಯಾಸಿ ಕಂಡನು. ಪ್ರೀತಿಯಿಂದ ಕಣ್ಣುಗಳು ಅರಳಿದವು. ಮನಸ್ಸು ಕಲಕಿತು (೫-೬). ಸ್ತ್ರೀಯರ ಹೃದಯವನ್ನಪಹರಿಸುವಷ್ಟು ಸುಂದರಾಂಗನಾದ ಅರ್ಜುನನನ್ನು ಕಂಡು ಸುಭದ್ರೆಯೂ ಮೋಹಗೊಂಡಳು. ನಾಚಿಕೆಯಿಂದ ಕುಡಿನೋಟಗಳನ್ನು ಬೀರುತ್ತ ನಗುತ್ತ ಅವನಲ್ಲಿಯೇ ಕಣ್ಮನಗಳನ್ನಿಟ್ಟಳು. ಅರ್ಜುನನು ಅವಳನ್ನೇ ನಿರಂತರವೂ ಧ್ಯಾನಿಸುತ್ತ ಅಪಹರಿಸಿಕೊಂಡು ಹೋಗಲು ಸಮಯವನ್ನು ಕಾಯುತ್ತಿದ್ದನು. ತೀವ್ರವಾದ ಕಾಮಪೀಡೆಯಿಂದ ಬಳಲುತ್ತ ಭ್ರಾಂತಚಿತ್ತನಾಗಿ ಕಳವಳಿಸುತ್ತಿದ್ದನು (೭-೮). ಹೀಗಿರಲು ಒಂದು ದೊಡ್ಡದಾದ ದೇವಜಾತ್ರೆಯು ನೆರೆಯಿತು. ಸುಭದ್ರೆಯು ರಥದಲ್ಲಿ ಕುಳಿತು ಕೋಟೆಯ ಹೊರಗೆ ಬಂದಿದ್ದಳು. ಅವಳ ತಾಯಿ ತಂದೆಗಳಾದ ದೇವಕೀವಸುದೇವರ ಮತ್ತು ಶ್ರೀಕೃಷ್ಣನ

ರಥಸ್ಥೋ ಧನುರಾದಾಯ ಶೂರಾಂಶ್ಚಾರುಂಧತೋ ಭಟಾನ್ ।
ವಿದ್ರಾವ್ಯ ಕ್ರೋಶತಾಂ ಸ್ವಾನಾಂ ಸ್ವಭಾಗಂ ಮೃಗರಾಡಿವ ॥ ೧೦

ತಚ್ಛ್ರುತ್ವಾ ಕ್ಷುಭಿತೋ ರಾಮಃ ಪರ್ವಣೀವ ಮಹಾರ್ಣವಃ ।
ಗೃಹೀತಪಾದಃ ಕೃಷ್ಣೇನ ಸುಹೃದ್ಭಿಶ್ಚಾನ್ವಶಾಮ್ಯತ ॥ ೧೧

ಪ್ರಾಹಿಣೋತ್ ಪಾರಿಬರ್ಹಾಣಿ ವರವಧ್ವೋರ್ಮುದಾ ಬಲಃ ।
ಮಹಾಧನೋಪಸ್ಕರೇಭರಥಾಶ್ವನರಯೋಷಿತಃ ॥ ೧೨

ಶ್ರೀಶುಕ ಉವಾಚ-

ಕೃಷ್ಣಸ್ಯಾಸೀದ್ ದ್ವಿಜಶ್ರೇಷ್ಠಃ ಶ್ರುತದೇವ ಇತಿ ಶ್ರುತಃ ।
ಕೃಷ್ಣೈಕಭಕ್ತ್ಯಾ ಪೂರ್ಣಾರ್ಥಃ ಶಾಂತಃ ಕವಿರಲಂಪಟಃ ॥ ೧೩

ಸ ಉವಾಸ ವಿದೇಹೇಷು ಮಿಥಿಲಾಯಾಂ ಗೃಹಾಶ್ರಮೀ ।
ಅನೀಹಯಾಽಽಗತಾಹಾರ್ಯನಿರ್ವರ್ತಿತನಿಜಕ್ರಿಯಃ ॥ ೧೪

ಅನುಮತಿಯನ್ನು ಮೊದಲೇ ಪಡೆದಿದ್ದ ಅರ್ಜುನನು, ಆಗ ಸುಭದ್ರೆಯನ್ನ ಪಹರಿಸಿಕೊಂಡು ರಥವೇರಿ ಹೊರಟನು (೯). ಧನುಸ್ಸನ್ನು ಹಿಡಿದು ಶರಗಳನ್ನು ತೂರುತ್ತ ಅಡ್ಡಗಟ್ಟಿದ ಯಾದವ ಭಟರನ್ನು ದಿಕ್ಕುಗೆಟ್ಟು ಓಡಿಸುತ್ತ, ಮೃಗಗಳು ಕಿರಿಚುತ್ತಿರುವಾಗ ಸಿಂಹವು ತನ್ನ ಸಿಂಹಪಾಲನ್ನು ಸೆಳೆದೊಯ್ಯುವಂತೆ ಪಾರ್ಥನು ಸುಭದ್ರೆಯನ್ನು ಕರೆದೊಯ್ದನು (೧೦). ಆ ಸುದ್ದಿಯನ್ನು ಕೇಳಿ ಬಲರಾಮನು ಪರ್ವಕಾಲದಲ್ಲಿ ಕ್ಷೋಭೆಗೊಳ್ಳುವ ಮಹಾಸಾಗರದಂತೆ ಕೆರಳಿದನು. ಆಗ ಶ್ರೀಕೃಷ್ಣನೂ ಇತರ ಆಪ್ತಬಂಧುಗಳೂ ಬಲರಾಮನ ಕಾಲಿಗೆರಗಿ ಅನುನಯೋಕ್ತಿಗಳಿಂದ ಸಂತೈಸಿದರು. ಬಳಿಕ ಬಲಭದ್ರನು ಶಾಂತನಾಗಿ ಸಂತೋಷದಿಂದ ವಧೂವರರಿಗೆ ಅಮೂಲ್ಯವಾದ ಭೋಗಸಾಮಾಗ್ರಿಗಳನ್ನೂ ಆನೆ, ಕುದುರೆ, ರಥ, ದಾಸಿಯರನ್ನೂ ಬಳುವಳಿಯಾಗಿ ಕಳಿಸಿಕೊಟ್ಟನು (೧೧-೧೨). ಪರೀಕ್ಷಿತರಾಜ, (ಶ್ರೀಕೃಷ್ಣನ ಭಕ್ತವಾತ್ಸಲ್ಯವನ್ನು ಕುರಿತು ಇನ್ನೊಂದು ವೃತ್ತಾಂತವನ್ನು ಹೇಳುವೆನು, ಕೇಳು). ಶ್ರುತದೇವನೆಂಬ ಬ್ರಾಹ್ಮಣೋತ್ತಮ ನೊಬ್ಬನು ಶ್ರೀಕೃಷ್ಣನ ಭಕ್ತನಾಗಿದ್ದನು. ಅವನು ಕೃಷ್ಣಭಕ್ತಿಯಿಂದಲೇ ಸಂತೃಪ್ತನು ;

ಯಾತ್ರಾಮಾತ್ರಂ ತ್ವಹರಹರ್ದೈವಾದುಪನಮತ್ಯುತ ।
ನಾಧಿಕಂ ತಾವತಾ ತುಷ್ಟಃ ಕ್ರಿಯಾಶ್ಚಕ್ರೇ ಯಥೋಚಿತಾಃ ॥ ೧೫

ತಥಾ ತದ್ರಾಷ್ಟ್ರಪಾಲೋಽಂಗ ಬಹುಲಾಶ್ವ ಇತಿ ಶ್ರುತಃ ।
ಮೈಥಿಲೋ ನಿರಹಂಮಾನ ಉಭಾವಪ್ಯಚ್ಯುತಪ್ರಿಯೌ ॥ ೧೬

ತಯೋಃ ಪ್ರಸನ್ನೋ ಭಗವಾನ್ ದಾರುಕೇಣಾಹೃತಂ ರಥಮ್ ।
ಆರುಹ್ಯ ಸಾಕಂ ಮುನಿಭಿರ್ವಿದೇಹಾನ್ ಪ್ರಯಯೌ ಪ್ರಭುಃ ॥ ೧೭

ನಾರದೋವಾಮದೇವೋಽತ್ರಿಃ ಕೃಷ್ಣೋ ರಾಮೋಽಸಿತೋಽರುಣಿಃ ।
ಅಹಂ ಬೃಹಸ್ಪತಿಃ ಕಣ್ವೋ ಮೈತ್ರೇಯಶ್ಚ್ಯವನಾದಯಃ ॥ ೧೮

ತತ್ರ ತತ್ರ ತಮಾಯಾಂತಂ ಪೌರಾ ಜಾನಪದಾ ನೃಪ ।
ಉಪತಸ್ಥುಃ ಸಾರ್ಘ್ಯಹಸ್ತಾಗ್ರಹೈಃ ಸೂರ್ಯಮಿವೋದಿತಮ್ ॥ ೧೯

ಶಾಂತಸ್ವಭಾವದವನು; ವಿದ್ವಾಂಸ; ವಿಷಯಸುಖದಲ್ಲಿ ಆಸೆಯಿಲ್ಲದವನು (೧೩). ವಿದೇಹರಾಜ್ಯದ ಮಿಥಿಲಾನಗರದಲ್ಲಿ ಗೃಹಸ್ಥನಾಗಿದ್ದ ಆತನು ಅಯಾಚಿತವಾಗಿ ದೊರಕಿದ್ದರಿಂದಲೇ ತೃಪ್ತನಾಗಿ ತನ್ನ ನಿತ್ಯ ಕರ್ಮವನ್ನು ನಡೆಸಿಕೊಂಡಿದ್ದನು. ಪ್ರತಿದಿನವೂ ತಾನಾಗಿ ಒದಗಿಬಂದದ್ದರಲ್ಲಿ ದೇಹಯಾತ್ರೆಗೆ ಎಷ್ಟು ಬೇಕೋ ಅಷ್ಟನ್ನೇ ಸ್ವೀಕರಿಸಿ ಯಥಾವಿಹಿತಕ್ರಿಯೆಗಳನ್ನು ನಡೆಸುತ್ತಿದ್ದನಲ್ಲದೆ ಅಧಿಕವಾಗಿ ಬಂದದ್ದನ್ನು ತೆಗೆದುಕೊಳ್ಳುತ್ತಿರಲಿಲ್ಲ (೧೪-೧೫). ಹಾಗೆಯೇ ಆ ರಾಜ್ಯದ ಒಡೆಯನಾದ ಬಹುಲಾಶ್ವನೆಂಬ ಮೈಥಿಲರಾಜನು ಅಭಿಮಾನರಹಿತನಾಗಿದ್ದನು. ಅವರಿಬ್ಬರೂ ಅಚ್ಯುತನ ಪ್ರಿಯಭಕ್ತರು. ಅವರ ವಿಷಯದಲ್ಲಿ ಪ್ರಸನ್ನನಾದ ಭಗವಂತನು ಒಂದು ಸಲ ದಾರುಕನು ತಂದ ರಥವನ್ನೇರಿ ಮುನಿಗಳೊಡನೆ ವಿದೇಹದೇಶಕ್ಕೆ ತೆರಳಿದನು (೧೬-೧೭). ಆತನೊಡನೆ ನಾರದ, ವಾಮದೇವ, ಅತ್ರಿ, ವ್ಯಾಸ, ಪರಶುರಾಮ, ಅಸಿತ, ಅರುಣಿ, ಬೃಹಸ್ಪತಿ, ಕಣ್ವ, ಮೈತ್ರೇಯ, ಚ್ಯವನ, ನಾನು (ಶುಕ)-ಮೊದಲಾದವರು ಹೋದೆವು. ಹೋಗುತ್ತಿರುವಾಗ ಅಲ್ಲಲ್ಲಿ ಪಟ್ಟಣಿಗರು ಮತ್ತು ನಾಡಿನ ಜನರು ಪೂಜೋಪಕರಣಗಳನ್ನು ಕೈಯಲ್ಲಿ ಹಿಡಿದುಕೊಂಡು, ಉದಿಸಿದ ಸೂರ್ಯನನ್ನು ಅರ್ಘ್ಯಗಳಿಂದ ಹೇಗೊಹಾಗೆ ಶ್ರೀಕೃಷ್ಣನನ್ನು ಸ್ವಾಗತಿಸಿ

ಆನರ್ತಧನ್ವಕುರುಜಾಂಗಲಕಂಕಮತ್ಸ್ಯ-
ಪಾಂಚಾಲಕುಂತಿಮಧುಕೇಕಯಕೋಸಲಾರ್ಣಾಃ।
ಅನ್ಯೇ ಚ ತನ್ಮುಖಸರೋಜಮುದಾರಹಾಸ-
ಸ್ನಿಗ್ಧೇಕ್ಷಣಂ ನೃಪ ಪಪುರ್ದೃಶಿಭಿರ್ನೃನಾರ್ಯಃ॥ ೨೦

ತೇಭ್ಯಃ ಸ್ವವೀಕ್ಷಣವಿನಷ್ಟತಮಿಸ್ರದೃಗ್ಭ್ಯಃ
ಕ್ಷೇಮಂ ತ್ರಿಲೋಕಗುರುರರ್ಥದೃಶಂ ಚ ಯಚ್ಛನ್।
ಶೃಣ್ವನ್ ದಿಗಂತಧವಲಂ ಸ್ವಯಶೋಽಶುಭಘ್ನಂ
ಗೀತಂ ಸುರೈರ್ನೃಭಿರಗಾಚ್ಛನಕೈರ್ವಿದೇಹಾನ್॥ ೨೧

ತೇಽಚ್ಯುತಂ ಪ್ರಾಪ್ತಮಾಕರ್ಣ್ಯ ಪೌರಾ ಜಾನಪದಾ ನೃಪ।
ಅಭೀಯುರ್ಮುದಿತಾಸ್ತಸ್ಮೈ ಗೃಹೀತಾರ್ಹಣಪಾಣಯಃ॥ ೨೨

ಎದುರುಗೊಳ್ಳುತ್ತಿದ್ದರು (೧೮-೧೯). ದಾರಿಯಲ್ಲಿ ಆನರ್ತ, ಧನ್ವ, ಕುರುಜಾಂಗಲ, ಕಂಕ, ಮತ್ಸ್ಯ, ಪಾಂಚಾಲ, ಕುಂತಿದೇಶ, ಮಧು, ಕೇಕಯ, ಕೋಸಲ, ದಾಶಾರ್ಣ-ಮುಂತಾದ ದೇಶಗಳ ಸ್ತ್ರೀಪುರುಷರು ಮಂದಹಾಸದಿಂದಲೂ ಪ್ರೇಮಪೂರ್ಣವಾದ ನೋಟಗಳಿಂದಲೂ ಸುಂದರವಾದ ಶ್ರೀಕೃಷ್ಣನ ಮುಖಕಮಲವನ್ನು ಕುಡಿಯುವಂತೆ ನೋಡುತ್ತಿದ್ದರು (೨೦). ಆ ತ್ರಿಲೋಕಗುರುವಿನ ದರ್ಶನಮಾತ್ರದಿಂದಲೇ ಆ ಜನರ ಅಜ್ಞಾನಾಂಧಕಾರವು ತೊಲಗಿಹೋಯಿತು. ಭಗವಂತನು ಅವರಿಗೆ ಅಭಯವನ್ನಿತ್ತು ತತ್ತ್ವಜ್ಞಾನವು ಉದಯಿಸುವಂತೆ ಅನುಗ್ರಹಿಸಿದನು. ದಿಗಂತವನ್ನು ಬೆಳ್ಳಗೆ ಬೆಳಗಿಸಿದ ಪಾಪ ಪರಿಹಾರಕವಾದ ಆತನ ಕೀರ್ತಿಯನ್ನು ದೇವತೆಗಳೂ ಮಾನವರೂ ಹೊಗಳಿ ಹಾಡುತ್ತಿದ್ದರು. ಅವರ ಗೀತವನ್ನಾಲಿಸುತ್ತ ಶ್ರೀಕೃಷ್ಣನು ಮೆಲ್ಲಮೆಲ್ಲನೆ ಪ್ರಯಾಣ ಮಾಡಿ ವಿದೇಹದೇಶವನ್ನು ಸೇರಿದನು (೨೧). ರಾಜ, ನಗರವಾಸಿಗಳಿಗೂ ಆ ದೇಶದ ಮತ್ತಿತರ ಪ್ರಜೆಗಳಿಗೂ ಅಚ್ಯುತನು ಬಂದನೆಂಬುದನ್ನು ಕೇಳಿ ಆನಂದವಾಯಿತು. ಅವರೆಲ್ಲರೂ ಕಾಣಿಕೆಗಳನ್ನು ತಂದು ಉತ್ತಮಶ್ಲೋಕನನ್ನು ನೋಡುತ್ತ ಪ್ರೀತಿಯಿಂದ ಕಣ್ಣರಳಿಸಿದರು. ಅವರ ಹೃದಯವು ಹಿಗ್ಗಿತು. ಕೈಮುಗಿದು ತಲೆಬಾಗಿ ಅಚ್ಯುತನಿಗೂ ತಾವು ಹಿಂದೆ ಕೇಳಿ

ದೃಷ್ಟ್ವಾತ್ರ ಉತ್ತಮಶ್ಲೋಕಂ ಪ್ರೀತ್ಯುತ್ಫುಲ್ಲಾನನಾಶಯಾಃ ।
ಕೈರ್ಧೃತಾಂಜಲಿಭಿರ್ನೇಮುಃ ಶ್ರುತಪೂರ್ವಾಂಸ್ತಥಾ ಮುನೀನ್ ॥ ೨೩

ಸ್ವಾನುಗ್ರಹಾಯ ಸಂಪ್ರಾಪ್ತಂ ಮನ್ವಾನೌ ತಂ ಜಗದ್ಗುರುಮ್ ।
ಮೈಥಿಲಃ ಶ್ರುತದೇವಶ್ಚ ಪಾದಯೋಃ ಪೇತತುಃ ಪ್ರಭೋಃ ॥ ೨೪

ನ್ಯಮಂತ್ರಯೇತಾಂ ದಾಶಾರ್ಹಮಾತಿಥ್ಯೇನ ಸಹ ದ್ವಿಜೈಃ ।
ಮೈಥಿಲಃ ಶ್ರುತದೇವಶ್ಚ ಯುಗಪತ್ ಸಂಹತಾಂಜಲೀ ॥ ೨೫

ಭಗವಾಂಸ್ತದಭಿಪ್ರೇತ್ಯ ದ್ವಯೋಃ ಪ್ರಿಯಚಿಕೀರ್ಷಯಾ ।
ಉಭಯೋರಾವಿಶದ್ ಗೇಹಮುಭಾಭ್ಯಾಂ ತದಲಕ್ಷಿತಃ ॥ ೨೬

ಶ್ರೋತುಮಪ್ಯಸತಾಂ ದೂರಾನ್ ಜನಕಃ ಸ್ವಗೃಹಾಗತಾನ್ ।
ಆನೀತೇಷ್ವಾಸನಾಗ್ರ್ಯೇಷು ಸುಖಾಸೀನಾನ್ ಮಹಾಮನಾಃ ॥ ೨೭

ಪ್ರವೃದ್ಧಭಕ್ತ್ಯಾ ಉದ್ಧರ್ಷಹೃದಯಾಸ್ರಾವಿಲೇಕ್ಷಣಃ ।
ನತ್ವಾ ತದಂಘ್ರೀನ್ ಪ್ರಕ್ಷಾಲ್ಯ ತದಪೋ ಲೋಕಪಾವನೀಃ ॥ ೨೮

ತಿಳಿದಿದ್ದ ಆ ಮುನಿಗಳಿಗೂ ನಮಸ್ಕರಿಸಿದರು (೨೨-೨೩). ಮಿಥಿಲಾಧಿಪತಿಯೂ ಶ್ರುತದೇವನೂ ತಮ್ಮನ್ನು ಅನುಗ್ರಹಿಸುವುದಕ್ಕಾಗಿಯೇ ಜಗದ್ಗುರುವು ಬಂದನೆಂದು ಭಾವಿಸಿ ಆ ಪ್ರಭುವಿನ ಪಾದಗಳಿಗೆ ಅಡ್ಡಬಿದ್ದರು. ಅಲ್ಲದೆ ಅವರಿಬ್ಬರೂ ಕೈಮುಗಿದುಕೊಂಡು ಶ್ರೀಕೃಷ್ಣನನ್ನೂ ಮುನಿಗಳನ್ನೂ ತಮ್ಮ ಮನೆಗೆ ಅತಿಥಿಸತ್ಕಾರವನ್ನು ಸ್ವೀಕರಿಸುವುದಕ್ಕಾಗಿ ಆಗಮಿಸಬೇಕೆಂದು ಏಕಕಾಲದಲ್ಲಿ ಆಮಂತ್ರಿಸಿದರು (೨೪-೨೫). ಭಗವಂತನು ಅವರ ಪ್ರಾರ್ಥನೆಯನ್ನು ಮನ್ನಿಸಿ ಈರ್ವರಿಗೂ ಸಂತೋಷವಾಗಲೆಂಬ ಉದ್ದೇಶದಿಂದ ಎರಡು ರೂಪಗಳನ್ನು ಧರಿಸಿ, ಆ ವಿಷಯವು ಅವರಿಗೆ ತಿಳಿಯದಂತೆ, ಅವರಿಬ್ಬರ ಮನೆಗೂ ಹೋದನು. ದುರ್ಜನರಿಗೆ ಕೇಳುವುದಕ್ಕೂ ದುರ್ಲಭರಾದ ಆ ಮಹಾತ್ಮರು ಗೃಹಕ್ಕೆ ಬರಲಾಗಿ, ಜನಕವಂಶೀಯನೂ ವಿಶಾಲಹೃದಯನೂ ಆದ ಬಹುಲಾಶ್ವರಾಜನು ಉತ್ತಮಪೀಠಗಳನ್ನು ತರಿಸಿ ಶ್ರೀಕೃಷ್ಣನನ್ನೂ ಮುನಿಗಳನ್ನೂ ಸುಖವಾಗುವಂತೆ ಕುಳ್ಳಿರಿಸಿದನು (೨೬-೨೭). ಉಕ್ಕೇರಿದ ಭಕ್ತಿಯಿಂದ ಬಹುಲಾಶ್ವನ ಕಣ್ಣುಗಳಲ್ಲಿ ಆನಂದಬಾಷ್ಪಗಳು ತುಳುಕುತ್ತಿದ್ದವು. ಅವರ ಪಾದಗಳನ್ನು ತೊಳೆದು

ಸಕುಟುಂಬೋ ವಹನ್ ಮೂರ್ಧ್ನಾ ಪೂಜಯಾಂಚಕ್ರ ಈಶ್ವರಾನ್ ।
ಗಂಧಮಾಲ್ಯಾಂಬರಾಕಲ್ಪಧೂಪದೀಪಾರ್ಘ್ಯ ಗೋವೃಷೈಃ ॥ ೨೯

ವಾಚಾ ಮಧುರಯಾ ಪ್ರೀಣನ್ನಿದಮಾಹಾನ್ನತರ್ಪಿತಾನ್ ।
ಪಾದಾವಂಕಗತೌ ವಿಷ್ಣೋಃ ಸಂಸ್ಪೃಶನ್ ಶನಕೈರ್ಮುದಾ ॥ ೩೦

ರಾಜೋವಾಚ-
ಭವಾನ್ ಹಿ ಸರ್ವಭೂತಾನಾಮಾತ್ಮಾ ಸಾಕ್ಷೀ ಸ್ವದೃಗ್ ವಿಭೋ ।
ಅಥ ನಸ್ತ್ವತ್ಪದಾಂಭೋಜಂ ಸ್ಮರತಾಂ ದರ್ಶನಂ ಗತಃ ॥ ೩೧

ಸ್ವವಚಸ್ತದೃತಂ ಕರ್ತುಮಸ್ಮದ್ದೃಗ್ಗೋಚರೋ ಭವಾನ್ ।
ಯದಾತ್ಥೈಕಾಂತಭಕ್ತಾನ್ಮೇ ನಾನಂತಃ ಶ್ರೀರಜಃ ಪ್ರಿಯಃ ॥ ೩೨

ಕೋ ನು ತ್ವಚ್ಚರಣಾಂಭೋಜಮೇವಂವಿದ್ ವಿಸೃಜೇತ್ ಪುಮಾನ್ ।
ನಿಷ್ಕಿಂಚನಾನಾಂ ಶಾಂತಾನಾಂ ಮುನೀನಾಂ ಯಸ್ತ್ವಮಾತ್ಮದಃ ॥ ೩೩

ಲೋಕಪಾವನವಾದ ತೀರ್ಥೋದಕವನ್ನು ಕುಟುಂಬ ಸಮೇತನಾಗಿ ಸ್ವೀಕರಿಸಿ ತಲೆಯಮೇಲೆ ಪ್ರೋಕ್ಷಿಸಿಕೊಂಡನು. ಗಂಧ, ಮಾಲ್ಯ, ವಸ್ತ್ರ ಅಲಂಕಾರ, ಧೂಪ, ದೀಪ, ಮಧುಪರ್ಕ, ಗೋವೃಷಗಳನ್ನು ಅರ್ಪಿಸಿದನು (೨೮-೨೯). ಅನಂತರ ಎಲ್ಲರಿಗೂ ಮೃಷ್ಟಾನ್ನದಿಂದ ಸವಿಮಾತುಗಳೊಡನೆ ಭೋಜನಮಾಡಿಸಿದನು. ಬಳಿಕ ಶ್ರೀಕೃಷ್ಣನ ಪಾದಗಳನ್ನು ತನ್ನ ತೊಡೆಯಮೇಲಿಟ್ಟುಕೊಂಡು ಮೆಲ್ಲನೆ ನೀವುತ್ತ ಆ ರಾಜನು ''ಹೇ ಪ್ರಭು, ನೀನು ಸರ್ವಭೂತಗಳಿಗೆ ಆತ್ಮನೂ ಸಾಕ್ಷಿಯೂ ಸ್ವಯಂಪ್ರಕಾಶನೂ ಆಗಿರುವೆ. ಆದ್ದರಿಂದಲೇ ನಿನ್ನ ಅಡಿದಾವರೆಯನ್ನು ನೆನೆಯುವ ನಮಗೆ ದರ್ಶನವನ್ನು ನೀಡಿದೆ (೩೦-೩೧). ''ಏಕಾಂತಭಕ್ತನು ನನಗೆ ಅತ್ಯಂತ ಪ್ರಿಯನಾದವನು. ಆದಿಶೇಷ, ಲಕ್ಷ್ಮೀದೇವಿ, ಬ್ರಹ್ಮ-ಇವರು ಸಹ ಭಕ್ತನಿಗಿಂತ ನನಗೆ ಅಧಿಕಪ್ರಿಯರಲ್ಲ'' ಎಂದು ಹೇಳುತ್ತೀಯಲ್ಲವೆ ? ಆ ಮಾತನ್ನು ಸತ್ಯವೆಂದು ತೋರಿಸಲು ನಮ್ಮ ಕಣ್ಣಿಗೆ ಗೋಚರಿಸಿದೆ (೩೨). ಅಕಿಂಚನರೂ ಶಾಂತರೂ ಆದ ಮುನಿಗಳಿಗೆ ಆತ್ಮಜ್ಞಾನವನ್ನುಂಟು ಮಾಡಿ ಆತ್ಮವನ್ನೇ ಅರ್ಪಿಸ ತಕ್ಕವನು ನೀನು. ಇದನ್ನು ಬಲ್ಲ ಯಾವ ಮನುಷ್ಯನೂ ತಾನೇ ನಿನ್ನ ಅಡಿದಾವರೆ ಯನ್ನು ತೊರೆದಾನು ? (೩೩). ಸಂಸಾರದಲ್ಲಿ ಸಿಕ್ಕಿ ನರಳುವ ಜನರ ಕಷ್ಟವನ್ನು

ಯೋಽವತೀರ್ಯ ಯದೋರ್ವಂಶೇ ನೃಣಾಂ ಸಂಸರತಾಮಿಹ ।
ಯಶೋ ವಿತೇನೇ ತಚ್ಛಾಂತ್ಯೈ ತ್ರೈಲೋಕ್ಯವೃಜಿನಾಪಹಮ್ ॥ ೩೪

ನಮಸ್ತುಭ್ಯಂ ಭಗವತೇ ಕೃಷ್ಣಾಯಾಕುಂಠಮೇಧಸೇ ।
ನಾರಾಯಣಾಯ ಋಷಯೇ ಸುಶಾಂತಂ ತಪ ಈಯುಷೇ ॥ ೩೫

ದಿನಾನಿ ಕತಿಚಿದ್ ಭೂಮನ್ ಗೃಹಾನ್ ನೋ ನಿವಸ ದ್ವಿಜೈಃ ।
ಸಮೇತಃ ಪಾದರಜಸಾ ಪುನೀಹೀದಂ ನಿಮೇಃ ಕುಲಮ್ ॥ ೩೬

ಇತ್ಯುಪಾಮಂತ್ರಿತೋ ರಾಜ್ಞಾ ಭಗವಾನ್ ಲೋಕಭಾವನಃ ।
ಉವಾಸ ಕುರ್ವನ್ ಕಲ್ಯಾಣಂ ಮಿಥಿಲಾನರಯೋಷಿತಾಮ್ ॥ ೩೭

ಶ್ರುತದೇವೋಽಚ್ಯುತಂ ಪ್ರಾಪ್ತಂ ಸ್ವಗೃಹಾನ್ ಜನಕೋ ಯಥಾ ।
ನತ್ವಾ ಮುನೀನ್ ಸುಸಂಹೃಷ್ಟೋ ಧುನ್ವನ್ ವಾಸೋ ನನರ್ತ ಹ ॥ ೩೮

ನೀಗುವುದಕ್ಕಾಗಿ ಯದುವಂಶದಲ್ಲಿ ಅವತರಿಸಿ, ಮೂರುಲೋಕದ ಪಾಪವನ್ನು ತೊಳೆಯಬಲ್ಲ ಕೀರ್ತಿಯನ್ನು ವಿಸ್ತರಿಸಿದ್ದೀಯೆ. ಹೇ ಭಗವನ್, ಕೃಷ್ಣ ಅಪ್ರತಿಬದ್ಧಜ್ಞಾನಶಕ್ತಿಯುಳ್ಳವನೂ ಶಾಂತವಾದ ತಪಸ್ಸಿನಲ್ಲಿ ನಿರತನೂ ನಾರಾಯಣಋಷಿಯೂ ಆದ ನಿನಗೆ ನಮಸ್ಕಾರ! (೩೪-೩೫). ಹೇ ಭೂಮನ್, ಕೆಲವು ದಿನಗಳವರೆಗಾದರೂ ಈ ಮುನಿಗಳೊಡನೆ ನಮ್ಮ ಮನೆಯಲ್ಲಿ ವಸತಿಮಾಡು, ಪಾದಧೂಳಿಯಿಂದ ಈ ನಿಮಿಕುಲವನ್ನು ಉದ್ಧರಿಸು'' ಎಂದು ನುಡಿದನು (೩೬). ಹೀಗೆ ಬಹುಲಾಶ್ವರಾಜನಿಂದ ಪ್ರಾರ್ಥಿತನಾಗಿ ಲೋಕಕರ್ತನಾದ ಭಗವಂತನು ಮಿಥಿಲಾನಗರದ ಸ್ತ್ರೀಪುರುಷರಿಗೆ ಮಂಗಳವನ್ನುಂಟುಮಾಡುತ್ತ ಕೆಲವು ದಿನ ಅಲ್ಲಿ ವಾಸವಾಗಿದ್ದನು (೩೭). ಇತ್ತಲಾಗಿ ಶ್ರುತದೇವನು ತನ್ನ ಮನೆಗೆ ಬಂದ ಅಚ್ಯುತನಿಗೂ ಮುನಿಗಳಿಗೂ ಮಿಥಿಲಾರಾಜನಂತೆಯೇ ನಮಸ್ಕರಿಸಿ ಆನಂದಾತಿಯಶಯದಿಂದ ಬಟ್ಟೆಯನ್ನು ಕೊಡಹುತ್ತ ಕುಣಿದಾಡಿದನು! ಚಾಪೆ, ಮಣೆ, ದರ್ಭಾಸನಗಳನ್ನು ತಂದು ಅವರನ್ನು ಕುಳ್ಳಿರಿಸಿ ಸ್ವಾಗತವನ್ನು ನೀಡಿ ಪತ್ನೀಸಮೇತನಾಗಿ ಅವರ ಪಾದಗಳನ್ನು

ತೃಣಪೀಠಬೃಸೀಷ್ವೇತಾನಾನೀತೇಷೂಪವೇಶ್ಯ ಸಃ।
ಸ್ವಾಗತೇನಾಭಿನಂದ್ಯಾಂಘ್ರೀನ್ ಸಭಾರ್ಯೋಽವನಿಜೇ ಮುದಾ॥ ೩೯

ತದಂಭಸಾ ಮಹಾಭಾಗ ಆತ್ಮಾನಂ ಸಗೃಹಾನ್ವಯಮ್।
ಸ್ನಾಪಯಾಂಚಕ್ರ ಉದ್ಧರ್ಷೋ ಲಬ್ಧಸರ್ವಮನೋರಥಃ॥ ೪೦

ಫಲಾರ್ಹಣೋಶೀರಶಿವಾಮೃತಾಂಬುಭಿ-
ರ್ಮೃದಾ ಸುರಭ್ಯಾ ತುಲಸೀಕುಶಾಂಬುಜೈಃ।
ಆರಾಧಯಾಮಾಸ ಯಥೋಪಪನ್ನಯಾ
ಸಪರ್ಯಯಾ ಸತ್ತ್ವವಿವರ್ಧನಾಂಧಸಾ॥ ೪೧

ಸ ತರ್ಕಯಾಮಾಸ ಕುತೋ ಮಮಾನ್ವಭೂದ್
ಗೃಹಾಂಧಕೂಪೇ ಪತಿತಸ್ಯ ಸಂಗಮಃ।
ಯಃ ಸರ್ವತೀರ್ಥಾಸ್ಪದಪಾದರೇಣುಭಿಃ
ಕೃಷ್ಣೇನ ಚಾಸ್ಯಾತ್ಮನಿಕೇತಭೂಸುರೈಃ॥ ೪೨

ಸೂಪವಿಷ್ಟಾನ್ ಕೃತಾತಿಥ್ಯಾನ್ ಶ್ರುತದೇವ ಉಪಸ್ಥಿತಃ।
ಸಭಾರ್ಯಸ್ವಜನಾಪತ್ಯ ಉವಾಚಾಂಘ್ರ್ಯಭಿಮರ್ಶನಃ॥ ೪೩

ಸಂತೋಷದಿಂದ ತೊಳೆದನು (೩೮-೩೯). ಆ ಪುಣ್ಯಾತ್ಮನು ತನ್ನ ಸರ್ವಾಭೀಷ್ಟಗಳೂ ಸಿದ್ಧಿಸಿದುವೆಂದು ಹರ್ಷಾತಿರೇಕದಿಂದ ಆ ಪಾದೋದಕವನ್ನು ತನ್ನ ಮೇಲೂ ತನ್ನ ಕುಟುಂಬದವರ ಮೇಲೂ ಸುರಿದು ಸ್ನಾನಮಾಡಿಬಿಟ್ಟನು! ಬಳಿಕ ಹಣ್ಣು, ಲಾವಂಚದಿಂದ ಸುಗಂಧಿಯಾದ ಸಿಹಿನೀರು, ಸುವಾಸನೆಯುಳ್ಳ ಮೃತ್ತಿಕೆ, ತುಳಸಿ, ದರ್ಭೆ, ತಾವರೆ, ಸಾತ್ತ್ವಿಕವಾದ ಭೋಜನ-ಮುಂತಾದ ತನಗೆ ಲಭ್ಯವಾದ ಆರಾಧನಾಸಾಮಗ್ರಿಯಿಂದ ಅವರನ್ನು ಸತ್ಕರಿಸಿದನು (೪೦-೪೧). ಅವನು ಮನಸ್ಸಿನಲ್ಲಿ ಹೀಗೆ ಆಲೋಚಿಸುತ್ತಿದ್ದನು : ''ಎಲಾ! ಸಂಸಾರದ ಹಾಳು ಬಾವಿಯಲ್ಲಿ ಬಿದ್ದವನು ನಾನು! ನನಗೆ ಶ್ರೀಕೃಷ್ಣನೊಡನೆ, ಈ ದಿವ್ಯಮೂರ್ತಿಯ ಒಂದೊಂದು ಅಂಗವಾಗಿರುವ ಋಷಿಗಳೊಡನೆ, ಸಮಾಗಮ! ಇವರ ಪಾದಧೂಳಿಗಳಲ್ಲಿ ಸಕಲತೀರ್ಥಗಳೂ ನೆಲೆಸಿವೆ. ಇಂಥವರ ಸಂದರ್ಶನ ನನಗೆ ಹೇಗೆ ಒದಗಿರಬಹುದು! ಆಹಾಹಾ!'' ಎಂದು (೪೨). ಹೀಗೆ ಅತಿಥಿಸತ್ಕಾರವು

ಶ್ರುತದೇವ ಉವಾಚ-

ನಾದ್ಯ ನೋ ದರ್ಶನಂ ಪ್ರಾಪ್ತಃ ಪರಂ ಪರಮಪೂರುಷಃ ।
ಯರ್ಹೀದಂ ಶಕ್ತಿಭಿಃ ಸೃಷ್ಟ್ವಾ ಪ್ರವಿಷ್ಟೋ ಹ್ಯಾತ್ಮಸತ್ತಯಾ ॥ ೪೪

ಯಥಾ ಶಯಾನಃ ಪುರುಷೋ ಮನಸೈವಾತ್ಮಮಾಯಯಾ ।
ಸೃಷ್ಟ್ವಾ ಲೋಕಂ ಪರಂ ಸ್ವಾಪ್ನಮನುವಿಶ್ಯಾವಭಾಸತೇ ॥ ೪೫

ಶೃಣ್ವತಾಂ ಗದತಾಂ ಶಶ್ವದರ್ಚತಾಂ ತ್ವಾಭಿವಂದತಾಮ್ ।
ನೃಣಾಂ ಸಂವದತಾಮಂತರ್ಹೃದಿ ಭಾಸ್ಯಮಲಾತ್ಮನಾಮ್ ॥ ೪೬

ಹೃದಿಸ್ಥೋಽಪ್ಯತಿದೂರಸ್ಥಃ ಕರ್ಮವಿಕ್ಷಿಪ್ತ ಚೇತಸಾಮ್ ।
ಆತ್ಮ ಶಕ್ತಿಭಿರಗ್ರಾಹ್ಯೋಽಪ್ಯಂತ್ಯುಪೇತಗುಣಾತ್ಮನಾಮ್ ॥ ೪೭

ನಡೆದ ಮೇಲೆ ಶ್ರೀಕೃಷ್ಣನೂ ಮುನಿಗಳೂ ವಿಶ್ರಮಿಸುತ್ತ ಸುಖವಾಗಿ ಕುಳಿತರು. ಶ್ರುತದೇವನು ತನ್ನ ಪತ್ನೀಪುತ್ರ ಪರಿವಾರದೊಡನೆ ಬಂದು ಕುಳಿತು ಶ್ರೀಕೃಷ್ಣನ ಪಾದವನ್ನು ನೀವುತ್ತ ಹೀಗೆಂದನು (೪೩) : ''ಹೇ ಪ್ರಭು, ಪರಮಪುರುಷನಾದ ನೀನು ನಮಗೆ ಈ ದಿನ ಇದಂಪ್ರಥಮವಾಗಿ ಗೋಚರಿಸಿದವನಲ್ಲ ! ಏಕೆಂದರೆ, ಸತ್ತ್ವರಜಸ್ತಮೋಗುಣಗಳೆಂಬ ನಿನ್ನ ಶಕ್ತಿಗಳಿಂದ ಈ ವಿಶ್ವವನ್ನು ಸೃಜಿಸಿ ಆತ್ಮಸತ್ತೆಯಿಂದ (ಜೀವರೂಪನಾಗಿ) ಇದನ್ನು ಅನುಪ್ರವೇಶಿಸಿದ್ದೀಯೆ[೧] (೪೪). ಮಲಗಿರುವ ಮನುಷ್ಯನು ತನ್ನ ಅವಿದ್ಯೆಯಿಂದ ಮನಸ್ಸಿನಲ್ಲಿಯೇ ಸ್ವಪ್ನಲೋಕವನ್ನು ನಿರ್ಮಿಸಿಕೊಂಡು ಅದರಲ್ಲಿ ಅನುಪ್ರವೇಶಿಸಿ ತೋರುವ ಹಾಗೆ ! (೪೫). ಅನವರತವೂ ನಿನ್ನ ಮಹಿಮೆಯನ್ನು ಕೇಳುತ್ತ ನುಡಿಯುತ್ತ, ನಿನ್ನನ್ನು ಪೂಜಿಸುತ್ತ ವಂದಿಸುತ್ತ, ನಿನ್ನ ವಿಷಯವಾಗಿ ಸಂಭಾಷಿಸುತ್ತ ಇರುವ ಶುದ್ಧಾತ್ಮರ ಹೃದಯ ಮಧ್ಯದಲ್ಲಿ ಬೆಳಗುತ್ತಿದ್ದೀಯೆ (೪೬). ನೀನು ಹೃದಯದಲ್ಲೇ ಇದ್ದರೂ ಕರ್ಮ

೧''ತತ್ ಸೃಷ್ಟ್ವಾ ತದೇವಾನುಪ್ರಾವಿಶತ್'' ಎಂಬ ಶ್ರುತಿಯಂತೆ ಪರಮಾತ್ಮನು ಜೀವರೂಪದಿಂದ ಅನುಪ್ರವೇಶಮಾಡಿದ್ದಾನೆ. ಸರ್ವಜೀವರಿಗೂ ಪರಮಾತ್ಮನು ಅಹಂ ಪ್ರತ್ಯಯ ಗೋಚರನಾಗಿರುವುದರಿಂದ ಹೊಸಬನಲ್ಲ ಎಂದು ಅಭಿಪ್ರಾಯ. ಮಾಯಾಸೃಷ್ಟಿ ಮತ್ತು ಅನುಪ್ರವೇಶಗಳಿಗೆ ದೃಷ್ಟಾಂತವಾಗಿ ಸ್ವಪ್ನವನ್ನು ೪೫ನೆಯ ಶ್ಲೋಕದಲ್ಲಿ ಹೇಳಲಾಗಿದೆ.

ನಮೋಽಸ್ತು ತೇಽಧ್ಯಾತ್ಮವಿದಾಂ ಪರಾತ್ಮನೇ
ಅನಾತ್ಮನೇ ಸ್ವಾತ್ಮವಿಭಕ್ತಮೃತ್ಯವೇ।
ಸಕಾರಣಾಕಾರಣಲಿಂಗಮೀಯುಷೇ
ಸ್ವಮಾಯಯಾ ಸಂವೃತರುದ್ಧದೃಷ್ಟಯೇ॥ ೪೮

ಸ ತ್ವಂ ಶಾಧಿ ಸ್ವಭೃತ್ಯಾನ್ ನಃ ಕಿಂ ದೇವ ಕರವಾಮಹೇ।
ಏತದಂತೋ ನೃಣಾಂ ಕ್ಲೇಶೋ ಯದ್ ಭವಾನಕ್ಷಿಗೋಚರಃ॥ ೪೯

ಶ್ರೀಶುಕ ಉವಾಚ-

ತದುಕ್ತಮಿತ್ಯುಪಾಕರ್ಣ್ಯ ಭಗವಾನ್ ಪ್ರಣತಾರ್ತಿಹಾ।
ಗೃಹೀತ್ವಾಪಾಣಿನಾ ಪಾಣಿಂ ಪ್ರಹಸಂಸ್ತಮುವಾಚ ಹ॥ ೫೦

ಶ್ರೀ ಭಗವಾನುವಾಚ-

ಬ್ರಹ್ಮಂಸ್ತೇಽನುಗ್ರಹಾರ್ಥಾಯ ಸಂಪ್ರಾಪ್ತಾನ್ ವಿದ್ಧ್ಯಮೂನ್
ಮುನೀನ್।
ಸಂಚರಂತಿ ಮಯಾ ಲೋಕಾನ್ ಪುನಂತಃ ಪಾದರೇಣುಭಿಃ॥ ೫೧

ವಾಸನೆಗಳಿಂದ ಕಲುಷಿತಚಿತ್ತರಾದವರಿಗೆ ಬಹುದೂರ ! ಅಹಂಕಾರಾದಿ ದೋಷಯುಕ್ತರಿಗೆ ನಿಲುಕದವನಾದರೂ ಗುಣಶಾಲಿಗಳಿಗೆ ಹತ್ತಿರದಲ್ಲಿಯೇ ಇರುತ್ತೀಯೆ ! (೪೭). ಆತ್ಮಜ್ಞಾನಿಗಳಿಗೆ ಶ್ರೇಷ್ಠವಾದ ಆತ್ಮಸ್ವರೂಪನೂ ಆತ್ಮಜ್ಞಾನವಿಲ್ಲದವರಿಗೆ ನಿನ್ನಿಂದ ಬೇರ್ಪಡಿಸಿ ಮೃತ್ಯುವೆಂಬ ಸಂಸಾರವನ್ನು ಕೊಡತಕ್ಕವನೂ ಆದ ನಿನಗೆ ನಮಸ್ಕಾರ ! ಕಾರಣಜನ್ಯವಾದ ಮಹದಾದಿ ಕಾರ್ಯವೂ ಕಾರಣರಹಿತವಾದ ಅನಾದಿಪ್ರಕೃತಿಯೂ ನಿನಗೆ ನಿಯಮ್ಯವಾದ ಉಪಾಧಿಯಾಗಿದೆ. ನಿನ್ನ ಮಾಯೆಯಿಂದ ಜನರ ಜ್ಞಾನಶಕ್ತಿಯನ್ನು ಆವರಿಸಿ ತಡೆದುಬಿಟ್ಟಿದ್ದೀಯೆ! ನಿನಗೆ ನಮಸ್ಕಾರ! (೪೮). ಹೇ ದೇವ, ನಿನ್ನ ಭೃತ್ಯರಾದ ನಾವು ಏನು ಮಾಡಬೇಕೆಂದು ಅಪ್ಪಣೆ ಮಾಡು. ನೀನು ಕಣ್ಣಿಗೆ ಕಾಣಿಸಿದೆಯೆಂದರೆ ಆ ಜನರ ಕ್ಲೇಶಗಳು ಕೊನೆಗಂಡವೆಂದು ಅರ್ಥ ! '' ಎಂದನು (೪೯). ನಮಿಸಿದವರ ಕಷ್ಟವನ್ನು ದೂರಮಾಡುವ ಭಗವಂತನು ಶ್ರುತದೇವನ ನುಡಿಯನ್ನು ಕೇಳಿ ನಗುತ್ತ ಆವನ ಕೈಯನ್ನು ಹಿಡಿದುಕೊಂಡು ''ಹೇ ಬ್ರಾಹ್ಮಣ, ನಿನ್ನನ್ನು

ದೇವಾಃ ಕ್ಷೇತ್ರಾಣಿ ತೀರ್ಥಾನಿ ದರ್ಶನಸ್ಪರ್ಶನಾರ್ಚನೈಃ ।
ಶನೈಃ ಪು ನಂತಿ ಕಾಲೇನ ತದಪ್ಯರ್ಹತ್ತಮೇಕ್ಷಯಾ ॥ ೫೨

ಬ್ರಾಹ್ಮಣೋ ಜನ್ಮನಾ ಶ್ರೇಯಾನ್ ಸರ್ವೇಷಾಂ ಪ್ರಾಣಿನಾಮಿಹ ।
ತಪಸಾ ವಿದ್ಯಯಾ ತುಷ್ಟ್ಯಾ ಕಿಮು ಮತ್ಕಲಯಾ ಯುತಃ ॥ ೫೩

ನ ಬ್ರಾಹ್ಮಣಾನ್ಮೇ ದಯಿತಂ ರೂಪಮೇತಚ್ಚತುರ್ಭುಜಮ್ ।
ಸರ್ವವೇದಮಯೋ ವಿಪ್ರಃ ಸರ್ವದೇವಮಯೋ ಹ್ಯಹಮ್ ॥ ೫೪

ದುಷ್ಪ್ರಜ್ಞಾ ಅವಿದಿತ್ವೈವಮವಜಾನಂತ್ಯಸೂಯವಃ ।
ಗುರುಂ ಮಾಂ ವಿಪ್ರಮಾತ್ಮಾನಮರ್ಚಾದಾವಿಜ್ಯದೃಷ್ಟಯಃ ॥ ೫೫

ಚರಾಚರಮಿದಂ ವಿಶ್ವಂ ಭಾವಾ ಯೇ ಚಾಸ್ಯ ಹೇತವಃ ।
ಮದ್ರೂಪಾಣೀತಿ ಚೇತಸ್ಯಾಧತ್ತೇ ವಿಪ್ರೋ ಮದೀಕ್ಷಯಾ ॥ ೫೬

ಅನುಗ್ರಹಿಸುವುದಕ್ಕಾಗಿ ಈ ಮುನಿಗಳು ಬಂದಿದ್ದಾರೆಂದು ತಿಳಿ. ತಮ್ಮ ಪಾದಧೂಳಿಗಳಿಂದ ಲೋಕವನ್ನು ಪಾವನಗೊಳಿಸುತ್ತ ನನ್ನೊಡನೆ ಸಂಚರಿಸುತ್ತಿದ್ದಾರೆ (೫೦-೫೧). ದೇವತೆಗಳು, ಪುಣ್ಯಕ್ಷೇತ್ರಗಳು ಮತ್ತು ಪುಣ್ಯತೀರ್ಥಗಳು ದರ್ಶನ, ಸ್ಪರ್ಶನ, ಅರ್ಚನೆಗಳನ್ನು ಮಾಡುವುದರಿಂದ ಸೇವಿಸತಕ್ಕವರನ್ನು ಮೆಲ್ಲನೆ ಕಾಲಾಂತರದಲ್ಲಿ ಪಾವನಗೊಳಿಸುತ್ತವೆ. ಆ ಪಾವನತ್ವವು ಪೂಜ್ಯರಾದ ಈ ಋಷಿಗಳ ದರ್ಶನ ಮಾತ್ರದಿಂದ ಒಡನೆಯೇ ಲಭಿಸುತ್ತದೆ (೫೨). ಸಕಲ ಪ್ರಾಣಿಗಳಲ್ಲಿಯೂ ಬ್ರಾಹ್ಮಣನು ಜನ್ಮದಿಂದ ಶ್ರೇಷ್ಠನಾದವನು. ಇನ್ನು ತಪಸ್ಸು, ವಿದ್ಯೆ, ಸಂತೃಪ್ತಿ ನನ್ನ ಉಪಾಸನೆ-ಇವುಗಳೂ ಅವನಲ್ಲಿದ್ದರೆ ಹೇಳುವುದೇನು? ನನಗೆ ಚತುರ್ಭುಜ ಯುಕ್ತವಾದ ಈ ದೇಹವೂ ಸಹ ಬ್ರಾಹ್ಮಣನಿಗಿಂತ ಪ್ರಿಯವಾದ್ದಲ್ಲ. ಏಕೆಂದರೆ, ಬ್ರಾಹ್ಮಣನು ಸರ್ವವೇದ ಮಯ, ನಾನು ಸರ್ವದೇವಮಯ[೧] (೫೩-೫೪). ಈ ವಿಷಯವನ್ನರಿಯದಿರುವ ಬುದ್ಧಿಹೀನರು ಪ್ರತಿಮಾದಿಗಳಲ್ಲಿ ದೇವಬುದ್ಧಿಯನ್ನಿಟ್ಟು, ಲೋಕಗುರುವೂ ಆತ್ಮಸ್ವರೂಪನು ಬ್ರಾಹ್ಮಣರೂಪಿಯೂ ಆದ ನನ್ನನ್ನು ಹೊಟ್ಟೆಕಿಚ್ಚಿನಿಂದ

೧ ವೇದಗಳಿಂದ ಪ್ರಕಾಶಿತರಾಗತಕ್ಕವರು ದೇವತೆಗಳು. ವೇದಗಳು ಪ್ರಮಾಣ, ದೇವತೆಗಳುಪ್ರಮೇಯ. ಪ್ರಮೇಯವು ಪ್ರಮಾಣಾಧೀನವಾದ್ದರಿಂದಪ್ರಮಾಣವಾದವೇದವೇ ಉತ್ಕೃಷ್ಟವೆಂದು ಅಭಿಪ್ರಾಯ.

ತಸ್ಮಾದ್ ಬ್ರಹ್ಮ ಋಷೀನೇತಾನ್ ಬ್ರಹ್ಮನ್ ಮಚ್ಛ್ರದ್ಧಯಾರ್ಚಯ।
ಏವಂ ಚೇದರ್ಚಿತೋಽಸ್ಮ್ಯದ್ಧಾ ನಾನ್ಯಥಾ ಭೂರಿಭೂತಿಭಿಃ॥ ೫೭

ಶ್ರೀಶುಕಉವಾಚ-

ಸ ಇತ್ಥಂ ಪ್ರಭುಣಾಽಽದಿಷ್ಟಃ ಸಹಕೃಷ್ಣಾನ್ ದ್ವಿಜೋತ್ತಮಾನ್।
ಆರಾಧ್ಯೈಕಾತ್ಮಭಾವೇನ ಮೈಥಿಲಶ್ಚಾಪ ಸದ್ಗತಿಮ್॥ ೫೮

ಏವಂ ಸ್ವಭಕ್ತಯೋಃ ರಾಜನ್ ಭಗವಾನ್ ಭಕ್ತಭಕ್ತಿಮಾನ್।
ಉಷಿತ್ವಾಽಽದಿಶ್ಯ ಸನ್ಮಾರ್ಗಂ ಪುನರ್ದ್ವಾರವತೀಮಗಾತ್॥ ೫೯

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಷಡಶೀತಿತಮಾಧ್ಯಾಯಃ

ಉಪೇಕ್ಷಿಸುತ್ತಾರೆ (೫೫). ವಿಪ್ರನಾದವನು ಎಲ್ಲೆಲ್ಲಿಯೂ ನನ್ನನ್ನೇ ನೋಡುತ್ತ ಚರಾಚರಾತ್ಮಕವಾದ ಈ ವಿಶ್ವವೂ ಇದಕ್ಕೆ ಕಾರಣಗಳಾದ ಮಹದಾದಿಗಳೂ ನನ್ನ ರೂಪಗಳೇ ಎಂದು ಮನಸ್ಸಿನಲ್ಲಿ ಗಟ್ಟಿಮಾಡಿಕೊಂಡಿರುತ್ತಾನೆ (೫೬). ಆದ್ದರಿಂದ, ಓ ಬ್ರಾಹ್ಮಣ, ಈ ಬ್ರಹ್ಮರ್ಷಿಗಳು ನಾನೇ ಎಂದು ತಿಳಿದು ಭಕ್ತಿಯಿಂದ ಇವರನ್ನು ಅರ್ಚಿಸು. ಹೀಗೆ ಮಾಡಿದರೆ ದಿಟವಾಗಿಯೂ ನಾನೇ ಅರ್ಚಿತನಾಗುತ್ತೇನೆ. ಹೀಗಲ್ಲದೆ ಪ್ರತಿಮಾದಿಗಳನ್ನು ವಿಪುಲೈಶ್ವರ್ಯಗಳಿಂದ ಪೂಜಿಸಿದರೂ ನನ್ನ ಪೂಜೆಯಾಗುವುದಿಲ್ಲ'' ಎಂದು ಹೇಳಿದನು (೫೭). ಈ ಪ್ರಕಾರವಾಗಿ ಪ್ರಭುವಾದ ಶ್ರೀಕೃಷ್ಣನು ಉಪದೇಶಿಸಲು ಶ್ರುತದೇವನು ಶ್ರೀಕೃಷ್ಣನನ್ನೂ ಆ ದ್ವಿಜೋತ್ತಮರನ್ನೂ ಒಬ್ಬನೇ ಆತ್ಮನೆಂಬ ಅಭೇದಬುದ್ಧಿಯಿಂದ ಅರ್ಚಿಸಿ ಸದ್ಗತಿಯನ್ನು ಪಡೆದನು. ಹಾಗೆಯೇ ಮಿಥಿಲಾರಾಜನಾದ ಬಹುಲಾಶ್ವನೂ ಅರ್ಚಿಸಿ ಸಿದ್ಧಿಯನ್ನೈದಿದನು (೫೮). ಪರೀಕ್ಷಿತರಾಜ, ಭಕ್ತರ ಭಕ್ತನಾದ ಶ್ರೀಕೃಷ್ಣನು ತನ್ನ ಭಕ್ತರಿಗೆ ಸನ್ಮಾರ್ಗವನ್ನು ಬೋಧಿಸಿ, ಕೆಲವು ದಿನ ಅಲ್ಲಿದ್ದು ಮತ್ತೆ ದ್ವಾರಕೆಗೆ ಹಿಂದಿರುಗಿದನು (೫೯).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಂಬತ್ತಾರನೆಯ ಅಧ್ಯಾಯ

ಸಪ್ತಾಶೀತಿತಮಾಧ್ಯಾಯಃ

ಪರೀಕ್ಷಿದುವಾಚ-

ಬ್ರಹ್ಮನ್ ಬ್ರಹ್ಮಣ್ಯನಿರ್ದೇಶ್ಯೇ ನಿರ್ಗುಣೇ ಗುಣವೃತ್ತಯಃ।
ಕಥಂ ಚರಂತಿ ಶ್ರುತಯಃ ಸಾಕ್ಷಾತ್ ಸದಸತಃ ಪರೇ ॥ ೧

ಶ್ರೀಶುಕ ಉವಾಚ-

ಬುದ್ಧೀಂದ್ರಿಯಮನಃಪ್ರಾಣಾನ್ ಜನಾನಾಮಸೃಜತ್ ಪ್ರಭುಃ।
ಮಾತ್ರಾರ್ಥಂ ಚ ಭವಾರ್ಥಂ ಚ ಆತ್ಮನೇಽಕಲ್ಪನಾಯ ಚ ॥ ೨

ಸೈಷಾ ಹ್ಯುಪನಿಷದ್ ಬ್ರಾಹ್ಮೀ ಪೂರ್ವೇಷಾಂ ಪೂರ್ವಜೈರ್ಧೃತಾ।
ಶ್ರದ್ಧಯಾ ಧಾರಯೇದ್ ಯಸ್ತಾಂ ಕ್ಷೇಮಂ ಗಚ್ಛೇದಕಿಂಚನಃ॥ ೩

ಅಧ್ಯಾಯ ೮೭

ಶ್ರುತಿಗೀತೆ. ಶ್ರುತಿವಾಕ್ಯಗಳು ನಿರ್ಗುಣವಾದ ಬ್ರಹ್ಮವಸ್ತುವನ್ನು ಹೇಗೆ ಬೋಧಿಸುತ್ತವೆ? ಎಂಬ ಪ್ರಶ್ನೆಗೆ ಉತ್ತರವಾಗಿ ವೇದಸ್ತುತಿ- ವೇದಗಳು ಸ್ತುತಿಸಿದ ವಿಧಾನ.

ಪರೀಕ್ಷಿತರಾಜನು ಹೀಗೆಂದನು : "ಬ್ರಹ್ಮರ್ಷಿಗಳೆ, ಪರಬ್ರಹ್ಮವಾದರೋ ಕಾರ್ಯಕಾರಣಗಳಿಗಿಂತ ಆಚೆಗಿದ್ದು ಯಾವ ಸಂಬಂಧವೂ ಇಲ್ಲದೆ ಅಸಂಗವಾದದ್ದು. ಆದ್ದರಿಂದ ನಿರ್ಗುಣವೆನಿಸಿದೆ. ಗುಣರಹಿತವಾದ್ದರಿಂದ ಅದು ಹೀಗಿದೆಯೆಂದು ನಿರ್ದೇಶಿಸಲು ಶಕ್ಯವಾದ್ದಲ್ಲ. ಶ್ರುತಿವಾಕ್ಯಗಳು ಗುಣಪೂರ್ವಕವಾಗಿ ವಸ್ತುವನ್ನು ನಿರ್ದೇಶಿಸಬಲ್ಲವು. ಅವು ನಿರ್ಗುಣವಾದ ಬ್ರಹ್ಮವನ್ನು ಹೇಗೆ ಬೋಧಿಸುತ್ತವೆ?" (೧). ಆಗ ಶುಕಮಹರ್ಷಿಗಳು ಹೇಳಿದರು : ಸ್ವತಂತ್ರನಾದ ಈಶ್ವರನು ಜೀವರಿಗೆ (ಭೋಗ್ಯಗಳಾದ) ಶಬ್ದಾದಿ ವಿಷಯಗಳಿಗಾಗಿಯೂ ಜನ್ಮಾದಿಕರ್ಮಗಳಿಗಾಗಿಯೂ (ಲೋಕಾಂತರಗಾಮಿಯಾಗುವ) ಜೀವಾತ್ಮನಿಗೆ ಫಲಭೋಗಕ್ಕಾಗಿಯೂ ಕಲ್ಪನಾತೀತವಾದ ಮೋಕ್ಷಕ್ಕಾಗಿಯೂ ಉಪಯುಕ್ತ

---

೧ ವಿಷಯ = ಅರ್ಥ, ಜನ್ಮಾದಿಕರ್ಮ = ಧರ್ಮ, ಫಲಭೋಗ = ಕಾಮ, ಅಕಲ್ಪನ = ಮೋಕ್ಷ. ಜೀವರಿಗೆ ಪುರುಷಾರ್ಥಚತುಷ್ಟಯವನ್ನು ಪಡೆಯಲು ಬುದ್ಧಿ, ಇಂದ್ರಿಯ-ಮೊದಲಾದವುಗಳ ಸೃಷ್ಟಿಯಾಯಿತೆಂದು ಅಭಿಪ್ರಾಯ. ಅನುಬಂಧವನ್ನು ನೋಡಿ.

ಅತ್ರ ತೇ ವರ್ಣಯಿಷ್ಯಾಮಿ ಗಾಥಾಂ ನಾರಾಯಣಾನ್ವಿತಾಮ್ ।
ನಾರದಸ್ಯ ಚ ಸಂವಾದಮೃಷೇರ್ನಾರಾಯಣಸ್ಯ ಚ ॥ ೪

ಏಕದಾ ನಾರದೋ ಲೋಕಾನ್ ಪರ್ಯಟನ್ ಭಗವತ್ಪ್ರಿಯಃ ।
ಸನಾತನಮೃಷಿಂ ದ್ರಷ್ಟುಂ ಯಯೌ ನಾರಾಯಣಾಶ್ರಮಮ್ ॥ ೫

ಯೋ ವೈ ಭಾರತವರ್ಷೇಽಸ್ಮಿನ್ ಕ್ಷೇಮಾಯ ಸ್ವಸ್ತಯೇ ನೃಣಾಮ್ ।
ಧರ್ಮಜ್ಞಾನಶಮೋಪೇತಮಾಕಲ್ಪಾದಾಸ್ಥಿತಸ್ತಪಃ ॥ ೬

ತತ್ರೋಪವಿಷ್ಟಮೃಷಿಭಿಃ ಕಲಾಪಗ್ರಾಮವಾಸಿಭಿಃ ।
ಪರೀತಂ ಪ್ರಣತೋಽಪೃಚ್ಛದಿದಮೇವ ಕುರೂದ್ವಹ ॥ ೭

ತಸ್ಮೈ ಹ್ಯವೋಚದ್ ಭಗವಾನೃಷೀಣಾಂ ಶೃಣ್ವತಾಮಿದಮ್ ।
ಯೋ ಬ್ರಹ್ಮವಾದಃ ಪೂರ್ವೇಷಾಂ ಜನಲೋಕನಿವಾಸಿನಾಮ್ ॥ ೮

ವಾಗಲೆಂದು ಬುದ್ಧಿ, ಇಂದ್ರಿಯ, ಮನಸ್ಸು, ಪ್ರಾಣಗಳೆಂಬ ಉಪಾಧಿಗಳನ್ನು ಸೃಜಿಸಿದನು (೨). ಸಗುಣವನ್ನು ಹೇಳುತ್ತ ನಿರ್ಗುಣದಲ್ಲಿ ಪರ್ಯವಸಾನಗೊಳಿಸುವ ವೇದಾಂತಶ್ರುತಿಯು ಬ್ರಹ್ಮಪ್ರತಿಪಾದಕವೆಂದು ನಮ್ಮ ಹಿರಿಯರಿಗೂ ಹಿರಿಯರಾದ ಸನಕಾದಿಋಷಿಗಳು ನಿರ್ಧರಿಸಿ ಅನುಸಂಧಾನಮಾಡಿದ್ದಾರೆ. ಈ ರೀತಿಯಲ್ಲಿಯೇ ಯಾವನು ಶ್ರದ್ಧೆಯಿಂದ ನಂಬಿ ಅಂತಃಕರಣದಲ್ಲಿ ಧರಿಸುತ್ತಾನೋ ಅವು ದೇಹಾದ್ಯುಪಾಧಿಗಳನ್ನು ಕಳೆದುಕೊಂಡು ಅಭಯವಾದ ಬ್ರಹ್ಮವನ್ನು ಸೇರುವನು (೩). ಈ ವಿಷಯದಲ್ಲಿ ನಾರದನಿಗೂ ನಾರಾಯಣ ಋಷಿಗೂ ನಡೆದ ಸಂವಾದವನ್ನೂ ಆಗ ನಾರಾಯಣನು ಹೇಳಿದ ಒಂದು ಇತಿಹಾಸವನ್ನು ಹೇಳುವೆನು. ಭಗವಂತನಿಗೆ ಪ್ರಿಯನಾದ ನಾರದನು ಲೋಕಸಂಚಾರಮಾಡುತ್ತ ಪುರಾಣಮುನಿಯಾದ ನಾರಾಯಣನನ್ನು ನೋಡಬೇಕೆಂದು ಒಂದುಸಲ ನಾರಾಯಣಾಶ್ರಮಕ್ಕೆ ಹೋದನು (೪-೫). ಆ ನಾರಾಯಣಋಷಿಯು ಲೋಕಕಲ್ಯಾಣಕ್ಕಾಗಿಯೂ ಜನರ ಶ್ರೇಯಸ್ಸಿಗಾಗಿಯೂ ಭರತಖಂಡದಲ್ಲಿ ಧರ್ಮ, ಜ್ಞಾನ, ಶಾಂತಿಗಳಿಂದ ಕೂಡಿದ ತಪಸ್ಸನ್ನು ಕಲ್ಪದ ಆದಿಯಿಂದ ಆಚರಿಸುತ್ತಿದ್ದಾನೆ (೬). ಕುರುವಂಶೋತ್ತಮ-ಪರೀಕ್ಷಿತ, ಹೀಗೆ ಆ ಬದರಿಕಾಶ್ರಮದಲ್ಲಿ ಕಲಾಪಗ್ರಾಮವಾಸಿಗಳಾದ ಋಷಿಗಳಿಂದ ಪರಿವೃತನಾಗಿ ಕುಳಿತಿದ್ದ ನಾರಾಯಣಋಷಿಗೆ ನಾರದನು ನಮಸ್ಕರಿಸಿ ಈ ವಿಷಯವನ್ನೇ ಕೇಳಿದನು

ಶ್ರೀಭಗವಾನುವಾಚ-

ಸ್ವಾಯಂಭುವ ಬ್ರಹ್ಮಸತ್ರಂ ಜನಲೋಕೇಽಭವತ್ ಪುರಾ ।
ತತ್ರಸ್ಥಾನಾಂ ಮಾನಸಾನಾಂ ಮುನೀನಾಮೂರ್ಧ್ವ ರೇತಸಾಮ್ ॥ ೯

ಶ್ವೇತದ್ವೀಪಂ ಗತವತಿ ತ್ವಯಿ ದ್ರಷ್ಟುಂ ತದೀಶ್ವರಮ್ ।
ಬ್ರಹ್ಮವಾದಃ ಸುಸಂವೃತ್ತಃ ಶ್ರುತಯೋ ಯತ್ರ ಶೇರತೇ ।
ತತ್ರ ಹಾಯಮಭೂತ್ ಪ್ರಶ್ನಸ್ತ್ವಂ ಮಾಂ ಯಮನುಪೃಚ್ಛಸಿ ॥ ೧೦

ತುಲ್ಯಶ್ರುತತಪಃಶೀಲಾಸ್ತುಲ್ಯಸ್ವೀಯಾರಿಮಧ್ಯಮಾಃ ।
ಅಪಿ ಚಕ್ರುಃ ಪ್ರವಚನಮೇಕಂ ಶುಶ್ರೂಷವೋಽಪರೇ ॥ ೧೧

ಸನಂದನ ಉವಾಚ-

ಸ್ವಸೃಷ್ಟಮಿದಮಾಪೀಯ ಶಯಾನಂ ಸಹ ಶಕಿಭಿಃ ।
ತದಂತೇ ಬೋಧಯಾಂಚಕ್ರುಸ್ತಲ್ಲಿಂಗೈಃ ಶ್ರುತಯಃ ಪರಮ್ ॥ ೧೨

---

(೭). ಆಗ ಭಗವಂತನು ನಾರದನಿಗೆ ಈ ವಿಚಾರವನ್ನು ಋಷಿಗಳೆಲ್ಲರೂ ಆಲಿಸುತ್ತಿರುವಾಗ ಹೇಳಿದನು. ಇದೇ ಜನಲೋಕನಿವಾಸಿಗಳಾದ ಪ್ರಾಚೀನ ಋಷಿಗಳಲ್ಲಿ ನಡೆದ ಬ್ರಹ್ಮವಾದ (೮). ಭಗವಂತನು ಹೇಳಿದ್ದೇನೆಂದರೆ : ಬ್ರಹ್ಮಪುತ್ರ-ನಾರದ, ಹಿಂದೆ ಜನಲೋಕದಲ್ಲಿ[೧] ವಾಸಮಾಡುವ ಜಿತೇಂದ್ರಿಯರೂ ಬ್ರಹ್ಮನ ಮಾನಸಪುತ್ರರೂ ಆದ ಸನಕಾದಿಗಳ ನಡುವೆ ಬ್ರಹ್ಮಸತ್ರವು[೨] ನಡೆಯಿತು (೯). ಆಗ ನೀನು ಶ್ವೇತದ್ವೀಪಕ್ಕೆ ಅದರ ಅಧಿಪತಿಯಾದ ಅನಿರುದ್ಧ ಮೂರ್ತಿಯನ್ನು ನೋಡಲು ಹೋಗಿದ್ದೆ. ಶ್ರುತಿಗಳನ್ನು ಸಮನ್ವಯಗೊಳಿಸುವ ಬ್ರಹ್ಮವಾದವು ಆ ಸಮಯದಲ್ಲಿ ನಡೆಯಿತು. ನೀನಿಗ ನನ್ನನ್ನು ಕೇಳುತ್ತಿರುವ ಪ್ರಶ್ನೆ ಅಲ್ಲಿ ಎದ್ದಿತು (೧೦). ಆ ಸಭೆಯಲ್ಲಿದ್ದವರೆಲ್ಲರೂ ವಿದ್ಯೆ, ತಪಸ್ಸು, ಶೀಲಗಳಲ್ಲಿ ಸಮಾನರಾದವರು. ಅವರಿಗೆ ನಮ್ಮವನು, ಶತ್ರು, ತಟಸ್ಥ-ಎಂಬ ಭೇದವಿಲ್ಲ. (ಅವರೆಲ್ಲರೂ ಸರ್ವಜ್ಞರಾದರೂ ಕುತೂಹಲದಿಂದ) ಒಬ್ಬನನ್ನು ಪ್ರವಕ್ತೃವನ್ನಾಗಿ ಗೊತ್ತುಮಾಡಿಕೊಂಡು ಉಳಿದವರು ಶುಶ್ರೂಷುಗಳಾಗಿ ಬ್ರಹ್ಮಸತ್ರವನ್ನು ನಡೆಸಿದರು (೧೧). ಆಗ ಪ್ರವಕ್ತೃವಾಗಿದ್ದ ಸನಂದನರು ಜಿಜ್ಞಾಸುಗಳಾದ ಋಷಿಗಳಿಗೆ

---

೧ ಜನಲೋಕ=ಮೇಲ್ಗಡೆ ಇರುವ ಐದನೆಯ ಲೋಕ, ಜನರ್ಲೋಕ.

೨ ಸಮಾನಯೋಗ್ಯತೆಯುಳ್ಳ ವಿದ್ವಾಂಸರು ಒಟ್ಟುಗೂಡಿ ವಿಚಾರವಿನಿಮಯಕ್ಕಾಗಿ ಬ್ರಹ್ಮವನ್ನು ಜಿಜ್ಞಾಸೆ ಮಾಡುವುದು ಬ್ರಹ್ಮಸತ್ರ.

ಯಥಾ ಶಯಾನಂ ಸಮ್ರಾಜಂ ವಂದಿನಸ್ತತ್ಪರಾಕ್ರಮೈಃ।
ಪ್ರತ್ಯೂಷೇಽಭ್ಯೇತ್ಯ ಸುಶ್ಲೋಕೈರ್ಬೋಧಯಂತ್ಯನುಜೀವಿನಃ॥ ೧೩

ಶ್ರುತಯ ಊಚುಃ-

ಜಯ ಜಯ ಜಹ್ಯಜಾಮಜಿತ ದೋಷಗೃಭೀತಗುಣಾಂ
ತ್ವಮಸಿ ಯದಾತ್ಮನಾ ಸಮವರುದ್ಧಸಮಸ್ತಭಗಃ।
ಅಗಜಗದೋಕಸಾಮಖಿಲಶಕ್ತ್ಯವಬೋಧಕ ತೇ
ಕ್ವಚಿದಜಯಾಽಽತ್ಮನಾ ಚ ಚರತೋಽನುಚರೇನ್ನಿಗಮಃ॥ ೧೪

ಬೃಹದುಪಲಬ್ಧಮೇತದವಯಂತ್ಯವಶೇಷತಯಾ
ಯತ ಉದಯಾಸ್ತಮಯೌ ವಿಕೃತೇರ್ಮೃದಿ ವಾವಿಕೃತಾತ್।
ಅತ ಋಷಯೋ ದಧುಸ್ತ್ವಯಿ ಮನೋವಚನಾಚರಿತಂ
ಕಥಮಯಥಾ ಭವಂತಿ ಭುವಿ ದತ್ತಪದಾನಿ ನೃಣಾಮ್॥ ೧೫

ಹೇಳಿದ್ದೇನೆಂದರೆ: ಈಶ್ವರನು ತಾನು ಸೃಷ್ಟಿಸಿದ ಜಗತ್ತನ್ನು ಪ್ರಳಯಕಾಲದಲ್ಲಿ ಉಪಸಂಹರಿಸಿ ಕಾಲಕರ್ಮಾದಿ ಶಕ್ತಿಗಳೊಡನೆ ಯೋಗನಿದ್ರೆಯಲ್ಲಿದ್ದನು.[೧] ಪ್ರಳಯಕಾಲವು ಮುಗಿಯಲಾಗಿ (ಆತನ ನಿಃಶ್ವಾಸರೂಪವಾದ) ಶ್ರುತಿಗಳು ಬ್ರಹ್ಮಪ್ರತಿ ಪಾದಕಗಳಾದ ಸೂಕ್ತಿಗಳಿಂದ ಈಶ್ವರನನ್ನು ಎಚ್ಚರಗೊಳಿಸಿದವು (೧೨). (ರಾತ್ರಿಯಲ್ಲಿ) ನಿದ್ರಿಸುತ್ತಿರುವ ಚಕ್ರವರ್ತಿಯನ್ನು ಅವನ ಅನುಜೀವಿಗಳಾದ ವಂದಿ ಮಾಗಧರು ಬಂದು ಆತನ ಪರಾಕ್ರಮಾದಿಗಳನ್ನು ವರ್ಣಿಸುವ ಸ್ತುತಿಶ್ಲೋಕಗಳಿಂದ ಪ್ರಾತಃಕಾಲದಲ್ಲಿ ಹೇಗೆ ಎಬ್ಬಿಸುತ್ತಾರೋ ಹಾಗೆ (೧೩). ಶ್ರುತಿಗಳು ಹೀಗೆ ಹಾಡಿದವು- ಜಯ ಜಯ ಅಜಿತ! ಸ್ವರೂಪದಿಂದಲೇ ನೀನು ಸಕಲೈಶ್ವರ್ಯ ಸಂಪನ್ನನಾಗಿರುವೆ. ಚರಾಚರಶರೀರಗಳ ಅಜೆಯೆನಿಸಿದ ಅವಿದ್ಯೆಯನ್ನು ಶಮಿಸು. ಈ ಅವಿದ್ಯೆ ಜೀವಾತ್ಮರ ಸಹಜಾನಂದಾದಿಗಳನ್ನು ಮರೆಮಾಚುವ ದೋಷ ಕ್ಕಾಗಿಯೇ ಸತ್ತ್ವಾದಿಗುಣಗಳನ್ನು ಧರಿಸಿದೆ! ಜೀವರ ಜ್ಞಾನಾದಿ ಸಕಲ ಶಕ್ತಿಗಳನ್ನು ಉದ್ಬೋಧಿಸುವ ಈಶ್ವರನೆ, ಸೃಷ್ಟ್ಯಾದಿ ಸಮಯದೊಳು ಮಾಯೆಯಿಂದೊಡ

---

೧ ಯೋಗದಿಂದ ನಿದ್ರಿಸುವಂತೆ ಇದ್ದನು.

೨ ೧೪ರಿಂದ ೪೧ರವರೆಗಿನ ಶ್ಲೋಕಗಳು ಕುಲಕವೃತ್ತದಲ್ಲಿವೆ. ಇದರ ಲಕ್ಷಣ- 'ಹಯದಶಭಿರ್ನಜೌ ಭಜಜಲಾ ಗುರು ತತ್ಕುಟಕಮ್'- ವೃತ್ತರತ್ನಾಕರ.

ಇತಿ ತವ ಸೂರಯಸ್ತ್ರ್ಯಧಿಪತೇಽಖಿಲಲೋಕಮಲ-
ಕ್ಷಪಣಕಥಾಮೃತಾಬ್ಧಿಮವಗಾಹ್ಯ ತಪಾಂಸಿ ಜಹುಃ ।
ಕಿಮುತ ಪುನಃ ಸ್ವಧಾಮವಿಧುತಾಶಯಕಾಲಗುಣಾಃ
ಪರಮ ಭಜಂತಿ ಯೇ ಪದಮಜಸ್ರಸುಖಾನುಭವಮ್ ॥ ೧೬

ದೃತಯ ಇವ ಶ್ವಸಂತ್ಯಸುಭೃತೋ ಯದಿ ತೇಽನುವಿಧಾ
ಮಹದಹಮಾದಯೋಽಂಡಮಸೃಜನ್ ಯದನುಗ್ರಹತಃ ।
ಪುರುಷವಿಧೋಽನ್ವಯೋಽತ್ರ ಚರಮೋಽನ್ನಮಯಾದಿಷು ಯಃ
ಸದಸತಃ ಪರಂ ತ್ವಮಥ ಯದೇಷ್ವವಶೇಷಮೃತಮ್ ॥ ೧೭

ಗೂಡಿ; ವಸ್ತುತಃ ಸ್ವಸ್ವರೂಪದಿ ಸತ್ಯಸುಖರಸನಾಗಿ, ಇರುವವನು ನೀನೆಂದು ವೇದ ಉದ್ಘೋಷಿಸುವುದು ೨ (೧೪). ಮಂತ್ರ ದ್ರಷ್ಟಾರರಾದ ಋಷಿಗಳು (ಅಥವಾ ಮಂತ್ರಗಳು) ಇಂದ್ರಿಯಗಳಿಗೆ ಉಪಲಬ್ಧವಾಗುವ ಸಕಲವೂ ಬ್ರಹ್ಮವೆಂದೇ ತಿಳಿದಿದ್ದಾರೆ. ಏಕೆಂದರೆ, ಬ್ರಹ್ಮವು ಮಾತ್ರ ಕಡೆಯಲ್ಲಿ ಉಳಿಯತಕ್ಕದ್ದು. ಉತ್ಪತ್ತಿ ವಿನಾಶಗಳೆಲ್ಲವೂ ಇಂದ್ರ, ಅಗ್ನಿ, ಘಟ, ಪಟ-ಮುಂತಾದ ವಿಕಾರಗಳಿಗೆ ಮಾತ್ರ. ಈ ವಿಕಾರಗಳೆಲ್ಲವೂ ವಿಕಾರರಹಿತವಾದ ಬ್ರಹ್ಮದಿಂದ ಉದ್ಭವಿಸಿವೆ. ಮಣ್ಣಿನಲ್ಲಿ ಹೇಗೋ ಹಾಗೆ (ಎಂದರೆ ಮಣ್ಣಿನಿಂದಾದ ಘಟಾದಿ ವಿಕಾರಗಳು ಮಣ್ಣಿನಲ್ಲಿ ಸಮಾಪ್ತವಾಗಿ ಕಡೆಗೆ ಮಣ್ಣೇ ಉಳಿಯುವಂತೆ ಬ್ರಹ್ಮ ಒಂದೇ ಅವಶಿಷ್ಟವಾಗುತ್ತದೆ). ಆದ್ದರಿಂದ ಋಷಿಗಳು ನಿನ್ನಲ್ಲಿಯೇ ಮಾನಸತಾತ್ಪರ್ಯವನ್ನೂ ಇಂದ್ರ, ಅಗ್ನಿ ಮುಂತಾದ ಹೆಸರನ್ನೂ ಇಟ್ಟು ವ್ಯವಹರಿಸಿದ್ದಾರೆ. ಪ್ರಾಣಿಗಳು ಎಲ್ಲಿ ಹೆಜ್ಜೆ ಇಟ್ಟರೂ ಅದು ಭೂಮಿಯ ಮೇಲಾಗದೆ ಬೇರೆ ಕಡೆ ಹೇಗಾದೀತು ? (ಕಲ್ಲು, ಇಟ್ಟಿಗೆ-ಎಂದು ಹೆಸರಿಟ್ಟು ಯಾವುದರ ಮೇಲೆ ಹೆಜ್ಜೆ ಇಟ್ಟರೂ ಅದು ಭೂಮಿಯೇ ಹೊರತು ಬೇರೆಯಾಗದು. ಇಂದ್ರ, ಅಗ್ನಿ ಎಂದು ವೇದಗಳು ಯಾರನ್ನೇ ಕರೆಯಲಿ, ಅವೆಲ್ಲ ಪರಮಾರ್ಥದಲ್ಲಿ ಬ್ರಹ್ಮವೇ ಹೊರತು ಬೇರೆಯಲ್ಲ) (೧೫). ನೀನೇ ಪರಮಾರ್ಥವಾದ್ದರಿಂದ, ಓ ತ್ರಿಗುಣಾತ್ಮಕ ಮಾಯೆಗೆ ಒಡೆಯನೆ, ಸಕಲಪಾಪಗಳನ್ನೂ ತೊಡೆದುಹಾಕುವ ನಿನ್ನ ಕಥಾಮೃತದ ಕಡಲಿನಲ್ಲಿ ವಿದ್ವಾಂಸರು ಮುಳುಗಿ ತಮ್ಮ ಕಷ್ಟಗಳನ್ನು ಪರಿಹರಿಸಿಕೊಂಡರು. ಹೀಗಿರಲಾಗಿ, ಹೇ ಪರಮೇಶ್ವರ, ಸ್ವಸ್ವರೂಪ ಸ್ಫುರಣಮಾತ್ರದಿಂದಲೇ ರಾಗ, ದ್ವೇಷ-ಮುಂತಾದ ಅಂತಃಕರಣ ಧರ್ಮಗಳನ್ನೂ ಮುಪ್ಪು, ಸಾವು-ಮುಂತಾದ ಕಾಲಧರ್ಮಗಳನ್ನೂ

ಉದರಮುಪಾಸತೇ ಯ ಋಷಿವರ್ತ್ಮಸು ಕೂರ್ಪದೃಶಃ
ಪರಿಸರಪದ್ಧತಿಂ ಹೃದಯಮಾರುಣಯೋ ದಹರಮ್ ।
ತತ ಉದಗಾದನಂತ ತವ ಧಾಮ ಶಿರಃ ಪರಮಂ
ಪುನರಿಹ ಯತ್ ಸಮೇತ್ಯ ನ ಪತಂತಿ ಕೃತಾಂತಮುಖೇ ॥ ೧೮

ಸ್ವಕೃತವಿಚಿತ್ರಯೋನಿಷು ವಿಶನ್ನಿವ ಹೇತುತಯಾ
ತರತಮತಶ್ಚಕಾಸ್ಸ್ಯನಲವತ್ ಸ್ವಕೃತಾನುಕೃತಿಃ ।
ಅಥ ವಿತಥಾಸ್ವಮೂಷ್ವವಿತಥಂ ತವ ಧಾಮ ಸಮಂ
ವಿರಜಧಿಯೋಽನ್ವಯಂತ್ಯಭಿವಿಪಣ್ಯವ ಏಕರಸಮ್ ॥ ೧೯

ತೊಡೆದುಹಾಕಿ ಅಖಂಡಾ ನಂದಾನುಭವರೂಪವಾದ ನಿನ್ನ ಸ್ವರೂಪವನ್ನು ಯಾರು ಸೇವಿಸುವರೋ ಅವರು ಕಷ್ಟಗಳನ್ನು ನೀಗಿಕೊಳ್ಳುತ್ತಾರೆಂದು ಹೇಳಬೇಕಾದ್ದೇನಿದೆ ? (೧೬). ಲೋಕದಲ್ಲಿ ಪ್ರಾಣಗಳು ತಿದಿಗಳಂತೆ ಉಸಿರಾಡುತ್ತಿರುವುದಾದರೆ, ಅದಕ್ಕೂ ಸಹ ಶರೀರಗಳಲ್ಲಿ ನಿನ್ನ ಅನುಪ್ರವೇಶವೇ ಕಾರಣ. ಹೇಗೆಂದರೆ, ಮಹತ್ತು ಅಹಂಕಾರ ಮೊದಲಾದ ಜಡವಸ್ತುಗಳೂ ನಿನ್ನ ಅನುಗ್ರಹದಿಂದಲೇ- ಅನುಪ್ರವೇಶ ಸಾಮರ್ಥ್ಯದಿಂದಲೇ ಬ್ರಹ್ಮಾಂಡಪಿಂಡಾಂಡಗಳನ್ನು ಸೃಷ್ಟಿಸಿರುತ್ತವೆ (ಅನ್ನಮಯಾದಿ ಪಂಚಕೋಶಗಳಲ್ಲಿದ್ದು ಚೈತನ್ಯವನ್ನು ನೀಡುತ್ತ) ಪುರುಷಾಕೃತಿಯಲ್ಲಿರತಕ್ಕವನು ನೀನು. ಅವುಗಳಲ್ಲಿ ಅನ್ವಯಿಸಿ ಅಭಿಮಾನವನ್ನು ತಾಳಿದ್ದರಿಂದ ಅವುಗಳ ಆಕೃತಿ ನಿನಗೆ. ಆದರೆ ಅನ್ನಮಯಾದಿಕೋಶಗಳ ಕಡೆಯಲ್ಲಿ ಹೇಳಿದ 'ಬ್ರಹ್ಮ ಪುಚ್ಛಂ ಪ್ರತಿಷ್ಠಾ' ಎಂಬ ವಾಕ್ಯದಿಂದ ಪ್ರತಿಪಾದ್ಯನಾದವನು[1] ನೀನು. 'ಸತ್ ಅಸತ್' ಎಂಬ ಕಾರ್ಯಕಾರಣಗಳಿಗೆ ವ್ಯತಿರಿಕ್ತನೂ ಇವುಗಳ ಕಡೆಯಲ್ಲಿ ಅಬಾಧ್ಯನಾಗಿ ಉಳಿಯತಕ್ಕ ಸತ್ಯಸ್ವರೂಪನೂ ನೀನೇ (೧೭). ಹೇ ಸ್ವಾಮಿ- ಅನಂತ, ಋಷಿಸಂಪ್ರದಾಯಮಾರ್ಗಗಳಲ್ಲಿ ಸ್ಥೂಲದೃಷ್ಟಿಯವರು ಉದರದ ಮಣಿಪೂರಕಚಕ್ರದಲ್ಲಿ ನಿನ್ನನ್ನು ಉಪಾಸನೆಮಾಡುತ್ತಾರೆ. ಸೂಕ್ಷ್ಮದೃಷ್ಟಿಯವರು ಸಕಲನಾಡಿಗಳಿಗೆ ಪ್ರಸರಣಸ್ಥಾನವೆನಿಸಿದ ಹೃದಯದಲ್ಲಿ ದಹರವೆಂಬ ಚಿದಾಕಾಶ

---

೧ ಆನಂದವಲ್ಲಿಯಲ್ಲಿ ಹೇಳಿದ ಪಂಚಕೋಶಗಳಲ್ಲಿ ಆನಂದಮಯಕೋಶವು ಶುದ್ಧ ಬ್ರಹ್ಮವಲ್ಲ ಎಂಬ ಸಿದ್ಧಾಂತಕ್ಕೆ ಅನುಗುಣವಾಗಿ ಹೀಗೆ ಅರ್ಥಮಾಡಲಾಗಿದೆ. ವೃತ್ತಿಕಾರ ಮತದಂತೆ ಅರ್ಥಮಾಡುವುದಾದರೆ, 'ಕಡೆಯದಾದ ಆನಂದಮಯಕೋಶವೇ ನೀನು' ಎಂದು ಹೇಳಬೇಕಾಗುತ್ತದೆ.

ಸ್ವಕೃತಪುರೇಷ್ವಮೀಷ್ವಬಹಿರಂತರಸಂವರಣಂ
ತವ ಪುರುಷಂ ವದಂತ್ಯಖಿಲಶಕ್ತಿ ಧೃತೋಽಂಶಕೃತಮ್ ।
ಇತಿ ನೃಗತಿಂ ವಿವಿಚ್ಯ ಕವಯೋ ನಿಗಮಾವಪನಂ
ಭವತ ಉಪಾಸತೇಽಂಘ್ರಿಮಭವಂ ಭುವಿ ವಿಶ್ವಸಿತಾಃ ॥ ೨೦

ದುರವಗಮಾತ್ಮತತ್ತ್ವನಿಗಮಾಯ ತವಾತ್ತತನೋ-
ಶ್ಚರಿತಮಹಾಮೃತಾಬ್ಧಿಪರಿವರ್ತಪರಿಶ್ರಮಣಾಃ ।
ನ ಪರಿಲಷಂತಿ ಕೇಚಿದಪವರ್ಗಮಪೀಶ್ವರ ತೇ
ಚರಣಸರೋಜಹಂಸಕುಲಸಂಗವಿಸೃಷ್ಟಗೃಹಾಃ ॥ ೨೧

ರೂಪನನ್ನಾಗಿ ನಿನ್ನನ್ನು ಭಜಿಸುತ್ತಾರೆ. ಆದರೆ ನಿನ್ನ ಪರಮೋತ್ಕೃಷ್ಟವಾದ ಉಪಲಬ್ಧಿಸ್ಥಾನವು ಉದರದಹರಗಳಿಗಿಂತ ಮೇಲೆ ಶಿರಸ್ಸಿನ ಸುಷುಮ್ನೆಯನ್ನೇರಿ ನಿಂತಿದೆ. ಅದನ್ನು ಸೇರಿ ಧ್ಯಾನಿಸತಕ್ಕವರು ಮತ್ತೆ ಮೃತ್ಯುವಿನ ಬಾಯಿಗೆ ಬೀಳುವುದಿಲ್ಲ (೧೮). ಹೇ ಸ್ವಾಮಿ, ಉಪಾದಾನಕಾರಣನಾಗಿ ನೀನು ಸೃಷ್ಟಿಸಿರುವ ಉಚ್ಚನೀಚಗಳಾದ ನಾನಾಬಗೆಯ ವಿಚಿತ್ರ ಶರೀರಗಳಲ್ಲಿ ನೀನು ಅನುಪ್ರವೇಶ ಮಾಡಿದವನಂತೆ ಉಪಲಬ್ಧಿಯೋಗ್ಯನಾಗಿದ್ದೀಯೆ. ನೀನು ನಿರ್ಮಿಸಿದ ದೇಹಗಳನ್ನನುಸರಿಸಿ ತರತಮಭಾವದಿಂದ ಬೆಳಗುತ್ತಿದ್ದೀಯೆ. ಬೆಂಕಿಯ ಶಕ್ತಿ ಒಂದೇ ಬಗೆಯಾಗಿದ್ದರೂ ಅದು ಆಶ್ರಯಿಸಿರುವ ಕಟ್ಟಿಗೆಯನ್ನನುಸರಿಸಿ ದೊಡ್ಡದಾಗಿಯೂ ಚಿಕ್ಕದಾಗಿಯೂ ಹೇಗೆ ಬೆಳಗುವುದೋ ಹಾಗೆ. ಆದ್ದರಿಂದ ಮಿಥ್ಯೆಯಾದ ಈ ದೇಹಗಳಲ್ಲಿ ಸತ್ಯವೂ ಸಮವೂ ಸತ್ತಾಮಾತ್ರವಾದ ಏಕರಸವೂ ಆದ ನಿನ್ನ ಸ್ವರೂಪವನ್ನು ಶುದ್ಧಚಿತ್ತರೂ ಲೋಕವ್ಯವರಹಾರಫಲವನ್ನೂ ತ್ಯಜಿಸಿದವರೂ ಆದ ಜ್ಞಾನಿಗಳು ತಿಳಿಯಬಲ್ಲರು (೧೯). ತನ್ನ ಕರ್ಮಾನುಸಾರವಾಗಿ ಪ್ರಾಪ್ತವಾದ ಮನುಷ್ಯಾದಿದೇಹಗಳಲ್ಲಿರುವ ಜೀವಾತ್ಮನನ್ನು ಸಕಲಶಕ್ತಿಧರನಾದ ನಿನ್ನ ಕಲ್ಪಿತಾಂಶವೆಂದು ಜ್ಞಾನಿಗಳು ಹೇಳುತ್ತಾರೆ. ಹೀಗೆ ಜೀವನ ಸ್ಥಿತಿಯನ್ನು ವಿವೇಚಿಸಿದ ವಿದ್ವಾಂಸರು (ಅನ್ಯಮಾರ್ಗವನ್ನು ಕಾಣದೆ) ನಿಖಿಲವೇದೋಕ್ತ ಕರ್ಮಗಳಿಗೆ ಸಮರ್ಪಣಕ್ಷೇತ್ರವೂ ಪುನರ್ಜನ್ಮನಿವರ್ತಕವೂ ಆದ ನಿನ್ನ ಪಾದವನ್ನು ಸೇವಿಸುತ್ತಾರೆ. ಭೂಲೋಕದಲ್ಲಿ ನಿನ್ನ ಪಾದಸೇವೆಯೇ ಉತ್ತಮಮಾರ್ಗವೆಂದು ಅವರು ನಂಬಿದ್ದಾರೆ (೨೦). ಹೇ ಪರಮೇಶ್ವರ,

ತ್ವದನುಪಥಂ ಕುಲಾಯಮಿದಮಾತ್ಮಸುಹೃತ್ಪ್ರಿಯವ-
ಚ್ಚರತಿ ತಥೋನ್ಮುಖೇ ತ್ವಯಿ ಹಿತೇ ಪ್ರಿಯ ಆತ್ಮನಿ ಚ ।
ನ ಬತ ರಮಂತ್ಯಹೋ ಅಸದುಪಾಸನಯಾಽಽತ್ಮಹನೋ
ಯದನುಶಯಾ ಭ್ರಮಂತ್ಯುರುಭಯೇ ಕುಶರೀರಭೃತಃ ॥ ೨೨

ನಿಭೃತಮರುನ್ಮನೋಽಕ್ಷದೃಢಯೋಗಯುಜೋ ಹೃದಿ ಯ-
ನ್ಮುನಯ ಉಪಾಸತೇ ತದರಯೋಽಪಿ ಯಯುಃ ಸ್ಮರಣಾತ್ ।
ಸ್ತ್ರಿಯ ಉರಗೇಂದ್ರಭೋಗಭುಜದಂಡವಿಷಕ್ತಧಿಯೋ
ವಯಮಪಿ ತೇ ಸಮಾಃ ಸಮದೃಶೋಽಂಘ್ರಿಸರೋಜಸುಧಾಃ ॥ ೨೩

ಆತ್ಮತತ್ತ್ವವನ್ನರಿಯುವುದು ಅತ್ಯಂತ ಕಠಿಣವಾದದ್ದು. ಅದನ್ನು ಬೋಧಿಸುವುದಕ್ಕಾಗಿ ನೀನು ಶರೀರವನ್ನು ಧರಿಸುವುದುಂಟು. ಹಾಗೆ ಲೀಲಾ ಮಾತ್ರ ಶರೀರಧಾರಿಯಾದ ನಿನ್ನ ಚರಿತಾಮೃತದ ಮಹಾಸಾಗರದಲ್ಲಿ ಮುಳುಗಿ ಮುಳುಗಿ ಕೆಲವು ಮಹಾತ್ಮರು ತಮ್ಮ ಆಯಾಸವನ್ನು ಪರಿಹರಿಸಿಕೊಳ್ಳುತ್ತಾರೆ. ಅಂತಹ ಕೆಲವು ಭಕ್ತರಸಿಕರು ಮೋಕ್ಷವನ್ನೂ ಸಹ ಬಯಸುವುದಿಲ್ಲ! ನಿನ್ನ ಅಡಿದಾವರೆಯಲ್ಲಿ ರಮಿಸುವ ಹಂಸಗಳಂತಿರುವ ಭಕ್ತರ ಜೊತೆಗೆ ಸೇರಿ ಗೃಹಸುಖವನ್ನೂ ತ್ಯಜಿಸಿಬಿಡುತ್ತಾರೆ (೨೧). ಹೇ ಭಗವನ್, ನಿನ್ನ ಸೇವೆಗೆ ಅನುಕೂಲವಾಗಿರುವ ಈ ಗೂಡು-ಈ ದೇಹ ಮನುಷ್ಯನಿಗೆ ಆತ್ಮದಂತೆ, ಗೆಳೆಯನಂತೆ, ಪ್ರಿಯನಂತೆ ಹೇಗೆ ಬೇಕಾದರೂ ಹಾಗೆ ಇಷ್ಟಾನುಸಾರವಾಗಿ ನಡೆಯಲು ಸಿದ್ಧವಾಗಿದೆ. ನೀನಾದರೋ ಹಿತನೂ ಪ್ರಿಯನೂ ಆತ್ಮನೂ ಆಗಿ ಮಾನವನನ್ನು ಅನುಗ್ರಹಿಸಲು ಉತ್ಸುಕನಾಗಿದ್ದೀಯೆ. ಹೀಗಿದ್ದರೂ, ಅಕಟ! ಈ ಮಾನವರು ನಿನ್ನನ್ನು ಭಜಿಸದೆ ದೇಹಾದಿಗಳನ್ನೇ ಉಪಲಾಲಿಸುತ್ತ ಆತ್ಮಘಾತಮಾಡಿಕೊಳ್ಳುತ್ತಿದ್ದಾರಲ್ಲ! ಈ ಕೆಟ್ಟ ಜನರು ದೇಹಾದಿಭೋಗವಾಸನೆಗೆ ಒಳಗಾಗಿ ಅತ್ಯಂತ ಭೀಕರವಾದ ಸಂಸಾರದಲ್ಲಿ ಹೊರಳಾಡುತ್ತಾರೆ (೨೨). ಪ್ರಾಣವಾಯು, ಮನಸ್ಸು ಮತ್ತು ಇಂದ್ರಿಯಗಳನ್ನು ನಿಗ್ರಹಿಸಿ ದೃಢಯೋಗವ ನ್ನಾಚರಿಸುವ ಮುನಿಗಳು ಯಾವ ತತ್ತ್ವವನ್ನು ಹೃದಯದಲ್ಲಿ ಧ್ಯಾನಿಸುತ್ತಾರೋ ಅದನ್ನು ವೈರಿಗಳೂ ಸಹ ನಿನ್ನ ಸ್ಮರಣೆ ಮಾಡುತ್ತಲೇ ಹೋಗಿ ಸೇರಿಕೊಂಡರು! ಮಹಾಸರ್ಪಗಳಂತೆ ನೀಳವಾದ ನಿನ್ನ

---

೧ ಭಗವಂತನ ಉಪಾಸನೆ, ವೈರ, ಕಾಮ, ಜ್ಞಾನ-ಇವುಗಳಲ್ಲಿ ಭಗವಂತನ ಸ್ಮರಣೆ ಒಂದಾನೊಂದು ಪ್ರಕಾರದಿಂದ ಇದ್ದೇ ಇರುತ್ತದೆ. ಸ್ಮರಣೆಯ ಮಹಿಮೆಯಿಂದ ಇವರೆಲ್ಲರಿಗೂ ಸದ್ಗತಿಯುಂಟು ಎಂದು ಅಭಿಪ್ರಾಯ.

ಕ ಇಹ ನು ವೇದ ಬತಾವರಜನ್ಮ ಲಯೋಽಗ್ರಸರಂ
ಯತ ಉದಗಾದೃಷಿರ್ಯಮನು ದೇವಗಣಾ ಉಭಯೇ ।
ತರ್ಹಿ ನ ಸನ್ನ ಚಾಸದುಭಯಂ ನ ಚ ಕಾಲಜವಃ
ಕಿಮಪಿ ನ ತತ್ರ ಶಾಸ್ತ್ರಮವಕೃಷ್ಯ ಶಯೀತ ಯದಾ ॥ ೨೪

ಜನಿಮಸತಃ ಸತೋ ಮೃತಿಮುತಾತ್ಮನಿ ಯೇ ಚ ಭಿದಾಂ
ವಿಪಣಮೃತಂ ಸ್ಮರಂತ್ಯುಪದಿಶಂತಿ ತ ಆರುಪಿತೈಃ ।
ತ್ರಿಗುಣಮಯಃ ಪುಮಾನಿತಿ ಭಿದಾ ಯದಬೋಧಕೃತಾ
ತ್ವಯಿ ನ ತತಃ ಪರತ್ರ ಸ ಭವೇದವಬೋಧರಸೇ ॥ ೨೫

ಭುಜದಂಡಗಳನ್ನಾಲಿಂಗಿಸಬೇಕೆಂದು (ಕಾಮದಿಂದ) ಅನುರಕ್ತಚಿತ್ತರಾದ ಸ್ತ್ರೀಯರೂ ಸಹ ನಿನ್ನ ಸ್ವರೂಪದಲ್ಲಿ ಲೀನರಾದರು. ನಿನ್ನ ಅಡಿದಾವರೆಯನ್ನು ಹೊತ್ತಿರುವ ವೇದಾಭಿಮಾನಿ ದೇವತೆಗಳಾದ ನಾವಾದರೋ ನೀನು ಅಪರಿಚ್ಛಿನ್ನವಾದ ಬ್ರಹ್ಮವೆಂದು ತಿಳಿದು ಜ್ಞಾನದಿಂದ ನಿನ್ನನ್ನು ಸೇರಿದೆವು. ನಿನಗೆ ಎಲ್ಲರೂ ಸಮಾನರು[೧] (೨೩). ಹೇ ದೇವ, ಸ್ವಯಂಸಿದ್ಧನಾಗಿ ಮೊದಲೇ ಇರತಕ್ಕ ನಿನ್ನನ್ನು ಯಾವನು ತಾನೇ ತಿಳಿದಿದ್ದಾನೆ ? (ಪ್ರಥಮ ಶರೀರಿಯೆನಿಸಿದ) ಹಿರಣ್ಯಗರ್ಭಋಷಿ ನಿನ್ನಿಂದ ಹುಟ್ಟಿದವನು. ಅವನನ್ನು ಹಿಂಬಾಲಿಸಿ (ಆಧ್ಯಾತ್ಮಿಕ ಆದಿದೈವಿಕಗಳೆಂಬ) ಉಭಯ ದೇವಗಣಗಳು ಹುಟ್ಟಿದವು. [೧] ನೀನು ಈ ಸೃಷ್ಟಿಯನ್ನು ಉಪಸಂಹರಿಸಿ ಯೋಗ ನಿದ್ರೆಯಲ್ಲಿ ಮಲಗಿದಾಗ, ಸತ್ ಎಂದರೆ ಸ್ಥೂಲವಾದ ಆಕಾಶಾದಿ ಪಂಚಭೂತಗಳೂ ಅಸತ್ ಎಂದರೆ ಸೂಕ್ಷ್ಮವಾದ ಮಹತ್ ಅಹಂಕಾರಾದಿಗಳೂ ಇರುವುದಿಲ್ಲ. ಈ ಎರಡರಿಂದಾದ ಶರೀರೇಂದ್ರಿಯಗಳೂ ಇರುವುದಿಲ್ಲ. ಕಾಲದ ಓಟವೂ ಇಲ್ಲ. ವೇದಾದಿಶಾಸ್ತ್ರವೂ ಇಲ್ಲ. [೨] (೨೪). ಮೊದಲು ಇಲ್ಲದೆ ಅಸತ್ ಆಗಿದ್ದ ಜಗತ್ತಿಗೆ ಮತ್ತು ಬ್ರಹ್ಮಭಾವಕ್ಕೆ ಹೊಸದಾಗಿ ಉತ್ಪತ್ತಿಯಾಗುವುದೆಂದೂ ಸತ್ಯವಾಗಿ ಇರುವ ಏಕವಿಂಶತಿದುಃಖಾದಿಗಳಿಗೆ ನಾಶವಾಗುವುದೆಂದೂ ನೈಯಾಯಿಕರು ಹೇಳುತ್ತಾರೆ. ಅವರು ಮತ್ತು ಸಂಖ್ಯಾದಿಗಳು ಆತ್ಮನಲ್ಲಿ ಭೇದವನ್ನೊಪ್ಪಿ ನಾನಾ ಆತ್ಮರಿದ್ದಾರೆಂದು ಹೇಳುತ್ತಾರೆ.

೧ ಉಭಯೇ = ನಿವೃತ್ತಿಮಾರ್ಗದ ಸನಕಾದಿಗಳು ಮತ್ತು ಪ್ರವೃತ್ತಿಮಾರ್ಗದ ಮರೀಚ್ಯಾದಿಗಳು ಎಂದು ಅರ್ಥಮಾಡುವುದು ಉತ್ತಮವೆಂದು ತೋರುತ್ತದೆ.

೨ ಸೃಷ್ಟಿಯಾದಮೇಲೆ ಶರೀರಾದಿಗಳಿದ್ದರೂ ಅಜ್ಞಾನ ಕವಿದುಕೊಂಡಿರುತದೆ. ಪ್ರಳಯಕಾಲದಲ್ಲಿ ಶರೀರಾದಿಗಳೇ ಇರುವುದಿಲ್ಲ. ಆದ್ದರಿಂದ ಈಶ್ವರನನ್ನು ಅರಿತವನು ಯಾವನಿದ್ದಾನೆ ? ಅವನಿಗೆ ಶರಣಾಗುವುದೇ ಉತ್ತಮ ಮಾರ್ಗ.

ಸದಿವ ಮನಸ್ತ್ರಿವೃತ್ತ್ವಯಿ ವಿಭಾತ್ಯ ಸದಾಮನುಜಾತ್
ಸದಭಿಮೃಶಂತ್ಯಶೇಷಮಿದಮಾತ್ಮತಯಾಽಽತ್ಮವಿದಃ ।
ನ ಹಿ ವಿಕೃತಿಂ ತ್ಯಜಂತಿ ಕನಕಸ್ಯ ತದಾತ್ಮತಯಾ
ಸ್ವಕೃತಮನುಪ್ರವಿಷ್ಟಮಿದಮಾತ್ಮತಯಾವಸಿತಮ್ ॥ ೨೬

ತವ ಪರಿ ಯೇ ಚರಂತ್ಯಖಿಲಸತ್ತ್ವನಿಕೇತತಯಾ
ತ ಉತ ಪದಾಽಽಕ್ರಮಂತ್ಯವಿಗಣಯ್ಯ ಶಿರೋ ನಿರ್ಋತೇಃ ।
ಪರಿವಯಸೇ ಪಶೂನಿವ ಗಿರಾ ವಿಬುಧಾನಪಿ ತಾಂ-
ಸ್ತ್ವಯಿ ಕೃತಸೌಹೃದಾಃ ಖಲು ಪುನಂತಿ ನ ಯೇ ವಿಮುಖಾಃ ॥ ೨೭

ಮೀಮಾಂಸಕರು ಕರ್ಮಫಲವು ಸತ್ಯವೆಂದೂ ಶಾಶ್ವತವೆಂದೂ ತಿಳಿಯುತ್ತಾರೆ. ಹೇ ಪರಮಾತ್ಮ, ಇವರೆಲ್ಲರೂ ಆರೋಪಿತವಾದ ನಾನಾಬಗೆಯ ಭ್ರಮೆಯಿಂದ ಹೀಗೆ ಬೋಧಿಸುತ್ತಿದ್ದಾರೆ. ಪರಮಪುರುಷನಾದ ನೀನು ತ್ರಿಗುಣಮಯನೆಂಬ ಭ್ರಮೆಯಿಂದ ಈ ಭೇದಾದಿಗಳನ್ನು ಕಲ್ಪಿಸಿಕೊಂಡಿದ್ದಾರೆ. ಇದೆಲ್ಲವೂ ನಿನ್ನ ವಿಷಯದಲ್ಲಿ ಅವರಿಗಿರುವ ಅಜ್ಞಾನದ ವಿಜೃಂಭಣೆ. ಅಜ್ಞಾನದ ಆಚೆಗಿರುವ ನಿಸ್ಸಂಗನೂ ಪ್ರಜ್ಞಾನಘನನೂ ಆದ ನಿನ್ನಲ್ಲಿ ಇದಾವುದೂ ಇಲ್ಲ[1] (೨೫). ಪರಮಾರ್ಥವಾಗಿ ಈ ಜಗತ್ತು ಅಸತ್-ಇಲ್ಲವೇ ಇಲ್ಲ. ತ್ರಿಗುಣಾತ್ಮಕವೂ ಮನಃಕಲ್ಪಿತವೂ ಆದ ಈ ಜಗತ್ತು ಸದಿವ-ಸತ್ಯವಾಗಿ ಇದೆಯೋ ಎಂಬಂತೆ ಅಧಿಷ್ಠಾನವಾದ ನಿನ್ನಲ್ಲಿ ತೋರುತ್ತಿದೆ. ಆತ್ಮವಿದರಾದ ಜ್ಞಾನಿಗಳು ಮನುಷ್ಯನಿಂದ ಹಿಡಿದು ಸಮಸ್ತ ವಿಶ್ವವನ್ನೂ ಆತ್ಮವೆಂದೇ-ಬ್ರಹ್ಮವೆಂದೇ ತಿಳಿದಿದ್ದಾರೆ. ಚಿನ್ನದ ವಿಕಾರವಾದ ಉಂಗುರವನ್ನೋ ಕುಂಡಲವನ್ನೋ ನೋಡಿದಾಗ ಅದು ಚಿನ್ನವೆಂಬ ಬುದ್ಧಿಯನ್ನು ಯಾರೂ ತ್ಯಜಿಸುವುದಿಲ್ಲ. ಏಕೆಂದರೆ, ಅದು ಚಿನ್ನವೇ ಆಗಿರುತ್ತದೆ. ಆದಕಾರಣ ಪರಮಾತ್ಮನಿಂದ ನಿರ್ಮಿತವಾದ ಜಗತ್ತು, ಅನುಪ್ರವಿಷ್ಟನಾಗಿರುವ ಜೀವ-ಎಲ್ಲವೂ ಪರಮಾತ್ಮನೇ ಎಂಬುದು ನಿಶ್ಚಿತ (೨೬). ಹೇ ಸ್ವಾಮಿ, ನೀನು ಸಕಲಭೂತಗಳಿಗೂ ಆವಾಸಸ್ಥಾನವೆಂದು ಬಗೆದು ಯಾರು ನಿನ್ನ ಪರಿಚರ್ಯೆಮಾಡುತ್ತಾರೊ ಅವರು ಮೃತ್ಯುವಿನ ತಲೆಯನ್ನೂ ಲೆಕ್ಕಿಸದೆ ಕಾಲಿನಿಂದ ತುಳಿದುಬಿಡುತ್ತಾರೆ (ಅವರು ಮುಕ್ತರಾಗುತ್ತಾರೆ). ಯಾರು ನಿನ್ನಲ್ಲಿ ಪ್ರೇಮವಿಡುತ್ತಾರೊ ಅವರು ತಮ್ಮನ್ನೂ ಅನ್ಯರನ್ನೂ ಪವಿತ್ರಗೊಳಿಸುತ್ತಾರೆ.

---

೧ ಅನುಬಂಧವನ್ನು ನೋಡಿ.

ತ್ವಮಕರಣಃ ಸ್ವರಾಡಖಿಲಕಾರಕಶಕ್ತಿಧರ-
ಸ್ತವ ಬಲಿಮುದ್ವಹಂತಿ ಸಮದಂತ್ಯ ಜಯಾನಿಮಿಷಾಃ ।
ವರ್ಷಭುಜೋಽಖಿಲಕ್ಷಿತಿಪತೇರಿವ ವಿಶ್ವಸೃಜೋ
ವಿದಧತಿ ಯತ್ರ ಯೇ ತ್ವಧಿಕೃತಾ ಭವತಶ್ಚಕಿತಾಃ ॥ ೨೮

ಸ್ಥಿರಚರಜಾತಯಃ ಸ್ಯುರಜಯೋತ್ಥ ನಿಮಿತ್ತಯುಜೋ
ವಿಹರ ಉದೀಕ್ಷಯಾ ಯದಿ ಪರಸ್ಯ ವಿಮುಕ್ತ ತತಃ ।
ನ ಹಿ ಪರಮಸ್ಯ ಕಶ್ಚಿದಪರೋ ನ ಪರಶ್ಚ ಭವೇದ್
ವಿಯತ ಇವಾಪದಸ್ಯ ತವ ಶೂನ್ಯತುಲಾಂ ದಧತಃ ॥ ೨೯

ಹಾಗಲ್ಲದೆ ನಿನಗೆ ವಿಮುಖರಾದವರು ಪವಿತ್ರಗೊಳಿಸುವುದಿಲ್ಲ. ಅಂತಹ ಭಕ್ತಿಹೀನರು ವಿದ್ವಾಂಸರಾಗಿದ್ದರೂ, ಪಶುಗಳನ್ನು ಹಗ್ಗದಿಂದ ಕಟ್ಟುವಂತೆ, ಅವರನ್ನು ನಿನ್ನ ವಾಗ್ರೂಪವಾದ ವೇದದಿಂದ ಬಂಧಿಸಿಬಿಡುತ್ತೀಯೆ[೧] (೨೭). ನಿನಗೆ ಯಾವ ಇಂದ್ರಿಯಗಳಿಲ್ಲದಿದ್ದರೂ ನಿಖಿಲಪ್ರಾಣಿಗಳನ್ನೂ ಇಂದ್ರಿಯಗಳಿಂದ ಕೆಲಸ ಮಾಡಿಸುವ ಶಕ್ತಿಯುಳ್ಳವನಾಗಿದ್ದೀಯೆ. ಸ್ವಯಂಜ್ಯೋತಿ ನೀನು. ಇಂದ್ರಾದಿ ದೇವತೆಗಳೂ ಮತ್ತು (ಅವರಿಗೆ ಪೂಜ್ಯರೂ) ಸೃಷ್ಟಿಕರ್ತರೂ ಆದ ಬ್ರಹ್ಮಾದಿಗಳೂ ಸಹ ಅವಿದ್ಯಾವೃತರಾಗಿ ನಿನಗೆ ಪೂಜೆಯನ್ನು ಅರ್ಪಿಸುತ್ತಿದ್ದಾರೆ. ಸಾಮಂತರಾಜರು ಪ್ರಜೆಗಳಿಂದ ಪೂಜಿತರಾದರೂ ಚಕ್ರವರ್ತಿಗೆ ಕಪ್ಪವನ್ನು ಅರ್ಪಿಸುವಂತೆ, ಮನುಷ್ಯರು ಅರ್ಪಿಸುವ ಹವ್ಯಕವ್ಯಾದಿಗಳನ್ನು ಈ ದೇವತೆಗಳು ನಿನಗೆ ಅರ್ಪಿಸಿ ತಾವು ಭುಜಿಸುತ್ತಾರೆ. ನಿನಗೆ ಹೆದರಿ ಹೆದರಿ ತಮ್ಮ ತಮ್ಮ ಅಧಿಕಾರದ ಕರ್ತವ್ಯವನ್ನು ಪಾಲಿಸುತ್ತಾರೆ (೨೮). ಓ ನಿತ್ಯಮುಕ್ತನೆ, ಮಾಯೆಗೆ ದೂರದಲ್ಲಿದ್ದು ಅಸಂಗನಾದ ನಿನಗೆ ಈ ಕ್ಷಣಲೇಶದಿಂದ ಮಾಯೆಯೊಡನೆ ಕ್ರೀಡೆಯಾದರೆ ಸಾಕು, ಅಷ್ಟರಿಂದಲೇ ಜೀವರ ನಿಮಿತ್ತಭೂತಕರ್ಮಗಳು ಕೆರಳಿ ಸ್ಥಾವರಜಂಗಮ ಶರೀರ ಧಾರಿಗಳಾದ ಜೀವರು ಉದ್ಭವಿಸುತ್ತಾರೆ. ಪರಮಕಾರುಣಿಕನಾದ ನಿನಗೆ ಇವನು ಪರಕೀಯ, ಇವನು ನನ್ನವನು-ಎಂಬ ಭೇದವಿಲ್ಲ. ಆಕಾಶದಂತೆ ಸರ್ವಸಮನೂ ವಾಙ್ಮನಸಗಳಿಗೆ ಅಗೋಚರನೂ ಆದ ನೀನು ಶೂನ್ಯದಂತೆ ನಿರ್ಲೇಪನು (೨೯).

---

೧ ಕರ್ಮಕಾಂಡವಾದ ವೇದವು ಕರ್ಮಗಳಲ್ಲಿ ತೊಡಗಿಸಿ ಅವರನ್ನು ಸಂಸಾರದಲ್ಲಿ ಬಂಧಿಸುತ್ತದೆ ಎಂದು ಅಭಿಪ್ರಾಯ. ಹೋಲಿಸಿ-ತ್ರೈಗುಣ್ಯವಿಷಯಾ ವೇದಾನಿಸ್ತ್ರೈಗುಣ್ಯೋಭವಾರ್ಜುನ (ಭ. ಗೀ. ೨-೪೫).

ಅಪರಿಮಿತಾ ಧ್ರುವಾಸ್ತನುಭೃತೋ ಯದಿ ಸರ್ವಗತಾ-
ಸ್ತರ್ಹಿ ನ ಶಾಸ್ಯತೇತಿ ನಿಯಮೋ ಧ್ರುವ ನೇತರಥಾ ।
ಅಜನಿ ಚ ಯನ್ಮಯಂ ತದವಿಮುಚ್ಯ ನಿಯಂತೃ ಭವೇತ್
ಸಮಮನುಜಾನತಾಂ ಯದಮತಂ ಮತದುಷ್ಟತಯಾ ॥ ೩೦

ನ ಘಟತ ಉದ್ಭವಃ ಪ್ರಕೃತಿಪೂರುಷಯೋರಜಯೋ-
ರುಭಯಯುಜಾ ಭವಂತ್ಯ ಸುಭೃತೋ ಜಲಬುದ್ಬುದವತ್ ।
ತ್ವಯಿ ತ ಇಮೇ ತತೋ ವಿವಿಧನಾಮಗುಣೈಃ ಪರಮೇ
ಸರಿತ ಇವಾರ್ಣವೇ ಮಧುನಿ ಲಿಲ್ಯುರಶೇಷರಸಾಃ ॥ ೩೧

ಹೇ ಶಾಶ್ವತ-ಪರಮೇಶ್ವರ, ಜೀವಾತ್ಮರು ಅಸಂಖ್ಯಾತರೆಂದೂ ಶಾಶ್ವತರೆಂದೂ ಸರ್ವಗತರಾದ ವಿಭುಗಳೆಂದೂ ಹೇಳುವುದಾದರೆ, ಅವರು ನಿನ್ನ ಶಾಸನಕ್ಕೆ ಒಳಪಾಡುತ್ತಾರೆಂಬ ನಿಯಮ ಇಲ್ಲದೆ ಹೋಗುತ್ತದೆ. ಬೇರೆ ವಿಧವಾಗಿ ಒಪ್ಪಿದರೆ ಈ ನಿಯಮಭಂಗ ಇಲ್ಲ. ಹೇಗೆಂದರೆ, (ಚಿನ್ನದ ವಿಕಾರವಾದ ಕುಂಡಲಕ್ಕೆ ಚಿನ್ನವೂ ಮಣ್ಣಿನ ವಿಕಾರವಾದ ಗಡಿಗೆಗೆ ಮಣ್ಣೂ ನೂಲಿನ ವಿಕಾರವಾದ ಬಟ್ಟೆಗೆ ನೂಲೂ ಹೇಗೆ ನಿಯಮಾಕವಾಗುತ್ತದೋ ಹಾಗೆಯೇ) ಉಪಾಧಿವಶದಿಂದ ಯಾವುದರ ವಿಕಾರವೆನಿಸಿ ಜೀವವಾಯಿತೋ ಆ ಜೀವವನ್ನು ಬಿಡದೆ ಅನುಸ್ಯೂತವಾಗಿರುವ ಕಾರಣವಸ್ತು ಜೀವಕ್ಕೆ ನಿಯಮಕವಾಗಬಹುದು. ಕಾರಣವಸ್ತುವಾದ ಬ್ರಹ್ಮವನ್ನು ಯಾರು ತಿಳಿದಿದ್ದೇವೆನ್ನುತ್ತಾರೋ ಅವರಿಗೆ ಅದು ತಿಳಿದಿಲ್ಲ. ಅದು ಜ್ಞಾನಕ್ಕೆ ವಿಷಯವಾಗಿ 'ತಿಳಿಯಲ್ಪಡುತ್ತದೆ' ಎನ್ನುವುದು ತಪ್ಪು (೩೦). ಪ್ರಕೃತಿ ಪುರುಷರಿಬ್ಬರೂ ಉತ್ಪತ್ತಿರಹಿತರಾದ್ದರಿಂದ ಇವರು ಜೀವರೂಪದಿಂದ ಹುಟ್ಟುತ್ತಾರೆ ಎಂಬುದು ಸರಿಹೋಗುವುದಿಲ್ಲ. ಆದ್ದರಿಂದ ಇವರಿಬ್ಬರಿಗೆ ಪರಸ್ಪರವಾದ ಅಧ್ಯಾಸವೆಂಬ ಯಾವ ಯೋಗ ಉಂಟೋ ಅದರಿಂದ ಪ್ರಾಣಾದ್ಯುಪಾಧಿಗಳುಳ್ಳ ಜೀವರು ನೀರಿನ ಗುಳ್ಳೆಗಳಂತೆ ಹುಟ್ಟುತ್ತಾರೆ (ಕಾಣಿಸಿಕೊಳ್ಳುತ್ತಾರೆ) ಎಂಬುದು ಸರಿ. (ನೀರಿನ ಗುಳ್ಳೆಗಳಿಗೆ ನೀರು ಉಪಾದಾನಕಾರಣ. ಗಾಳಿ ನಿಮಿತ್ತ ಕಾರಣ. ಹಾಗೆಯೇ ಜೀವರಿಗೆ ಪರಮಪುರುಷನು ಉಪಾದಾನಕಾರಣ. ಪ್ರಕೃತಿ ನಿಮಿತ್ತ ಕಾರಣ. ಇವರಿಬ್ಬರ ಅಧ್ಯಾಸಸಂಬಂಧದಿಂದ ಜೀವರ ಉತ್ಪತ್ತಿ). ಆದ್ದರಿಂದ -ವಾಸ್ತವವಾದ ಜನ್ಮವಿಲ್ಲವಾದ್ದರಿಂದಲೇ ಈ ಜೀವರು ಕಾರಣಾತ್ಮನಾದ ನಿನ್ನಲ್ಲಿ ತಮ್ಮ ಸಮಸ್ತ ನಾಮರೂಪಾದಿಗುಣಗಳೊಡನೆ (ಸುಷುಪ್ತಿ ಪ್ರಳಯಕಾಲಗಳಲ್ಲಿ)

ನೃಷು ತವ ಮಾಯಯಾ ಭ್ರಮಮಮೀಷ್ವವಗತ್ಯ ಭೃಶಂ
ತ್ವಯಿ ಸುಧಿಯೋಽಭವೇ ದಧತಿ ಭಾವಮನುಪ್ರಭವಮ್ ।
ಕಥಮನುವರ್ತತಾಂ ಭವಭಯಂ ತವ ಯದ್ ಭ್ರುಕುಟಿಃ
ಸೃಜತಿ ಮುಹುಸ್ತ್ರಿಣೇಮಿರಭವಚ್ಛರಣೇಷು ಭಯಮ್ ॥ ೩೨

ವಿಜಿತಹೃಷೀಕವಾಯುಭಿರದಾಂತಮನಸ್ತುರಗಂ
ಯ ಇಹ ಯತಂತಿ ಯಂತುಮತಿಲೋಲಮುಪಾಯಖಿದಃ ।
ವ್ಯಸನಶತಾನ್ವಿತಾಃ ಸಮವಹಾಯ ಗುರೋಶ್ಚರಣಂ
ವಣಿಜ ಇವಾಜ ಸಂತ್ಯಕೃತಕರ್ಣಧರಾ ಜಲಧೌ ॥ ೩೩

ಲೀನವಾಗುತ್ತಾರೆ. ಸಮುದ್ರದಲ್ಲಿ ನದಿಗಳಂತೆ, ಜೇನುತುಪ್ಪದಲ್ಲಿ ಪುಷ್ಪರಸಗಳಂತೆ ಲಯವಾಗುತ್ತಾರೆ (ವಾಸ್ತವವಾಗಿ ನಿನಗೂ ಜೀವರಿಗೂ ಭೇದವಿದ್ದಲ್ಲಿ ಹೀಗೆ ಲಯವಾಗುತ್ತಿರಲಿಲ್ಲ) (೩೧). ಹೇ ಪರಮೇಶ್ವರ, ಈ ಮಾನವರಲ್ಲಿ ನಿನ್ನ ಮಾಯೆಯಿಂದ ಮತ್ತೆ ಮತ್ತೆ ಉಂಟಾಗುವ ಈ ಸಂಸಾರಪರಿಭ್ರಮಣವನ್ನು ಕಂಡು ಬುದ್ಧಿಶಾಲಿಗಳು ಸಂಸಾರನಿವರ್ತಕನಾದ ನಿನ್ನಲ್ಲಿ ಭಕ್ತಿಭಾವವನ್ನು ವಿಶೇಷವಾಗಿ ನೆಲೆಗೊಳಿಸುತ್ತಾರೆ. ನಿನ್ನನ್ನನುಸರಿಸುವ ಭಕ್ತರಿಗೆ ಸಂಸಾರಭಯವು ಹೇಗೆ ಸಂಭವಿಸೀತು ? ನಿನ್ನ ಭಕ್ತರಲ್ಲದವರಿಗೆ ಮಾತ್ರ ಮೂರು ಅಂಚುಗಳುಳ್ಳ[1] ನಿನ್ನ ಹುಬ್ಬುಗಂಟು ಮತ್ತೆ ಮತ್ತೆ ಸಂಸಾರಭಯವನ್ನುಂಟುಮಾಡುತ್ತದೆ (೩೨). ಹೇ ಅಜ-ಪರಮಾತ್ಮ, ಕೆಲವರು ಸದ್ಗುರುವಿನ ಚರಣವನ್ನಾಶ್ರಯಿಸದೆ ಇಂದ್ರಿಯಗಳನ್ನೂ ಪ್ರಾಣವಾಯುಗಳನ್ನೂ ನಿಗ್ರಹಿಸಿ ಅದರ ಬಲದಿಂದಲೇ ಮನಸ್ಸೆಂಬ ಕುದುರೆಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಮನಸ್ಸಾದರೋ ಅತ್ಯಂತ ಚಪಲ ಸ್ವಭಾವದ ತುಂಟ ಕುದುರೆ. ಈ ಜನರು ಬೇರೆ ಉಪಾಯವನ್ನು ಕಾಣದೆ ಖೇದಪಡುತ್ತ ಸಂಸಾರಸಮುದ್ರದಲ್ಲಿ ನೂರಾರು ವ್ಯಸನಗಳಿಗೆ ಒಳಗಾಗಿದ್ದಾರೆ. ನಾವಿಕನನ್ನು ಗೊತ್ತುಮಾಡಿಕೊಳ್ಳದೆ ಹಡಗಿನಲ್ಲಿ ಹೊರಟ ವರ್ತಕರು ಸಮುದ್ರದಲ್ಲಿ ತಳಮಳಿಸುವಂತೆ, ಸದ್ಗುರುವಿಲ್ಲದ ಈ ಜನರು ಕಷ್ಟಪಡುತ್ತಾರೆ (೩೩).

---

೧ ಚಳಿಗಾಲ, ಬೇಸಗೆ, ಮಳೆಗಾಲ ಈ ಮೂರು ನೇಮಿಗಳುಳ್ಳ ಸಂವತ್ಸರಾತ್ಮಕವಾದ ಕಾಲಚಕ್ರವು ಭಗವಂತನ ಭ್ರೂಭಂಗ ಎಂದು ಕಲ್ಪಿಸಲಾಗಿದೆ.

ಸ್ವಜನಸುತಾತ್ಮದಾರಧನಧಾಮಧರಾಸುರಥೈ-
ಸ್ತ್ವಯಿ ಸತಿ ಕಿಂ ನೃಣಾಂ ಶ್ರಯತ ಆತ್ಮನಿ ಸರ್ವರಸೇ ।
ಇತಿ ಸದಜಾನತಾಂ ಮಿಥುನತೋ ರತಯೇ ಚರತಾಂ
ಸುಖಯತಿ ಕೋ ನ್ವಿಹ ಸ್ವವಿಹತೇ ಸ್ವನಿರಸ್ತಭಗೇ ॥ ೩೪

ಭುವಿ ಪುರುಪುಣ್ಯತೀರ್ಥಸದನಾನ್ಯೃಷಯೋ ವಿಮದಾ
ಸ್ತ ಉತ ಭವತ್ಪದಾಂಬುಜಹೃದೋಽಘಭಿದಂಘ್ರಿಜಲಾಃ ।
ದಧತಿ ಸಕೃನ್ಮನಸ್ತ್ವಯಿ ಯ ಆತ್ಮನಿ ನಿತ್ಯಸುಖೇ
ನ ಪುನರುಪಾಸತೇ ಪುರುಷಸಾರಹರಾವಸಥಾನ್ ॥ ೩೫

ಸತ ಇದಮುತ್ಥಿತಂ ಸದಿತಿ ಚೇನ್ನನು ತರ್ಕಹತಂ
ವ್ಯಭಿಚರತಿ ಕ್ವ ಚ ಕ್ವ ಚ ಮೃಷಾ ನ ತಥೋಭಯಯುಕ್ ।
ವ್ಯವಹೃತಯೇ ವಿಕಲ್ಪ ಇಷಿತೋಽಂಧಪರಂಪರಯಾ
ಭ್ರಮಯತಿ ಭಾರತೀ ತ ಉರುವೃತ್ತಿಭಿರುಕ್ಥಜಡಾನ್ ॥ ೩೬

ನಿನ್ನನ್ನು ಭಜಿಸತಕ್ಕವನಿಗೆ ಸರ್ವಸುಖಾಸ್ಪದನಾದ ನೀನು ಆತ್ಮವೇ ಆಗಿ ದೊರಕಿರುವಾಗ, ನೆಂಟರು ಮಕ್ಕಳು ದೇಹ ಮಡದಿ ಹೊನ್ನು ಮನೆ ನೆಲ ಪ್ರಾಣ ರಥ- ಮೊದಲಾದ ತುಚ್ಛ ವಸ್ತುಗಳಿಂದ ಆಗಬೇಕಾದ್ದೇನು? ಸತ್ಯವಾದ ಪರಮಾರ್ಥ ಸುಖವನ್ನರಿಯದೆ ಮೈಥುನದ ಮಾಯಾ ಸುಖವನ್ನು ಅರಸತಕ್ಕವರಿಗೆ ಈ ಸಂಸಾರದಲ್ಲಿ ನಿಜವಾಗಿಯೂ ಯಾವುದು ಆನಂದವನ್ನುಂಟುಮಾಡೀತು ? ಈ ಸಂಸಾರವಾದರೋ ತಾನಾಗಿ ಕುಸಿದುಹೋಗತಕ್ಕದ್ದು ; ಹುರುಳಿಲ್ಲದ್ದು (೩೪). ಆದ್ದರಿಂದ ಅಹಂಕಾರರಹಿತರಾದ ಋಷಿಗಳು ನಿನ್ನ ಅಡಿದಾವರೆಯನ್ನು ಹೃದಯದಲ್ಲಿ ನೆನೆಯುತ್ತ ಪಾಪಹಾರಿಯಾದ ಪಾದೋದಕವನ್ನು ಸೇವಿಸುತ್ತ ಇದ್ದರೂ ಅಧಿಕ ಪುಣ್ಯಶಾಲಿಗಳಾದ ಗುರುಗಳ ಆಶ್ರಮಗಳನ್ನು ಹುಡುಕಿಕೊಂಡು ಹೋಗಿ ಸೇವೆ ಮಾಡುತ್ತಾರೆ. ನಿತ್ಯಾನಂದಸ್ವರೂಪನೂ ಆತ್ಮನೂ ಆದ ನಿನ್ನಲ್ಲಿ ಯಾರು ಒಮ್ಮೆ ಮನಸ್ಸನ್ನಿಡುವರೋ ಅವರು ಪುರುಷರ ವಿವೇಕ ಸ್ಥೈರ್ಯಗಳನ್ನು ನಾಶಮಾಡುವ ಗೃಹಗಳಲ್ಲಿ ಮತ್ತೆಂದಿಗೂ ನೆಲೆಸುವುದಿಲ್ಲ! (೩೫). ಸತ್ಯವಾದ ಬ್ರಹ್ಮವಸ್ತುವಿನಿಂದ ಹುಟ್ಟಿದ ಈ ಜಗತ್ತು ಸತ್ಯವೇ ಆಗಿರಬೇಕು (ಚಿನ್ನದಿಂದ ಹುಟ್ಟಿದ ಕುಂಡಲ, ಉಂಗುರ ಮೊದಲಾದದ್ದು ಚಿನ್ನವೇ ಆಗಿರುವಂತೆ, ಎಂದರೆ) ಹಾಗಲ್ಲ

ನ ಯದಿದಮಗ್ರ ಆಸ ನ ಭವಿಷ್ಯದತೋ ನಿಧನಾ-
ದನುಮಿತಮಂತರಾ ತ್ವಯಿ ವಿಭಾತಿ ಮೃಷೈಕರಸೇ ।
ಅತ ಉಪಮೀಯತೇ ದ್ರವಿಣಜಾತಿವಿಕಲ್ಪಪಥೈ-
ರ್ವಿತಥಮನೋವಿಲಾಸಮೃತಮಿತ್ಯವಯಂತ್ಯ ಬುಧಾಃ ॥ ೩೭

ಆ ನಿಯಮ ಕೆಲವೆಡೆ ವ್ಯಭಿಚರಿತವಾಗಿದೆ (ಹೇಗೆಂದರೆ, ತಂದೆಯಿಂದ ಹುಟ್ಟಿದ ಮಗನು ತಂದೆಯೆನಿಸಲಾರ, ದೊಣ್ಣೆಯಿಂದ ಹುಟ್ಟಿದ ಘಟಧ್ವಂಸವು ದೊಣ್ಣೆಯಾಗದು) (ಹಾಗಾದರೆ ಉಪಾದಾನಕಾರಣದಿಂದ ಹುಟ್ಟಿದ್ದು ಕಾರಣಸ್ವರೂಪವೇ ಎನ್ನೋಣ, ಚಿನ್ನದಿಂದ ಹುಟ್ಟಿದ ಕುಂಡಲದಂತೆ ಎಂದರೆ) ಅದೂ ಸರಿಯಲ್ಲ ಕೆಲವೆಡೆ ಹುಟ್ಟಿದ ವಸ್ತು ಸುಳ್ಳಾಗಿದೆ (ಹಗ್ಗದಿಂದ ಹುಟ್ಟಿದ ಹಾವು (ರಜ್ಜುಸರ್ಪಸ್ಥಳದಲ್ಲಿ) ಸುಳ್ಳೇ ಸರಿ). ಹಾಗಲ್ಲ, (ಅಲ್ಲಿ ಹಗ್ಗ ಭ್ರಮೆ- ಈ ಎರಡು ಸೇರಿ ಹಾವು ಹುಟ್ಟಿದೆಯಾದ್ದರಿಂದ ದೃಷ್ಟಾಂತ ಸರಿಯಾಗಲಿಲ್ಲ ಎನ್ನುವುದಾದರೆ), ಹಾಗೆ ಇಲ್ಲಿಯೂ ಬ್ರಹ್ಮ, ಅವಿದ್ಯೆ ಈ ಉಭಯದಿಂದ ಜಗತ್ತು ಹುಟ್ಟಿದೆಯಾದ ಪ್ರಯುಕ್ತ ದೃಷ್ಟಾಂತ ಸರಿಯೇ ಆಗಿದೆ (ಜಗತ್ತು ಮಿಥ್ಯೆಯಾದರೂ ಸತ್ಯವೆಂಬ ಭ್ರಮೆಯಿಂದ ವ್ಯವಹಾರ ಸಾಗುತ್ತದೆ). ಆದ್ದರಿಂದ ವ್ಯವಹಾರಸಿದ್ಧಿಗಾಗಿ ಭ್ರಮೆಯನ್ನೊಪ್ಪಬೇಕು (ಇದೇ ವ್ಯಾವಹಾರಿಕ ಸತ್ಯವೆನಿಸುತ್ತದೆ). ಅಂಧಪರಂಪರಾನ್ಯಾಯದಿಂದ ವ್ಯವಹಾರ ನಡೆದಿದೆ. ಹೇ ಸ್ವಾಮಿ, ನಿನ್ನ ವೇದವಾಣಿಯು ನಾನಾಬಗೆಯ ಸಂಮಿಶ್ರಬೋಧನಾಶಕ್ತಿಗಳಿಂದ ಕರ್ಮಜಡರಾದ ಜನರನ್ನು ಭ್ರಾಂತಿಗೊಳಿಸುತ್ತದೆ (೩೬). ಈ ವಿಶ್ವವು ಸೃಷ್ಟಿಗೆ ಪೂರ್ವದಲ್ಲಿ ಇರಲಿಲ್ಲ. ಮುಂದೆ ಪ್ರಳಯವಾದ ಮೇಲೆ ಇರುವುದಿಲ್ಲ. ಆದ್ದರಿಂದ ನಡುವೆ (ವರ್ತಮಾನಕಾಲದಲ್ಲಿ) ಕೇವಲ ವಿಜ್ಞಾನ ಘನನಾದ ನಿನ್ನಲ್ಲಿ ತೋರುತ್ತಿರುವುದು ಹುಸಿಯೆಂದು ಅನುಮಾನದಿಂದ ಸಿದ್ಧವಾಗುತ್ತದೆ. ಆದುದರಿಂದಲೇ ದ್ರವ್ಯಗಳಾದ ಮೃತ್ತಿಕೆ, ಲೋಹಮಣಿ, ಕಬ್ಬಿಣಗಳ ಪ್ರಕಾರಗಳೊಡನೆ[1] ಈ ವಿಶ್ವವು ಹೋಲಿಸಲ್ಪಡುತ್ತದೆ. ಮಿಥ್ಯಾ ಮನೋವಿಲಾಸರೂಪವಾದ ಈ ಜಗತ್ತು ಸತ್ಯವೆಂದು ಅಜ್ಞಾನಿಗಳು ತಿಳಿದಿದ್ದಾರೆ (೩೭).

೧ ಯಥಾ ಸೋಮ್ಯ ಏಕೇನ ಮೃತ್ಪಿಂಡೇನ ಸರ್ವಂ ಮೃನ್ಮಯಂ ವಿಜ್ಞಾತಂ ಸ್ಯಾತ್, ಯಥಾ ಏಕೇನ ಲೋಹಮಣಿನಾ ಸರ್ವಂ ಲೋಹಮಯಂ ವಿಜ್ಞಾತಂ ಸ್ಯಾತ್, ಯಥಾ ಏಕೇನ ನಖನಿಕೃಂತನೇನ ಸರ್ವಂ ಕಾರ್ಷ್ಣಾಯಸಂ ವಿಜ್ಞಾತಂ ಸ್ಯಾತ್ (ಛಾಂ. ೬-೧).

ಸ ಯದಜಯಾ ತ್ವಜಾಮನುಶಯೀತ ಗುಣಾಂಶ್ಚ ಜುಷನ್
ಭಜತಿ ಸರೂಪತಾಂ ತದನು ಮೃತ್ಯುಮಪೇತಭಗಃ।
ತ್ವಮುತ ಜಹಾಸಿ ತಾಮಹಿರಿವ ತ್ವಚಮಾತ್ತಭಗೋ
ಮಹಸಿ ಮಹೀಯಸೇಽಷ್ಟಗುಣಿತೇಽಪರಿಮೇಯಭಗಃ॥ ೩೮

ಯದಿ ನ ಸಮುದ್ಧರಂತಿ ಯತಯೋ ಹೃದಿ ಕಾಮಜಟಾ
ದುರಧಿಗಮೋಽಸತಾಂ ಹೃದಿ ಗತೋಽಸ್ಮೃತಕಂಠಮಣಿಃ।
ಅಸುತೃಪಯೋಗಿನಾಮುಭಯತೋಽಪ್ಯಸುಖಂ ಭಗವ-
ನ್ನನಪಗತಾಂತಕಾದನಧಿರೂಢಪದಾದ್ ಭವತಃ॥ ೩೯

ತ್ವದವಗಮೀ ನ ವೇತ್ತಿ ಭವದುತ್ಥ ಶುಭಾಶುಭಯೋ-
ರ್ಗುಣವಿಗುಣಾನ್ವಯಾಂಸ್ತರ್ಹಿ ದೇಹಭೃತಾಂ ಚ ಗಿರಃ।
ಅನುಯುಗಮನ್ವಹಂ ಸಗುಣ ಗೀತಪರಂಪರಯಾ
ಶ್ರವಣಭೃತೋ ಯತಸ್ತ್ವಮಪವರ್ಗಗತಿರ್ಮನುಜೈಃ॥ ೪೦

ಮಾಯೆಯಿಂದ ಮೋಹಿತನಾದ ಜೀವನು (ನಾಮರೂಪಾತ್ಮಕವಾದ) ಅವಿದ್ಯೆಯನ್ನು ಯಾವಾಗ ಆಲಿಂಗಿಸುವನೋ ಆಗ ದೇಹೇಂದ್ರಿಯಾದಿ ಗುಣಗಳನ್ನು (ತಾನೆಂಬ ಭ್ರಮೆಯಿಂದ) ಸೇವಿಸುತ್ತ, ಅವುಗಳ ಧರ್ಮವನ್ನು ಪಡೆದು ದೇಹೇಂದ್ರಿಯಾದಿ ಸ್ವರೂಪನೇ ಆಗಿಬಿಡುತ್ತಾನೆ. ಅನಂತರ ತನ್ನ ಮಹಿಮೆಯನ್ನು ಕಳೆದುಕೊಂಡ ಆತನ ಮೃತ್ಯುರೂಪವಾದ ಸಂಸಾರದಲ್ಲಿ ತೊಳಲುತ್ತಾನೆ. ನಿತ್ಯೈಶ್ವರ್ಯಸಂಪನ್ನನಾದ ನೀನಾದರೋ, ಹಾವು ಪೊರೆಯನ್ನು ಬಿಟ್ಟಂತೆ, ಮಾಯೆಯನ್ನು ತೊರೆದಿರುತ್ತೀಯೆ! ಊಹಾತೀತಮಹಿಮನಾದ ನೀನು ಅಣಿಮಾದ್ಯಷ್ಟವಿಭೂತಿಸಹಿತವಾದ ನಿನ್ನ ಮಹಿಮೆಯಲ್ಲಿ ವಿರಾಜಿಸುತ್ತಲೇ ಇರುತ್ತೀಯೆ! (೩೮). ಹೇ ಸ್ವಾಮಿ, (ಬಹಿಃಸಂಗವನ್ನು ತೊರೆದ) ಯತಿಗಳಾದರೂ ತಮ್ಮ ಹೃದಯದಲ್ಲಿರುವ ಕಾಮವಾಸನೆಗಳನ್ನು ಕಿತ್ತೆಸೆಯದಿದ್ದರೆ, ಅಂತಹ ದುರ್ಜನರಿಗೆ ನೀನು ಹೃದಯವಾಸಿಯಾದರೂ ದುರ್ಲಭ. ಕೊರಳಿನಲ್ಲೇ ಇದ್ದರೂ ಮರೆತುಹೋದ ರತ್ನದಂತೆ ಇರುತ್ತೀಯೆ. ಇಂದ್ರಿಯ ತೃಪ್ತಿಯಲ್ಲಿ ಮೈಮರೆತ ಯೋಗಿಗಳಿಗೆ ಇಹಪರಗಳೆರಡರಲ್ಲೂ ಸುಖವಿಲ್ಲ. ಏಕೆಂದರೆ, ಬೆನ್ನಟ್ಟಿರುವ ಯಮನಿಂದ ಇಹದಲ್ಲಿ ಭಯವಿದೆ. ನಿನ್ನನ್ನರಿಯದಿರುವುದರಿಂದ (ಮರಣಾನಂತರವೂ) ನರಕಾದಿ ದುಃಖವೇ ಇರುವುದು (೩೯). ಹೇ

ದ್ಯುಪತಯ ಏವ ತೇ ನ ಯಯುರಂತಮನಂತತಯಾ
ತ್ವಮಪಿ ಯದಂತರಾಂಡನಿಚಯಾ ನನು ಸಾವರಣಾಃ ।
ಖ ಇವ ರಜಾಂಸಿ ವಾಂತಿ ವಯಸಾ ಸಹ ಯಚ್ಛ್ರುತಯ-
ಸ್ತ್ವಯಿ ಹಿ ಫಲಂತ್ಯತನ್ನಿರಸನೇನ ಭವನ್ನಿಧನಾಃ ॥ ೪೧

ಶ್ರೀಭಗವಾನುವಾಚ-

ಇತ್ಯೇತದ್ ಬ್ರಹ್ಮಣಃ ಪುತ್ರಾ ಆಶ್ರುತ್ಯಾತ್ಮಾನುಶಾಸನಮ್ ।
ಸನಂದನಮಥಾನರ್ಚುಃ ಸಿದ್ಧಾ ಜ್ಞಾತ್ವಾಽಽತ್ಮನೋ ಗತಿಮ್ ॥ ೪೨

ಇತ್ಯಶೇಷಸಮಾಮ್ನಾಯಪುರಾಣೋಪನಿಷದ್ರಸಃ ।
ಸಮುದ್ಧೃತಃ ಪೂರ್ವಜಾತೈರ್ವ್ಯೋಮಯಾನೈರ್ಮಹಾತ್ಮಭಿಃ ॥ ೪೩

ಷಡ್ಗುಣೈಶ್ವರ್ಯಯುಕ್ತ ನಿನ್ನನ್ನು ಅರಿತವನು (ಕರ್ಮಫಲದಾತೃವಾದ) ನಿನ್ನಿಂದ ಉಂಟಾದ ಶುಭಾಶುಭ ಫಲಗಳಾದ ಸುಖದುಃಖಗಳ ಪ್ರಾಪ್ತಿಯನ್ನು ಗಣಿಸುವುದೇ ಇಲ್ಲ. ಜನರಾಡುವ (ಸರಿ ತಪ್ಪುಗಳೆಂಬ) ಮಾತುಗಳನ್ನೂ ಅವನು ಗಮನಿಸುವುದಿಲ್ಲ. ಏಕೆಂದರೆ, ಪ್ರತಿಯುಗದಲ್ಲಿಯೂ ಉಪದೇಶ ಪರಂಪರೆಯಿಂದ ಶ್ರವಣಪೂರ್ವಕವಾಗಿ ಸರ್ವದಾ ಹೃದಯದಲ್ಲಿ ಮನುಜರಿಂದ ಧರಿಸಲ್ಪಟ್ಟಿರುವ ನೀನು ಅವರಿಗೆ ಮೋಕ್ಷಪ್ರದನಾಗಿರುತ್ತೀಯೆ (೪೦). (ಅನಂತನಾದ) ನಿನ್ನ ಅಂತವು ಲೋಕಪಾಲರಿಗೂ ತಿಳಿದಿಲ್ಲ. ಅಂತವೇ ಇಲ್ಲದ್ದರಿಂದ ಅದು ನಿನಗೂ ಗೊತ್ತಿಲ್ಲ! ನಿನ್ನ ಒಡಲಲ್ಲಿ ಬ್ರಹ್ಮಾಂಡಗಳ ರಾಶಿಗಳೇ ಆವರಣಸಹಿತನಾಗಿ ಓಲಾಡುತ್ತವೆಯಲ್ಲವೆ ! ಆಕಾಶದಲ್ಲಿ ಧೂಳಿನ ಕಣಗಳಂತೆ ಬ್ರಹ್ಮಾಂಡಗಳು ಕಾಲಚಕ್ರದೊಡನೆ ಒಟ್ಟಿಗೇ ಉರುಳಾಡುತ್ತಿವೆ ! ಆದ್ದರಿಂದ ಶ್ರುತಿಗಳು ನಿನ್ನ ಅನಂತಸ್ವರೂಪವನ್ನು ಫಲತಃ ಸೂಚಿಸುತ್ತವೆಯೇ ಹೊರತು ಇಷ್ಟೇ ಎಂದು ಹೇಳುವುದಿಲ್ಲ. ನಿನ್ನನ್ನೇ ಅವಧಿಯಾಗಿಟ್ಟುಕೊಂಡು 'ನೇತಿ ನೇತಿ, ಇದಲ್ಲ-ಹೀಗಲ್ಲ' ಎಂದು ಮಾತ್ರ ಹೇಳುತ್ತೇವೆ'' (೪೧). ಭಗವಂತನಾದ ನಾರಾಯಣಋಷಿಯು ಹೇಳಿದನು : ''ಈ ಪ್ರಕಾರವಾಗಿ ಆತ್ಮ ವಿದ್ಯೆಯನ್ನು ಸನಂದನನು ಹೇಳಿದ್ದನ್ನು ಕೇಳಿ ಬ್ರಹ್ಮಪುತ್ರರೂ ಸಿದ್ಧರೂ ಆದ ಆ ಮಹರ್ಷಿಗಳು ಆತ್ಮ ಸ್ವರೂಪವನ್ನರಿತು ಸನಂದನನನ್ನು ಪೂಜಿಸಿದರು. ಇದು ಸಮಸ್ತ ವೇದಪುರಾಣಗಳ ರಹಸ್ಯವಾದ ಸಾರಭೂತ ರಸ. ಪುರಾತನರೂ ಗಗನ

ತ್ವಂ ಚೈತದ್ ಬ್ರಹ್ಮದಾಯಾದ ಶ್ರದ್ಧಯಾऽऽತ್ಮಾನುಶಾಸನಮ್ ।
ಧಾರಯಂಶ್ಚರ ಗಾಂ ಕಾಮಂ ಕಾಮಾನಾಂ ಭರ್ಜನಂ ನೃಣಾಮ್ ॥ ೪೪

ಶ್ರೀಶುಕ ಉವಾಚ-
ಏವಂ ಸ ಋಷಿಣಾऽऽದಿಷ್ಟಂ ಗೃಹೀತ್ವಾ ಶ್ರದ್ಧಯಾऽऽತ್ಮವಾನ್ ।
ಪೂರ್ಣಃ ಶ್ರುತಧರೋ ರಾಜನ್ನಾಹ ವೀರವ್ರತೋ ಮುನಿಃ ॥ ೪೫

ನಾರದ ಉವಾಚ-
ನಮಸ್ತಸ್ಮೈ ಭಗವತೇ ಕೃಷ್ಣಾಯಾಮಲಕೀರ್ತಯೇ ।
ಯೋ ಧತ್ತೇ ಸರ್ವಭೂತಾನಾಮಭವಾಯೋಶತೀಃ ಕಲಾಃ ॥ ೪೬

ಇತ್ಯಾದ್ಯಮೃಷಿಮಾನಮ್ಯ ತಚ್ಛಿಷ್ಯಾಂಶ್ಚ ಮಹಾತ್ಮನಃ ।
ತತೋऽಗಾದಾಶ್ರಮಂ ಸಾಕ್ಷಾತ್ ಪಿತುರ್ದ್ವೈಪಾಯನಸ್ಯ ಮೇ ॥ ೪೭

ಸಭಾಜಿತೋ ಭಗವತಾ ಕೃತಾಸನಪರಿಗ್ರಹಃ ।
ತಸ್ಮೈ ತದ್ ವರ್ಣಯಾಮಾಸ ನಾರಾಯಣಮುಖಾಚ್ಛ್ರುತಮ್ ॥ ೪೮

ಇತ್ಯೇತದ್ ವರ್ಣಿತಂ ರಾಜನ್ ಯನ್ನಃ ಪ್ರಶ್ನಃ ಕೃತಸ್ತ್ವಯಾ ।
ಯಥಾ ಬ್ರಹ್ಮಣ್ಯನಿರ್ದೇಶ್ಯೇ ನಿರ್ಗುಣೇऽಪಿ ಮನಶ್ಚರೇತ್ ॥ ೪೯

ಗಾಮಿಗಳೂ ಆದ ಮಹಾತ್ಮರು ಹಿಂಡಿ ತೆಗೆದದ್ದು (೪೨-೪೩). ಬ್ರಹ್ಮಪುತ್ರ-ನಾರದ, ಈ ಬ್ರಹ್ಮವಿದ್ಯೆಯು ಮನುಷ್ಯರ ಕಾಮನೆಗಳನ್ನು ಹುರಿದು ನಾಶಮಾಡುವಂತಹದು. ನೀನು ಇದನ್ನು ಹೃದಯದಲ್ಲಿ ಧಾರಣೆಮಾಡಿ ಯಥೇಷ್ಟವಾಗಿ ಲೋಕದಲ್ಲಿ ಸಂಚರಿಸುತ್ತಿರು'' (೪೪). ಶುಕಮುನಿಗಳು ಹೇಳಿದರು : ಪರೀಕ್ಷಿತರಾಜ, ಹೀಗೆ ನಾರಾಯಣಋಷಿಯು ಉಪದೇಶಿಸಿದ್ದನ್ನು ನೈಷ್ಠಿಕರಾದ ನಾರದಮುನಿಗಳು ಗ್ರಹಿಸಿ ಕೃತಕೃತ್ಯರಾಗಿ ಉಪದೇಶವನ್ನು ಮನಸ್ಸಿನಲ್ಲಿ ಧಾರಣೆ ಮಾಡಿ ಹೀಗೆಂದರು (೪೫) : ''ಪರಿಶುದ್ಧ ಕೀರ್ತಿಯಾದ ಭಗವಾನ್ ಶ್ರೀಕೃಷ್ಣನಿಗೆ ನಮಸ್ಕಾರ. ಇವನು ಸಕಲಪ್ರಾಣಿಗಳಿಗೂ ಪುನರ್ಜನ್ಮವಿಲ್ಲದ ಮೋಕ್ಷವನ್ನು ಕೊಡುವುದಕ್ಕಾಗಿ ಪ್ರಿಯಕರವಾದ ಎಲ್ಲ ಭಗವತ್ಕಲೆಗಳನ್ನೂ ಧರಿಸಿದ್ದಾನೆ'' ಹೀಗೆ ನುಡಿಯುತ್ತ ಆದ್ಯನಾದ ನಾರಾಯಣಋಷಿಗೆ ನಮಸ್ಕರಿಸಿ ಅವನ ಶಿಷ್ಯರಾದ ಮಹಾತ್ಮರಿಗೂ ವಂದಿಸಿ, ಸಾಕ್ಷಾತ್ ನನ್ನ ತಂದೆಯವರಾದ ವ್ಯಾಸಮುನಿಗಳ ಆಶ್ರಮಕ್ಕೆ ಹೋದರು (೪೬-೪೭). ಅಲ್ಲಿ ವ್ಯಾಸಮುನಿಗಳಿಂದ

ಯೋಽಸ್ಯೋತ್ಪ್ರೇಕ್ಷಕ ಆದಿಮಧ್ಯನಿಧನೇ ಯೋಽವ್ಯಕ್ತಜೀವೇಶ್ವರೋ
ಯಃ ಸೃಷ್ಟ್ವೇದಮನುಪ್ರವಿಶ್ಯ ಋಷಿಣಾ ಚಕ್ರೇ ಪುರಃ ಶಾಸ್ತಿ ತಾಃ ।
ಯಂ ಸಂಪದ್ಯ ಜಹಾತ್ಯಜಾಮನುಶಯೀ ಸುಪ್ತಃ ಕುಲಾಯಂ ಯಥಾ
ತಂ ಕೈವಲ್ಯನಿರಸ್ತಯೋನಿಮಭಯಂ ಧ್ಯಾಯೇದಜಸ್ರಂ ಹರಿಮ್ ॥ ೫೦

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಸಪ್ತಾಶೀತಿತಮಾಧ್ಯಾಯಃ

ಸತ್ಕೃತರಾಗಿ ಪೀಠದಲ್ಲಿ ಕುಳಿತುಕೊಂಡು, ನಾರಾಯಣಋಷಿಯಿಂದ ಶ್ರವಣಮಾಡಿದ್ದೆಲ್ಲವನ್ನೂ ಅವರಿಗೆ ತಿಳಿಸಿದರು. ಪರೀಕ್ಷಿತರಾಜ, ನೀನು ನಮಗೆ ಒಂದು ಪ್ರಶ್ನೆಯನ್ನು ಹಾಕಿದೆಯಲ್ಲ, ಶಬ್ದದಿಂದ ವರ್ಣಿಸಲು ಅಶಕ್ಯವೂ ನಿರ್ಗುಣವೂ ಆದ ಬ್ರಹ್ಮ ವಸ್ತುವಿನಲ್ಲಿ ಮನಸ್ಸು ಹರಿಯುವುದು ಹೇಗೆ ? (ಶ್ರುತಿಗಳು ವರ್ಣಿಸುವುದು ಹೇಗೆ ?) ಎಂದು, ಅದಕ್ಕೆ ಉತ್ತರವಾಗಿ ಈ ರೀತಿಯಲ್ಲಿ ವರ್ಣಿಸಿದ್ದಾಯಿತು [೧] (೪೮-೪೯). ಯಾವಾತನು ಸರಿಯಾಗಿ ಆಲೋಚಿಸಿ ಈ ಜಗತ್ತಿನ ಸೃಷ್ಟಿಸ್ಥಿತಿ ಲಯಗಳನ್ನು ಮಾಡುತ್ತಿರುವನೋ ಪ್ರಕೃತಿ ಪುರುಷ (ಜೀವ)ರಿಗೆ ಒಡೆಯನಾಗಿರುವನೋ, ಈ ವಿಶ್ವವನ್ನು ಸೃಜಿಸಿ ಜೀವನೊಡನೆ ಅನುಪ್ರವೇಶಮಾಡಿ ಅವನ ಭೋಗಕ್ಕಾಗಿ ಶರೀರಗಳನ್ನು ನಿರ್ಮಿಸಿ ನಿಯಮಿಸುತ್ತಿರುವನೋ, ಯಾವಾತನನ್ನು ಸೇರಿ ಭಕ್ತನು ಅವಿದ್ಯೆಯನ್ನು-ನಿದ್ರಿಸುವವನು ದೇಹವನ್ನು ಬಿಟ್ಟಿರುವಂತೆ-ತ್ಯಜಿಸುವನೋ, ಯಾವಾತನು ಸ್ವಸ್ವರೂಪಾವಸ್ಥಾನದಿಂದ ಮೂಲಕಾರಣವಾದ ಮಾಯೆಯನ್ನು ತಿರಸ್ಕರಿಸಿರುವನೋ ಅಂತಹ ಅಭಯನಾದ ಶ್ರೀಹರಿಯನ್ನು ಸದಾ ಧ್ಯಾನಿಸುತ್ತಿರಬೇಕು (೫೦).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಂಬತ್ತೇಳನೆಯ ಅಧ್ಯಾಯ

---

[೧] ಸಗುಣವನ್ನು ವರ್ಣಿಸಿ ತಟಸ್ಥ ಲಕ್ಷಣದಿಂದ ನಿರ್ಗುಣದ ಕಡೆಗೆ ಕೈತೋರಿಸಲು ಸಾಧ್ಯ ಎಂದು ಅಭಿಪ್ರಾಯ.

ಅಷ್ಟಾಶೀತಿತಮಾಧ್ಯಾಯಃ

ರಾಜೋವಾಚ-

ದೇವಾಸುರಮನುಷ್ಯೇಷು ಯೇ ಭಜಂತ್ಯ ಶಿವಂ ಶಿವಮ್ ।
ಪ್ರಾಯಸ್ತೇ ಧನಿನೋ ಭೋಜಾ ನ ತು ಲಕ್ಷ್ಮ್ಯಾಃ ಪತಿಂ ಹರಿಮ್ ॥ ೧

ಏತದ್ ವೇದಿತುಮಿಚ್ಛಾಮಃ ಸಂದೇಹೋಽತ್ರ ಮಹಾನ್ ಹಿ ನಃ ।
ವಿರುದ್ಧಶೀಲಯೋಃ ಪ್ರಭ್ವೋರ್ವಿರುದ್ಧಾ ಭಜತಾಂ ಗತಿಃ ॥ ೨

ಶ್ರೀಶುಕ ಉವಾಚ-

ಶಿವಃ ಶಕ್ತಿಯುತಃ ಶಶ್ವತ್ ತ್ರಿಲಿಂಗೋ ಗುಣಸಂವೃತಃ ।
ವೈಕಾರಿಕಸ್ತೈಜಸಶ್ಚ ತಾಮಸಶ್ಚೇತ್ಯಹಂ ತ್ರಿಧಾ ॥ ೩

ತತೋ ವಿಕಾರಾ ಅಭವನ್ ಷೋಡಶಾಮೀಷು ಕಂಚನ ।
ಉಪಧಾವನ್ ವಿಭೂತೀನಾಂ ಸರ್ವಾಸಾಮಶ್ನುತೇ ಗತಿಮ್ ॥ ೪

ಅಧ್ಯಾಯ ೮೮

ವೃಕಾಸುರನ ದೆಸೆಯಿಂದ ಶಿವನು ಸಂಕಟಕ್ಕೆ ಒಳಗಾಗುವುದು. ನಾರಾಯಣನು ಅವನನ್ನು ಸಂಕಟದಿಂದ ಪಾರುಮಾಡುವುದು.

ಪರೀಕ್ಷಿತರಾಜನು ಕೇಳಿದನು : ''ಶುಕಮಹರ್ಷಿಗಳೆ, ದೇವಾಸುರ ಮನುಷ್ಯರಲ್ಲಿ ಯಾರು ಶಿವನನ್ನು ಭಜಿಸುತಾರೋ ಅವರು ಪ್ರಾಯಿಕವಾಗಿ ಧನಿಕರೂ ಭೋಗಿಗಳು ಆಗಿರುತ್ತಾರೆ. ಅವರು ಭಜಿಸುವ ಶಿವನಾದರೋ ಭೋಗವನ್ನು ತ್ಯಜಿಸಿದವನು. ಆದರೆ ಲಕ್ಷ್ಮೀಪತಿಯಾಗಿ (ಸರ್ವಭೋಗ ಯುಕ್ತನಾದ) ಶ್ರೀಹರಿಯನ್ನು ಸೇವಿಸತಕ್ಕವರು ಸಾಮಾನ್ಯವಾಗಿ ಧನಿಕರೂ ಭೋಗಿಗಳು ಆಗಿರುವುದಿಲ್ಲ! (೧). ಇದೇಕೆಂದು ತಿಳಿಯಲು ಬಯಸುತ್ತೇನೆ. ಈ ವಿಷಯದಲ್ಲಿ ನನಗೆ ದೊಡ್ಡ ಸಂದೇಹ ಹುಟ್ಟಿದೆ. ಪ್ರಭುಗಳಾದ ಶಿವ-ವಿಷ್ಣು ಇವರಿಬ್ಬರ ಶೀಲಸ್ವಭಾವಗಳು ವಿರುದ್ಧವಾಗಿವೆ. ಅವರ ಭಕ್ತರಿಗೆ ಒದಗುವ ಗತಿಯೂ ವಿರುದ್ಧವಾಗಿದೆ'' (೨). ಶುಕಮುನಿಗಳು ಹೇಳಿದರು: ರಾಜ, ಸರ್ವದಾ ಶಕ್ತಿಯುಕ್ತನಾಗಿರುವುದರಿಂದ ಶಿವನು ಸಗುಣನಾಗಿರುತ್ತಾನೆ. ವೈಕಾರಿಕ, ತೈಜಸ, ತಾಮಸ ಎಂಬುದಾಗಿ ಅಹಂಕಾರವು ಮೂರು ವಿಧ. ಈ ಮೂರು

ಹರಿರ್ಹಿ ನಿರ್ಗುಣಃ ಸಾಕ್ಷಾತ್ ಪುರುಷಃ ಪ್ರಕೃತೇಃ ಪರಃ ।
ಸ ಸರ್ವದೃಗುಪದ್ರಷ್ಟಾತಂ ಭಜನ್ ನಿರ್ಗುಣೋ ಭವೇತ್ ॥ ೫

ನಿವೃತ್ತೇಷ್ವಶ್ವಮೇಧೇಷು ರಾಜಾ ಯುಷ್ಮತ್ಪಿತಾಮಹಃ ।
ಶೃಣ್ವನ್ ಭಗವತೋ ಧರ್ಮಾನಪೃಚ್ಛದಿದಮಚ್ಯುತಮ್ ॥ ೬

ಸ ಆಹ ಭಗವಾಂಸ್ತಸ್ಮೈ ಪ್ರೀತಃ ಶುಶ್ರೂಷವೇ ಪ್ರಭುಃ ।
ನೃಣಾಂ ನಿಃಶ್ರೇಯಸಾರ್ಥಾಯ
ಯೋಽವತೀರ್ಣೋ ಯದೋಃ ಕುಲೇ ॥ ೭

ಶ್ರೀಭಗವಾನುವಾಚ-
ಯಸ್ಯಾಹಮನುಗೃಹ್ಣಾಮಿ ಹರಿಷ್ಯೇ ತದ್ಧನಂ ಶನೈಃ ।
ತತೋಽಧನಂ ತ್ಯಜಂತ್ಯಸ್ಯ ಸ್ವಜನಾ ದುಃಖದುಃಖಿತಮ್ ॥ ೮

ಶಿವನಲ್ಲಿರುವುದರಿಂದ ಅವನು ತ್ರಿಲಿಂಗನೆನಿಸುತ್ತಾನೆ (೩). ಈ ಅಹಂಕಾರಿದಿಂದ (ಮನಸ್ಸು, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಪಂಚಮಹಾಭೂತಗಳು ಎಂಬ) ಹದಿನಾರು ವಿಕಾರಗಳು ಹುಟ್ಟಿವೆ. ಇವುಗಳಲ್ಲಿ ಯಾವ ವಿಕಾರದ ಅಧಿದೇವತೆಯನ್ನು ಭಜಿಸಿದರೂ ಅದಕ್ಕೆ ಅನುರೂಪವಾದ ಐಶ್ವರ್ಯಗಳಲ್ಲಿ ಒಂದು ಪ್ರಾಪ್ತವಾಗುತ್ತದೆ (೪). ವಿಷ್ಣುವಾದರೋ ನಿರ್ಗುಣ. ಪ್ರಕೃತಿಗೆ ಸಾಕ್ಷಾತ್ ಪರದಲ್ಲಿರುವ ಪರಮಪುರುಷ. ಆದ್ದರಿಂದ ಅವನು ಸಾಕ್ಷಿಯಾಗಿ ಸರ್ವವನ್ನೂ ನೋಡತಕ್ಕವನು. ಅಂತಹ ಹರಿಯನ್ನು ಭಜಿಸತಕ್ಕವನು ನಿರ್ಗುಣನಾಗುತ್ತಾನೆ ! [೧](೫). ಅಶ್ವಮೇಧಯಾಗವು ಮುಗಿದಮೇಲೆ ನಿನ್ನ ಅಜ್ಜನಾದ ಧರ್ಮರಾಜನು ಭಗವಂತನ ಸ್ವಭಾವವೇನೆಂಬುದನ್ನು ಕೇಳಿ ತಿಳಿಯಬೇಕೆಂದು ಈ ವಿಷಯವನ್ನು ಕುರಿತು ಅಚ್ಯುತನನ್ನು ಪ್ರಶ್ನಿಸಿದನು. ಜನರಿಗೆ ಮುಕ್ತಿಯನ್ನು ಕರುಣಿಸುವುದಕ್ಕಾಗಿ ಯದುಕುಲದಲ್ಲಿ ಅವತರಿಸಿದ ಆ ಪ್ರಭುವು ಸಂತೋಷದಿಂದ ಧರ್ಮರಾಜನಿಗೆ ಹೀಗೆ ಹೇಳಿದನು (೬-೭). ಭಗವಂತನು ಹೇಳಿದ್ದೇನೆಂದರೆ : ''ನಾನು ಯಾರ ಮೇಲೆ ಅನುಗ್ರಹ ತೋರುವೆನೋ ಅವರ ಧನವನ್ನು ಮೆಲ್ಲಗೆ ಕಿತ್ತುಕೊಳ್ಳುವೆನು ! ಆಗ ಆತನು ನಿರ್ಧನನಾಗಿ ದುಃಖದಲ್ಲಿ

೧ ಗುಣರಹಿತವಾದ ಬ್ರಹ್ಮದಲ್ಲಿ ಲೀನನಾಗಿ ಬ್ರಹ್ಮವೇ ಆಗುತ್ತಾನೆ.

ಸ ಯದಾ ವಿತಥೋದ್ಯೋಗೋ ನಿರ್ವಿಣ್ಣಃ ಸ್ಯಾದ್ ಧನೇಹಯಾ ।
ಮತ್ಪರೈಃ ಕೃತಮೈತ್ರಸ್ಯ ಕರಿಷ್ಯೇ ಮದನುಗ್ರಹಮ್ ॥ ೯

ತದ್ಬ್ರಹ್ಮ ಪರಮಂ ಸೂಕ್ಷ್ಮಂ ಚಿನ್ಮಾತ್ರಂ ಸದನಂತಕಮ್ ।
ಅತೋ ಮಾಂ ಸುದುರಾರಾಧ್ಯಂ ಹಿತ್ವಾನ್ಯಾನ್ ಭಜತೇ ಜನಃ ॥ ೧೦

ತತಸ್ತ ಆಶುತೋಷೇಭ್ಯೋ ಲಬ್ಧರಾಜ್ಯಶ್ರಿಯೋದ್ಧತಾಃ ।
ಮತ್ತಾಃ ಪ್ರಮತ್ತಾ ವರದಾನ್ ವಿಸ್ಮರಂತ್ಯವಜಾನತೇ ॥ ೧೧

ಶ್ರೀಶುಕ ಉವಾಚ-
ಶಾಪಪ್ರಸಾದಯೋರೀಶಾ ಬ್ರಹ್ಮವಿಷ್ಣುಶಿವಾದಯಃ ।
ಸದ್ಯಃ ಶಾಪಪ್ರಸಾದೋಽಂಗ ಶಿವೋ ಬ್ರಹ್ಮಾ ನ ಚಾಚ್ಯುತಃ ॥ ೧೨

ತೊಳಲಾಡುತ್ತಿರುವಂತೆ ಆಗುತ್ತಾನೆ. ಸ್ವಜನರು ಅವನನ್ನು ದೂರವಿರಿಸುತ್ತಾರೆ. ಮತ್ತೆ ಅವನು ಧನದ ಆಸೆಯಿಂದ ಪ್ರಯತ್ನಿಸಿದರೂ ಅವನ ಉದ್ಯಮವನ್ನು ನಿಷ್ಫಲಗೊಳಿಸುವೆನು. ಆಗ ಅವನಿಗೆ ವೈರಾಗ್ಯ ಹುಟ್ಟುತ್ತದೆ. ಅನಂತರ ನನ್ನ ಭಕ್ತರೊಡನೆ ಸ್ನೇಹ ಬೆಳೆಯಲಾಗಿ ನಾನು ಅನುಗ್ರಹಿಸುವೆನು[೧] (೮-೯). ಅದರ ಫಲ ಪರಮಸೂಕ್ಷ್ಮವಾದ ಬ್ರಹ್ಮ ವಸ್ತು. ಅದು ಚಿನ್ಮಾತ್ರವೂ ಸದ್ರೂಪವೂ ಅನಂತವೂ ಆಗಿದೆ. ಅದ್ದರಿಂದ ನನ್ನನ್ನು ಆರಾಧಿಸುವುದು ಬಹಳ ಕಷ್ಟವೆಂದು ತಿಳಿದು ಜನರು ಅನ್ಯದೇವತೆಗಳನ್ನು ಭಜಿಸುತ್ತಾರೆ (೧೦). ಬಹುಬೇಗನೆ ಸಂತುಷ್ಟರಾಗುವ ಆ ದೇವತೆಗಳಿಂದ ರಾಜ್ಯ, ಐಶ್ವರ್ಯ ಮೊದಲಾದ್ದನ್ನು ಗಳಿಸಿ ಉದ್ಧತರಾಗುತ್ತಾರೆ. ಮದವೇರಿದವರೂ ಉನ್ಮತ್ತರೂ ಆಗಿ ವರಗಳನ್ನು ನೀಡಿದ ಆ ದೇವತೆಗಳನ್ನೇ ಮರೆತು ಬಿಡುತ್ತಾರಲ್ಲದೆ ಅವರನ್ನು ಹಂಗಿಸಲು ತೊಡಗುತ್ತಾರೆ'' (೧೧). ಪರೀಕ್ಷಿತರಾಜ, ಬ್ರಹ್ಮ, ವಿಷ್ಣು, ಶಿವ ಮೊದಲಾದವರು ಶಾಪಾನುಗ್ರಹಗಳನ್ನು ಕೊಡಲು ಸಮರ್ಥರಾದವರು. ಅವರಲ್ಲಿ ಬ್ರಹ್ಮ, ಶಿವ

---

೧ ಅಭಿಪ್ರಾಯ ಹೀಗೆ : ''ನನ್ನ ಭಕ್ತನಿಗೆ ಮೊದಲು ಐಶ್ವರ್ಯವನ್ನು ನೀಡುತ್ತೇನೆ. ಆಗಲೂ ಅವನ ಭಕ್ತಿ ನನ್ನಲ್ಲಿ ದೃಢವಾಗಿ ನೆಲೆಸಿದರೆ, ಅವನಿಗೆ ನಿಜವಾದ ವೈರಾಗ್ಯವನ್ನು ಹುಟ್ಟಿಸುವುದಕ್ಕಾಗಿ ಅವನ ಐಶ್ವರ್ಯವನ್ನು ಕಿತ್ತು ಕೊಳ್ಳುತ್ತೇನೆ. ಅವನು ಸಮಸ್ತ ಭೋಗಗಳಲ್ಲಿಯೂ ವಿರಕ್ತನಾಗಿ ಭಕ್ತಜನರೊಡನೆ ಬೆರೆಯುವುದು ನನ್ನ ಅನುಗ್ರಹದಿಂದ'' ಎಂದು

ಅತ್ರ ಚೋದಾಹರಂತೀಮಮಿತಿಹಾಸಂ ಪುರಾತನಮ್ ।
ವೃಕಾಸುರಾಯ ಗಿರಿಶೋ ವರಂ ದತ್ತ್ವಾಽಽಪ ಸಂಕಟಮ್ ॥ ೧೩

ವೃಕೋ ನಾಮಾಸುರಃ ಪುತ್ರಃ ಶಕುನೇಃ ಪಥಿ ನಾರದಮ್ ।
ದೃಷ್ಟ್ವಾಽಽಶುತೋಷಂ ಪಪ್ರಚ್ಛ ದೇವೇಷು ತ್ರಿಷು ದುರ್ಮತಿಃ ॥ ೧೪

ಸ ಆಹ ದೇವಂ ಗಿರಿಶಮುಪಾಧಾವಾಶು ಸಿದ್ಧ್ಯಸಿ ।
ಯೋಽಲ್ಪಾಭ್ಯಾಂ ಗುಣದೋಷಾಭ್ಯಾಮಾಶು ತುಷ್ಯತಿ ಕುಪ್ಯತಿ ॥ ೧೫

ದಶಾಸ್ಯಬಾಣಯೋಸ್ತುಷ್ಟಃ ಸ್ತುವತೋರ್ವಂದಿನೋರಿವ ।
ಐಶ್ವರ್ಯಮತುಲಂ ದತ್ತ್ವಾ ತತ ಆಪ ಸುಸಂಕಟಮ್ ॥ ೧೬

ಇತ್ಯಾದಿಷ್ಟಸ್ತಮಸುರ ಉಪಾಧಾವತ್ ಸ್ವಗಾತ್ರತಃ ।
ಕೇದಾರ ಆತ್ಮಕ್ರವ್ಯೇಣ ಜುಹ್ವಾನೋಽಗ್ನಿಮುಖಂ ಹರಮ್ ॥ ೧೭

ಇವರಿಬ್ಬರು ಒಡನೆಯೇ ಶಾಪವನ್ನೂ ಕೊಡುತ್ತಾರೆ, ಅನುಗ್ರಹವನ್ನೂ ಮಾಡುತ್ತಾರೆ. ವಿಷ್ಣು ಹಾಗಲ್ಲ (೧೨). ಈ ವಿಷಯವಾಗಿ ಬಲ್ಲವರು ಪುರಾತನವಾದ ಒಂದು ಐತಿಹ್ಯವನ್ನು ಹೇಳುತ್ತಾರೆ- ಶಿವನು ವೃಕಾಸುರನಿಗೆ ಥಟ್ಟನೆ ವರವನ್ನಿತ್ತು ಕಷ್ಟಕ್ಕೆ ಸಿಕ್ಕಿದನು- ಎಂದು (೧೩). ವೃಕಾಸುರನು ಶಕುನಿ ಎಂಬವನ ಮಗ. ಒಂದುಸಲ ದಾರಿಯಲ್ಲಿ ನಾರದ ಮುನಿಗಳನ್ನು ಕಂಡು ಆ ದುರಳನು "ಮುನಿಗಳೆ, ಬ್ರಹ್ಮ ವಿಷ್ಣು ಶಿವ- ಈ ಮೂವರು ದೇವರಲ್ಲಿ ಬೇಗನೆ ಸಂತುಷ್ಟನಾಗಿ ಒಲಿಯತಕ್ಕವನು ಯಾರು ? " ಎಂದು ಕೇಳಿದನು (೧೪). ಆದಕ್ಕೆ ನಾರದರು "ನೀನು ಶಿವನನ್ನು ಭಜಿಸು. ನಿನಗೆ ಬೇಗನೆ ಸಿದ್ಧಿ ದೊರೆಯುವುದು. ಸ್ವಲ್ಪಗುಣವಿದ್ದರೂ ಆತನು ಸಂತೋಷಗೊಂಡು ಮೆಚ್ಚಿಬಿಡುತ್ತಾನೆ. ಹಾಗೆ ಸ್ವಲ್ಪ ದೋಷವಿದ್ದರೆ ಕೋಪಗೊಳ್ಳುವುದೂ ಉಂಟು. ರಾವಣ- ಬಾಣಾಸುರರು ಬಂದಿಗಳಂತೆ ಸ್ತೋತ್ರ ಮಾಡಲಾಗಿ ಶಿವನು ಅವರಿಗೆ ಅಪಾರವಾದ ಐಶ್ವರ್ಯವನ್ನಿತ್ತನು. ಆಮೇಲೆ ಅವರಿಂದ ದೊಡ್ಡ ವಿಪತ್ತಿಗೆ [1] ಸಿಕ್ಕಿಕೊಂಡದ್ದೂ

---

೧ ರಾವಣನು ಕೈಲಾಸವನ್ನು ಅಲ್ಲಾಡಿಸಿದನು. ಬಾಣಾಸುರನ ಪುರವನ್ನು ಶಿವನು ಕಾಯಬೇಕಾಗಿ ಬಂದಿತು.

ದೇವೋಪಲಬ್ಧಿಮಪ್ರಾಪ್ಯ ನಿರ್ವೇದಾತ್ ಸಪ್ತಮೇಽಹನಿ ।
ಶಿರೋಽವೃಶ್ಚತ್ ಸ್ವಧಿತಿನಾ ತತ್ತೀರ್ಥಕ್ಲಿನ್ನಮೂರ್ಧಜಮ್ ॥ ೧೮

ತದಾ ಮಹಾಕಾರುಣಿಕಃ ಸ ಧೂರ್ಜಟಿ-
ರ್ಯಥಾ ವಯಂ ಚಾಗ್ನಿರಿವೋತ್ಥಿತೋಽನಲಾತ್ ।
ನಿಗೃಹ್ಯ ದೋರ್ಭ್ಯಾಂ ಭುಜಯೋರ್ನ್ಯವಾರಯತ್-
ತತ್ಸ್ಪರ್ಶನಾದ್ ಭೂಯ ಉಪಸ್ಕೃತಾಕೃತಿಃ ॥ ೧೯

ತಮಾಹ ಚಾಂಗಾಲಮಲಂ ವೃಣೀಷ್ವ ಮೇ
ಯಥಾಭಿಕಾಮಂ ವಿತರಾಮಿ ತೇ ವರಮ್ ।
ಪ್ರೀಯೇಯ ತೋಯೇನ ನೃಣಾಂ ಪ್ರಪದ್ಯತಾ-
ಮಹೋ ತ್ವಯಾಽಽತ್ಮಾ ಭೃಶಮರ್ದ್ಯತೇ ವೃಥಾ ॥ ೨೦

ಉಂಟು'' ಎಂದರು (೧೫-೧೬). ಹೀಗೆ ನಾರದರು ಹೇಳಲಾಗಿ ವೃಕಾಸುರನು ತನ್ನ ದೇಹವನ್ನೇ ಅರ್ಪಿಸಿ ಆರಾಧಿಸತೊಡಗಿದನು. ಕೇದಾರತೀರ್ಥದ ಬಳಿ ತನ್ನ ದೇಹದ ಮಾಂಸವನ್ನು ಕಿತ್ತು ಅಗ್ನಿಯಲ್ಲಿ ಹವನಮಾಡಿ ದೇವನಾದ[1] ಹರನನ್ನು ಮೆಚ್ಚಿಸಲು ಯತ್ನಿಸಿದನು (೧೭). ಶಿವನು ಪ್ರತ್ಯಕ್ಷನಾಗಲಿಲ್ಲ. ಅದರಿಂದ ಬೇಸರಗೊಂಡ ಅಸುರನು ಆ ತೀರ್ಥದಲ್ಲಿ ಸ್ನಾನಮಾಡಿ ತಲೆಗೂದಲು ಒದ್ದೆಯಾಗಿರುವಾಗ ತನ್ನ ತಲೆಯನ್ನೇ ಕೊಡಲಿಯಿಂದ ಕಡಿದುಕೊಳ್ಳಲು ಉದ್ಯುಕ್ತನಾದನು (೧೮). ಆ ಪರಿಸ್ಥಿತಿಯನ್ನು ಕಂಡು ನಮ್ಮಂತೆಯೇ ಮರುಕಪಟ್ಟು ಮಹಾಕಾರುಣಿಕನಾದ ಈಶ್ವರನು ಮೂರ್ತಿಮತ್ತಾದ ಅಗ್ನಿಯೋ ಎಂಬಂತೆ ಬೆಳಗುತ್ತ ಅಗ್ನಿಕುಂಡದಿಂದ ಆವಿರ್ಭವಿಸಿದನು. ಒಡನೆಯೇ ಎರಡು ಕೈಗಳಿಂದಲೂ ಅಸುರನು ಬಾಹುಗಳನ್ನು ಹಿಡಿದು ತಡೆಯಲಾಗಿ ಗಾಯಗೊಂಡಿದ್ದ ಅಸುರನ ದೇಹವು ಶಿವಸ್ಪರ್ಶದಿಂದ ಮೊದಲಿನಂತೆ ಸ್ವಸ್ಥವಾಯಿತು (೧೯). ಈಶ್ವರನು ''ಅಪ್ಪಾ, ಈ ಸಾಹಸಬೇಡ. ನಿನಗೆ ಏನು ಬೇಕೋ ಅದನ್ನು ಕೇಳಿಕೋ.

---

೧ ಮೂಲದಲ್ಲಿ 'ಅಗ್ನಿಮುಖ' ಎಂದಿದೆ. ದೇವ ಎಂದರ್ಥ. ಅಗ್ನಿಯ ಮೂಲಕ ಹವಿಸ್ಸನ್ನು ಸೇವಿಸುವುದರಿಂದ ದೇವತೆಗಳು ಅಗ್ನಿಮುಖರು. 'ಅಗ್ನಿಮುಖಾ ವೈ ದೇವಾಃ' ಎಂದು ಶ್ರುತಿ.

ದೇವಂ ಸ ವವ್ರೇ ಪಾಪೀಯಾನ್ ವರಂ ಭೂತಭಯಾವಹಮ್ ।
ಯಸ್ಯ ಯಸ್ಯ ಕರಂ ಶೀರ್ಷ್ಣಿ ಧಾಸ್ಯೇ ಸ ಮ್ರಿಯತಾಮಿತಿ ॥ ೨೧

ತಚ್ಛ್ರುತ್ವಾ ಭಗವಾನ್ ರುದ್ರೋ ದುರ್ಮನಾ ಇವ ಭಾರತ ।
ಓಮಿತಿ ಪ್ರಹಸಂಸ್ತಸ್ಮೈ ದದೇಽಹೇರಮೃತಂ ಯಥಾ ॥ ೨೨

ಇತ್ಯುಕ್ತಃ ಸೋಽಸುರೋ ನೂನಂ ಗೌರೀಹರಣಲಾಲಸಃ ।
ಸ ತದ್ವರಪರೀಕ್ಷಾರ್ಥಂ ಶಂಭೋರ್ಮೂರ್ಧ್ನಿ ಕಿಲಾಸುರಃ ।
ಸ್ವಹಸ್ತಂ ಧಾತುಮಾರೇಭೇ ಸೋಽಬಿಭ್ಯತ್ ಸ್ವಕೃತಾಚ್ಛಿವಃ ॥ ೨೩

ತೇನೋಪಸೃಷ್ಟಃ ಸಂತ್ರಸ್ತಃ ಪರಾಧಾವನ್ ಸವೇಪಥುಃ ।
ಯಾವದಂತಂ ದಿವೋ ಭೂಮೇಃ ಕಾಷ್ಠಾನಾಮುದಗಾದುದಕ್ ॥ ೨೪

ಇಷ್ಟವಾದ ವರವನ್ನು ಕೊಡುತ್ತೇನೆ. ನನಗೆ ಶರಣಾದ ಜನರು ಭಕ್ತಿಯಿಂದ ಅರ್ಪಿಸುವ ನೀರಿನಿಂದಲೇ ಪ್ರಸನ್ನನಾಗತಕ್ಕವನು ನಾನು. ವ್ಯರ್ಥವಾಗಿ ದೇಹವನ್ನು ಅತಿಹಿಂಸೆಗೆ ಈಡುಮಾಡಿಕೊಳ್ಳುತ್ತಿದ್ದೀಯೆ'' ಎಂದನು (೨೦). ಆಗ ಪಾಪಿಯಾದ ಆ ದೈತ್ಯನು ಸರ್ವಪ್ರಾಣಿಗಳಿಗೂ ಭಯಂಕರವಾದ ಒಂದು ವರವನ್ನು ಹರನಲ್ಲಿ ಕೇಳಿಕೊಂಡನು. ''ಯಾರ ತಲೆಯ ಮೇಲೆ ನಾನು ಕೈಯಿಡುತ್ತೇನೋ ಅವರು ಸತ್ತುಹೋಗಬೇಕು'' ಎಂಬುದೇ ಅವನು ಕೇಳಿಕೊಂಡ ವರ ! (೨೧). ಅದನ್ನು ಕೇಳಿ, ಪರೀಕ್ಷಿತರಾಜ, ಭಗವಾನ್ ರುದ್ರನು ಕೊಂಚ ವಿಷಣ್ಣನಾದನು. ಆದರೂ ನಗುತ್ತ 'ಓಂ-ಆಗಲಿ' ಎಂದು ನುಡಿದು, ಹಾವಿಗೆ ಹಾಲೆರೆದಂತೆ ವರವನ್ನಿತ್ತನು (೨೨). ವಾಸ್ತವವಾಗಿ ಆ ವೃಕಾಸುರನು ಪಾರ್ವತಿಯನ್ನು ಅಪಹರಿಸಬೇಕೆಂಬ ಲಾಲಸೆಯಲ್ಲಿದ್ದನು. ವರವನ್ನು ಪರೀಕ್ಷಿಸಿ ನೋಡುತ್ತೇನೆಂಬ ನೆವದಿಂದ ಅಸುರನು ಶಿವನ ತಲೆಯಮೇಲೆ ಕೈಯಿಡಲು ಹೊರಟನು ! ತಾನು ಮಾಡಿದ ತಪ್ಪಿಗಾಗಿ ಶಿವನಿಗೆ ಭಯವಾಯಿತು (೨೩). ಅವನು ಹೆದರಿ ನಡುಗುತ್ತ ಓಡಲಾರಂಭಿಸಿದನು. ಅಸುರನು ಬೆನ್ನಟ್ಟಿದನು. ಸ್ವರ್ಗದ ಅಂತ್ಯಕ್ಕೆ, ಭೂಮಿಯ ಅಂಚಿಗೆ, ದಿಕ್ಕುಗಳ ತುದಿಗೆ ಓಡಿ, ಕಡೆಗೆ ಉತ್ತರದಿಕ್ಕಿಗೆ ಹರನು ಧಾವಿಸಿದನು. ಅದಕ್ಕೆ ಪರಿಹಾರವೇನೆಂದು ದೇವಾಧಿದೇವತೆಗಳಿಗೂ ದಿಕ್ಕು ತೋಚದೆ ಅವರು ಸುಮ್ಮನಾದರು. ಅನಂತರ ಹರನು ತಮಸ್ಸಿಗೆ ಪರದಲ್ಲಿರುವದೇದೀಪ್ಯಮಾನವಾದ

ಅಜಾನಂತಃ ಪ್ರತಿವಿಧಿಂ ತೂಷ್ಣೀಮಾಸನ್ ಸುರೇಶ್ವರಾಃ ।
ತತೋ ವೈಕುಂಠಮಗಮದ್ ಭಾಸ್ವರಂ ತಮಸಃ ಪರಮ್ ॥ ೨೫

ಯತ್ರ ನಾರಾಯಣಃ ಸಾಕ್ಷಾನ್ನ್ಯಾಸಿನಾಂ ಪರಮಾ ಗತಿಃ ।
ಶಾಂತಾನಾಂ ನ್ಯಸ್ತದಂಡಾನಾಂ ಯತೋ ನಾವರ್ತತೇ ಗತಃ ॥ ೨೬

ತಂ ತಥಾವ್ಯಸನಂ ದೃಷ್ಟ್ವಾ ಭಗವಾನ್ ವೃಜಿನಾರ್ದನಃ ।
ದೂರಾತ್ ಪ್ರತ್ಯುದಿಯಾದ್‌ಭೂತ್ವಾವಟುಕೋ ಯೋಗಮಾಯಯಾ

ಮೇಖಲಾಜಿನದಂಡಾಕ್ಷೈಸ್ತೇಜಸಾಗ್ನಿರಿವ ಜ್ವಲನ್ ।
ಅಭಿವಾದಯಾಮಾಸ ಚ ತಂ ಕುಶಪಾಣಿರ್ವಿನೀತವತ್ ॥ ೨೮

ಶ್ರೀಭಗವಾನುವಾಚ-

ಶಾಕುನೇಯ ಭವಾನ್ ವ್ಯಕ್ತಂ ಶ್ರಾಂತಃ ಕಿಂ ದೂರಮಾಗತಃ ।
ಕ್ಷಣಂ ವಿಶ್ರಮ್ಯತಾಂ ಪುಂಸ ಆತ್ಮಾಯಂ ಸರ್ವಕಾಮಧುಕ್ ॥ ೨೯

ವೈಕುಂಠಕ್ಕೆ (ಶ್ವೇತದ್ವೀಪಕ್ಕೆ) ಹೋದನು (೨೪-೨೫). ಎಲ್ಲ ಶಾಂತರೂ ದಂಡನಾದಿ ಕ್ರಿಯಾವರ್ಜಿತರೂ ಆದ ಪರಮಹಂಸರಿಗೆ ಪರಮಗತಿಯಾದ ಸಾಕ್ಷಾತ್ ಶ್ರೀಮನ್ನಾರಾಯಣನು ನೆಲೆಸಿರುವನೋ, ಎಲ್ಲಿಗೆ ಹೋದವರು ಮತ್ತೆ ಸಂಸಾರಕ್ಕೆ ಮರಳುವುದಿಲ್ಲವೋ ಅಲ್ಲಿಗೆ ಧಾವಿಸಿದನು (೨೬). ಆ ರೀತಿಯಲ್ಲಿ ಸಂಕಟಕ್ಕೆ ಸಿಕ್ಕಿದ್ದ ಶಿವನು ಬರುತ್ತಿರುವುದನ್ನರಿತು ಪಾಪಹಾರಿಯಾದ ಭಗವಂತನು ಯೋಗಮಾಯೆಯಿಂದ ಚಿಕ್ಕವಟುವಿನ ವೇಷವನ್ನು ಧರಿಸಿ ದೂರದಲ್ಲಿ ಎದುರಾಗಿ ಬಂದನು. ಮೇಖಲೆ, ಕೃಷ್ಣಾಜಿನ, ದಂಡ, ಜಪಸರಗಳನ್ನು ಧರಿಸಿ, ತೇಜಸ್ಸಿನಿಂದ ಅಗ್ನಿಯಂತೆ ಪ್ರಕಾಶಿಸುತ್ತ ಕುಶಗಳನ್ನುಕೈಯಲ್ಲಿ ಹಿಡಿದಿದ್ದ ಆ ವಟುವು, (ಅಟ್ಟಿಸಿಕೊಂಡು ಬರುತ್ತಿದ್ದ ವೃಕಾಸುರನನ್ನು ನೋಡಿ) ವಿನೀತನಂತೆ ನಮಸ್ಕರಿಸಿ ಹೀಗೆಂದನು : (೨೭-೨೮) : "ಎಲೈ ಶಕುನಿಪುತ್ರ-ವೃಕಾಸುರ, ನೀನು ತುಂಬ ಬಳಲಿರುವುದು ಕಾಣುತ್ತಿದೆ. ಇದೇನು ಇಷ್ಟುದೂರ ಬಂದೆ? ಸ್ವಲ್ಪವಿಶ್ರಮಿಸಿಕೊ. ಸಕಲ ಇಷ್ಟಾರ್ಥಗಳನ್ನೂ ಸಾಧಿಸತಕ್ಕದ್ದೂ ದೇಹ (ದೇಹಕ್ಕೆ ಹೆಚ್ಚು ಆಯಾಸ

ಯದಿ ನಃ ಶ್ರವಣಾಯಾಲಂ ಯುಷ್ಮದ್ವ್ಯವಸಿತಂ ವಿಭೋ ।
ಭಣ್ಯತಾಂ ಪ್ರಾಯಶಃ ಪುಂಭಿರ್ಧೃತೈಃ ಸ್ವಾರ್ಥಾನ್ ಸಮೀಹತೇ ॥ ೩೦

ಶ್ರೀಶುಕಉವಾಚ-

ಏವಂ ಭಗವತಾ ಪೃಷ್ಟೋ ವಚಸಾಮೃತವರ್ಷಿಣಾ ।
ಗತಕ್ಲಮೋಽಬ್ರವೀತ್ತಸ್ಮೈ ಯಥಾಪೂರ್ವಮನುಷ್ಠಿತಮ್ ॥ ೩೧

ಶ್ರೀಭಗವಾನುವಾಚ-

ಏವಂ ಚೇತ್ತರ್ಹಿ ತದ್ವಾಕ್ಯಂ ನ ವಯಂ ಶ್ರದ್ದಧೀಮಹಿ ।
ಯೋ ದಕ್ಷಶಾಪಾತ್ ಪೈಶಾಚ್ಯಂ ಪ್ರಾಪ್ತಃ ಪ್ರೇತಪಿಶಾಚರಾಟ್ ॥ ೩೨

ಯದಿ ವಸ್ತತ್ರ ವಿಶ್ರಂಭೋ ದಾನವೇಂದ್ರ ಜಗದ್ಗುರೌ ।
ತರ್ಹ್ಯಂಗಾಶು ಸ್ವಶಿರಸಿ ಹಸ್ತಂ ನ್ಯಸ್ಯ ಪ್ರತೀಯತಾಮ್ ॥ ೩೩

ಯದ್ಯಸತ್ಯಂ ವಚಃ ಶಂಭೋಃ ಕಥಂಚಿದ್ ದಾನವರ್ಷಭ ।
ತದೈನಂ ಜಹ್ಯಸದ್ವಾಚಂ ನ ಯದ್ ವಕ್ತಾನೃತಂ ಪುನಃ ॥ ೩೪

ಕೊಡಬಾರದು). ಹೇ ಸ್ವಾಮಿ, ನಿಮ್ಮ ಉದ್ದೇಶವೇನೆಂಬುದನ್ನು ನಾವು ಕೇಳಬಹುದಾಗಿದ್ದರೆ ಹೇಳೋಣವಾಗಲಿ. ಸಾಮಾನ್ಯವಾಗಿ ಸಹಾಯಕರಿಂದ ಜನರು ತಮ್ಮ ಕಾರ್ಯವನ್ನು ನೆರವೇರಿಸಿಕೊಳ್ಳುತ್ತಾರಲ್ಲವೆ ?'' ಎಂದನು (೨೯-೩೦). ಅಮೃತವನ್ನುಸುರಿಸುವಂತಿದ್ದ ಮೆಲ್ನುಡಿಯಿಂದ ಭಗವಂತನು ಹೀಗೆ ಕೇಳಲಾಗಿ, ಅಸುರನು ವಿಶ್ರಮಿಸಿಕೊಂಡು ನಡೆದುದೆಲ್ಲವನ್ನೂ ವಿವರಿಸಿ ಹೇಳಿದನು. ಆಗ ವಟುವೇಷಧಾರಿಯಾದ ಭಗವಂತನು ಹೀಗೆಂದನು (೩೧) : ''ದಾನವೇಂದ್ರ, ಹೀಗಾದರೆ ಹರನ ಮಾತನ್ನು ನಾವು ನಂಬಲಾರೆವು. ದಕ್ಷಶಾಪದಿಂದ ಪಿಶಾಚವೃತ್ತಿಯವನಾಗಿ ಪ್ರೇತಗಳಿಗೂ ಪಿಶಾಚಿಗಳಿಗೂ ಒಡೆಯನಾಗಿರತಕ್ಕವನು ಆತ! (೩೨). ಒಂದು ವೇಳೆ ಅವನು ಜಗದ್ಗುರುವೆಂದು ಭಾವಿಸಿರುವ ನಿನಗೆ ಅವನ ಮಾತಿನಲ್ಲಿ ನಂಬಿಕೆಯಿರುವುದಾದರೆ, ಈಗಲೇ ನಿನ್ನ ತಲೆಯಮೇಲೆ ಕೈಯಿಟ್ಟುಕೊಂಡು ಪರೀಕ್ಷಿಸಬಾರದೇಕೆ ? ಶಂಭುವಿನ ಮಾತು ಹುಸಿಯಾದ ಪಕ್ಷದಲ್ಲಿ ಅವನನ್ನು ಕೊಂದುಹಾಕು ! ಮತ್ತೆ ಅವನು ಹೀಗೆ

ಇತ್ಥಂ ಭಗವತಶ್ಚಿತ್ರೈರ್ವಚೋಭಿಃ ಸ ಸುಪೇಶಲೈಃ ।
ಭಿನ್ನಧೀರ್ವಿಸ್ಮೃತಃ ಶೀರ್ಷ್ಣಿ ಸ್ವಹಸ್ತಂ ಕುಮತಿರ್ವ್ಯಧಾತ್ ॥ ೩೫

ಅಥಾಪತದ್ ಭಿನ್ನಶಿರಾ ವಜ್ರಾಹತ ಇವ ಕ್ಷಣಾತ್ ।
ಜಯಶಬ್ದೋ ನಮಃಶಬ್ದಃ ಸಾಧುಶಬ್ದೋಽಭವದ್ ದಿವಿ ॥ ೩೬

ಮುಮುಚುಃ ಪುಷ್ಪವರ್ಷಾಣಿ ಹತೇ ಪಾಪೇ ವೃಕಾಸುರೇ ।
ದೇವರ್ಷಿಪಿತೃಗಂಧರ್ವಾ ಮೋಚಿತಃ ಸಂಕಟಾಚ್ಛಿವಃ ॥ ೩೭

ಮುಕ್ತಂ ಗಿರಿಶಮಭ್ಯಾಹ ಭಗವಾನ್ ಪುರುಷೋತ್ತಮಃ ।
ಅಹೋ ದೇವ ಮಹಾದೇವ ಪಾಪೋಽಯಂ ಸ್ವೇನ ಪಾಪ್ಮನಾ ॥ ೩೮

ಹತಃ ಕೋ ನು ಮಹತ್ಸ್ವೀಶ ಜಂತುರ್ವೈ ಕೃತಕಿಲ್ಬಿಷಃ ।
ಕ್ಷೇಮೀ ಸ್ಯಾತ್ ಕಿಮು ವಿಶ್ವೇಶೇ ಕೃತಾಗಸ್ಕೋ ಜಗದ್ಗುರೌ ॥ ೩೯

ಸುಳ್ಳಾಡದಿರಲಿ!'' ಎಂದನು (೩೩-೩೪). ಹೀಗೆ ಭಗವಂತನ ಗುಪ್ತಾಶಯವುಳ್ಳ ಭ್ರಾಮಕವಚನಗಳಿಗೆ ಮರುಳಾಗಿ ಆ ದುರುಳನು ಬುದ್ಧಿಗೆಟ್ಟು ಮರೆತು ತನ್ನ ತಲೆಯಮೇಲೆ ಕೈಯಿಟ್ಟುಕೊಂಡನು ! ಒಡನೆಯೇ ಸಿಡಿಲುಹೊಡೆದಂತೆ ತಲೆಯೊಡೆದು ಸತ್ತುಬಿದ್ದನು ! 'ಜಯ ಜಯ, ನಮೋನಮಃ, ಭಲಾ ಭೇಷ್ !' ಎಂಬ ಶಬ್ದಗಳು ನಭದಲ್ಲಿ ಉಗ್ಗಡಿಸಿದವು[೧] (೩೫-೩೬). ಪಾಪಿಯಾದ ವೃಕಾಸುರನು ಸತ್ತು ಉರುಳಲು, ದೇವರ್ಷಿ-ಪಿತೃ-ಗಂಧರ್ವರು ಹೂಮಳೆಗರೆದರು. ಶಿವನು ವಿಪತ್ತಿನಿಂದ ಪಾರಾದನು. ಆಗ ಪುರುಷೋತ್ತಮನಾದ ನಾರಾಯಣನು ಶಿವನನ್ನು ಕುರಿತು ''ಆಹಾ ! ದೇವ, ಮಹಾದೇವ, ಪಾಪಿಯಾದ ಈ ಅಸುರನು ತಾನು ಮಾಡಿದ ಪಾಪಕರ್ಮಕ್ಕೆ ಬಲಿಯಾದನು. ಹೇ ಪ್ರಭು, ಮಹಾತ್ಮರಿಗೆ ಅಪಚಾರ ಮಾಡತಕ್ಕವನು ಕ್ಷೇಮವಾಗಿ ಉಳಿಯುವುದುಂಟೆ ? ಅದರಲ್ಲಿಯೂ ವಿಶ್ವೇಶ್ವರನೂ ಜಗದ್ಗುರುವೂ ಆದ ನಿನ್ನ ವಿಷಯದಲ್ಲಿ ತಪ್ಪೆಸಗಿದವನ ಪಾಡು ಏನಾದೀತು ?'' ಎಂದು ನುಡಿದನು

---

೧ 'ಪುರಾಣಾಂತರಗಳಲ್ಲಿ ಬಂದಿರುವ ಮೋಹಿನೀ-ಭಸ್ಮಾಸುರರ ಕಥೆಯನ್ನಿಲ್ಲಿ ಸ್ಮರಿಸಿಕೊಳ್ಳಬಹುದು.

ಯ ಏವಮವ್ಯಾಕೃತಶಕ್ತ್ಯುದನ್ವತಃ-
ಪರಸ್ಯ ಸಾಕ್ಷಾತ್ ಪರಮಾತ್ಮನೋ ಹರೇಃ ।
ಗಿರಿತ್ರಮೋಕ್ಷಂ ಕಥಯೇಚ್ಛೃಣೋತಿ ವಾ
ವಿಮುಚ್ಯತೇ ಸಂಸೃತಿಭಿಸ್ತಥಾರಿಭಿಃ ॥ ೪೦

ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಅಷ್ಟಾಶೀತಿತಮಾಧ್ಯಾಯಃ

ಏಕೋನನವತಿತಮಾಧ್ಯಾಯಃ

ಶ್ರೀಶುಕ ಉವಾಚ-
ಸರಸ್ವತ್ಯಾಸ್ತಟೇ ರಾಜನ್ನೃಷಯಃ ಸತ್ರಮಾಸತ ।
ವಿತರ್ಕಃ ಸಮಭೂತ್ತೇಷಾಂ ತ್ರಿಷ್ವಧೀಶೇಷು ಕೋ ಮಹಾನ್ ॥ ೧

(೨೭-೩೯). ಈ ಪ್ರಕಾರವಾಗಿ ವಾಙ್ಮನಸ್ಸುಗಳಿಗೆ ಅಗೋಚರವಾದ ದಿವ್ಯಶಕ್ತಿಗಳ ಸಮುದ್ರನೂ ಸಾಕ್ಷಾತ್ ಪರಮಾತ್ಮನೂ ಆದ ಶ್ರೀಹರಿಯಿಂದ ಶಿವನು ತನಗೊದಗಿದ ವಿಪತ್ತಿನಿಂದ ಪಾರಾದ ವೃತ್ತಾಂತವನ್ನು ಯಾರು ಹೇಳುವರೋ ಅಥವಾ ಕೇಳುವರೋ ಅವರು ಸಂಸಾರಕಷ್ಟಗಳಿಂದಲೂ ವೈರಿಗಳಿಂದಲೂ ಬಿಡುಗಡೆ ಹೊಂದುವರು (೪೦).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಂಬತ್ತೆಂಟನೆಯ ಅಧ್ಯಾಯ.

ಅಧ್ಯಾಯ ೮೯

ತ್ರಿಮೂರ್ತಿಗಳಲ್ಲಿ ವಿಷ್ಣುವು ಶ್ರೇಷ್ಠನೆಂದು ಭೃಗುಮುನಿಯು ಪರೀಕ್ಷಿಸಿ ನಿರ್ಣಯಿಸುವುದು. ಶ್ರೀಕೃಷ್ಣನು ಅರ್ಜುನನೊಡನೆ ಹೋಗಿ ಮೃತರಾದ ಬ್ರಾಹ್ಮಣಪುತ್ರರನ್ನು ಭೂಲೋಕಕ್ಕೆ ಕರೆತರುವುದು.

ಮತ್ತೆ ಶುಕಮುನಿಗಳು ಹೇಳಿದರು : ಪರೀಕ್ಷಿತರಾಜ, ಸರಸ್ವತೀನದಿಯ ತೀರದಲ್ಲಿ ಋಷಿಗಳು ಒಂದು ದೊಡ್ಡ ಯಾಗವನ್ನು ನಡೆಸುತ್ತಿದ್ದರು. ಆಗ ತ್ರಿಮೂರ್ತಿಗಳಲ್ಲಿ ಯಾರು ದೊಡ್ಡವರೆಂದು ಅವರಲ್ಲಿ ಚರ್ಚೆ ಹುಟ್ಟಿತು. ಅದನ್ನು ತಿಳಿದು ಬರುವುದಕ್ಕಾಗಿ ಆ ಋಷಿಗಳು ಬ್ರಹ್ಮಸುತನಾದ ಭೃಗುಮುನಿಯನ್ನು

ತಸ್ಯ ಜಿಜ್ಞಾಸಯಾ ತೇ ವೈ ಭೃಗುಂ ಬ್ರಹ್ಮಸುತಂ ನೃಪ ।
ತಜ್ಞಪ್ತ್ಯೈ ಪ್ರೇಷಯಾಮಾಸುಃ
ಸೋಽಭ್ಯಗಾದ್ ಬ್ರಹ್ಮಣಃ ಸಭಾಮ್ ॥ ೨

ನ ತಸ್ಮೈ ಪ್ರಹ್ವಣಂ ಸ್ತೋತ್ರಂ ಚಕ್ರೇ ಸತ್ತ್ವಪರೀಕ್ಷಯಾ ।
ತಸ್ಮೈ ಚುಕ್ರೋಧ ಭಗವಾನ್ ಪ್ರಜ್ವಲನ್ ಸ್ವೇನ ತೇಜಸಾ ॥ ೩

ಸ ಆತ್ಮನ್ಯುತ್ಥಿತಂ ಮನ್ಯು ಮಾತ್ಮಜಾಯಾತ್ಮನಾ ಪ್ರಭುಃ ।
ಅಶೀಶಮದ್ ಯಥಾ ವಹ್ನಿಂ ಸ್ವಯೋನ್ಯಾ ವಾರಿಣಾಽಽತ್ಮಭೂಃ ॥ ೪

ತತಃ ಕೈಲಾಸಮಗಮತ್ ಸ ತಂ ದೇವೋ ಮಹೇಶ್ವರಃ ।
ಪರಿರಬ್ಧುಂ ಸಮಾರೇಭೇ ಉತ್ಥಾಯ ಭ್ರಾತರಂ ಮುದಾ ॥ ೫

ಕಳಿಸಿದರು. ಅದರಂತೆ ಆತನು ಬ್ರಹ್ಮನ ಸಭೆಗೆ ಹೋದನು (೧-೨). ಅಲ್ಲಿ ಬ್ರಹ್ಮನ ಸತ್ತ್ವವನ್ನು ಪರೀಕ್ಷಿಸುವುದಕ್ಕಾಗಿ ಭೃಗುವು ಆತನಿಗೆ ನಮಸ್ಕರಿಸಲೂ ಇಲ್ಲ, ಸ್ತೋತ್ರವನ್ನೂ ಮಾಡಲಿಲ್ಲ. ಆಗ ಬ್ರಹ್ಮನು ಕೋಪದಿಂದ ಕಿಡಿಕಿಡಿಯಾದನು. ಆದರೆ ಪ್ರಭುವಾದ ಬ್ರಹ್ಮನು ತನ್ನಲ್ಲಿ ಹುಟ್ಟಿದ ಕೋಪವನ್ನು, ಭೃಗುವು ತನ್ನ ಮಗನೆಂಬ ನಿಮಿತ್ತದಿಂದ, ತನ್ನಲ್ಲಿಯೇ ನುಂಗಿಕೊಂಡನು ; ಬೆಂಕಿಯು ತನ್ನಿಂದ ಹುಟ್ಟಿದ ನೀರಿನಿಂದ ತಾನೇ ತಣ್ಣಗಾಗುವುದಿಲ್ಲವೆ, ಹಾಗೆ[೧] (೩-೪). ಆಮೇಲೆ ಭೃಗುಮಹರ್ಷಿಯು ಕೈಲಾಸಕ್ಕೆ ಹೋದನು. ಅಲ್ಲಿ ದೇವನಾದ ಮಹೇಶ್ವರನು ಭೃಗುವನ್ನು ನೋಡಿ ಪೀಠದಿಂದೆದ್ದು ಸಂತೋಷದಿಂದ ಸಹೋದರನನ್ನು ಆಲಿಂಗಿಸಿಕೊಳ್ಳುವಂತೆ ಭೃಗುವನ್ನು ಆಲಿಂಗಿಸಲು ಹೋದನು. 'ನೀನು ಉನ್ಮಾರ್ಗದಲ್ಲಿ ನಡೆಯತಕ್ಕವನು ! ' ಎಂದು ಹೇಳಿ ತನ್ನನ್ನು ಆಲಿಂಗಿಸಿಕೊಳ್ಳಲು ಭೃಗುವು ಒಪ್ಪಲಿಲ್ಲ (೫). ಅದರಿಂದ ಕೆರಳಿದ ಈಶ್ವರನು ಉಗ್ರನೇತ್ರನಾಗಿ ಭೃಗುವನ್ನು ಶೂಲದಿಂದ ತಿವಿಯಲು ಹೊರಟನು. ಆಗ ಪಾರ್ವತೀ ದೇವಿಯು ಪತಿಯ ಪಾದಗಳ ಮೇಲೆ ಬಿದ್ದು ಮೃದುನುಡಿಗಳಿಂದ ಸಂತೈಸಿದಳು. ಅನಂತರ

---

೧ 'ಅಗ್ನೇರಾಪಃ' ಎಂಬ ಶ್ರುತಿಪ್ರಮಾಣದಿಂದ ಜಲವು ಅಗ್ನಿಯಿಂದ ಜನಿಸುತ್ತದೆ. ಅಗ್ನಿಯು ತನ್ನಿಂದ ಹುಟ್ಟಿದ ಜಲದಿಂದ ಶಾಂತವಾಗುತ್ತದೆ. ಹಾಗೆಯೇ ಬ್ರಹ್ಮನಿಂದ ಹುಟ್ಟಿದ ಭೃಗುವಿನ ನಿಮಿತ್ತದಿಂದ ಬ್ರಹ್ಮನ ಕೋಪ ಅಡಗಿ ಬ್ರಹ್ಮನು ಶಾಂತನಾದನು.

ನೈರ್ಋತ್ವಮಸ್ಯುತ್ಪಥಗ ಇತಿ ದೇವಶ್ಚುಕೋಪ ಹ ।
ಶೂಲಮುದ್ಯಮ್ಯ ತಂ ಹಂತುಮಾರೇಭೇ ತಿಗ್ಮಲೋಚನಃ ॥ ೬

ಪತಿತ್ವಾ ಪಾದಯೋರ್ದೇವೀ ಸಾಂತ್ವಯಾಮಾಸ ತಂ ಗಿರಾ ।
ಅಥೋ ಜಗಾಮ ವೈಕುಂಠಂ ಯತ್ರ ದೇವೋ ಜನಾರ್ದನಃ ॥ ೭

ಶಯಾನಂ ಶ್ರಿಯ ಉತ್ಸಂಗೇ ಪದಾ ವಕ್ಷಸ್ಯತಾಡಯತ್ ।
ತತ ಉತ್ಥಾಯ ಭಗವಾನ್ ಸಹ ಲಕ್ಷ್ಮ್ಯಾ ಸತಾಂ ಗತಿಃ ॥ ೮

ಸ್ವತಲ್ಪಾದವರುಹ್ಯಾಥ ನನಾಮ ಶಿರಸಾ ಮುನಿಮ್ ।
ಆಹ ತೇ ಸ್ವಾಗತಂ ಬ್ರಹ್ಮನ್ ನಿಷೀದಾತ್ರಾಸನೇ ಕ್ಷಣಮ್ ।
ಅಜಾನತಾಮಾಗತಾನ್ ವಃ ಕ್ಷಂತುಮರ್ಹಥ ನಃ ಪ್ರಭೋ ॥ ೯

ಅತೀವ ಕೋಮಲೌ ತಾತ ಚರಣೌ ತೇ ಮಹಾಮುನೇ ।
ಇತ್ಯುಕ್ತ್ವಾ ವಿಪ್ರಚರಣೌ ಮರ್ದಯನ್ ಸ್ವೇನ ಪಾಣಿನಾ ॥ ೧೦

ಪುನೀಹಿ ಸಹಲೋಕಂ ಮಾಂ ಲೋಕಪಾಲಾಂಶ್ಚ ಮದ್ಗತಾನ್ ।
ಪಾದೋದಕೇನ ಭವತಸ್ತೀರ್ಥಾನಾಂ ತೀರ್ಥಕಾರಿಣಾ ॥ ೧೧

ಭೃಗುಮುನಿಯು ಜನಾರ್ದನನಿರುವ ವೈಕುಂಠಕ್ಕೆ ತೆರಳಿದನು (೬-೭). ಅಲ್ಲಿ ಲಕ್ಷ್ಮೀದೇವಿಯ ತೊಡೆಗಳ ಮೇಲೊರಗಿ ಮಲಗಿದ್ದ ವಿಷ್ಣುವನ್ನು ಕಂಡು ಮುನಿಯು ಅವನ ಎದೆಯೊನ್ನೊದ್ದನು! ಆಗ ಸಜ್ಜನರಿಗೆ ಗತಿಯಾದ ಭಗವಂತನು ಲಕ್ಷ್ಮಿಯೊಡನೆ ಮೇಲೆದ್ದು ಮಂಚದಿಂದಿಳಿದು ತಲೆಬಾಗಿ ಮುನಿಗೆ ವಂದಿಸಿದನು. ಮತ್ತು "ಓ ಮಹರ್ಷಿ, ನಿನಗೆ ಸ್ವಾಗತ. ಈ ಪೀಠದಲ್ಲಿ ಸ್ವಲ್ಪ ಹೊತ್ತು ಕುಳಿತುಕೊ. ನೀನು ಬಂದದ್ದು ನಮಗೆ ತಿಳಿಯಲಿಲ್ಲ. ಹೇ ಪ್ರಭು, ನಮ್ಮನ್ನು ಮನ್ನಿಸಬೇಕು (೮-೯). ಮಹಾಮುನಿಯೆ, ನಿನ್ನ ಪಾದಗಳು ಅತ್ಯಂತ ಕೋಮಲವಾಗಿವೆ. (ಅವುಗಳಿಗೆ ನೋವಾಗಿರಬೇಕು !) " ಎಂದು ನುಡಿದು ತನ್ನ ಕೈಯಿಂದಲೇ ಆ ವಿಪ್ರನ ಪಾದಗಳನ್ನು ನೀವುತ್ತ ಹೀಗೆಂದನು : (೧೦). "ಹೇ ಭಗವನ್, ಪವಿತ್ರತೀರ್ಥಗಳನ್ನೂ ಪಾವನಗೊಳಿಸುತ್ತದೆ ನಿನ್ನ ಪಾದೋದಕ. ನನ್ನನ್ನೂ ನನ್ನ ಲೋಕವನ್ನೂ ಭಕ್ತರಾದ ಲೋಕಪಾಲರನ್ನೂ ನಿನ್ನ ಪಾದೋದಕದಿಂದ

ಅದ್ಯಾಹಂ ಭಗವನ್ ಲಕ್ಷ್ಮ್ಯಾ ಆಸಮೇಕಾಂತಭಾಜನಮ್ ।
ವತ್ಸ್ಯತ್ಯುರಸಿ ಮೇ ಭೂತಿರ್ಭವತ್ಪಾದಹತಾಂಹಸಃ ॥ ೧೨

ಶ್ರೀಶುಕ ಉವಾಚ-

ಏವಂ ಬ್ರುವಾಣೇ ವೈಕುಂಠೇ ಭೃಗುಸ್ತನ್ಮಂದ್ರಯಾ ಗಿರಾ ।
ನಿರ್ವೃತಸ್ತರ್ಪಿತಸ್ತೂಷ್ಣೀಂ ಭಕ್ತ್ಯುತ್ಕಂಠೋಽಶ್ರುಲೋಚನಃ ॥ ೧೩

ಪುನಶ್ಚ ಸತ್ರಮಾವ್ರಜ್ಯ ಮುನೀನಾಂ ಬ್ರಹ್ಮವಾದಿನಾಮ್ ।
ಸ್ವಾನುಭೂತಮಶೇಷೇಣ ರಾಜನ್ ಭೃಗುರವರ್ಣಯತ್ ॥ ೧೪

ತನ್ನಿಶಮ್ಯಾಥ ಮುನಯೋ ವಿಸ್ಮಿತಾ ಮುಕ್ತಸಂಶಯಾಃ ।
ಭೂಯಾಂಸಂ ಶ್ರದ್ದಧುರ್ವಿಷ್ಣುಂ
ಯತಃ ಶಾಂತಿರ್ಯತೋಽಭಯಮ್ ॥ ೧೫

ಧರ್ಮಃ ಸಾಕ್ಷಾದ್ ಯತೋ ಜ್ಞಾನಂ ವೈರಾಗ್ಯಂ ಚ ತದನ್ವಿತಮ್ ।
ಐಶ್ವರ್ಯಂ ಚಾಷ್ಟಧಾ ಯಸ್ಮಾದ್ ಯಶಶ್ಚಾತ್ಮ ಮಲಾಪಹಮ್ ॥ ೧೬

ಪವಿತ್ರಗೊಳಿಸು. ಇಂದು ನಾನು ಲಕ್ಷ್ಮಿಯೊಡನೆ ಏಕಾಂತದಲ್ಲಿದ್ದೆ. ನಿನ್ನ ಪಾದದ ಒದೆತದಿಂದ ನನ್ನ ಪಾಪವು ಲಯಿಸಿತು. ಇನ್ನು ನನ್ನ ವಕ್ಷಸ್ಥಳದಲ್ಲಿ ಕಲ್ಯಾಣ ಸಂಪತ್ತು ನೆಲೆಸಿರುವುದು'' (೧೧-೧೨). ಹೀಗೆ ವಿಷ್ಣುವು ಗಂಭಿರ ಧ್ವನಿಯಿಂದ ನುಡಿಯುತ್ತಿರಲಾಗಿ, ಅದನ್ನು ಸುಮ್ಮನೆ ಆಲಿಸುತ್ತಿದ್ದ ಭೃಗುವುನಿಗೆ ಭಕ್ತ್ಯಾವೇಶದಿಂದ ಕಂಬನಿ ತುಂಬಿತು. ಅವನು ಆನಂದದಿಂದ ತೃಪ್ತನಾದನು (೧೩). ರಾಜ, ಅನಂತರ ಭೃಗುವು ಯಾಗಶಾಲೆಗೆ ಹಿಂದಿರುಗಿ ಬಂದು ತನ್ನ ಅನುಭವವನ್ನು ಬ್ರಹ್ಮವಾದಿಗಳಾದ ಋಷಿಗಳಿಗೆ ಸಂಪೂರ್ಣವಾಗಿ ವರ್ಣಿಸಿ ಹೇಳಿದನು. ಅದೆಲವನ್ನೂ ಕೇಳಿದ ಋಷಿಗಳು ವಿಸ್ಮಿತರಾದರು. ಅವರಿಗೆ ಸಂದೇಹ ಉಳಿಯಲಿಲ್ಲ. ತ್ರಿಮೂರ್ತಿಗಳಲ್ಲಿ ವಿಷ್ಣುವೇ ಅಧಿಕನೆಂದು ನಿಶ್ಚಯಿಸಿದರು. ಶಾಂತಿ ಮತ್ತು ಅಭಯಗಳು ಆತನಲ್ಲಿ ನೆಲೆಸಿವೆ (೧೪-೧೫). ಧರ್ಮ, ಜ್ಞಾನ, ಜ್ಞಾನಯುಕ್ತವಾದ ವೈರಾಗ್ಯ, ಅಣಿಮಾದ್ಯಷ್ಟವಿದ್ಯೈಶ್ವರ್ಯ, ಭಕ್ತರ ಅಂತಃಕರಣದ ಕೊಳೆಯನ್ನು ತೊಳೆಯುವ ಕೀರ್ತಿ-ಇವೆಲ್ಲ ಅವನಲ್ಲಿ ಕೇಂದ್ರೀಕೃತವಾಗಿವೆ.

ಮುನೀನಾಂ ನ್ಯಸ್ತದಂಡಾನಾಂ ಶಾಂತಾನಾಂ ಸಮಚೇತಸಾಮ್ ।
ಅಕಿಂಚನಾನಾಂ ಸಾಧೂನಾಂ ಯಮಾಹುಃ ಪರಮಾಂ ಗತಿಮ್ ॥ ೧೭

ಸತ್ತ್ವಂ ಯಸ್ಯ ಪ್ರಿಯಾ ಮೂರ್ತಿರ್ಬ್ರಾಹ್ಮಣಾಸ್ತ್ವಿಷ್ಟದೇವತಾಃ ।
ಭಜಂತ್ಯನಾಶಿಷಃ ಶಾಂತಾ ಯಂ ವಾ ನಿಪುಣಬುದ್ಧಯಃ ॥ ೧೮

ತ್ರಿವಿಧಾಕೃತಯಸ್ತಸ್ಯ ರಾಕ್ಷಸಾ ಅಸುರಾಃ ಸುರಾಃ ।
ಗುಣಿನ್ಯಾ ಮಾಯಯಾ ಸೃಷ್ಟಾಃ ಸತ್ತ್ವಂ ತತ್ತೀರ್ಥಸಾಧನಮ್ ॥ ೧೯

ಶ್ರೀಶುಕ ಉವಾಚ-

ಏವಂ ಸಾರಸ್ವತಾ ವಿಪ್ರಾ ನೃಣಾಂ ಸಂಶಯನುತ್ತಯೇ ।
ಪುರುಷಸ್ಯ ಪದಾಂಭೋಜಸೇವಯಾ ತದ್ಗತಿಂ ಗತಾಃ ॥ ೨೦

ಸೂತ ಉವಾಚ-

ಇತ್ಯೇತನ್ಮುನಿತನಯಾಸ್ಯಪದ್ಮಗಂಧ-
ಪೀಯೂಷಂ ಭವಭಯಭಿತ್ ಪರಸ್ಯ ಪುಂಸಃ ।
ಸುಶ್ಲೋಕಂ ಶ್ರವಣಪುಟೈಃ ಪಿಬಂತ್ಯಭೀಕ್ಷ್ಣಂ
ಪಾಂಥೋಽಧ್ವಭ್ರಮಣಪರಿಶ್ರಮಂ ಜಹಾತಿ ॥ ೨೧

ದಂಡನಾದಿ ಕ್ರಿಯೆಯನ್ನು ತ್ಯಜಿಸಿ ಶಾಂತರೂ ಸಮಬುದ್ಧಿಗಳೂ ಅಕಿಂಚನರೂ ಸಾಧುಗಳೂ ಆದ ಮುನಿಗಳಿಗೆ ನಾರಾಯಣನು ಪರಮಗತಿ (೧೬-೧೭). ಸತ್ತ್ವಗುಣಯುಕ್ತನಾದ ಆಕೃತಿಯು ವಿಷ್ಣುವಿಗೆ ಪ್ರಿಯವಾದುದು. ಬ್ರಾಹ್ಮಣರು ಅವನಿಗೆ ಇಷ್ಟದೇವತೆಗಳು. ಬುದ್ಧಿವಂತರು ಅನಾಸಕ್ತಿಯೋಗದಿಂದ ಶಾಂತರಾಗಿ ಅವನನ್ನು ಭಜಿಸುತ್ತಾರೆ (೧೮). ರಾಕ್ಷಸರು, ಅಸುರರು, ಸುರರು- ಈ ಮೂರು ಬಗೆಯವರೂ ತ್ರಿಗುಣಾತ್ಮಕವಾದ ಮಾಯೆಯಿಂದ ಸೃಷ್ಟರಾಗಿದ್ದಾರೆ. ಈ ಮೂರು ಆಕೃತಿಗಳು ಆತನವೇ. ಅವುಗಳಲ್ಲಿ ಸತ್ತ್ವಗುಣಯುಕ್ತವಾದ ಮೂರ್ತಿ ಪುರುಷಾರ್ಥಕ್ಕೆ ಸಾಧನವಾದದ್ದು (೧೯). ಜನರ ಸಂಶಯ ನಿವಾರಣೆಗಾಗಿ ಈ ಪ್ರಕಾರವನ್ನನುಸರಿಸಿದ ಸರಸ್ವತೀತೀರವಾಸಿಗಳಾದ ಮುನಿಗಳು, ವಿಷ್ಣುವು ಪುರುಷೋತ್ತಮನೆಂದು ನಿಶ್ಚಯಿಸಿ ಆತನ ಅಡಿದಾವರೆಯ ಸೇವೆಯಿಂದ ಸದ್ಗತಿಯನ್ನೈದಿದರು (೨೦). (ಹೀಗೆ ನುಡಿದು ಸೂತ ಪೌರಾಣಿಕರು ಶೌನಕಾದಿ

ಶ್ರೀಶುಕ ಉವಾಚ-

ಏಕದಾ ದ್ವಾರವತ್ಯಾಂ ತು ವಿಪ್ರಪತ್ನ್ಯಾಃ ಕುಮಾರಕಃ ।
ಜಾತಮಾತ್ರೋ ಭುವಂ ಸ್ಪೃಷ್ಟ್ವಾ ಮಮಾರ ಕಿಲ ಭಾರತ ॥ ೨೨

ವಿಪ್ರೋ ಗೃಹೀತ್ವಾ ಮೃತಕಂ ರಾಜದ್ವಾರ್ಯುಪಧಾಯ ಸಃ ।
ಇದಂ ಪ್ರೋವಾಚ ವಿಲಪನ್ನಾತುರೋ ದೀನಮಾನಸಃ ॥ ೨೩

ಬ್ರಹ್ಮದ್ವಿಷಃ ಶಠಧಿಯೋ ಲುಬ್ಧಸ್ಯ ವಿಷಯಾತ್ಮನಃ ।
ಕ್ಷತ್ರಬಂಧೋಃ ಕರ್ಮದೋಷಾತ್ ಪಂಚತ್ವಂ ಮೇ ಗತೋಽರ್ಭಕಃ ॥

ಹಿಂಸಾವಿಹಾರಂ ನೃಪತಿಂ ದುಃಶೀಲಮಜಿದಿತೇಂದ್ರಿಯಮ್ ।
ಪ್ರಜಾ ಭಜಂತ್ಯಃ ಸೀದಂತಿ ದರಿದ್ರಾ ನಿತ್ಯದುಃಖಿತಾಃ ॥ ೨೫

ಮುನಿಗಳಿಗೆ ಹೇಳಿದರು) ''ಇದು ಶುಕಮಹರ್ಷಿಗಳ[೧] ಮುಖಪದ್ಮದಿಂದ ಸೂಸಿದ ಸುಗಂಧಿಯಾದ ಅಮೃತ. ಸಂಸಾರಭಯವನ್ನು ನೀಗಿಸತಕ್ಕದ್ದು. ಪರಮಪುರುಷನ ಕೀರ್ತಿರೂಪವಾದದ್ದು. ಸಂಸಾರಿಯಾದ ಯಾವ ಪಥಿಕನು ಈ ಅಮೃತವನ್ನು ತನ್ನ ಕಿವಿಗಳೆಂಬ ದೊನ್ನೆಗಳಿಂದ ಯಥೇಷ್ಟವಾಗಿ ಕುಡಿಯುವನೋ ಆತನಿಗೆ ಸಂಸಾರಭ್ರಮಣದಿಂದಾದ ಆಯಾಸವು ನೀಗುವುದು (೨೧). ಮತ್ತೆ ಶುಕಮಹರ್ಷಿಗಳು ಹೇಳಿದರು: ಭರತವಂಶಪ್ರದೀಪ-ಪರೀಕ್ಷಿತ, ಒಂದು ಸಲ ಹೀಗೆ ನಡೆಯಿತು. ದ್ವಾರಕೆಯಲ್ಲಿ ಒಬ್ಬ ಬ್ರಾಹ್ಮಣನ ಪತ್ನಿಯು ಗಂಡುಮಗುವನ್ನು ಹಡೆದಳು. ಆ ಮಗು ಹುಟ್ಟಿ ನೆಲ ಮುಟ್ಟಿದ್ದೇ ತಡ, ಸತ್ತುಹೋಯಿತು (೨೨). ಆ ಬ್ರಾಹ್ಮಣನು ತನ್ನ ಮೃತ ಶಿಶುವನ್ನು ಅರಮನೆಯ ಬಾಗಿಲ ಬಳಿಗೆ ತಂದಿಟ್ಟು ದೈನ್ಯದಿಂದ ಗೋಳಾಡುತ್ತ ಹಲುಬಿದನು: ''ಹೋ ನನ್ನ ಮಗನು ಸತ್ತುಹೋದ! ಈ ರಾಜನು ಬ್ರಹ್ಮದ್ವೇಷಿ, ವಂಚಕ, ಲೋಭಿ, ವಿಷಯಲೋಲುಪ! ಕ್ಷತ್ರಿಯ ಧರ್ಮವನ್ನು ಪಾಲಿಸದಿರುವ ಅಯೋಗ್ಯ. ಈತನು ಮಾಡಿದ ಪಾಪಕರ್ಮಕ್ಕೆ ನನ್ನ ಮಗ ಬಲಿಯಾದ! ಯಾವನಿಗೆ ಪರಹಿಂಸೆ ಒಂದು ಆಟವೊ, ನಡತೆ ಶುದ್ಧವಾಗಿಲ್ಲವೊ, ಇಂದ್ರಿಯನಿಗ್ರಹ ಇಲ್ಲವೊ, ಅಂತಹ ರಾಜನನ್ನು

---

೧. ಈ ಭಾಗವತ ಪುರಾಣವನ್ನು ಸೂತರು ಶೌನಕಾದಿಗಳಿಗೆ ಹೇಳುತ್ತಿದ್ದಾರೆ. ಆದ್ದರಿಂದ ನಡುವೆ ಈ ಮಾತು ಬಂದಿದೆ.

ಏವಂ ದ್ವಿತೀಯಂ ವಿಪ್ರರ್ಷಿಸ್ತೃತೀಯಂ ತ್ವೇವಮೇವ ಚ ।
ವಿಸೃಜ್ಯ ಸ ನೃಪದ್ವಾರಿ ತಾಂ ಗಾಥಾಂ ಸಮಗಾಯತ ॥ ೧೬

ತಾಮರ್ಜುನ ಉಪಶ್ರುತ್ಯ ಕರ್ಹಿಚಿತ್ ಕೇಶವಾಂತಿಕೇ ।
ಪರೇತೇ ನವಮೇ ಬಾಲೇ ಬ್ರಾಹ್ಮಣಂ ಸಮಭಾಷತ ॥ ೧೭

ಕಿಂಸ್ವಿದ್ ಬ್ರಹ್ಮಂಸ್ತ್ವನ್ನಿವಾಸೇ ಇಹ ನಾಸ್ತಿ ಧನುರ್ಧರಃ ।
ರಾಜನ್ಯ ಬಂಧುರೇತೇ ವೈ ಬ್ರಾಹ್ಮಣಾಃ ಸತ್ರ ಆಸತೇ ॥ ೧೮

ಧನದಾರಾತ್ಮಜಾಪೃಕ್ತಾ ಯತ್ರ ಶೋಚಂತಿ ಬ್ರಾಹ್ಮಣಾಃ ।
ತೇ ವೈ ರಾಜನ್ಯವೇಷೇಣ ನಟಾ ಜೀವಂತ್ಯಸುಂಭರಾಃ ॥ ೧೯

ಅಹಂ ಪ್ರಜಾ ವಾಂ ಭಗವನ್ ರಕ್ಷಿಷ್ಯೇ ದೀನಯೋರಿಹ ।
ಅನಿಸ್ತೀರ್ಣಪ್ರತಿಜ್ಞೋಽಗ್ನಿಂ ಪ್ರವೇಕ್ಷ್ಯೇ ಹತಕಲ್ಮಷಃ ॥ ೨೦

ನಂಬಿಕೊಂಡಿರುವ ಪ್ರಜೆಗಳು ದರಿದ್ರರೇ ಸರಿ; ಅವರಿಗೆ ಕಷ್ಟತಪ್ಪಿದ್ದಲ್ಲ'' ಎಂದು ಕೂಗಾಡಿದನು (೧೩-೧೫). ಇದೇ ರೀತಿ ಎರಡನೆಯ ಸಲ, ಮೂರನೆಯ ಸಲ ನಡೆಯಿತು. ಹೀಗೆಯೇ ಆಗುತ್ತಿತ್ತು. ಪ್ರತಿಯೊಂದು ಸಾರಿ ಮಗನು ಹುಟ್ಟಿ ಸಾಯುತ್ತಿದ್ದನು. ಆ ಬ್ರಾಹ್ಮಣನು ಸತ್ತ ಮಗುವನ್ನು ರಾಜದ್ವಾರಕ್ಕೆ ತಂದು ಅದೇ ಹಾಡನ್ನು ಹಾಡುತ್ತಿದ್ದನು (೧೬). ಒಂದು ಸಲ ಅರ್ಜುನನು ಶ್ರೀಕೃಷ್ಣನ ಬಳಿಗೆ ಬಂದಿದ್ದಾಗ ಈ ಗೋಳಾಟ ಕೇಳಿಸಿತು. ಆಗ ಬ್ರಾಹ್ಮಣನ ಒಂಬತ್ತನೆಯ ಮಗು ಮೃತವಾಗಿತ್ತು. ಅರ್ಜುನನು ಆ ಗೋಳಾಟವನ್ನು ಕೇಳಿ ಬ್ರಾಹ್ಮಣನ ಬಳಿಗೆ ಬಂದು ''ಅಯ್ಯಾ-ಬ್ರಾಹ್ಮಣ, (ಹೀಗೆ ಹಲುಬುವುದೇಕೆ ?) ನಿನ್ನ ಮನೆಯ ಹತ್ತಿರ ಧನುರ್ಧಾರಿಯಾದ ಒಬ್ಬ ಕ್ಷತ್ರಿಯನೂ ಇಲ್ಲವೋ ಹೇಗೆ ? ಇಲ್ಲಿ ಕ್ಷತ್ರಿಯರು ಬ್ರಾಹ್ಮಣರಂತೆ ಯಾಗದೀಕ್ಷೆವಹಿಸಿ ಶಾಂತರಾಗಿ ಕುಳಿತಿದ್ದಾರೇನು ? (೧೭-೧೮). ಹಣ ಹೆಂಡತಿ ಮಕ್ಕಳನ್ನು ಕಳೆದುಕೊಂಡು ಬ್ರಾಹ್ಮಣರು ಶೋಕಿಸುತ್ತಿರುವಾಗ ತೆಪ್ಪಗಿರತಕ್ಕವರು ಕ್ಷತ್ರಿಯರೆ ? ಅಂತಹವರು ಕ್ಷತ್ರಿಯ ವೇಷವನ್ನು ಧರಿಸಿದ ನರ್ತಕರು, ಹೊಟ್ಟೆಹೊರಕರು ! ಹೇ ವಿಪ್ರ, ನನಗೆ ಪೂಜ್ಯ ನೀನು. ಅನಾಥ ದಂಪತಿಗಳಾದ ನಿಮ್ಮಿರ್ವರ ರಕ್ಷಣೆಯ ಭಾರವನ್ನು ನಾನು ವಹಿಸಿಕೊಳ್ಳುವೆನು !

ಬ್ರಾಹ್ಮಣ ಉವಾಚ-

ಸಂಕರ್ಷಣೋ ವಾಸುದೇವಃ ಪ್ರದ್ಯುಮ್ನೋ ಧನ್ವಿನಾಂ ವರಃ।
ಅನಿರುದ್ಧೋಽಪ್ರತಿರಥೋ ನ ತ್ರಾತುಂ ಶಕ್ನುವಂತಿ ಯತ್ ॥ ೩೧

ತತ್ ಕಥಂ ನು ಭವಾನ್ ಕರ್ಮ ದುಷ್ಕರಂ ಜಗದೀಶ್ವರೈಃ।
ಚಿಕೀರ್ಷಸಿ ತ್ವಂ ಬಾಲಿಶ್ಯಾತ್ ತನ್ನ ಶ್ರದ್ದಧ್ಮಹೇ ವಯಮ್ ॥ ೩೨

ಅರ್ಜುನ ಉವಾಚ-

ನಾಹಂ ಸಂಕರ್ಷಣೋ ಬ್ರಹ್ಮನ್ ನ ಕೃಷ್ಣಃ ಕಾರ್ಷ್ಣಿರೇವ ಚ।
ಅಹಂ ವಾ ಅರ್ಜುನೋ ನಾಮ ಗಾಂಡೀವಂ ಯಸ್ಯ ವೈ ಧನುಃ॥ ೩೩

ಮಾವಮಂಸ್ಥಾ ಮಮ ಬ್ರಹ್ಮನ್ ವೀರ್ಯಂ ತ್ರ್ಯಂಬಕತೋಷಣಮ್ ।
ಮೃತ್ಯುಂ ವಿಜಿತ್ಯ ಪ್ರಧನೇ ಆನೇಷ್ಯೇ ತೇ ಪ್ರಜಾಂ ಪ್ರಭೋ॥ ೩೪

ಏವಂ ವಿಶ್ರಂಭಿತೋ ವಿಪ್ರಃ ಫಾಲ್ಗುನೇನ ಪರಂತಪ।
ಜಗಾಮ ಸ್ವಗೃಹಂ ಪ್ರೀತಃ ಪಾರ್ಥವೀರ್ಯಂ ನಿಶಾಮಯನ್ ॥ ೩೫

ನನ್ನ ಪ್ರತಿಜ್ಞೆಯು ಹುಸಿಯಾದರೆ ಪ್ರಾಯಶ್ಚಿತ್ತವಾಗಿ ಅಗ್ನಿಯಲ್ಲಿ ಧುಮುಕುವೆನು !'' ಎಂದು ಹೇಳಿದನು (೨೯-೩೦). ಅದಕ್ಕೆ ಆ ವಿಪ್ರನು ''ಅಯ್ಯಾ, ಬಲರಾಮ-ವಾಸುದೇವ-ಧನುರ್ಧಾರಿಗಳಲ್ಲಿ ಅಗ್ರಗಣ್ಯನಾದ ಪ್ರದ್ಯುಮ್ನ- ಅಪ್ರತಿಮ ಶೂರನಾದ ಅನಿರುದ್ಧ-ಇವರಿಂದಲೂ ರಕ್ಷಿಸಲು ಸಾಧ್ಯವಾಗುತ್ತಿಲ್ಲ. ಈ ಮಹಾಪುರುಷರಿಗೂ ದುಷ್ಕರವಾದ ಕಾರ್ಯವನ್ನು ನೀನು ಮಾಡಲು ಬಯಸುವೆಯಾ ? ಹುಡುಗಾಟಿಕೆಯ ಮಾತಿದು ! ನಾವು ನಂಬುವುದಿಲ್ಲ! '' ಎಂದನು (೩೧-೩೨). ಆಗ ಅರ್ಜುನನು ''ಅಯ್ಯಾ-ಬ್ರಾಹ್ಮಣ, ನಾನು ಬಲರಾಮನಲ್ಲ; ಕೃಷ್ಣನಲ್ಲ; ಕೃಷ್ಣನ ಮಗನೂ ಅಲ್ಲ! ನಾನು ಅರ್ಜುನ ; ನನ್ನ ಧನಸ್ಸು ಗಾಂಡೀವ. ಮುಕ್ಕಣ್ಣನಾದ ಪರಮೇಶ್ವರನನ್ನೂ ಮೆಚ್ಚಿಸಿರುವ ನನ್ನ ಪರಾಕ್ರಮವನ್ನು ಹೀಗಳೆಯಬೇಡ. ಹೇ ವಿಪ್ರ, ಯುದ್ಧದಲ್ಲಿ ಮೃತ್ಯುವನ್ನೂ ಗೆದ್ದು ನಿನ್ನ ಮಗನನ್ನು ತಂದುಕೊಡುವೆನು ! '' ಎಂದು ಹೇಳಿದನು (೩೩-೩೪). ಹೀಗೆ ಪಾರ್ಥನು ಪ್ರತಿಜ್ಞೆ ಮಾಡಿ ಮಾತುಕೊಡಲು, ಪರೀಕ್ಷಿತ ಆ ವಿಪ್ರನಿಗೆ

ಪ್ರಸೂತಿಕಾಲ ಆಸನ್ನೇ ಭಾರ್ಯಾಯಾ ದ್ವಿಜಸತ್ತಮಃ
ಪಾಹಿ ಪಾಹಿ ಪ್ರಜಾಂ ಮೃತ್ಯೋರಿತ್ಯಾಹಾರ್ಜುನಮಾತುರಃ ॥ ೩೬

ಸ ಉಪಸ್ಪೃಶ್ಯ ಶುಚ್ಯಂಭೋ ನಮಸ್ಕೃತ್ಯ ಮಹೇಶ್ವರಮ್ ।
ದಿವ್ಯಾನ್ಯಸ್ತ್ರಾಣಿ ಸಂಸ್ಮೃತ್ಯ ಸಜ್ಯಂ ಗಾಂಡೀವಮಾದದೇ ॥ ೩೭

ನ್ಯರುಣತ್ ಸೂತಿಕಾಗಾರಂ ಶರೈರ್ನಾನಾಸ್ತ್ರಯೋಜಿತೈಃ ।
ತಿರ್ಯಗೂರ್ಧ್ವಮಧಃ ಪಾರ್ಥಶ್ಚಕಾರ ಶರಪಂಜರಮ್ ॥ ೩೮

ತತಃ ಕುಮಾರಃ ಸಂಜಾತೋ ವಿಪ್ರಪತ್ನ್ಯಾ ರುದನ್ ಮುಹುಃ ।
ಸದ್ಯೋಽದರ್ಶನಮಾಪೇದೇ ಸಶರೀರೋ ವಿಹಾಯಸಾ ॥ ೩೯

ತದಾಽಽಹ ವಿಪ್ರೋ ವಿಜಯಂ ವಿನಿಂದನ್ ಕೃಷ್ಣಸಂನಿಧೌ ।
ಮೌಢ್ಯಂ ಪಶ್ಯತ ಮೇ ಯೋಽಹಂ ಶ್ರದ್ದಧೇ ಕ್ಲೀಬಕತ್ಥನಮ್ ॥ ೪೦

ವಿಶ್ವಾಸವುಂಟಾಗಿ ಸಂತೋಷವಾಯಿತು. ಅವನು ಪಾರ್ಥನ ಪರಾಕ್ರಮವನ್ನು ನೋಡೋಣವೆಂದುಕೊಳ್ಳುತ್ತ ಮನೆಗೆ ಹೋದನು (೩೫). ಮತ್ತೆ ಬ್ರಾಹ್ಮಣನ ಮಡದಿಗೆ ಪ್ರಸವಕಾಲವು ಪ್ರಾಪ್ತವಾಯಿತು. ಆತನು ಉದ್ವಿಗ್ನನಾಗಿ ಅರ್ಜುನನ ಬಳಿಗೆ ಧಾವಿಸಿ ''ಅರ್ಜುನ, ನನ್ನ ಮಗುವನ್ನು ಉಳಿಸು, ಮೃತ್ಯುವಿನಿಂದ ಪಾರುಮಾಡು'' ಎಂದು ಬೇಡಿಕೊಂಡನು (೩೬). ಒಡನೆಯೇ ಅರ್ಜುನನು ಬಂದು ಶುದ್ಧಾಚಮನಮಾಡಿ ಮಹೇಶ್ವರನಿಗೆ ನಮಸ್ಕರಿಸಿ, ದಿವ್ಯವಾದ ಮಂತ್ರಾಸ್ತ್ರಗಳನ್ನು ಅಭಿಮಂತ್ರಿಸಿ, ಗಾಂಡೀವ ಧನಸ್ಸನ್ನು ಹೆದೆಯೇರಿಸಿ ಕೈಯಲ್ಲಿ ಧರಿಸಿದನು(೩೭). ನಾನಾಬಗೆಯ ದಿವ್ಯ ಮಂತ್ರಾಸ್ತ್ರಗಳನ್ನು ಪ್ರಸವಗೃಹದ ಮೇಲೆ ಕೆಳಗೆ ಸುತ್ತಲೂ ಪ್ರಯೋಗಿಸಿ ಒಂದು ಶರಪಂಜರವನ್ನು ನಿರ್ಮಿಸಿಬಿಟ್ಟನು. ಅನಂತರ ಬ್ರಾಹ್ಮಣನ ಪತ್ನಿಗೆ ಒಂದು ಗಂಡು ಶಿಶು ಹುಟ್ಟಿತು. ಅದು ರೂರೂ ಎಂದು ಅಳುತ್ತ ಇದ್ದಕ್ಕಿದ್ದಂತೆ ಗಗನಮಾರ್ಗದಲ್ಲಿ ದೇಹಸಹಿತ ಅದೃಶ್ಯವಾಯಿತು ! (ಈ ಸಲ ಮಗುವಿನ ದೇಹವೂ ಉಳಿಯಲಿಲ್ಲ!) (೩೮-೩೯). ತರುವಾಯ ಆ ಬ್ರಾಹ್ಮಣನು ಬಂದು ಅರ್ಜುನನನ್ನು ಶ್ರೀಕೃಷ್ಣನ ಎದುರಿಗೆ ಹೀಯಾಳಿಸಿದನು : ''ಒಬ್ಬ ನಪುಂಸಕನ ಜಂಭದ ಮಾತನ್ನು ನಾನು ನಂಬಿಬಿಟ್ಟೆನಲ್ಲ, ನನ್ನ ಮೂಢತನವನ್ನು ನೋಡಿರಿ! ಪ್ರದ್ಯುಮ್ನನಿಗೂ ಅನಿರುದ್ಧನಿಗೂ ನನ್ನ ಮಗುವನ್ನು

ನ ಪ್ರದ್ಯುಮ್ನೋ ನಾನಿರುದ್ಧೋ ನ ರಾಮೋ ನ ಚ ಕೇಶವಃ ।
ಯಸ್ಯ ಶೇಕುಃ ಪರಿತ್ರಾತುಂ ಕೋಽನ್ಯಸ್ತದವಿತೇಶ್ವರಃ ॥ ೪೧

ಧಿಗರ್ಜುನಂ ಮೃಷಾವಾದಂ ಧಿಗಾತ್ಮಶ್ಲಾಘಿನೋ ಧನುಃ ।
ದೈವೋಪಸೃಷ್ಟಂ ಯೋ ಮೌಢ್ಯಾದಾನಿನೀಷತಿ ದುರ್ಮತಿಃ ॥ ೪೨

ಏವಂ ಶಪತಿ ವಿಪ್ರರ್ಷೌ ವಿದ್ಯಾಮಾಸ್ಥಾಯ ಫಾಲ್ಗುನಃ ।
ಯಯೌ ಸಂಯಮನೀಮಾಶು ಯತ್ರಾಸ್ತೇ ಭಗವಾನ್ ಯಮಃ ॥ ೪೩

ವಿಪ್ರಾಪತ್ಯಮಚಕ್ಷಾಣಸ್ತತ ಐಂದ್ರೀಮಗಾತ್ ಪುರೀಮ್ ।
ಆಗ್ನೇಯೀಂ ನೈರ್ಋತೀಂ ಸೌಮ್ಯಾಂ ವಾಯವ್ಯಾಂ ವಾರುಣೀಮಥ ।
ರಸಾತಲಂ ನಾಕಪೃಷ್ಠಂ ಧಿಷ್ಣ್ಯಾನ್ಯನ್ಯಾನ್ಯುಧಾಯುಧಃ ॥ ೪೪

ತತೋಽಲಬ್ಧದ್ವಿಜಸುತೋ ಹ್ಯನಿಸ್ತೀರ್ಣಪ್ರತಿಶ್ರುತಃ ।
ಅಗ್ನಿಂ ವಿವಿಕ್ಷುಃ ಕೃಷ್ಣೇನ ಪ್ರತ್ಯುಕ್ತಃ ಪ್ರತಿಷೇಧತಾ ॥ ೪೫

ಉಳಿಸಲಾಗಲಿಲ್ಲ ಬಲರಾಮನಿಗೂ ಆಗಲಿಲ್ಲ.'' ಕೇಶವನಿಗೂ ಆಗಲಿಲ್ಲ! ಹೀಗಿರುವಾಗ ಇನ್ನು ಯಾವನು ರಕ್ಷಿಸಲು ಸಮರ್ಥನಾದಾನು ? (೪೦-೪೧). ಸುಳ್ಳು ಹೇಳತಕ್ಕ ಈ ಅರ್ಜುನನಿಗೆ ಧಿಕ್ಕಾರ ! ಈ ಜಂಬಗಾರನ ಧನುಸ್ಸಿಗೆ ಧಿಕ್ಕಾರ ! ದೈವ ಬೆನ್ನುಹತ್ತಿದ್ದನ್ನು ಈ ಬುದ್ಧಿಗೇಡಿ ತರುತ್ತಾನಂತೆ ! ಅದನ್ನು ತಪ್ಪಿಸುತ್ತೇನೆನ್ನುವುದು ಮೂರ್ಖತನದಿಂದ'' ಎಂದನು (೪೨). ಋಷಿಸಮಾನನಾದ ಆ ವಿಪ್ರನು ಹೀಗೆ ಆಕ್ರೋಶದಿಂದ ಹಲುಬುತ್ತಿರಲು, ಒಡನೆಯೇ ಪಾರ್ಥನು ಮಂತ್ರವಿದ್ಯಾಬಲದಿಂದ ಯಮದೇವನಿರುವ ಸಂಯಮನೀ ಪಟ್ಟಣಕ್ಕೆ ತೆರಳಿದನು (೪೩). ಅಲ್ಲಿ ಬ್ರಾಹ್ಮಣನ ಪುತ್ರನನ್ನು ಕಾಣದೆ ಇಂದ್ರ ಅಮರಾವತಿಗೆ ಹೋದನು. ಈ ರೀತಿಯಲ್ಲಿ ಹುಡುಕುತ್ತ ಕ್ರಮವಾಗಿ ಅಗ್ನಿಲೋಕ, ನೈರ್ಋತಿಯ ನಗರ, ಚಂದ್ರಲೋಕ, ವಾಯುಲೋಕ, ವರುಣಲೋಕಗಳನ್ನು ಪ್ರವೇಶಿಸಿದನು. ಆಯುಧಧಾರಿಯಾದ ಅರ್ಜುನನು ರಸಾತಳವನ್ನು ಹೊಕ್ಕು ಅನಂತರ ಸ್ವರ್ಗದ ಮೇಲಿರುವ ಬೇರೆ ಬೇರೆ ಊರ್ಧ್ವಲೋಕಗಳಲ್ಲಿ ಅನ್ವೇಷಿಸಿದನು (೪೪). ಎಲ್ಲಿಯೂ ಬ್ರಾಹ್ಮಣಪುತ್ರನು

ದರ್ಶಯೇ ದ್ವಿಜಸೂನೂಂಸ್ತೇ ಮಾವಜ್ಞಾತ್ಮಾನಮಾತ್ಮನಾ ।
ಯೇ ತೇ ನಃ ಕೀರ್ತಿಂ ವಿಮಲಾಂ ಮನುಷ್ಯಾಃ ಸ್ಥಾಪಯಿಷ್ಯಂತಿ ॥ ೪೬

ಇತಿ ಸಂಭಾಷ್ಯ ಭಗವಾನರ್ಜುನೇನ ಸಹೇಶ್ವರಃ ।
ದಿವ್ಯಂ ಸ್ವರಥಮಾಸ್ಥಾಯ ಪ್ರತೀಚೀಂ ದಿಶಮಾವಿಶತ್ ॥ ೪೭

ಸಪ್ತ ದ್ವೀಪಾನ್ ಸಪ್ತಸಿಂಧೂನ್ ಸಪ್ತಸಪ್ತಗಿರೀನಥ ।
ಲೋಕಾಲೋಕಂ ತಥಾತೀತ್ಯ ವಿವೇಶ ಸುಮಹತ್ತಮಃ ॥ ೪೮

ತತ್ರಾಶ್ವಾಃ ಶೈಬ್ಯಸುಗ್ರೀವಮೇಘಪುಷ್ಪಬಲಾಹಕಾಃ ।
ತಮಸಿ ಭ್ರಷ್ಟಗತಯೋ ಬಭೂವುರ್ಭರತರ್ಷಭ ॥ ೪೯

ತಾನ್ ದೃಷ್ಟ್ವಾ ಭಗವಾನ್ ಕೃಷ್ಣೋ ಮಹಾಯೋಗೇಶ್ವರೇಶ್ವರಃ ।
ಸಹಸ್ರಾದಿತ್ಯಸಂಕಾಶಂ ಸ್ವಚಕ್ರಂ ಪ್ರಾಹಿಣೋತ್ ಪುರಃ ॥ ೫೦

ದೊರೆಯಲಿಲ್ಲ. ತನ್ನ ಪ್ರತಿಜ್ಞೆಯು ನೆರವೇರಲಿಲ್ಲವೆಂದು ಅರ್ಜುನನು ಅಗ್ನಿಪ್ರವೇಶಕ್ಕೆ ಅಣಿಯಾದನು. ಆಗ ಶ್ರೀಕೃಷ್ಣನು ಅವನನ್ನು ತಡೆದು "ಅರ್ಜುನ, ಬ್ರಾಹ್ಮಣನ ಎಲ್ಲ ಮಕ್ಕಳೂ ಎಲ್ಲಿದ್ದಾರೆಂಬುದನ್ನು ನಿನಗೆ ತೋರಿಸುವೆನು! ನಿನ್ನನ್ನೇ ನೀನು ಅವಮಾನಕ್ಕೆ ಸಿಲುಕಿಸಿಕೊಳ್ಳಬೇಡ. ಯಾವ ಜನರು ನಮ್ಮನ್ನು ನಿಂದಿಸುತ್ತಾರೋ ಅವರೇ ನಮ್ಮ ಕೀರ್ತಿಯನ್ನು ಸ್ಥಿರವಾಗಿ ಸ್ಥಾಪಿಸುತ್ತಾರೆಂದು ತಿಳಿ" ಎಂದನು [೧] (೪೫-೪೬). ಹೀಗೆ ನುಡಿದು ಸರ್ವೇಶ್ವರನಾದ ಭಗವಂತನು ಅರ್ಜುನನೊಡನೆ ತನ್ನ ದಿವ್ಯರಥವನ್ನೇರಿ ಪಶ್ಚಿಮ ದಿಕ್ಕಿಗೆ ಪ್ರಯಾಣ ಮಾಡಿದನು. ಒಂದೊಂದರಲ್ಲಿ ಏಳೇಳು ಪರ್ವತಗಳಿರುವ ಸಪ್ತದ್ವೀಪಗಳನ್ನೂ ಸಪ್ತಸಾಗರಗಳನ್ನೂ ದಾಟಿ ಲೋಕಾಲೋಕಪರ್ವತವನ್ನು ಅತಿಕ್ರಮಿಸಿ ಗಾಢಾಂಧಕಾರವಿದ್ದ ಪ್ರದೇಶಕ್ಕೆ ನುಗ್ಗಿದನು (೪೭-೪೮). ಪರೀಕ್ಷಿತರಾಜ, ಘೋರವಾದ ಆ ಕತ್ತಲೆಯಲ್ಲಿ ಶೈಬ್ಯ, ಸುಗ್ರೀವ, ಮೇಘಪುಷ್ಪ, ಬಲಾಹಕಗಳೆಂಬ ರಥಾಶ್ವಗಳು ದಾರಿಕಾಣದೆ ಕಂಗೆಟ್ಟವು. ಕುದುರೆಗಳು ದಿಕ್ಕು ಗಾಣದಿರುವುದನ್ನು ನೋಡಿ ಮಹಾಯೋಗೇಶ್ವರೇಶ್ವರನಾದ ಶ್ರೀಕೃಷ್ಣನು ತನ್ನ ಸುದರ್ಶನ ಚಕ್ರವನ್ನು

೧ 'ಯೇ ತೇ ನಃ ಕೀರ್ತಿಂ...' ಎಂಬ ಶ್ಲೋಕದ ಸಾಲಿನಲ್ಲಿ ಅಕ್ಷರಗಳ ಸಂಖ್ಯೆ ಸರಿಯಾಗಿದೆ. ಗುರು ಲಘುಗಳ ಕ್ರಮವು ಮಾತ್ರ ವ್ಯತ್ಯಸ್ತವಾಗಿದೆ.

ತಮಃ ಸುಘೋರಂ ಗಹನಂ ಕೃತಂ ಮಹದ್
ವಿದಾರಯದ್ ಭೂರಿತರೇಣ ರೋಚಿಷಾ ।
ಮನೋಜವಂ ನಿರ್ವಿವಿಶೇ ಸುದರ್ಶನಂ
ಗುಣಚ್ಯುತೋ ರಾಮಶರೋ ಯಥಾ ಚಮೂಃ ॥ ೫೧

ದ್ವಾರೇಣ ಚಕ್ರಾನುಪಥೇನ ತತ್ತಮಃ
ಪರಂ ಪರಂ ಜ್ಯೋತಿರನಂತಪಾರಮ್ ।
ಸಮಶ್ನುವಾನಂ ಪ್ರಸಮೀಕ್ಷ್ಯ ಫಾಲ್ಗುನಃ
ಪ್ರತಾಡಿತಾಕ್ಷೋಽಪಿದಧೇಽಕ್ಷಿಣೀ ಉಭೇ ॥ ೫೨

ತತಃ ಪ್ರವಿಷ್ಟಃ ಸಲಿಲಂ ನಭಸ್ವತಾ
ಬಲೀಯಸೈಜದ್ಬೃಹದೂರ್ಮಿಭೂಷಣಮ್ ।
ತತ್ರಾದ್ಭುತಂ ವೈ ಭವನಂ ದ್ಯುಮತ್ತಮಂ
ಭ್ರಾಜನ್ಮಣಿಸ್ತಂಭಸಹಸ್ರಶೋಭಿತಮ್ ॥ ೫೩

ಮುಂದೆ ಬಿಟ್ಟನು. ಆ ಚಕ್ರವು ಸಾವಿರ ಸೂರ್ಯರಂತೆ ಬೆಳಗುತ್ತ ಸಾಗಿತು (೪೯-೫೦). ಹೆದೆಯಿಂದ ಹೊರಚಿಮ್ಮಿದ ರಾಮಬಾಣವು ರಾಕ್ಷಸಸೇನೆಗಳನ್ನು ಭೇದಿಸುತ್ತ ಮುನ್ನುಗ್ಗುವಂತೆ, ಆ ಸುದರ್ಶನಚಕ್ರವು ಪ್ರಕೃತಿ ಸಿದ್ಧನಾಗಿ ಅತ್ಯಂತ ಭೀಷಣವಾದ ದೊಡ್ಡ ಗಾಢಾಂಧಕಾರವನ್ನು ತನ್ನ ಅದ್ಭುತವಾದ ಪ್ರಕಾಶದಿಂದ ಭೇದಿಸಿ ಬೆಳಗಿಸುತ್ತ ಮನೋವೇಗದಲ್ಲಿ ಮುನ್ನುಗ್ಗಿತು (೫೧). ಚಕ್ರವು ಹೋದ ದಾರಿಯನ್ನು ಹಿಡಿದು ಆ ತಮಸ್ಸಿಗೆ ಪರದಲ್ಲಿರುವ ಅನಂತಪಾರವಾದ ಭಗವಂತನ ಪರಂಜ್ಯೋತಿಯು ಬೆಳಗುತ್ತ ಸಾಗುವುದನ್ನು ಕಂಡು (ಅದರ ಪ್ರಖರ ತೇಜಸ್ಸಿಗೆ) ಕಣ್ಣು ಕುಕ್ಕಲಾಗಿ, ನೋಡಲಾರದೆ ಅರ್ಜುನನು ಎರಡು ಕಣ್ಣುಗಳನ್ನೂ ಮುಚ್ಚಿಕೊಂಡನು ! (೫೨). ಅನಂತರ ಸಮುದ್ರಜಲದಲ್ಲಿ ರಥವು ಸಾಗಿತು. ಬಿರುಗಾಳಿಯಿಂದೆದ್ದ ಬೃಹತ್ತರಂಗಗಳು ಆ ಜಲಕ್ಕೆ ಭೂಷಣಪ್ರಾಯವಾಗಿದ್ದವು. ಅದರ ನಡುವೆ ಜಾಜ್ವಲ್ಯಮಾನವೂ ಅದ್ಭುತವೂ ಆದ ಒಂದು ಭವನವಿತ್ತು.[೧] ಆ ಭವನದಲ್ಲಿ ಹೊಳೆಹೊಳೆಯುವ ಸಾವಿರಾರು ಮಣಿಸ್ತಂಭಗಳಿದ್ದವು (೫೩).

---

೧ ಇದು ಮಹಾಕಾಲಪುರವೆಂದು ಶ್ರೀಧರೀಯ ವ್ಯಾಖ್ಯಾನದಲ್ಲಿ ಬರೆದಿದೆ.

ತಸ್ಮಿನ್ ಮಹಾಭೀಮಮನಂತಮದ್ಭುತಂ
ಸಹಸ್ರಮೂರ್ಧನ್ಯಫಣಾಮಣಿದ್ಯುಭಿಃ।
ವಿಭ್ರಾಜಮಾನಂ ದ್ವಿಗುಣೋಲ್ಬಣೇಕ್ಷಣಂ
ಸಿತಾಚಲಾಭಂ ಶಿತಿಕಂಠಜಿಹ್ವಮ್ ॥ ೫೪

ದದರ್ಶ ತದ್ಭೋಗಸುಖಾಸನಂ ವಿಭುಂ
ಮಹಾನುಭಾವಂ ಪುರುಷೋತ್ತಮೋತ್ತಮಮ್ ।
ಸಾಂದ್ರಾಂಬುದಾಭಂ ಸುಪಿಶಂಗವಾಸಸಂ
ಪ್ರಸನ್ನವಕ್ತ್ರಂ ರುಚಿರಾಯತೇಕ್ಷಣಮ್ ॥ ೫೫

ಮಹಾಮಣಿವ್ರಾತ ಕಿರೀಟಕುಂಡಲ-
ಪ್ರಭಾಪರಿಕ್ಷಿಪ್ತಸಹಸ್ರಕುಂತಲಮ್ ।
ಪ್ರಲಂಬಚಾರ್ವಷ್ಟಭುಜಂ ಸಕೌಸ್ತುಭಂ
ಶ್ರೀವತ್ಸಲಕ್ಷ್ಮಂ ವನಮಾಲಯಾ ವೃತಮ್ ॥ ೫೬

ಆ ಭವನದಲ್ಲಿ ಸಾವಿರ ಹೆಡೆಗಳಿಂದಲೂ ಹೆಡೆಗಳಲ್ಲಿದ್ದ ರತ್ನಗಳಿಂದಲೂ ಶೋಭಿಸುತ್ತ, ಎರಡು ಸಾವಿರ ಉಗ್ರನೇತ್ರಗಳಿಂದ ವಿರಾಜಿಸುತ್ತ, ಕಪ್ಪಾದ ಕುತ್ತಿಗೆಗಳಿಂದಲೂ ನಾಲಗೆಗಳಿಂದಲೂ ಹೊಳೆಯುತ್ತ, ಸ್ಫಟಿಕಶಿಲೆಯ ಪರ್ವತವೋ ಎಂಬಂತೆ ಕಂಗೊಳಿಸುತ್ತ ಅತಿಭೀಷಣನೂ ಅದ್ಭುತಾಕೃತಿಯೂ ಆದ ಅನಂತನನ್ನು (ಆದಿಶೇಷನನ್ನು) ಅರ್ಜುನನು ಕಂಡನು (೫೪). ಆದಿಶೇಷನ ದೇಹದ ಮೇಲೆ ಸುಖಾಸನದಲ್ಲಿ ಕುಳಿತಿದ್ದ ಮಹಾನುಭಾವನೂ ಪುರುಷೋತ್ತಮೋತ್ತಮನೂ ಆದ ಶ್ರೀಮನ್ನಾರಾಯಣನನ್ನು ಅರ್ಜುನನು ವೀಕ್ಷಿಸಿದನು. ಆ ಸ್ವಾಮಿಯು ದಟ್ಟವಾದ ಮೋಡದಂತೆ ಶ್ಯಾಮಲಾಂಗನೂ ಪೀತಾಂಬರನೂ ಪ್ರಸನ್ನಮುಖನೂ ಸುಂದರವಾದ ವಿಶಾಲನೇತ್ರಗಳುಳ್ಳವನೂ ಆಗಿದ್ದನು (೫೫). ಮಹಾರತ್ನಖಚಿತವಾದ ಕಿರೀಟ ಮತ್ತು ಕುಂಡಲಗಳ ಪ್ರಭೆಯು ಆತನ ಕೇಶಪಾಶಗಳ ಮೇಲೆ ಹರಡಿತ್ತು. ನೀಳವಾಗಿಯೂ ಸುಂದರವಾಗಿಯೂ ಇದ್ದ ಎಂಟು ಭುಜಗಳಿದ್ದವು. ಆ ಮಹಾಪುರುಷನು ಕೌಸ್ತುಭಮಣಿಯಿಂದಲೂ ಶ್ರೀವತ್ಸಚಿಹ್ನದ ಕಾಂತಿಯಿಂದಲೂ ವನಮಾಲೆಯಿಂದಲೂ ಶೋಭಿತನಾಗಿದ್ದನು

ಸುನಂದನಂದ ಪ್ರಮುಖೈಃ ಸ್ವಪಾರ್ಷದೈ-
ಶ್ಚಕ್ರಾದಿಭಿರ್ಮೂರ್ತಿಧರೈರ್ನಿಜಾಯುಧೈಃ।
ಪುಷ್ಟ್ಯಾ ಶ್ರಿಯಾ ಕೀರ್ತ್ಯಜಯಾಖಿಲರ್ದ್ಧಿಭಿ-
ರ್ನಿಷೇವ್ಯಮಾಣಂ ಪರಮೇಷ್ಠಿನಾಂ ಪತಿಮ್ ॥ ೫೭

ವವಂದ ಆತ್ಮಾನಮನಂತಮುಚ್ಯುತೋ
ಜಿಷ್ಣುಶ್ಚ ತದ್ದರ್ಶನಜಾತಸಾಧ್ವಸಃ।
ತಾವಾಹ ಭೂಮಾ ಪರಮೇಷ್ಠಿನಾಂ ಪ್ರಭು-
ರ್ಬದ್ಧಾಂಜಲೌ ಸಸ್ಮಿತಮೂರ್ಜಯಾ ಗಿರಾ ॥ ೫೮

ದ್ವಿಜಾತ್ಮಜಾ ಮೇ ಯುವಯೋರ್ದಿದೃಕ್ಷುಣಾ
ಮಯೋಪನೀತಾ ಭುವಿ ಧರ್ಮಗುಪ್ತಯೇ।
ಕಲಾವತೀರ್ಣಾವವನೇರ್ಭರಾಸುರಾನ್
ಹತ್ವೇಹ ಭೂಯಸ್ತ್ವರಯೇತಮಂತಿ ಮೇ ॥ ೫೯

---

(೫೬). ಪರಮೇಷ್ಠಿಗಳಿಗೆ ಪತಿಯಾದ ಆ ಸ್ವಾಮಿಯನ್ನು ಅವನ ಪಾರಿಷದರಾದ ನಂದಸುನಂದಾದಿಗಳೂ ಶರೀರಧಾರಿಗಳಾದ ಚಕ್ರಾದ್ಯಾಯುಧಗಳೂ ಪುಷ್ಟಿ ಶ್ರೀ, ಕೀರ್ತಿ, ಅಜಾ ಎಂಬುವರೂ, ಮೂರ್ತಿಧಾರಿಗಳಾದ ಅಣಿಮಾದ್ಯಷ್ಟಸಿದ್ಧಿಗಳೂ ಸೇವಿಸುತ್ತಿದ್ದರು (೫೭). ಶ್ರೀಕೃಷ್ಣನು ತನ್ನ ಆತ್ಮನೇ ಆದ ಆ ಪ್ರಭುವಿಗೆ ನಮಸ್ಕರಿಸಿದನು. ಅವನನ್ನು ನೋಡಿ ಹೆದರಿದ ಅರ್ಜುನನೂ ನಮಸ್ಕರಿಸಿದನು. ಕೃಷ್ಣಾರ್ಜುನರೂ ಅಂಜಲಿಬದ್ಧರಾಗಿ ನಿಂತಿರಲು, ಪರಮೇಷ್ಠಿಗಳಿಗೆ ಒಡೆಯನಾದ ಆ ಮಹಾಪುರುಷನು ಮುಗುಳ್ನಗೆ ಬೀರುತ್ತ ಗಂಭೀರವಾಣಿಯಿಂದ ಹೀಗೆಂದನು (೫೮) : ''ಕೃಷ್ಣಾರ್ಜುನರೆ, ನಿಮ್ಮನ್ನು ನೋಡಬೇಕೆಂಬ ಕುತೂಹಲದಿಂದ ಆ ಬ್ರಾಹ್ಮಣಪುತ್ರರನ್ನು ನಾನು ಇಲ್ಲಿಗೆ ತಂದಿದ್ದೇನೆ! ಧರ್ಮ ರಕ್ಷಣೆಗಾಗಿ ನೀವಿಬ್ಬರೂ ನನ್ನ ಅಂಶದಿಂದ ಭೂಲೋಕದಲ್ಲಿ ಅವತರಿಸಿದ್ದೀರಿ. ಭೂಭಾರವಾಗಿರುವ

ಪೂರ್ಣಕಾಮಾವಪಿ ಯುವಾಂ ನರನಾರಾಯಣಾವೃಷಿ ।
ಧರ್ಮಮಾಚರತಾಂ ಸ್ಥಿತ್ಯೈ ಋಷಭೌ ಲೋಕಸಂಗ್ರಹಮ್ ॥ ೬೦

ಇತ್ಯಾದಿಷ್ಟೌ ಭಗವತಾ ತೌ ಕೃಷ್ಣೌ ಪರಮೇಷ್ಠಿನಾ ।
ಓಮಿತ್ಯಾನಮ್ಯ ಭೂಮಾನಮಾದಾಯ ದ್ವಿಜದಾರಕಾನ್ ॥ ೬೧

ನ್ಯವರ್ತತಾಂ ಸ್ವಕಂ ಧಾಮ ಸಂಪ್ರಹೃಷ್ಟೌ ಯಥಾಗತಮ್ ।
ವಿಪ್ರಾಯ ದದತುಃ ಪುತ್ರಾನ್ ಯಥಾರೂಪಂ ಯಥಾವಯಃ ॥ ೬೨

ನಿಶಾಮ್ಯ ವೈಷ್ಣವಂ ಧಾಮ ಪಾರ್ಥಃ ಪರಮವಿಸ್ಮಿತಃ ।
ಯತ್ಕಿಂಚಿತ್ ಪೌರುಷಂ ಪುಂಸಾಂ ಮೇನೇ ಕೃಷ್ಣಾನುಕಂಪಿತಮ್ ॥ ೬೩

ಇತೀದೃಶಾನ್ಯನೇಕಾನಿ ವೀರ್ಯಾಣೀಹ ಪ್ರದರ್ಶಯನ್ ।
ಬುಭುಜೇ ವಿಷಯಾನ್ ಗ್ರಾಮ್ಯಾನೀಜೇ ಚಾತ್ಯೂರ್ಜಿತೈರ್ಮಖೈಃ ॥ ೬೪

ಅಸುರರನ್ನು ಸಂಹರಿಸಿ ಆದಷ್ಟು ಬೇಗನೆ ನನ್ನ ಬಳಿಗೆ ಬನ್ನಿರಿ (೫೯). ಪುರುಷಶ್ರೇಷ್ಠರಾದ ನೀವು ನರ, ನಾರಾಯಣ-ಎಂಬ ಋಷಿಗಳು. ನೀವೂ ಪೂರ್ಣಕಾಮರಾದರೂ ಲೋಕಸ್ಥಿತಿಯನ್ನು ಕಾಪಾಡುವುದಕ್ಕಾಗಿ, ಲೋಕಸಂಗ್ರಹಾರ್ಥವಾದ ಧರ್ಮವನ್ನು ಆಚರಿಸುತ್ತಿರಿ'' ಎಂದನು (೬೦). ಈ ರೀತಿಯಲ್ಲಿ ಪರಮಾತ್ಮನು ಆಜ್ಞಾಪಿಸಲಾಗಿ ಕೃಷ್ಣಾರ್ಜುನರು ಓಂ (ಆಗಲಿ) ಎಂದು ನುಡಿದು ನಮಸ್ಕರಿಸಿದರು. ಅನಂತರ ಬ್ರಾಹ್ಮಣ ಬಾಲಕರನ್ನು ಕರೆದುಕೊಂಡು ಬಂದ ದಾರಿಯನ್ನು ಹಿಡಿದು ಸಂತೋಷದಿಂದ ತಮ್ಮ ಲೋಕಕ್ಕೆ ಹಿಂದಿರುಗಿದರು. ವಯಸ್ಸಿಗೆ ತಕ್ಕಂತೆ ರೂಪವಂತರಾಗಿ ಬೆಳೆದಿದ್ದ ವಿಪ್ರಬಾಲಕರನ್ನು ಆ ಬ್ರಾಹ್ಮಣನಿಗೆ ಒಪ್ಪಿಸಿದರು (೬೧-೬೨). ಪಾರ್ಥನು ವಿಷ್ಣುವಿನ ಮಹಿಮೆ ಏನೆಂಬುದನ್ನು ಕಣ್ಣಾರೆ ಕಂಡು ಪರಮಾಶ್ಚರ್ಯಭರಿತನಾದನು. ಮನುಷ್ಯರಲ್ಲಿ ಸಾಮರ್ಥ್ಯವೇನಾದರೂ ಇದ್ದರೆ ಅದು ಭಗವಂತನ ಅನುಗ್ರಹದಿಂದ ಬಂದದ್ದೆಂದು ನಿಶ್ಚಯಿಸಿಕೊಂಡನು (೬೩). ಪರೀಕ್ಷಿತರಾಜ, ಶ್ರೀಕೃಷ್ಣನು ಈ ಬಗೆಯ ಅನೇಕ ಮಹಿಮೆಗಳನ್ನು ಪ್ರದರ್ಶಿಸುತ್ತ, ಲೌಕಿಕವಾದ ವಿಷಯಸುಖಗಳನ್ನು ಅನುಭವಿಸುತ್ತ ಪ್ರಶಸ್ತವಾದ ಹಲವಾರು ಯಾಗಗಳನ್ನು ನಡೆಸಿದನು. ದೇವೇಂದ್ರನು ಯಥಾಕಾಲದಲ್ಲಿ ಮಳೆ

ಪ್ರವವರ್ಷಾಖಿಲಾನ್ ಕಾಮಾನ್ ಪ್ರಜಾಸು ಬ್ರಾಹ್ಮಣಾದಿಷು ।
ಯಥಾಕಾಲಂ ಯಥೈವೇಂದ್ರೋ ಭಗವಾನ್ ಶ್ರೈಷ್ಠ್ಯಮಾಸ್ಥಿತಃ ॥ ೬೫

ಹತ್ವಾನೃಪಾನಧರ್ಮಿಷ್ಠಾನ್ ಘಾತಯಿತ್ವಾರ್ಜುನಾದಿಭಿಃ ।
ಅಂಜಸಾ ವರ್ತಯಾಮಾಸ ಧರ್ಮಂ ಧರ್ಮಸುತಾದಿಭಿಃ ॥ ೬೬

ಇತಿ ಶ್ರೀ ಮದ್ಭಾಗವತೇ ದಶಮಸ್ಕಂಧೇ ಏಕೋನನವತಿತಮೋಽಧ್ಯಾಯಃ

ನವತಿತಮೋಽಧ್ಯಾಯಃ

ಶ್ರೀಶುಕಉವಾಚ-

ಸುಖಂ ಸ್ವಪುರ್ಯಾಂ ನಿವಸನ್ ದ್ವಾರಕಾಯಾಂ ಶ್ರಿಯಃ ಪತಿಃ ।
ಸರ್ವಸಂಪತ್ಸಮೃದ್ಧಾಯಾಂ ಜುಷ್ಟಾಯಾಂ ವೃಷ್ಣಿಪುಂಗವೈಃ ॥ ೧

ಸುರಿಸಿ ಜನರ ಅಭಿಲಾಷೆಗಳನ್ನು ಪೂರೈಸುವಂತೆ, ಶ್ರೇಷ್ಠನಾದ ಭಗವಾನ್ ಶ್ರೀಕೃಷ್ಣನು ಬ್ರಾಹ್ಮಣಾದಿ ಸಕಲಪ್ರಜೆಗಳಿಗೂ ಕಾಲಕಾಲಕ್ಕೆ ಸರಿಯಾಗಿ ಅವರ ಇಷ್ಟಾರ್ಥಗಳನ್ನು ನಡೆಸಿಕೊಡುತ್ತಿದ್ದನು (೬೪-೬೫). ಅಧರ್ಮಿಗಳಾದ ಕೆಲವು ರಾಜರುಗಳನ್ನು ಕೊಂದು, ಅರ್ಜುನಾದಿಗಳಿಂದ ಕೆಲವರನ್ನು ಕೊಲ್ಲಿಸಿದನು. ಧರ್ಮರಾಯನೇ ಮೊದಲಾದವರ ಮೂಲಕ ಧರ್ಮವನ್ನು ಸರಿಯಾದ ಪಥದಲ್ಲಿ ನಿಲ್ಲಿಸಿದನು (೬೬).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ಎಂಬತ್ತೊಂಬತ್ತನೆಯ ಅಧ್ಯಾಯ

ಅಧ್ಯಾಯ ೯೦

ಸಂಕ್ಷೇಪವಾಗಿ ಶ್ರೀಕೃಷ್ಣನ ಲೀಲಾವರ್ಣನೆ. ಯದುವಂಶೀಯರ ವೃತ್ತಾಂತ.

ಶುಕಮಹರ್ಷಿಗಳು ಹೇಳಿದರು : ಸರ್ವಸಂಪತ್ತುಗಳಿಂದ ಸಮೃದ್ಧವೂ ವೃಷ್ಣಿವಂಶದ ಉತ್ತಮ ಜನರಿಂದ ಆಶ್ರಿತವೂ ಆದ ತನ್ನ ದ್ವಾರಕಾನಗರದಲ್ಲಿ ಶ್ರೀಕೃಷ್ಣನು ಸುಖವಾಗಿ ನೆಲೆಸಿದ್ದನು. ಆತನ ಅಂತಃಪುರದಲ್ಲಿ ನವಯೌವನದಿಂದ

ಸ್ತ್ರೀಭಿಶ್ಚೋತ್ತಮವೇಷಾಭಿರ್ನವಯೌವನಕಾಂತಿಭಿಃ ।
ಕಂದುಕಾದಿಭಿರ್ಹರ್ಮ್ಯೇಷು ಕ್ರೀಡಂತೀಭಿಸ್ತಡಿದ್ದ್ಯುಭಿಃ ॥ ೨

ನಿತ್ಯಂ ಸಂಕುಲಮಾರ್ಗಾಯಾಂ ಮದಚ್ಯುದ್ಭಿರ್ಮತಂಗಜೈಃ ।
ಸ್ವಲಂಕೃತೈರ್ಭಟೈರಶ್ವೈ ರಥೈಶ್ಚ ಕನಕೋಜ್ಜ್ವಲೈಃ ॥ ೩

ಉದ್ಯಾನೋಪವನಾಢ್ಯಾಯಾಂ ಪುಷ್ಪಿತದ್ರುಮರಾಜಿಷು ।
ನಿರ್ವಿಶದ್ಭೃಂಗವಿಹಗೈರ್ನಾದಿತಾಯಾಂ ಸಮಂತತಃ ॥ ೪

ರೇಮೇ ಷೋಡಶಸಾಹಸ್ರಪತ್ನೀನಾಮೇಕವಲ್ಲಭಃ ।
ತಾವದ್ವಿಚಿತ್ರರೂಪೋಽಸೌ ತದ್ಗೃಹೇಷು ಮಹರ್ದ್ಧಿಷು ॥ ೫

ಪ್ರೋತ್ಫುಲ್ಲೋತ್ಪಲಕಹ್ಲಾರಕುಮುದಾಂಭೋಜರೇಣುಭಿಃ ।
ವಾಸಿತಾಮುಲತೋಯೇಷು ಕೂಜದ್ದ್ವಿಜಕುಲೇಷು ಚ ॥ ೬

ಬೀಗುತ್ತ ಉತ್ತಮ ವಸ್ತ್ರಾಲಂಕಾರಗಳಿಂದ ಭೂಷಿತರಾದ ಸ್ತ್ರೀಯರು ಮಿಂಚುಗಳಂತೆ ಹೊಳೆಯುತ್ತ ಚೆಂಡು ಮೊದಲಾದವುಗಳಿಂದ ಕ್ರೀಡಿಸುತ್ತಿದ್ದರು (೧-೨). ಆ ನಗರದ ಬೀದಿಗಳು ಮದೋದಕವನ್ನು ಸುರಿಸುವ ಮದ್ದಾನೆಗಳಿಂದಲೂ ಭೂಷಿತರಾದ ಭಟರಿಂದಲೂ ಕುದುರೆಗಳಿಂದಲೂ ಸುವರ್ಣಾಲಂಕೃತವಾದ ರಥಗಳಿಂದಲೂ ಸದಾ ತುಂಬಿರುತ್ತಿದ್ದವು. ಗುಂಪುಗುಂಪಾಗಿ ಅರಳಿದ ಮರಗಳಿಂದ ವಿರಾಜಿಸುವ ಉದ್ಯಾನೋಪವನಗಳಲ್ಲಿ[1] ಹಾರಾಡುವ ದುಂಬಿಗಳ ಜೇಂಕಾರ, ಹಕ್ಕಿಗಳ ಚಿಲಿಪಿಲಿಧ್ವನಿಗಳು ದ್ವಾರಕೆಯಲ್ಲಿ ಎಲ್ಲೆಡೆಯೂ ಹರಡಿದ್ದವು (೩-೪). ಹದಿನಾರು ಸಾವಿರ ತರುಣಿಯರಿಗೆ ಪ್ರಾಣವಲ್ಲಭನಾದ ಶ್ರೀಪತಿಯು ಹದಿನಾರು ಸಾವಿರ ವಿಭಿನ್ನವೇಷಗಳನ್ನು ಧರಿಸಿ ವೈಭವೋಪೇತವಾದ ಅವರ ಮನೆಗಳಲ್ಲಿ ವಿಹರಿಸುತ್ತಿದ್ದನು (೫). ಅರಳಿದ ಉತ್ಪಲ, ಬಿಳಿಯ ಜಲಪುಷ್ಪ, ಬಿಳಿನೈದಿಲೆ, ತಾವರೆಹೂಗಳ ಕಣಗಳಿಂದ ಸುಗಂಧಿಯಾಗಿ ಶುಭ್ರವಾಗಿರುವ, ಕಲಕಲಗುಟ್ಟುವ ನೀರುಹಕ್ಕಿಗಳ ಹಿಂಡಿನಿಂದ ಮಂಡಿತವಾದ ನೀರಲ್ಲಿಳಿದು

---

೧ ಉದ್ಯಾನ = ರಾಜರು ವಿಹರಿಸುವ ಹೂದೋಟ. ಉಪವನ = ಎಲ್ಲರೂ ಸಂಚರಿಸಬಹುದಾದ ಹೂದೋಟ.

ವಿಜಹಾರ ವಿಗಾಹ್ಯಾಂಭೋ ಹ್ರದಿನೀಷು ಮಹೋದಯಃ।
ಕುಚಕುಂಕುಮಲಿಪ್ತಾಂಗಃ ಪರಿರಬ್ಧಶ್ಚ ಯೋಷಿತಾಮ್ ॥ ೭

ಉಪಗೀಯಮಾನೋ ಗಂಧರ್ವೈರ್ಮೃದಂಗಪಣವಾನಕಾನ್।
ವಾದಯದ್ಭಿರ್ಮುದಾ ವೀಣಾಂ ಸೂತಮಾಗಧವಂದಿಭಿಃ ॥ ೮

ಸಿಚ್ಯಮಾನೋಽಚ್ಯುತಸ್ತಾಭಿರ್ಹಸಂತೀಭಿಃ ಸ್ಮ ರೇಚಕೈಃ।
ಪ್ರತಿಷಿಂಚನ್ ವಿಚಿಕ್ರೀಡೇ ಯಕ್ಷೀಭಿರ್ಯಕ್ಷರಾಡಿವ ॥ ೯

ತಾಃ ಕ್ಲಿನ್ನವಸ್ತ್ರವಿವೃತೋರುಕುಚಪ್ರದೇಶಾಃ
ಸಿಂಚಂತ್ಯ ಉದ್ಧೃತಬೃಹತ್ಕಬರಪ್ರಸೂನಾಃ।
ಕಾಂತಂ ಸ್ಮ ರೇಚಕಜಿಹೀರಷಯೋಪಗುಹ್ಯ
ಜಾತಸ್ಮರೋತ್ಸವಲಸದ್ವದನಾ ವಿರೇಜುಃ ॥ ೧೦

ಆ ಮಹಾನುಭಾವನು ಹೊಳೆಗಳಲ್ಲಿ ಜಲಕ್ರೀಡೆಯಾಡುತ್ತಿದ್ದನು. ಯುವತಿಯರಿಂದ ಆಲಿಂಗಿತನಾಗಿ, ಅವರ ಕುಚಕುಂಕುಮದಿಂದ ಲಿಪ್ತನಾಗಿ ಕ್ರೀಡಿಸುತ್ತಿದ್ದನು (೬-೭). ಆ ಸಮಯದಲ್ಲಿ ಗಂಧರ್ವರೂ ಸೂತಮಾಗಧ ವಂದಿಗಳೂ ಶ್ರೀಕೃಷ್ಣನನ್ನು ಹೊಗಳಿ ಹಾಡುತ್ತಿದ್ದರು. ಮೃದಂಗ, ತಮಟೆ, ನಗಾರಿ ಮೊದಲಾದವನ್ನು ಸಂತೋಷದಿಂದ ಬಾರಿಸುತ್ತ ವೀಣೆಯನ್ನು ನುಡಿಸುತ್ತಿದ್ದರು (೮). ಅಂಗನೆಯರು ಕಿಲಕಿಲನೆ ನಗುತ್ತ ಜೀರ್ಕೊಳವೆಗಳಿಂದ ಅಚ್ಯುತನಮೇಲೆ ನೀರನ್ನು ಎರಚುತ್ತಿದ್ದರು. ಪ್ರತಿಯಾಗಿ ಅಚ್ಯುತನೂ ಅವರ ಮೇಲೆ ನೀರೆರೆಚುತ್ತ ಯಕ್ಷಕನ್ಯೆಯರೊಡನೆ ಯಕ್ಷರಾಜನಾದ ಕುಬೇರನಂತೆ ನೀರಾಟವಾಡುತ್ತಿದ್ದನು (೯). ನೀರೆರಚುವಾಗ ಆ ಹೆಂಗಸರ ಸೀರೆಗಳು ಒದ್ದೆಯಾಗಿ ಅವರ ತೊಡೆ ಕುಚಪ್ರದೇಶಗಳು ಕಾಣಸುತ್ತಿದ್ದವು. ಅವರ ದೊಡ್ಡ ದೊಡ್ಡ ಮುಡಿಗಳಿಂದ ಹೂಗಳು ಉದುರುತ್ತಿದ್ದವು. ಕಾಂತನಾದ ಕೃಷ್ಣನ ಜೀರ್ಕೊಳವೆಯನ್ನು ಕಿತ್ತುಕೊಳ್ಳಬೇಕೆಂದು ಆ ಸ್ತ್ರೀಯರು ಓಡಿಬಂದು ಅವನನ್ನು ಆಲಿಂಗಿಸಿ ಹಿಡಿದಾಗ, ಅವನ ಸ್ಪರ್ಶದಿಂದ ಕಾಮಬಾಧೆಗೆ ಒಳಗಾಗಲು, ಆ ಸ್ತ್ರೀಯರ ಮುಖದಲ್ಲಿ ಒಂದು ಕಾಂತಿ ಮಿಂಚುತ್ತಿತ್ತು (೧೦).

ಕೃಷ್ಣಸ್ತು ತತ್ಸ್ತನವಿಷಂಜಿತಕುಂಕುಮಸ್ರಕ್-
ಕ್ರೀಡಾಭಿಷಂಗಧುತಕುಂತಲವೃಂದಬಂಧಃ।
ಸಿಂಚನ್ ಮುಹುರ್ಯುವತಿಭಿಃ ಪ್ರತಿಷಿಚ್ಯಮಾನೋ
ರೇಮೇ ಕರೇಣುಭಿರಿವೇಭಪತಿಃ ಪರೀತಃ॥ ೧೧

ನಟಾನಾಂ ನರ್ತಕೀನಾಂ ಚ ಗೀತವಾದ್ಯೋಪಜೀವಿನಾಮ್।
ಕ್ರೀಡಾಲಂಕಾರವಾಸಾಂಸಿ ಕೃಷ್ಣೋಽದಾತ್ತಸ್ಯ ಚ ಸ್ತ್ರಿಯಃ॥ ೧೨

ಕೃಷ್ಣಸ್ಯೈವಂ ವಿಹರತೋ ಗತ್ಯಾಲಾಪೇಕ್ಷಿತಸ್ಮಿತೈಃ।
ನರ್ಮಕ್ಷ್ವೇಲಿಪರಿಷ್ವಂಗೈಃ ಸ್ತ್ರೀಣಾಂ ಕಿಲ ಹೃತಾ ಧಿಯಃ॥ ೧೩
ಊಚುರ್ಮುಕುಂದೈಕಧಿಯೋಽಗಿರ ಉನ್ಮತ್ತವಜ್ಜಡಮ್।
ಚಿಂತಯಂತ್ಯೋಽರವಿಂದಾಕ್ಷಂ ತಾನಿ ಮೇ ಗದತಃ ಶೃಣು॥ ೧೪

ಆಗ ಶ್ರೀಕೃಷ್ಣನ ಕೊರಳ ಹೂಮಾಲೆಯು ಆ ಸ್ತ್ರೀಯರ ಕುಚಕುಂಕಮದಿಂದ ಅಂಕಿತವಾಗುತ್ತಿತ್ತು. ಜಲಕ್ರೀಡೆಯ ಭರದಲ್ಲಿ ಅವನ ಕೇಶಬಂಧವು ಸಡಲಿ ತಲೆಗೂದಲು ಹರಡುತ್ತಿತ್ತು. ಹೀಗೆ ಆ ಸ್ತ್ರೀಯರಿಗೆ ನೀರೆರಚುತ್ತ ಅವರಿಂದ ಎರಚಿಸಿಕೊಳ್ಳುತ್ತ, ಹೆಣ್ಣಾನೆಗಳಿಂದ ಪರಿವೃತನಾದ ಗಜರಾಜನಂತೆ, ಶ್ರೀಕೃಷ್ಣನು ವಿಹರಿಸುತ್ತಿದ್ದನು (೧೧). ಅನಂತರ ಗೀತವಾದ್ಯಗಳಿಂದ ಜೀವಿಸುವ ಆ ನಟರಿಗೂ ನರ್ತಕಿಯರಿಗೂ ಶ್ರೀಕೃಷ್ಣನೂ ಅವನ ಪತ್ನಿಯರೂ ತಮ್ಮ ತಮ್ಮ ವಸ್ತ್ರಾಲಂಕಾರಗಳನ್ನು ಕೊಟ್ಟುಬಿಡುತ್ತಿದ್ದರು. ಈ ಪರಿಯಲ್ಲಿ ವಿಹರಿಸುತ್ತಿದ್ದ ಶ್ರೀಕೃಷ್ಣನ ನಡೆ ನುಡಿ ನೋಟ ನಗುಗಳಿಂದಲೂ ಪ್ರೇಮದ ಚೆಲ್ಲಾಟ ಆಲಿಂಗನಗಳಿಂದಲೂ ಆ ಸ್ತ್ರೀಯರ ಚಿತ್ತವು ಸೆಳೆಯಲ್ಪಟ್ಟಿತು (೧೨-೧೩). ಅವರು ಅರವಿಂದಾಕ್ಷನಾದ ಮುಕುಂದನನ್ನೇ ಸದಾ ನೆನೆಯುತ್ತ ಅವನಲ್ಲಿ ನೆಟ್ಟ ಮನುಸ್ಸುಳ್ಳವರಾಗಿ ಹುಚ್ಚರಂತೆ ಮಂಕರಂತೆ ಏನೇನೋ ಹಲುಬುತ್ತಿದ್ದರು. ಅದನ್ನು ಹೇಳುತ್ತೇನೆ ಕೇಳು! (೧೪).

ಮಹಿಷ್ಯ ಊಚುಃ-

ಕುರರಿ ವಿಲಪಸಿ ತ್ವಂ ವೀತನಿದ್ರಾ ನ ಶೇಷೇ
ಸ್ವಪಿತಿ ಜಗತಿ ರಾತ್ರ್ಯಾಮೀಶ್ವರೋ ಗುಪ್ತಬೋಧಃ ।
ವಯಮಿವ ಸಖಿ ಕಚ್ಚಿದ್ ಗಾಢನಿರ್ಭಿನ್ನಚೇತಾ
ನಲಿನನಯನಹಾಸೋದಾರಲೀಲೇಕ್ಷಿತೇನ ॥ ೧೫

ನೇತ್ರೇ ನಿಮೀಲಯಸಿ ನಕ್ತಮದೃಷ್ಟಬಂಧು-
ಸ್ತ್ವಂ ರೋರವೀಷಿ ಕರುಣಂ ಬತ ಚಕ್ರವಾಕಿ ।
ದಾಸ್ಯಂ ಗತಾ ವಯಮಿವಾಚ್ಯುತಪಾದಜುಷ್ಟಾಂ
ಕಿಂ ವಾ ಸ್ರಜಂ ಸ್ಪೃಹಯಸೇ ಕಬರೇಣ ವೋಢುಮ್ ॥ ೧೬

ಭೋ ಭೋಃ ಸದಾ ನಿಷ್ಟನಸೇ ಉದನ್ವ-
ನ್ನಲಬ್ಧನಿದ್ರೋऽಧಿಗತಪ್ರಜಾಗರಃ ।
ಕಿಂ ವಾ ಮುಕುಂದಾಪಹೃತಾತ್ಮಲಾಂಛನಃ
ಪ್ರಾಪ್ತಾಂ ದಶಾಂ ತ್ವಂ ಚ ಗತೋ ದುರತ್ಯಯಾಮ್ ॥ ೧೭

ಮುಕುಂದನ ರಾಣಿಯರು ಹೀಗೆನ್ನುತ್ತಿದ್ದರು : "ಎಲೆ ಕುರರಿ,[೧] ನೀನೇಕೆ ನಿದ್ದೆಗೆಟ್ಟು ಕೂಗುತ್ತಿರುವೆ ? ನೀನು ಮಲಗುವುದಿಲ್ಲವೆ ? ಈಗ ಜಗತ್ತಿಗೆ ರಾತ್ರಿಯಾಗಿದೆ. ನಮ್ಮ ಒಡೆಯನು ಅರಿವಿಲ್ಲದೆ ಮಲಗಿ ನಿದ್ರಿಸುತ್ತಿದ್ದಾನೆ (ನಿದ್ರಾಭಂಗವು ನಿನಗೆ ತರವೆ ?). ಅಥವಾ, ಓ ಗೆಳತಿ, ಈ ನಳಿನನೇತ್ರನ ಮುಗುಳ್ನಗೆ ಚೆಲುವು ನೋಟಗಳಿಂದ ನಮ್ಮಂತೆಯೇ ನಿನ್ನ ಚಿತ್ತವೂ ಗಾಢವಾಗಿ ಕದಡಿ ಹೋಗಿರಬಹುದು ! (೧೫). ಎಲೆ ಚಕ್ರವಾಕಿ, ಕಾರಿರುಳಿನಲ್ಲಿ ಕಾಂತನನ್ನು ಕಾಣದೆ ಕಣ್ಣುಮುಚ್ಚಿ ಕರುಣಾಜನಕವಾಗಿ ಕೂಗುತ್ತಲೇ ಇರುವೆಯಲ್ಲ! ಅಯ್ಯೊ ! ಇಲ್ಲವೇ ನಮ್ಮಂತೆ ನೀನೂ ಅಚ್ಯುತನ ದಾಸಿಯಾಗಿರುವೆಯೊ ? ಅವನು ಕಾಲಿಂದ ತುಳಿದ ಮಾಲೆಯನ್ನು ಮುಡಿಯಲ್ಲಿ ಮುಡಿಯಲು ಬಯಸುವೆಯೊ ? (೧೬). ಎಲೆಲೆ ಸಮುದ್ರರಾಜ, ನಿದ್ದೆಗೆಟ್ಟು ಜಾಗರಣೆ ಮಾಡುತ್ತ ಒಂದೇ ಸಮನೆ ಏಕೆ ಬೊಬ್ಬೆಯಿಡುತ್ತಿದ್ದೀಯೆ ? ಕಷ್ಟ! ನಮ್ಮ ಗೋಳಿನ ಕಥೆಯೇ ನಿನಗೂ

೧ ಕುರರಿ = ಕುರುವ ಹಕ್ಕಿ.

ತ್ವಂ ಯಕ್ಷ್ಮಣಾ ಬಲವತಾಸಿ ಗೃಹೀತ ಇಂದೋ
ಕ್ಷೀಣಸ್ತಮೋ ನ ನಿಜದೀಧಿತಿಭಿಃ ಕ್ಷಿಣೋಷಿ।
ಕಚ್ಚಿನ್ಮುಕುಂದಗದಿತಾನಿ ಯಥಾ ವಯಂ ತ್ವಂ
ವಿಸ್ಮೃತ್ಯ ಭೋಃ ಸ್ಥಗಿತಗೀರುಪಲಕ್ಷ್ಯಸೇ ನಃ॥ ೧೮

ಕಿಂತ್ವಾಚರಿತಮಸ್ಮಾಭಿರ್ಮಲಯಾನಿಲ ತೇಽಪ್ರಿಯಮ್ ।
ಗೋವಿಂದಾಪಾಂಗನಿರ್ಭಿನ್ನೇ ಹೃದೀರಯಸಿ ನಃ ಸ್ಮರಮ್ ॥ ೧೯

ಮೇಘ ಶ್ರೀಮಂಸ್ತ್ವಮಸಿ ದಯಿತೋ ಯಾದವೇಂದ್ರಸ್ಯ ನೂನಂ
ಶ್ರೀವತ್ಸಾಂಕಂ ವಯಮಿವ ಭವಾನ್ ಧ್ಯಾಯತಿ ಪ್ರೇಮಬದ್ಧಃ।
ಅತ್ಯುತ್ಕಂಠಃ ಶಬಲಹೃದಯೋಽಸ್ಮದ್ವಿಧೋ ಬಾಷ್ಪಧಾರಾಃ
ಸ್ಮೃತ್ವಾ ಸ್ಮೃತ್ವಾ ವಿಸೃಜಸಿ ಮುಹುರ್ದುಃಖದಸ್ತತ್ಪ್ರಸಂಗಃ॥ ೨೦

ಒದಗಿರಬಹುದು ! ಮುಕುಂದನು (ನಮ್ಮ ಕುಚಕುಂಕುಮಾದಿ ಲಾಂಛನಗಳನ್ನು ಅಪಹರಿಸುವಂತೆ) ನಿನ್ನ ಲಕ್ಷ್ಮೀಕೌಸ್ತುಭಾದಿ ವಸ್ತುಗಳನ್ನೂ ಕಿತ್ತುಕೊಂಡಿರುವನೆಂದು ನಿನಗೆ ಈ ಅವಸ್ಥೆ ! (೧೭). ಓ ಚಂದ್ರ, ಬಲವಾದ ಕ್ಷಯ ರೋಗದಿಂದ ಬಡವಾಗಿಬಿಟ್ಟಿದ್ದೀಯೆ ! ಕಿರಣಗಳಿಂದ ಕತ್ತಲೆಯನ್ನು ಕತ್ತರಿಸುವ ಶಕ್ತಿನಿನಗಿಲ್ಲ! ಅಥವಾ ಮುಕುಂದನಾಡಿದ ಪ್ರೇಮಾಲಾಪಗಳನ್ನು ಮರೆತು ಅವನ್ನೇ ಚಿಂತಿಸುತ್ತ ನಮ್ಮಂತೆಯೇ ಬಡವಾಗಿಬಿಟ್ಟೆಯೊ ? ಎಲೋ, ನೀನು ಮಾತಾಡುವುದೇ ಇಲ್ಲ. ಹಾಗೆಯೇ ಆಗಿರಬೇಕೆಂದು ನಮಗೆ ತೋರುತ್ತದೆ ! (೧೮). ಹೇ ಮಲಯಾನಿಲ, ನಾವು ನಿನಗೆ ಮಾಡಿದ ಕೆಟ್ಟದ್ದು ಏನು ? ಗೋವಿಂದನ ಅಪಾಂಗವೀಕ್ಷಿತದಿಂದ ನಮ್ಮ ಹೃದಯ ಸೀಳಿಹೋಗಿದೆ. ಮತ್ತೆ ಅದರಲ್ಲಿ ಮನ್ಮಥನನ್ನು ಭುಗಿಲೆಬ್ಬಿಸಿ ನೋಯಿಸುತ್ತಿರುವೆಯಲ್ಲ! (೧೯). ಮೇಘರಾಜ, ಸುಂದರನಾದ ನೀನು (ಶ್ಯಾಮಲಾಂಗನಾದ) ಯಾದವೇಂದ್ರನ ನೆಚ್ಚಿನ ಗೆಳಯನೇ ಹೌದು ! ಪ್ರೇಮಪಾಶಕ್ಕೆ ಒಳಗಾಗಿ, ನಮ್ಮಂತೆಯೇ ಶ್ರೀವತ್ಸಾಂಕನನ್ನು ನೆನೆಸಿಕೊಳ್ಳುತ್ತಿದ್ದೀಯೆ. ಅವನನ್ನು ಕಾಣಲು ಉತ್ಕಂಠಿತನಾಗಿದ್ದೀಯೆ. ನಮಗಾದಂತೆ ನಾನಾ ಭಾವಗಳಿಂದ ಹೃದಯವು ಸಂಮಿಶ್ರವಾಗಿ ಒತ್ತಿಬಂದಿದೆ. ಸ್ಮರಿಸಿಕೊಂಡು ಸ್ಮರಿಸಿಕೊಂಡು ಕಣ್ಣೀರನ್ನು ಸುರಿಸುತ್ತಿದ್ದೀಯೆ ! ಹೌದು, ಅವನ ನೆನಪಿನ ಪ್ರಸಂಗವೇ ದುಃಖವನ್ನು ಉಮ್ಮಳಿಸುತ್ತದೆ! (೨೦).

ಪ್ರಿಯರಾವಪದಾನಿ ಭಾಷಸೇ
ಮೃತಸಂಜೀವಿಕಯಾನಯಾ ಗಿರಾ ।
ಕರವಾಣಿ ಕಿಮದ್ಯ ತೇ ಪ್ರಿಯಂ
ವದ ಮೇ ವಲ್ಗಿತಕಂಠ ಕೋಕಿಲ ॥ ೨೧

ನ ಚಲಸಿ ನ ವದಸ್ಯುದಾರಬುದ್ಧೇ
ಕ್ಷಿತಿಧರ ಚಿಂತಯಸೇ ಮಹಾಂತಮರ್ಥಮ್ ।
ಅಪಿ ಬತ ವಸುದೇವನಂದನಾಂಘ್ರಿಂ
ವಯಮಿವ ಕಾಮಯಸೇ ಸ್ತನೈರ್ವಿಧರ್ತುಮ್ ॥ ೨೨

ಶುಷ್ಯದ್ಧ್ರದಾಃ ಕರ್ಶಿತಾ ಬತ ಸಿಂಧುಪತ್ನ್ಯಃ
ಸಂಪ್ರತ್ಯಪಾಸ್ತಕಮಲಶ್ರಿಯ ಇಷ್ಟಭರ್ತುಃ ।
ಯದ್ವದ್ ವಯಂ ಮಧುಪತೇಃ ಪ್ರಣಯಾವಲೋಕ-
ಮಪ್ರಾಪ್ಯ ಮುಷ್ಟಹೃದಯಾಃ ಪುರುಕರ್ಶಿತಾಃ ಸ್ಮ ॥ ೨೩

ಆಹಾ ! ಕಲಕಂಠ ಕೋಗಿಲೆ, ನಮ್ಮ ಪ್ರಿಯಂವದನಾಡುವ ಪ್ರಿಯವಾದ ನುಡಿಗಳಂತೆಯೇ ನುಡಿಯುತ್ತಿದ್ದೀಯೆ. ಸತ್ತವರನ್ನೂ ಬದುಕಿಸುವಂತಹ ಮನೋಹರವಾದ ಮಾತು ಅದು. ನಿನಗೆ ಪ್ರಿಯವಾದ್ದನ್ನು ಏನು ಮಾಡಲಿ, ಹೇಳು (೨೧). ಎಲೆ ಗಿರಿರಾಜ, ಉದಾರಬುದ್ಧಿಯವನು ನೀನು. ಅಲ್ಲಾಡುವುದಿಲ್ಲ, ಮಾತಾಡುವುದಿಲ್ಲ, ಯಾವುದೋ ಗಂಭೀರವಾದ ವಿಷಯವನ್ನು ಆಲೋಚಿಸುವಂತೆ ಕಾಣುತ್ತೀಯಲ್ಲ! ವಸುದೇವನಂದನನ ಪಾದವನ್ನು ಸ್ತನಗಳಿಂದ ಹೊರಲು ಬಯಸತಕ್ಕವರು ನಾವು ! ಹಾಗೆ (ನಿನ್ನ ಶಿಖರಗಳಿಂದ) ಅವನ ಪಾದವನ್ನು ಧರಿಸಲು ಬಯಸುತ್ತಿರುವೆಯೋ ಹೇಗೆ ? (೨೨). ಎಲೌ ಸಮುದ್ರರಾಜಪತ್ನಿಯರೆ-ನದಿಗಳೆ, ಈ ಬೇಸಿಗೆಯಲ್ಲಿ (ಸಮುದ್ರರಾಜನು ಮೇಘದ್ವಾರ ಅಮೃತವೃಷ್ಟಿಯನ್ನು ಸುರಿಸಿ ನಿಮ್ಮನ್ನು ಆನಂದಪಡಿಸುತ್ತಿಲ್ಲ) ಅಯ್ಯೋ! ನಿಮ್ಮ ಮಡುಗಳು ಒಣಗಿಹೋಗಿವೆ. ಕಮಲಗಳ ಸೊಬಗು ಅಡಗಿದೆ. ನಮ್ಮ ಕಾಂತನಾದ ಯದುಪತಿಯಿಂದ ಆಕೃಷ್ಟಹೃದಯರಾಗಿ ಆತನ ಪ್ರಣಯಾವ ಲೋಕನವನ್ನು ಪಡೆಯಲಾರದೆ ಅತ್ಯಂತ ಕೃಶರಾಗಿರುವ ನಮ್ಮಂತೆ ನಿಮ್ಮ ಪಾಡು ಆಗಿದೆ! (೨೩)

ಹಂಸ ಸ್ವಾಗತಮಾಸ್ಯತಾಂ ಪಿಬ ಪಯೋ ಬ್ರೂಹ್ಯಂಗ ಶೌರೇಃ ಕಥಾಂ
ದೂತಂ ತ್ವಾಂ ನು ವಿದಾಮ ಕಚ್ಚಿದಜಿತಃ ಸ್ವಸ್ತ್ಯಾಸ್ತ ಉಕ್ತಂ ಪುರಾ ।
ಕಿಂ ವಾ ನಶ್ಚಲಸೌಹೃದಃ ಸ್ಮರತಿ ತಂ ಕಸ್ಮಾದ್ ಭಜಾಮೋ ವಯಂ
ಕ್ಷೌದ್ರಾಲಾಪಯ ಕಾಮದಂ ಶ್ರಿಯಮೃತೇ ಸೈವೈಕನಿಷ್ಠಾ ಸ್ತ್ರಿಯಾಂ ॥ ೨೪

ಇತೀದೃಶೇನ ಭಾವೇನ ಕೃಷ್ಣೇ ಯೋಗೇಶ್ವರೇಶ್ವರೇ ।
ಕ್ರಿಯಮಾಣೇನ ಮಾಧವ್ಯೋ ಲೇಭಿರೇ ಪರಮಾಂ ಗತಿಮ್ । ೨೫

ಶ್ರುತಮಾತ್ರೋऽಪಿ ಯಃ ಸ್ತ್ರೀಣಾಂ ಪ್ರಸಹ್ಯಾಕರ್ಷತೇ ಮನಃ ।
ಉರುಗಾಯೋರುಗೀತೋ ವಾ ಪಶ್ಯಂತೀನಾಂ ಕುತಃ ಪುನಃ ॥ ೨೬

ಯಾಃ ಸಂಪರ್ಯಚರನ್ ಪ್ರೇಮ್ಣಾ ಪಾದಸಂವಾಹನಾದಿಭಿಃ ।
ಜಗದ್ಗುರುಂ ಭರ್ತೃಬುದ್ಧ್ಯಾ ತಾಸಾಂ ಕಿಂ ವರ್ಣ್ಯತೇ ತಪಃ ॥ ೨೭

ಓಹೋ ! ಹಂಸ, ಸ್ವಾಗತ ನಿನಗೆ ; ಕುಳಿತುಕೊ. ಹಾಲನ್ನು ಕುಡಿ. ಅಪ್ಪಾ ಅಚ್ಯುತನ ಕಥೆಯನ್ನು ಹೇಳು. ನೀನು ಅವನ ದೂತನಾಗಿ ಬಂದೆಯೆಂದು ತಿಳಿಯಬಹುದಲ್ಲವೆ ? ಗೋವಿಂದನು ಕ್ಷೇಮವಾಗಿರುವನೆ ? ಆವನ ಸ್ನೇಹಚಂಚಲ. ಹಿಂದೆ ನಮಗೆ ರಹಸ್ಯವಾಗಿ ಹೇಳಿದ ಮಾತು ಆತನ ಸ್ಮರಣೆಯಲ್ಲಿದೆಯೆ? ನಾವೇಕೆ ಅವನನ್ನು ಆಶ್ರಯಿಸೋಣ! ಆ ಕ್ಷುದ್ರಮನುಷ್ಯನ ದೂತ ನೀನು. ಬೇಕಾದರೆ ಕೃಷ್ಣನನ್ನೇ ಮಾತಾಡಿಸಿ ಇಲ್ಲಿಗೆ ಕರೆದುಕೊಂಡು ಬಾ. ಆದರೆ ಆ ಲಕ್ಷ್ಮಿಯು ಮಾತ್ರ ಬರುವುದು ಬೇಡ ! ಇಷ್ಟು ಜನ ಸ್ತ್ರೀಯರಲ್ಲಿ ಅವಳೊಬ್ಬಳೇ ಏಕನಿಷ್ಠೆಯಿಂದ ಅವನನ್ನು ಸೇವಿಸುವಳಂತೇನು ?'' (೨೪). ಈ ಬಗೆಯಾದ ಹಾರ್ದಭಾವವನ್ನು, ಪರೀಕ್ಷಿತರಾಜ, ಶ್ರೀಕೃಷ್ಣನ ಪತ್ನಿಯರು ಆ ಯೋಗೇಶ್ವರೇಶ್ವರನಲ್ಲಿ ಇರಿಸಿದ್ದರಿಂದ ಪರಮಸದ್ಗತಿಯನ್ನು ಪಡೆದರು. ಯಾವಾತನ ಕಥಾವೃತ್ತಾಂತವನ್ನು ಕೇಳಿದ ಮಾತ್ರದಿಂದಾಗಲಿ, ಗುಣಗಳನ್ನು ಗಾಯಕರು ಹಾಡಿದ ಮಾತ್ರದಿಂದಾಗಲಿ, ಸ್ತ್ರೀಯರ ಮನಸ್ಸು ತಪ್ಪದೆ ಸೆಳೆಯಲ್ಪಡುವುದೋ, ಅಂತಹ ಶ್ರೀಕೃಷ್ಣನನ್ನು ಕಣ್ಣೆದುರಿಗೆ ನೋಡುತ್ತಿದ್ದ ಅವರ ಮನಸ್ಸು ಹೀಗೆ ನೆಟ್ಟುಹೋಗಿತ್ತೆಂಬುದರಲ್ಲಿ ಅಚ್ಚರಿಯೇನು ? (೨೫-೨೬). ಇನ್ನು ಯಾವ ಸ್ತ್ರೀಯರು ಆ ಜಗದ್ಗುರುವನ್ನು ಪತಿಯೆಂಬ ಭಾವನೆಯಿಂದ ಪಾದಗಳನ್ನು

ಏವಂ ವೇದೋದಿತಂ ಧರ್ಮಮನುತಿಷ್ಠನ್ ಸತಾಂ ಗತಿಃ ।
ಗೃಹಂ ಧರ್ಮಾರ್ಥಕಾಮಾನಾಂ ಮುಹುಶ್ಚಾದರ್ಶಯತ್ ಪದಮ್ ॥

ಆಸ್ಥಿ ತಸ್ಯ ಪರಂ ಧರ್ಮಂ ಕೃಷ್ಣಸ್ಯ ಗೃಹಮೇಧಿನಾಮ್ ।
ಆಸನ್ ಷೋಡಶಸಾಹಸ್ರಂ ಮಹಿಷ್ಯಶ್ಚ ಶತಾಧಿಕಮ್ ॥ ೨೯

ತಾಸಾಂ ಸ್ತ್ರೀರತ್ನಭೂತಾನಾಮಷ್ಟೌ ಯಾಃ ಪ್ರಾಗುದಾಹೃತಾಃ ।
ರುಕ್ಮಿಣೀಪ್ರಮುಖಾ ರಾಜಂಸ್ತತ್ಪುತ್ರಾಶ್ಚಾನುಪೂರ್ವಶಃ ॥ ೩೦

ಏಕೈಕಸ್ಯಾಂ ದಶ ದಶ ಕೃಷ್ಣೋಽಜೀಜನದಾತ್ಮಜಾನ್ ।
ಯಾವತ್ಯ ಆತ್ಮನೋ ಭಾರ್ಯಾ ಅಮೋಘಗತಿರೀಶ್ವರಃ ॥ ೩೧

ತೇಷಾಮುದ್ದಾಮವೀರ್ಯಾಣಾಮಷ್ಟಾದಶ ಮಹಾರಥಾಃ ।
ಆಸನ್ನುದಾರಯಶಸಸ್ತೇಷಾಂ ನಾಮಾನಿ ಮೇ ಶೃಣು ॥ ೩೨

ನೀವುತ್ತ ನಾನಾ ಬಗೆಯಲ್ಲಿ ಪ್ರೇಮಪೂರ್ಣವಾಗಿ ಸೇವೆ ಮಾಡಿದರೋ ಅವರ ತಪಸ್ಸನ್ನು ಏನೆಂದು ವರ್ಣಿಸಲಿ? (೨೭). ಸಜ್ಜನರಿಗೆ ಗತಿಯಾದ ಭಗವಂತನು ವೇದೋಕ್ತವಾದ ಧರ್ಮವನ್ನಾಚರಿಸುತ್ತ, ಧರ್ಮಾರ್ಥಕಾಮಗಳಿಗೆ ಗೃಹಸ್ಥಾಶ್ರಮವು ಸ್ಥಾನವೆಂಬುದನ್ನು ಈ ಪ್ರಕಾರವಾಗಿ ಮತ್ತೆ ಮತ್ತೆ ತೋರಿಸಿಕೊಟ್ಟನು (೨೮). ಗೃಹಸ್ಥರು ಆಚರಿಸಬೇಕಾದ ಉತ್ತಮ ಧರ್ಮಮಾರ್ಗದಲ್ಲಿ ತೊಡಗಿದ್ದ ಶ್ರೀಕೃಷ್ಣನಿಗೆ ಹದಿನಾರು ಸಾವಿರದ ಒಂದುನೂರು ಮಡದಿಯರಿದ್ದರು. ಅವರಲ್ಲದೆ ಮಡದಿಯರಲ್ಲಿ ಸ್ತ್ರೀರತ್ನಗಳೆನಿಸಿದ ರುಕ್ಮಿಣಿಯೇ ಮೊದಲಾದ ಅಷ್ಟಮಹಿಷಿಯರನ್ನೂ ಅವರ ಪುತ್ರರನ್ನೂ, ಪರೀಕ್ಷಿತರಾಜ, ಕ್ರಮವಾಗಿ ನಿನಗೆ ಹಿಂದೆ ತಿಳಿಸಿದ್ದೇನೆ[1] (೨೯-೩೦). ಅಮೋಘ ವೀರ್ಯನೂ ಸ್ವತಂತ್ರೇಚ್ಛನೂ ಆದ ಶ್ರೀಕೃಷ್ಣನು ತನ್ನ ಎಲ್ಲ ಮಡದಿಯರಲ್ಲಿಯೂ ಒಬ್ಬೊಬ್ಬರಲ್ಲಿ ಹತ್ತುಮಂದಿಯಂತೆ ಪುತ್ರರನ್ನು ಪಡೆದನು[2] (೩೧). ಮಹಾಪರಾಕ್ರಮಿಗಳಾದ

---

೧. ೫೮ ಮತ್ತು ೬೧ನೆಯ ಅಧ್ಯಾಯಗಳನ್ನು ನೋಡಿ.

೨. ಅಷ್ಟಮಹಿಷಿಯರೂ ಸೇರಿ ಹದಿನಾರು ಸಾವಿರದ ನೂರೆಂಟು ಮಂದಿ ಮಡದಿಯರು. ಮಕ್ಕಳ ಸಂಖ್ಯೆ ಒಂದು ಲಕ್ಷ ಅರವತ್ತೊಂದು ಸಾವಿರದ ಎಂಬತ್ತು.

ಪ್ರದ್ಯುಮ್ನಶ್ಚಾನಿರುದ್ಧಶ್ಚ ದೀಪ್ತಿಮಾನ್ ಭಾನುರೇವ ಚ ।
ಸಾಂಬೋ ಮಧುರ್ಬೃಹದ್ಭಾನುಶ್ಚಿತ್ರಭಾನುರ್ವೃಕೋಽರುಣಃ ॥ ೩೩

ಪುಷ್ಕರೋ ವೇದಬಾಹುಶ್ಚ ಶ್ರುತದೇವಃ ಸುನಂದನಃ ।
ಚಿತ್ರಬಾಹುರ್ವಿರೂಪಶ್ಚ ಕವಿರ್ನ್ಯಗ್ರೋಧ ಏವ ಚ ॥ ೩೪

ಏತೇಷಾಮಪಿ ರಾಜೇಂದ್ರ ತನುಜಾನಾಂ ಮಧುದ್ವಿಷಃ ।
ಪ್ರದ್ಯುಮ್ನ ಆಸೀತ್ ಪ್ರಥಮಃ ಪಿತೃವದ್ ರುಕ್ಮಿಣೀಸುತಃ ॥ ೩೫

ಸ ರುಕ್ಮಿಣೋ ದುಹಿತರಮುಪಯೇಮೇ ಮಹಾರಥಃ ।
ತಸ್ಮಾತ್ ಸುತೋಽನಿರುದ್ಧೋಽಭೂನ್ನಾಗಾಯುತಬಲಾನ್ವಿತಃ ॥ ೩೬

ಸ ಚಾಪಿ ರುಕ್ಮಿಣಃ ಪೌತ್ರೀಂ ದೌಹಿತ್ರೋ ಜಗೃಹೇ ತತಃ ।
ವಜ್ರಸ್ತಸ್ಯಾಭವದ್ ಯಸ್ತು ಮೌಸಲಾದವಶೇಷಿತಃ ॥ ೩೭

ಅವರಲ್ಲಿ ಹದಿನೆಂಟು ಜನರು ಮಹಾರಥರೆನಿಸಿಕೊಂಡು ಕೀರ್ತಿಶಾಲಿಗಳಾಗಿದ್ದರು. ಅವರ ಹೆಸರನ್ನು ಹೇಳುತ್ತೇನೆ, ಕೇಳು (೩೨) : ಪ್ರದ್ಯುಮ್ನ, ಅನಿರುದ್ಧ [1] ದೀಪ್ತಿಮಂತ, ಭಾನು, ಸಾಂಬ, ಮಧು, ಬೃಹದ್ಭಾನು, ಚಿತ್ರಭಾನು, ವೃಕ, ಅರುಣ, ಪುಷ್ಕರ, ವೇದಬಾಹು, ಶ್ರುತದೇವ, ಸುನಂದನ, ಚಿತ್ರಬಾಹು, ವಿರೂಪ, ಕವಿ ಮತ್ತು ನ್ಯಗ್ರೋಧ (೩೩-೩೪). ಶ್ರೀಕೃಷ್ಣನ ಈ ಪುತ್ರರಲ್ಲಿಯೂ ಸಹ, ರಾಜೇಂದ್ರ, ರುಕ್ಮಿಣೀ ಸುತನಾದ ಪ್ರದ್ಯುಮ್ನನು ತಂದೆಯಂತೆ ಅಗ್ರಗಣ್ಯನಾಗಿದ್ದನು. ಆ ಮಹಾರಥನು ರುಕ್ಮಿಯ ಮಗಳಾದ ರುಕ್ಮವತಿಯನ್ನು ಮದುವೆಯಾದನು. ಅವಳಲ್ಲಿ ಪ್ರದ್ಯುಮ್ನನಿಗೆ ಹತ್ತುಸಾವಿರ ಆನೆಗಳ ಬಲವುಳ್ಳ ಅನಿರುದ್ಧನು ಜನಿಸಿದನು (೩೫-೩೬). ರುಕ್ಮಿಯ ದೌಹಿತ್ರನಾದ ಅನಿರುದ್ಧನು ರುಕ್ಮಿಯ ಮಗನ ಮಗಳಾದ ರೋಚನೆಯನ್ನು ಪತ್ನಿಯಾಗಿ ಸ್ವೀಕರಿಸಿದನು. ಅವಳಲ್ಲಿ ಅನಿರುದ್ಧನಿಗೆ ವಜ್ರನೆಂಬ ಮಗನು ಹುಟ್ಟಿದನು. ಮೌಸಲಪರ್ವದ ಹತ್ಯಾಕಾಂಡದಲ್ಲಿ ಉಳಿದವನೇ ಈ ವಜ್ರ (೩೭). ಈತನಿಗೆ ಪ್ರತಿ ಬಾಹುವೆಂಬ

---

[1] ಅನಿರುದ್ಧನು ಪ್ರದ್ಯುಮ್ನನ ಮಗ. ಆದ್ದರಿಂದ ಶ್ರೀಕೃಷ್ಣನ ಮಕ್ಕಳಲ್ಲಿ ಹದಿನೇಳು ಮಂದಿ ಮಾತ್ರ ಮಹಾರಥರು. ಅಥವಾ ಅನಿರುದ್ಧನೆಂಬ ಹೆಸರಿನ ಒಬ್ಬ ಮಗನೂ ಶ್ರೀಕೃಷ್ಣನಿಗೆ ಇದ್ದನೆಂದು ತಿಳಿಯಬೇಕು.

ಪ್ರತಿಬಾಹುರಭೂತ್ತಸ್ಮಾತ್ ಸುಬಾಹುಸ್ತಸ್ಯ ಚಾತ್ಮಜಃ ।
ಸುಬಾಹೋಃ ಶಾಂತಸೇನೋಽಭೂಚ್ಛತಸೇನಸ್ತು ತತ್ಸುತಃ ॥ ೩೮

ನ ಹ್ಯೇತಸ್ಮಿನ್ ಕುಲೇ ಜಾತಾ ಅಧನಾ ಅಬಹುಪ್ರಜಾಃ ।
ಅಲ್ಪಾಯುಷೋಽಲ್ಪವೀರ್ಯಾಶ್ಚ ಅಬ್ರಹ್ಮಣ್ಯಾಶ್ಚ ಜಜ್ಞಿರೇ ॥ ೩೯

ಯದುವಂಶಪ್ರಸೂತಾನಾಂ ಪುಂಸಾಂ ವಿಖ್ಯಾತಕರ್ಮಣಾಮ್ ।
ಸಂಖ್ಯಾ ನ ಶಕ್ಯತೇ ಕರ್ತುಮಪಿ ವರ್ಷಾಯುತೈರ್ನೃಪ ॥ ೪೦

ತಿಸ್ರಃ ಕೋಟ್ಯಃ ಸಹಸ್ರಾಣಾಮಷ್ಟಾಶೀತಿಶತಾನಿ ಚ ।
ಆಸನ್ ಯದುಕುಲಾಚಾರ್ಯಾಃ ಕುಮಾರಾಣಾಮಿತಿ ಶ್ರುತಮ್ ॥ ೪೧

ಸಂಖ್ಯಾನಾಂ ಯಾದವಾನಾಂ ಕಃ ಕರಿಷ್ಯತಿ ಮಹಾತ್ಮನಾಮ್ ।
ಯತ್ರಾಯುತಾನಾಮಯುತಲಕ್ಷೇಣಾಸ್ತೇ ಸ ಆಹುಕಃ ॥ ೪೨

ಮಗನು ಉದಿಸಿದನು. ಆತನ ಆತ್ಮಜ ಸುಬಾಹು. ಸುಬಾಹುವಿನ ತನಯ ಶಾಂತಸೇನ. ಆತನ ಪುತ್ರ ಶತಸೇನ. ಯದುವಂಶದಲ್ಲಿ ಹುಟ್ಟಿದವರು ಯಾರೂ ನಿರ್ಧನರಲ್ಲ ಅಲ್ಪಸಂತತಿಯವರೂ ಅಲ್ಲ ಅಲ್ಪಾಯುಗಳೂ ಅಲ್ಪವೀರ್ಯರೂ, ಬ್ರಹ್ಮದ್ವೇಷಿಗಳೂ ಆ ವಂಶದಲ್ಲಿ ಹುಟ್ಟಲಿಲ್ಲ (೩೮-೩೯). ರಾಜ, ಯದುವಂಶದಲ್ಲಿ ಜನಿಸಿ ವಿಖ್ಯಾತಕಾರ್ಯಗಳನ್ನು ಸಾಧಿಸಿದ ಪುರುಷರ ಸಂಖ್ಯೆಯನ್ನೆಣಿಸಲು ಹತ್ತು ಸಾವಿರ ವರ್ಷಗಳಾದರೂ ಸಾಧ್ಯವಾಗದು ! ಯದುವಂಶದ ಕುಮಾರರಿಗೆ ಪಾಠಹೇಳಿಕೊಡತಕ್ಕ ಯದುಕುಲಾಚಾರ್ಯರ ಸಂಖ್ಯೆಯೇ ಮೂರುಕೋಟಿ ಎಂಟುಸಾವಿರದ ಎಂಟುನೂರೆಂದು ನಾವು ಕೇಳಿದ್ದೇವೆ ! (ಹೀಗಿರುವಾಗ ಅವರ ವಿದ್ಯಾರ್ಥಿಗಳಾದ ಯದುಕುಮಾರರ ಸಂಖ್ಯೆಯನ್ನು ಯಾರು ಹೇಳಬಲ್ಲರು ?) (೪೦-೪೧). ಮಹಾತ್ಮರಾದ ಯದುವಂಶೀಯರನ್ನು ಯಾವನು ಎಣಿಸಬಲ್ಲನು ? ಉಗ್ರಸೇನನೇ[೧] ಕೋಟಿ

---

೧ ಆಹುಕನೆಂದರೆ ಉಗ್ರಸೇನ, ವಸುದೇವನಲ್ಲ. ಉಗ್ರಸೇನನು ಆಹುಕನ ಮಗನಾದರೂ ಆಹುಕ ಎಂದು ವ್ಯವಹರಿಸಲಾಗಿದೆ. ನೋಡಿ : ಭಾಗ. ೯-೨೪-೨೧ ; ಹರಿವಂಶ ೩.೭-೨೬, ೨೭ ; ವಿಷ್ಣುಪುರಾಣ ೪-೧೪ ವಾಕ್ಯ ೧೪-೧೬ ; ಮಹಾ. ಭಾ. ವನ. ೧೫-೨೩. ; ೨೦-೭; ಉದ್ಯೋಗ ೧೨೮-೩೯.

ದೇವಾಸುರಾಹವಹತಾ ದೈತೇಯಾ ಯೇ ಸುದಾರುಣಾಃ ।
ತೇ ಚೋತ್ಪನ್ನಾ ಮನುಷ್ಯೇಷು ಪ್ರಜಾ ದೃಪ್ತಾ ಬಬಾಧಿರೇ ॥ ೪೩

ತನ್ನಿಗ್ರಹಾಯ ಹರಿಣಾ ಪ್ರೋಕ್ತಾ ದೇವಾ ಯದೋಃ ಕುಲೇ ।
ಅವತೀರ್ಣಾಃ ಕುಲಶತಂ ತೇಷಾಮೇಕಾಧಿಕಂ ನೃಪ ॥ ೪೪

ತೇಷಾಂ ಪ್ರಮಾಣಂ ಭಗವಾನ್ ಪ್ರಭುತ್ವೇನಾಭವದ್ಧರಿಃ ।
ಯೇ ಚಾನುವರ್ತಿನಸ್ತಸ್ಯ ವವೃಧುಃ ಸರ್ವಯಾದವಾಃ ॥ ೪೫

ಶಯ್ಯಾಸನಾಟನಾಲಾಪ ಕ್ರೀಡಾಸ್ನಾನಾದಿಕರ್ಮಸು ।
ನ ವಿದುಃ ಸಂತಮಾತ್ಮಾನಂ ವೃಷ್ಣಯಃ ಕೃಷ್ಣಚೇತಸಃ ॥ ೪೬

ತೀರ್ಥಂ ಚಕ್ರೇ ನೃಪೋನಂ ಯದಜನಿ ಯದುಷು ಸ್ವಃಸರಿತ್ಪಾದಶೌಚಂ
ವಿದ್ವಿಟ್ಸ್ನಿಗ್ಧಾಃ ಸ್ವರೂಪಂ ಯಯುರಜಿತಪರಾ
ಶ್ರೀರ್ಯದರ್ಥೇಽನ್ಯಯತ್ನಃ ।
ಯನ್ನಾಮಾಮಂಗಲಘ್ನಂ ಶ್ರುತಮಥ ಗದಿತಂ
ಯತ್ಕೃತೋ ಗೋತ್ರಧರ್ಮಃ
ಕೃಷ್ಣಸ್ಯೈತನ್ನ ಚಿತ್ರಂ ಕ್ಷಿತಿಭರಹರಣಂ ಕಾಲಚಕ್ರಾಯುಧಸ್ಯ ॥ ೪೭

ಕೋಟಿಗಟ್ಟಲೆ ಯಾದವರಿಂದ ಪರಿವೃತನಾಗಿದ್ದನು. ಹಿಂದೆ ದೇವಾಸುರ ಸಂಗ್ರಾಮದಲ್ಲಿ ಹತರಾಗಿದ್ದ ಕ್ರೂರಿಗಳಾದ ದೈತ್ಯರು ಮನುಷ್ಯಜಾತಿಯಲ್ಲಿ ನಾನಾರೂಪದಿಂದ ಹುಟ್ಟಿಕೊಂಡಿದ್ದರು. ಅವರು ದುಷ್ಟರಾಗಿ ಪ್ರಜೆಗಳನ್ನು ಬಾಧಿಸುತ್ತಿದ್ದರು. ಅವರನ್ನು ನಿಗ್ರಹಿಸುವುದಕ್ಕಾಗಿ ಶ್ರೀಹರಿಯಿಂದ ಪ್ರೇರಿತರಾದ ದೇವತೆಗಳು ಯದುಕುಲದಲ್ಲಿ ಅವತರಿಸಿದರು. ಯದುಕುಲದ ಒಳಭೇದಗಳು ಒಟ್ಟು ನೂರೊಂದು ಸಂಖ್ಯೆಯಲ್ಲಿದ್ದವು (೪೨-೪೪). ಅವರೆಲ್ಲರಿಗೂ ಭಗವಾನ್ ಶ್ರೀಕೃಷ್ಣನು ಪ್ರಮಾಣಭೂತನಾದ ನಾಯಕನಾಗಿದ್ದನು. ಅವನನ್ನು ಅನುವರ್ತಿಸಿಕೊಂಡು ಸಕಲಯಾದವರೂ ಅಭಿವೃದ್ಧಿಗೆ ಬಂದರು. ಮಲಗುವುದು, ಕುಳಿತುಕೊಳ್ಳುವುದು, ತಿರುಗಾಡುವುದು, ಸಂಭಾಷಣೆ, ಸ್ನಾನ-ಮುಂತಾದ ಕಾರ್ಯಗಳಲ್ಲಿ ಶ್ರೀಕೃಷ್ಣನೊಡನಿದ್ದು ಅವನನ್ನೇ ಧ್ಯಾನಿಸುತ್ತಿದ್ದ ಯಾದವರು ತಮ್ಮೊಡನೆ ಪರಮಾತ್ಮನೇ ಇರುವನೆಂಬುದನ್ನು ಅರಿತಿರಲಿಲ್ಲ! (೪೫-೪೬). ಪರೀಕ್ಷಿತ ನೃಪಾಲ, ಯದುಕುಲದಲ್ಲಿ ಜನಿಸಿದ ಶ್ರೀಕೃಷ್ಣರೂಪವಾದ

ಜಯತಿ ಜನನಿವಾಸೋ ದೇವಕೀಜನ್ಮವಾದೋ
ಯದುವರಪರ್ಷತ್ಸ್ವೈರ್ದೋರ್ಭಿರಸ್ಯನ್ನಧರ್ಮಮ್।
ಸ್ಥಿರಚರವೃಜಿನಘ್ನಃ ಸುಸ್ಮಿತಶ್ರೀಮುಖೇನ
ವ್ರಜಪುರವನಿತಾನಾಂ ವರ್ಧಯನ್ ಕಾಮದೇವಮ್ ॥ ೪೮

ಇತ್ಥಂ ಪರಸ್ಯ ನಿಜವರ್ತ್ಮರಿರಕ್ಷಯಾऽऽತ್ತ-
ಲೀಲಾತನೋಸ್ತದನುರೂಪವಿಡಂಬನಾನಿ।
ಕರ್ಮಾಣಿ ಕರ್ಮಕಷಣಾನಿ ಯದೂತ್ತಮಸ್ಯ
ಶ್ರೂಯಾದಮುಷ್ಯ ಪದಯೋರನುವೃತ್ತಿಮಿಚ್ಛನ್ ॥ ೪೯

ತೀರ್ಥವು ದೇವನದಿಯಾದ ಭಾಗೀರಥಿಯನ್ನು ತನ್ನ ಪಾದತೀರ್ಥವಾಗಿ ಮಾಡಿಕೊಂಡು ಅದನ್ನು ಅಲ್ಪಗೊಳಿಸಿತು. ವೈರಿಗಳೂ ಸ್ನೇಹಿತರೂ ಆತನ ಸ್ವರೂಪದಲ್ಲಿ ಸೇರಿಹೋದರು. ಅನ್ಯರಾದ ದೇವೇಂದ್ರಾದಿಗಳು ಯಾವಳ ಕಾರುಣ್ಯ ಸಂಪಾದನೆಗಾಗಿ ಯತ್ನಿಸುವರೋ ಆ ಲಕ್ಷ್ಮೀದೇವಿಯು ಅಚ್ಯುತನಲ್ಲಿಯೇ ಸ್ಥಿರವಾಗಿ ನೆಲೆಸಿರುವಳು. ಆತನ ಪುಣ್ಯನಾಮವು ಕೇವಲ ಶ್ರುತವಾದರೂ ಸಾಕು, ಉಚ್ಚರಿಸಲ್ಪಟ್ಟರೂ ಸಾಕು, ಅಮಂಗಳವನ್ನು ದೂರಮಾಡುವುದು. ಆಯಾ ಋಷಿವಂಶಗಳಲ್ಲಿ ಬಂದಿರುವ ಮನೆತನದ ಧರ್ಮವು ಅವನಿಂದಲೇ ಪ್ರವರ್ತಿತವಾಗಿದೆ. (ಸರ್ವಸಂಹಾರವನ್ನು ಮಾಡುವ) ಕಾಲಚಕ್ರವನ್ನು ಆಯುಧವನ್ನಾಗಿ ಹಿಡಿದಿರುವ ಅಂತಹ ಶ್ರೀಕೃಷ್ಣನು ಈ ಪ್ರಕಾರವಾಗಿ ಭೂಭಾರವನ್ನು ಹೋಗಲಾಡಿಸಿದ್ದು ಅಚ್ಚರಿಯಲ್ಲ(೪೭). ಶ್ರೀಕೃಷ್ಣನು ಸರ್ವದಾ ಜಯಶಾಲಿಯಾಗಿರುವನು. ಸಕಲ ಜೀವಿಗಳಿಗೂ ನಿವಾಸಸ್ಥಾನವಾದ ಆ ಭಗವಂತನು ದೇವಕೀಗರ್ಭದಲ್ಲಿ ಜನಿಸಿದನೆಂಬುದು ಹೆಸರಿಗೆ ಮಾತ್ರ (ಬರಿಯಲೀಲೆಗಾಗಿಯೆ). ಯಾದವರನ್ನು ಸಭಾಸದರನ್ನಾಗಿ ಮಾಡಿಕೊಂಡು ಬಾಹುಬಲದಿಂದ ಅಧರ್ಮವನ್ನು ದೂರಮಾಡುತ್ತ (ಬೃಂದಾವನದಲ್ಲಿದ್ದ), ಸ್ಥಾವರ ಜಂಗಮಗಳಾದ ತರು, ಲತೆ, ಗೋವು, ಹಕ್ಕಿಗಳ ಪಾಪವನ್ನು ತೊಳೆಯುತ್ತ ಮಂದಹಾಸಯುಕ್ತವಾದ ತನ್ನ ಶ್ರೀಮುಖದಿಂದ ವ್ರಜದಲ್ಲಿಯೂ ನಗರದಲ್ಲಿಯೂ ಇದ್ದ ವನಿತೆಯರ ಕಾಮವನ್ನು ವರ್ಧಿಸುತ್ತ ವಿರಾಜಿಸಿದನು(೪೮). ಈ ಪ್ರಕಾರದಲ್ಲಿ

ಮರ್ತ್ಯಸ್ತಯಾನುಸವಮೇಧಿತಯಾ ಮುಕುಂದ-
ಶ್ರೀಮತ್ಕಥಾಶ್ರವಣಕೀರ್ತನಚಿಂತಯೈತಿ।
ತದ್ಧಾಮ ದುಸ್ತರಕೃತಾಂತಜವಾಪವರ್ಗಂ
ಗ್ರಾಮಾದ್ ವನಂ ಕ್ಷಿತಿಭುಜೋಽಪಿ ಯಯುರ್ಯದರ್ಥಾಃ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ
ದಶಮಸ್ಕಂಧೇ ಉತ್ತರಾರ್ಧೇ ನವತಿತಮಾಧ್ಯಾಯಃ
ಶ್ರೀಮದ್ಭಾಗವತೇ ದಶಮಸ್ಕಂಧಸ್ಯ ಉತ್ತರಾರ್ಧಃ ಸಮಾಪ್ತಃ

ತಾನು ಸ್ಥಾಪಿಸಿದ ಧರ್ಮಮಾರ್ಗವನ್ನು ರಕ್ಷಿಸುವುದಕ್ಕಾಗಿ ಪರಮಾತ್ಮನು ಮತ್ಸ್ಯಕೂರ್ಮಾದಿ ಲೀಲಾಶರೀರಗಳನ್ನು ಧರಿಸಿದನು. ಅದಕ್ಕೆ ಅನುರೂಪವಾಗಿ ಅನುಕರಿಸಿದ ಆತನ ಚರಿತೆಗಳು ಪಾಪಕರ್ಮಗಳನ್ನು ನಿರ್ಮೂಲವಾಗಿ ತೊಳೆಯತಕ್ಕವು. ಅವುಗಳಲ್ಲಿಯೂ ಯಾದವೋತ್ತಮನಾದ ಶ್ರೀಕೃಷ್ಣನ ಚರಿತೆಯಲ್ಲಿ ವಿಶೇಷ ಉಂಟು. ಆತನ ಪಾದಗಳ ಅನುವೃತ್ತಿಯನ್ನು ಬಯಸತಕ್ಕವರು ಈ ಚರಿತೆಗಳನ್ನು ಶ್ರವಣಮಾಡಬೇಕು (೪೯). ಮಾನವನು ಮುಕುಂದನ ಮಂಗಳ ಕಥೆಯನ್ನು ಶ್ರವಣಮಾಡುತ್ತ ಕೀರ್ತಿಸುತ್ತ ಚಿಂತಿಸುತ್ತ ಇದ್ದರೆ ಭಗವಂತನ ಪಾದಾನುವೃತ್ತಿಯು-ಭಕ್ತಿಯು-ದಿನದಿನವೂ ಹೆಚ್ಚುತ್ತ ಹೋಗುವುದು. ಅದರಿಂದ, ದುಸ್ತರವಾದ ಸಂಸಾರ ಪ್ರವಾಹವೇಗದಿಂದ ಬಿಡುಗಡೆ ಹೊಂದಿ ಮುಕುಂದನ ದಿವ್ಯಧಾಮವನ್ನು ಸೇರಿಕೊಳ್ಳುತ್ತಾನೆ. ಪರೀಕ್ಷಿತರಾಜ, ಇದಕ್ಕಾಗಿಯೇ ಭೂಮಿಪಾಲರೂ ಸಹ ಗ್ರಾಮಾದಿಗಳನ್ನು ತೊರೆದು ವನಕ್ಕೆ ಹೋಗಿದ್ದಾರೆ (೫೦).

ಇಲ್ಲಿಗೆ ಶ್ರೀಮದ್ಭಾಗವತದ ದಶಮಸ್ಕಂಧದಲ್ಲಿ ತೊಂಬತ್ತನೆಯ ಅಧ್ಯಾಯ.
ದಶಮಸ್ಕಂಧ ಸಮಾಪ್ತವಾಯಿತು.
ಶ್ರೀಕೃಷ್ಣಾರ್ಪಣಮಸ್ತು.

ಯಂ ಪ್ರವ್ರಜಂತಮನುಪೇತಮಪೇತಕೃತ್ಯಂ
ದ್ವೈಪಾಯನೋ ವಿರಹಕಾತರ ಆಜುಹಾವ ।
ಪುತ್ರೇತಿ ತನ್ಮಯತಯಾ ತರವೋಽಭಿನೇದು -
ಸ್ತಂ ಸರ್ವಭೂತಹೃದಯಂ ಮುನಿಮಾನತೋಽಸ್ಮಿ ॥

ನಿಗಮಕಲ್ಪತರೋರ್ಗಲಿತಂ ಫಲಂ
ಶುಕಮುಖಾದಮೃತದ್ರವಸಂಯುತಮ್ ।
ಪಿಬತ ಭಾಗವತಂ ರಸಮಾಲಯಂ
ಮುಹುರಹೋ ರಸಿಕಾ ಭುವಿ ಭಾವುಕಾಃ ॥

ಅನುಬಂಧ

೧. ಪಶ್ಯಾರ್ಯ ವ್ಯಸನಂ ಪ್ರಾಪ್ತಂ ಯದೂನಾಂ ತ್ವಾವತಾಂ ಪ್ರಭೋ।

-ಪುಟ೩, ಅಧ್ಯಾ. ೫೦-ಶ್ಲೋ. ೧೩.

ಇಲ್ಲಿ 'ತ್ವಾವತಾಂ' ಎಂದರೇನು ? 'ತ್ವಂ ಅವನ್ ಯೇಷಾಂ ತೇ ತ್ವಾವಂತಃ ತೇಷಾಂ ತ್ವಾವತಾಂ' ಎಂದು ಬಹುವ್ರೀಹಿ ಸಮಾಸ, ಅವನ್ = ರಕ್ಷಕ. ನೀನು ರಕ್ಷಕನು ಯಾರಿಗೋ ಆ ಯಾದವರು ತ್ವಾವಂತರು. ನಿನ್ನಿಂದ ರಕ್ಷಿತರಾದವರು ಎಂದು ತಾತ್ಪರ್ಯ. ಇಲ್ಲಿ 'ತ್ವದವತಾಂ' ಎಂದು ಇರಬೇಕಾಗಿತ್ತು. ಇದು ಆರ್ಷಪ್ರಯೋಗ.

೨. ಏವಂ ವದಂತಿ ರಾಜರ್ಷೇ ಋಷಯಃ ಕೇಚನಾನ್ವಿತಾಃ।
ಯತ್ ಸ್ವವಾಚೋ ವಿರುಧ್ಯೇತ ನೂನಂ ತೇ ನ ಸ್ಮರುಂತ್ಯುತ ॥

-ಪುಟ ೨೮೩, ಅಧ್ಯಾ. ೭೭-ಶ್ಲೋ. ೩೦.

'ಕೆಲವು ಋಷಿಗಳು ಈ ರೀತಿ ಹೇಳುತ್ತಾರೆ. ಅದು ತಮ್ಮ ಮಾತಿಗೇ ವಿರುದ್ಧವಾಗುತ್ತದೆ ಎಂಬುದನ್ನು ಅವರು ಸ್ಮರಿಸಿಕೊಳ್ಳುವುದೇ ಇಲ್ಲ'-ಎಂದು ಈ ಶ್ಲೋಕದಲ್ಲಿ ಹೇಳಿದೆ. ಪೂರ್ವಾಪರ ವಿರುದ್ಧವಾದ ಒಂದು ಅಸಂಗತವನ್ನು ಇಲ್ಲಿ ದೂಷಿಸಲಾಗಿದೆ. ಆ ಅಸಂಗತ ಯಾವುದು ?

ಶ್ರೀಧರೀಯ ವ್ಯಾಖ್ಯಾನದ ಅಭಿಪ್ರಾಯ ಹೀಗಿದೆ : ''ಬಲರಾಮನು ರಾಜಸೂಯಯಾಗಕ್ಕಾಗಿ ಇಂದ್ರಪ್ರಸ್ಥಕ್ಕೆ ಹೋಗಿರಲಿಲ್ಲ; ಶ್ರೀಕೃಷ್ಣನು ಹೋಗುವಾಗ ಬಲರಾಮನ ಒಪ್ಪಿಗೆಯನ್ನು ಪಡೆದು ಹೋದನು ಎಂದು ಹಿಂದೆ ಹೇಳಿದೆ. (ಸಂಕರ್ಷಣಮನುಜ್ಞಾಪ್ಯ... (೭೨-೧೩).) ಆದ್ದರಿಂದ ಬಲರಾಮನು ಶ್ರೀಕೃಷ್ಣನೊಡನೆ ಹೋಗಲಿಲ್ಲ. ಈ ಅಧ್ಯಾಯದ ೮ನೆಯ ಶ್ಲೋಕದಲ್ಲಿ 'ಆಹಚಾಹಮಿಯಾತಃ ಆರ್ಯಾಮಿಶ್ರಾಭಿಸಂಗತಃ' ಎಂದಿದೆ.

ಧರ್ಮರಾಯನಿಗೆ ಶ್ರೀಕೃಷ್ಣನು ಹೇಳುವ ಮಾತಿದು. 'ಅಣ್ಣನೊಡನೆ ನಾನು ಇಂದ್ರಪ್ರಸ್ಥಕ್ಕೆ ಬಂದೆನು' ಎಂದರ್ಥ. ಇದು ಪರಸ್ಪರ ವಿರುದ್ಧ ಎಂದು.

ಇನ್ನು ಕೆಲವು ವ್ಯಾಖ್ಯಾನಕಾರರ ಮತ ಹೀಗಿದೆ : ''ಮಹಾಭಾರತದಲ್ಲಿ ಪಾಂಡವರು ವನವಾಸಕ್ಕೆ ಹೋಗಿದ್ದಾಗ ಶ್ರೀಕೃಷ್ಣನು ಕಾಮ್ಯಕವನಕ್ಕೆ ಬಂದು ''ನಾನು ಸಾಲ್ವನೊಡನೆ ಯುದ್ಧಾಸಕ್ತನಾದ್ದರಿಂದ ನಿಮ್ಮ ದ್ಯೂತವಿಚಾರ ಗೊತ್ತಾಗಲಿಲ್ಲ. ಗೊತ್ತಾಗಿದ್ದರೆ ದ್ಯೂತವನ್ನು ತಡೆಯುತ್ತಿದ್ದೆ'' ಎಂದು ಹೇಳಿದ್ದಾನೆ. (ಅರಣ್ಯಪರ್ವ ೧೩, ೧೩-೨೨) ಆದ್ದರಿಂದ ಭಾಗವತದಲ್ಲಿ ಹಿಂದೆ ಹೇಳಿದ ಪ್ರಕಾರ ಶ್ರೀಕೃಷ್ಣನು ಇಂದ್ರಪ್ರಸ್ಥದಲ್ಲಿರುವಾಗ ಸಾಲ್ವನು ದ್ವಾರಕೆಗೆ ಬಂದನೆಂಬುದು ಅಸಂಗತ''.

ಅಲ್ಲದೆ ಈ ವ್ಯಾಖ್ಯಾನಕಾರರು ಮೇಲಿನ ಶ್ಲೋಕಕ್ಕೆ ಅರ್ಥಹೇಳುವಾಗ ಕೇಚ+ನಾನ್ವಿತಾಃ ಎಂದು ಬಿಡಿಸಿ, ನಾನ್ವಿತಾಃ-ಪೂರ್ವಪರಾನುಸಂಧಾನರಹಿತ ರಾದ, ಕೇ ಚ =ಕೆಲವರು ಎಂದು ತಿಳಿಸಿದ್ದಾರೆ. ಆದರೆ ''ಕೇಚನ=ಕೆಲವು, ಅನ್ವಿತಾಃ =ಅನು-ಇತಾಃ = ಇನ್ನೊಬ್ಬರನ್ನು ಅನುಸರಿಸತಕ್ಕವರು '' ಎಂದು ಅರ್ಥ ಹೇಳುವುದು ಸರಳವಾದದ್ದು. ಇದು ಹೇಗಾದರೂ ಇರಲಿ. ಮೇಲೇ ಹೇಳಿದ ಎರಡು ಅಸಂಗತಗಳೂ ಸರಿಯಲ್ಲವೆಂದು ನಮ್ಮ ಅಭಿಪ್ರಾಯ.

'ಏವಂ ವದಂತಿ ರಾಜರ್ಷೇ' ಎಂಬ ಶ್ಲೋಕದಲ್ಲಿ 'ಈ ರೀತಿ ಕೆಲವರು ಹೇಳುತ್ತಾರೆ' ಎಂದು ತಿಳಿಸಲಾಗಿದೆ. ಯಾವ ರೀತಿ ಹೇಳುತ್ತಾರೆ- ಎಂದಾಗ ಇದಕ್ಕೆ ಅವ್ಯವಹಿತ ಪೂರ್ವದಲ್ಲಿ ಹೇಳಿದ್ದನ್ನೇ ಗ್ರಹಿಸಬೇಕಾಗುತ್ತದೆ. ಅದನ್ನು ಬಿಟ್ಟು ಹಿಂದೆ ೭೨ನೆಯ ಅಧ್ಯಾಯದಲ್ಲಿ ಸೂಚಿತವಾದ್ದಕ್ಕೂ ಈ ಅಧ್ಯಾಯದ ೨೨ ಶ್ಲೋಕಗಳ ಹಿಂದೆ ಸೂಚಿತವಾದ್ದಕ್ಕೂ ಗಂಟುಹಾಕಿ ವಿರೋಧವನ್ನೆತ್ತಿ ಈಗ 'ಏವಂ ವದಂತಿ' ಎಂದು ಹೇಳುತ್ತಾರೆಯೆ ? ಇದು ಅಸಂಭಾವ್ಯ.

ಇನ್ನು ಮಹಾಭಾರತದ ಅರಣ್ಯಪರ್ವದ ಒಂದು ಸಂಗತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಈಗ ಇದಕ್ಕಿದ್ದಂತೆ 'ಏವಂ ವದಂತಿ' ಎಂದು ವಿರೋಧವನ್ನೆತ್ತಬಹುದೆ ? ಹಾಗೆ ಮಾತಾಡಿದರೆ ಪರೀಕ್ಷಿತನಿಗೆ ತಿಳಿದೀತೆ ? ಒಳ್ಳೆಯದು. ಬಲರಾಮನು ರಾಜಸೂಯಕ್ಕೆ ಹೋಗಿದ್ದನೆ ? ಇಲ್ಲವೆ ? ಶುಕರು ವಿರೋಧವನ್ನೆಲ್ಲಿ ಪರಿಹರಿಸಿದರು ?

ಇಲ್ಲಿರುವ ಅಸಂಗತ ಇಷ್ಟೆ: ಸರ್ವಜ್ಞನಾದ ಶ್ರೀಕೃಷ್ಣನಿಗೆ ಸಾಲ್ವನ ಮಾಯೆ ತಿಳಿಯದೆ ಇದ್ದೀತೆ? ವಸುದೇವನು ಸತ್ತನೆಂಬುದನ್ನು ಆತನು ನಂಬುತ್ತಾನೆಯೆ? ನಿತ್ಯಮುಕ್ತನಿಗೆ ಶೋಕಮೋಹಗಳುಂಟೆ? ಆದ್ದರಿಂದ ತಂದೆ ಸತ್ತನೆಂದು ನಂಬಿ ಅವನು ದುಃಖಿತನಾಗಲಿಲ್ಲ. 'ಪ್ರಕೃತಿಂ ಗತಃ' ಎನ್ನುವುದೇ ಅಸಂಗತ. ಕೆಲವರು ಹಾಗೆ ಹೇಳುತ್ತಿರುವುದು ಅಂಧಪರಂಪರೆಯಿಂದ. ವಸ್ತು ತತ್ತ್ವವೇನೆಂದರೆ-ಎಂದು ಯೋಜನೆ ಮಾಡಬೇಕು. ಇದಕ್ಕೆ ವಿವರಣೆ ಸಮಾಧಾನಗಳು ಮುಂದಿನ ಶ್ಲೋಕಗಳಲ್ಲಿ ಬರುತ್ತವೆ.

ಬಲರಾಮನು ರಾಜಸೂಯಯಾಗಕ್ಕೆ ಹೋಗಿರಲಿಲ್ಲವೆಂದು ವ್ಯಾಖ್ಯಾನಕಾರರು ಹೇಳುತ್ತಾರೆ. ಅದೂ ಸರಿಯೆನಿಸುವುದಿಲ್ಲ. ಮಹಾಭಾರತದ ಪ್ರಕಾರ ಬಲರಾಮನು ಯಾಗಕ್ಕೆ ಹೋಗಿದ್ದನು-

ಅಗಚ್ಛತ್ ಪಾಂಡವೇಯಸ್ಯ ಯಜ್ಞಂ ಸಮರದುರ್ಜಯಃ।

ರಾಮಶ್ಚೈವಾನಿರುದ್ಧಶ್ಚ॥ - ಸಭಾಪರ್ವ ೩೪-೧೫.

ವ್ಯಾಸರ ಹೇಳಿಕೆಯನ್ನು ಶುಕರು ಖಂಡಿಸುತ್ತಾರೆನ್ನುವುದೇ ಅಸಂಗತ. ವಾಸ್ತವವೇನೆಂದರೆ, ಬಲರಾಮನು ರಾಜಸೂಯಕ್ಕೆ ಶ್ರೀಕೃಷ್ಣನ ಜೊತೆಗೆ ಹೋಗಲಿಲ್ಲ. ಶ್ರೀಕೃಷ್ಣನು ಹೋದ ಹಲವಾರು ತಿಂಗಳಮೇಲೆ ರಾಜಸೂಯ ನಡೆದಿದೆ. ಆ ಸಮಯದಲ್ಲಿ ಬಲರಾಮನು ಹೋಗಿದ್ದಾನೆ. ಮಹಾಭಾರತದ ಪ್ರಕಾರವಾಗಿಯೂ ಇದು ಸರಿ. ಇದಕ್ಕೆ ಅನುಗುಣವಾಗಿ 'ಆರ್ಯಮಿಶ್ರಾಭಿಸಂಗತಃ' ಎಂಬುದಕ್ಕೆ ನಾವು ಅರ್ಥವನ್ನು ಬರೆದಿದ್ದೇವೆ. ನೋಡಿರಿ (೭೭-೮).

ಶ್ರೀಕೃಷ್ಣನು ಇಂದ್ರಪ್ರಸ್ಥದಲ್ಲಿರುವಾಗ ಸಾಲ್ವನು ದ್ವಾರಕೆಗೆ ಬಂದನೆಂಬುದೂ ಅಸಂಗತವಲ್ಲ. ಇಂದ್ರಪ್ರಸ್ಥದಲ್ಲಿದ್ದಾಗ ಸಾಲ್ವನು ಮುತ್ತಿಗೆ ಹಾಕಿದ್ದು ಶ್ರೀಕೃಷ್ಣನಿಗೆ ಗೊತ್ತಿರಲಿಲ್ಲ. ವಾಪಸು ದ್ವಾರಕೆಗೆ ಬಂದಮೇಲೆ ಗೊತ್ತಾಯಿತು. ಅನಂತರ ಯುದ್ಧಾರಂಭ. ಅದೇ ಸಮಯದಲ್ಲಿ ಇತ್ತ ಪಾಂಡವರ ಜೂಜು ನಡೆಯಿತು. ಯುದ್ಧದಲ್ಲಿ ತೊಡಗಿದ್ದ ಶ್ರೀಕೃಷ್ಣನಿಗೆ ಜೂಜಿನ ವಿಷಯ ತಿಳಿಯಲಿಲ್ಲ. ಇದರಲ್ಲಿ ವಿರೋಧವೇನಿದೆ ?

೩. ಸ ವೈ ಸತ್ಕರ್ಮಣಾಂ ಸಾಕ್ಷಾತ್ ದ್ವಿಜಾತೇರಿಹ ಸಂಭವಃ।
ಆದ್ಯೋಽಂಗ ಯತ್ರಾಶ್ರಮಿಣಾಂ ಯಥಾಹಂ
ಜ್ಞಾನದೋ ಗುರುಃ॥

-ಪುಟ ೩೦೭, ಅಧ್ಯಾ. ೮೦-ಶ್ಲೋ. ೩೨.

ನಾವು ಬರೆದಿರುವ ತಾತ್ಪರ್ಯಕ್ಕೆ ಅನುಗುಣವಾಗಿ ಇದರ ಅನ್ವಯಾನುಸಾರಿ ಅರ್ಥ ಹೀಗೆ : ಅಂಗ-ಅಯ್ಯಾ, ಇಹ-ಈ ಗುರುಕುಲದಲ್ಲಿ, ಯತ್ರ-(ಯಾವಾತನಲ್ಲಿ) ಯಾರಿಂದ, ದ್ವಿಜಾತೇಃ-ದ್ವಿಜನಿಗೆ, ಸತ್ಕರ್ಮಣಾಂ-ವೈದಿಕ ಮತ್ತು ಲೌಕಿಕ ಸತ್ಕರ್ಮಗಳಿಗೆ, ಸಾಕ್ಷಾತ್-ಪ್ರತ್ಯಕ್ಷವಾಗಿ, ಸಂಭವಃ-ಉತ್ಪತ್ತಿಯಾಗುವುದೋ, ಸಃ-ಅವನು, ಆಶ್ರಮಿಣಾಂ-ಬ್ರಹ್ಮಚಾರಿ ಮೊದಲಾದ ಎಲ್ಲ ಆಶ್ರಮಿಗಳಿಗೂ, ಆದ್ಯಃ-ಮೊದಲನೆಯ ಗುರು, ಯಥಾ-ಹೇಗೆ, ಅಹಂ-ನಾನು, ಜ್ಞಾನಪ್ರದೋ ಗುರುಃ-(ಎಲ್ಲರಿಗೂ) ಜ್ಞಾನಪ್ರದನಾದ ಗುರುವೋ ಹಾಗೆ.

ವಿವರಣೆ :- ಗುರುಕುಲದಲ್ಲಿ ದ್ವಿಜನಿಗೆ ವೇದವೇದಾಂಗಗಳ ಜ್ಞಾನ ದೊರೆಯುತ್ತದೆ. ಅಲ್ಲಿಯ ಗುರು ಕರ್ಮಮಾರ್ಗವನ್ನು ಬೋಧಿಸತಕ್ಕವನು. ಅವನು ಮೊದಲನೆಯ ಗುರು. ಮೋಕ್ಷಪ್ರದವಾದ ತತ್ತ್ವಜ್ಞಾನವು ಭಗವಂತನ ಅನುಗ್ರಹದಿಂದಲೇ ಲಭಿಸತಕ್ಕದ್ದು. 'ಮೋಕ್ಷಮಿಚ್ಛೇತ್ ಜನಾರ್ದನಾತ್' ಆದ್ದರಿಂದ ಭಗವಂತನು ಮೋಕ್ಷಪ್ರದನಾದ ಗುರು. ಕರ್ಮಮಾರ್ಗವು ಚಿತ್ತಶುದ್ಧಿಯ ದ್ವಾರಾ ಮೋಕ್ಷಕ್ಕೆ ಸಾಧನ.

೪. ಎಂಬತ್ತೇಳನೆಯ ಅಧ್ಯಾಯದಲ್ಲಿ ಬರುವ ವೇದಸ್ತುತಿಯಲ್ಲಿ ಮೂಲ ಶ್ಲೋಕಗಳು ಕಠಿಣವಾಗಿವೆ. ಪ್ರಾಚೀನ ವ್ಯಾಖ್ಯಾನಕಾರರಾದ ಶ್ರೀಧರಸ್ವಾಮಿಗಳು ಈ ಶ್ಲೋಕಗಳ ಅರ್ಥವನ್ನು ವಿವರಿಸುತ್ತ ಸರಳವಾದ ಶ್ಲೋಕಗಳನ್ನು ಸ್ವತಃ ವಿರಚಿಸಿ ತಮ್ಮ ವ್ಯಾಖ್ಯಾನದಲ್ಲಿ ಸೇರಿಸಿದ್ದಾರೆ. ಅವುಗಳನ್ನು ಕೆಳಗೆ ಬರೆದಿದೆ. ಶ್ಲೋಕದ ಮೊದಲು ಬರೆದಿರುವ ಸಂಖ್ಯೆ ಈ ಅಧ್ಯಾಯದ ಮೂಲ ಶ್ಲೋಕಗಳಿಗೆ ಸಂಬಂಧಿಸಿದ್ದು, ಕಡೆಯದು ಕ್ರಮಸಂಖ್ಯೆ.

೧೪. ಜಯ ಜಯಾಜಿತ ಜಹ್ಯಗಜಂಗಮಾ-
ವೃತಿಮಜಾಮುಪನೀತ ಮೃಷಾಗುಣಾಂ।
ನ ಹಿ ಭವಂತಮೃತೇ ಪ್ರಭವಂತ್ಯಮೀ
ನಿಗಮಗೀತಗುಣಾರ್ಣವ ತಾನವ॥ ೧

೧೫. ದ್ರುಹಿಣ ವಹ್ನಿರವೀಂದ್ರ ಮುಖಾಮರಾ
ಜಗದಿದಂ ನ ಭವೇತ್ ಪೃಥಗುತ್ಥಿತಂ।
ಬಹುಮುಖೈರಪಿ ಮಂತ್ರಗಣೈರಜ-
ಸ್ತ್ವಮುರುಮೂರ್ತಿರತೋ ವಿನಿಗದ್ಯಸೇ ॥ ೨

೧೬. ಸಕಲವೇದಗಣೇರಿತ ಸದ್ಗುಣ-
ಸ್ತ್ವಮಿತಿ ಸರ್ವಮನೀಷಿಜನಾ ರತಾಃ।
ತ್ವಯಿ, ಸುಭದ್ರ ಗುಣಶ್ರವಣಾದಿಭಿಃ
ತವ ಪದಸ್ಮರಣೇನ ಗತಕ್ಲಮಾಃ ॥ ೩

೧೭. ನರವಪುಃ ಪ್ರತಿಪದ್ಯ ಯದಿ ತ್ವಯಿ
ಶ್ರವಣವರ್ಣನಸಂಸ್ಮರಣಾದಿಭಿಃ।
ನರಹರೇ ನ ಭಜಂತಿ ನೃಣಾಮಿದಂ
ದೃತಿವದುಚ್ಛ್ವಸಿತಂ ವಿಫಲಂ ತತಃ ॥ ೪

೧೮. ಉದರಾದಿಷು ಯಃ ಪುಂಸಾಂ ಚಿಂತಿತೋ ಮುನಿವರ್ತ್ಮಭಿಃ।
ಹಂತಿ ಮೃತ್ಯುಭಯಂ ದೇವೋ ಹೃದ್ಗತಂ ತಮುಪಾಸ್ಮಹೇ ॥ ೫

೧೯. ಸ್ವನಿರ್ಮಿತೇಷು ಕಾರ್ಯೇಷು ತಾರತಮ್ಯ ವಿವರ್ಜಿತಮ್।
ಸರ್ವಾನುಸ್ಯೂತಸನ್ಮಾತ್ರಂ ಭಗವಂತಂ ಭಜಾಮಹೇ ॥ ೬

೨೦. ತ್ವದಂಶಸ್ಯ ಮಹೇಶಾನ ತ್ವನ್ಮಾಯಾಕೃತಬಂಧನಮ್।
ತ್ವದಂಘ್ರಿಸೇವಾಮಾದಿಶ್ಯ ಪರಾನಂದ ನಿವರ್ತಯ ॥ ೭
(ತ್ವನ್ಮಾಯಾಕೃತಬಂಧನಂ ನಿವರ್ತಯೇತ್ಯನ್ವಯಃ)

೨೧. ತ್ವತ್ಕಥಾಮೃತಪಾಥೋಧೌ ವಿಹರಂತೋ ಮಹಾಮುದಃ।
ಕುರ್ವಂತಿ ಕೃತಿನಃ ಕೇಚಿಚ್ಚತುರ್ವರ್ಗಂ ತೃಣೋಪಮಮ್ ॥ ೮

೨೨. ತ್ವಯ್ಯಾತ್ಮನಿ ಜಗನ್ನಾಥೇ ಮನ್ಮನೋ ರಮತಾಮಿಹ।
ಕದಾ ಮಮೇದೃಶಂ ಜನ್ಮ ಮಾನುಷಂ ಸಂಭವಿಷ್ಯತಿ ॥ ೯

೨೩. ಚರಣಸ್ಮರಣಂ ಪ್ರೇಮ್ಣಾ ತವ ದೇವ ಸುದರ್ಲಭಮ್ ।
ಯಥಾಕಥಂಚಿನ್ನೃಹರೇ ಮಮ ಭೂಯಾದಹರ್ನಿಶಮ್ ॥ ೧೦

೨೪. ಕ್ವಾಹಂ ಬುದ್ಧ್ಯಾದಿಸಂರುದ್ಧಃ ಕ್ವ ಚ ಭೂಮನ್ ಮಹಸ್ತವ ।
ದೀನಬಂಧೋ ದಯಾಸಿಂಧೋ ಭಕ್ತಿಂ ಮೇ ನೃಹರೇ ದಿಶ ॥ ೧೧

೨೫. ಮಿಥ್ಯಾತರ್ಕಸುಕರ್ಕಶೇರಿತ ಮಹಾವಾದಾಂಧಕಾರಾಂತರ-
ಭ್ರಾಮ್ಯನ್ಮಂದಮತೇರಮಂದಮಹಿಮಂಸ್ತ್ವಜ್ಞಾನವರ್ತ್ಮಾಸ್ಫುಟಮ್।
ಶ್ರೀಮನ್ಮಾಧವ ವಾಮನ ತ್ರಿನಯನ ಶ್ರೀಶಂಕರ ಶ್ರೀಪತೇ
ಗೋವಿಂದೇತಿ ಮುದಾ ವದನ್ಮಧುಪತೇ ಮುಕ್ತಃ ಕದಾ ಸ್ಯಾಮಹಮ್ ॥

೨೬. ಯತ್ಸತ್ತ್ವತಃ ಸದಾ ಭಾತಿ ಜಗದೇತದಸತ್ ಸ್ವತಃ ।
ಸದಾಭಾಸಮಸತ್ಯಸ್ಮಿನ್ ಭಗವಂತಂ ಭಜಾಮ ತಮ್ ॥ ೧೩

೨೭. ತಪಂತು ತಾಪೈಃ ಪ್ರಪತಂತು ಪರ್ವತಾತ್
ಅಟಂತು ತೀರ್ಥಾನಿ ಪಠಂತು ಚಾಗಮಾನ್ ।
ಯಜಂತು ಯಾಗೈರ್ವಿವದಂತು ವಾದೈಃ
ಹರಿಂ ವಿನಾ ನೈವ ಮೃತಿಂ ತರಂತಿ ॥

೨೮. ಅನಿಂದ್ರಿಯೋಽಪಿ ಯೋ ದೇವಃ ಸರ್ವಕಾರಕಶಕ್ತಿಧೃತ್ ।
ಸರ್ವಜ್ಞಃ ಸರ್ವಕರ್ತಾ ಚ ಸರ್ವಸೇವ್ಯಂ ನಮಾಮಿ ತಮ್ ॥ ೧೫

೨೯. ತ್ವದೀಕ್ಷಣವಶಕ್ಷೋಭಮಾಯಾಬೋಧಿತಕರ್ಮಭಿಃ ।
ಜಾತಾನ್ ಸಂಸರತಃ ಖಿನ್ನಾನ್ ನೃಹರೇ ಪಾಹಿ ನಃ ಪಿತಃ ॥ ೧೬

೩೦. ಅಂತರ್ಯಂತಾ ಸರ್ವಲೋಕಸ್ಯ ಗೀತಃ
ಶ್ರುತ್ಯಾ ಯುಕ್ತ್ಯಾಚೈವಮೇವಾವಸೇಯಃ ।
ಯಃ ಸರ್ವಜ್ಞಃ ಸರ್ವಶಕ್ತಿರ್ನೃಸಿಂಹಃ
ಶ್ರೀಮಂತಂ ತಂ ಚೇತಸೈವಾವಲಂಬೇ ॥ ೧೭

೩೧. ಯಸ್ಮಿನ್ನುದ್ಯದ್ವಿಲಯಮಪಿ ಯದ್ಭಾತಿ ವಿಶ್ವಂ ಲಯಾದೌ
ಜೀವೋಪೇತಂ ಗುರುಕರುಣಯಾ ಕೇವಲಾತ್ಮಾವಬೋಧೇ ।
ಅತ್ಯಂತಾಂತಂ ವ್ರಜತಿ ಸಹಸಾ ಸಿಂಧುವತ್ ಸಿಂಧುಮಧ್ಯೇ
ಮಧ್ಯೇಚಿತ್ತಂ ತ್ರಿಭುವನಗುರುಂ ಭಾವಯೇ ತಂ ನೃಸಿಂಹಮ್ ॥

(ಸಿಂಧುಮಧ್ಯೇ=ಸಮುದ್ರಮಧ್ಯೇ, ಸಿಂಧುವತ್=ನದೀವತ್)

೩೨. ಸಂಸಾರಚಕ್ರಕ್ರಕಚೈರ್ವಿದೀರ್ಣಂ
ಉದೀರ್ಣನಾನಾವಿಧತಾಪತಪ್ತಮ್ ।
ಕಥಂಚಿದಾಪನ್ನಮಿಹ ಪ್ರಪನ್ನಂ
ತ್ವಮುದ್ಧರ ಶ್ರೀನೃಹರೇ ನೃಲೋಕಮ್ ॥ ೧೯

೩೩. ಯದಾ ಪರಾನಂದಗುರೋ ಭವತ್ಪದೇ
ಪದಂ ಮನೋ ಮೇ ಭಗವನ್ ಲಭೇತ ।
ತದಾ ನಿರಸ್ತಾಖಿಲಸಾಧನಶ್ರಮಃ
ಶ್ರಯೇಯ ಸೌಖ್ಯಂ ಭವತಃ ಕೃಪಾತಃ ॥ ೨೦

೩೪. ಭಜತೋ ಹಿ ಭವಾನ್ ಸಾಕ್ಷಾತ್ ಪರಮಾನಂದಚಿದ್ಘನಃ ।
ಆತ್ಮೈವ ಕಿಮತಃ ಕೃತ್ಯಂ ತುಚ್ಛದಾರಸುತಾದಿಭಿಃ ॥ ೨೧

೩೫. ಮುಂಚನ್ನಂಗತದಂಗಸಂಗಮನಿಶಂ ತ್ವಾಮೇವ ಸಂಚಿಂತಯನ್
ಸಂತಃ ಸಂತಿ ಯತೋ ಯತೋ ಗತಮದಾಸ್ತಾನಾಶ್ರಮಾನಾವಸನ್ ।
ನಿತ್ಯಂ ತನ್ಮುಖಪಂಕಜಾದ್ವಿಗಲಿತತ್ವತ್ಪುಣ್ಯಗಾಥಾಮೃತ-
ಸ್ರೋತಃ ಸಂಪ್ಲವಸಂಪ್ಲುತೋ ನರಹರೇ ನ ಸ್ಯಾಮಹಂ ದೇಹಭೃತ್॥ ೨೨

೩೬. ಉದ್ಭೂತಂ ಭವತಃ ಸತೋಽಪಿ ಭುವನಂ ಸನ್ನೈವ ಸರ್ಪಃ ಸ್ರಜಃ
ಕುರ್ವನ್ ಕಾರ್ಯಮಪೀಹ ಕೂಟಕನಕಂ ವೇದೋಽಪಿ ನೈವಂ ಪರಃ ।
ಅದ್ವೈತಂ ತವ ಸತ್ಪರಂ ತು ಪರಮಾನಂದಂ ಪದಂ ತನ್ಮುದಾ
ವಂದೇ ಸುಂದರಮಿಂದಿರಾನುತ ಹರೇ ಮಾ ಮುಂಚ ಮಾಮನತಮ್ ॥

೩೭. ಮುಕುಟ ಕುಂಡಲಕಂಕಣಕಿಂಕಿಣೀ-
ಪರಿಣತಂ ಕನಕಂ ಪರಮಾರ್ಥತಃ ।
ಮಹದಹಂಕೃತಿಖಪ್ರಮುಖಂ ತಥಾ
ನರಹರೇ ನ ಪರಂ ಪರಮಾರ್ಥತಃ ॥ ೨೪

೩೮. ನೃತ್ಯಂತೀ ತವ ವೀಕ್ಷಣಾಂಗಣಗತಾ ಕಾಲಸ್ವಭಾವಾದಿಭಿಃ
ಭಾವಾತ್ ಸತ್ತ್ವರಜಸ್ತಮೋಗುಣಮಯಾನುನ್ಮೀಲಯಂತೀ ಬಹೂನ್ ।
ಮಾಮಾಕ್ರಮ್ಯ ಪದಾ ಶಿರಸ್ಯತಿಭರಂ ಸಂಮರ್ದಯತ್ಯಾತುರಂ
ಮಾಯಾ ತೇ ಶರಣಂ ಗತೋಽಸ್ಮಿನೃಹರೇ ತ್ವಾಮೇವ ತಾಂ ವಾರಯ ॥

೩೯. ದಂಭನ್ಯಾಸಮಿಷೇಣ ವಂಚಿತಜನಂ ಭೋಗೈಕಚಿಂತಾತುರಂ
ಸಂಮುಹ್ಯಂತಮಹರ್ನಿಶಂ ವಿರಚಿತೋದ್ಯೋಗಕ್ಲಮೈರಾಕುಲಮ್ ।
ಆಜ್ಞಾಲಂಘಿನಮಜ್ಞಮಜ್ಞ ಜನತಾಸಂಮಾನನಾಸಂಮದಂ
ದೀನಾನಾಥದಯಾನಿಧಾನ ಪರಮಾನಂದ ಪ್ರಭೋ ಪಾಹಿಮಾಮ್ ॥

೪೦. ಅವಗಮಂ ತವ ಮೇ ದಿಶ ಮಾಧವ
ಸ್ಫುರತಿ ಯನ್ನಸುಖಾಸುಖಸಂಗಮಃ
ಶ್ರವಣವರ್ಣನಭಾವಮಥಾಪಿ ವಾ
ನ ಹಿ ಭವಾಮಿ ಯಥಾ ವಿಧಿಕಿಂಕರಃ ೨೭

೪೧. ದ್ಯುಪತಯೋ ವಿದುರಂತಮನಂತ ತೇ
ನ ಚ ಭಯಾನ್ನ ಗಿರಃ ಶ್ರುತಿಮೌಲಯಃ ।
ತ್ವಯಿ ಫಲಂತಿ ಯತೋ ನಮ ಇತ್ಯತೋ
ಜಯ ಜಯೇತಿ ಭಜೇ ತವ ತತ್ಪದಮ್ ॥ ೨೮

೫. ಜನಿಮಸತಃ ಸತೋ ಮೃತಿಮುತಾತ್ಮನಿ ಯೇ... ॥

ಅಧ್ಯಾ. ೮೭-ಶ್ಲೋ.೨೫.

ಅಸತಃ ಜನಿಂ-ಮೊದಲು ಇಲ್ಲದೆ ಇರುವುದಕ್ಕೆ ಹೊಸದಾಗಿ ಉತ್ಪತ್ತಿಯನ್ನು ಕೆಲವರು ಹೇಳುತ್ತಾರೆ. ಅಸತ್ ಎಂಬುದಕ್ಕೆ ಇಲ್ಲಿ ಎರಡು ಅರ್ಥಗಳನ್ನು

ಇಟ್ಟುಕೊಳ್ಳಬಹುದಾಗಿದೆ. ಅಸತ್-ಇಲ್ಲದೆ ಇದ್ದ ಜಗತ್ತು. ಅಸತ್-ಇಲ್ಲದೆ ಇದ್ದ ಬ್ರಹ್ಮತ್ವ. ವಿವರಣೆ-

೧. ತಾರ್ಕಿಕರು ಅಸತ್‌ಕಾರ್ಯವಾದಿಗಳು. ಯಾವ ಕಾರ್ಯವೂ ಮೊದಲು ಇರುವುದಿಲ್ಲ, ಹೊಸದಾಗಿ ಹುಟ್ಟುತ್ತದೆ ಎಂದು ಹೇಳುತ್ತಾರೆ. ಜಗತ್ತು ಕಾರ್ಯ ಇದು ಮೊದಲು ಇರಲಿಲ್ಲ, ಹೊಸದಾಗಿ ಹುಟ್ಟಿದೆ ಎಂದು ಅವರು ಹೇಳುತ್ತಾರೆ.

ಜೀವರು ಮೊದಲು ಬ್ರಹ್ಮವಾಗಿರುವುದಿಲ್ಲ. ಮೋಕ್ಷದಲ್ಲಿ ಅವರಿಗೆ ಬ್ರಹ್ಮತ್ವ ಬರುತ್ತದೆ. ಮೊದಲು ಇಲ್ಲದ ಬ್ರಹ್ಮಭಾವ ಹೊಸದಾಗಿ ಬರುತ್ತದೆ ಎಂದು ಪಾತಂಜಲಿ-ಮೊದಲಾದವರು ಹೇಳುತ್ತಾರೆ. ಅಸತ್ತಿನಿಂದ-ಶೂನ್ಯದಿಂದ ಜಗತ್ತು ಹುಟ್ಟಿದೆಯೆಂದು ಬೌದ್ಧಮತಾನುಸಾರವಾಗಿಯೂ ಅರ್ಥ ಹೇಳಬಹುದು.

ಜಗತ್ತು ಮಾಯಾಕಲ್ಪಿತವಾದ್ದರಿಂದ ಇದು ಹೊಸದಾಗಿ ಹುಟ್ಟಿದ್ದಲ್ಲ. ಜೀವನಿಗೆ ಬ್ರಹ್ಮತ್ವ ಹೊಸದಾಗಿ ಬರುವುದಿಲ್ಲ, ಅವನು ಬ್ರಹ್ಮವಾಗಿಯೇ ಇದ್ದಾನೆ ಎಂದು ವೇದಾಂತಿಗಳ ಮತ.

'ಕಥಮಸತಃ ಸಜ್ಜಾಯೇತ' ಇತ್ಯಾದಿ ಪ್ರಮಾಣಗಳಿರುವುದರಿಂದ ಶೂನ್ಯವಾದವೂ ನಿಲ್ಲುವುದಿಲ್ಲ.

ಏಕವಿಂಶತಿದುಃಖಗಳು= ಹಸಿವು, ನೀರಡಿಕೆ, ಶೋಕ, ಮೋಹ, ಮುಪ್ಪು ಮರಣ-ಎಂಬ ಷಡೂರ್ಮಿಗಳು, ಪಂಚಜ್ಞಾನೇಂದ್ರಿಯಗಳು, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚವಿಷಯಗಳು, ಮನಸ್ಸು ಸಂಕಲ್ಪ ಸುಖ, ದುಃಖ ಶರೀರ.

ಸುಖವೆಂದರೆ ವೈಷಯಿಕ ಸುಖ. ಅದು ದುಃಖನಿಯತವಾದ್ದರಿಂದ ಏಕವಿಂಶತಿ ದುಃಖಗಳಲ್ಲಿ ಅದನ್ನೂ ಪರಿಗಣಿಸಲಾಗಿದೆ.

ಇವು ಆತ್ಮಸಂಬಂಧಿಗಳೆಂದು ನೈಯಾಯಿಕರ ಮತ. ಆತ್ಮನು ನಿತ್ಯ ಶುದ್ಧನೆಂದೂ ಆತನಿಗೆ ಇವುಗಳ ಸಂಬಂಧವೇ ಇಲ್ಲವೆಂದೂ ವೇದಾಂತಿಗಳ ಮತ.